ಶಾಲಾ ಶಿಕ್ಷಣದ ಅಭಿವೃದ್ಧಿ: ಸಾಮಾಜಿಕ-ಆರ್ಥಿಕ ಅಂಶಗಳ ಪಾತ್ರ

(ಅರ್ಥಶಾಸ್ತ್ರ ವಿಷಯಕ್ಕೆ ಸಂಬಂಧಿಸಿದಂತೆ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ

ಸಾದರಪಡಿಸಿದ ಸಂಶೋಧನ ಮಹಾಪ್ರಬಂಧ)

ಸಂಶೋಧಕರು

ಎಚ್.ಎಸ್.ರವೀಂದ್ರ

ಮಾರ್ಗದರ್ಶಕರು

ಡಾ. ಎಚ್.ಡಿ ಪ್ರಶಾಂತ್

ಸಹ ಪ್ರಾಧ್ಯಾಪಕರು ಹಾಗೂ ಉಪಕುಲಸಚಿವರು (ಶೈ)

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಮಾಜ ವಿಜ್ಞಾನಗಳ ನಿಕಾಯ

ಅಭಿವೃದ್ಧಿ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ,ಹಂಪಿ

ವಿದ್ಯಾರಣ್ಯ-೫೮೩ ೨೭೬

ಜೂನ್ ೨೦೧೦

ಶಾಲಾ ಶಿಕ್ಷಣದ ಅಭಿವೃದ್ಧಿ: ಸಾಮಾಜಿಕ–ಆರ್ಥಿಕ ಅಂಶಗಳ ಪಾತ್ರ

(ಅರ್ಥಶಾಸ್ತ್ರ ವಿಷಯಕ್ಕೆ ಸಂಬಂಧಿಸಿದಂತೆ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನ ಮಹಾಪ್ರಬಂಧ)

ಸಂಶೋಧಕರು
ಎಚ್.ಎಸ್.ರವೀಂದ್ರ

ಮಾರ್ಗದರ್ಶಕರು
ಡಾ. ಎಚ್.ಡಿ ಪ್ರಶಾಂತ್
ಸಹ ಪ್ರಾಧ್ಯಾಪಕರು ಹಾಗೂ ಉಪಕುಲಸಚಿವರು (ಪ್ರೈ)
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಮಾಜ ವಿಜ್ಞಾನಗಳ ನಿಕಾಯ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ,ಹಂಪಿ
ವಿದ್ಯಾರಣ್ಯ-೫೮೩ ೨೭೬

ಜೂನ್ ೨೦೧೦

ಪ್ರಮಾಣ ಪತ್ರ

'ಶಾಲಾ ಶಿಕ್ಷಣದ ಅಭಿವೃದ್ಧಿ: ಸಾಮಾಜಿಕ-ಆರ್ಥಿಕ ಅಂಶಗಳ ಪಾತ್ರ' ಎಂಬ ಶೀರ್ಷಿಕೆಯ **ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ** ಕನ್ನಡ ವಿಶ್ವವಿದ್ಯಾಲಯಕ್ಕೆ ಡಾ. ಎಚ್.ಡಿ ಪ್ರಶಾಂತ್ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

H.S. Ravindra

(ಎಚ್.ಎಸ್. ರವೀಂದ್ರ)

ಸ್ಥಳ: ವಿದ್ಯಾರಣ್ಯ

ದಿನಾಂಕ:

ದೃಢೀಕರಣ ಪತ್ರ

ಎಚ್.ಎಸ್. ರವೀಂದ್ರ ಇವರು **'ಶಾಲಾ ಶಿಕ್ಷಣದ ಅಭಿವೃದ್ಧಿ: ಸಾಮಾಜಿಕ – ಆರ್ಥಿಕ ಅಂಶಗಳ ಪಾತ್ರ'** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಇವರು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

(ಎಚ್.ಡಿ. ಪ್ರಶಾಂತ)
ಮಾರ್ಗದರ್ಶಕರು

ಸ್ಥಳ: ವಿದ್ಯಾರಣ್ಯ
ದಿನಾಂಕ:

ಕೃತಜ್ಞತೆ

ಕನ್ನಡ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ವ್ಯಾಸಂಗಕ್ಕೆ ಅವಕಾಶ ಮಾಡಿಕೊಟ್ಟ ಹಿಂದಿನ ಕುಲಪತಿಗಳಾದ ಡಾ. ಬಿ.ಎ. ವಿವೇಕ ರೈ, ಈಗಿನ ಕುಲಪತಿಯವರಾದ ಡಾ. ಎ. ಮುರಿಗೆಪ್ಪ, ಕುಲಸಚಿವರಾದ ಡಾ. ಮಂಜುನಾಥ ಬೇವಿನಕಟ್ಟಿ ಅವರಿಗೆ ಕೃತಜ್ಞತೆಗಳು.

ನನ್ನ ಅಧ್ಯಯನ ವಿಷಯದ ಆಯ್ಕೆಗೆ ಹಾಗೂ ನನ್ನ ಬೌದ್ಧಿಕ ಆಲೋಚನೆಗಳು ವಿಸ್ತಾರವಾಗುವುದಕ್ಕೆ ಸಲಹೆ, ಸೂಚನೆ, ಸಹಕಾರವನ್ನು ನೀಡಿ ಪ್ರೋತ್ಸಾಹಿಸಿ, ಮಾರ್ಗದರ್ಶನ ನೀಡಿದ ಡಾ. ಎಚ್.ಡಿ. ಪ್ರಶಾಂತ ಅವರು ನನ್ನ ಈ ಪ್ರಬಂಧ ರಚನೆಗೆ ಮುಖ್ಯ ಕಾರಣಕರ್ತರು. ಅವರಿಗೆ ತುಂಬು ಹೃದಯದ ವಂದನೆಗಳು. ಅಭಿವೃದ್ಧಿ ಅಧ್ಯಯನ ವಿಭಾಗದ ಗುರುಗಳಾದ ಡಾ. ಟಿ.ಆರ್.ಚಂದ್ರಶೇಖರ, ಡಾ. ಚಂದ್ರಪೂಜಾರಿ, ಡಾ. ಶ್ರೀಧರ, ಡಾ. ಸಿದ್ದಗಂಗಮ್ಮ, ಮುಖ್ಯಸ್ಥರಾದ ಶ್ರೀ ಜನಾರ್ದನ, ಶ್ರೀಮತಿ ಚನ್ನಮ್ಮ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಸಹಪ್ರಾಧ್ಯಾಪಕರಾದ ಶ್ರೀ ರಮೇಶ ನಾಯಕ ಅವರು ನನ್ನ ಸಂಶೋಧನಾ ವ್ಯಾಸಂಗಕ್ಕೆ ಉತ್ತೇಜಕರಾಗಿದ್ದು, ಅವರಿಗೆ ನನ್ನ ವಿಶೇಷ ವಂದನೆಗಳು. ಅಭಿವೃದ್ಧಿ ಅಧ್ಯಯನ ವಿಭಾಗದ ಸಿಬ್ಬಂದಿ ವರ್ಗದವರಾದ ಚಂದ್ರಕಾಂತ ಬಡಿಗೇರ ಮತ್ತು ಗಣೇಶ ಕಮ್ಮಾರ ಇವರುಗಳಿಗೆ ನನ್ನ ಕೃತಜ್ಞತೆಗಳು

ನನ್ನ ಅಧ್ಯಯನಕ್ಕೆ ಸಲಹೆ, ಸಹಕಾರ ನೀಡಿದ ಚನ್ನರಾಯಪಟ್ಟಣದ ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯರಾದ ಡಾ. ಚಂದ್ರು ಕಾಳೇನಹಳ್ಳಿ, ಮಿತ್ರ ಡಾ. ನೇ.ತಿ.ಸೋಮಶೇಖರಯ್ಯ ಇವರುಗಳಿಗೆ ನನ್ನ ವಂದನೆಗಳು. ಕ್ಷೇತ್ರಕಾರ್ಯದಲ್ಲಿ ನನ್ನ ಜೊತೆ ಇದ್ದು, ಅಪಾರ ಬೆಂಬಲ ನೀಡಿದ ಶ್ರೀ ಮೋಹನ ಕುಮಾರ, ಕು. ಸುಧಾ ಜಿ. ಹಾಗೂ ಎಲ್ಲಾ ವಕ್ತೃಗಳಿಗೆ ಗೌರವಪೂರ್ವಕ ನಮನಗಳು. ನನ್ನ ಬದುಕಿನ ರುವಾರಿಗಳಾದ ತಂದೆ–ತಾಯಿ, ತಮ್ಮ ಅವರುಗಳಿಗೆ ಹಾಗೂ ಪತ್ನಿ ಆರ್. ಲತಾ, ಪುತ್ರಿ ಎಚ್.ಆರ್.ರಚನಾ ಅವರುಗಳಿಗೆ, ಅಂದವಾಗಿ ಡಿ.ಟಿ.ಪಿ. ಮಾಡಿಕೊಟ್ಟ ಭರತ ಕಳಸಾಪುರ ಹಾಗೂ ವೀರೇಶ ಕೆ. ಅವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಎಚ್.ಎಸ್.ರವೀಂದ್ರ

ಪರಿವಿಡಿ

ಅಧ್ಯಾಯ ಒಂದು

ಶಾಲಾ ಶಿಕ್ಷಣದ ಅಭಿವೃದ್ಧಿ: ಸಾಮಾಜಿಕ-ಆರ್ಥಿಕ ಅಂಶಗಳ ಪಾತ್ರ

ಅಧ್ಯಾಯ ಒಂದು

ಶಾಲಾ ಶಿಕ್ಷಣದ ಅಭಿವೃದ್ಧಿ: ಸಾಮಾಜಿಕ-ಆರ್ಥಿಕ ಅಂಶಗಳ ಪಾತ್ರ

೧.೧. ಪ್ರಸ್ತಾವನೆ

ಶಾಲೆಯು ಒಂದು ಸಾಮಾಜಿಕ ಸಂಸ್ಥೆ. ಈ ಸಂಸ್ಥೆಯು ಇತರ ಸಾಮಾಜಿಕ ಸಂಸ್ಥೆಗಳನ್ನು ರೂಪಿಸುವ ಶಕ್ತಿಯನ್ನು ಹೊಂದಿದೆ. ಅಂದರೆ ಸಾಮಾಜಿಕ ರಚನೆಯಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ ಅನೇಕ ಸಂಸ್ಥೆಗಳನ್ನು ಪುನರ್ ರಚಿಸುವ ಮಟ್ಟಿಗೆ ಪಾತ್ರವನ್ನು ನಿರ್ವಹಿಸುತ್ತಿದೆ. ಹಾಗೆಯೇ ಸಾಮಾಜಿಕ ರಚನೆಯ ಒಳಗಿರುವ ಅಂಶಗಳು ಹಾಗೂ ಸಂಸ್ಥೆಗಳಿಂದ ಶಾಲಾ ಶಿಕ್ಷಣ ವ್ಯವಸ್ಥೆ ಮತ್ತು ಅದರ ಅಭಿವೃದ್ಧಿಯು ಪ್ರಭಾವಿಸಲ್ಪಡುತ್ತಿರುತ್ತದೆ. ಹೀಗೆ ಪ್ರಭಾವಿಸುವ ಅಂಶಗಳಲ್ಲಿ ಆರ್ಥಿಕ, ಸಾಮಾಜಿಕ ಅಂಶಗಳ ಪಾತ್ರವನ್ನು ಅರ್ಥಮಾಡಿಕೊಳ್ಳುವುದು ಪ್ರಸ್ತುತ ಅಧ್ಯಯನದ ಆಶಯ.

ಶಾಲಾ ಶಿಕ್ಷಣವು ವಿಶಾಲಾರ್ಥದಲ್ಲಿ ಒಂದು ಸಮಾಜದ ವಿಭಿನ್ನತೆಯನ್ನು ಹೇಗೆ ಹುಟ್ಟುಹಾಕುತ್ತದೆ ಎಂದರೆ, ಈಗಾಗಲೇ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿರುವ ಶಿಕ್ಷಣದ ಗುಣಮಟ್ಟದಲ್ಲಿನ ವ್ಯತ್ಯಾಸಗಳು ಹಾಗೂ ಶಿಕ್ಷಣದಲ್ಲಿ ಇರುವ ಲಿಂಗಸಂಬಂಧಿ ವ್ಯತ್ಯಾಸಗಳು ಇದಕ್ಕೆ ಉದಾಹರಣೆ. ಅದೇ ರೀತಿ ಪ್ರಾಥಮಿಕ ಶಿಕ್ಷಣ ಮತ್ತು ಇತರೆ (ಉನ್ನತಶಿಕ್ಷಣ, ವೃತ್ತಿಪರಶಿಕ್ಷಣ ಇತ್ಯಾದಿ) ಶಿಕ್ಷಣಗಳಲ್ಲಿರುವ ವ್ಯತ್ಯಾಸಗಳು, ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಶಾಲೆಗಳ ನಡುವೆ ಇರುವ ವ್ಯತ್ಯಾಸಗಳು. ಹೀಗೆ ವಿಶಾಲಾರ್ಥದಲ್ಲಿ ಸಮಾಜದ ವಿವಿಧತೆಯನ್ನು ಹುಟ್ಟುಹಾಕುವ ಮತ್ತು ನಿಯಂತ್ರಿಸುವ ಕೆಲಸವನ್ನು ಶಿಕ್ಷಣ ಮಾಡುತ್ತಿದೆ. ಇದರ ಜೊತೆ ಜೊತೆಗೆ ಸಮಾಜದ ಅಂಚಿನಲ್ಲಿರುವ ಜನವರ್ಗಗಳು ಔಪಚಾರಿಕ ಶಿಕ್ಷಣದಲ್ಲಿ ಭಾಗವಹಿಸುವ ಅವಕಾಶವನ್ನು ನೀಡುವ ಪ್ರಯತ್ನಗಳು ಸರ್ಕಾರಗಳ ಮೂಲಕ ನಡೆಯುತ್ತಿವೆ. ಆದರೂ ಶಾಲೆಗೆ ಸೇರಿದ ಒಟ್ಟು ಮಕ್ಕಳಲ್ಲಿ ಶೇಕಡ ೨೮.೦೦ಕ್ಕಿಂತಲೂ ಹೆಚ್ಚಿನ ಮಕ್ಕಳು ನಿಗದಿತ ವಯೋಮಾನದವರೆಗೆ

ಶಾಲೆಗಳಲ್ಲಿ ಇದ್ದು ಕಲಿಕೆಯನ್ನು ಮುಂದುವರಿಸಲಾಗದೆ ಮಧ್ಯದಲ್ಲಿಯೇ ಶಾಲೆಯನ್ನು ಬಿಡುತ್ತಿದ್ದಾರೆ (ಶಿಕ್ಷಣ ಇಲಾಖೆ, ೨೦೦೩). ಇದಕ್ಕೆ ಸ್ಥಳೀಯ ಸಾಮಾಜಿಕ ರಚನೆಯಲ್ಲಿ ತಳಮಟ್ಟದಲ್ಲಿರುವ ಸಾಮಾಜಿಕ, ಆರ್ಥಿಕ ಅಂಶಗಳು ಅವಕಾಶವಂಚಿತ ಮಕ್ಕಳಿಗೆ ಶಾಲಾ ಭಾಗವಹಿಸುವಿಕೆಯನ್ನು ನಿಯಂತ್ರಿಸುತ್ತವೆ ಎಂಬುದು ಮೇಲುನೋಟಕ್ಕೆ ಕಂಡುಬರುವ ಸಂಗತಿ. ಹೀಗೆ ನಿಯಂತ್ರಿಸುವ ಅಂಶಗಳು ತಳಮಟ್ಟದಲ್ಲಿ ಅನೇಕ ವ್ಯತ್ಯಾಸಗಳನ್ನು ಹೊಂದಿರಬಹುದು. ಈ ವ್ಯತ್ಯಾಸಗಳು ಆಯಾ ಸ್ಥಳೀಯ ಸಾಮಾಜಿಕ ರಚನೆಯ ಸಂದರ್ಭದಲ್ಲಿನ ಅಂಶಗಳನ್ನು ಅವಲಂಬಿಸಿರಲೂಬಹುದು. ಹೀಗೆ ಅವಲಂಬಿಸಿರುವ ಅಂಶಗಳನ್ನು ಅತ್ಯಂತ ಸೂಕ್ಷ್ಮವಾಗಿ ಅರ್ಥಮಾಡಿಕೊಂಡಾಗ ಮಾತ್ರ ಇವುಗಳ ಪ್ರಭಾವ ಮತ್ತು ಪರಿಣಾಮಗಳನ್ನು ಗುರುತಿಸಲು ಸಾಧ್ಯ.

ನಿರ್ದಿಷ್ಟವಾಗಿ ಗ್ರಾಮೀಣ ಪ್ರದೇಶದ ಸಾಮಾಜಿಕ ಸಂದರ್ಭದಲ್ಲಿ ಶೈಕ್ಷಣಿಕ ವ್ಯವಸ್ಥೆಯು ಸಾಮಾಜಿಕ ಪುನರ್‌ನಿರ್ಮಾಣ ಮತ್ತು ಪುನರ್‌ಉತ್ಪಾದನಾ ಪ್ರಕ್ರಿಯೆಯಲ್ಲಿ ತನ್ನದೇ ಆದ ಪ್ರಾಮುಖ್ಯತೆಯನ್ನು ಹೊಂದಿದೆ. ಪ್ರತಿಯೊಂದು ವ್ಯವಸ್ಥೆಯು ತನ್ನೊಳಗೆ ಪ್ರತ್ಯೇಕವಾದ ಮತ್ತೊಂದು ವ್ಯವಸ್ಥೆಯನ್ನು ನಿರಂತರವಾಗಿ ರೂಪಿಸುತ್ತಿರುತ್ತದೆ. ಇಂತಹ ಪ್ರತ್ಯೇಕವಾದ ವ್ಯವಸ್ಥೆಯನ್ನು ರೂಪಿಸಿರುವ ಅಂಶಗಳು ಸಾಮಾಜಿಕವಾಗಿಯೂ ಇರಬಹುದು ಅಥವಾ ಆರ್ಥಿಕವಾಗಿಯೂ ಇರಬಹುದು. ಇದನ್ನು ಒಂದು ರೀತಿಯಲ್ಲಿ ಪ್ರಮುಖ ವ್ಯವಸ್ಥೆಯಿಂದ ಹೊರಹಾಕಲ್ಪಟ್ಟ ಅಥವಾ ಹೊರತಳ್ಳಲ್ಪಟ್ಟು ರೂಪಿತವಾದ ವ್ಯವ್ಯಸ್ಥೆಯೆಂದು ಕರೆಯಬಹುದು (ಜಿ.ಕೆ. ಅನಿತಾ, ೨೦೦೦). ಈ ಅಂಶಗಳು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಗ್ರಾಮೀಣ ಪ್ರದೇಶದ ಬಹುಜನರನ್ನು ಔಪಚಾರಿಕ ಶಿಕ್ಷಣ ವ್ಯವಸ್ಥೆಯಿಂದ ದೂರವೇ ಉಳಿಯುವಂತೆ ಮಾಡುತ್ತದೆ.

ಇಲ್ಲಿ ನಮಗೆ ಪ್ರಮುಖವಾಗಿ ಎದುರಾಗುವ ಮೂಲಭೂತ ಪ್ರಶ್ನೆ, ಶಾಲಾಶಿಕ್ಷಣವನ್ನು ಯಾರು ಹೇಗೆ ಪಡೆದುಕೊಳ್ಳುತ್ತಾರೆ? ಅದನ್ನು ನಿರ್ಧರಿಸುವ ಅಂಶಗಳು ಯಾವುವು? ಎಂಬುದು. ಇದನ್ನು ಅರ್ಥಮಾಡಿಕೊಳ್ಳಲು ಶಾಲಾ ಪ್ರಕ್ರಿಯೆ ಮತ್ತು ಸ್ಥಳೀಯ ಸಾಮಾಜಿಕ ಪರಿಸರ ಹಾಗೂ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕು. ಇಲ್ಲಿ ಪ್ರಮುಖವಾಗಿ ಎರಡು ಅಂಶಗಳನ್ನು ಗಮನಿಸಬಹುದು. ಒಂದು ಶಾಲಾ ಪ್ರಕ್ರಿಯೆ, ಮತ್ತೊಂದು ಸಾಮಾಜಿಕ ರಚನೆಯಲ್ಲಿ ಇರುವ ಅಂಶಗಳು. ಇದನ್ನು ಹೀಗೂ ಹೇಳಬಹುದು. ಶೈಕ್ಷಣಿಕ ಅವಕಾಶಗಳು ದೊರೆಗೊಳ್ಳುವಿಕೆಯಲ್ಲಿರುವ ಸಮಸ್ಯೆಗಳು ಆಯ್ಕೆಯಲ್ಲಿ ತಾರತಮ್ಯ, ಶಾಲಾನಿರ್ವಹಣೆ, ಬೋಧನಾ ವಿಧಾನ, ಪಠ್ಯಕ್ರಮ ಹಾಗೂ ಪಠ್ಯಕ್ರಮದ ಬಗ್ಗೆ ಶಿಕ್ಷಕರ ಆಸಕ್ತಿ-ಶಿಕ್ಷಕರ ಸಾಮಾಜಕ ಸ್ಥಿತಿ-ಸಾಮಾಜಿಕ ಸ್ತರವಿನ್ಯಾಸ ಮತ್ತು ಚಲನೆ ಇತ್ಯಾದಿ. ಇವುಗಳು ಶಾಲಾ ಪ್ರಕ್ರಿಯೆಯ ಮೇಲೆ ನೇರವಾದ ಪರಿಣಾಮವನ್ನು ನಿರಂತರವಾಗಿ ಉಂಟುಮಾಡುತ್ತಿರುತ್ತವೆ. ಹಾಗೆಯೇ ಸ್ಥಳೀಯ ಪರಿಸರದಲ್ಲಿ ಭೌಗೋಳಿಕ ಅಂಶಗಳು, ಪೋಷಕರ ಜಾತಿ, ಆದಾಯ, ವೃತ್ತಿ, ಸಮಸ್ಯೆ, ಕೌಟುಂಬಿಕ ಪರಿಸರ-ಪರಿಸ್ಥಿತಿ, ಲಿಂಗಸಂಬಂಧಿ ಅಂಶಗಳು ಶಾಲಾಶಿಕ್ಷಣದ ಅಭಿವೃದ್ಧಿಯನ್ನು ಬಿಂಬಿಸುವ ಚಲಕಗಳಾಗಿವೆ. ಈ ಎಲ್ಲಾ ಅಂಶಗಳು ಎಷ್ಟರಮಟ್ಟಿಗೆ ಶಾಲಾಶಿಕ್ಷಣದ ಅಭಿವೃದ್ಧಿಗೆ ಪೂರಕವಾಗಿವೆ?

ಪೂರಕವಾಗಿದ್ದರೆ ಅದರಲ್ಲಿ ಆರ್ಥಿಕ ಅಂಶಗಳ ಪಾತ್ರ ಎಷ್ಟು? ಬಡತನಕ್ಕೂ ಶಾಲಾಶಿಕ್ಷಣಕ್ಕೂ ಸಂಬಂಧವೇನು? ಶಾಲೆಗೆ ೦೬ರ ವಯೋಮಾನದ ಎಲ್ಲಾ ಮಕ್ಕಳು ಯಾಕೆ ದಾಖಲಾಗುತ್ತಿಲ್ಲ? ಶಾಲೆಗೆ ೦೬-೧೪ರ ವಯೋಮಾನದ ಎಲ್ಲಾ ಮಕ್ಕಳು ಯಾಕೆ ಬರುತ್ತಿಲ್ಲ? ಮಕ್ಕಳು ಮಧ್ಯದಲ್ಲಿ ಶಾಲೆಯನ್ನು ಬಿಡುತ್ತಿರುವುದಕ್ಕೂ ಮತ್ತು ಬಡತನಕ್ಕೂ ಸಂಬಂಧ ಏನು? ಸಾಮಾಜಿಕ ಅಂಶಗಳ ಪಾತ್ರ ಎಷ್ಟು? ಸಾಮಾಜಿಕ ಅಂಶಗಳಲ್ಲಿ ಜಾತಿ, ಧರ್ಮ, ಲಿಂಗ, ಕೌಟುಂಬಿಕ ಪರಿಸರ ಹಾಗೂ ಪರಿಸ್ಥಿತಿ ಇವುಗಳಲ್ಲಿ ಯಾವುದು ಪ್ರಮುಖ? ಅಂದರೆ ಶಾಲೆಯಿಂದ ಹೊರಗಿರುವ ಮಕ್ಕಳ ಜಾತಿ ಸ್ವರೂಪ ಯಾವ ಬಗೆಯದು? ಮಧ್ಯದಲ್ಲಿ ಶಾಲೆ ಬಿಡುವ ಮಕ್ಕಳ ಜಾತಿ ಸ್ವರೂಪ ಯಾವ ಬಗೆಯದು? ಇದನ್ನು ಕಡಿಮೆಗೊಳಿಸಲು ಜನರ ಸಹಭಾಗಿತ್ವ ಯಾಕೆ ದಕ್ಕುತ್ತಿಲ್ಲ? ಶಾಲೆಗಳಲ್ಲಿರುವ ಸೌಲಭ್ಯಗಳು ಯಾವುವು? ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜನರು ಹೇಗೆ ಪರಿಭಾವಿಸಿಕೊಳ್ಳುತ್ತಿದ್ದಾರೆ? ಅವುಗಳನ್ನು ಯಾವ ರೀತಿ ತಮ್ಮದಾಗಿಸಿಕೊಳ್ಳುತ್ತಿದ್ದಾರೆ? ಪೋಷಕರಿಗೂ ಮತ್ತು ಶಿಕ್ಷಣ ವ್ಯವಸ್ಥೆಗೂ ನಡುವೆ ಇರುವ ಸಂಬಂಧ ಎಂತಹದ್ದು? ಶಿಕ್ಷಣದ ಬಗ್ಗೆ ಅವರ ಮನೋಭಾವ ಎಂತಹದು? ಇದರ ಸಾಮಾಜಿಕ ಆರ್ಥಿಕ ಆಯಾಮ ಎಂತಹುದು? ಇಂತಹ ಹಲವಾರು ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗುವುದು. ಒಟ್ಟಾರೆ ನಮ್ಮ ಪ್ರಾಥಮಿಕ ಶಿಕ್ಷಣದ ಸಾಮಾಜಿಕ, ಆರ್ಥಿಕ ಸ್ವರೂಪವನ್ನು ಹಿಡಿದಿಡುವ ಉದ್ದೇಶದಿಂದ ಪ್ರಸ್ತುತ ಅಧ್ಯಯನವನ್ನು ರೂಪಿಸಲಾಗಿದೆ. ಅಂದರೆ ಶಾಲೆಗೆ ದಾಖಲಾಗದಿರುವ ಅಥವಾ ಶಾಲೆಯಿಂದ ಹೊರಗಿರುವ ಮಕ್ಕಳ ಜಾತಿ, ಲಿಂಗ ಸ್ವರೂಪ ಯಾವ ಬಗೆಯದು? ಎಂಬ ಇತ್ಯಾದಿ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುವುದು ಈ ಅಧ್ಯಯನದ ಪ್ರಮುಖ ಉದ್ದೇಶ.

೧.೨ ಅಭಿವೃದ್ಧಿ ಮತ್ತು ಶಿಕ್ಷಣ

ಅಭಿವೃದ್ಧಿ ಪರಿಕಲ್ಪನೆ ಮತ್ತು ಪ್ರಕ್ರಿಯೆ ಕುರಿತು ಕಳೆದ ಶತಮಾನದ ಮೊದಲ ಭಾಗದಿಂದ ನಡೆದಿರುವಷ್ಟು ಚರ್ಚೆ, ವಾದ-ವಿವಾದಗಳು ಬೇರೆ ಯಾವುದೇ ವಿಷಯ ಕುರಿತು ನಡೆದಿಲ್ಲವೆಂದು ಹೇಳಬಹುದು. ಈ ಪರಿಕಲ್ಪನೆಯು ಜಾಗತಿಕ ಮಟ್ಟದಲ್ಲಿ ದ್ವಿತೀಯ ಮಹಾಯುದ್ಧದ ನಂತರ ಹಸಿದವರನ್ನು, ಶೋಷಿತರನ್ನು ಅವರ ಸಂಕೋಲೆಗಳಿಂದ ಬಿಡುಗಡೆಗೊಳಿಸುವ ಪರಿಭಾಷೆಯಾಗಿ ಕಂಡುಬರುತ್ತದೆ. ಆದರೆ ಇಂದು, ಅಭಿವೃದ್ಧಿ ಬಹುಜನರಿಗೆ ಒಂದು ಕನಸಾಗಿದೆ. ಹೊಸ ಕೈಗಾರಿಕ ಕಾಂತ್ರಿಯ ಭಾಗವಾಗಿ ಉತ್ಪಾದನಾ ವಿಧಾನ ಮತ್ತು ಸಲಕರಣೆಗಳಿಂದ ಎಲ್ಲಾ ಕ್ಷೇತ್ರಗಳ ಉತ್ಪಾದನೆ ಯತೇಚ್ಛವಾಗಿದೆ. ಆದರೆ ಅವುಗಳ ಸಾಮಾಜಿಕ ಹಂಚಿಕೆಯಲ್ಲಿ ಬಹಳ ದೊಡ್ಡ ಮಟ್ಟದ ಅಂತರ ಸೃಷ್ಟಿಯಾಗುತ್ತಿದೆ.

ಮುಂದುವರಿದು ಹೇಳುವುದಾದರೆ ಈ ಪ್ರಕ್ರಿಯೆಯು ಸಾಮಾಜಿಕ ಅವಕಾಶವನ್ನು, ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ನೆಲೆಯಲ್ಲಿ ಹುಟ್ಟು ಹಾಕುವಲ್ಲಿ ಸಂಪೂರ್ಣ ವಿಫಲವಾಗಿದೆ. ಉದಾಹರಣೆಗೆ ಜಾಗತಿಕ ಮಟ್ಟದಲ್ಲಿ ಸುಮಾರು ೬.೫ ಬಿಲಿಯನ್ ಜನರಿಗೆ ಸಾಕಾಗುವಷ್ಟು ಆಹಾರ ಪದಾರ್ಥಗಳನ್ನು

ಬೆಳೆಯಲಾಗುತ್ತಿದೆ. ಆದರೆ ಇಂದು ಪ್ರಪಂಚದಲ್ಲಿ ೧.೫ ಬಿಲಿಯನ್‌ಗಿಂತಲೂ ಹೆಚ್ಚಿನ ಜನರು ಹಸಿವು ಮತ್ತು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಭಾರತದ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ. ಕೆಲವು ವರ್ಷಗಳಿಂದ ರಾಷ್ಟ್ರದ ಒಟ್ಟು ರಾಷ್ಟ್ರೀಯ ಉತ್ಪನ್ನದ (ಈ.ಡಿ.ಪಿ) ಬೆಳವಣಿಗೆಯ ದರವು ಶೇಕಡ ೧೦ರ ಅಸುಪಾಸಿನಲ್ಲಿತ್ತು. ಅದು ಈಗಲೂ ಶೇಕಡ ೬ರ ಆಜುಬಾಜಿನಲ್ಲಿದೆ. ಆದರೆ ರಾಷ್ಟ್ರದ ಒಟ್ಟು ಜನಸಂಖ್ಯೆಯಲ್ಲಿ ಇರುವ ಸುಮಾರು ಶೇಕಡ ೭೦ರಷ್ಟು ಬಡವರ ಸ್ಥಿತಿಗತಿಯಲ್ಲಿ ಯಾವುದೇ ಗಮನಾರ್ಹವಾದ ಬದಲಾವಣೆಗಳು ಕಂಡುಬರುತ್ತಿಲ್ಲ.

೧೯೯೧-೨೦೦೧ರ ಅವಧಿಯಲ್ಲಿ ಕರ್ನಾಟಕದ ಆರ್ಥಿಕ ಬೆಳವಣಿಗೆಯ ದರ ಸರಾಸರಿ ಶೇಕಡ ೮.೧ರಷ್ಟು ಇದೆ. ಹಾಗೆಯೇ ೨೦೦೧-೨೦೦೬ರಲ್ಲಿ ಕೂಡ ಕರ್ನಾಟಕದ ಆರ್ಥಿಕ ಬೆಳವಣಿಗೆಯ ದರ ಶೇಕಡ ೮ ಕ್ಕಿಂತ ಹೆಚ್ಚಾಗಿರುವುದು ತಿಳಿಯುತ್ತದೆ. ಇದಕ್ಕೆ ವಿರುದ್ಧವಾಗಿ ಜಾಗತೀಕರಣದ ಭಾಗವಾಗಿರುವ ಮುಕ್ತ ಮಾರುಕಟ್ಟೆ ಮತ್ತು ಖಾಸಗೀಕರಣ ಪ್ರಕ್ರಿಯೆಯು ಸಾಮಾನ್ಯ ಜನರನ್ನು ಸಾವಿನ ಅಂಚಿಗೆ ನೂಕಿದ್ದು, ಸಾಮಾಜಿಕ ಒಳಿತಿನ ಪ್ರತಿಯೊಂದು ವಿಷಯವನ್ನು ಲಾಭದಾಯಕ ಸರಕಾಗಿ ಮಾರ್ಪಡಿಸುತ್ತಿದೆ. ಈ ಪ್ರಕ್ರಿಯೆಯಿಂದ ಶಾಲಾಶಿಕ್ಷಣ ಹೊರತಾಗಿಲ್ಲ.

ಅಸಮಾನತೆಯಿಂದ ಕೂಡಿದ ಈ ಅಭಿವೃದ್ಧಿ ಪ್ರಕ್ರಿಯೆಯು ಅನೇಕ ಪ್ರಶ್ನೆಗಳಿಗೆ ಅವಕಾಶ ಮಾಡಿಕೊಡುತ್ತದೆ. 'ಅಭಿವೃದ್ಧಿ' ಎಂಬುದು ನಿಜಕ್ಕೂ ಆ ಪರಿಕಲ್ಪನೆಯ ಪ್ರತಿಪಾದಕರು ಹೇಳುವ ಹಾಗಿದೆಯೆ? ಅಭಿವೃದ್ಧಿ ಈಗಲೂ ಬಿಡುಗಡೆ ಮತ್ತು ಬದಲಾವಣೆಗಳನ್ನು ತರುತ್ತಿದೆಯೆ? ಅಭಿವೃದ್ಧಿಯ ವಾದಗಳು ಯಾರ ಪರ ಮತ್ತು ಯಾವುದರ ವಿರುದ್ಧ ಕೆಲಸ ಮಾಡುತ್ತಿವೆ ಎಂಬುದನ್ನು ಬಹಳ ಸೂಕ್ಷ್ಮವಾಗಿ ಗಮನಿಸಿದರೆ, ಈ ಅಭಿವೃದ್ಧಿ ಪ್ರಕ್ರಿಯೆಯ ಬಗ್ಗೆ ಜನಸಾಮಾನ್ಯರು ನಂಬಿಕೆ ಕಳೆದುಕೊಂಡು ವ್ಯವಸ್ಥೆಯ ಬಗ್ಗೆ ಸಿನಿಕರಾಗಿರುವುದು ಕಂಡುಬರುತ್ತದೆ. ಇಂತಹ ಆರ್ಥಿಕ ಅಭಿವೃದ್ಧಿ/ಬೆಳವಣಿಗೆಯಿಂದ ಆತಂಕಕ್ಕೆ ಈಡಾಗಿರುವ ಜನರಿಗೆ ಯಾವ ಪರ್ಯಾಯಗಳಿವೆ ಎಂಬುದನ್ನು ಹುಡುಕುವುದು ಬಹಳ ಪ್ರಮುಖ. ಈ ದಿಕ್ಕಿನಲ್ಲಿ ಅಭಿವೃದ್ಧಿ ಪ್ರಕ್ರಿಯೆಯನ್ನು ಯಾರು, ಹೇಗೆ ಪರಿಭಾವಿಸಿಕೊಳ್ಳುತ್ತಿದ್ದರು, ಅವರ ಆದ್ಯತೆ ಯಾವುದು, ಜೊತೆಗೆ ಒಟ್ಟಾರೆ ಅಭಿವೃದ್ಧಿ ಪ್ರಕ್ರಿಯೆಯು ಹೇಗೆ ಜನಕೇಂದ್ರಿತವಾಗಿ ರೂಪುಗೊಂಡಿತು ಎಂಬುದನ್ನು ಸರಳವಾಗಿ ಹಿಡಿದಿಡಲು ಇಲ್ಲಿ ಪ್ರಯತ್ನ ಮಾಡಲಾಗಿದೆ.

ಪ್ರಾರಂಭದಲ್ಲಿ ಅಭಿವೃದ್ಧಿ ಪ್ರಕ್ರಿಯೆ ಕಲ್ಯಾಣರಾಜ್ಯ ಅಥವಾ ಸರ್ಕಾರಗಳಿಂದ ಪ್ರಾಯೋಜಿತವಾದ ಅಥವಾ ಸರ್ಕಾರದ ಪೂರೈಕೆ ಮಾದರಿ ಆಗಿತ್ತು. ಇದರ ಮೂಲ ಉದ್ದೇಶ ಕಲ್ಯಾಣ ರಾಜ್ಯದ ಸ್ಥಾಪನೆ. ಅಧಿಕಾರದಲ್ಲಿ ಇರುವವರು ನಾವು ಕೊಡುತ್ತೇವೆ ನೀವು ಪಡೆದುಕೊಳ್ಳಬೇಕು ಎನ್ನುವ ಮಾದರಿ. ಇದು ಮೂಲಭೂತವಾಗಿ ಸರಬರಾಜು ಆಧಾರಿತ ಮಾದರಿ. ಒಟ್ಟಾರೆ ನಾನು ಕೊಡ್ತೇನೆ, ನೀವು ತಗೊಳ್ಳಬೇಕು ಎನ್ನುವ ಮನಸ್ಥಿತಿ.

ಅದಕ್ಕೆ ಪೂರಕವಾಗಿ ಸಂವಿಧಾನದ ರಾಜ್ಯ ನಿರ್ದೇಶಕ ತತ್ವದ ೪೫ನೇ ಪರಿಚ್ಛೇದ, ಒಂದು ಕಲ್ಯಾಣ ರಾಜ್ಯವನ್ನು ಕಟ್ಟುವ ವ್ಯಾಪ್ತಿಗೆ ಸಂಬಂಧಪಟ್ಟದ್ದೇ ಹೊರತು, ನಿಜವಾಗಿಯೂ ಸಮಾನತೆಯ

ನಾಡನ್ನು ಕಟ್ಟುವ ಗುರಿ ಮತ್ತು ಉದ್ದೇಶವನ್ನು ಹೊಂದಿರಲಿಲ್ಲ. ಇದು ಚರ್ಚೆಗೆ ಒಳಪಡಬೇಕಾದ ವಿಷಯ. ಈ ದಿಕ್ಕಿನಲ್ಲಿ ಕಲ್ಯಾಣ ರಾಜ್ಯ ಮಾದರಿ ಅಭಿವೃದ್ಧಿ ಹೆಚ್ಚು ಆಶಯವನ್ನು ಹೊಂದಿತ್ತೇ ಹೊರತು, ನಿಜವಾಗಿಯು ಕೂಡ ಈ ಪ್ರಕ್ರಿಯೆಯಲ್ಲಿ ಸಮುದಾಯದ ಅಗತ್ಯಗಳನ್ನು, ಅದ್ಯತೆಯ ಮೇರೆಗೆ ಅರ್ಥಮಾಡಿಕೊಂಡು ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸುವಂತಹ ಅಂಶಗಳು ನಮಗೆ ಎಲ್ಲೂ ಗೋಚರಿಸುವುದಿಲ್ಲ. ಒಂದು ಪಕ್ಷ ಇದೆ ಎಂದು ಭಾವಿಸಿದರು ಕೂಡ ಅದೆಲ್ಲವು ಪೂರೈಕೆ ಮಾದರಿಯಲ್ಲಿ ಇತ್ತು.

ಮೊದಲನೆಯ ಮಾದರಿ ಸರ್ಕಾರಗಳು ಅಭಿವೃದ್ಧಿಯ ಭಾಗವಾಗಿ ಕಂಡುಕೊಂಡಂತಹ ಮಾದರಿ. ಈ ಪ್ರಕ್ರಿಯೆಯಲ್ಲಿ ಮುಖ್ಯವಾಗಿ ಗಮನಿಸಿಬೇಕಾದುದು ಏನೆಂದರೆ ಅದೊಂದು ರೀತಿಯಲ್ಲಿ ಜನರನ್ನು ಸಬಲೀಕರಣ ಮಾಡುವಂತಹ ಪ್ರಕ್ರಿಯೆ ಆಗಿರಲಿಲ್ಲ. ಇದು ಒಂದು ರೀತಿಯ ಅಧಿಕಾರಯುತವಾಗಿತ್ತೇ ಹೊರತು, ಸರ್ಕಾರದ ಅಭಿವೃದ್ಧಿ ಯೋಜನೆಗಳು ಸಮುದಾಯದ ಬಳಿಗೆ ಕೊಂಡೊಯ್ಯುವ ಯೋಜನೆಯಾಗಿರಲ್ಲಿಲ್ಲ ಎಂಬುದು ಮುಖ್ಯ. ಅದರಲ್ಲಿಯೂ ವಿಶೇಷವಾಗಿ ಕಲ್ಯಾಣ ರಾಜ್ಯದ ಒಂದು ಮುಖ್ಯ ಗುಣವೆಂದರೆ ಕೊಡುವಿಕೆಯನ್ನು ಒಂದು ಚಾರಿತ್ರಿಕ ದೃಷ್ಟಿಕೋನದಿಂದ ನೋಡುವಂತಹದು.

ಅಂದರೆ ಸಮುದಾಯವನ್ನು ಪ್ರತಿನಿಧಿಸುತ್ತಿದ್ದವರು ಶಾಲೆಗಳಿಗೆ ಭೂಮಿಯನ್ನು ಇಲ್ಲವೇ ಇತರೆ ವಸ್ತುಗಳನ್ನು ದಾನ ನೀಡಿ ತಮ್ಮ ಸಾಮಾಜಿಕ ಸ್ಥಾನಮಾನ ಮತ್ತು ಅಧಿಕಾರದ ಹಿನ್ನೆಲೆಯಿಂದ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಿದ್ದರೆ ಹೊರತು, ನಿಜವಾಗಿಯೂ ಸಮುದಾಯವನ್ನು ಒಳಗು ಮಾಡುವ ದೃಷ್ಟಿಯಿಂದ ಅಲ್ಲ. ಇದು ಒಂದು ದೊಡ್ಡ ಸಾಮಾಜಿಕ ವೈಫಲ್ಯ ಇದು ಕೇವಲ ಶಿಕ್ಷಣ ಕ್ಷೇತ್ರಕ್ಕೆ ಮಾತ್ರ ಸೀಮಿತವಲ್ಲ. ಬಹುತೇಕ ಎಲ್ಲಾ ಅಭಿವೃದ್ಧಿ ಯೋಜನೆಗಳು ಇದೇ ಮಾದರಿಯವು. ಇಲ್ಲಿ ನಾವು ಗುರುತಿಸಬೇಕಾದಂತಹ ಒಂದು ಅಂಶವೆಂದರೆ ವಾಸ್ತವಿಕವಾಗಿ ಸಮುದಾಯದ ಸಹಭಾಗಿತ್ವ ಸಂಪೂರ್ಣವಾಗಿ ಸಾಕಾರವಾಗದಿರುವುದು.

ಹೀಗಾಗಿ ನಮ್ಮ ಬಹುತೇಕ ಅಭಿವೃದ್ಧಿ ಯೋಜನೆಗಳು ಕೇಂದ್ರೀಕೃತ ಅಂಶಗಳ ಮೇಲೆ ರೂಪಿತವಾಗಿದ್ದವು. ಅದರ ಭಾಗವಾಗಿ ೧೯೬೦ರಲ್ಲಿ ದೇಶದ ಬೇರೆ ಬೇರೆ ಭಾಗಗಳಲ್ಲಿ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳು ಪ್ರಾರಂಭವಾದವು. ಅವುಗಳಲ್ಲಿ ಗ್ರಾಮೀಣ ಸಾಕ್ಷರತಾ ಕಾರ್ಯಕ್ರಮವು ಒಂದು. ಇದು ಮೊಟ್ಟಮೊದಲಿಗೆ ಶಿಕ್ಷಣವನ್ನು ಸಾಮಾಜಿಕವಾಗಿ ಅಥವಾ ಸಮಾಜದ ವಿಷಯವಾಗಿ ನೋಡುವಂತಹ ಪ್ರಯತ್ನವಾಗಿದೆ. ಈ ಹಂತವು ಸಹ ಕಲ್ಯಾಣ ರಾಜ್ಯದ ಪರಿಕಲ್ಪನೆಯ ಮುಂದುವರೆದ ಭಾಗವಾಗಿದ್ದು, ಭೌತಿಕ ಅಭಿವೃದ್ಧಿಯ ಕಡೆಗೆ ಹೆಚ್ಚಿನ ಪ್ರಯತ್ನಗಳು ಹಾಗೂ ಒಲವು ಇದ್ದ ಕಾರಣ ಅಭಿವೃದ್ಧಿಯನ್ನು ಭೌತಿಕ ಸೌಲಭ್ಯಗಳ ಸಂಕೇತವಾಗಿ ನೋಡುವ ಪ್ರಯತ್ನವಾಗಿತ್ತು. ವಾಸ್ತವವಾಗಿ ಆರ್ಥಿಕ ಅಭಿವೃದ್ಧಿಯು ಮಾನವ ಸಂಪನ್ಮೂಲಗಳ ಭಾಗವಹಿಸುವಿಕೆಯೊಂದಿಗೆ ಬೆಸೆದುಕೊಂಡಿದೆ. ಆದರೆ ಮೇಲೆ ಚರ್ಚಿಸಿದ ಎರಡೂ ಮಾದರಿಗಳಲ್ಲಿ ಮುಖ್ಯವಾಗಿ ಗಮನಿಸಲೇಬೇಕಾದ ಅಂಶವೆಂದರೆ – ಸಮುದಾಯದ ಭಾಗವಹಿಸುವಿಕೆ ಮತ್ತು ಜನರ ಅದ್ಯತೆಗಳ ಬಗ್ಗೆ ಸರ್ಕಾರದ ತಟಸ್ಥ ನೀತಿ.

ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಬಹಳ ಮುಖ್ಯವಾದ ಹಂತ ಮೂರನೆ ಹಂತ. ಏಕೆಂದರೆ ಈ ಹಂತದಲ್ಲಿ ಜನಸಮುದಾಯದ ಆಶಯಗಳಿಗೆ ಆದ್ಯತೆ ನೀಡುವ ಒಂದು ಹೊಸ ದೃಷ್ಟಿಕೋನ ಅಂಕುರಿಸಿತ್ತು. ಇದು ಪ್ರಾರಂಭವಾದದ್ದು ೧೯೮೬ರ ನಂತರ. ಕರ್ನಾಟಕದ ಇತಿಹಾಸದಲ್ಲಿ ಮಾತ್ರವಲ್ಲ ಭಾರತದ ಶಿಕ್ಷಣದ ಇತಿಹಾಸದಲ್ಲಿಯೂ ಇದೊಂದು ಮೈಲುಗಲ್ಲು. ಏಕೆಂದರೆ ದೇಶದ ಉದ್ದಗಲಕ್ಕೂ ಸಾಕಷ್ಟು ಚರ್ಚೆ ನಡೆದ ನಂತರ ಮೊದಲ ಬಾರಿಗೆ ನಾವು ಒಂದು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸಿಕೊಂಡೆವು. ಈ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪ್ರಜಾಸತ್ತಾತ್ಮಕವಾಗಿ ಸಂಸತ್ತು ಕೂಡ ಅಂಗೀಕರಿಸಿತು. ಹೀಗಾಗಿ ೧೯೮೬ರ ಪ್ರಾರಂಭ ಪ್ರಮುಖವಾಗಿ ಶಿಕ್ಷಣ ಕ್ಷೇತ್ರದಲ್ಲಿ ವಿಕೇಂದ್ರೀಕರಣದ ದೃಷ್ಟಿಯಿಂದ ಹೊಸ ಶಕೆಯು ಪ್ರಾರಂಭವಾಯಿತು.

ಈ ಎಲ್ಲಾ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಕರ್ನಾಟಕದ ಪಂಚಾಯತ್ ರಾಜ್ಯ ಸಂಸ್ಥೆಗಳ ಉದಯ ಒಂದು ಮಹತ್ವದ ಘಟ್ಟ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಾನವರ ಬೇಕು ಬೇಡಗಳ ದೃಷ್ಟಿಕೋನದಿಂದ ನೋಡುವ ಮೊದಲ ಪ್ರಯತ್ನ ಇದಾಗಿದೆ. ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಜನರನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುವ ಸಾಂಸ್ಥಿಕ ಚೌಕಟ್ಟನ್ನು ಹುಟ್ಟುಹಾಕುವ ನಿಟ್ಟಿನಲ್ಲಿ ಇದು ಒಂದು ಪ್ರಥಮ ಹೆಜ್ಜೆ. ಮಾನವ ಹಕ್ಕುಗಳ ದೃಷ್ಟಿಕೋನದಿಂದ ನೋಡುವಂತಹದು. ಜೊತೆಗೆ ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಮಾಡಿಕೊಂಡ ಒಡಂಬಡಿಕೆಗಳು ಕೂಡ ಮುಖ್ಯ. ಏಕೆಂದರೆ, ವಾಸ್ತವವಾಗಿ ಜಾಗತಿಕ ಸಂದರ್ಭದಲ್ಲಿ ಕರ್ನಾಟಕ ರಾಜ್ಯವನ್ನು ಒಂದು ರಾಜ್ಯವನ್ನಾಗಿ ನೋಡುವುದಕ್ಕೆ ಆಗುವುದಿಲ್ಲ. ಅದನ್ನು ಭಾರತದ ಒಂದು ಗಣತಂತ್ರ ವ್ಯವಸ್ಥೆಯ ಭಾಗವಾಗಿ ನೋಡಿದಾಗ ಅಂತರ್‌ರಾಷ್ಟ್ರೀಯ ಮಟ್ಟದ ಒಡಂಬಡಿಕೆಗಳೆಲ್ಲವೂ ನಮ್ಮ ರಾಜ್ಯಕ್ಕೂ ಅನ್ವಯಿಸುತ್ತವೆ.

ಒಟ್ಟಾರೆ ನಾವು ಅಭಿವೃದ್ಧಿ ಪ್ರಕ್ರಿಯೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ವಿವಿಧ ಕಾಲಘಟ್ಟದಲ್ಲಿ ಪ್ರಮುಖವಾಗಿ ಮೂರು ಬಗೆಯ ಅಭಿವೃದ್ಧಿ ಸಿದ್ಧಾಂತಗಳು ನಮಗೆ ಕಾಣಸಿಗುತ್ತವೆ. ಅವೆಂದರೆ: ೧.ಸಾಂಪ್ರದಾಯಿಕ ಅಭಿವೃದ್ಧಿ ಸಿದ್ಧಾಂತ, ೨.ನವ–ಉದಾರವಾದಿ ಅಭಿವೃದ್ಧಿ ಸಿದ್ಧಾಂತ, ಮತ್ತು ೩.ಮಾನವ ಅಭಿವೃದ್ಧಿ/ಹಕ್ಕು ಆಧಾರಿತ ಸಿದ್ಧಾಂತ.

ಸಾಂಪ್ರದಾಯಿಕ ಅಭಿವೃದ್ಧಿ ಸಿದ್ಧಾಂತ: ಈ ಸಿದ್ಧಾಂತವು ಆರ್ಥಿಕ ಬೆಳವಣಿಗೆಯ ನೆಲೆಯಲ್ಲಿ ಅಭಿವೃದ್ಧಿಯನ್ನು ಪ್ರತಿಪಾದಿಸುತ್ತದೆ. ಒಂದು ದೇಶದ ಅಥವಾ ಪ್ರದೇಶದ ಅಭಿವೃದ್ಧಿಯು ಆ ದೇಶದ ಆದಾಯದ ವೃದ್ಧಿ ಅಥವಾ ವರಮಾನದ ಹೆಚ್ಚಳದಿಂದ ನಿರ್ಧಾರವಾಗುತ್ತದೆ. ಮುಂದುವರಿದು ಆಯಾ ದೇಶದ ಜನರ ತಲಾವರಮಾನದ ಹೆಚ್ಚಳವೇ ಅಭಿವೃದ್ಧಿ ಎಂದು ಈ ಸಿದ್ಧಾಂತ ಪ್ರತಿಪಾದಿಸುತ್ತದೆ. ಅದರ ಪ್ರಕಾರ ಒಂದು ದೇಶದ ಆದಾಯ ಹೆಚ್ಚಳವಾದರೆ, ಅದು ತನಗೆ ತಾನೆ ಸಹಜವಾಗಿ ಟ್ರಿಕಲ್ ಡೌನ್ ಮಾದರಿಯಲ್ಲಿ ಹರಿದುಬರುತ್ತದೆ ಎಂದು ವಾದಿಸುತ್ತದೆ. ಇಲ್ಲಿ ಆದಾಯವೇ ಅಭಿವೃದ್ಧಿಯ ಮುಖ್ಯ ಮಾಪನ. ಇಲ್ಲಿ ಜನರು ಕೇವಲ ಅಭಿವೃದ್ಧಿಯ ಒಂದು ಸಾಧನ ಮಾತ್ರ. ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಲಿಂಗಸಂಬಂಧಿ ಪ್ರಶ್ನೆಗಳಿಗೆ ಇಲ್ಲಿ ಅವಕಾಶವಿಲ್ಲ.

ನವ-ಉದಾರವಾದಿ ಅಭಿವೃದ್ಧಿ ಸಿದ್ಧಾಂತ: ಈ ಸಿದ್ಧಾಂತವು ಮಾರುಕಟ್ಟೆಗೆ ಪ್ರಮುಖ ಆದ್ಯತೆಯನ್ನು ನೀಡುತ್ತದೆ. ಇಲ್ಲಿ ಮಾರುಕಟ್ಟೆಯೇ ಅಂತಿಮ. ಯಾರು ಎಷ್ಟು ಆದಾಯವನ್ನು ಪಡೆಯುತ್ತಾರೆ ಎಂಬುದು ಮಾರುಕಟ್ಟೆಯಿಂದ ನಿರ್ಧರಿಸಲ್ಪಡುತ್ತದೆ. ನವ-ಉದಾರವಾದಿ ಸಿದ್ಧಾಂತವು ಆರ್ಥಿಕ ಅಂಶಗಳಾದ ಬಂಡವಾಳ, ಆದಾಯ, ಉಳಿತಾಯ, ಬಡ್ಡಿ, ಉತ್ಪಾದನೆ, ಕೊಳ್ಳುಬಾಕತೆ – ಎಲ್ಲವೂ ಮಾರುಕಟ್ಟೆಯ ನಿಯೋಜನೆಯಂತೆ ನಡೆಯುತ್ತಿರುತ್ತವೆ. ಇಷ್ಟು ಮಾತ್ರವಲ್ಲದೆ, ನವ–ಉದಾರವಾದಿ ಸಿದ್ಧಾಂತ ಪ್ರತಿಪಾದಿಸುವ ಮಾರುಕಟ್ಟೆ ಆಧಾರಿತ ಆರ್ಥಿಕ ಅಂಶಗಳಿಗೆ ಎಲ್ಲವನ್ನೂ ನಿಯಂತ್ರಿಸುವ ಶಕ್ತಿಯಿದೆ. ಇಲ್ಲಿ ಬಂಡವಾಳದ ಹೂಡಿಕೆಗೆ ಮತ್ತು ಅದರಿಂದ ಬರುವ ಲಾಭಕ್ಕೆ ಪ್ರಮುಖ ಸ್ಥಾನವೇ ಹೊರತು ಜನರಿಗಲ್ಲ. ಇಲ್ಲಿ ಮಾನವಹಕ್ಕುಗಳು ಮತ್ತು ಸಾಮಾಜಿಕ ಹಂಚಿಕೆಯ ಪ್ರಶ್ನೆಗಳಿಗೆ ಅವಕಾಶವಿಲ್ಲ. ಈ ಸಿದ್ಧಾಂತವು ಯಾವುದೇ ಒಂದು ಸಮಸ್ಯೆಯನ್ನು ಜಾಗತಿಕ ನೆಲೆಯಲ್ಲಿ ಅರ್ಥೈಸುವ ಮತ್ತು ವಿಶ್ಲೇಷಿಸುವ ಮೂಲಕ ಸಮಸ್ಯೆಯನ್ನು ಸ್ಥಳೀಯ ನೆಲೆಯಲ್ಲಿ ಬಿಡಿಸಿ ನೋಡುವ ಗೋಜಿಗೆ ಹೋಗುವುದಿಲ್ಲ. ಉದಾಹರಣೆಗೆ, ಜನರು ಹಸಿವಿನಿಂದ ನರಳುತ್ತಿದ್ದಾರೆ ಎಂಬ ಗಂಭೀರ ಸಮಸ್ಯೆಯನ್ನು ಸಾಮಾಜಿಕ ಮತ್ತು ರಾಜಕೀಯ ನೆಲೆಯಲ್ಲಿ ನೋಡದೆ, ಹಸಿವಿಗೆ ವರಮಾನದ ಕೊರತೆಯೇ ಪ್ರಮುಖ ಕಾರಣವೆಂದು ವಾದಿಸುತ್ತದೆ. ಮುಂದುವರಿದು ಜನರ ಬದುಕನ್ನು ಉತ್ತಮಪಡಿಸಲು ಹೆಚ್ಚಿನ ತಂತ್ರಜ್ಞಾನವನ್ನು ಬಳಸಿ, ಉತ್ಪಾದನೆಯನ್ನು ಹೆಚ್ಚಿಸಲು ವಿಶೇಷ ಆರ್ಥಿಕ ವಲಯಗಳನ್ನು ಅಭಿವೃದ್ಧಿಪಡಿಸುವ ಮೂಲಕ ಅಭಿವೃದ್ಧಿ ಸಾಧಿಸಬಹುದು ಎಂದು ಈ ಸಿದ್ಧಾಂತ ಪ್ರತಿಪಾದಿಸುತ್ತದೆ. ಈ ಸಿದ್ಧಾಂತದಲ್ಲಿ ಜನರ ಆಹಾರ ಭದ್ರತೆಯ ಪ್ರಶ್ನೆಗಳು, ಅಪೌಷ್ಟಿಕತೆಯ ಪ್ರಶ್ನೆಗಳು, ಆರೋಗ್ಯದ ಪ್ರಶ್ನೆಗಳು, ಶಿಕ್ಷಣದ ಪ್ರಶ್ನೆಗಳು, ವಸತಿ ಪ್ರಶ್ನೆಗಳು ಹಾಗೂ ಪರಿಸರ ಸಂಬಂಧಿ ಪ್ರಶ್ನೆಗಳು ಪ್ರಮುಖವಲ್ಲ. ಇಲ್ಲಿ ಮಾರುಕಟ್ಟೆ ನಿರ್ದೇಶಿತ ಅಭಿವೃದ್ಧಿ ಮುಖ್ಯ ಅಂದರೆ ಇಲ್ಲಿ ಯಾರು ಎಷ್ಟು ಬಂಡವಾಳವನ್ನು ಹೂಡಿ ತಮ್ಮ ಕುಶಲತೆ ಮತ್ತು ಸಾಮರ್ಥ್ಯದಿಂದ ಹೆಚ್ಚು ಆದಾಯವನ್ನು ಗಳಿಸುತ್ತಾರೋ ಅವರು ಮಾತ್ರ ಮುಖ್ಯ

ಮಾನವ ಅಭಿವೃದ್ಧಿ/ಹಕ್ಕು ಆಧಾರಿತ ಸಿದ್ಧಾಂತ: ಈ ಸಿದ್ಧಾಂತವು ಜನಕೇಂದ್ರಿತ ಸಿದ್ಧಾಂತವೆಂದೇ ಪ್ರಚಾರ ಪಡೆದಿದೆ. ಈ ಸಿದ್ಧಾಂತದಲ್ಲಿ ಆದಾಯ ಅಥವಾ ಬಂಡವಾಳವೆಂಬುದು ಕೇವಲ ಒಂದು ಸಾಧನ ಮಾತ್ರ, ಜನರೇ ಇಲ್ಲಿ ಅಭಿವೃದ್ಧಿಯ ಮುಖ್ಯ ಗುರಿ. ಸಾಮಾಜಿಕ ನ್ಯಾಯ ಮತ್ತು ಸಮಾನತೆ ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯ ಪ್ರಮುಖ ಅಂಶಗಳು. ಇದು ಶೋಷಣೆ, ಪ್ರಾದೇಶಿಕ ಅಸಮಾನತೆ, ಲಿಂಗಾಧಾರಿತ ಅಸಮಾನತೆಯ ಇನ್ನೂ ಮುಂತಾದ ಪ್ರಶ್ನೆಗಳನ್ನು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನೆಲೆಯಲ್ಲಿ ಅರ್ಥೈಸಲು ಪ್ರಯತ್ನಿಸುತ್ತದೆ. ಸಾಂಪ್ರದಾಯಿಕ ಅಭಿವೃದ್ಧಿ ಸಿದ್ಧಾಂತ ಪ್ರತಿಪಾದಿಸುವಂತೆ ಆದಾಯವು ತನ್ನಷ್ಟಕ್ಕೆ ತಾನೇ ಹರಿದುಬರುವ ವಿಷಯವನ್ನು ಪ್ರಮುಖವಾಗಿ ಪ್ರಶ್ನಿಸುವ, ಮಾನವ ಅಭಿವೃದ್ಧಿ ಸಿದ್ಧಾಂತವು ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಹಂಚಿಕೆಯು ಪ್ರಜ್ಞಾಪೂರ್ವಕವಾಗಿ ಸಾಧಿಸಿಕೊಳ್ಳಬೇಕಾದ ವಿಷಯವೇ ಹೊರತು ತನಗೆ ತಾನೆ ನಡೆಯುವ ಪ್ರಕ್ರಿಯೆ ಅಲ್ಲ ಎಂದು ಪ್ರತಿಪಾದಿಸುತ್ತದೆ.

ಮುಂದುವರೆದು ಅಭಿವೃದ್ಧಿಯನ್ನು ಸಮಗ್ರವಾಗಿ ಅರ್ಥೈಸದೆ ಆಯಾ ನೆಲೆಯಲ್ಲಿ ಅರ್ಥೈಸಿ, ಅಭಿವೃದ್ಧಿಯ ಸಾಧ್ಯಾಸಾಧ್ಯತೆಗಳನ್ನು ಕಂಡುಕೊಳ್ಳಲು ಮಾನವ ಅಭಿವೃದ್ಧಿ ಸಿದ್ಧಾಂತ ಪ್ರಯತ್ನಿಸುತ್ತದೆ. ಉದಾಹರಣೆಗೆ, ಸಾಕ್ಷರತೆ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳನ್ನು ಹಾಜರಾತಿ, ದಾಖಲಾತಿ, ಮಧ್ಯದಲ್ಲಿ ಶಾಲೆ ಬಿಡುವವರ ಪ್ರಮಾಣ, ೩ ರಿಂದ ೬ರ ವಯೋಮಾನದ ಮಕ್ಕಳ ಸ್ಥಿತಿ, ಇತ್ಯಾದಿ ವಿಷಯಗಳನ್ನು ಸಾಮಾಜಿಕ, ಪ್ರಾದೇಶಿಕ, ಲಿಂಗಸಂಬಂಧಿ ಹಾಗೂ ವಯೋಮಾನದ ನೆಲೆಯಲ್ಲಿ ಬಿಡಿಸಿ ಅರ್ಥೈಸುವಲ್ಲಿ ಮಾನವ ಅಭಿವೃದ್ಧಿ ಸಿದ್ಧಾಂತ ಯಶಸ್ಸು ಕಂಡಿದೆ.

ಒಟ್ಟಾರೆ ಮಾನವ ಅಭಿವೃದ್ಧಿ ಸಿದ್ಧಾಂತ ಜನರು ತಮ್ಮ ಬದುಕನ್ನು ಉತ್ತಮಪಡಿಸಿಕೊಳ್ಳಲು ಸಮಾಜದಲ್ಲಿ ಹರಿದುಬರುವ ಅವಕಾಶಗಳಲ್ಲಿ ತಮಗೆ ಬೇಕಾದ್ದನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರವೇ ಅಭಿವೃದ್ಧಿ ಎಂದು ಪ್ರತಿಪಾದಿಸುತ್ತದೆ.

೧.೩ ಅಭಿವೃದ್ಧಿ ಮತ್ತು ಶಿಕ್ಷಣಕ್ಕೆ ಇರುವ ಸಂಬಂಧ

ಅಭಿವೃದ್ಧಿ ಮತ್ತು ಶಿಕ್ಷಣದ ನಡುವಿನ ಸಂಬಂಧವನ್ನು ವಿವಿಧ ನೆಲೆಗಳಲ್ಲಿ ಚರ್ಚಿಸಲು ಸಾಧ್ಯ ಸಾಕ್ಷರತೆಯು ಮಾನವ ಬಂಡವಾಳವನ್ನು ಅಭಿವೃದ್ಧಿಪಡಿಸುವ ಸಾಧನ. ಸಾಕ್ಷರತೆಯು ಜನರನ್ನು ಸುಶಿಕ್ಷಿತರನ್ನಾಗಿಸುವ ಮೂಲಕ ಅವರ ಉತ್ಪಾದನೆ ಮತ್ತು ಕಾರ್ಯಕ್ಷಮತೆಯನ್ನು, ಕುಶಲತೆಯನ್ನು ಉತ್ತಮವಾಗಿ ರೂಪಿಸುತ್ತದೆ. ಇದರಿಂದ ಅವರ ಆದಾಯ ಹೆಚ್ಚಾಗುತ್ತದೆ. ಸಾಕ್ಷರತೆಯು ಆಧುನೀಕರಣ ಕೈಗಾರಿಕೀಕರಣ ಪ್ರಕ್ರಿಯೆಗಳ ಸಾಮಾಜೀಕರಣವನ್ನು ಹೇಳಿಕೊಡುವ ಒಂದು ಪ್ರಮುಖ ಸಾಧನವೆಂದೂ ಹೇಳಲಾಗುತ್ತಿದೆ. ಇವೆಲ್ಲವೂ ಒಂದು ದೃಷ್ಟಿಯಿಂದ ಸರಿಯಾದ ವಿಚಾರಗಳೇ ಆಗಿವೆ. ಆದರೆ ಇದು ಸಾಕ್ಷರತೆಯ ಒಂದು ಮುಖ ಮಾತ್ರ ಎಂಬುದನ್ನು ಅಮರ್ತ್ಯಸೇನ್ ವಿವರವಾಗಿ ವಿಶ್ಲೇಷಿಸುತ್ತಾರೆ. ಸೇನ್‌ರವರ ಪ್ರಕಾರ ಸಾಕ್ಷರತೆಯು ಅಭಿವೃದ್ಧಿಯ ಸಾಧನವೂ ಹೌದು ಮತ್ತು ಅದರ ಸಾಧ್ಯವೂ ಹೌದು. ಹೀಗಾಗಿ ಸಾಕ್ಷರತೆಯು ತನ್ನಷ್ಟಕ್ಕೇ ತಾನೇ ಮಹತ್ವದ್ದಾಗಿದೆ.

ಶಿಕ್ಷಣ ಕೇವಲ ಶ್ರಮಶಕ್ತಿಯ ಕಾರ್ಯಕ್ಷಮತೆಯನ್ನು, ಕುಶಲತೆಯನ್ನು ಸಾಕ್ಷರತೆಯನ್ನು ಉತ್ತಮಪಡಿಸುತ್ತದೆ ಎಂಬ ಕಾರಣಕ್ಕೆ ಅದು ಮಹತ್ವದ್ದಾಗಬೇಕಾಗಿಲ್ಲ. ಶಿಕ್ಷಣಕ್ಕೆ ಉಪಕರಣವಾದಿ (ಇನ್‌ಸ್ಟ್ರುಮೆಂಟಲ್) ಮಹತ್ವವೂ ಇದೆ ಮತ್ತು ಅಂತಸ್ಥವಾದಿ ಅಥವಾ ನೈಜವಾದ (ಇಂಟ್ರಿನ್ಸಿಕ್) ಮಹತ್ವವೂ ಇದೆ. ಇದು ಶಿಕ್ಷಣದ ಒಂದು ಪ್ರಮುಖ ಗುಣವೂ ಹೌದು, ಒಂದು ಶಕ್ತಿಯೂ ಹೌದು, ಎಂದು ಸೇನ್ ವಾದಿಸುತ್ತಾರೆ. ಅವರ ಪ್ರಕಾರ ಶಿಕ್ಷಣ ಇಲ್ಲದಿರುವುದು ಧಾರಣಶಕ್ತಿಯ ದುಸ್ಥಿತಿಯ ಸೂಚಿಯಾಗಿದೆ. ಹೀಗಾಗಿ ಅಕ್ಷರ ಜ್ಞಾನ ಇಲ್ಲದಿರುವ ಸ್ಥಿತಿಯು ಬಡತನವೆಂದು ಅವರು ಪ್ರತಿಪಾದಿಸಿದ್ದಾರೆ. ಅಕ್ಷರಸ್ಥರ ಸಂಖ್ಯೆ ಹಾಗೂ ಪ್ರಮಾಣ ಯಾವ ಪ್ರದೇಶದಲ್ಲಿ ಕಡಿಮೆ ಇರುತ್ತದೊ ಅಲ್ಲಿ ಮನುಷ್ಯನಿಗೆ ಬದುಕುವ ಅವಕಾಶಗಳು ಸಹ ಕಡಿಮೆ ಇರುತ್ತವೆ. ಅಲ್ಲದೆ ಅಲ್ಲಿ ಬಡತನವು ತೀವ್ರವಾಗಿರುತ್ತದೆ. ಸಾಕ್ಷರತೆ ಮತ್ತು ಶಿಕ್ಷಣವು ಜನರಿಗೆ ಸ್ವಾತಂತ್ರ್ಯವನ್ನು, ಬದುಕುವ ಅವಕಾಶಗಳನ್ನು ಒದಗಿಸುವ

ಒಂದು ಗುಣವಾಗಿದೆ. ಹೀಗಾಗಿ ಶಿಕ್ಷಣ ಎಂದರೆ ಸ್ವಾತಂತ್ರ್ಯವೆಂದೂ ಶಿಕ್ಷಣವೆಂದರೆ ಅಭಿವೃದ್ಧಿಯೆಂದು ಪರಿಭಾವಿಸಬಹುದಾಗಿದೆ.

ಅಮರ್ತ್ಯಸೇನ್‌ರವರು 'ಸಾಕ್ಷರತೆ/ಶಿಕ್ಷಣವೇ ಅಭಿವೃದ್ಧಿ' ಎಂದು ಹೇಳುತ್ತಾರೆ. ಧಾರಣ ಶಕ್ತಿಯನ್ನು ಒದಗಿಸುವ ಗುಣ-ಶಕ್ತಿ ಶಿಕ್ಷಣಕ್ಕೆ ಇದೆ. "ಧಾರಣಶಕ್ತಿಯೆಂದರೆ ಬದುಕುವ ಅವಕಾಶಗಳನ್ನು ತನ್ನದಾಗಿಸಿಕೊಳ್ಳಲು ಅಗತ್ಯವಾದ 'ಸಾಮರ್ಥ್ಯ' ಹಾಗೂ ಸಮಾಜದಲ್ಲಿನ ಅವಕಾಶಗಳನ್ನು ಅಥವಾ ಲಭ್ಯ ಅವಕಾಶಗಳಲ್ಲಿ ತನಗೆ ಅಥವಾ ತಮಗೆ ಬೇಕಾದುದನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ". ಈ ಧಾರಣಶಕ್ತಿಯು ಇಲ್ಲದಿರುವ ಸ್ಥಿತಿಯನ್ನೇ 'ಬಡತನ' ಎಂದು ಅಮರ್ತ್ಯಸೇನ್ ಕರೆದಿದ್ದಾರೆ. ಶಿಕ್ಷಣಕ್ಕೆ ಧಾರಣಶಕ್ತಿಯನ್ನು ಸಂವರ್ಧಿಸುವ ಶಕ್ತಿಯಿದೆ. ಅದಕ್ಕೆ ಬದುಕನ್ನು ಉತ್ತಮಪಡಿಸಿಕೊಳ್ಳಲು ಅಗತ್ಯವಾದ ಅವಕಾಶಗಳನ್ನು ತನ್ನದಾಗಿಸಿಕೊಳ್ಳಬಲ್ಲ 'ಸಾಮರ್ಥ್ಯ'ವನ್ನು ಒದಗಿಸುವ ಶಕ್ತಿಯಿದೆ.

ಈ ನೆಲೆಯಲ್ಲಿ ಜನರ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವ, ಜನರ ಆದ್ಯತೆಗಳನ್ನು ಜನರೇ ಗುರುತಿಸಿ, ಅವರಿಗೆ ಅಗತ್ಯವಾದ ಯೋಜನೆಗಳನ್ನು ಅವರೇ ರೂಪಿಸಿ, ಅನುಷ್ಠಾನ ಮಾಡಿ ನಿರ್ವಹಿಸುವ ಸಾಮರ್ಥ್ಯವನ್ನು ಹೆಚ್ಚಿಸಲು ನಾವು ಪ್ರಯತ್ನ ಮಾಡಬೇಕಾಗಿದೆ.

ಈ ಹಿನ್ನೆಲೆಯಲ್ಲಿ ಇತ್ತೀಚಿನ ದಿನಗಳಲ್ಲಿ ಮಾನವ ಅಭಿವೃದ್ಧಿ ಪರಿಕಲ್ಪನೆಯ ಮೂಲಕ ಶಿಕ್ಷಣದಿಂದ ಅಭಿವೃದ್ಧಿ ಎಂಬುದಕ್ಕಿಂತ 'ಶಿಕ್ಷಣವೇ ಅಭಿವೃದ್ಧಿ' ಎಂಬ ಮಾತು ಹೆಚ್ಚಾಗಿ ಕೇಳಿಬರುತ್ತಿದ್ದು, ಶಿಕ್ಷಣ ಮತ್ತು ಅಭಿವೃದ್ಧಿ ಒಂದು ಅವಿಭಾಜ್ಯವಾಗಿದೆ. ಅಮರ್ತ್ಯಸೇನ್ ಅವರು ಶಿಕ್ಷಣಕ್ಕೆ ಇರುವ ಪ್ರಾಮುಖ್ಯತೆಯನ್ನು ಅವರ ಅಧ್ಯಯನಗಳಲ್ಲಿ ಸವಿವರವಾಗಿ ಪ್ರತಿಪಾದಿಸಿದ್ದಾರೆ. ಹಾಗೆಯೇ ಹಕ್ಕು ಆಧಾರಿತ ಅಭಿವೃದ್ಧಿ ಕುರಿತು ಚರ್ಚಿಸುತ್ತಿರುವ ವಿದ್ವಾಂಸರುಗಳು ಶಿಕ್ಷಣವು ಪ್ರತಿಹಂತಗಳಲ್ಲಿ ಹೇಗೆ ವ್ಯಕ್ತಿಗಳನ್ನು ವಿಶೇಷ ವಾಗಿ ಮಹಿಳೆಯರನ್ನು, ದಲಿತರನ್ನು, ಅವಕಾಶ ವಂಚಿತರನ್ನು ಹಾಗೂ ಸಮಾಜದ ಅಂಚಿನ ಆಚೆ ತಳ್ಳಲ್ಪಟ್ಟ ಜನರನ್ನು ಸಬಲೀಕರಿಸಬಲ್ಲದು ಎಂಬುದನ್ನು ಒತ್ತಿ ಹೇಳಿದ್ದಾರೆ.

ಮಾರ್ತಾ ಮುಸ್ಬುನ್ ಮತ್ತು ಗ್ಲೋವೇರಿ ಅವರು ಸಂಪಾದಿಸಿರುವ "ವಿಮನ್ ಕಲ್ಚರ್ ಅಂಡ್ ಡೆವಲಪ್‌ಮೆಂಟ್" ಎಂಬ ಪುಸ್ತಕದಲ್ಲಿ ಮಹಿಳಾ ಹಕ್ಕುಗಳ ಪ್ರತಿಪಾದನೆಗೆ ಮತ್ತು ಆಕೆಯ ಸಬಲೀಕರಣಕ್ಕೆ ಶಿಕ್ಷಣ ಹೇಗೆ ಪೂರಕವಾಗಿದೆ ಎಂಬುದನ್ನು ಒತ್ತಿಹೇಳಿದ್ದಾರೆ. ವಿವಿಧ ವರ್ಷಗಳಲ್ಲಿ ಪ್ರಕಟವಾಗಿರುವ ಮಾನವ ಅಭಿವೃದ್ಧಿ ವರದಿಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಯಾವ ಪ್ರದೇಶ ಶೈಕ್ಷಣಿಕವಾಗಿ ಅಭಿವೃದ್ಧಿ ಸಾಧಿಸಿರುತ್ತದೆಯೋ ಆ ಪ್ರದೇಶದಲ್ಲಿ ಸಾಮಾಜಿಕ ಅವಕಾಶಗಳು ಮತ್ತು ಸಮಾನತೆ ಹೆಚ್ಚು ಪರಿಣಾಮಕಾರಿಯಾಗಿ ದೊರಕುತ್ತಿರುವುದನ್ನು ಮಾನವ ಅಭಿವೃದ್ಧಿ ವರದಿಗಳು ಗುರುತಿಸಿವೆ.

ಪ್ರಾದೇಶಿಕವಾಗಿ ಅತ್ಯಂತ ಹಿಂದುಳಿದಿರುವ ಪ್ರದೇಶಗಳಲ್ಲಿ ಮಕ್ಕಳ ಶೈಕ್ಷಣಿಕ ಭಾಗವಹಿಸುವಿಕೆ ಕಡಿಮೆ ಪ್ರಮಾಣದಲ್ಲಿರುವುದು ಕಂಡುಬರುತ್ತದೆ. ನಿರ್ದಿಷ್ಟವಾಗಿ ಅವಕಾಶವಂಚಿತ ಸಾಮಾಜಿಕ ಗುಂಪುಗಳು

ಮತ್ತು ಜನಸಮುದಾಯಗಳ ಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡುವ ಪ್ರಮಾಣ ಅತ್ಯಂತ ಹೆಚ್ಚಾಗಿರುವುದು ಕಂಡುಬರುತ್ತದೆ. ಇದನ್ನು 'ಇಂಡಿಯಾ ಡೆವಲಪ್‌ಮೆಂಟ್ ಅಂಡ್ ಪಾರ್ಟಿಸಿಪೇಶನ್' ಎಂಬ ಪುಸ್ತಕದಲ್ಲಿ ಡ್ರೀಜ್ ಮತ್ತು ಸೇನ್ ಅವರು ಅತ್ಯಂತ ಸಮರ್ಥವಾಗಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಇವರು 'ಬೇಸಿಕ್ ಎಜ್ಯುಕೇಷನ್ ಆ್ಯಸ್ ಎ ಪೊಲಿಟಿಕಲ್ ಇಶ್ಯೂ' ಎಂಬ ಲೇಖನದಲ್ಲಿ ಶಿಕ್ಷಣವು ದೊರೆಯುವಿಕೆಯ ಅಸಮಾನತೆಯನ್ನು ವಿಭಿನ್ನವಾಗಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಅವರ ಅಧ್ಯಯನದ ಪ್ರಕಾರವೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರದೆ ಇರುವ ಶ್ರೀಮಂತ ಪುರುಷರು ಮತ್ತು ಗಂಡುಮಕ್ಕಳು (೧೫-೧೯ ವಯೋಮಾನದ) ಶಿಕ್ಷಣ ಪಡೆದುಕೊಳ್ಳುವುದರಲ್ಲಿ ಪ್ರಥಮ ಸ್ಥಾನದಲ್ಲಿದ್ದಾರೆ. ಎರಡನೆಯ ಸ್ಥಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಧ್ಯಮವರ್ಗದ ಪುರುಷರು ಕಂಡುಬರುತ್ತಾರೆ. ಮೂರನೇ ಸ್ಥಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಉನ್ನತ ಆದಾಯ ಕುಟುಂಬಕ್ಕೆ ಸೇರಿದ ಮಹಿಳೆಯರು ಬರುತ್ತಾರೆ. ನಾಲ್ಕನೇ ಸ್ಥಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಪುರುಷರು ಬರುತ್ತಾರೆ. ಈ ಪುರುಷ ವರ್ಗ ಸ್ವಲ್ಪಮಟ್ಟಿಗೆ ಬಡತನದಲ್ಲಿರುವವರು ಎಂದು ಡ್ರೀಜ್‌ರವರು ಗುರುತಿಸಿದ್ದಾರೆ.

ಈ ನಾಲ್ಕು ಗುಂಪುಗಳ ನಂತರ ಶ್ರೀಮಂತ ವರ್ಗಕ್ಕೆ ಸೇರಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರು ಬರುತ್ತಾರೆ. ನಂತರದಲ್ಲಿ ಬಡತನದ ಬೇಗೆಯಲ್ಲಿರುವ ಮಹಿಳೆಯರು ಅಥವಾ ಹೆಣ್ಣುಮಕ್ಕಳು ಬರುತ್ತಾರೆ. ಇದೇ ಅಂಶವನ್ನು ಮುಂದುವರಿಸಿ ಡ್ರೀಜ್‌ರವರು ಯಾವ ಪ್ರದೇಶದಲ್ಲಿ ಅಗತ್ಯವಾದ ಕನಿಷ್ಠ ಸೌಲಭ್ಯಗಳು ಮಾನವ ಜೀವನಕ್ಕೆ ದೊರಕುತ್ತಿಲ್ಲವೋ ಆ ಪ್ರದೇಶದಲ್ಲಿ ಬಡತನದಲ್ಲಿರುವ ಕುಟುಂಬದ ಹೆಣ್ಣುಮಕ್ಕಳು ಅದರಲ್ಲಿಯೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹೆಣ್ಣುಮಕ್ಕಳು ಶಿಕ್ಷಣ ಪಡೆದುಕೊಳ್ಳುವಲ್ಲಿ ಅತ್ಯಂತ ಹಿಂದೆ ಬಿದ್ದಿದ್ದಾರೆ ಎಂಬುದನ್ನು ವಿವರವಾಗಿ ವಸ್ತುನಿಷ್ಠ ಅಂಶಗಳ ಆಧಾರದಲ್ಲಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆ (ಡ್ರೀಜ್ ಮತ್ತು ಸೇನ್, ೨೦೦೨).

ಈ ಹಿನ್ನೆಲೆಯಲ್ಲಿ ಶಿಕ್ಷಣ ಎಲ್ಲರಿಗೂ ದೊರೆಯಬೇಕಾದ ಸಾಮಾಜಿಕ ಅಗತ್ಯವಾಗಿದೆ. ಕರ್ನಾಟಕದ ಶಾಲಾ ಶಿಕ್ಷಣವನ್ನು ವಿಶಾಲ ಅರ್ಥದಲ್ಲಿ ಅರ್ಥಮಾಡಿಕೊಳ್ಳುವ ಜೊತೆಗೆ ಈ ಸಾಮಾಜಿಕ ಸಂಸ್ಥೆಯನ್ನು ಪ್ರಭಾವಿಸುವ ಸಾಮಾಜಿಕ-ಆರ್ಥಿಕ ಅಂಶಗಳು ಯಾವುವು ಎಂಬುದನ್ನು ಗುರುತಿಸಲು ಪ್ರಸ್ತುತ ಅಧ್ಯಯನ ಪ್ರಯತ್ನಿಸುತ್ತದೆ. ಅಭಿವೃದ್ಧಿಯ ಪ್ರಮುಖ ಸೂಚ್ಯಂಕವಾದ ಶಿಕ್ಷಣವನ್ನು ಸಮಾಜದ ೦೬-೧೪ ವಯೋಮಾನದ ಎಲ್ಲಾ ಮಕ್ಕಳಿಗೆ ಕಡ್ಡಾಯವಾಗಿ ಮತ್ತು ಉಚಿತವಾಗಿ ಒದಗಿಸುವುದು ಸರ್ಕಾರಗಳ ಜವಾಬ್ದಾರಿಯೂ ಹೌದು. ಇದು ಸಂವಿಧಾನಾತ್ಮಕ ಕರ್ತವ್ಯವೂ ಆಗಿದೆ. ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವ ಪ್ರಯತ್ನ ಕಳೆದ ೬ ದಶಕಗಳಿಂದ ನಿರಂತರವಾಗಿ ನಡೆಯುತ್ತಿದೆ. ಆದರೆ ಪ್ರಾಥಮಿಕ ಶಿಕ್ಷಣ ಕ್ಷೇತ್ರದ ಪರಿಸ್ಥಿತಿಯು ನಿಜವಾಗಿಯೂ ನಿರಾಶಾದಾಯಕವಾಗಿದೆ. ೧೯೫೧ ರಲ್ಲಿ ಒಟ್ಟಾರೆ ಸಾಕ್ಷರತಾ ಪ್ರಮಾಣ ಶೇಕಡ ೧೮.೦೫ರಷ್ಟಿದ್ದರೆ, ಮಹಿಳೆಯರ ಸಾಕ್ಷರತೆಯ ಪ್ರಮಾಣ

ಶೇಕಡ ೯.೦೦ರಷ್ಟು, ಪ್ರಾಥಮಿಕ ಹಂತದಲ್ಲಿ(೧-೫ನೇ ತರಗತಿ, ೬-೧೧ ವಯೋಮಾನ) ಒಟ್ಟು ಶಾಲಾ ದಾಖಲಾತಿ ಪ್ರಮಾಣ ಶೇಕಡ ೨೫ರಷ್ಟಿದ್ದರೆ, ಮಾಧ್ಯಮಿಕ ಶಾಲೆಯ ಹಂತದಲ್ಲಿ (೬-೮ನೇ ತರಗತಿ, ೧೧-೧೪ ವಯೋಮಾನ) ಈ ವಯೋಮಾನದ ಎಂಟು ಮಕ್ಕಳಲ್ಲಿ ಕೇವಲ ಒಂದು ಮಗು ಮಾತ್ರ ಮಾಧ್ಯಮಿಕ ಶಾಲೆಗೆ ದಾಖಲಾಗುತ್ತಿತ್ತು. ಇಪ್ಪತ್ತು ಹೆಣ್ಣುಮಕ್ಕಳಿಗೆ ಒಂದು ಹೆಣ್ಣು ಮಗು ಮಾತ್ರ ಮಾಧ್ಯಮಿಕ ಹಂತದ ಶಾಲೆಯನ್ನು ಪ್ರವೇಶಿಸುತ್ತಿತ್ತು. ಕಳೆದ ಐದು ದಶಕಗಳ ನಂತರದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಅಸಾಧಾರಣವಾದ ಬೆಳವಣಿಗೆಗಳಾಗಿವೆ. ೦೬-೧೪ ವಯೋಮಾನದ ಸುಮಾರು ಐದು ಜನ ಮಕ್ಕಳಲ್ಲಿ ನಾಲ್ಕು ಜನ ಮಕ್ಕಳು ಶಾಲೆಗೆ ದಾಖಲಾಗುತ್ತಿದ್ದಾರೆ. ಮೂರು ಜನರಲ್ಲಿ ಇಬ್ಬರು ವ್ಯವಹಾರಿಕ (ಫಂಕ್ಷನಲ್) ಸಾಕ್ಷರರಾಗಿದ್ದಾರೆ. ಇದನ್ನು ನಾವು ಬಿಡಿಸಿ ನೋಡಿದಾಗ ಜಾತಿ, ವರ್ಗ ಪ್ರದೇಶಗಳಲ್ಲಿ ಶೈಕ್ಷಣಿಕ ಅಭಿವೃದ್ಧಿ ಮತ್ತು ಸಾಕ್ಷರತೆಯಲ್ಲಿ ಪುರುಷ ಮತ್ತು ಮಹಿಳೆಯರಲ್ಲಿ ಭಿನ್ನವಾಗಿರುವುದನ್ನು ಅನೇಕ ಅಧ್ಯಯನಗಳು ಗುರುತಿಸಿವೆ (ಪ್ರಶಾಂತ್ ಎಚ್.ಡಿ., ೨೦೦೫, ಚಂದ್ರಶೇಖರ್ ಟಿ.ಆರ್., ೨೦೦೮, ಮಧು ಎಸ್. ಪರಂಜಪೆ, ೨೦೦೭).

ಶೈಕ್ಷಣಿಕ ಅಭಿವೃದ್ಧಿಯ ಸೂಚ್ಯಂಕಗಳಲ್ಲಿ ಒಂದಾದ ಸಾಕ್ಷರತೆಯ ದಶವಾರ್ಷಿಕ ಬೆಳವಣಿಗೆಯನ್ನು ವಿಮರ್ಶಾತ್ಮಕವಾಗಿ ಗಮನಿಸಿದರೆ, ಸಾಕ್ಷರತಾ ಬೆಳವಣಿಗೆಯ ಪ್ರಾದೇಶಿಕ ಅಂಶಗಳು ಬೆಳಕಿಗೆ ಬರುತ್ತವೆ. ೧೯೫೧-೬೧ರ ದಶಕದಲ್ಲಿ ಶೇಕಡ ೧೦.೦೦ರ ಪ್ರಮಾಣದಲ್ಲಿ, ೧೯೬೧-೭೧ರ ದಶಕದಲ್ಲಿ ಶೇಕಡ ೬.೦೧ರ ಪ್ರಮಾಣದಲ್ಲಿ, ೧೯೭೧-೮೧ರ ದಶಕದಲ್ಲಿ ಶೇಕಡ ೯.೦೧ರ ಪ್ರಮಾಣದಲ್ಲಿ, ೧೯೮೧-೯೧ರ ದಶಕದಲ್ಲಿ ಶೇಕಡ ೮.೦೭ರ ಪ್ರಮಾಣದಲ್ಲಿ ಮತ್ತು ೧೯೯೧-೨೦೦೧ರ ದಶಕದಲ್ಲಿ ಶೇಕಡ ೧೨.೦೯ರ ಪ್ರಮಾಣದಲ್ಲಿ ಸಾಕ್ಷರತೆಯ ದಶವಾರ್ಷಿಕ ಬೆಳವಣಿಗೆಯಾಗಿದೆ. ಇದೇ ಅವಧಿಯಲ್ಲಿ (೧೯೬೧-೨೦೦೧) ಅನಕ್ಷರಸ್ಥರ ಸಂಖ್ಯೆ ೨೪೯.೦೦ ಮಿಲಿಯನ್‌ನಿಂದ ೨೬೮.೪೨ ಮಿಲಿಯನ್‌ಗೆ ಹೆಚ್ಚಳವಾಗಿದೆ (ಜನಗಣತಿ ೧೯೬೧; ೨೦೦೧, ರಾಷ್ಟ್ರೀಯ ಸಾಕ್ಷರತಾ ಮಿಶನ್ ೨೦೦೦).

ಈ ಅಂಕಿ–ಅಂಶಗಳಿಂದ ಸ್ಪಷ್ಟವಾಗುವ ಅಂಶವೆಂದರೆ ಕಳೆದ ೬೦ ವರ್ಷಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಮೈಲಿಗಲ್ಲುಗಳನ್ನು ಕಂಡುಕೊಳ್ಳುವುದರ ಜೊತೆಗೆ ಸಾಧಿಸಿರುವ ಪ್ರಗತಿ ಸಣ್ಣ ಪ್ರಮಾಣದ್ದು ಎಂದು ಹೇಳಲು ಬರುವುದಿಲ್ಲ. ಆದರೆ ಎಲ್ಲರಿಗೂ ಶಿಕ್ಷಣ ನೀಡುವ ಗುರಿಯನ್ನು ಸಾಧಿಸುವಲ್ಲಿ ಹಿಂದುಳಿದಿರುವುದು ವಿಷಾದಕರ ಸಂಗತಿಯಾಗಿದೆ. ಈ ಹಿಂದುಳಿದಿರುವಿಕೆಗೆ ಕಾರಣವೇನು? ಎಂಬ ಪ್ರಶ್ನೆ ನಮಗೆ ಪ್ರಮುಖವಾಗಿದೆ.

ಕರ್ನಾಟಕ ರಾಜ್ಯವು ರಾಷ್ಟ್ರದ ಶೈಕ್ಷಣಿಕ ಪರಿಸರದಲ್ಲಿ ಬಿಹಾರದಷ್ಟು ಹಿಂದುಳಿಯದೆ, ಕೇರಳ ರಾಜ್ಯದಷ್ಟು ಅಭಿವೃದ್ಧಿ ಸಾಧಿಸದೆ, ಹಿಮಾಚಲ ಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಷ್ಟು ಪ್ರಗತಿ ಕಾಣದಿದ್ದರೂ ತನ್ನದೇ ಆದಂತಹ ಪ್ರಾತಿನಿಧ್ಯವನ್ನು ಪಡೆದಿರುತ್ತದೆ. ಈ ದೃಷ್ಟಿಯಿಂದ ಕರ್ನಾಟಕ ರಾಜ್ಯವು ಮಧ್ಯಮಗತಿಯ ರಾಜ್ಯವಾಗಿದೆ (ಚಂದ್ರಶೇಖರ್ ಟಿ.ಆರ್., ೨೦೦೩). ೨೦೦೧ರ ಜನಗಣತಿ

ಪ್ರಕಾರ ಕರ್ನಾಟಕದ ಒಟ್ಟು ಸಾಕ್ಷರತೆಯ ಪ್ರಮಾಣ ಶೇಕಡ ೬೭.೦೪ರಷ್ಟಿದೆ. ಇದರಲ್ಲಿ ಪುರುಷ ಸಾಕ್ಷರತೆ ಶೇಕಡ ೭೬.೨೯ರಷ್ಟು ಮತ್ತು ಮಹಿಳಾ ಸಾಕ್ಷರತೆ ಶೇಕಡ ೫೭.೪೫ರಷ್ಟಿದೆ. ಇದು ರಾಷ್ಟ್ರದ ಸರಾಸರಿ ಮಹಿಳಾ ಸಾಕ್ಷರತೆಗಿಂತಲೂ ಕಡಿಮೆ. ಮಹಿಳೆಯರ ಅತ್ಯಧಿಕ ಸಾಕ್ಷರತೆ ಶೇಕಡ ೮೨.೨೪ ರಷ್ಟಿದ್ದರೆ, ಪುರುಷರ ಅತ್ಯಧಿಕ ಸಾಕ್ಷರತೆಯ ಪ್ರಮಾಣ ಶೇಕಡ ೯೨.೫೪ರಷ್ಟಾಗಿರುತ್ತದೆ. ಒಟ್ಟಿನಲ್ಲಿ ಶೇಕಡ ೧೦.೦೨ರಷ್ಟು ಸಾಕ್ಷರತೆಯ ಲಿಂಗ ತಾರತಮ್ಯ ಕಂಡುಬರುತ್ತದೆ. ಒಟ್ಟಾರೆ ಪುರುಷರ ಸಾಕ್ಷರತೆ ಪ್ರಮಾಣ ಗ್ರಾಮ-ನಗರವಾರು ಮಹಿಳೆಯರ ಸಾಕ್ಷರತೆಗಿಂತ ಅಧಿಕವಾಗಿದೆ (ಸೆನ್ಸಸ್, ೨೦೦೧).

ಇಲ್ಲಿರುವ ಪ್ರಶ್ನೆ ಎಂದರೆ, ಶೈಕ್ಷಣಿಕ ಪ್ರಗತಿಗೆ ಏನು ಪ್ರಯತ್ನಗಳು ನಡೆದಿಲ್ಲವೆ? ಎನ್ನುವಷ್ಟರ ಮಟ್ಟಿಗೆ ಕೆಲವು ಪ್ರದೇಶದ ಜನಸಮುದಾಯಗಳ ಶೈಕ್ಷಣಿಕ ಅಭಿವೃದ್ಧಿ ಹಿಂದುಳಿದಿರುವುದು ತಿಳಿಯುತ್ತದೆ. ಇದರ ಅರ್ಥ ಶೈಕ್ಷಣಿಕ ಅಭಿವೃದ್ಧಿಗೆ ಏನೆಲ್ಲಾ ಪ್ರಯತ್ನಗಳು ನಡೆದಿಲ್ಲ ಎಂದಲ್ಲ. ಅವು ಯಾರನ್ನು ತಲುಪಬೇಕಿತ್ತೋ ಅವರನ್ನು ತಲುಪದಿರುವುದು ನಿಜವಾಗಿಯೂ ಒಂದು ಬಗೆಯ ಸವಾಲಾಗಿದೆ. ಶಿಕ್ಷಣದ ಪ್ರಗತಿಯು ಯಾವುದೇ ಸಮಾಜದಲ್ಲಿಯಾದರೂ ಸಾಮಾಜಿಕವಾಗಿರುತ್ತದೆಯೇ ಹೊರತು ಜೈವಿಕವಾದುದಲ್ಲ.

ಕರ್ನಾಟಕದಲ್ಲಿರುವ ಮಹಿಳೆಯರ ಕೆಳಮಟ್ಟದ ಸಾಕ್ಷರತೆ ದರವು ಶಿಕ್ಷಣವು ಮಹಿಳೆಯರಿಗೆ ಸಹಜವಾದ ಹಕ್ಕು ಎಂಬುದನ್ನು ಮಾನ್ಯತೆ ಮಾಡಲು ಸಿದ್ಧವಿಲ್ಲದಿರುವುದನ್ನು ಮತ್ತು ಇದು ಲಿಂಗ ಸಂಬಂಧಿ ಪಕ್ಷಪಾತವೆಂದು ಪ್ರತ್ಯಕ್ಷವಾಗಿ ರುಜುವಾತುಪಡಿಸುತ್ತದೆ. ಜಾತಿ, ಅಂತಸ್ತು ಮತ್ತು ಭೌಗೋಳಿಕ ಅಂಶಗಳು ಸಮಾನತೆಯ ಇತರೆ ಮೂಲಗಳಾಗಿದ್ದು, ಇದು ಮಹಿಳಾ ಸಾಕ್ಷರತಾ ಮಟ್ಟವನ್ನು ರೂಪುಗೊಳಿಸುತ್ತದೆ. ಇದು ಅಂತರ ಜಿಲ್ಲಾ ಮಹಿಳಾ ಸಾಕ್ಷರತೆಯ ನಿರ್ವಹಣೆಯನ್ನು ವಿಶ್ಲೇಷಿಸಿದಾಗ ಸ್ಪಷ್ಟವಾಗುತ್ತದೆ. ಬೆಂಗಳೂರು ನಗರದಲ್ಲಿ (ಶೇ ೭೭.೪೮) ಹಾಗೂ ಅತಿ ಕಡಿಮೆ ರಾಯಚೂರಿನಲ್ಲಿ (ಶೇ ೩೫.೯೩), ಗುಲ್ಬರ್ಗಾ (ಶೇ ೩೭.೯೦) ಮತ್ತು ಕೊಪ್ಪಳ (ಶೇ ೩೯.೬೧) ಆಗಿರುತ್ತದೆ. ಭೌಗೋಳಿಕವಾಗಿ ಗುಲ್ಬರ್ಗಾ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯು ಸಮೀಪವಾಗಿದ್ದು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಕೆಳಮಟ್ಟದ ಅಭಿವೃದ್ಧಿ ಹೊಂದಿದ ಗುಣಲಕ್ಷಣಗಳನ್ನು ಹಂಚಿಕೊಂಡಿವೆ (ಎಚ್.ಡಿ. ಪ್ರಶಾಂತ್, ೨೦೦೭).

ಸಾಮಾಜಿಕ ಗುಂಪುವಾರು ಸಾಕ್ಷರತಾ ದರದಲ್ಲಿನ ವ್ಯತ್ಯಾಸಗಳು (ಶೇಕಡವಾರು)

ಪ್ರದೇಶ:ಲಿಂಗ		**ಒಟ್ಟು**	**ಪರಿಶಿಷ್ಟ ಜಾತಿ**		**ಪರಿಶಿಷ್ಟ ಪಂಗಡ**	
೧೯೯೧	೨೦೦೧		೧೯೯೧-೨೦೦೧		೧೯೯೧- ೨೦೦೧	
ದಕ್ಷಿಣ ಕರ್ನಾಟಕ						
ಪುರುಷ	೧೨.೭	೧೦.೪	೧೬.೨	೯.೧	೨೨.೬	೧೫.೧
ಸ್ತ್ರೀ	೨೪.೩	೧೭.೨	೩೨.೩	೧೬.೭	೩೬.೯	೨೨.೫
ಒಟ್ಟು	೧೭.೨	೧೩.೨	೨೧.೫	೧೨.೦	೨೭.೧	೧೭.೯

ಉತ್ತರ ಕರ್ನಾಟಕ						
ಪುರುಷ	೧೫.೨	೯.೯	೨೨.೪	೧೩.೫	೨೭.೮	೧೭.೨
ಸ್ತ್ರೀ	೩೧.೫	೨೦.೪	೪೧.೨	೨೭.೧	೪೭.೫	೩೧.೮
ಒಟ್ಟು	೨೦.೯	೧೪.೦	೨೮.೫	೧೮.೪	೩೩.೪	೨೨.೨
ಎಲ್ಲಾ ಜಿಲ್ಲೆ						
ಪುರುಷ	೧೪.೦	೧೦.೬	೧೯.೦	೧೧.೮	೨೪.೭	೧೬.೫
ಸ್ತ್ರೀ	೨೯.೬	೨೧.೩	೩೭.೫	೨೫.೦	೪೪.೬	೩೦.೪
ಒಟ್ಟು	೧೯.೮	೧೪.೮	೨೪.೮	೧೬.೭	೩೦.೫	೨೧.೫

ಮೂಲ: ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ, ಪ್ರಾಥಮಿಕ ಜನಗಣತಿ, ಭಾರತದ ಜನಗಣತಿ ೨೦೦೧ರ ಮಾಹಿತಿ

ಉತ್ತರ ಕರ್ನಾಟಕದಲ್ಲಿ ಸಾಕ್ಷರತೆಯಲ್ಲಿನ ಲಿಂಗ ಆಧಾರಿತ ತಾರತಮ್ಯವು ದಕ್ಷಿಣ ಕರ್ನಾಟಕಕ್ಕಿಂತ ಹೆಚ್ಚಾಗಿದ್ದು, ಇದರಿಂದ ದಕ್ಷಿಣ ಕರ್ನಾಟಕದಲ್ಲಿನ ಲಿಂಗತಾರತಮ್ಯವು ಕನಿಷ್ಠ ಮಟ್ಟದ್ದಾಗಿದೆ ಎಂದು ಸುಲಭವಾಗಿ ಹೇಳಿಬಿಡಬಹುದು. ಕಳೆದ ದಶಕದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮಹಿಳಾ ಸಾಕ್ಷರತಾ ದರದಲ್ಲಿ ಸುಧಾರಣೆಯಾಗಿರಬಹುದಾದರೂ, ಇದು ನಗರ ಕೇಂದ್ರದ ಪಕ್ಕದಲ್ಲಿರುವಂತಹ ಅನುಕೂಲ ಹೊಂದಿರುವ ಜಿಲ್ಲೆಗೆ ಬಹಳ ಕಡಿಮೆಯೇ ಆಗಿರುತ್ತದೆ. ದಕ್ಷಿಣ ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ ತಾರತಮ್ಯದ ತೀಕ್ಷ್ಣತೆಯು ಕಡಿಮೆ ಇದ್ದರೂ ಸಹ ಇಲ್ಲಿಯೂ ತಾರತಮ್ಯವಿದೆ. ಇದು ಮಹಿಳೆಯರ ಆರೋಗ್ಯ ಮತ್ತು ಬಡತನದ ಮೇಲೆ ಗಂಭೀರ ಪರಿಣಾಮವನ್ನು ಉಂಟುಮಾಡುತ್ತದೆ. ಒಟ್ಟಾರೆ ಸಾಕ್ಷರತೆಯಲ್ಲಿ ಲಿಂಗಾಧಾರಿತ ತಾರತಮ್ಯವು ಕಡಿಮೆಯಾಗುತ್ತಿದ್ದು, ಇದು ಕಡಿಮೆ ಅಭಿವೃದ್ಧಿ ಹೊಂದಿದ ಜಿಲ್ಲೆಗಳಲ್ಲಿ ವೇಗವಾಗಿರುವುದು ಧೈರ್ಯ ನೀಡುವಂತದ್ದಾಗಿದ್ದರೂ, ಸಹಸ್ರಮಾನದ ಗುರಿಗಳನ್ನು ಸಾಧಿಸಿಕೊಳ್ಳಲು ಕರ್ನಾಟಕದಲ್ಲಿ ಹೆಚ್ಚು ಶೈಕ್ಷಣಿಕ ನೀತಿ ಮತ್ತು ಕಾರ್ಯಕ್ರಮಗಳ ಮಧ್ಯಸ್ಥಿಕೆಯ ಅವಶ್ಯಕತೆ ಇದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದವರಲ್ಲಿ ಕೆಳಮಟ್ಟದ ಸಾಕ್ಷರತಾ ಪ್ರಮಾಣವಿದ್ದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆ ಹೆಚ್ಚಾಗಿರುವ ಜಿಲ್ಲೆಗಳಲ್ಲಿ ಸಾಕ್ಷರತಾ ದರವು ಕೆಳಮಟ್ಟದಲ್ಲಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ (ಎಚ್.ಡಿ. ಪ್ರಶಾಂತ್, ೨೦೦೭).

ಪ್ರಾಥಮಿಕ ಶಿಕ್ಷಣ ಸೌಲಭ್ಯವು ಎಲ್ಲರಿಗೂ ದೊರಕಬೇಕೆಂಬ ಪ್ರಯತ್ನಗಳು ನಿರಂತರವಾಗಿಯೇ ನಡೆಯುತ್ತಿವೆ. ೦೬-೧೪ ವಯೋಮಾನದ ಎಲ್ಲಾ ಮಕ್ಕಳಿಗೆ ಸಾರ್ವತ್ರಿಕವಾಗಿ, ಉಚಿತ ಹಾಗೂ ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣವನ್ನು ನೀಡಬೇಕೆಂಬುದು ನಮ್ಮ ಸಂವಿಧಾನ ರಚನಾ ಪೂರ್ವದ ಆಶಯವಾಗಿರುತ್ತದೆ. ೧೮೦೭ರಲ್ಲಿ ಟ್ರಾವಂಕೂರ್ ಮಹಾರಾಣಿ, ಪ್ರಾಂತ್ಯದ ಎಲ್ಲರಿಗೆ ಶಿಕ್ಷಣ ನೀಡುವ ಘೋಷಣೆ ಮಾಡಿದ ನಂತರ, ದಾದಾಬಾಯಿ ನವರೋಜಿಯವರು ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಬ್ರಿಟಿಷ್ ಸರ್ಕಾರದ ಭಾರತೀಯ ಶಿಕ್ಷಣ ಆಯೋಗವನ್ನು ಒತ್ತಾಯಿಸಿದ್ದಾರೆ. ಬರೋಡಾದ ಮಹಾರಾಜ

ಗಾಯಕ್ವಾಡ ಅಮಾರಾಯಲಿ ೧೯೦೬ರಲ್ಲಿ ಬರೋಡ ಪ್ರಾಂತ್ಯದಲ್ಲಿ ಕಡ್ಡಾಯ ಶಿಕ್ಷಣವನ್ನು ಜಾರಿಗೊಳಿಸಿದರು. ಶಿಕ್ಷಣಕ್ಕೆ ಸಂಬಂಧಿಸಿದಂತೆಯೇ ಗೋಪಾಲಕೃಷ್ಣ ಗೋಖಲೆಯವರು ೧೯೧೧ರಲ್ಲಿ ಕೇಂದ್ರ ಶಾಸನ ಸಭೆಯಲ್ಲಿ ಗೊತ್ತುವಳಿ ಮಂಡಿಸಿದರು. ಇದೇ ಸಂದರ್ಭದಲ್ಲಿ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಸಾರ್ವಜನಿಕರ ಒತ್ತಾಯದ ಕಾರಣದಿಂದ ಬ್ರಿಟಿಷ್ ಸರ್ಕಾರ ಅನೇಕ ಆಯೋಗಗಳನ್ನು ರಚಿಸಿತು. ನಂತರ ಸಂವಿಧಾನ ಜಾರಿಗೊಂಡ ೧೦ ವರ್ಷದೊಳಗೆ ಎಲ್ಲರಿಗೂ ಸಾರ್ವತ್ರಿಕ ಉಚಿತ ಹಾಗೂ ಕಡ್ಡಾಯ ಪ್ರಾಥಮಿಕ ಶಿಕ್ಷಣ ನೀಡುತ್ತೇವೆ ಎಂದು ಸಂವಿಧಾನದ ರಚನಾಕಾರರು ಸಂವಿಧಾನದ ರಚನೆಯ ಸಂದರ್ಭದಲ್ಲಿ ಸೇರಿಸಿದ್ದು ಒಂದು ಕಾಲಮಿತಿಯ ಕಾರ್ಯಕ್ರಮವಾಗಿ ಕಂಡುಬರುತ್ತದೆ.

ಆನಂತರದಲ್ಲಿ ಅನೇಕ ರಾಷ್ಟ್ರೀಯ ಶಿಕ್ಷಣ ಆಯೋಗಗಳ ನೀತಿ ಮತ್ತು ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕವಾಗಿ ಶಿಕ್ಷಣದ ಸಾರ್ವತ್ರೀಕರಣದ ಪ್ರಯತ್ನಗಳು ನಿರಂತರವಾಗಿ ಮುಂದು ವರಿದಿವೆ. ೧೯೬೪ರ ಜುಲೈ ೧೪ರಲ್ಲಿ ಕೊಠಾರಿಯವರ ಅಧ್ಯಕ್ಷತೆಯಲ್ಲಿ ರಚನೆಯಾದ ಶಿಕ್ಷಣ ಆಯೋಗದ ಪ್ರಕಾರವಾಗಿ ೧೯೬೮ರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸಿ ಅನುಷ್ಠಾನಗೊಳಿಸಲಾಯಿತು. ಈ ನೀತಿಯ ಆಧಾರದ ಮೇಲೆ ೧೯೮೬ರ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸಿ ಅದನ್ನು ೧೯೯೨ರಲ್ಲಿ ಆಚಾರ್ಯ ರಾಮಮೂರ್ತಿಯವರ ಅಧ್ಯಕ್ಷತೆಯಲ್ಲಿ ಪರಿಷ್ಕರಿಸಿ ಸಂಸತ್ತಿನಲ್ಲಿ ಅನುಮೋದನೆ ಪಡೆದುಕೊಳ್ಳಲಾಯಿತು. ೧೯೯೦ರ ನಂತರದ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ 'ಎಲ್ಲರಿಗೂ ಶಿಕ್ಷಣ' ನೀಡುವ ಅಗತ್ಯವನ್ನು ಒತ್ತಿಹೇಳಲಾಗಿದೆ. ಇದಕ್ಕೆ ಪುಷ್ಟಿಯಾಗಿ ೧೯೯೩ರಲ್ಲಿ ಭಾರತದ ಸುಪ್ರೀಂಕೋರ್ಟ್ ಶಿಕ್ಷಣ ಪಡೆಯುವುದು ರಾಷ್ಟ್ರದ ಪ್ರತಿಯೊಬ್ಬ ನಾಗರಿಕನ **'ಮೂಲಭೂತ ಹಕ್ಕು'** ಎಂಬ ಮಹತ್ವದ ತೀರ್ಪು ನೀಡಿದೆ. ಈ ತೀರ್ಪಿನ ಆಧಾರದ ಮೇಲೆ ಭಾರತದ ಸಂವಿಧಾನವನ್ನು ತಿದ್ದುಪಡಿ (೮೬ನೇ ತಿದ್ದುಪಡಿ) ಮಾಡಿ, ಜೀವಿಸುವ ಹಕ್ಕಿನ ೨೧ನೇ ಪರಿಚ್ಛೇದದ ಜೊತೆಯಲ್ಲಿ 'ಶಿಕ್ಷಣ ಪಡೆಯುವುದು ಮೂಲಭೂತ ಹಕ್ಕೆಂದು' ತಿಳಿಸುವ ೨೧-ಎ ಎಂಬ ಹೊಸ ಪರಿಚ್ಛೇದವನ್ನು ಸೃಷ್ಟಿಸಲಾಗಿದೆ. ಮುಂದುವರಿದಂತೆ ಪರಿಚ್ಛೇದ ೫೧-ಎ (ಕೆ) ಪ್ರಕಾರ ೦೬-೧೪ ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಪೋಷಕರು ಶಾಲಾ ಕಲಿಕೆಗೆ ಅವಕಾಶ ಕಲ್ಪಿಸಬೇಕಾಗಿದೆ. ಈ ಬೆಳವಣಿಗೆಯಿಂದಾಗಿ ಶಿಕ್ಷಣದ ಸಾರ್ವತ್ರೀಕರಣಕ್ಕೆ ಹೊಸ ಆಯಾಮ ಲಭಿಸಿದಂತಾಗಿ ರಾಷ್ಟ್ರದಾದ್ಯಂತ ಹೊಸ ಶೈಕ್ಷಣಿಕ ಯೋಜನೆಗಳನ್ನು ಜಾರಿಗೆ ತರುವಂತಹ ಪ್ರಯತ್ನಗಳು ಪ್ರಾರಂಭವಾದವು.

ಭಾರತ ಸ್ವಾತಂತ್ರ್ಯ ಹೋರಾಟದ ಕಾಲದಿಂದ ಇಲ್ಲಿಯವರೆಗೆ ಶಾಲಾ ಶಿಕ್ಷಣದ ಸಾರ್ವತ್ರೀಕರಣದ ಪ್ರಯತ್ನಗಳು ನಿರಂತರವಾಗಿದ್ದರೂ, ಸಮಾಜದ ಎಲ್ಲಾ ವರ್ಗದ ಜನರು ಸಮನಾಗಿ ಶಿಕ್ಷಣ ಪಡೆದು ಕೊಳ್ಳುವುದು ಸಾಧ್ಯವಾಗಿಲ್ಲ. ಇದರಿಂದ ಶಿಕ್ಷಣದ ವಿಷಯದಲ್ಲಿ ಜಾತಿ ವರ್ಗ, ಲಿಂಗ ಮತ್ತು ಪ್ರದೇಶ ವಾರು ಭಿನ್ನತೆಗಳು ಇನ್ನೂ ಈಗಲೂ ಜೀವಂತವಾಗಿ ಉಳಿದುಕೊಂಡಿವೆ. ಈ ಹಿನ್ನೆಲೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವ ಪ್ರಯತ್ನ ಮತ್ತು ಅದನ್ನು ಪಡೆದುಕೊಳ್ಳುವ ಸಾಮಾಜಿಕ ಶಕ್ತಿ-ಆಸಕ್ತಿಗಳನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಹೀಗೆ ಪರಿಗಣಿಸುವಾಗ ಭಾರತದಲ್ಲಿ ಶತಮಾನಗಳಿಂದಲೂ

ವಂಚಿತರಾದ ಮತ್ತು ಶೈಕ್ಷಣಿಕವಾಗಿ ನಿಕೃಷ್ಟವಾಗಿರುವ ದಲಿತರ ಕಡೆಗೆ ಅದರಲ್ಲಿಯೂ ಪರಿಶಿಷ್ಟ ಜಾತಿಯವರ ಕಡೆಗೆ ಗಮನಹರಿಸಬೇಕಾಗಿದೆ. ದಲಿತರ ಶಿಕ್ಷಣದ ಕಡೆಗೆ ಗಮನಹರಿಸುವಾಗ ಸಾಮಾಜಿಕ ನ್ಯಾಯದ ದೃಷ್ಟಿಯಿಂದ ನೋಡಬೇಕಾಗಿರುತ್ತದೆ. ಹೀಗೆ ನೋಡುವಾಗ ದಲಿತರಲ್ಲಿನ ಮಧ್ಯಮವರ್ಗ, ಬಡವರ್ಗ ಮತ್ತು ಮಹಿಳೆಯರ ಶೈಕ್ಷಣಿಕ ಪರಿಸರ, ದಲಿತ ಮಕ್ಕಳ ಶಿಕ್ಷಣ ಮತ್ತು ಇತರ ಅಂಶಗಳು ಬೆಳಕಿಗೆ ಬರುವ ಸಾಧ್ಯತೆಗಳಿವೆ.

ಸಾಕ್ಷರತೆಯು ಸಮಾಜದ ಸ್ಥಿತಿಗತಿಯನ್ನು ಅಭಿವ್ಯಕ್ತಪಡಿಸುವ ಒಂದು ಸೂಚಿಯಾಗಿದೆ. ಇದನ್ನು ಸಮಾಜದ ಚೌಕಟ್ಟಿನಿಂದ ಪ್ರತ್ಯೇಕ ಮಾಡಿ ನೋಡುವುದು ಅಥವಾ ಪರಿಭಾವಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ. ಸಾಕ್ಷರತೆ ಮತ್ತು ಶಿಕ್ಷಣಗಳು ಮೌಲ್ಯ ನಿರಪೇಕ್ಷವಾದವುಗಳಲ್ಲ. ಆದ್ದರಿಂದಲೇ ಅಭಿವೃದ್ಧಿ ಕುರಿತ ಚರ್ಚೆಯಲ್ಲಿ ಸಾಕ್ಷರತೆಯ ಬಗ್ಗೆ ಒಂದು ನಿರ್ದಿಷ್ಟವಾದ ನಿಲುವು ತಳೆಯುವುದು ತುಂಬಾ ಅವಶ್ಯಕವಾಗಿದೆ. ಸಾಕ್ಷರತೆ ಯಾರಿಗೆ ಸಿಗಬೇಕು? ಯಾರಿಗೆ ಸಿಗಬಾರದು? ಮತ್ತು ಯಾರಿಗೆ ಎಷ್ಟು ಸಿಗಬೇಕು? ಎಂಬ ಸಂಗತಿಗಳನ್ನೆಲ್ಲಾ ನಮ್ಮ ಸಾಮಾಜಿಕ ವ್ಯವಸ್ಥೆಯು ನಿರ್ಧರಿಸುತ್ತಿರುತ್ತದೆ. ಈ ಕಾರಣದಿಂದಲೇ ನಮ್ಮ ಸಮಾಜದಲ್ಲಿ ಸಾಕ್ಷರತೆಗೆ ಸಂಬಂಧಿಸಿದಂತೆ ಜಾತಿಭೇದ, ವರ್ಗಭೇದ, ಮತ/ಲಿಂಗ ಭೇದಗಳು ತೀವ್ರವಾಗಿರುವುದನ್ನು ನೋಡಬಹುದಾಗಿದೆ. ಮಹಿಳೆಯರ ಸಾಕ್ಷರತಾ ಪ್ರಮಾಣ, ಪುರುಷರ ಸಾಕ್ಷರತೆಗಿಂತ ಕಡಿಮೆಯಾಗಿರುವುದು ಕೇವಲ ಜೈವಿಕ ಸ್ವರೂಪದ ಫಲವಾಗಿರದೆ ಸಾಮಾಜಿಕ ಸ್ವರೂಪದ ಅಂಶವೂ ಆಗಿರುತ್ತದೆ. ಸಾಕ್ಷರತೆಗೆ ಸಂಬಂಧಿಸಿದ ಸಾಧನೆ ಮತ್ತು ವೈಫಲ್ಯಗಳನ್ನು ವ್ಯಕ್ತಿಗತ ಅಥವಾ ಜೈವಿಕ-ನೈಸರ್ಗಿಕ-ಪ್ರಾಕೃತಿಕ ನೆಲೆಗಳಲ್ಲಿ ಪರಿಭಾವಿಸುವುದು ಸಾಧ್ಯವಾಗುವುದಿಲ್ಲ. ಇವೆಲ್ಲಾ ಸಾಮಾಜಿಕ ವ್ಯವಸ್ಥೆಯು ರೂಪಿಸಿದ ಒಂದು ಸಂಗತಿಯಾಗಿರುತ್ತದೆ (ಚಂದ್ರಶೇಖರ್ ಟಿ.ಆರ್, ೨೦೦೦). ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಪರಿಸರ ಮತ್ತು ಪರಿಸ್ಥಿತಿಯನ್ನು ಪ್ರಭಾವಿಸುವ ಸಾಮಾಜಿಕ-ಆರ್ಥಿಕ ಅಂಶಗಳನ್ನು ಗುರುತಿಸುವುದು ಪ್ರಸ್ತುತ ಅಧ್ಯಯನದ ಮೂಲ ಆಶಯ..

೧.೪. ಇದುವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ

ಶಿಕ್ಷಣ ಅದರಲ್ಲಿಯೂ ಪ್ರಾಥಮಿಕ ಶಿಕ್ಷಣ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟಗಳಲ್ಲಿ ಚರ್ಚೆಯಾಗಿ ಆದ್ಯತೆ ಪಡೆದುಕೊಂಡಿರುವ ಕ್ಷೇತ್ರವಾಗಿದೆ. ಈ ಕ್ಷೇತ್ರದ ಅಭಿವೃದ್ಧಿಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿನ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿವೆ. ಹೀಗೆ ಪ್ರಯತ್ನಗಳು ನಡೆಯುತ್ತಿರುವ ಸಂದರ್ಭದಲ್ಲಿಯೇ ಆ ಕ್ಷೇತ್ರದ ಸಂಶೋಧನೆಗಳು, ಅಧ್ಯಯನ ವರದಿಗಳು ಹೊರಬರುತ್ತಿರುವುದನ್ನು ನಾವು ಕಾಣಬಹುದು. ಇವುಗಳನ್ನು ವಿಶಾಲವಾಗಿ ವರ್ಗೀಕರಿಸಲೂಬಹುದು. ಸಾಮಾಜಿಕ ಸಂಶೋಧನಾ ವರದಿಗಳು, ಅಭಿವೃದ್ಧಿ ಅಧ್ಯಯನ ವರದಿಗಳು, ಕ್ರಿಯಾ ಸಂಶೋಧನೆಗಳು ಮತ್ತು ತಳಮಟ್ಟದ ಸಂಶೋಧನಾ ಅನುಭವಗಳು ಇತ್ಯಾದಿ ಎಂದು ವರ್ಗೀಕರಿಸಬಹುದು. ಇವುಗಳಲ್ಲಿ ನಮ್ಮ ಅಧ್ಯಯನದ ದೃಷ್ಟಿಯಿಂದ ಪ್ರಮುಖವಾದ ಅಧ್ಯಯನಗಳನ್ನು ಸಮೀಕ್ಷೆ ಮಾಡುವ ಮೂಲಕ ಪ್ರಸ್ತುತ ಅಧ್ಯಯನವನ್ನು ಕಟ್ಟಿಕೊಳ್ಳಲಾಗಿದೆ.

ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯಲ್ಲಿ ಶಿಕ್ಷಣವು ಪ್ರಮುಖ ಸ್ಥಾನವನ್ನು ಪಡೆದಿದೆ. ಶಿಕ್ಷಣವು ಎಲ್ಲಾ ಪ್ರದೇಶ ಮತ್ತು ಜನವರ್ಗಗಳಲ್ಲಿ ಸಮಾನವಾಗಿ ದೊರಕದೆ ಅಂತರ ಮತ್ತು ಅಸಮಾನತೆಗಳಿರುವುದನ್ನು ಅನೇಕ ಅಧ್ಯಯನಗಳು ಗುರುತಿಸಿವೆ. ಇದೇ ರೀತಿಯಾಗಿ ಶಿಕ್ಷಣದಲ್ಲಿ ಪ್ರಾದೇಶಿಕ ಅಸಮಾನತೆಯ ಅಂತರಗಳು ತೀವ್ರವಾಗುತ್ತಿವೆಯೋ ಅಥವಾ ಕಡಿಮೆಯಾಗುತ್ತಿವೆಯೋ ಎಂಬುದನ್ನು ತಿಳಿಯಲು ಹಲವು ಅಧ್ಯಯನಗಳು ಪ್ರಯತ್ನಿಸಿವೆ. ಅದರಂತೆ ಶಿಕ್ಷಣದ ಸಾಮಾಜಿಕ ಸ್ವರೂಪವನ್ನು ಹಿಡಿದಿಡುವ ಪ್ರಯತ್ನವನ್ನು ಕೆಲವು ಅಧ್ಯಯನಗಳು ಮಾಡಿವೆ. ಶಿಕ್ಷಣ, ಲಿಂಗಸಂಬಂಧಿ ಆಯಾಮಗಳು, ಲಿಂಗ ತಾರತಮ್ಯ, ಶೈಕ್ಷಣಿಕ ಪರಿಸರ ಮತ್ತು ಪರಿಸ್ಥಿತಿಯನ್ನು ಪ್ರಭಾವಿಸುವ ಸಾಮಾಜಿಕ-ಆರ್ಥಿಕ ಅಂಶಗಳನ್ನು ಗುರುತಿಸಲು ಅನೇಕ ಅಧ್ಯಯನಗಳು ಪ್ರಯತ್ನಿಸಿವೆ. ಹೀಗೆ ಇನ್ನೂ ಮುಂತಾದ ವಿಷಯಗಳನ್ನು ಕುರಿತು ಅಧ್ಯಯನಗಳು ನಡೆದಿವೆ. ನಮ್ಮ ಅಧ್ಯಯನದ ದೃಷ್ಟಿಯಿಂದ ಪ್ರಮುಖವಾದ ಅಧ್ಯಯನಗಳನ್ನು ಕಾಲಮಿತಿಯೊಳಗೆ ಅರ್ಥಮಾಡಿಕೊಳ್ಳಲು ಇಲ್ಲಿ ಪ್ರಯತ್ನಿಸಲಾಗಿದೆ.

ಅನಿತಾ ಕೆ. ಇವರು ೧೯೯೭ರಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧವಾದ "ಎಜ್ಯುಕೇಷನ್ ಫ್ಲಾನಿಂಗ್ ಫಾರ್ ಸ್ಕೂಲ್ ಎಜ್ಯುಕೇಶನ್ : ಎ ಸ್ಟಡಿ ಫಾರ್ ತ್ರಿ ಡಿಸ್ಟ್ರಿಕ್ಟ್ ಇನ್ ಕರ್ನಾಟಕ" ಎಂಬುದರಲ್ಲಿ ೭೦ ಮತ್ತು ೮೦ರ ದಶಕದಲ್ಲಿ ಉಂಟಾದ ಸಾಕ್ಷರತಾ ಬದಲಾವಣೆಯನ್ನು ವಿವರವಾಗಿ ಚರ್ಚೆಗೆ ಒಳಪಡಿಸಿದ್ದಾರೆ. ಇವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಸಾಕ್ಷರತೆಯಲ್ಲಿ ಕಂಡುಬಂದಿರುವ ಬದಲಾವಣೆಗಳನ್ನು ಮತ್ತು ಶಾಲಾಭಿವೃದ್ಧಿ ಯೋಜನೆಗಳು ಹೇಗೆ ಜಾರಿಗೆ ಬಂದಿವೆ ಎಂಬುದನು ಕೂಡ ತಮ್ಮ ಮಹಾಪ್ರಬಂಧದಲ್ಲಿ ವಿವರಿಸಿದ್ದಾರೆ.

ಅನಿತಾ ಬಿ.ಕೆ. (೨೦೦೦) ಅವರ "ವಿಲೇಜ್ ಕಾಸ್ಟ್ ಅಂಡ್ ಎಜ್ಯುಕೇಷನ್" ಎನ್ನುವ ಕೃತಿಯಲ್ಲಿ ಸಮಾರೋಪವೂ ಸೇರಿದಂತೆ ಒಟ್ಟು ಎಂಟು ಅಧ್ಯಾಯಗಳಿವೆ. ಈ ಗ್ರಂಥವೂ ಕ್ಷೇತ್ರಾಧಾರಿತವಾದ ಮಾಹಿತಿ ಒಳಗೊಂಡು ವಿಶ್ಲೇಷಣೆಯ ಮೇಲೆ ರೂಪುಗೊಂಡಿದೆ. ಅಧ್ಯಯನಕ್ಕೆ ತುಮಕೂರು ಜಿಲ್ಲೆಯನ್ನು ಸೀಮಿತಗೊಳಿಸಿಕೊಂಡಿದ್ದಾರೆ. ಇವರು ತಮ್ಮ ಅಧ್ಯಯನದಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳ ವ್ಯತ್ಯಾಸವನ್ನು ಗುರುತಿಸುವ ಪ್ರಯತ್ನವನ್ನು ಮಾಡಿದ್ದಾರೆ. ಆ ಪ್ರಯತ್ನವನ್ನು ಶೈಕ್ಷಣಿಕ ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ವಿವರಣೆ ನೀಡಿದ್ದಾರೆ. ನಿರ್ದಿಷ್ಟವಾಗಿ ಸಾಮಾಜಿಕ, ಸಾಂಸ್ಕೃತಿಕ ಪರಿಸರದ ಪ್ರಕ್ರಿಯೆಗಳು ಹಾಗೂ ಶಾಲೆ ನೆಲೆಗೊಂಡಿರುವ ಸ್ಥಳೀಯ ಸಾಮಾಜಿಕ ರಚನೆಯಲ್ಲಿ ಪ್ರತಿಬಿಂಬಿಸುತ್ತದೆ ಎಂಬುದನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ.

ಇನ್ನು ಮೂಲಭೂತ ಸೌಲಭ್ಯಗಳು, ಮಕ್ಕಳ ಆರೋಗ್ಯ ಸ್ಥಿತಿ, ಶಿಕ್ಷಕರ ಬೋಧನಾ ವಿಧಾನ ಇತ್ಯಾದಿ ಅಂಶಗಳು ಮಕ್ಕಳ ಕಲಿಕೆಯ ಜೊತೆ ಜೊತೆಗೆ, ಶಿಕ್ಷಕರ ಬೋಧನಾ ಸಾಮರ್ಥ್ಯವನ್ನು ನಿರ್ಧರಿಸುವ ಅಂಶಗಳಾಗಿವೆ ಎಂಬುದನ್ನು ಸ್ಪಷ್ಟಪಡಿಸುತ್ತಾರೆ.

ಕರ್ನಾಟಕದಲ್ಲಿನ ಸಾಕ್ಷರತೆಯನ್ನು ಕೇರಳ ರಾಜ್ಯದ ಸಾಕ್ಷರತೆಯ ಜೊತೆಗೆ ಹೋಲಿಸುತ್ತಾ, ಕೇರಳ ರಾಜ್ಯವು ಯಾವ ಯಾವ ಯೋಜನೆಗಳನ್ನು ಅಳವಡಿಸಿಕೊಂಡಿದೆ ಎಂಬುದನ್ನು ವಿವರಿಸುವ

ಪ್ರಯತ್ನವನ್ನು ಅಧ್ಯಯನದಲ್ಲಿ ಮಾಡಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಣ ಏಕೆ ಹಿಂದುಳಿದಿದೆ? ಮತ್ತು ಶಾಲೆಗಳಲ್ಲಿನ ಕಲಿಕಾ ಗುಣಮಟ್ಟದ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಒಟ್ಟಾರೆಯಾಗಿ ಈ ಅಧ್ಯಯನದಲ್ಲಿ ಮೂಲಭೂತ ಸೌಲಭ್ಯಗಳು, ಆದಾಯ, ಜಾತಿ, ಸಾಮಾಜಿಕ ಮತ್ತು ಆರ್ಥಿಕ ಅಂಶಗಳು ಶೈಕ್ಷಣಿಕ ಹಿಂದುಳಿಯುವಿಕೆಗೆ ಪ್ರಮುಖವಾದ ಕಾರಣಗಳಾಗಿವೆ ಎಂಬ ಅಭಿಪ್ರಾಯವನ್ನು ಅಧ್ಯಯನಕಾರರು ವ್ಯಕ್ತಪಡಿಸಿದ್ದಾರೆ.

ಥೇಕೆಡತ್ ಕೆ.ಕೆ. (೧೯೯೮) ಅವರು "ಶತಮಾನದ ಅಂಚಿನಲ್ಲಿ ಶಿಕ್ಷಣ" ಎಂಬ ಗ್ರಂಥದಲ್ಲಿ ಶಾಲೆಗೆ ಹೋಗುವ ಮಕ್ಕಳ ಕುಟುಂಬದ ಆರ್ಥಿಕ ಸ್ಥಿತಿಗೂ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆಗೂ ಅನ್ಯೋನ್ಯವಾದ ಸಂಬಂಧವಿರುವುದನ್ನು ಗುರುತಿಸಿದ್ದಾರೆ. ಮುಂಬೈನ ಮಹಾನಗರ ಪಾಲಿಕೆಯು ಶಾಲೆಗೆ ಹೋಗುವ ಮಕ್ಕಳ ಅಪೌಷ್ಟಿಕತೆ ಮತ್ತು ಅದಕ್ಕೆ ಸಂಬಂಧಿಸಿದ ಕಾಯಿಲೆಗಳ ಕೆಲವು ಮಾಹಿತಿಗಳನ್ನು ಒದಗಿಸಿರುವುದನ್ನು ಕೂಡ ಥೇಕ್‌ಡತ್‌ರವರು ವಿವರಿಸಿದ್ದಾರೆ. ಪ್ರಾಥಮಿಕ ಶಾಲೆಗೆ ಹೋಗುವ ೩.೦೫ಲಕ್ಷ ಮಕ್ಕಳನ್ನು ಪರೀಕ್ಷಿಸಿದ ವೈದ್ಯರು ಅಪೌಷ್ಟಿಕತೆ ಮತ್ತು ನಿರ್ಲಕ್ಷತೆಯಿಂದ ಸುಮಾರು ಮಕ್ಕಳು ಅನಾರೋಗ್ಯಕ್ಕೆ ಒಳಗಾಗಿದ್ದಾರೆ. ಇದರಲ್ಲಿ ಶೇಕಡ ೨೬.೭೬ರಷ್ಟು ಮಕ್ಕಳಿಗೆ ಅನ್ನಾಂಗದ ಕೊರತೆ ಇದ್ದರೆ, ಶೇಕಡ ೫ರಷ್ಟು ಮಕ್ಕಳು ರಕ್ತಹೀನತೆಯಿಂದ ಬಳಲುತ್ತಿದ್ದು, ಶೇಕಡ ೫೯ರಷ್ಟು ಮಕ್ಕಳಲ್ಲಿ ಹಲ್ಲಿನ ದೋಷ ಕಂಡುಬಂದಿದೆ. ಏಪ್ರಿಲ್ ೧೯೯೬ ರಿಂದ ಮಾರ್ಚ್ ೧೯೯೭ರ ನಡುವಿನ ಅವಧಿಯಲ್ಲಿ 'ಬೃಹತ್ ಮುಂಬೈ ಮುನಿಸಿಪಲ್ ಕಾರ್ಪೋರೇಷನ್'ನ ವೈದ್ಯಕೀಯ ಅಧಿಕಾರಿಗಳಿಂದ ಪರೀಕ್ಷಿಸಲ್ಪಟ್ಟ ಮಕ್ಕಳ ಆರೋಗ್ಯ, ಬಡತನ ಮತ್ತು ಮಕ್ಕಳ ಶಾಲಾ ಭಾಗವಹಿಸುವಿಕೆಗಳ ನಡುವೆ ಇರುವ ಸಹ-ಸಂಬಂಧವನ್ನು ಅಧ್ಯಯನಕಾರರು ವಿವರವಾಗಿ ತಿಳಿಸಿದ್ದಾರೆ.

ಅಂಜು. ಜಿ.,(೨೦೦೨) ಅವರು "ಭಾರತದಲ್ಲಿ ಲಿಂಗ-ಸಮಾನತೆ" ಎನ್ನುವ ಲೇಖನದಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ಲಿಂಗ-ಸಮಾನತೆ ತರುವ ಉದ್ದೇಶದಿಂದ ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡರೂ ಸಹ ಅದು ವಿಫಲವಾಗಿದೆ. ಈ ಕಾರ್ಯಕ್ರಮಗಳು ಅಥವಾ ಯೋಜನೆಗಳು ಸಾಧಿಸಬೇಕೆಂದು ಇಟ್ಟುಕೊಂಡಂತಹ ಗುರಿಯನ್ನು ತಲುಪಿಲ್ಲ. ಇಂತಹ ಯೋಜನೆಗಳು ವಿನ್ಯಾಸ ಹಾಗೂ ಅನುಷ್ಠಾನದಲ್ಲಿ ಫಲಾನುಭವಿಗಳ ಕೊರತೆಯಿಂದ ಯಶಸ್ವಿಗೊಳಿಸುವಲ್ಲಿ ವಿಫಲವಾಗಿವೆ. ಇನ್ನು ಅನೇಕ ಯೋಜನೆಗಳು ಅನುಷ್ಠಾನದಲ್ಲಿನ ಲೋಪದೋಷಗಳಿಂದ ಯಶಸ್ವಿಯಾಗಿಲ್ಲ ಎಂದು ತಿಳಿಸಿದ್ದಾರೆ. ಇದಕ್ಕೆ ಹೊಸ ಹೊಸ ಯೋಜನೆಗಳನ್ನು ರೂಪಿಸಿ, ಅನುಷ್ಠಾನಕ್ಕೆ ತರುವ ಜೊತೆಯಲ್ಲಿಯೇ ಮಹಿಳೆಯರ/ಹೆಣ್ಣುಮಕ್ಕಳ ಶಾಲಾ ಭಾಗವಹಿಸುವಿಕೆಯನ್ನು ಹೆಚ್ಚು ಮಾಡಬೇಕು. ಜೊತೆಗೆ ಶಾಲಾ ಹಂತದಲ್ಲಿಯೇ ಲಿಂಗ ಅಸಮಾನತೆಯಿಂದ ಉಂಟಾಗುವ ಶೋಷಣೆಯ ವಿವಿಧ ಮುಖಗಳನ್ನು ತಿಳಿಸಬೇಕು. ಆ ಮೂಲಕ ಮಹಿಳಾಭಿವೃದ್ಧಿಗಾಗಿ ರೂಪಿಸಿ, ಆಚರಣೆಗೆ ತರುತ್ತಿರುವ ಕಾರ್ಯಕ್ರಮಗಳನ್ನು ಬಳಸಿಕೊಳ್ಳುವ ನಿಟ್ಟಿನಲ್ಲಿ ಮಹಿಳೆಯರನ್ನು ಜಾಗೃತಿ ಮೂಡಿಸುವ ಅಗತ್ಯವನ್ನು ಒತ್ತಿ ಹೇಳಿದ್ದಾರೆ.

ಪ್ರೋಬ್ ತಂಡ (೧೯೯೮) ಸೆಪ್ಟೆಂಬರ್ ೧೯೯೬ರಿಂದ ಡಿಸೆಂಬರ್ ೧೯೯೬ರವರೆಗೆ ನಡೆಸಿದ ಕ್ಷೇತ್ರ ಕಾರ್ಯ ಆಧಾರಿತ ಅಧ್ಯಯನವಾಗಿದೆ. ಈ ಸಮೀಕ್ಷೆಯಲ್ಲಿ ಬಿಹಾರ್, ಮಧ್ಯಪ್ರದೇಶ, ರಾಜಸ್ತಾನ, ಉತ್ತರ ಪ್ರದೇಶ ಹಾಗೂ ಹಿಮಾಚಲ ಪ್ರದೇಶಗಳಿಂದ ರ‍್ಯಾಂಡಮ್ ಆಗಿ ಆಯ್ಕೆ ಮಾಡಿಕೊಂಡ ೨೩೪ ಹಳ್ಳಿಗಳ ಶಾಲಾ ಸೌಲಭ್ಯ, ೧೩೭೬ ಕುಟುಂಬಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ಐದು ರಾಜ್ಯಗಳು ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇಕಡ ೪೦ರಷ್ಟನ್ನು ಹೊಂದಿದೆ. ಮಧ್ಯದಲ್ಲಿ ಶಾಲೆಬಿಟ್ಟ ಅಥವಾ ಶಾಲೆಯಿಂದ ಹೊರಗುಳಿದಿರುವ ಒಟ್ಟು ಮಕ್ಕಳ ಸಂಖ್ಯೆಯಲ್ಲಿ ಶೇಕಡ ೫೦ಕ್ಕೂ ಹೆಚ್ಚಿನ ಮಕ್ಕಳು ಈ ರಾಜ್ಯಗಳಲ್ಲಿ ಇದ್ದಾರೆ. ಹಿಮಾಚಲಪ್ರದೇಶವನ್ನು ಹೊರತುಪಡಿಸಿ ಇತರೆ ರಾಜ್ಯಗಳು ಶಿಕ್ಷಣ ಕ್ಷೇತ್ರದಲ್ಲಿ ಕನಿಷ್ಟ ಮಟ್ಟದ ಸಾಧನೆಯನ್ನು ಮಾಡಿಲ್ಲ.

ಮೊದಲನೆಯ ಭಾಗದಲ್ಲಿ ಪ್ರಾಥಮಿಕ ಶಿಕ್ಷಣದ ಅವಶ್ಯಕತೆಯನ್ನು ಕುರಿತು ಚರ್ಚೆ ಮಾಡಲಾಗಿದೆ. ಅಲ್ಲದೇ ರಾಷ್ಟ್ರದ ವಿವಿಧ ರಾಜ್ಯಗಳಲ್ಲಿನ ಸಾಕ್ಷರತೆಯ ವ್ಯತ್ಯಾಸಗಳನ್ನು ಕುರಿತು ಚರ್ಚೆಮಾಡಲಾಗಿದೆ. ಸಾಕ್ಷರತೆ ಮತ್ತು ಶಿಕ್ಷಣವು ರಾಷ್ಟ್ರದಲ್ಲಿ ನಿಧಾನಗತಿಯ ಪ್ರಗತಿಯನ್ನು ಹೊಂದಿದೆ ಎಂಬ ಅಭಿಪ್ರಾಯಕ್ಕೆ ಈ ಅಧ್ಯಯನ ಬಂದಿದೆ. ಎರಡನೇ ಭಾಗದಲ್ಲಿ ಶಿಕ್ಷಣದ ಕುರಿತು ಜನರು ಹೊಂದಿರುವ ನಂಬಿಕೆ ಮತ್ತು ವಾಸ್ತವಾಂಶಗಳನ್ನು ವಿಶ್ಲೇಷಿಸಿದ್ದಾರೆ. ಅವೆಂದರೆ ಎಷ್ಟರ ಮಟ್ಟಿಗೆ ಶಾಲೆಗಳು ಎಲ್ಲರಿಗೂ ದೊರಕುತ್ತಿವೆ. ಶಾಲೆಗಳಲ್ಲಿ ಸಮಾನತೆ ಇದೆಯೇ, ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳು ದುಡಿಯುತ್ತಿದ್ದಾರೆ, ಪ್ರಾಥಮಿಕ ಶಿಕ್ಷಣ ಉಚಿತ ಇನ್ನೂ ಮುಂತಾದ ಅಂಶಗಳನ್ನು ವಿವರಿಸಿದ್ದಾರೆ.

ಪ್ರೋಬ್ ಅಧ್ಯಯನ ತಂಡವು ಶಾಲೆ ದೊರೆಯುವಿಕೆಯು ಕೇವಲ ಬೌದ್ಧಿಕ ಅಂತರದಿಂದ ಪರಿಗಣಿಸದೇ, ಸಾಮಾಜಿಕ ಅಂತರವನ್ನೂ ಕೂಡ ಪರಿಗಣಿಸಬೇಕು. ಹೀಗೆ ಪರಿಗಣಿಸುವಾಗ ಸ್ಥಳೀಯ ಶಾಲೆಗೆ ಮಕ್ಕಳು ಹೋಗುವಾಗ ಇರಬಹುದಾದ ಅನೇಕ ಅಡೆತಡೆಗಳನ್ನು ಪರಿಗಣನೆ ಮಾಡಬೇಕಾಗುತ್ತದೆ. ಅನೇಕ ಪ್ರದೇಶಗಳಲ್ಲಿ ಹಳ್ಳಿಗಳು ಬಹಳ ಮಟ್ಟಿಗೆ ಬೇರೆ ಬೇರೆ ಜನವಸತಿ ನೆಲೆಗಳಾಗಿ ವಿಂಗಡಣೆಯಾಗಿರುತ್ತವೆ. (ಇದು ಜಾತಿ ಆಧಾರಿತವಾಗಿಯೂ ಇರಬಹುದು.) ಮತ್ತು ಒಂದು ಜನವಸತಿ ನೆಲೆಯಲ್ಲಿನ ಮಕ್ಕಳು ಮತ್ತೊಂದು ಜನವಸತಿಯಲ್ಲಿರುವ ಶಾಲೆಗೆ ಜಾತಿ ಸಂಘರ್ಷಗಳಿಂದಾಗಿ ಹೋಗಲು ಸಾಧ್ಯವಾಗದಿರಬಹುದು. ಸರಕಾರಿ ಅಂಕಿ-ಅಂಶಗಳು, ಶೈಕ್ಷಣಿಕ ಸಮೀಕ್ಷೆಗಳು (ರಾಷ್ಟ್ರ ಮತ್ತು ರಾಜ್ಯಮಟ್ಟದ) ಶೈಕ್ಷಣಿಕ ಅಧ್ಯಯನಗಳಿಂದ ತಿಳಿದುಬರುವ ಅಂಶವೆಂದರೆ ಗ್ರಾಮೀಣ ಪ್ರದೇಶದ ಹೆಚ್ಚಿನ ಕುಟುಂಬಗಳಿಗೆ ಅನುಕೂಲವಾದ ಅಂತರದಲ್ಲಿ ಪ್ರಾಥಮಿಕ ಶಾಲೆಗಳು ದೊರಕುತ್ತಿವೆ ಎಂಬುದು. ಆದರೆ ರಾಷ್ಟ್ರಮಟ್ಟದಲ್ಲಿ ಶೇಕಡ ೭೧ರಷ್ಟು ಗ್ರಾಮಗಳಲ್ಲಿ ಮಾಧ್ಯಮಿಕ ಶಾಲೆಯು ಇಲ್ಲವಾಗಿದೆ. ಇದು ಹಿಂದಿನ ಅತ್ಯಂತ ಗಂಭೀರವಾದ ಸಮಸ್ಯೆ. ಎಂದರೆ ಗ್ರಾಮೀಣ ಪ್ರದೇಶದ ಪೋಷಕರು ವಿಶೇಷವಾಗಿ ಹೆಣ್ಣು ಮಕ್ಕಳನ್ನು ಪಕ್ಕದ ಅಥವಾ ಬೇರೊಂದು ಗ್ರಾಮಕ್ಕೆ ಶಾಲೆಗೆ ಕಳುಹಿಸಲು ಹೆಚ್ಚಿನ ಆಸಕ್ತಿಯನ್ನು ತೋರುವುದಿಲ್ಲ. ಹೀಗಾಗಿ ಐದು, ಆರು, ಏಳನೇ ತರಗತಿಯ ನಂತರ ಹೆಚ್ಚಿನ ಹೆಣ್ಣುಮಕ್ಕಳು ಶಾಲೆಗೆ ಹೋಗಬೇಕೆಂಬ

ಆಸಕ್ತಿಯನ್ನು ಹೊಂದಿದ್ದರು ಪೋಷಕರಿಗೆ ವಿರುದ್ಧವಾಗಿ ಶಾಲೆಗೆ ಹೋಗಲಾರದ ಸ್ಥಿತಿ ಇದೆ ಎಂಬುದನ್ನು ಈ ಅಧ್ಯಯನ ತಂಡ ಗುರುತಿಸಿದೆ.

ಒಟ್ಟಾರೆ, ಪ್ರೋಬ್ ತಂಡದ ಅಧ್ಯಯನವು ಶಾಲೆ ಪರಿಸರ, ಗ್ರಾಮದ ಶೈಕ್ಷಣಿಕ ಪರಿಸರದಲ್ಲಿ ಪ್ರಮುಖವೆನಿಸಿದ ಶಿಕ್ಷಣಕ್ಕೆ ಪೂರಕವಾದ ಪರಿಸ್ಥಿತಿ ಮತ್ತು ಅಂತಹ ಪರಿಸ್ಥಿತಿಯನ್ನು ಹುಟ್ಟು ಹಾಕುವಲ್ಲಿ ಸಂಪೂರ್ಣವಾಗಿ ವಿಫಲವಾಗಿರುವ ಅಂಶಗಳನ್ನು ಕುರಿತು ಅಧ್ಯಯನ ಮಾಡಿದೆ. ಶಿಕ್ಷಣಕ್ಕೆ ಪೂರಕವಾಗಿಲ್ಲದ ಪರಿಸರವು ಮಕ್ಕಳ ಬೌದ್ಧಿಕ ಬೆಳವಣಿಗೆಯನ್ನು ಉಸಿರುಗಟ್ಟಿಸುವಂತೆ ಮಾಡುತ್ತದೆ. ಇಂತಹ ಸ್ವರೂಪವನ್ನು ಹೊಂದಿದ ಶಾಲಾ ಪರಿಸರವು ಮಕ್ಕಳ ಶಿಕ್ಷಣದ ಬಗ್ಗೆ ಅನಾಸಕ್ತಿಯನ್ನು ಹುಟ್ಟಿಸುತ್ತವೆ. ಅಲ್ಲದೇ ಶಿಕ್ಷಕರಲ್ಲಿ ಗುಣಾತ್ಮಕ ಬೋಧನಾ ಶಕ್ತಿಯನ್ನು ಕುಂದಿಸುತ್ತದೆ ಎಂದು ಗುರುತಿಸಿದೆ. ಈ ಅಧ್ಯಯನವು ಪ್ರಾಥಮಿಕ ಶಿಕ್ಷಣ ಕುರಿತು ನಡೆಸಿದ ಇತ್ತೀಚಿನ ಅಧ್ಯಯನಗಳಲ್ಲಿ ಅತ್ಯಂತ ಪ್ರಮುಖವಾಗಿದೆ.

ಕುರುಹುರಿ ವೆಂಕಟ ಜಗನ್ನಾಥ್‌ರಾವ್ (೨೦೦೨) ಅವರು ಆಂಧ್ರ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಅಪ್ರಕಟಿತ ಪಿಎಚ್.ಡಿ., ಮಹಾಪ್ರಬಂಧ "ಎನ್‌ರೋಲ್‌ಮೆಂಟ್ ಅಂಡ್ ಡ್ರಾಪೌಟ್ ಇನ್ ಪ್ರೈಮರಿ ಎಜ್ಯುಕೇಷನ್ ಆಫ್ ಟ್ರೈಬಲ್ಸ್"(ಎ ಕಂಪ್ಯಾರಿಟಿವ್ ಸ್ಟಡಿ ಆಫ್ ಸಬ್ ಪ್ಲ್ಯಾನ್ ಅಂಡ್ ನಾನ್ ಸಬ್‌ಪ್ಲಾನ್ ಏರಿಯಾಸ್ ಇನ್ ವಿಜಯನಗರ ಡಿಸ್ಟ್ರಿಕ್ಟ್) ಈ ಪ್ರಬಂಧದಲ್ಲಿ ಬುಡಕಟ್ಟು ಸಮುದಾಯದಲ್ಲಿ ಮಕ್ಕಳು ಶಾಲೆಗೆ ದಾಖಲಾಗುತ್ತಿಲ್ಲ. ಮಕ್ಕಳು ಶಾಲೆಗೆ ದಾಖಲಾದರೂ ಸಹ ಮಧ್ಯದಲ್ಲಿ ಶಾಲೆ ಬಿಡುವವರಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಹೆಚ್ಚಾಗಿದೆ. ಬುಡಕಟ್ಟು ಸಮುದಾಯದ ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ(ಅಭಿವೃದ್ಧಿ)ಸರ್ಕಾರವು ಪಂಚವಾರ್ಷಿಕ ಯೋಜನೆಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತರಲಾಯಿತು. ಉದಾಹರಣೆಗೆ ಉಚಿತ ಶಿಕ್ಷಣ, ಸ್ಥಳೀಯವಾಗಿ ವಸತಿ ಶಾಲೆಗಳನ್ನು ತೆರೆಯುವುದು ಇತ್ಯಾದಿಗಳು. ಆದರೂ ಸಹ ಶಾಲಾ ದಾಖಲಾತಿ ಮತ್ತು ಹಾಜರಾತಿಯಲ್ಲಿ ಹೆಣ್ಣುಮಕ್ಕಳ ಶಿಕ್ಷಣದ ಪ್ರಮಾಣ ಗಂಡು ಮಕ್ಕಳ ಶಿಕ್ಷಣಕ್ಕೆ ಹೋಲಿಸಿದರೆ ಇಳಿಮುಖವಾಗಿದೆ. ಇದಕ್ಕೆ ಕಾರಣ ಅವರ ಅನಕ್ಷರತೆ, ಬಡತನ, ಮತ್ತು ಸಾಮಾಜಿಕ ಪರಿಸ್ಥಿತಿ ಕಾರಣವಾಗಿದೆ ಎಂದು ವಾದಿಸಿದ್ದಾರೆ.

ಇಂದಿರಾ ಆರ್., (೨೦೦೨) ಅವರು 'ಮಹಿಳೆ, ಸಮಾಜ ಮತ್ತು ಸಂಸ್ಕೃತಿ" ಎಂಬ ಗ್ರಂಥದಲ್ಲಿ ಸಂವಿಧಾನ ಸರ್ವರಿಗೂ ಸಮಾನತೆಯನ್ನು ನೀಡಿ ಲಿಂಗ ಭೇದವನ್ನು ನಿವಾರಿಸಿದರೂ ವಾಸ್ತವವಾಗಿ ಅಂದುಕೊಂಡಷ್ಟು ಪ್ರಗತಿಯನ್ನು ಸಾಧಿಸಲಾಗಿಲ್ಲ ಎಂಬುದನ್ನು ಗುರುತಿಸಿದ್ದಾರೆ. ಮುಂದುವರಿದು, ಕಡ್ಡಾಯ ಮತ್ತು ಉಚಿತ ಪ್ರಾಥಮಿಕ ಶಿಕ್ಷಣ ಎನ್ನುವುದು ಘೋಷಣೆಯ ಮಟ್ಟದಲ್ಲಿಯೇ ಉಳಿದುಕೊಂಡಿರುವುದು ಶೋಚನೀಯ, ಎಂಬ ಆತಂಕ ವ್ಯಕ್ತಪಡಿಸಿದ್ದಾರೆ. ಈ ಶೋಚನೀಯ ಸ್ಥಿತಿಗೆ ಸಾಮಾಜಿಕ ಸಂರಚನೆಯೊಳಗಿನ ಆಚರಣೆಗಳೇ ಕಾರಣವಾಗಿದ್ದು, ಇವುಗಳನ್ನು ಸ್ಥಳೀಯ ಮಟ್ಟದಲ್ಲಿ ಅರ್ಥಮಾಡಿಕೊಂಡು ಜಾಗೃತಿ ಮೂಡಿಸುವಲ್ಲಿ ಬಹುತೇಕ ಕಾರ್ಯಕ್ರಮಗಳು ವಿಫಲವಾಗಿವೆ. ಹೀಗೆ ವಿಫಲವಾಗುವಾಗ ಕಾರ್ಯಕ್ರಮಗಳನ್ನು ರೂಪಿಸುವ ಯೋಜನಾಕಾರರು ಹೊಂದಿರುವಂತಹ ಟಾಪ್

ಡೌನ್ ಅಪ್ರೋಚ್ ಮನೋಪ್ರವೃತ್ತಿಯೂ ಕಾರಣವಾಗುತ್ತದೆ ಎಂಬ ನಿರ್ದಿಷ್ಟ ಅಂಶಗಳನ್ನು ಲೇಖಕರು ಸ್ಪಷ್ಟಪಡಿಸುತ್ತಾರೆ. ಮತ್ತೆ ಮುಂದುವರಿದು ಸಾಕ್ಷರತೆ ಮತ್ತು ಶಾಲಾ ದಾಖಲಾತಿಗಳಲ್ಲಿ ಹೆಚ್ಚಳವಾಗಿರುವುದು ನಿಜವಾದರೂ ದೇಶದ ವಿವಿಧ ಭಾಗಗಳಲ್ಲಿ ಸಮಾನವಾಗಿ ಹಂಚಿಕೆಯಾಗಿಲ್ಲ. ಅಷ್ಟೇ ಅಲ್ಲದೆ ಗ್ರಾಮ-ನಗರಗಳ ನಡುವೆ, ಜಾತಿ-ವರ್ಗ, ಲಿಂಗವಾರುಗಳ ಮಧ್ಯ ದಲ್ಲಿ ಶೈಕ್ಷಣಿಕ ಅಭಿವೃದ್ಧಿ ಹೊಂದಿದ ಮತ್ತು ಹೊಂದದೇ ಇರುವವರ ಅಂತರ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ ಎಂಬ ತೀವ್ರವಾದ ಆತಂಕ ಆರ್ ಇಂದಿರಾ ಅವರದ್ದಾಗಿದೆ. ಇದನ್ನು ಸ್ಥಳೀಯ ಸಾಂಸ್ಕೃತಿಕ ದೃಷ್ಟಿಯಿಂದ ನೋಡಿದರೆ ಈ ವ್ಯತ್ಯಾಸವು ಮತ್ತಷ್ಟು ಎದ್ದುಕಾಣುತ್ತದೆ ಎಂಬ ಲೇಖಕರ ಮಾತಿನಲ್ಲಿ ಅವರಿಗಿರುವ ಸಾಮಾಜಿಕ ಕಳಕಳಿಯು ಕಂಡುಬರುತ್ತದೆ.

ಸಾಕ್ಷರತೆ ಹಾಗೂ ಶಾಲಾ ದಾಖಲಾತಿಗಳ ಪ್ರಮಾಣದಲ್ಲಿ ಹೆಚ್ಚಳ ಉಂಟಾಗಿರುವುದು ನಿಜ. ಆದರೆ ಈ ಹೆಚ್ಚಳ ಭಾರತದ ವಿವಿಧ ಭಾಗಗಳಲ್ಲಿ ಸಮಾನವಾಗಿ ಹಂಚಿಕೆಯಾಗಿಲ್ಲ. ಕೇರಳ ರಾಜ್ಯದಲ್ಲಿ ಅತಿ ಹೆಚ್ಚಿನ (ಶೇಕಡ ೮೬.೯೩) ಮಹಿಳಾ ಸಾಕ್ಷರತೆಯಿದ್ದರೆ, ರಾಜಾಸ್ಥಾನದಲ್ಲಿ ಅತ್ಯಂತ ಕಡಿಮೆ (ಶೇಕಡ ೨೦.೪೪) ಮಟ್ಟದ ಮಹಿಳಾ ಸಾಕ್ಷರತೆಯನ್ನು ನಾವು ಕಾಣಬಹುದು. ದೇಶದಲ್ಲಿಯೇ ಮಹಿಳಾ ಜನಸಂಖ್ಯೆಯನ್ನು ಅಧಿಕ ಸಂಖ್ಯೆಯಲ್ಲಿ ಹೊಂದಿರುವ ರಾಜ್ಯಗಳಾದ ಉತ್ತರ ಪ್ರದೇಶ, ಬಿಹಾರ, ರಾಜಾಸ್ಥಾನ ಮುಂತಾದ ರಾಜ್ಯಗಳಲ್ಲೇ ಮಹಿಳಾ ಸಾಕ್ಷರತೆಯ ಪ್ರಮಾಣವೂ ಅತ್ಯಂತ ಕೆಳಮಟ್ಟದಲ್ಲಿರುವುದು ವಿಷಾದನೀಯ ಎಂದಿದ್ದಾರೆ. ಸ್ತ್ರೀ ಸಾಕ್ಷರತೆಯ ಪ್ರಮಾಣದಲ್ಲಿ ರಾಜ್ಯವಾರು ವ್ಯತ್ಯಾಸಗಳಿರುವುದಷ್ಟೇ ಅಲ್ಲ, ಗ್ರಾಮ-ನಗರಗಳ ನಡುವೆಯ ಅಂತರ ವರ್ಗ, ಜಾತಿ, ಧರ್ಮ, ಕೌಟುಂಬಿಕ ರಚನೆಯ ಹಿನ್ನಲೆಯಲ್ಲಿ ಶೈಕ್ಷಣಿಕ ಅಭಿವೃದ್ಧಿ ಹೊಂದಿರುವ ಮತ್ತು ಹೊಂದದೇ ಇರುವವರ ಅಂತರ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ ಎನ್ನುವ ಆತಂಕವನ್ನು ಆರ್. ಇಂದಿರಾ ಅವರು ವ್ಯಕ್ತಪಡಿಸಿದ್ದಾರೆ. ಸ್ಥಳೀಯ ಸಾಂಸ್ಕೃತಿಕ ದೃಷ್ಟಿಯಿಂದ ನೋಡಿದರೆ ಈ ವ್ಯತ್ಯಾಸ ಮತ್ತಷ್ಟು ಸ್ಪಷ್ಟವಾಗಿ ಎದ್ದುಕಾಣುತ್ತದೆ

ಚಂದ್ರಶೇಖರ್ ಟಿ.ಆರ್., (೨೦೦೩) ಅವರು "ಕರ್ನಾಟಕ ಅಭಿವೃದ್ಧಿಯ ಸಾಮಾಜಿಕ ನೆಲೆಗಳು" ಎಂಬ ಕೃತಿಯಲ್ಲಿ ಅಭಿವೃದ್ಧಿಯನ್ನು ಸಾಮಾಜಿಕ ನೆಲೆಯಲ್ಲಿ ವಿವರಿಸಲು ಪ್ರಯತ್ನ ಮಾಡಿದ್ದಾರೆ. ಅಭಿವೃದ್ಧಿಗೆ ಸಂಬಂಧಿಸಿದಂತೆ ಕರ್ನಾಟಕದ ಸಾಧನೆಗಳನ್ನು ವಿವರಿಸುತ್ತಾ 'ಹಿಂದುಳಿದ ಜಿಲ್ಲೆಗಳಲ್ಲಿ ಶಿಕ್ಷಣ ಕಾಯಕಲ್ಪ' ಎಂಬ ಅಧ್ಯಾಯದಲ್ಲಿ ಬೀದರ್, ಬಿಜಾಪುರ, ಗುಲ್ಬರ್ಗಾ, ಬಾಗಲಕೋಟೆ, ಬಳ್ಳಾರಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳನ್ನು ಅತ್ಯಂತ ಹಿಂದುಳಿದ ಜಿಲ್ಲೆಗಳೆಂದು ಗುರುತಿಸಿದ್ದಾರೆ. ಈ ಏಳು ಜಿಲ್ಲೆಗಳ ಸಾಕ್ಷರತೆಯ ತುಲನಾತ್ಮಕ ಸ್ಥಾನಮಾನವನ್ನು ಸಾಕ್ಷರತೆಯ ನೆಲೆಯಿಂದ ನೋಡಿದಾಗ ಉಳಿದ ಜಿಲ್ಲೆಗಳ ಸ್ಥಾನಮಾನಕ್ಕಿಂತ ಕೆಳಮಟ್ಟದಲ್ಲಿರುವುದನ್ನು ಸ್ಪಷ್ಟಪಡಿಸಿದ್ದಾರೆ. ಶಾಲೆಗೆ ಸೇರದ ಮಕ್ಕಳ ಪ್ರಮಾಣದ ಪ್ರಾದೇಶಿಕ ಸ್ವರೂಪ ತುಂಬಾ ಕುತೂಹಲಕಾರಿಯಾಗಿದೆ ಎಂದಿರುವ ಲೇಖಕರು ರಾಜ್ಯದ ೦೬-೧೪ ವಯೋಮಾನದ ಒಟ್ಟು ಮಕ್ಕಳಲ್ಲಿ ಈ ಏಳು ಜಿಲ್ಲೆಗಳ ಪಾಲು ಶೇಕಡ ೨೮.೯ರಷ್ಟಾಗಿದೆ. ಆದರೆ ರಾಜ್ಯದಲ್ಲಿ ಶಾಲೆಗೆ ಸೇರದ ೦೬-೧೪ ವಯೋಮಾನದ ಒಟ್ಟು ಮಕ್ಕಳಲ್ಲಿ

ಹಿಂದುಳಿದ ಈ ಏಳು ಜಿಲ್ಲೆಗಳ ಪಾಲು ಶೇಕಡ ೫೫.೬೭ರಷ್ಟಾಗಿದೆ. ಅಂದರೆ ರಾಜ್ಯದಲ್ಲಿನ ಶಾಲೆಗೆ ಸೇರದ ಒಟ್ಟು ಮಕ್ಕಳಲ್ಲಿ ಅರ್ಧಕ್ಕಿಂತ ಹೆಚ್ಚಿನ ಮಕ್ಕಳು ಹಿಂದುಳಿದ ಈ ಏಳು ಜಿಲ್ಲೆಗಳಲ್ಲಿಯೇ ಶೇಖರಣೆಯಾದಂತಿದೆ ಎಂದಿದ್ದಾರೆ. ಇದಕ್ಕೆ ಪೂರಕವಾದಂತೆ, ಯಾವ ಪ್ರದೇಶದಲ್ಲಿ ೦೬-೧೪ ವಯೋಮಾನದ ಮಕ್ಕಳು ಶೇಕಡ ೧೦ಕ್ಕಿಂತ ಹೆಚ್ಚಾಗಿರುತ್ತಾರೋ ಆ ಪ್ರದೇಶದಲ್ಲಿ ಜನಸಂಖ್ಯೆಯ ಬೆಳವಣಿಗೆ ಮತ್ತು ಒತ್ತಡಗಳು ಅಧಿಕವಾಗಿರುತ್ತವೆ ಎಂಬ ಅಭಿಪ್ರಾಯವನ್ನು ಲೇಖಕರು ವ್ಯಕ್ತಪಡಿಸಿದ್ದಾರೆ.

ನಿರಂಜನಾರಾಧ್ಯ ವಿ.ಪಿ., (೨೦೦೪) ಇವರು "ಶಾಲೆಗಳು ರಾಜಕೀಯ ಪಕ್ಷಗಳ ಶಾಖಾ ಕಛೇರಿಗಳಾಗಬೇಕೆ?" ಎಂಬ ಲೇಖನದಲ್ಲಿ ಶಿಕ್ಷಣವು ಮಾನವ ಹಕ್ಕು, ಇದನ್ನು ಯಾರು ಕಿತ್ತುಕೊಳ್ಳಲು ಸಾಧ್ಯವಿಲ್ಲ ಎಂಬ ಸದೃಢವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮುಂದುವರಿದು ಲೇಖಕರು ಶಾಲೆಗಳಲ್ಲಿ ಪಕ್ಷ ರಾಜಕೀಯವನ್ನು ಹುಟ್ಟು ಹಾಕುವ ಮೂಲಕವಾಗಿ ಶಿಕ್ಷಣದ ಸಾರ್ವತ್ರೀಕರಣದ ಪ್ರಕ್ರಿಯೆಯನ್ನು ಮೊಟಕುಗೊಳಿಸಿ, ಪ್ರಜಾಪ್ರಭುತ್ವಕ್ಕೆ ಒಂದು ರೀತಿಯಾಗಿ ತಿಲಾಂಜಲಿಯನ್ನು ಇಡಲಾಗುತ್ತಿದೆ ಎಂಬುದಾಗಿ ಖಾರವಾಗಿ ನುಡಿದಿದ್ದಾರೆ. ಇದರಿಂದ ಸರ್ವಾಧಿಕಾರಿ ವ್ಯವಸ್ಥೆಗೆ ಬುನಾದಿ ಹಾಕುತ್ತಾ, ತನ್ನದೇ ಆದ ಓಟ್ ಬ್ಯಾಂಕ್ ಅನ್ನು ಸೃಷ್ಟಿಸಿಕೊಳ್ಳುವ ಹುನ್ನಾರ ನಡೆದಿದೆ ಎಂಬ ಕ್ರಾಂತಿಕಾರಕ ಹೇಳಿಕೆ ಲೇಖಕರದ್ದಾಗಿದೆ. ಅಷ್ಟೇ ಅಲ್ಲದೆ ಪ್ರಜಾಸತ್ತೆಯ ಉಳಿವಿಗಾಗಿ ನಾಗರಿಕ ಸಮಾಜ ಇದನ್ನು ಒಕ್ಕೂರಲಿನಿಂದ ಖಂಡಿಸಬೇಕಾದ ಮತ್ತು ಶಾಲೆಗಳನ್ನು ಪಕ್ಷ ರಾಜಕೀಯದಿಂದ ದೂರ ಉಳಿಸಬೇಕಾದ ಅವಶ್ಯಕತೆ ಹೆಚ್ಚಾಗಿದೆ. ಈ ಹಿನ್ನೆಲೆಯ ಹೋರಾಟಗಳು ನಡೆಯುತ್ತಾ ಇವೆ. ಅದರಲ್ಲಿ ಎಲ್ಲಾ ಪ್ರಗತಿಪರ ಶಕ್ತಿಗಳ ಬೆಂಬಲ ಮತ್ತು ಸಹಕಾರಗಳು ನಿರ್ಣಾಯಕವಾಗಲಿದೆ ಎಂಬ ಹೋರಾಟದ ಮನೋಭಾವವನ್ನು ಲೇಖಕರು ಹೊಂದಿದ್ದಾರೆ.

ರಾಮಚಂದ್ರನ್, (೧೯೯೬) "ಆನ್ ಕೇರಳ ಡೆವಲಪ್‌ಮೆಂಟ್ ಅಚೀವ್‌ಮೆಂಟ್ಸ್ ಇನ್ ಈೀನ್ ಡ್ರೀಜ್ ಆ್ಯಂಡ್ ಅಮಾರ್ತ್ಯಸೇನ್" (ಎಡಿಟ್ಸ್) ಇಂಡಿಯನ್ ಡೆವಲಪ್‌ಮೆಂಟ್ : 'ಸೆಲೆಕ್ಟ್ ರೀಜನಲ್ ಪ್ರಾಸ್‌ಪೆಕ್ಟೀವ್ಸ್' ಎಂಬ ಕೃತಿಯಲ್ಲಿ ಶಿಕ್ಷಣದ ಮಹತ್ವವನ್ನು ಕುರಿತು ಹೇಳಿದ್ದಾರೆ. ಶೈಕ್ಷಣಿಕ ಪ್ರಗತಿ ಮತ್ತು ಸಾಮಾಜಿಕ ಬದಲಾವಣೆಗಳ ನಡುವೆ ಅನೇಕ ಸಂಬಂಧವಿರುವುದನ್ನು ಇವರು ತಮ್ಮ ಅಧ್ಯಯನದಲ್ಲಿ ಕೇರಳದ ಉದಾಹರಣೆಗಳ ಜೊತೆಗೆ ದೃಢಪಡಿಸಿದ್ದಾರೆ. ವ್ಯಕ್ತಿಯ ಸ್ವ-ಪ್ರತಿಷ್ಠೆ, ಸ್ವ-ರಕ್ಷಣೆಗೆ, ಸಾಕ್ಷರತೆ ಮೂಲ ಸಾಧನ ಎಂದಿದ್ದಾರೆ. ಅಕ್ಷರ ಜ್ಞಾನವು ಸಂಪ್ರದಾಯ ಮತ್ತು ಜಾತಿ-ಧರ್ಮ ಭೇದಗಳ ಸಂಕೋಲೆಗಳಿಂದ ಹೊರಬರಲು ನೆರವಾಗುತ್ತದೆ. ಸಮಾಜದಲ್ಲಿನ ಸಾಂಪ್ರದಾಯಿಕ ನಂಬಿಕೆಗಳನ್ನು ಹೋಗಲಾಡಿಸಬೇಕಾದರೆ ಶಿಕ್ಷಣವು ಅತ್ಯಂತ ಪ್ರಮುಖ ಎಂದು ವಾದಿಸಿದ್ದಾರೆ.

ವಿರೋಬ ಮತ್ತು ಇತರರು, (೨೦೦೫) ಇವರು "ಶಿಕ್ಷಣ ಮತ್ತು ಪ್ರಾದೇಶಿಕ ಅಸಮತೋಲನ" ಎಂಬ ಲೇಖನದಲ್ಲಿ ಶಿಕ್ಷಣವನ್ನು ನಿರ್ಧರಿಸುವ ಅಂಶಗಳಾದ, ಶಿಕ್ಷಣದ ಪ್ರಮಾಣ, ಶಾಲೆಗಳ ಸಂಖ್ಯೆ, ಶಿಕ್ಷಕರ ಸಂಖ್ಯೆ, ಶಾಲೆ ಬಿಟ್ಟ ಮಕ್ಕಳ ಸಂಖ್ಯೆಗಳನ್ನು ಆಧರಿಸಿ ಆಯಾ ಪ್ರದೇಶಕ್ಕನುಗುಣವಾದ

ಅಸಮಾನತೆಯನ್ನು ವಿವರಿಸಿದ್ದಾರೆ. ಇವರ ಪ್ರಕಾರ ಎಲ್ಲಾ ಕ್ಷೇತ್ರಗಳಲ್ಲಿ ಪ್ರಾದೇಶಿಕ ಅಸಮಾನತೆ ಕಂಡುಬರುವಂತೆ ಶಿಕ್ಷಣ ಕ್ಷೇತ್ರದಲ್ಲಿಯೂ ಪ್ರಾದೇಶಿಕ ಅಸಮಾನತೆ ಕಂಡುಬರುತ್ತದೆ. ಸಾಕ್ಷರತೆಯನ್ನು ವಿಭಾಗವಾರು ನೋಡಿದಾಗ ಗುಲ್ಬರ್ಗಾದಲ್ಲಿ ಶೇಕಡ ೫೦.೬೮ರಷ್ಟಿದ್ದರೆ, ಬೆಂಗಳೂರಿನಲ್ಲಿ ಶೇಕಡ ೮೩.೯೧ರಷ್ಟಿರುವುದು ಸಾಕ್ಷರತೆಯ ಪ್ರಾದೇಶಿಕ ಭಿನ್ನತೆಯನ್ನು ತೋರಿಸುತ್ತದೆ. ಇದಕ್ಕೆ ಸಾಮಾಜಿಕ, ಆರ್ಥಿಕ, ನೈಸರ್ಗಿಕ ಮತ್ತು ರಾಜಕೀಯ ಅಂಶಗಳು ಕಾರಣವಾಗಿವೆ ಎಂಬುದನ್ನು ಲೇಖಕರು ಗುರುತಿಸುತ್ತಾರೆ. ಇವುಗಳಲ್ಲಿ ನೈಸರ್ಗಿಕ ಸಂಪನ್ಮೂಲಗಳ ಅಸಮರ್ಪಕ ಹಂಚಿಕೆ, ದೋಷಯುಕ್ತ ಆರ್ಥಿಕ ನೀತಿ, ಅದಕ್ಷ ಆಡಳಿತ, ಬಂಡವಾಳದ ಅಭಾವ, ಜಾತಿಪದ್ಧತಿ, ಆರ್ಥಿಕ ಯೋಜನೆಗಳ ಅಸಮರ್ಪಕ ಅನುಷ್ಠಾನ, ಬಡತನ ಇನ್ನು ಮುಂತಾದವುಗಳನ್ನು ಲೇಖಕರು ಗುರುತಿಸುತ್ತಾರೆ. ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗಾಗಿ ಸರ್ಕಾರ ಮತ್ತು ಸರ್ಕಾರೇತರ ಸಂಘ-ಸಂಸ್ಥೆಗಳು ರೂಪಿಸಿಕೊಂಡ ಯೋಜನೆಗಳು ವಿಫಲವಾಗಲು ಆಡಳಿತ ಯಂತ್ರದ ಕೊರತೆ ಅಥವಾ ರಾಜಕೀಯ ಪ್ರಭಾವಗಳಂತಹ ಹಲವಾರು ಕಾರಣಗಳಿರುವುದನ್ನು ಲೇಖಕರು ಹೇಳಿದ್ದಾರೆ. ಈ ನಿಟ್ಟಿನಲ್ಲಿ ರಾಜ್ಯದಲ್ಲಿ ಸರ್ಕಾರ ಮತ್ತು ಆಡಳಿತ ವರ್ಗಗಳು ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶಗಳತ್ತ ಹೆಚ್ಚಿನ ಗಮನವನ್ನು ನೀಡಬೇಕು. ಇಲ್ಲವಾದರೆ ಶೈಕ್ಷಣಿಕವಾಗಿ ಹಿಂದುಳಿದ ಜಿಲ್ಲೆಯು ಹಿಂದುಳಿಯುತ್ತಲೇ ಹೋಗುತ್ತವೆ. ಶೈಕ್ಷಣಿಕ ಸೌಲಭ್ಯಗಳನ್ನು ಪಡೆದ ಜಿಲ್ಲೆಯು ಹಾಗೆಯೇ ಮುಂದುವರಿಯುತ್ತವೆ. ಅಂತಿಮವಾಗಿ ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸಲು ಸಾಧ್ಯವಿಲ್ಲ ಎಂಬುದಾಗಿ ಲೇಖಕರು ವಾದಿಸುತ್ತಾರೆ.

ಪರಂಜಪೆ.ಎಸ್., (೨೦೦೭) ಅವರ "ಅನ್ ಈವನ್ ಡಿಸ್ಟ್ರಿಬ್ಯೂಷನ್ ಆಫ್ ಎಜ್ಯುಕೇಷನ್ ಇನ್ ಮಹಾರಾಷ್ಟ್ರ : ರೂರಲ್, ಅರ್ಬನ್, ಜೆಂಡರ್ ಅಂಡ್ ಕ್ಯಾಸ್ಟ್ ಇನ್ ಈಕ್ವಾಲಿಟೀಸ್" ಎನ್ನುವ ಲೇಖನದಲ್ಲಿ ಮಹಾರಾಷ್ಟ್ರ ರಾಜ್ಯದ ಶೈಕ್ಷಣಿಕ ಸ್ಥಿತಿ-ಗತಿಯನ್ನು ವಿವರಿಸುತ್ತಾ, ಗ್ರಾಮೀಣ ಭಾಗದಲ್ಲಿ ಸಾಮಾಜಿಕವಾಗಿ ಹಿಂದುಳಿದ ವರ್ಗಗಳಲ್ಲಿ ಶಿಕ್ಷಣದ ವಿತರಣೆಯು ಉತ್ತಮವಾಗಿಲ್ಲ. ಗ್ರಾಮೀಣ ಮತ್ತು ನಗರ ಎರಡೂ ಭಾಗಗಳಲ್ಲಿ ಶಿಕ್ಷಣ ಪ್ರಸಾರದ ಅಸಮಾನತೆ ಮಹಿಳೆಯರಲ್ಲಿ ಪುರುಷರಿಗಿಂತ ಹೆಚ್ಚಾಗಿದೆ. ಗ್ರಾಮೀಣ ಭಾಗದಲ್ಲಿ ಜಾತಿ ಆಧಾರಿತ ಶಿಕ್ಷಣದ ಅಸಮಾನತೆ ಅಧಿಕವಾಗಿದೆ. ಶಿಕ್ಷಣ ಪಡೆದುಕೊಳ್ಳುವಲ್ಲಿ ನಗರದ ಪುರುಷರಲ್ಲಿ ಕಡಿಮೆ ತಾರತಮ್ಯ ಮತ್ತು ಗ್ರಾಮೀಣ ಮಹಿಳೆಯರಲ್ಲಿ ಹೆಚ್ಚಿನ ತಾರತಮ್ಯಗಳು ಕಂಡುಬರುತ್ತವೆ ಎಂಬುದನ್ನು ಈ ಅಧ್ಯಯನ ದೃಢಪಡಿಸಿದೆ.

ನಂಜುಂಡಸ್ವಾಮಿ. ಎಂ., (೨೦೦೭) ಅವರ "ಗ್ರಾಮೀಣ ಪ್ರದೇಶದಲ್ಲಿನ ಪ್ರಾಥಮಿಕ ಶಿಕ್ಷಣದ ಸಮಸ್ಯೆಗಳು" ಎಂಬ ಲೇಖನದಲ್ಲಿ ಸಮಾಜದ ಎಲ್ಲಾ ವರ್ಗದ ಮಕ್ಕಳಿಗೆ ಉಚಿತ, ಕಡ್ಡಾಯ, ಪ್ರಾಥಮಿಕ ಶಿಕ್ಷಣ ಒದಗಿಸುವ ಜವಾಬ್ದಾರಿಯನ್ನು ಸರ್ಕಾರ ಪೂರ್ಣಗೊಳಿಸಬೇಕಾಗಿದೆ. ಗ್ರಾಮೀಣ ಪ್ರದೇಶದ ಶೈಕ್ಷಣಿಕ ಪ್ರಗತಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮನ್ವಯ ಶಿಕ್ಷಣದ ನೀತಿ ರೂಪಿಸಿ, ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಬೇಕು.

ಪ್ರಾಥಮಿಕ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಪಠ್ಯಕ್ರಮ, ಬೋಧನಾ ಕ್ರಮ ಮತ್ತು ಶಿಕ್ಷಣ ಸಾಧನ ಸಲಕರಣೆಗಳನ್ನು ಪೂರೈಸಲು ಸರ್ಕಾರ, ಶಿಕ್ಷಕರು, ಪೋಷಕರು ಇಡೀ ಸಮಾಜವೇ ಶ್ರಮಿಸಬೇಕು. ಮಧ್ಯದಲ್ಲಿಯೇ ಶಾಲೆಯನ್ನು ಬಿಡುವ ಮಕ್ಕಳ ಸಂಖ್ಯೆಯನ್ನು ಕಡಿಮೆಗೊಳಿಸಲು ಸಮುದಾಯ ಸಹಭಾಗಿತ್ವ ಸೂಕ್ತವೆನಿಸುತ್ತದೆ.

ಸುಂದರ ಕೆ, (೨೦೦೬) ಅವರ "ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಶಿಕ್ಷಣ : ಪೋಷಕರು ಎಡವಿರುವುದು ಎಲ್ಲಿ?" ಎಂಬ ಲೇಖನದಲ್ಲಿ ತಮ್ಮ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣ ನೀಡುವಾಗ ಪೋಷಕರು ಎಲ್ಲಿ ಎಡವಿದ್ದಾರೆ ಎಂಬುವುದನ್ನು ಚರ್ಚಿಸಿದ್ದಾರೆ. ವ್ಯಾಪಾರಿ ಘಟಕಗಳಂತೆ ತಲೆ ಎತ್ತಿ ಸ್ಪರ್ಧೆಗೆ ನಿಂತಿರುವ, ಅನೇಕ ಸರ್ಕಾರೇತರ ಶಾಲೆಗಳು ಬಾಹ್ಯ ಆಡಂಬರದ ಮುಂಚೂಣಿಯಲ್ಲಿರುವ ಶಾಲೆ, ಪೋಷಕರು, ಗ್ರಾಮೀಣ ಪ್ರದೇಶದಲ್ಲಿರುವ ದೂರದ ಶಾಲೆಯನ್ನೇ ಆಯ್ಕೆ ಮಾಡುತ್ತಿರುವುದು ತಮ್ಮ ಪ್ರತಿಷ್ಠೆಯ ವಿಚಾರ ಎಂದು ಭಾವಿಸುತ್ತಿದ್ದಾರೆ. ಮನೆಯ ಅಂಗಳದ ಬದಿಯಲ್ಲಿಯೇ ಇರುವ ಸರ್ಕಾರಿ ಶಾಲೆಗಳ ಬಗ್ಗೆ ಗಮನ ಕೊಡದೆ, ಒಂದು ರೀತಿ ಅಸ್ಪೃಶ್ಯತೆಯಿಂದ ನೋಡುವ ಬೆಳವಣಿಗೆ ಅಘಾತಕಾರಿ ಏನಿಸುತ್ತದೆ ಎಂದಿದ್ದಾರೆ. ವಾಸ್ತವಿಕವಾಗಿ ಇಂದಿನ ಸರ್ಕಾರಿ ಶಾಲೆಗಳು, ಗುಣಾತ್ಮಕ ಶಿಕ್ಷಣದ ದೃಷ್ಟಿಯಿಂದ ಎಷ್ಟೊಂದು ಮುಂದುವರಿದಿದೆ ಎಂಬುವುದು ನಮ್ಮ ಸಮಾಜದ ಬಹುತೇಕರಿಗೆ ಇನ್ನೂ ಗೊತ್ತಿಲ್ಲ. ಪರೀಕ್ಷೆಗಾಗಿ ಕಂಠಪಾಠ ಮಾಡಿಸಿ ಅಂಕ ಗಿಟ್ಟಿಸುವ, ಇಂಗ್ಲಿಷ್ ಕಲಿಸುವ ಶಾಲೆಗಳು ಮಾತ್ರ, ಶಾಲೆಗಳೆಂಬ ಪೂರ್ವಗ್ರಹಕ್ಕೆ ಸಿಲುಕಿರುವ ಕಾರಣ, ಸರ್ಕಾರಿ ಶಾಲೆಯ ಮೌಲ್ಯಗಳು ಕಳೆಗುಂದುತ್ತಿವೆ. ಸರ್ಕಾರೇತರ ಶಾಲೆಗಳ ಬಾಹ್ಯ ಆಡಂಬರ ಹಾಗೂ ಆರ್ಥಿಕ ಹಣೆಬರಹಕ್ಕಾಗಿ ಜೀವನ ಸವೆಸುವ ನಮ್ಮ ಪೋಷಕ ಬಂಧುಗಳು, ಅದರ ಶೇಕಡ ೨೨ ಭಾಗದಷ್ಟು ಗಮನವನ್ನು ಕಲಿಕೆಗೆ ಕೊಟ್ಟು, ತಮ್ಮ ಮಗುವನ್ನು ಹತ್ತಿರದ ಶಾಲೆಗೆ ಕಳುಹಿಸಿ, ನೆಮ್ಮದಿಯಿಂದ ಇರಬಹುದಲ್ಲವೇ? ಸರ್ಕಾರೇತರ ಶಾಲೆಗೆ ಕಳುಹಿಸುವ ಪೋಷಕರು ತೆಗೆದುಕೊಳ್ಳುವ ಶೈಕ್ಷಣಿಕ ಕಾಳಜಿಯನ್ನು ಇಲ್ಲಿ ಅಂದರೆ ಸರ್ಕಾರಿ ಶಾಲೆಗಳಲ್ಲಿ ತೆಗೆದುಕೊಂಡು ಅನಗತ್ಯ ಆರ್ಥಿಕ ನಷ್ಟ ಹಾಗೂ ಒತ್ತಡಗಳನ್ನು ತಪ್ಪಿಸಬಹುದಲ್ಲ? ಆದರೆ ತಮ್ಮ ಪ್ರತಿಷ್ಠೆಯನ್ನು ಮಾತ್ರ ಬಿಟ್ಟು ಬಿಡಬೇಕಾಗುತ್ತದೆ. ಶಿಕ್ಷಣ ವ್ಯವಸ್ಥೆಯಲ್ಲಿ ನಡೆಯುವ ಪ್ರತಿಷ್ಠೆಯ ಅಂಶವೇ ಒಂದು ಮಗುವಿನ ಭವಿಷ್ಯವನ್ನು ಬಲಿ ತೆಗೆದುಕೊಳ್ಳುವುದಾಗಿದೆ. ಗುಣಾತ್ಮಕ ಶಿಕ್ಷಣವನ್ನು ನೀಡುವಲ್ಲಿ ಸರ್ಕಾರಿ ಶಾಲೆಗಳಲ್ಲಿ ನೀಡುವ ವ್ಯವಸ್ಥೆಯ ಮುಂದೆ ಸರ್ಕಾರೇತರ ಶಾಲೆಗಳು ಎಂದೆಂದಿಗೂ ಸ್ಪರ್ಧಿಸಲಾರವು ಎಂದಿದ್ದಾರೆ.

ನಬೀಸ್ ಆರ್. ಮತ್ತು ಇತರರು (೨೦೦೭) ಅವರ "ಎನ್‌ರೋಲಿಂಗ್ ಅಂಡ್ ರಿಟೈನಿಂಗ್ ಸ್ಲಮ್ ಚಿಲ್ಡ್ರನ್ ಇನ್ ಫಾರ್ಮಲ್ ಸ್ಕೂಲ್ಸ್, ಎ ಫೀಲ್ಡ್ ಸರ್ವೇ ಇನ್ ಈಸ್ಟನ್ ಸ್ಲಮ್ಸ್ ಆಫ್ ಕೋಲ್ಕತ" ಎನ್ನುವ ಲೇಖನದಲ್ಲಿ ಕೋಲ್ಕತಾದ ಪೂರ್ವ ಕೊಳಗೇರಿ ಪ್ರದೇಶದಲ್ಲಿನ ಶೈಕ್ಷಣಿಕ ಸ್ಥಿತಿ-ಗತಿಯನ್ನು ವಿವರಿಸುವ ಪ್ರಯತ್ನ ಮಾಡಿದ್ದಾರೆ. ಸರ್ವಶಿಕ್ಷಣ ಅಭಿಯಾನ ಬಂದ ಮೇಲೆ ಅಲ್ಪಪ್ರಮಾಣದಲ್ಲಿ

ಕೊಳಗೇರಿಗಳಲ್ಲಿ ದಾಖಲಾತಿ ಮತ್ತು ಹಾಜರಾತಿಯಲ್ಲಿ ಪ್ರಗತಿ ಕಂಡಿದೆ. ಆದರೆ ಹೆಣ್ಣುಮಕ್ಕಳ ದಾಖಲಾತಿ ಈ ಪ್ರದೇಶದಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಉತ್ತಮವಾಗಿಲ್ಲ ಎಂದಿದ್ದಾರೆ. ಇನ್ನು ಅನೇಕ ಮಕ್ಕಳು ಮಧ್ಯದಲ್ಲೇ ಶಾಲೆ ಬಿಡುತ್ತಿದ್ದಾರೆ. ಇವರಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಹೆಚ್ಚು ಎಂದು ಹೇಳಿದ್ದಾರೆ. ಇವರು ವಲಸೆ ಹೋಗಿ ಕಾರ್ಮಿಕ ವರ್ಗಕ್ಕೆ ಸೇರುತ್ತಾರೆ. ಇಂತಹ ಪರಿಸ್ಥಿತಿಗಳಲ್ಲಿ ಅಂತಹ ವಿದ್ಯಾರ್ಥಿಗಳನ್ನು ಗುರುತಿಸಿ, ಅವರ ಮನೆಗೆ ಹೋಗಿ ಪೋಷಕರೊಂದಿಗೆ ಚರ್ಚಿಸಿ, ಅವಕಾಶ ವಂಚಿತರಾದ ಮಕ್ಕಳನ್ನು ಮತ್ತೇ ಶಾಲೆಗೆ ಕರೆತರುವ ಪ್ರಯತ್ನ ಇನ್ನು ಹೆಚ್ಚಿನ ಮಟ್ಟದಲ್ಲಿ ಮಾಡಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ. ಹೀಗೆ ಶಾಲೆ ಬಿಟ್ಟ ಮಕ್ಕಳಲ್ಲಿ ಹೆಣ್ಣು ಮಕ್ಕಳನ್ನು ಶಾಲೆಗೆ ಕರೆತರುವುದು ಬಹಳ ದೊಡ್ಡ ಸಮಸ್ಯೆಯಾಗಿದೆ. ಇದನ್ನು ನಾಗರಿಕ ಸಮಾಜದಲ್ಲಿ ಜಾಗೃತಿ ಮೂಡಿಸುವ ಮೂಲಕ ಉತ್ತಮ ಪಡಿಸಲು ಸಾಧ್ಯ ಎಂಬ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದ್ದಾರೆ.

ಗ್ರಾಮೀಣ ಪ್ರದೇಶಗಳಲ್ಲಿರುವ ಬಡತನ, ಅಸಮಾನತೆ, ನಿರುದ್ಯೋಗ, ಅನಕ್ಷರತೆ, ಜಾತೀಯತೆ ಇವುಗಳನ್ನು ಹೋಗಲಾಡಿಸುವಂತಹ ಪ್ರಯತ್ನವನ್ನು ವ್ಯಕ್ತಿ, ಸಂಘ-ಸಂಸ್ಥೆಗಳು, ಸರ್ಕಾರ ಮತ್ತು ಸಮಾಜವು ಜಂಟಿಯಾಗಿ ಮಾಡಬೇಕಾಗಿದೆ. ಆಗ ಮಾತ್ರ ಗ್ರಾಮೀಣ ಪ್ರದೇಶದಲ್ಲಿ ಪ್ರಾಥಮಿಕ ಶಿಕ್ಷಣ ಸುಧಾರಣೆಯಾಗಲು ಸಾಧ್ಯ ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ.

ರೇಖಾ ಕೌಲ್, (೨೦೦೧) ಅವರ "ಅಸೆಸ್ಸಿಂಗ್ ಪ್ರೈಮರಿ ಎಜ್ಯುಕೇಷನ್ ಗೋಯಿಂಗ್ ಬಿಯಾಂಡ್ ದಿ ಕ್ಲಾಸ್ ರೂಂ" ಎನ್ನುವ ಲೇಖನದಲ್ಲಿ ವಿವಿಧ ಆದಾಯದ ಗುಂಪುಗಳನ್ನು ತುಲನಾತ್ಮಕವಾಗಿ ವಿಶ್ಲೇಷಿಸಿದ್ದಾರೆ. ಇವರ ಲೇಖನದಲ್ಲಿ ಪ್ರಮುಖವಾಗಿ ಕಂಡುಬರುವ ಅಂಶವೆಂದರೆ ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಕೊನೆಯ ಆದ್ಯತೆ ನೀಡುತ್ತಿರುವುದನ್ನು ಇವರು ಗುರುತಿಸಿದ್ದಾರೆ. ತಳಜಾತಿ ಹಾಗೂ ಅಲ್ಪಸಂಖ್ಯಾತ ಸಮುದಾಯಗಳಲ್ಲಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಅವಕಾಶವಿಲ್ಲ ಎಂಬುದನ್ನು ಇವರು ಸ್ಪಷ್ಟಪಡಿಸಿದ್ದಾರೆ.

ರೇಖಾ ವಾಜೀರ್.(೨೦೦೧)ರವರು "ದಿ ಜೆಂಡರ್ ಗ್ಯಾಪ್ ಇನ್ ಬೇಸಿಕ್ ಎಜ್ಯುಕೇಷನ್, ಎನ್.ಈ.ಓ. ಆ್ಯಂಡ್ ಚೇಂಜ್ ಏಜನ್ಸಿ" ಎಂಬ ತಮ್ಮ ಪುಸ್ತಕದಲ್ಲಿ ಶಾಲಾ ಆಡಳಿತದಲ್ಲಿ ಸಮುದಾಯದ ಭಾಗವಹಿಸುವಿಕೆಯನ್ನು ಪರಿಣಾಮಕಾರಿಗೊಳಿಸುವ ನಿಟ್ಟಿನಲ್ಲಿ ಸರ್ಕಾರೇತರ ಸಂಸ್ಥೆಗಳು ಪಠ್ಯರೂಪಿಸುವಲ್ಲಿ, ಶಾಲಾ ದಾಖಲಾತಿ, ಹಾಜರಾತಿ ಹೆಚ್ಚುಸುವಲ್ಲಿ, ಮಧ್ಯದಲ್ಲಿ ಶಾಲೆ ಬಿಟ್ಟ ಮಕ್ಕಳನ್ನು ಪುನಃ ಶಾಲೆಗೆ ದಾಖಲಿಸುವಲ್ಲಿ, ಜನರಿಗೆ ಶಿಕ್ಷಣದ ಪ್ರಾಮುಖ್ಯತೆಯನ್ನು ತಿಳಿಸುವಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಭಾಗವಹಿಸಬೇಕಾದ ಅಗತ್ಯವನ್ನು ಒತ್ತಿಹೇಳಿದ್ದಾರೆ.

ಸಾರಥಿ ಆಚಾರ್ಯ, (೨೦೦೦) ಅವರ "ಆಸ್‌ಸಿಂಗ್ ಟು ಪ್ರೈಮರಿ ಎಜುಕೇಷನ್ : ರೂರಲ್ ಮಹಾರಾಷ್ಟ್ರ ಆ್ಯಂಡ್ ಮಧ್ಯಪ್ರದೇಶ" ಎಂಬ ಲೇಖನದ ಮೊದಲನೆಯ ಭಾಗವು ಮಹಾರಾಷ್ಟ್ರ ಮತ್ತು

ಮಧ್ಯಪ್ರದೇಶ ರಾಜ್ಯಗಳಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಕೆಲವು ಜಿಲ್ಲೆಗಳ ಸಾಕ್ಷರತೆ, ಶಾಲಾ ದಾಖಲಾತಿ, ಹಾಜರಾತಿ, ಜಾತಿವಾರು, ಸಾಕ್ಷರತೆ ಪ್ರಮಾಣವನ್ನು ತುಲಾನಾತ್ಮಕವಾಗಿ ವಿಶ್ಲೇಷಿಸಲಾಗಿದೆ. ಎರಡನೇ ಭಾಗದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಇರುವ ಮೂಲ ಸೌಲಭ್ಯಗಳು, ಮಕ್ಕಳನ್ನು ಪ್ರಾಥಮಿಕ ಶಾಲೆಗಳಿಗೆ ಕಳುಹಿಸಲು ತಗುಲುವ ಖಾಸಗಿ ಮತ್ತು ಸಾರ್ವಜನಿಕ ವೆಚ್ಚ, ಮಧ್ಯದಲ್ಲಿ ಶಾಲೆ ಬಿಡುವ ಮಕ್ಕಳ ಸಂಖ್ಯೆ ಇತ್ಯಾದಿಗಳನ್ನು ವಿಶ್ಲೇಷಿಸಿದ್ದಾರೆ. ಈ ಲೇಖನದ ಕೊನೆಯ ಭಾಗದಲ್ಲಿ ಕೆಲವು ಗೊಂದಲಗಳು ಕಂಡುಬರುತ್ತವೆ. ಸಂಶೋಧಕರು ಹೆಚ್ಚಾಗಿ ಆನುಷಂಗಿಕ ಅಂಕಿ ಅಂಶಗಳನ್ನು ಬಳಸಿಕೊಂಡು ಅವುಗಳನ್ನು ಬೇರೆ ಬೇರೆ ಎರಡು ರಾಜ್ಯಗಳ ವಿವಿಧ ಜಿಲ್ಲೆಗಳಿಗೆ ಹೋಲಿಸಿ ತುಲನಾತ್ಮಕವಾಗಿ ವಿಶ್ಲೇಷಿಸುವುದು ಅಷ್ಟು ಸಮಂಜಸವಲ್ಲ. ಏಕೆಂದರೆ, ಶೈಕ್ಷಣಿಕ ವ್ಯವಸ್ಥೆ ಮತ್ತು ಪರಿಸರವನ್ನು ಕುರಿತು ಒಂದೇ ರಾಜ್ಯ ಅಥವಾ ಪ್ರದೇಶದಲ್ಲಿ ಬರುವ ಜಿಲ್ಲೆಗಳಲ್ಲಿಯೇ ಪ್ರಾದೇಶಿಕ ಅಸಮಾನತೆಯನ್ನು ಗುರುತಿಸಬಹುದಾಗಿದೆ.

ಕೃಷ್ಣಾ ಜಿ, ಎನ್., (೨೦೦೦) ಅವರು "ಪಾವರ್ಟಿ ಜೆಂಡರ್ ಆ್ಯಂಡ್ ಸ್ಕೂಲಿಂಗ್ : ಎ ಸ್ಟಡಿ ಆಫ್ ಟೂ ಡಿಸ್ಟ್ರಿಕ್ಟ್ ಇನ್ ಆಂಧ್ರಪ್ರದೇಶ" ಎಂಬ ಲೇಖನದಲ್ಲಿ ಆಂಧ್ರ ಪ್ರದೇಶದ ಮೆಹಬೂಬುನಗರ ಮತ್ತು ಅದಿಲಾಬಾದ್ ಜಿಲ್ಲೆಗಳನ್ನು ತಮ್ಮ ಅಧ್ಯಯನ ಕ್ಷೇತ್ರವನ್ನಾಗಿ ಆಯ್ಕೆ ಮಾಡಿಕೊಂಡಿದ್ದಾರೆ. ಆಂಧ್ರಪ್ರದೇಶದಲ್ಲಿ ಇರುವ ಅತ್ಯಂತ ಹಿಂದುಳಿದ ಜಿಲ್ಲೆಗಳಲ್ಲಿ ಈ ಎರಡು ಜಿಲ್ಲೆಯು ಬರುತ್ತವೆ. ಸಂಶೋಧಕರು ಬಡತನ-ಲಿಂಗ- ಶಾಲೆಗಳಿಗೆ ಇರುವ ಸಂಬಂಧವನ್ನು ಕುರಿತು ಅಧ್ಯಯನ ನಡೆಸಿದ್ದಾರೆ. ಮೊದಲ ಭಾಗದಲ್ಲಿ ಬಡತನಕ್ಕೂ ಶಾಲಾ ದಾಖಲಾತಿಗೂ ಹಾಜರಾತಿಗೂ, ಮಧ್ಯದಲ್ಲಿ ಶಾಲೆ ಬಿಡುವುದಕ್ಕೂ ಇರುವ ಸಂಬಂಧವನ್ನು ಗುರುತಿಸಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಜನರು ಹೆಚ್ಚಾಗಿ, ಬಡತನದ ರೇಖೆಗಿಂತ ಕೆಳಗಿದ್ದಾರೆ. ಈ ಗುಂಪಿಗೆ ಸೇರಿದ ಜನರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸುವಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸುತ್ತಿಲ್ಲ ಎಂಬ ನಿರ್ಧಾರಗಳಿಗೆ ಬಂದಿದ್ದಾರೆ. ಎರಡನೇ ಭಾಗದಲ್ಲಿ ಬಡತನಕ್ಕೂ ಲಿಂಗ ಅಸಮಾನತೆಗೂ ಶಿಕ್ಷಣಕ್ಕೂ ಇರುವ ಸಂಬಂಧಗಳನ್ನು ಕುರಿತು ವಿಶ್ಲೇಷಿಸುತ್ತಾರೆ. ಸ್ವಲ್ಪ ಹೆಚ್ಚು ಕಡಿಮೆ ಮೊದಲ ಭಾಗದ ನಿರ್ಧಾರಗಳನ್ನೇ ಇಲ್ಲಿಯು ಅವರು ಮಾಡಿದ್ದಾರೆ. ಈ ಲೇಖನದ ಪ್ರಮುಖ ನ್ಯೂನ್ಯತೆ ಎಂದರೆ ಗ್ರಾಮ ಮಟ್ಟದಲ್ಲಿನ ಸಾಮಾಜಿಕ ಸ್ವರೂಪಕ್ಕೂ ಶಿಕ್ಷಣ ವ್ಯವಸ್ಥೆಗೂ ನಡುವಿನ ಸಂಬಂಧವನ್ನು ಗುರುತಿಸಲು ಸಾಧ್ಯವಾಗದೇ ಇರುವುದು. ಇದು ಈ ಅಧ್ಯಯನದ ಮಿತಿಯೂ ಕೂಡ.

ವಿಲ್‌ಫ್ರೆಡ್ ಡಿಸೋಜ, (೨೦೦೬) ರವರು "ರೈತರಿಗೆ ಆಸೆ, ಕಂಪನಿಗಳಿಗೆ ಲಾಭದ ದಾಹ, ಶಿಕ್ಷಣದಿಂದ ವಂಚಿತರಾಗುತ್ತಿರುವ ಕಂದಮ್ಮಗಳು" ಎಂಬ ಲೇಖನದಲ್ಲಿ ದುಡ್ಡಿನ ಆಸೆಗಾಗಿ ರೈತ ಕುಟುಂಬಗಳು ತಮ್ಮ ಮಕ್ಕಳ ಬದುಕನ್ನು ಬಲಿಕೊಡುತ್ತಿರುವ ಸತ್ಯಾಂಶವನ್ನು ವಿವರಿಸಿದ್ದಾರೆ. ಸಾಲದ ಸಂಕೋಲೆಯಲ್ಲಿ ಸಿಲುಕಿ ಅದರಿಂದ ಹೊರಬರಲು ತವಕಿಸುತ್ತಿರುವ ರೈತರು ಲಾಭ ತರುವ ಹೊಸ

ಅವಕಾಶಗಳನ್ನು ಉಪಯೋಗಿಸಿಕೊಳ್ಳುವುದು ಸಹಜವೆಂದು ಒಪ್ಪಿಕೊಳ್ಳುವ ಲೇಖಕರು, ಬಹುರಾಷ್ಟ್ರೀಯ ಬೀಜೋತ್ಪಾದನೆಯ ಕಂಪನಿಗಳು ಸೃಷ್ಟಿಸಿದ ಇಂತಹ ಜಾಲದಲ್ಲಿ ಸಿಲುಕಿದ ರೈತರು ಅಲ್ಪಸ್ವಲ್ಪ ಲಾಭದ ಗುಂಗಿನಲ್ಲಿ ತಮ್ಮ ಮಕ್ಕಳ ಜೀವನವನ್ನೇ ಬಲಿಕೊಡುತ್ತಿದ್ದಾರೆಂದು ಆತಂಕ ವ್ಯಕ್ತಪಡಿಸಿದ್ದಾರೆ. ಮುಂದುವರಿದಂತೆ ಲೇಖಕರು, ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಶಾಲೆಗಳಲ್ಲಿ ಮಕ್ಕಳು ದಾಖಲಾಗಿದ್ದರೂ, ಮಕ್ಕಳು ಶಾಲೆಗಳಲ್ಲಿ ಇಲ್ಲದಿರುವುದನ್ನು ಗಂಭೀರವಾಗಿ ಪರಿಗಣಿಸಿದ್ದಾರೆ. ಏಕೆಂದರೆ ಶಾಲೆಗಳಲ್ಲಿ ದಾಖಲಾದ ಮಕ್ಕಳೆಲ್ಲರೂ ಶಾಲೆಗೆ ಹಾಜರಾಗದೆ ಸ್ಥಳೀಯವಾಗಿ ನಿರ್ಮಾಣವಾಗಿರುವಂತಹ ಬೀಜೋತ್ಪಾದನೆಯ ಕೇಂದ್ರಗಳಲ್ಲಿ ದುಡಿಯಲು ಹೋಗಿದ್ದಾರೆ. ಇಲ್ಲಿಯೇ ಇನ್ನೊಂದು ಕಡೆ ಬಾಲಕಾರ್ಮಿಕತೆಯ ಅಮಾನವೀಯತೆಯು ಆಚರಣೆಯಲ್ಲಿದ್ದು, ದಾವಣಗೆರೆ ಜಿಲ್ಲೆಗೆ ಮಾತ್ರ ಸೀಮಿತವಾಗಿರದೆ ಬೇರೆ ಬೇರೆ ಜಿಲ್ಲೆಗಳಲ್ಲಿಯೂ ಕಂಡುಬರುತ್ತದೆ. ಹಾಗಾಗಿ ಶಿಕ್ಷಣ ಇಲಾಖೆ ಮತ್ತು ಕಾರ್ಮಿಕ ಇಲಾಖೆಗಳು ಈಗಲಾದರೂ ಎಚ್ಚೆತ್ತು, ಶಿಕ್ಷಣದಿಂದ ವಂಚಿತರಾದ ಮಕ್ಕಳನ್ನು ಮತ್ತೆ ಶಾಲೆಗೆ ಕರೆತರಬೇಕೆಂದಿದ್ದಾರೆ.

ಚಂದ್ರಶೇಖರ್.ಟಿ.ಆರ್., (೨೦೦೬)ರವರು "ಕರ್ನಾಟಕದ ಪ್ರಾಥಮಿಕ ಶಿಕ್ಷಣದ ಸ್ಥಿತಿ-ಗತಿ" ಎಂಬ ಲೇಖನದಲ್ಲಿ ಪ್ರಮುಖವಾಗಿ ಪ್ರಾದೇಶಿಕ ಸ್ವರೂಪ, ಜಾತಿ ಸ್ವರೂಪ ಮತ್ತು ಲಿಂಗಸಂಬಂಧಿ ಸ್ವರೂಪ ಎಂಬ ಮೂರು ಆಯಾಮಗಳನ್ನು ಚರ್ಚಿಸಿದ್ದಾರೆ. ಹಾಗೆಯೇ ಮಧ್ಯದಲ್ಲಿಯೇ ಶಾಲೆ ಬಿಡುವ ಮಕ್ಕಳ ಸಮಸ್ಯೆಗೆ ಅನೇಕ ಕಾರಣಗಳನ್ನು ಗುರುತಿಸುತ್ತಾ ಸಾಮಾಜಿಕ, ರಾಜಕೀಯ ಮತ್ತು ಚಾರಿತ್ರಿಕ ಕಾರಣಗಳು ಮುಖ್ಯ ಎಂದಿದ್ದಾರೆ. ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಮಧ್ಯಾಹ್ನದ ಊಟ ಇತ್ಯಾದಿ ಸೌಲಭ್ಯಗಳನ್ನು ಒದಗಿಸುವುದರಿಂದ ಮಧ್ಯದಲ್ಲಿ ಶಾಲೆ ಬಿಡುವ ಮಕ್ಕಳ ಪ್ರಮಾಣವು ಸ್ವಲ್ಪ ಕಡಿಮೆಯಾದರೂ ಸಮುದಾಯದ ವಲಸೆಗಳು ಪುನರಾವರ್ತನೆಯಾಗುವ ಪ್ರದೇಶಗಳಲ್ಲಿ ಮಕ್ಕಳು ಶಾಲೆ ಬಿಡುವುದನ್ನು ಕಡಿಮೆಗೊಳಿಸಲು ಉದ್ಯೋಗ ಭದ್ರತೆಯೂ ಪ್ರಮುಖವಾಗುತ್ತದೆ ಎಂಬುದನ್ನು ಲೇಖಕರು ಪ್ರತಿಪಾದಿಸಿದ್ದಾರೆ.

ಭಾರತದಲ್ಲಿ 'ಸರ್ವರಿಗೂ ಶಿಕ್ಷಣ' ಎಂಬ ನೀತಿಯು ೧೯೪೭ ರಿಂದ ಅನುಷ್ಠಾನದಲ್ಲಿದ್ದರೂ ಶಿಕ್ಷಣದ ಸಾರ್ವತ್ರೀಕರಣ ಸಂಪೂರ್ಣವಾಗಿಲ್ಲ. ಶಿಕ್ಷಣದ ಸಾರ್ವತ್ರೀಕರಣದ ಅನೇಕ ಪ್ರಯತ್ನಗಳ ಫಲವಾಗಿ ೨೦೦೧-೦೨ರಲ್ಲಿ ಪ್ರಾಥಮಿಕ ಶಾಲೆ ಬಿಡುವ ಮಕ್ಕಳ ಸಂಖ್ಯೆ ಶೇಕಡ ೪೦.೦೭ರಿಂದ ಶೇಕಡ ೩೫.೦೬ಕ್ಕೆ ಕಡಿಮೆಯಾಗಿದ್ದರೂ, ೦೬-೧೪ ವರ್ಷ ವಯಸ್ಸಿನ ಸುಮಾರು ೨೩ ದಶಲಕ್ಷ ಮಕ್ಕಳು ಶಾಲೆಯಿಂದ ಹೊರಗಡೆ ಇದ್ದಾರೆ, ಹಾಗೂ ಬಹುಸಂಖ್ಯೆಯ ಮಕ್ಕಳು ೫ನೇ ತರಗತಿಯಲ್ಲಿ ಪುನರಾವರ್ತನೆಯಾಗುತ್ತಿದ್ದಾರೆಂಬುದು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ೨೦೦೩-೦೪ರ ವರದಿಯಿಂದ ತಿಳಿಯುತ್ತದೆ. ೦೬-೧೪ ವರ್ಷ ವಯಸ್ಸಿನ ಶೇಕಡ ೩೦ರಷ್ಟು ಮಕ್ಕಳಲ್ಲಿ ಹೆಚ್ಚಾಗಿ ಹೆಣ್ಣುಮಕ್ಕಳೇ ಶಾಲೆಗೆ ಹಾಜರಾಗದಿರುವುದನ್ನು ೧೯೮೬-೮೭ರ ರಾಷ್ಟ್ರೀಯ ಮಾದರಿ ಸಮೀಕ್ಷೆ ಗುರುತಿಸಿದೆ.

ಬಂಡೋಪಾಧ್ಯಾಯ, (೨೦೦೬) ರಾಷ್ಟ್ರದ ಪ್ರತಿಯೊಂದು ಮಗುವೂ ಶಾಲೆಯಲ್ಲಿರುವಂತೆ ಮಾಡುವುದರ ಮೂಲಕ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಯಶಸ್ವಿಗಾಗಿ ಎಲ್ಲಾ ಮಕ್ಕಳಗೆ ಶಾಲಾ ಸೌಲಭ್ಯಗಳನ್ನು ವಿಸ್ತರಿಸುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಲೇ ಬಂದಿವೆ. ಆದರೂ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಕುರಿತು ವಿವಿಧ ಪ್ರದೇಶ, ಸಮುದಾಯ, ಜಾತಿವರ್ಗ ಮತ್ತು ಲಿಂಗವಾರು ಭಿನ್ನತೆಗಳು ಉಳಿದುಕೊಂಡಿರುತ್ತವೆ. ಜೊತೆಗೆ ಶಿಕ್ಷಣದ ಗುಣಮಟ್ಟದಲ್ಲಿಯೂ ಕೊರತೆಗಳು ಕಂಡುಬರುತ್ತಿವೆ. ಇದರಿಂದಾಗಿ ರಾಷ್ಟ್ರಮಟ್ಟದಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಗುರಿ ಸಾಧನೆಗಾಗಿ ಪ್ರಾಮಾಣಿಕವಾದ ಪ್ರಯತ್ನಗಳನ್ನು ಮಾಡುವ ಅಗತ್ಯವಿರುತ್ತದೆ. ಈ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಸರ್ಕಾರೇತರ ಸಂಘ-ಸಂಸ್ಥೆಗಳು, ಶಿಕ್ಷಣ ತಜ್ಞರು, ಸಮಾಜ ವಿಜ್ಞಾನಿಗಳು, ಜನಪ್ರತಿನಿಧಿಗಳು, ಶಿಕ್ಷಕರು, ಪೋಷಕರು, ಸಾರ್ವಜನಿಕರು ಸೇರಿಕೊಂಡು ಇಡೀ ಸಾಮಾಜಿಕ ವ್ಯವಸ್ಥೆಯೇ ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕರಣದ ಗುರಿ ಸಾಧನೆಗೆ ಆಮೂಲಾಗ್ರವಾಗಿ ಶ್ರಮಿಸುವುದು ಸಾಮಾಜಿಕ ಆದ್ಯತೆ ಎನಿಸುತ್ತದೆ. ಈರೀತಿಯಾದ ಪ್ರಯತ್ನಗಳ ಫಲವಾಗಿ ದೀರ್ಘಾವಧಿಯಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕರಣ ಮತ್ತು ಅಭಿವೃದ್ಧಿ ಸಾಧ್ಯ ಎಂದು ಲೇಖಕರು ವಾದಿಸುತ್ತಾರೆ.

ಶಾಂತಾ ಸಿನ್ಹ, (೨೦೦೬) ಶಿಕ್ಷಣ ಕ್ಷೇತ್ರದಲ್ಲಿ ಹಿಂದುಳಿದ ಪ್ರದೇಶಗಳೆಂದು ಪರಿಗಣಿಸಲ್ಪಟ್ಟಿರುವ ಪಂಜಾಬ, ಹರಿಯಾಣ, ಅಸ್ಸಾಂ, ಬಿಹಾರ, ತ್ರಿಪುರ, ಝಾರ್ಖಂಡ, ಒರಿಸ್ಸಾ, ಹಿಮಾಚಲ ಪ್ರದೇಶ ಮತ್ತು ಸಿಕ್ಕಿಂ ರಾಜ್ಯಗಳಲ್ಲಿ ಶಾಲೆಗೆ ಹೋಗುವ ವಯೋಮಾನದ ಶೇಕಡ ೯೦ರಷ್ಟು ಮಕ್ಕಳು ಸರ್ಕಾರಿ ಶಾಲೆಗೆ ಹಾಜರಾಗುವುದು ಬೆಳಕಿಗೆ ಬಂದಿದೆ. ವಿಶೇಷವೆಂದರೆ ಕೊಠಡಿಗಳ ಅಭಾವ, ಶಿಕ್ಷಕರ ಕೊರತೆ, ಕುಡಿಯುವ ನೀರು ಮತ್ತು ಶೌಚಾಲಯದ ಕೊರತೆ, ಕಳಪೆ ಮಟ್ಟದ ಶಿಕ್ಷಣ ಇತ್ಯಾದಿಗಳಿಂದ ಅಪಖ್ಯಾತಿಯಾದ ಸರ್ಕಾರಿ ಶಾಲೆಗಳಿಗೇಕೆ ಮಕ್ಕಳು ಹಾಜರಾಗುತ್ತಾರೆ? ಎಂಬ ಸಹಜವಾದ ಪ್ರಶ್ನೆ ಎದುರಾಗುತ್ತದೆ. ತಮ್ಮ ಮಕ್ಕಳು ಶಿಕ್ಷಣ ಪಡೆದು ವಿದ್ಯಾವಂತರಾದರೆ ಮಾತ್ರ ಬಡತನದ ವಿಷವೃತ್ತದಿಂದ ಪಾರಾಗಲು ಸಾಧ್ಯ ಎಂಬ ಪೋಷಕರ ದೃಢನಂಬಿಕೆಯೇ ಉತ್ತರವಾಗಿರುವುದು ಶಿಕ್ಷಣದ ಬೇಡಿಕೆಯನ್ನು ವ್ಯಕ್ತಪಡಿಸಿದಂತಾಗುತ್ತದೆ. ಒಂದರ್ಥದಲ್ಲಿ ಮಕ್ಕಳು ವಿದ್ಯಾವಂತರಾದರೆ ಬಡತನದ ವಿಷವೃತ್ತದಿಂದ ಪಾರಾಗುವುದು ವಿಳಂಬವಾದರೂ, ಬಡಕುಟುಂಬಗಳ ಜೀವನ ವಿಧಾನ ಮತ್ತು ಮೌಲ್ಯಗಳು ಬದಲಾಗುತ್ತವೆ ಎಂದು ಸಿನ್ಹ ವಾದಿಸುತ್ತಾರೆ.

ಶ್ರೀವಾಸ್ತವ, ಅಮರೇಶ್ ದುಬೆ ಮತ್ತು ಇತರರು, (೨೦೦೨) ಬುಡಕಟ್ಟಿನ ಜನಸಮುದಾಯಗಳಿಂದ ಕೂಡಿದ ಈಶಾನ್ಯ ಪ್ರಾಂತ್ಯದ ಅರುಣಾಚಲ ಪ್ರದೇಶ, ಮೇಘಾಲಯ, ಮಿಜೋರಾಂ ರಾಜ್ಯಗಳಲ್ಲಿ ಪ್ರಾಥಮಿಕ ಶಿಕ್ಷಣದ ಸ್ಥಿತಿಯಲ್ಲಿ ಬಡತನ ಮತ್ತು ಲಿಂಗ ತಾರತಮ್ಯಗಳು ಎದ್ದುಕಾಣುತ್ತವೆ. ಈಶಾನ್ಯ ಪ್ರಾಂತ್ಯದ ಕೆಲವು ರಾಜ್ಯಗಳಲ್ಲಿ ಬಡತನದ ತೀವ್ರತೆ, ನಗರ ಮತ್ತು ಗ್ರಾಮೀಣ ಬಡತನಗಳ ಅಂತರ ಹೆಚ್ಚಾಗಿದ್ದರೂ ಹೆಚ್ಚಿನ ಪ್ರಮಾಣದಲ್ಲಿರುವ ಸಾಕ್ಷರತೆಯಲ್ಲಿ ಲಿಂಗ ತಾರತಮ್ಯವಿದೆ. ಆದರೆ ಲಿಂಗ

ತಾರತಮ್ಯಕ್ಕೆ ಬಡತನವೇ ಕಾರಣವಾಗಿಲ್ಲವೆಂಬುದು ವಿಶೇಷ. ಈಶಾನ್ಯ ರಾಜ್ಯಗಳ ನಗರ ಭಾಗದಲ್ಲಿ ಶಾಲೆಗೆ ಹೋಗುವ ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳ ಪ್ರಮಾಣ ಹೆಚ್ಚಾಗಿರುವುದು ವಿಭಿನ್ನ ಸಂಗತಿ. ಅದರಂತೆಯೇ ಈ ರಾಜ್ಯಗಳಲ್ಲಿ ಶಾಲೆಗೆ ಹೋಗುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಇತರೆ ವರ್ಗದ ಮಕ್ಕಳಲ್ಲಿ ಮಹತ್ವದ ವ್ಯತ್ಯಾಸಗಳಿಲ್ಲದಿರುವುದು ಕೂಡ ತಕ್ಕಮಟ್ಟಿಗೆ ಸಮಾಧಾನ ಪಡುವ ವಿಷಯವಾಗಿದೆ ಎಂದು ಈ ಲೇಖಕರು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ.

ಚಟರ್ಜಿ ಮತ್ತು ಇತರರು, (೨೦೦೭) ಕಲ್ಕತ್ತಾದ ಪೂರ್ವ ಕೊಳಗೇರಿಗಳಲ್ಲಿ ಸಾಕ್ಷರತಾ ಪ್ರಮಾಣ ಸಾಮಾನ್ಯವಾಗಿ ಕಡಿಮೆ ಇರುತ್ತದೆ ಎಂಬುದಾಗಿ ನಂಬಿದ್ದರೂ ೨೦೦೧ರ ಜನಗಣತಿ ಪ್ರಕಾರ ಅನೇಕ ಕೊಳಗೇರಿ ಪ್ರದೇಶಗಳ ಆಯ್ದ ವಾರ್ಡ್‌ಗಳಲ್ಲಿ ಸಾಕ್ಷರತೆಯ ಪ್ರಮಾಣ ಶೇಕಡ ೭೦ಕ್ಕಿಂತ ಅಧಿಕವಾಗಿದೆ. ವಿಚಿತ್ರವೆಂದರೆ ಕೊಳಗೇರಿ ಪ್ರದೇಶದ ಸಾಕ್ಷರತೆಗಿಂತ ಕೊಳಗೇರಿಯಲ್ಲದ ಪ್ರದೇಶದ ಸಾಕ್ಷರತಾ ಪ್ರಮಾಣ ಕಡಿಮೆ ಇರುವುದಾಗಿದೆ. ತಾಯಿಯ ಸಾಕ್ಷರತೆ ಮಟ್ಟವು ಮಕ್ಕಳ ಶಿಕ್ಷಣದ ನಿರ್ಧಾರಕವಾಗಿದ್ದು, ಕೊಳಗೇರಿಯಲ್ಲಿನ ಹೆಚ್ಚಿನ ತಾಯಂದಿರು ಅವಿದ್ಯಾವಂತರಾಗಿದ್ದರೂ, ಮಹಿಳಾ ಸಾಕ್ಷರತೆಯ ಪ್ರಮಾಣ ಶೇಕಡ ೬೦ಕ್ಕಿಂತ ಜಾಸ್ತಿಯಾಗಿರುವುದು ವ್ಯತಿರಿಕ್ತವಾದ ಅಂಶವಾಗುತ್ತದೆ. ಆದರೆ ಗಾಳಿ-ಬೆಳಕಿನ ಅಭಾವವಿರುವ ಚಿಕ್ಕಕೋಣೆಯಲ್ಲಿ ವಾಸ, ಆಗಾಗ್ಗೆ ಸ್ವಚ್ಛಗೊಳಿಸದ ಶೌಚಾಲಯದ ಬಳಕೆ, ಅನಾರೋಗ್ಯದ ಸ್ಥಿತಿಯಲ್ಲಿ ಅಡಿಗೆ ಮಾಡುವ, ಸ್ಥಳೀಯ ರಬ್ಬರ್ ಮತ್ತು ಚರ್ಮದ ಕಾರ್ಖಾನೆಗಳ ಮಾಲಿನ್ಯಗಳಿಂದ ಕೂಡಿದ ಪರಿಸರದಲ್ಲಿ ಕೊಳಗೇರಿ ಪ್ರದೇಶದ ಮಕ್ಕಳು ಮನೆಪಾಠದ ತಯಾರಿ ಮಾಡುವುದು ಕಷ್ಟದ ವಿಷಯ.

ಅಲ್ಲದೇ ಈ ಪ್ರದೇಶದ ಜನರ ಆದಾಯವೂ ಕಡಿಮೆ ಇರುವುದರಿಂದ ಮಕ್ಕಳಿಗೆ ಅಪೌಷ್ಟಿಕತೆಯಾಗಿ ಕಾಯಿಲೆಗೆ ಬೀಳುತ್ತಾರೆ. ಉದ್ಯೋಗದ ಭದ್ರತೆ ಇಲ್ಲದೆ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಪೋಷಕರಿಗೆ ಪರ್ಯಾಯ ಆದಾಯದ ಮೂಲವಿಲ್ಲದೆ ಜೀವನ ನಿರ್ವಹಣೆಗಾಗಿ ವಲಸೆ ಹೋಗುತ್ತಾರೆ. ಈ ರೀತಿಯಾದ ಅನಿವಾರ್ಯದ ಕಾರಣಗಳಿಂದ ಕೊಳಗೇರಿ ಪ್ರದೇಶದ ಮಕ್ಕಳು ಶಾಲೆಗೆ ಗೈರು ಹಾಜರಾಗುತ್ತಾರೆ ಎಂಬುದು ವರದಿಯಾಗಿದೆ. ಕೊಳೆಗೇರಿ ಪ್ರದೇಶದ ಸರ್ಕಾರಿ ಶಾಲೆ ಮತ್ತು ಮುನಿಸಿಪಲ್ ಕಾರ್ಪೋರೇಷನ್ ಶಾಲೆಗಳಲ್ಲಿ ದಾಖಲಾತಿ ದೊರೆಯದ ಮಕ್ಕಳಿಗೆ, ಹತ್ತಿರದಲ್ಲಿರುವ ಮತ್ತು ಹೊಂದಾಣಿಕೆ ಸ್ವಭಾವವಿರುವ ಸರ್ಕಾರೇತರ ಸಂಸ್ಥೆಗಳ ಶಾಲೆಗಳಲ್ಲಿ ದಾಖಲಾತಿ ದೊರೆಯುತ್ತದೆ. ಇದರಿಂದಾಗಿ ಶೇಕಡ ೩೮.೯೬ರಷ್ಟು ಮಕ್ಕಳು ಆರು ತಿಂಗಳಲ್ಲಿ ಶೇಕಡ ೮೦ರಷ್ಟು ತರಗತಿಗಳಿಗೆ ಹಾಜರಾದರೆ, ಶೇಕಡ ೨೪.೫೩ರಷ್ಟು ಮಕ್ಕಳು ಶೇಕಡ ೫೦ರಷ್ಟು ಶಾಲೆಯ ತರಗತಿಗಳಿಗೆ ಹಾಜರಾಗಿದ್ದಾರೆ. ಒಟ್ಟಿನಲ್ಲಿ ನಿರಂತರವಾಗಿ ಹಾಜರಾಗುವ ಮಕ್ಕಳ ಸಂಖ್ಯೆಗಿಂತ ಹಾಜರಾಗದ ಮಕ್ಕಳ ಸಂಖ್ಯೆ ಕಡಿಮೆಯಾಗಿರುವುದು ಕಂಡುಬರುತ್ತದೆ.

ಶಿಕ್ಷಣ ಕ್ಷೇತ್ರದಲ್ಲಿ ಮುಂದುವರಿದ ರಾಜ್ಯವಾದಂತಹ ಮಹಾರಾಷ್ಟ್ರದಲ್ಲಿಯೂ ಶಿಕ್ಷಣದ ವಿಷಯದಲ್ಲಿ ಪ್ರದೇಶ, ಜಾತಿ-ವರ್ಗ, ಲಿಂಗ ಆಧಾರಿತವಾದ ತಾರತಮ್ಯಗಳಿವೆ. ನಗರ ಮತ್ತು ಗ್ರಾಮೀಣ ಪ್ರದೇಶದ

ಪರಿಶಿಷ್ಟ ಜಾತಿಯ ಶೇಕಡ ೩೭ರಷ್ಟು ಜನಸಂಖ್ಯೆ ಶಿಕ್ಷಣ ಪಡೆಯದೇ, ಶೇಕಡ ೮೦ರಷ್ಟು ಜನ ಶೇಕಡ ೪೦ರಷ್ಟು ಶಿಕ್ಷಣವನ್ನು ಮತ್ತು ಶೇಕಡ ೭೦ರಷ್ಟು ಜನ ಶೇಕಡ ೭೫ರಷ್ಟು ಶಿಕ್ಷಣವನ್ನು ಪಡೆದುಕೊಳ್ಳುತ್ತಿದ್ದಾರೆ. ಆದರೆ ಪರಿಶಿಷ್ಟ ಜಾತಿಯ ಗ್ರಾಮೀಣ ಮಹಿಳೆಯರು ಹಿಂದುಳಿದ ವರ್ಗವಲ್ಲದ ಪುರುಷರು ಪಡೆಯುವ ಶಿಕ್ಷಣದ ೧/೩ರಷ್ಟು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಗ್ರಾಮೀಣ ಪ್ರದೇಶದ ಪರಿಶಿಷ್ಟ ಪಂಗಡದ ಅರ್ಧದಷ್ಟು ಜನಸಂಖ್ಯೆ ಶಿಕ್ಷಣವನ್ನೇ ಪಡೆದುಕೊಳ್ಳದೆ, ಶೇಕಡ ೮೦ ರಷ್ಟು ಜನಸಂಖ್ಯೆ ೧/೩ರಷ್ಟು ಶಿಕ್ಷಣವನ್ನು ಪಡೆಯುತ್ತಿದೆ. ಆದರೆ ನಗರದ ಶೇಕಡ ೨೦ರಷ್ಟು ಪರಿಶಿಷ್ಟ ಪಂಗಡದ ಜನಸಂಖ್ಯೆ ಶಿಕ್ಷಣ ಪಡೆಯದೇ, ೮೦ರಷ್ಟು ಜನಸಂಖ್ಯೆ ಶೇಕಡ ೫೦ಕ್ಕಿಂತ ಹೆಚ್ಚಿನ ಶಿಕ್ಷಣ ಮತ್ತು ಶೇಕಡ ೧೦ರಷ್ಟು ಜನಸಂಖ್ಯೆ ಶೇಕಡ ೭೫ರಷ್ಟು ಶಿಕ್ಷಣವನ್ನು ಪಡೆದುಕೊಳ್ಳುತ್ತಿದೆ.

ಮಧು ಎಸ್., (೨೦೦೭)ಗ್ರಾಮೀಣ ಪ್ರದೇಶದ ಹಿಂದುಳಿದ ವರ್ಗವಲ್ಲದ ಶೇಕಡ ೨೮ರಷ್ಟು ಜನಸಂಖ್ಯೆ ಶಿಕ್ಷಣ ಪಡೆಯದೇ, ೮೦ರಷ್ಟು ಜನಸಂಖ್ಯೆ ಶೇಕಡ ೫೦ಕ್ಕಿಂತ ಹೆಚ್ಚಿನ ಶಿಕ್ಷಣ ಮತ್ತು ಶೇಕಡ ೧೦ರಷ್ಟು ಜನಸಂಖ್ಯೆ ಶೇಕಡ ೭೫ರಷ್ಟು ಶಿಕ್ಷಣವನ್ನು ಪಡೆದುಕೊಳ್ಳುತ್ತಿದೆ. ಆದರೆ ನಗರ ಪ್ರದೇಶದ ಹಿಂದುಳಿದ ವರ್ಗವಲ್ಲದ ಶೇಕಡ ೧೫ರಷ್ಟು ಜನಸಂಖ್ಯೆ ಶಿಕ್ಷಣ ಪಡೆಯದೇ, ಶೇಕಡ ೧೫ರಷ್ಟು ಜನ ಶೇಕಡ ೭೫ಕ್ಕಿಂತ ಹೆಚ್ಚಿನ ಶಿಕ್ಷಣವನ್ನು ಪಡೆದುಕೊಳ್ಳುತ್ತಿದ್ದಾರೆ. ಒಟ್ಟಿನಲ್ಲಿ ಸಾಮಾಜಿಕವಾಗಿ ಹಿಂದುಳಿದ ವರ್ಗಗಳಲ್ಲಿ ನಗರ ಮತ್ತು ಗ್ರಾಮೀಣ ಭಾಗಗಳಲ್ಲಿ ಶಿಕ್ಷಣದ ಅಸಮಾನತೆ ಪುರುಷರಿಗಿಂತ ಮಹಿಳೆಯರಲ್ಲಿ ಹೆಚ್ಚಾಗಿದೆ. ನಗರದ ಪುರುಷರಲ್ಲಿ ಶಿಕ್ಷಣದ ಕಡಿಮೆ ತಾರತಮ್ಯಗಳಿದ್ದರೆ, ಗ್ರಾಮೀಣ ಮಹಿಳೆಯರಲ್ಲಿ ಹೆಚ್ಚಿನ ತಾರತಮ್ಯಗಳಿರುವುದು ಅಧ್ಯಯನಗಳಿಂದ ದೃಢಪಟ್ಟಿದೆ.

ಪ್ರಶಾಂತ್.ಎಚ್.ಡಿ., (೨೦೦೫)ರವರು "ಈಶಾನ್ಯ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಮಾಜ" ಎಂಬ ಪುಸ್ತಕದಲ್ಲಿ ಪ್ರಾಥಮಿಕ ಶಿಕ್ಷಣದ ಪ್ರಾಮುಖ್ಯತೆ, ಅದರ ಸಾರ್ವತ್ರೀಕರಣ ಮತ್ತು ಮೂಲಭೂತ ಹಕ್ಕಾಗಿ ಶಿಕ್ಷಣ ಎಂಬ ಬಹುಮುಖ್ಯ ಅಂಶಗಳನ್ನು ವಿವರಿಸಿದ್ದಾರೆ. ಸಾಕ್ಷರತೆಯಲ್ಲಿ ಪ್ರಾದೇಶಿಕ ಮತ್ತು ಸಾಮಾಜಿಕವಾದ ಅಸಮಾನತೆಗಳಿದ್ದು, ನಗರ-ಗ್ರಾಮೀಣ, ರಾಜ್ಯ ಮತ್ತು ರಾಷ್ಟ್ರ ಮಟ್ಟಗಳಲ್ಲಿರುವ ಲಿಂಗ ತಾರತಮ್ಯದ ಅಂಶಗಳನ್ನು ಲೇಖಕರು ವಿವರವಾಗಿ ತಿಳಿಸಿದ್ದಾರೆ. ಮುಂದುವರಿದು ಲೇಖಕರು ಮಕ್ಕಳ ಶಿಕ್ಷಣ ಮತ್ತು ಬದಲಾಗುತ್ತಿರುವ ಪೋಷಕರ ಮನೋಭಾವ, ಮಕ್ಕಳ ಶಿಕ್ಷಣದ ಪ್ರೇರಕಾಂಶಗಳು, ಗಂಡು ಮತ್ತು ಹೆಣ್ಣುಮಕ್ಕಳ ಶಿಕ್ಷಣದ ನಡುವಿನ ವ್ಯತ್ಯಾಸಗಳನ್ನು ಗುರುತಿಸುತ್ತಾ, ಶಿಕ್ಷಣದ ಅಭಿವೃದ್ಧಿಯಲ್ಲಿ ಸಮುದಾಯದ ಭಾಗವಹಿಸುವಿಕೆಯ ಅಗತ್ಯವನ್ನು ಒತ್ತಿಹೇಳಿದ್ದಾರೆ. ಗ್ರಾಮ ಮಟ್ಟದಲ್ಲಿ ಸಾಕ್ಷರತೆ ನಿರುತ್ಸಾಹದಾಯಕವಾಗಿದೆ ಎಂದು ತಿಳಿಸುವ ಲೇಖಕರು ಶಿಕ್ಷಣದ ಬಗ್ಗೆ ಸ್ಥಳೀಯವಾಗಿ ಗ್ರಾಮಸ್ಥರು ಹೊಂದಿರುವ ಉದಾಸೀನತೆಯೇ ಕಾರಣ ಎಂದಿದ್ದಾರೆ.

ಪ್ರಶಾಂತ್.ಎಚ್.ಡಿ., (೨೦೦೬) ರವರು "ಶಾಲಾ ಶಿಕ್ಷಣದ ವಿಕೇಂದ್ರೀಕರಣ ಎಸ್.ಡಿ.ಎಂ.ಸಿ ಕಾರ್ಯಕ್ಷಮತೆ" ಎಂಬ ಪುಸ್ತಕದಲ್ಲಿ ಸಮುದಾಯದ ಸಹಭಾಗಿತ್ವ ಯಾಕೆ? ಅದರ ಪ್ರಯತ್ನಗಳು

ಅಧ್ಯಯನದ ಮಹತ್ವ ಮತ್ತು ಮಿತಿಗಳನ್ನು ವಿವರಿಸಿದ್ದಾರೆ. ಶಾಲಾ ಶಿಕ್ಷಣದಲ್ಲಿ ವಿಕೇಂದ್ರೀಕರಣವು ನಡೆದು ಬಂದ ದಾರಿ, ಮತ್ತು ಅದರ ಪ್ರಯತ್ನಗಳನ್ನು ಹೇಳುವುದರ ಮೂಲಕ ಎಸ್.ಡಿ.ಎಂ.ಸಿ.ಯನ್ನು ಹೊಸದಾಗಿ ನೋಡುವ ಪ್ರಯತ್ನವನ್ನು ಲೇಖಕರು ಮಾಡಿದ್ದಾರೆ. ಶಾಲಾ ನಿರ್ವಹಣೆಯಲ್ಲಿ ಎಸ್.ಡಿ.ಎಂ.ಸಿ. ಪಾತ್ರ ಏನು? ಸಭೆ, ನಿರ್ಣಯಗಳು, ಸಮನ್ವಯತೆ ಮತ್ತು ಶಾಲಾ ಶಿಕ್ಷಣದಲ್ಲಿ ಸಮುದಾಯದ ಭಾಗವಹಿಸುವಿಕೆಯನ್ನು ಸ್ಪಷ್ಟವಾಗಿ ವಿವರಿಸಿದ್ದಾರೆ. ಒಟ್ಟಾರೆಯಾಗಿ ತಳಮಟ್ಟದಿಂದ ಸುಧಾರಿಸಬೇಕಾದ ಸಾಮಾಜಿಕ, ಆರ್ಥಿಕ ಭಿನ್ನತೆಗಳೊಂದಿಗೆ ಶಾಲಾ ಶಿಕ್ಷಣದಲ್ಲಿನ ತೊಂದರೆ ಮತ್ತು ಪರಿಹಾರಗಳನ್ನು ಲೇಖಕರು ತಮ್ಮ ಸಂಶೋಧನೆಯಲ್ಲಿ ಕಂಡುಕೊಂಡಿದ್ದಾರೆ.

ವೆಂಕಟೇಶ್. ಟಿ., (೨೦೦೭) ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಮಹಿಳಾ ಸಾಕ್ಷರತೆ ಪ್ರಮಾಣವು ಕಡಿಮೆ ಇದೆ. ಅದಕ್ಕಾಗಿ ಲೋಕಶಿಕ್ಷಣ ಇಲಾಖೆಯ 'ಮುಂದುವರಿಕೆ ಶಿಕ್ಷಣ', 'ಶಿಬಿರ ಸಾಕ್ಷರತೆ', 'ವಿದ್ಯಾರ್ಥಿಗಳ ಮೂಲಕ ಸಾಕ್ಷರತೆ', 'ಪುನಶ್ಚೇತನ', ಕುಷ್ಠರೋಗಿಗಳಿಗೆ, ಜೈಲುವಾಸಿಗಳಿಗೆ ಮತ್ತು ಭಿಕ್ಷುಕರಿಗಾಗಿರುವ ಸಾಕ್ಷರತಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದೆ. ಅದೇ ರೀತಿಯಾಗಿ ರಾಜ್ಯ ಸಂಪನ್ಮೂಲ ಕೇಂದ್ರವು 'ಬಾರವ್ವ ಕಲಿಯೋಕೆ' ಎಂಬ ಪಠ್ಯಪುಸ್ತಕದ ಸಾಫ್ಟ್‌ವೇರ್ ಸಿದ್ಧಪಡಿಸಿ ಕಂಪ್ಯೂಟರ್ ಮೂಲಕ ಮತ್ತು ರೇಡಿಯೋ ಪಾಠಗಳನ್ನು ತಯಾರಿಸಿ ಆಕಾಶವಾಣಿ ಮೂಲಕ ಸಾಕ್ಷರತೆ ನೀಡಲಾಗುತ್ತದೆ. ಅಲ್ಲದೇ ಶೈಕ್ಷಣಿಕವಾಗಿ ಹಿಂದುಳಿದ ಗುಲಬರ್ಗಾ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕ್ರಮವಾಗಿ ೮೯೫ ಮತ್ತು ೭೭೫ ಎಜುಸ್ಯಾಟ್ ಶಾಲೆಗಳು ಪ್ರಾರಂಭಿಸಿ ಸಾಕ್ಷರತೆ ನೀಡಲಾಗುತ್ತದೆ. ಶೀಘ್ರವಾಗಿ ಕಲಿಯಬಹುದಾದ ಪಠ್ಯಪುಸ್ತಕ 'ಸಾಕ್ಷರ ಸಂಗಾತಿ'ಯನ್ನು ಸಾಫ್ಟ್‌ವೇರ್‌ಗೆ ಅಳವಡಿಸಲಾಗಿದೆ.

ಗೋವಿಂದೇಗೌಡ.ಎಚ್.ಜಿ., (೧೯೯೬)ಇವುಗಳೊಂದಿಗೆ ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ಕಲಿಕಾ ಆಂದೋಲನ, ಪರಿಹಾರ ಬೋಧನೆ ಇನ್ನು ಮುಂತಾದ ಯೋಜನೆಗಳಿವೆ. ಅದರಂತೆ ಮೆರಿಟ್ ಆಧಾರಿತ ಶಿಕ್ಷಕರ ನೇಮಕಾತಿಯಲ್ಲಿ ಶೇಕಡ ೫೦ರಷ್ಟು ಮಹಿಳೆಯರ ನೇಮಕ, ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ತರಬೇತಿ ಕೇಂದ್ರ ಸ್ಥಾಪನೆ, ಶಾಲಾ ಕೊಠಡಿಗಳ ನಿರ್ಮಾಣ, ಮಕ್ಕಳಿಗೆ ಉಚಿತ ಪಠ್ಯಪುಸ್ತಕ, ನೋಟ್ ಪುಸ್ತಕ, ಸಮವಸ್ತ್ರ, ಕೈಚೀಲ, ಮಧ್ಯಾಹ್ನದ ಊಟ ಒದಗಿಸುವುದು ಇತ್ಯಾದಿಗಳಿಂದ ಪ್ರಾಥಮಿಕ ಶಿಕ್ಷಣದ ಗುಣಮಟ್ಟ ಮತ್ತು ಶಾಲಾ ಹಾಜರಾತಿಯನ್ನು ಹೆಚ್ಚಿಸುವ ಪ್ರಯತ್ನಗಳು ನಡೆಯುತ್ತಲೇ ಇವೆ. ಆದರೂ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣವು ಸಂಪೂರ್ಣವಾಗಿ ಸುಧಾರಣೆಯಾಗಿರುವುದಿಲ್ಲ. ಆದರೆ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಶಿಕ್ಷಕರು, ಕೊಠಡಿಗಳು, ಕಲಿಕಾ ಸಾಮಗ್ರಿಗಳು, ಆಟದ ಮೈದಾನ, ನೀರಿನ ವ್ಯವಸ್ಥೆ, ಶೌಚಾಲಯ ಮತ್ತು ಕಾಂಪೌಂಡ್ ಮುಂತಾದ ಸೌಲಭ್ಯಗಳು ಸರಿಯಾದ ಪ್ರಮಾಣದಲ್ಲಿ ಲಭ್ಯವಿಲ್ಲದಿರುವುದರಿಂದ ಪ್ರಾಥಮಿಕ ಶಿಕ್ಷಣ ಹಿಂದುಳಿದಿದೆ.

ಉಷಾ ರಾಮ್‌ಕುಮಾರ್, (೨೦೦೨) ಅವರ "ವುಮೆನ್ಸ್ ಎಜ್ಯುಕೇಷನ್ ಇನ್ ವೆಸ್ಟ್ರನ್ ಗಾಟ್ಸ್ ರೀಜನ್ಸ್ ಆಫ್ ಕರ್ನಾಟಕ" ಎಂಬ ಲೇಖನದಲ್ಲಿ ಸರ್ಕಾರವು ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ನೀಡಿದ

ಉತ್ತೇಜನಗಳು ಕೂಡ ಅವರನ್ನು ಶಾಲೆಗೆ ಕರೆತರಲು ಮತ್ತು ಶಿಕ್ಷಣ ಮುಂದುವರಿಸಲು ನೆರವಾಗಿದೆ. ಸಾಕ್ಷರತೆ ಆಂದೋಲನಗಳು, ಮಹಿಳಾ ಸಬಲೀಕರಣಕ್ಕಾಗಿ ನಡೆಸಿದ ಪ್ರಯತ್ನಗಳು, ಅಧ್ಯಯನ ನಡೆಸಿದ ಪ್ರದೇಶದಲ್ಲಿನ ಮಹಿಳೆಯರ ಸಾಕ್ಷರತೆ ಹೆಚ್ಚಿಸಲು ಸಹಾಯವಾಗಿದೆ. ಆದರೂ ಹೆಣ್ಣು ಮಕ್ಕಳಿಗೆ ವಿಸ್ತರಿಸಲಾದ ಶಾಲಾ ಸೌಲಭ್ಯಗಳಲ್ಲಿ ಮತ್ತು ಶಾಲಾ ಶಿಕ್ಷಣದಲ್ಲಿ ಪಾಲ್ಗೊಳ್ಳುವ ಪ್ರಮಾಣದಲ್ಲಿ ಪ್ರಾದೇಶಿಕ ಅಂತರವು ಗಣನೀಯವಾಗಿದೆ ಎಂದಿದ್ದಾರೆ.

ಶಿವರಾಜ ಮತ್ತು ಇತರರು, (೨೦೦೫) ಅವರ "ಶಿಕ್ಷಣ ಮತ್ತು ಪ್ರಾದೇಶಿಕ ಅಸಮತೋಲನ" ಎಂಬ ಲೇಖನದಲ್ಲಿ ಪ್ರಮುಖವಾಗಿ ಶಿಕ್ಷಣವನ್ನು ನಿರ್ಧರಿಸುವ ಅಂಶಗಳಾದ ಶಿಕ್ಷಣದ ಪ್ರಮಾಣ, ಶಾಲೆಗಳ ಸಂಖ್ಯೆ, ಶಿಕ್ಷಕರ ಸಂಖ್ಯೆ, ಶಾಲೆ ಬಿಟ್ಟ ಮಕ್ಕಳ ಸಂಖ್ಯೆ ಇವುಗಳನ್ನು ಆಧರಿಸಿ, ಆಯಾ ಪ್ರದೇಶಕ್ಕೆ ಅನುಗುಣವಾಗಿ ಹೊಂದಿರುವ ಅಸಮಾನತೆಯನ್ನು ವಿವಿಧ ದತ್ತಾಂಶಗಳ ಮೂಲಕ ವಿವರಿಸಿದ್ದಾರೆ. ಎಲ್ಲಾ ರಂಗದಲ್ಲೂ ಪ್ರಾದೇಶಿಕ ಅಸಮಾನತೆ ಎದ್ದುಕಂಡಂತೆ ಶಿಕ್ಷಣದಲ್ಲಿಯೂ ಪ್ರಾದೇಶಿಕ ಅಸಮಾನತೆ ಕಂಡುಬರುತ್ತದೆ. ಸಾಕ್ಷರತೆ ಪ್ರಮಾಣವನ್ನು ವಿಭಾಗವಾರು ನೋಡಿದಾಗ ಗುಲ್ಬರ್ಗದಲ್ಲಿ ಪ್ರತಿಶತ ೫೦.೬೮ರಷ್ಟಿದ್ದರೆ, ಬೆಂಗಳೂರಿನಲ್ಲಿ ಪ್ರತಿಶತ ೮೩.೯೧ರಷ್ಟಿದ್ದೆ. ಸಾಕ್ಷರತೆಯ ಪ್ರಮಾಣವು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿದೆ. ಇದಕ್ಕೆ ಹಲವಾರು ಕಾರಣಗಳನ್ನು ಗುರುತಿಸಿದ್ದಾರೆ. ಸಾಮಾಜಿಕ, ಆರ್ಥಿಕ, ನೈಸರ್ಗಿಕ ಮತ್ತು ರಾಜಕೀಯ ಕಾರಣಗಳು ಬಹುಮುಖ್ಯವಾದವು ಎಂದಿದ್ದಾರೆ. ಇವುಗಳಲ್ಲಿ ನೈಸರ್ಗಿಕ ಸಂಪನ್ಮೂಲಗಳ ಅಸಮರ್ಪಕ ಹಂಚಿಕೆ, ದೋಷಪೂರಿತ ಆರ್ಥಿಕ ನೀತಿ, ದಕ್ಷ ಆಡಳಿತದ ಕೊರತೆ, ಬಂಡವಾಳ ಕೊರತೆ, ಜಾತಿವ್ಯವಸ್ಥೆ, ಅಸಮರ್ಪಕ ಆರ್ಥಿಕ ಯೋಜನೆಗಳು, ಬಡತನ ಇನ್ನು ಮುಂತಾದ ಕಾರಣಗಳನ್ನು ಗುರುತಿಸಿದ್ದಾರೆ. ಸರ್ಕಾರಿ ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳು ಪ್ರಾಥಮಿಕ ಶಿಕ್ಷಣದ ಪ್ರಗತಿಗಾಗಿ ಹಾಕಿಕೊಂಡ ಯೋಜನೆಗಳು ವಿಫಲವಾಗುತ್ತಿವೆ. ಇದಕ್ಕೆ ಆಡಳಿತ ಯಂತ್ರದ ಕೊರತೆಯಿರಬಹುದು ಅಥವಾ ರಾಜಕೀಯ ಪ್ರಭಾವಗಳಂತಹ ಹಲವಾರು ಕಾರಣಗಳಿವೆ. ಈ ಎಲ್ಲಾ ಕಾರಣಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಸರ್ಕಾರ ಮತ್ತು ಆಡಳಿತ ವರ್ಗ ರಾಜ್ಯದಲ್ಲಿ ಶೈಕ್ಷಕಣಿಕವಾಗಿ ಹಿಂದುಳಿದ ಪ್ರದೇಶಗಳತ್ತ ಹೆಚ್ಚು ಗಮನಹರಿಸಬೇಕು. ಇಲ್ಲದಿದ್ದರೆ ಶೈಕ್ಷಣಿಕ ಸೌಲಭ್ಯದಿಂದ ವಂಚಿತವಾದ ಜಿಲ್ಲೆಯು ಹಿಂದುಳಿಯುತ್ತಲೆ ಹೋಗುತ್ತವೆ. ಸೌಲಭ್ಯಗಳು ಪಡೆದುಕೊಂಡ ಜಿಲ್ಲೆಯು ಹಾಗೆಯೇ ಮುಂದುವರಿಯುತ್ತವೆ, ಇಲ್ಲದಿದ್ದರೆ ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸಲು ಸಾಧ್ಯವಿಲ್ಲ ಎಂದು ವಾದಿಸುತ್ತಾರೆ.

ದಯಾನಂದ, (೨೦೦೫) ಅವರ "ಲಿಂಗ ಅಸಮಾನತೆಯ ವಿಭಿನ್ನ ಮುಖಗಳು" ಎಂಬುವುದರಲ್ಲಿ ಶತಮಾನಗಳಿಂದಲೂ ಲಿಂಗ ಅಸಮಾನತೆ ಮಾನವ ಸಮಾಜವನ್ನು ಕಾಡುತ್ತಿದೆ. ಇಂದಿನ ಆಧುನಿಕ ಕಂಪ್ಯೂಟರ್ ಯುಗವು ಇದರಿಂದ ಹೊರತಾಗಿಲ್ಲ. ಪ್ರಪಂಚದ ಅರ್ಧದಷ್ಟು ಜನರು ಮಹಿಳೆಯರೇ ಆದರೂ ಅವರು ಪುರುಷರಿಗೆ ಸಮಾನರಾಗಿಲ್ಲದಿರುವುದು, ಸಾಮಾಜಿಕ ದುರಂತವೇ ಸರಿ ಎಂದು

ತಿಳಿಸುತ್ತಾರೆ. ಇಂದು ಮಹಿಳೆ ವಿವಿಧ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿದ್ದಾಳೆ. ಇಂತಹ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಲಿಂಗ ಅಸಮಾನತೆಯನ್ನು ಹೋಗಲಾಡಿಸುವ ಅಗತ್ಯವಿದೆ ಎಂದು ಪ್ರತಿಪಾದಿಸಿದ್ದಾರೆ.

ಮಾಲಿನಿ ಭಟ್ಟಾಚಾರ್ಯ, (೨೦೦೩) ಅವರ "ಭಾರತದಲ್ಲಿ ಶಿಕ್ಷಣ ಮತ್ತು ಮಹಿಳೆ" ಎನ್ನುವ ಲೇಖನದಲ್ಲಿ ಮಹಿಳೆಯರಿಗೆ ಕೊಡುವ ಶಿಕ್ಷಣವು ಸಾಮಾಜಿಕ ಜನತೆಯ ಎಲ್ಲಾ ರೂಪಗಳನ್ನು ಪ್ರಶ್ನಿಸುವಂತದಾಗಿರಬೇಕು. ಸಮಾಜದ ವಿವಿಧ ಸ್ತರದಿಂದ ಬರುವ ಮಹಿಳೆಯರು ವಿವಿಧ ರೀತಿಯ ಸಾಮಾಜಿಕ ಮತ್ತು ರಾಜಕೀಯ ಅಧೀನತೆಗೆ ಒಳಗಾಗಿರುತ್ತಾರೆ. ಶಿಕ್ಷಣ ವ್ಯವಸ್ಥೆಗೆ ಕಾರಣವಾದ ಸಾಮಾಜಿಕ ವ್ಯವಸ್ಥೆಯಲ್ಲಿಯೇ ಕ್ರಾಂತಿಕಾರಕ ಬದಲಾವಣೆಯನ್ನು ತರುವುದು ಅಗತ್ಯವಾಗಿದೆ. ಇದು ಜನಪರವಾದ ಪ್ರಜಾಸತ್ತಾತ್ಮಕವಾದ ಚಳುವಳಿಯಿಂದ ಮಾತ್ರ ಸಾಧ್ಯ. ಅಂತಹ ಚಳುವಳಿಯಲ್ಲಿ ಮಹಿಳೆಯರೂ ಪ್ರಮುಖ ಪಾತ್ರವಹಿಸಬೇಕು.

ಜ್ಯೋತಿ.ಎಂ., (೨೦೦೭) ಅವರ 'ಮಹಿಳಾ ಸಾಮಾಜಿಕತೆ' ಎನ್ನುವ ಪುಸ್ತಕದಲ್ಲಿ ಪ್ರಮುಖವಾಗಿ ಎರಡು ಭಾಗವಾಗಿ ವಿಂಗಡಿಸಿಕೊಂಡಿದ್ದಾರೆ. ಇದರಲ್ಲಿ ಸಮಾಜ ಮತ್ತು ಮಹಿಳೆ ಎನ್ನುವ ಭಾಗದಲ್ಲಿ ಶಿಕ್ಷಣ ವ್ಯವಸ್ಥೆ ಮತ್ತು ಮಹಿಳೆಯನ್ನು ಕುರಿತು ಚರ್ಚಿಸಿದ್ದಾರೆ. ಭಾರತದ ಜನಸಂಖ್ಯೆಯಲ್ಲಿ ಅರ್ಧದಷ್ಟು ಮಹಿಳೆಯರಿದ್ದಾರೆ. ಆದರೆ ಇಲ್ಲಿ ಮಹಿಳಾ ಸಾಕ್ಷರತೆ ಮತ್ತು ಶಿಕ್ಷಣ ಅತ್ಯಂತ ಕಡಿಮೆ ಮಟ್ಟದಲ್ಲಿದೆ. ಬಹುಮಟ್ಟಿಗೆ ಮಹಿಳೆಯರು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಇದಕ್ಕೆ ಕಾರಣ ನಮ್ಮ ಸಾಮಾಜಿಕ ವ್ಯವಸ್ಥೆ ಹಾಗೂ ಶಾಲಾ ಪದ್ಧತಿ. ಇದರ ಜೊತೆಗೆ ಕುಟುಂಬಗಳಲ್ಲಿ ಇಂದಿಗೂ ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ತಾತ್ಸಾರ ಮನೋಭಾವವಿದೆ. ಗಂಡು ಮತ್ತು ಹೆಣ್ಣುಮಕ್ಕಳ ನಡುವೆ ತಾರತಮ್ಯ ಪಕ್ಷಪಾತವಿದೆ. ಹೆಣ್ಣುಮಕ್ಕಳ ಶಾಲಾ ಭಾಗವಹಿಸುವಿಕೆಗೆ ಸಾಂಪ್ರದಾಯ, ಕಟ್ಟುಪಾಡುಗಳು ಬಾಲಕಿಯರ ಮೇಲೆ ಹೆಚ್ಚು ಹೇರಲಾಗುತ್ತಿದೆ. ಹಾಗೆಯೇ ಹೆಣ್ಣುಮಕ್ಕಳಿಗೆ ಕೌಟುಂಬಿಕ, ಸಾಮಾಜಿಕ ಶಿಕ್ಷಣ ಸಂಸ್ಥೆಗಳಲ್ಲಿ ಲಿಂಗಭೇದದಿಂದಾಗಿಯೇ ಉತ್ತಮ ಕಲಿಕೆಯ ಅವಕಾಶ ದೊರೆಯುತ್ತಿಲ್ಲ ಎಂಬ ಅಭಿಪ್ರಾಯವನ್ನು ಲೇಖಕರು ವ್ಯಕ್ತಪಡಿಸಿದ್ದಾರೆ.

ಸಮೀಕ್ಷಿಸಿದ ಎಲ್ಲಾ ಅಧ್ಯಯನಗಳು ಅಖಿಲಭಾರತ ಮಟ್ಟದಿಂದ ಈಶಾನ್ಯ ರಾಜ್ಯಗಳು, ಕೋಲ್ಕತ್ತಾದ ಕೊಳಗೇರಿ ಪ್ರದೇಶ, ಮಹಾರಾಷ್ಟ್ರ, ಕರ್ನಾಟಕ ಮತ್ತು ಹೈದ್ರಾಬಾದ್ ಕರ್ನಾಟಕ ಪ್ರದೇಶಗಳವರೆಗೆ ಪ್ರಾಥಮಿಕ ಶಿಕ್ಷಣದಲ್ಲಿ ಪ್ರಾದೇಶಿಕ, ಜಾತಿ, ವರ್ಗ, ಲಿಂಗ ಮತ್ತು ಗುಣಮಟ್ಟಗಳಲ್ಲಿ ಭಿನ್ನತೆಗಳಿರುವುದನ್ನು ಗುರುತಿಸಿವೆ. ಇದಕ್ಕೆಲ್ಲಾ ಬಡತನ, ಭೌಗೋಳಿಕ, ಸಾಮಾಜಿಕ, ಸಾಂಸ್ಕೃತಿಕ, ಮೂಲಸೌಲಭ್ಯ, ಶಿಕ್ಷಕರ ಕೊರತೆ ಮತ್ತು ಪೋಷಕರ ಭಾವನೆ ಇತ್ಯಾದಿ ಅಂಶಗಳು ಕಾರಣವಾಗಿರುವುದು ಸಮೀಕ್ಷಿಸಿದ ಅಧ್ಯಯನಗಳಿಂದ ತಿಳಿಯುತ್ತದೆ. ಆದರೆ ಇದುವರೆಗಿನ ಅಧ್ಯಯನಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಶೈಕ್ಷಣಿಕ ಸ್ಥಿತಿಗತಿಗಳ ಬಗ್ಗೆ ಗಮನಹರಿಸಿದ ಅಧ್ಯಯನಗಳು ವಿರಳ ಎನಿಸುತ್ತದೆ. ಈ ನಿಟ್ಟಿನಲ್ಲಿ "ಬಡತನವು ಶಿಕ್ಷಣದ ಕೊರತೆಗೆ ಕಾರಣ ಮತ್ತು ಪರಿಣಾಮವಾಗಿದ್ದು, ಭೌಗೋಳಿಕ,

ಸಾಮಾಜಿಕ, ಸಾಂಸ್ಕೃತಿಕ ಮತ್ತು ದೈಹಿಕ ಕಾರಣಗಳಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ದುರ್ಬಲ ವರ್ಗಗಳು ಶೈಕ್ಷಣಿಕ ಸೌಲಭ್ಯ ಪಡೆಯಲು ಸಾಧ್ಯವಾಗಿಲ್ಲ" ಎಂಬುದನ್ನು ಗುರುತಿಸಿರುವ ಪದ್ಮ ರಾಮಚಂದ್ರನ್ ಮತ್ತು ವಸಂತಕುಮಾರ್‌ರವರ ಅಧ್ಯಯನವು ಉಲ್ಲೇಖನಾರ್ಹವಾಗಿದೆ.

ಅದರಂತೆ "ಗ್ರಾಮೀಣ ಪ್ರದೇಶದ ದುರ್ಬಲ ವರ್ಗದ ಮಕ್ಕಳ ಪ್ರಾಥಮಿಕ ಶಿಕ್ಷಣ, ದೈಹಿಕ ಶಿಕ್ಷಣ ಮತ್ತು ಬೌದ್ಧಿಕ ಬೆಳವಣಿಗೆಗೆ ಅನುಕೂಲವಾದ ಪರಿಸರ ಮತ್ತು ಪರಿಕರಗಳೆಲ್ಲ ಅಗತ್ಯ"ವೆಂದು ಹೇಳಿರುವ ಡಿ.ವಿ. ಹೆಗಡೆಯವರ ಅಧ್ಯಯನವೂ ಸಂಬಂಧಪಟ್ಟದ್ದಾಗಿದೆ. ಆದರೆ ವಾಸ್ತವವಾಗಿ ಬಡತನ, ಭೌಗೋಳಿಕ, ಸಾಮಾಜಿಕ, ಸಾಂಸ್ಕೃತಿಕ ಅಥವಾ ದೈಹಿಕ ಕಾರಣಗಳೊಂದಿಗೆ ಇನ್ನಿತರೆ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಅಂಶಗಳು ಕೂಡಾ ಶಿಕ್ಷಣದ ಕೊರತೆಗೆ ಕಾರಣವಾಗುತ್ತವೆ. ಅಲ್ಲದೆ ದೈಹಿಕ ಶಿಕ್ಷಣ ಮತ್ತು ಬೌದ್ಧಿಕ ಬೆಳವಣಿಗೆಗೆ ಅನುಕೂಲವಾದ ಪರಿಸರ ಮತ್ತು ಪರಿಕರಗಳ ಜೊತೆಗೆ ಶಿಕ್ಷಣ ಪಡೆದುಕೊಳ್ಳುವ ಇಚ್ಛಾಶಕ್ತಿ ಮತ್ತು ಮನೋಪ್ರವೃತ್ತಿಗಳು ಸಹ ಗ್ರಾಮೀಣ ಪ್ರದೇಶದ ದುರ್ಬಲ ವರ್ಗದ ಮಕ್ಕಳ ಪ್ರಾಥಮಿಕ ಶಿಕ್ಷಣಕ್ಕೆ ಅಗತ್ಯವಾಗಿರಬೇಕಾಗುತ್ತವೆ. ಆದ್ದರಿಂದ ಈ ಎಲ್ಲಾ ಅಧ್ಯಯನಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರು ಶೈಕ್ಷಣಿಕವಾಗಿ ಯಾಕೆ ಹಿಂದುಳಿದಿದ್ದಾರೆ ಎಂಬ ಅಂಶವನ್ನು ಸ್ಥಳೀಯ ಸಾಮಾಜಿಕ, ಸಾಂಸ್ಕೃತಿಕ ನೆಲೆಯಲ್ಲಿ ಅರ್ಥಮಾಡಿಕೊಳ್ಳುವ ಮೂಲಕ ಶೈಕ್ಷಣಿಕ ಸ್ಥಿತಿಗತಿಗಳನ್ನು ವಿವರಿಸಲು ವಿಫಲವಾಗಿವೆ.

ಹೀಗೆ ಪ್ರಾಥಮಿಕ ಶಿಕ್ಷಣ ಕುರಿತು ನಡೆದಿರುವ ಅಧ್ಯಯನಗಳು ಬಹಳಷ್ಟು ಸಿಗುತ್ತವೆ. ವಿಶೇಷವೆಂದರೆ ೧೯೯೦ರ ದಶಕದ ಮೊದಲಾರ್ಧ ಭಾಗದಲ್ಲಿ ನಡೆದಿರುವ ಬಹಳಷ್ಟು ಅಧ್ಯಯನಗಳು ಶಿಕ್ಷಣ ವ್ಯವಸ್ಥೆ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಇಡಿಯಾಗಿ ನೋಡಿವೆ. ಆದರೆ ೧೯೯೦ರ ದಶಕದ ಕೊನೆಯ ಭಾಗದಲ್ಲಿ ಹಾಗೂ ನಂತರ ನಡೆದ ಕೆಲವು ಅಧ್ಯಯನಗಳು ಶಿಕ್ಷಣ ವ್ಯವಸ್ಥೆ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಬಿಡಿಬಿಡಿಯಾಗಿ ನೋಡುವ ಮೂಲಕ ಶೈಕ್ಷಣಿಕ ಅಭಿವೃದ್ಧಿಗೆ ಇರಬಹುದಾದ ಸ್ಥಳೀಯ ಸಾಮಾಜಿಕ ತೊಡಕುಗಳನ್ನು ವಿಶ್ಲೇಷಿಸಿವೆ (ರೇಖಾಕೌಲ್, ೨೦೦೧; ರೇಖಾ ವಾಜೀರ್, ೨೦೦೦; ಬಾಟ ಕಿರಣ್, ೧೯೯೮; ಬ್ಯಾನರ್ಜಿ ಸುಮಂತ್ ೧೯೯೨; ಜೀನ್ ಡ್ರೀಜ್ ಮತ್ತು ಅಮರ್ತ್ಯಸೇನ್, ೧೯೯೬; ಡ್ರೀಜ್ ಮತ್ತು ಇತರರು, ೧೯೯೬; ರೇಖಾಕೌಲ್, ೧೯೯೩; ಎನ್. ಕೃಷ್ಣಾ, ೨೦೦೦; ಜೋಸಫ್ ಥಾಮಸ್, ೨೦೦೦; ವಿಮಲಾ ರಾಮಚಂದ್ರನ್, ೧೯೯೯, ೨೦೦೩; ೨೦೦೪; ಡೀಜ್ ಮತ್ತು ಅಮರ್ತ್ಯಸೇನ್, ೨೦೦೧; ೨೦೦೨;). ಇದನ್ನು ಹೀಗೂ ಹೇಳಬಹುದು. ಶಾಲೆ ಎಂಬುದು ಒಂದು ಸಾಮಾಜಿಕ ಸಂಸ್ಥೆ. ಈ ಸಂಸ್ಥೆಯ ಜೊತೆ ಸ್ಥಳೀಯ ಸಮುದಾಯದ ಕೂಡುಕೊಳ್ಳುವಿಕೆ ಎಷ್ಟರಮಟ್ಟಿಗೆ ಇದೆ ಎಂಬುದನ್ನು ಅರ್ಥಮಾಡಿಕೊಂಡಾಗ ಸಾಮಾಜಿಕ ವ್ಯವಸ್ಥೆಗೂ ಮತ್ತು ಶಾಲಾ ವ್ಯವಸ್ಥೆಗೂ ಇರುವ ಸಂಬಂಧವನ್ನು ಹಾಗೂ ಅದರ ಪರಿಣಾಮಗಳನ್ನು ಹಿಡಿದಿಡಲು ಸಾಧ್ಯ (ಆರ್. ಗೋವಿಂದ, ೧೯೮೩; ಶ್ರೀ ವಾಸ್ತವ, ೧೯೯೭; ಪ್ರೋಬ್, ೧೯೯೯; ವಾಸವಿ, ೨೦೦೦; ವೈದ್ಯನಾಥನ್

ಮತ್ತು ನಾಯರ್, ೨೦೦೧; ವಿಮಲಾ ರಾಮಚಂದ್ರನ್, ೨೦೦೩; ರೇಖಾ ಕೌಲ್, ೨೦೦೧; ರೇಖಾ ವಾಜೀರ್, ೨೦೦೦; ಎಚ್.ಡಿ. ಪ್ರಶಾಂತ್, ೨೦೦೫). ಈ ಎಲ್ಲಾ ಅಧ್ಯಯನಗಳು ಗ್ರಾಮೀಣ ಪ್ರದೇಶದಲ್ಲಿ ಇರುವ ಪೋಷಕರು ತಮ್ಮ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆಸಕ್ತಿಯನ್ನು ತೋರಿಸುತ್ತಿದ್ದಾರೆ ಎಂಬ ವಾದವನ್ನು ಮುಂದಿಟ್ಟಿದೆ. ಈ ಅಧ್ಯಯನಗಳು ಶಿಕ್ಷಣದ ಬಗ್ಗೆ ಪೋಷಕರಲ್ಲಿ ಇರುವ ವಿಭಿನ್ನ ನಡವಳಿಕೆಗಳನ್ನು ಅತ್ಯಂತ ಸೂಕ್ಷ್ಮವಾಗಿ ಮತ್ತು ವಿಮರ್ಶಾತ್ಮಕವಾಗಿ ವಿವರಿಸಿವೆ. ಗ್ರಾಮೀಣ ಪ್ರದೇಶದ ಬಹುತೇಕ ಪೋಷಕರು ಅದರಲ್ಲೂ ಶೋಷಣೆಗೆ ಒಳಗಾದ ತಳಸಮುದಾಯಗಳ ಪೋಷಕರು ತಮ್ಮ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡುತ್ತಿರುವುದನ್ನು ಅನೇಕ ಆಧಾರಗಳ ಜೊತೆ ಈ ಅಧ್ಯಯನಗಳು ತಿಳಿಸಿವೆ. ಈ ಲೇಖಕರು ತಮ್ಮ ಅಧ್ಯಯನಗಳಲ್ಲಿ ಶಿಕ್ಷಣ ವ್ಯವಸ್ಥೆ-ಸಾಮಾಜಿಕ ವ್ಯವಸ್ಥೆಯನ್ನು ಅಧ್ಯಯನ ಮಾಡುವ ಮೂಲಕ ಶಾಲಾ ಶೈಕ್ಷಣಿಕ ಅಭಿವೃದ್ಧಿಗೆ ಇರಬಹುದಾದ ಸಾಮಾಜಿಕ ತೊಡಕುಗಳನ್ನು ವಿಶ್ಲೇಷಿಸಿರುತ್ತಾರೆ.

ನಾವು ಗಮನಿಸಿದಂತೆ ಪ್ರಾಥಮಿಕ ಶಾಲಾ ಶಿಕ್ಷಣ ಕುರಿತು ೧೯೯೦ರ ದಶಕದಲ್ಲಿ ನಡೆದಿರುವ ಬಹುತೇಕ ಅಧ್ಯಯನಗಳು ಪ್ರಮುಖವಾಗಿ ಎರಡು ಅಂಶಗಳ ಕಡೆಗೆ ಹೆಚ್ಚಿನ ಒತ್ತು ನೀಡಿರುವುದು ತಿಳಿದುಬರುತ್ತದೆ. ಒಂದು, ಶಾಲೆಯನ್ನು ಸ್ಥಳೀಯ ಸಾಮಾಜಿಕ ರಚನೆಯಿಂದ ಪ್ರತ್ಯೇಕಿಸಿ ಶಾಲಾ ಪ್ರಕ್ರಿಯೆಯನ್ನು ವಿಶ್ಲೇಷಣೆಗೆ ಒಳಪಡಿಸಿರುತ್ತವೆ. ಎರಡು, ಶಾಲಾ ಪ್ರಕ್ರಿಯೆಯ ಇನ್‌ಪುಟ್ ಮತ್ತು ಔಟ್‌ಪುಟ್ ಅಂಶಗಳಿಗೆ ಹೆಚ್ಚಿನ ಮಹತ್ವ ನೀಡಿರುತ್ತವೆ. ಕೆಲವು ಅಧ್ಯಯನಗಳು ಸಮುದಾಯದ ಭಾಗವಹಿಸುವಿಕೆಗೆ ಹೆಚ್ಚಿನ ಒತ್ತು ನೀಡಿವೆ. ಈ ಹಿನ್ನೆಲೆಯಲ್ಲಿ ಶಾಲಾ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಯನ್ನು ಸ್ಥಳೀಯ ಸಾಮಾಜಿಕ-ಆರ್ಥಿಕ ಗತಿಶೀಲತೆಯು ಎಷ್ಟರಮಟ್ಟಿಗೆ ಪ್ರಭಾವಿಸಿವೆ ಎಂಬುದನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವನ್ನು ಉದ್ದೇಶಿತ ಅಧ್ಯಯನದಲ್ಲಿ ಮಾಡಲಾಗುವುದು.

ಈ ಎಲ್ಲಾ ಅಧ್ಯಯನಗಳು ಇನ್‌ಪುಟ್ ಎನ್ನುವುದನ್ನು ಮೂಲಸೌಲಭ್ಯಗಳು, ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಅನುಪಾತ, ಬೋಧನಾ ವಿಧಾನ, ಬೋಧನಾ ಸಲಕರಣೆ ಇತ್ಯಾದಿಗೆ ಸಂಬಂಧಿಸಿದಂತೆ ಹೇಳಿವೆ. ಹಾಗೆಯೇ ಔಟ್‌ಪುಟ್ ಎನ್ನುವುದನ್ನು ವಿದ್ಯಾರ್ಥಿಗಳ ಸಾಧನೆ ಎನ್ನುವ ರೀತಿಯಲ್ಲಿ ಬಳಸಿಕೊಂಡಿವೆ. ಕೇವಲ ಈ ಎರಡು (ಇನ್‌ಪುಟ್ ಮತ್ತು ಔಟ್‌ಪುಟ್) ಅಂಶಗಳಿಂದ ಶಾಲಾ ಶಿಕ್ಷಣದ ಅಭಿವೃದ್ಧಿಯ ಪರಿಣಾಮವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಶೈಕ್ಷಣಿಕ ಪ್ರಕ್ರಿಯೆಯನ್ನು ಸಾಮಾಜಿಕ ಪರಿಸರದಿಂದ ಹೊರತುಪಡಿಸಿ ಕೇವಲ ಶಾಲೆಯ ಪರಿಸರಕ್ಕೆ ಸೀಮಿತಗೊಳಿಸಿ ನೋಡುವುದಕ್ಕೆ ಬದಲಾಗಿ, ಒಟ್ಟು ಸಾಮಾಜಿಕ ಪರಿಸರದ ಪ್ರಕ್ರಿಯೆಯೊಟ್ಟಿಗೆ ನೋಡಬೇಕಾದ ಅವಶ್ಯಕತೆಯಿದೆ.

ಇದುವರೆಗೂ ನಡೆದಿರುವ ಅಧ್ಯಯನಗಳಿಂದ ಮೂರು ಪ್ರಮುಖ ಅಂಶಗಳು ವ್ಯಕ್ತವಾಗುತ್ತವೆ.

ಒಂದು : ಶೈಕ್ಷಣಿಕ ನೀತಿ-ನಿಯಮಗಳು ಮತ್ತು ಶಿಕ್ಷಣ ಆಯೋಗಗಳ ವರದಿಗಳನ್ನು ಆಧರಿಸಿ ಹೇಳುವುದಾದರೆ, ವಿಕೇಂದ್ರೀಕರಣ ಮಾದರಿಯ ಆಡಳಿತ, ಶಾಲಾ ನಿರ್ವಹಣೆಯಲ್ಲಿ ಸ್ಥಳೀಯ ಸಿವಿಲ್

ಸೊಸೈಟಿಯ ಪಾತ್ರ ಹೆಚ್ಚಾಗುತ್ತಿರುವುದು, ಶಾಲಾ ಆಡಳಿತಕ್ಕೆ ಸಂಬಂಧಿಸಿದಂತೆ ಸ್ಥಳೀಯ ಸಮುದಾಯವನ್ನು ಸಬಲೀಕರಣಗೊಳಿಸುವುದು ಇತ್ಯಾದಿ.

ಎರಡು : ಸಾರ್ವಜನಿಕ ಮತ್ತು ಖಾಸಗಿ ವಲಯ (ಕ್ಷೇತ್ರಗಳು) ಸೇರಿ ಇಂದು ಪ್ರಾಥಮಿಕ ಶಿಕ್ಷಣ ಕ್ಷೇತ್ರ ಬೃಹತ್ ವ್ಯವಸ್ಥೆಯಾಗಿ ರೂಪುಗೊಂಡಿದೆ. ಭಾರತದಲ್ಲಿ ಸುಮಾರು ೬೧೦೭೬೩ ಪ್ರಾಥಮಿಕ ಶಾಲೆಗಳಿವೆ. ಕರ್ನಾಟಕದಲ್ಲಿ ಇವುಗಳ ಸಂಖ್ಯೆ ೪೬,೬೦೦ (ಗೋವಿಂದ.ಆರ್, ೨೦೦೨;ಕರ್ನಾಟಕ ಸರ್ಕಾರ, ೧೯೯೯). ಹೀಗೆ ಗಾತ್ರದ ದೃಷ್ಟಿಯಿಂದ ಪ್ರಾಥಮಿಕ ಶಿಕ್ಷಣ ರಂಗವೇ ಬೃಹತ್ತಾಗಿ ಬೆಳೆದಿದೆ. ಆದರೆ ಗುಣದ ದೃಷ್ಟಿಯಿಂದ ಅಲ್ಲಿ ಸಮಸ್ಯೆಗಳಿವೆ ಎಂಬುದನ್ನು ಬಹುತೇಕ ಎಲ್ಲಾ ಅಧ್ಯಯನಗಳು ಗುರುತಿಸಿರುವುದು.

ಮೂರು : ಶೈಕ್ಷಣಿಕ ವ್ಯವಸ್ಥೆಯ ಗತಿಶೀಲತೆಯನ್ನು ಕುರಿತು ಇದುವರೆಗೂ ನಡೆದಿರುವ ಬಹುತೇಕ ಅಧ್ಯಯನಗಳ (ಕೆಲವನ್ನು ಹೊರತುಪಡಿಸಿ) ವ್ಯಾಪ್ತಿಯು ರಾಜ್ಯ, ಜಿಲ್ಲೆ, ಹೆಚ್ಚೆಂದರೆ ತಾಲ್ಲೂಕು ಮಟ್ಟಕ್ಕೆ ಸೀಮಿತವಾಗಿವೆ. ಕೆಲವು ಅಧ್ಯಯನಗಳು ಗ್ರಾಮಮಟ್ಟದಲ್ಲಿ ನಡೆದಿದ್ದರೂ ಗ್ರಾಮ ಪಂಚಾಯತಿ ಮಟ್ಟದ ಶೈಕ್ಷಣಿಕ ವ್ಯವಸ್ಥೆಯ ಸಾಮಾಜಿಕ ಸ್ವರೂಪವನ್ನು ಹಿಡಿದಿಡುವಲ್ಲಿ ವಿಫಲವಾಗಿವೆ. ಗ್ರಾಮ ಮಟ್ಟದ ಶೈಕ್ಷಣಿಕ ಸ್ಥಿತಿ-ಗತಿಗಳನ್ನು ಪ್ರಭಾವಿಸುವ ಅಂಶಗಳಿಗೆ ಹೆಚ್ಚಿನ ಆದ್ಯತೆ ನೀಡಿ ಅರ್ಥಮಾಡಿಕೊಳ್ಳಬೇಕಾದ ಸಂದರ್ಭದಲ್ಲಿ ನಾವು ಇದ್ದೇವೆ.

ನಾವು ಸಮೀಕ್ಷಿಸಿದ ಅಧ್ಯಯನಗಳು ಆರ್ಥಿಕ ಬೆಳವಣಿಗೆಯ ಮಾನದಂಡದಲ್ಲಿ ಅಂಕಿ-ಅಂಶ ಗಳಿಂದ ಕೂಡಿದ ಅಧ್ಯಯನಗಳಾಗಿರುತ್ತವೆ. ಅಂಕಿ-ಅಂಶಗಳಿಂದ ಕೂಡಿದ ಅಧ್ಯಯನಗಳು ವಿವಿಧ ಅಧ್ಯಯನ ತಂಡ ಮತ್ತು ಆಯೋಗಗಳು ನೀಡಿದ ವರದಿಗಳ ರೀತಿಯಲ್ಲಿರುತ್ತವೆ ಹಾಗೂ ಸರ್ಕಾರದ ವಿವಿಧ ಇಲಾಖೆಗಳು ತಯಾರಿಸಿದ ವರದಿಗಳು ಆಗಿರುತ್ತವೆ. ಈ ಅಂಕಿ-ಸಂಖ್ಯೆ ಆಧಾರಿತ ವರದಿಗಳಿಂದ ಕೂಡಿದ ಅಧ್ಯಯನಗಳು ಮಕ್ಕಳ ಶಾಲಾ ಭಾಗವಹಿಸುವಿಕೆಯ ವಾಸ್ತವಿಕ ಚಿತ್ರಣ ನೀಡಲು ಹಿಂದುಳಿಯುತ್ತವೆ. ಅಲ್ಲದೇ ಮಕ್ಕಳ ಶಾಲಾ ಭಾಗವಹಿಸುವಿಕೆಗೆ ಸಾಮಾಜಿಕ, ಸಾಂಸ್ಕೃತಿಕ ಅಂಶಗಳನ್ನು ಗುರುತಿಸುವಲ್ಲಿ ಅಧ್ಯಯನಗಳು ವಿಫಲವಾಗುತ್ತವೆ. ಇದರ ಅರ್ಥ ಮಕ್ಕಳ ಶಾಲಾ ಭಾಗವಹಿಸುವಿಕೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಅಂಕಿ-ಸಂಖ್ಯೆ ಆಧಾರಿತ ಅಧ್ಯಯನಗಳು ವಿಫಲವೆಂದಲ್ಲ, ಆದರೆ ಇವು ಸ್ಥಳೀಯ ಸಾಂಸ್ಕೃತಿಕ ನೆಲೆಯಲ್ಲಿ ಮಕ್ಕಳ ಶಾಲಾ ಭಾಗವಹಿಸುವಿಕೆಯನ್ನು ಅರ್ಥ ಮಾಡಿಕೊಳ್ಳುವಲ್ಲಿ ಸ್ವಲ್ಪಮಟ್ಟಿಗೆ ವಿಫಲವಾಗಿವೆ ಎಂಬುದು ತಿಳಿಯುತ್ತದೆ. ಇಲ್ಲಿ ನಮಗೆ ಒಂದು ಪ್ರಶ್ನೆ ಎದುರಾಗುತ್ತದೆ. ಇದಕ್ಕೆ ಸಾಂಸ್ಕೃತಿಕ ಅಧ್ಯಯನಗಳು ಪರಿಹಾರ ಎಂಬುದು ನಮ್ಮ ವಾದವಲ್ಲ. ಆದರೆ ಈ ಎರಡೂ ಅಧ್ಯಯನಗಳಲ್ಲಿನ ಸಾಮ್ಯತೆ ಮತ್ತು ಭಿನ್ನತೆಗಳನ್ನು ವಸ್ತುನಿಷ್ಟವಾಗಿ ವಿಶ್ಲೇಷಿಸಿ ಎರಡೂ ಅಧ್ಯಯನಗಳನ್ನೊಳಗೊಂಡಂತೆ ದಲಿತರ ಶೈಕ್ಷಣಿಕ ಪರಿಸರವನ್ನು ಅರ್ಥಮಾಡಿಕೊಳ್ಳಲು ಈ ಅಧ್ಯಯನದಲ್ಲಿ ಪ್ರಯತ್ನಿಸಲಾಗಿದೆ.

ಈಗಾಗಲೇ ನಡೆದಿರುವ ಅಧ್ಯಯನಗಳ ಹಿನ್ನೆಲೆಯಲ್ಲಿ ಶಾಲಾ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಯಲ್ಲಿ ಸ್ಥಳೀಯ ಸಾಮಾಜಿಕ, ಆರ್ಥಿಕ ಅಂಶಗಳ ಪಾತ್ರ ಎಷ್ಟರಮಟ್ಟಿಗೆ ಇದೆ ಎಂಬುದನ್ನು ಅರ್ಥಮಾಡಿಕೊಳ್ಳುವ ಉದ್ದೇಶ ನಮ್ಮದು. ಇಲ್ಲಿ ನಮಗೆ ಪ್ರಮುಖವಾಗಿ ಎದುರಾಗುವ ಪ್ರಶ್ನೆಯೆಂದರೆ, ಇದುವರೆಗೂ ನಡೆದಿರುವ ಅಧ್ಯಯನಗಳಲ್ಲಿ ಈ ಕುರಿತು ಚರ್ಚೆಗಳು ನಡೆದಿಲ್ಲವೇ ಎನ್ನುವುದು, ಈಗ ನಡೆದಿರುವ ಅಧ್ಯಯನಗಳಲ್ಲಿ ಆರ್ಥಿಕ ಅಥವಾ ಸಾಮಾಜಿಕ ಅಂಶಗಳಲ್ಲಿ ಯಾವುದಾದರೂ ಒಂದು ಅಂಶಕ್ಕೆ ಹೆಚ್ಚಿನ ಆದ್ಯತೆ ನೀಡಿರುವುದು ತಿಳಿದುಬರುತ್ತದೆ. ಹೀಗಾಗಿ ಪ್ರಸ್ತುತ ಅಧ್ಯಯನದಲ್ಲಿ ಎರಡು ಅಂಶಗಳು (ಸಾಮಾಜಿಕ ಮತ್ತು ಆರ್ಥಿಕ) ಎಷ್ಟರಮಟ್ಟಿಗೆ ಹೇಗೆ ಶಾಲಾ ಶಿಕ್ಷಣದ ಅಭಿವೃದ್ಧಿಯ ಮೇಲೆ ಪರಿಣಾಮವನ್ನು ಉಂಟುಮಾಡುತ್ತವೆ ಎಂಬುದನ್ನು ಕಂಡುಕೊಳ್ಳುವ ಉದ್ದೇಶವನ್ನು ಹೊಂದಿದೆ.

೧.೫. ಸಮಸ್ಯೀಕರಣ

ಅಧ್ಯಯನಗಳನ್ನು ಸಮೀಕ್ಷೆ ಮಾಡಿದ ನಂತರ ನಮಗೆ ಅನೇಕ ಪ್ರಶ್ನೆಗಳು ಎದುರಾಗುತ್ತವೆ. ಶಾಲಾ ಭಾಗವಹಿಸುವಿಕೆಯಲ್ಲಿ ಮಕ್ಕಳು ಹಿಂದುಳಿಯಲು ಕಾರಣಗಳು ಯಾವುವು? ಆ ಕಾರಣಗಳು ಸಾಮಾಜಿಕವಾದವೇ? ಆರ್ಥಿಕ ಸ್ವರೂಪದವೇ? ಶೈಕ್ಷಣಿಕವಾದವೇ? ಸಾಂಸ್ಕೃತಿಕ ಸ್ವರೂಪದವೇ? ಆರ್ಥಿಕ ಕಾರಣ ಯಾವ ಬಗೆಯವು? ಶೈಕ್ಷಣಿಕ ಕಾರಣಗಳು ಯಾವ ಬಗೆಯವು? ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರಣಗಳು ಮಕ್ಕಳ ಶಾಲಾ ಭಾಗವಹಿಸುವಿಕೆಯಲ್ಲಿ ಹೇಗೆ ತಡೆಯೊಡ್ಡುತ್ತಿವೆ? ಮಕ್ಕಳು ಶಾಲೆಯಲ್ಲಿ ಭಾಗವಹಿಸದಂತೆ ತಡೆಯೊಡ್ಡುತ್ತಿರುವ ಅಂಶಗಳು ಯಾವುವು? ಇವುಗಳಲ್ಲಿ ರಾಜಕೀಯ ಅಂಶಗಳ ಪ್ರಭಾವವೆಷ್ಟು? ಆರ್ಥಿಕ ಅಂಶಗಳ ಪ್ರಭಾವವೆಷ್ಟು? ಸಾಮಾಜಿಕ ಅಂಶಗಳ ಪ್ರಭಾವವೆಷ್ಟು? ಸಾಂಸ್ಕೃತಿಕ ಅಂಶಗಳ ಪ್ರಭಾವವೆಷ್ಟು? ವಿವಿಧ ಸಾಮಾಜಿಕ ಗುಂಪು ಹಾಗೂ ಜಾತಿಗಳ ನಡುವೆ ಇರುವ ತಾರತಮ್ಯ ಯಾವ ಬಗೆಯದು? ಹೀಗಿರುವಾಗ ಮಕ್ಕಳ ಶಾಲಾ ಭಾಗವಹಿಸುವಿಕೆ ಪ್ರಮಾಣ ಕಡಿಮೆ ಇರಲು ಕಾರಣವೇನು? ಶಿಕ್ಷಣ ಪಡೆದುಕೊಳ್ಳುವಲ್ಲಿ ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡಲು ಯಾವ ಅಂಶಗಳು ಕಾರಣವಾಗುತ್ತವೆ? ಮಕ್ಕಳ ಶಿಕ್ಷಣದ ಬಗ್ಗೆ ಪೋಷಕರ ಮನೋಪ್ರವೃತ್ತಿ ಹೇಗಿದೆ? ಅವರ ಮನೋಪ್ರವೃತ್ತಿ ಮತ್ತು ಮಕ್ಕಳ ಶಾಲಾ ಭಾಗವಹಿಸುವಿಕೆಗೆ ಯಾವ ರೀತಿಯ ಸಂಬಂಧವಿದೆ? ಈಗಾಗಲೇ ಅನುಷ್ಠಾನದಲ್ಲಿರುವ ಶಿಕ್ಷಣದ ಸೌಲಭ್ಯಗಳು ತಮ್ಮ ಮಕ್ಕಳಿಗೆ ದೊರಕುತ್ತಿವೆಯೇ? ಅವುಗಳನ್ನು ಪಡೆದುಕೊಳ್ಳುವಲ್ಲಿ ಪೋಷಕರು ಮತ್ತು ಮಕ್ಕಳ ಆಸಕ್ತಿ ಹೇಗಿದೆ? ಶಿಕ್ಷಣದ ಸೌಲಭ್ಯ ಪಡೆದುಕೊಳ್ಳುವಿಕೆ ಮತ್ತು ಮಕ್ಕಳ ಶಾಲಾ ಭಾಗವಹಿಸುವಿಕೆಗೆ ಸಂಬಂಧವಿದೆಯೇ? ಸರ್ಕಾರದಿಂದ ಲಭಿಸುವ ಶಿಕ್ಷಣದ ಸೌಲಭ್ಯಗಳಿಲ್ಲದೆ ಮಕ್ಕಳು ಶಿಕ್ಷಣ ಪಡೆಯುವರೆ? ಎಂಬಂತಹ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದರ ಮೂಲಕ ಶೈಕ್ಷಣಿಕ ಪರಿಸರ ಮತ್ತು ಪರಿಸ್ಥಿತಿಯ ಒಟ್ಟು ಚಿತ್ರಣವೇನು? ಈ ಅಂಶಗಳು ಎಷ್ಟರಮಟ್ಟಿಗೆ ಶಾಲಾ ಶಿಕ್ಷಣದ ಅಭಿವೃದ್ಧಿಗೆ ಪೂರಕವಾಗಿವೆ? ಪೂರಕವಾಗಿದ್ದರೆ ಅದರಲ್ಲಿ ಆರ್ಥಿಕ ಅಂಶಗಳ ಪಾತ್ರ ಎಷ್ಟು? ಬಡತನಕ್ಕೂ ಶಾಲಾ ಶಿಕ್ಷಣಕ್ಕೂ ಸಂಬಂಧವೇನು? ಶಾಲೆಗೆ ೦-೬ರ ವಯೋಮಾನದ ಎಲ್ಲಾ ಮಕ್ಕಳು ಯಾಕೆ ದಾಖಲಾಗುತ್ತಿಲ್ಲ?

ಶಾಲೆಗೆ ೦೬-೧೪ರ ವಯೋಮಾನದ ಎಲ್ಲಾ ಮಕ್ಕಳು ಯಾಕೆ ಬರುತ್ತಿಲ್ಲ? ಮಕ್ಕಳು ಮಧ್ಯದಲ್ಲಿ ಶಾಲೆಯನ್ನು ಬಿಡುತ್ತಿರುವುದಕ್ಕೂ ಮತ್ತು ಬಡತನಕ್ಕೂ ಸಂಬಂಧ ಏನು? ಸಾಮಾಜಿಕ ಅಂಶಗಳ ಪಾತ್ರ ಎಷ್ಟು? ಸಾಮಾಜಿಕ ಅಂಶಗಳಲ್ಲಿ ಜಾತಿ, ಧರ್ಮ, ಲಿಂಗ, ಕೌಟುಂಬಿಕ ಪರಿಸರ ಹಾಗೂ ಪರಿಸ್ಥಿತಿ ಇವುಗಳಲ್ಲಿ ಯಾವುದು ಪ್ರಮುಖ? ಅಂದರೆ ಶಾಲೆಯಿಂದ ಹೊರಗಿರುವ ಮಕ್ಕಳ ಜಾತಿ ಸ್ವರೂಪ ಯಾವ ಬಗೆಯದು? ಮಧ್ಯದಲ್ಲಿ ಶಾಲೆ ಬಿಡುವ ಮಕ್ಕಳ ಜಾತಿ ಸ್ವರೂಪ ಯಾವ ಬಗೆಯದು? ಇದನ್ನು ಕಡಿಮೆಗೊಳಿಸಲು ಜನರ ಸಹಭಾಗಿತ್ವ ಯಾಕೆ ದಕ್ಕುತ್ತಿಲ್ಲ? ಶಾಲೆಗಳಲ್ಲಿರುವ ಸೌಲಭ್ಯಗಳು ಯಾವುವು? ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜನರು ಹೇಗೆ ಪರಿಭಾವಿಸಿಕೊಳ್ಳುತ್ತಿದ್ದಾರೆ? ಅವುಗಳನ್ನು ಯಾವ ರೀತಿ ತಮ್ಮದಾಗಿಸಿಕೊಳ್ಳುತ್ತಿದ್ದಾರೆ? ಪೋಷಕರಿಗೂ ಮತ್ತು ಶಿಕ್ಷಣ ವ್ಯವಸ್ಥೆಗೂ ನಡುವೆ ಇರುವ ಸಂಬಂಧ ಎಂತಹದ್ದು? ಶಿಕ್ಷಣದ ಬಗ್ಗೆ ಅವರ ಮನೋಭಾವ ಎಂತಹದು? ಇದರ ಸಾಮಾಜಿಕ ಆರ್ಥಿಕ ಆಯಾಮ ಎಂತಹುದು? ಇಂತಹ ಹಲವಾರು ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗುವುದು. ಒಟ್ಟಾರೆ ನಮ್ಮ ಪ್ರಾಥಮಿಕ ಶಿಕ್ಷಣದ ಸಾಮಾಜಿಕ, ಆರ್ಥಿಕ ಸ್ವರೂಪವನ್ನು ಹಿಡಿದಿಡುವ ಉದ್ದೇಶದಿಂದ ಪ್ರಸ್ತುತ ಅಧ್ಯಯನವನ್ನು ರೂಪಿಸಲಾಗಿದೆ. ಅಂದರೆ ಶಾಲೆಗೆ ದಾಖಲಾಗದಿರುವ ಅಥವಾ ಶಾಲೆಯಿಂದ ಹೊರಗಿರುವ ಮಕ್ಕಳ ಜಾತಿ, ಲಿಂಗ ಸ್ವರೂಪ ಯಾವ ಬಗೆಯದು? ಎಂಬ ಇತ್ಯಾದಿ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುವುದು ಈ ಅಧ್ಯಯನದ ಪ್ರಮುಖ ಉದ್ದೇಶ. ಶಾಲಾ ಭಾಗವಹಿಸುವಿಕೆಯನ್ನು ಪ್ರಭಾವಿಸುವ ಸಾಮಾಜಿಕ-ಆರ್ಥಿಕ ಅಂಶಗಳು ಯಾವುವು ಎಂಬುದನ್ನು ಅರ್ಥಮಾಡಿಕೊಳ್ಳುವುದು ಪ್ರಸ್ತುತ ಅಧ್ಯಯನದ ಮೂಲ ಆಶಯವಾಗಿರುತ್ತದೆ.

ಪ್ರಸ್ತುತ ಅಧ್ಯಯನದಲ್ಲಿ ಆದಾಯ, ಜಾತಿ, ವೃತ್ತಿ, ಭೂಮಿ, ಕುಟುಂಬದ ರಚನೆ, ವಿವಾಹ ಮುಂತಾದ ಅಂಶಗಳು ಶಾಲಾ ಶಿಕ್ಷಣದ ಮೇಲೆ ಹೇಗೆ ಪ್ರಭಾವ ಬೀರುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ಈ ಅಧ್ಯಯನದ ಮೂಲ ಆಶಯ. ವಿಶೇಷವಾಗಿ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ಕೊಡಲಾಗಿದೆ. ಶಾಲಾ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಅನೇಕ ಸಮಸ್ಯೆಗಳಿವೆ. ಇವುಗಳು ಪ್ರತಿ ಶಾಲಾ ಮಟ್ಟದಲ್ಲಿ ಹೇಗಿದೆ ಮತ್ತು ಶಾಲೆ ನೆಲೆಗೊಂಡಿರುವ ವಾರ್ಡ್‌ಮಟ್ಟದ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಮಕ್ಕಳ ಶಾಲಾ ಭಾಗವಹಿಸುವಿಕೆಯನ್ನು ಅರ್ಥಮಾಡಿಕೊಳ್ಳುವುದು ಈ ಅಧ್ಯಯನದ ಮತ್ತೊಂದು ಆಶಯ. ಹಾಗೆಯೇ ಮಕ್ಕಳು ಶಾಲಾ ಶಿಕ್ಷಣದಲ್ಲಿ ವಂಚಿತರಾಗಲು ಇರಬಹುದಾದ ಪ್ರಶ್ನೆಗಳನ್ನು ಮಗುವಿನ ಕೌಟುಂಬಿಕ ರಚನೆಯ ನೆಲೆಯಲ್ಲಿ ಅರ್ಥಮಾಡಿಕೊಳ್ಳಲು ಪ್ರಸ್ತುತ ಪ್ರಬಂಧದಲ್ಲಿ ಪ್ರಯತ್ನಿಸಲಾಗಿದೆ.

೧.೬. ಅಧ್ಯಯನದ ನಿರ್ದಿಷ್ಟ ಉದ್ದೇಶಗಳು

೧. ಶಾಲಾ ಶಿಕ್ಷಣಕ್ಕೂ ಸಾಮಾಜಿಕ ಪರಿಸರಕ್ಕೂ ಇರುವ ಸಂಬಂಧವನ್ನು ಅರ್ಥಮಾಡಿಕೊಳ್ಳುವುದು.

೨. ಶಿಕ್ಷಣಕ್ಕಾಗಿ ಬೇಡಿಕೆಯಿದ್ದರೂ ಸಹ ಅನೇಕ ಮಕ್ಕಳು ಶಾಲೆಗಳಿಂದ ಹೊರಗೇಕಿದ್ದಾರೆ ಎನ್ನುವುದನ್ನು ಗುರುತಿಸುವುದು.

೩. ಪೋಷಕರ ಆದಾಯ-ವೃತ್ತಿ-ಶೈಕ್ಷಣಿಕ ವೆಚ್ಚ ಇತ್ಯಾದಿ ಆರ್ಥಿಕ ಅಂಶಗಳಿಗೂ ಮಕ್ಕಳ ಶಾಲಾ ಭಾಗವಹಿಸುವಿಕೆಗೂ ಇರುವ ಸಂಬಂಧವನ್ನು ಗುರುತಿಸುವುದು.

೪. ಶಾಲಾ ಶಿಕ್ಷಣದ ಅಭಿವೃದ್ಧಿಗೂ ಜಾತಿ, ಧರ್ಮ, ಲಿಂಗ, ಕುಟುಂಬ ಇತ್ಯಾದಿ ಸಾಮಾಜಿಕ ಆಯಾಮಗಳಿಗೂ ಇರುವ ಸಂಬಂಧವನ್ನು ಅರ್ಥಮಾಡಿಕೊಳ್ಳುವುದು.

೫. ಲಭ್ಯವಿರುವ ಶಾಲಾ ಸೌಲಭ್ಯವನ್ನು ಗ್ರಾಮಸಮುದಾಯಗಳು ಬಳಸಿಕೊಳ್ಳುತ್ತಿರುವ ಪ್ರಮಾಣ ಮತ್ತು ಅಂತರವನ್ನು ಗುರುತಿಸುವುದು.

೧.೭. ಅಧ್ಯಯನ ವಿಧಾನ

ನಮ್ಮ ಅಧ್ಯಯನವು ಈಗಾಗಲೇ ನಡೆದಿರುವ ಅಧ್ಯಯನಗಳ ಸೈದ್ಧಾಂತಿಕ ಅಂಶಗಳನ್ನು ಪರಿಗಣಿಸಿ, ಸಾಮಾಜಿಕ, ಆರ್ಥಿಕ ಅಂಶಗಳು ಎಷ್ಟರಮಟ್ಟಿಗೆ ಶಾಲಾ ಶಿಕ್ಷಣದ ಅಭಿವೃದ್ಧಿಯನ್ನು ಮತ್ತು ಮಕ್ಕಳ ಶಾಲಾ ಭಾಗವಹಿಸುವಿಕೆಯನ್ನು ಪ್ರಭಾವಿಸುತ್ತಿವೆ ಎಂಬುದನ್ನು ಪರಿಶೀಲಿಸುವ ಪ್ರಯತ್ನ ಮಾಡುವ ಉದ್ದೇಶವನ್ನು ಹೊಂದಿದೆ. ಹೀಗೆ ಮಾಡುವಾಗ ಸಾಮಾಜಿಕ ಮತ್ತು ಆರ್ಥಿಕ ಅಂಶಗಳನ್ನು ಈಗಾಗಲೇ ನಿರ್ದಿಷ್ಟಪಡಿಸಿಕೊಳ್ಳಬೇಕಾದ ಅಗತ್ಯವಿರುತ್ತದೆ. ಸಾಮಾಜಿಕ ಅಂಶಗಳನ್ನು ಈಗಾಗಲೇ ಸಮಾಜಶಾಸ್ತ್ರಜ್ಞರು ಗುರುತಿಸುವ ಸಾಮಾಜಿಕ ಸಂಸ್ಥೆಗಳಾದ ಕುಟುಂಬ, ವಿವಾಹ, ಶಾಲೆ ಇವುಗಳ ಜೊತೆಗೆ ಜಾತಿ, ಧರ್ಮ, ಲಿಂಗ, ಪ್ರದೇಶ ಗ್ರಾಮ ಮತ್ತು ಶಾಲಾ ವ್ಯವಸ್ಥೆಯ ಸಂಘಟನೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಲಾಗಿದೆ. ಅಂದರೆ ಶಾಲಾ ಶಿಕ್ಷಣದ ಅಭಿವೃದ್ಧಿ ಮತ್ತು ಮಕ್ಕಳ ಶಾಲಾ ಭಾಗವಹಿಸುವಿಕೆಯಲ್ಲಿ ಈ ಅಂಶಗಳು ಯಾವ ಬಗೆಯ ಪಾತ್ರವನ್ನು ವಹಿಸುತ್ತಿವೆ ಎಂಬುದನ್ನು ಅರ್ಥ ಮಾಡಿಕೊಳ್ಳಲಾಗುವುದು. ಉದಾಹರಣೆಗೆ ಅನಿತಾ ಬಿ.ಕೆ, ಪ್ರೋಬ್, ರೇಖಾ ವಾಜೀರ್ ಹಾಗು ಪ್ರಶಾಂತ ಎಚ್.ಡಿ ಇವರ ಅಧ್ಯಯನಗಳಲ್ಲಿ ಈ ಸಾಮಾಜಿಕ ಸಂಸ್ಥೆಗಳು ಹೇಗೆ ಶಾಲಾ ಶಿಕ್ಷಣದ ಅಭಿವೃದ್ಧಿಯನ್ನು ಪ್ರಭಾವಿಸುತ್ತಿವೆ ಎಂಬುದನ್ನು ಹಿಡಿದಿಡುವ ಪ್ರಯತ್ನವನ್ನು ಮಾಡಿದ್ದಾರೆ. ಈ ಪ್ರಯತ್ನದಲ್ಲಿ ಅಧ್ಯಯನಗಳು ಸ್ವಲ್ಪಮಟ್ಟಿನ ಸಫಲತೆಯನ್ನು ಪಡೆದಿವೆ. ಹೀಗೆ ಮಾಡುವಾಗ ಈ ಮೇಲಿನ ಸಂಶೋಧಕರುಗಳು ಆರ್ಥಿಕ ಅಂಶಗಳನ್ನು ಪರಿಗಣಿಸುವಲ್ಲಿ ಸ್ವಲ್ಪಮಟ್ಟಿಗೆ ವಿಫಲರಾಗಿರುತ್ತಾರೆ. ಹೀಗಾಗಿ ಅರ್ಥಶಾಸ್ತ್ರದ ವಿದ್ಯಾರ್ಥಿಯಾದ ನಾನು ಈ ಮೇಲೆ ತಿಳಿಸಿದ ಸಾಮಾಜಿಕ ಅಂಶಗಳ ಜೊತೆಗೆ ಅರ್ಥಶಾಸ್ತ್ರಜ್ಞರು ಗುರುತಿಸುವ ಆರ್ಥಿಕ ಅಂಶಗಳಾದ ಆದಾಯ (ಕುಟುಂಬದ) ಕೂಲಿ, ಭೂಮಿ ಇವುಗಳ ಜೊತೆಗೆ ಖಾಸಗಿ ಶೈಕ್ಷಣಿಕ ವೆಚ್ಚ ಮತ್ತು ವೃತ್ತಿ ಇವು ಶಾಲಾ ಶಿಕ್ಷಣವನ್ನು ಹೇಗೆ ಪ್ರಭಾವಿಸುತ್ತವೆ ಎಂಬುದನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಇದರ ಅರ್ಥ ಕೇವಲ ಆರ್ಥಿಕ ಅಂಶಗಳಿಗೆ ಆದ್ಯತೆಯನ್ನು ನೀಡಲು

ಪ್ರಯತ್ನಿಸಲಾಗಿದೆಯೆಂದಲ್ಲ? ಇದಕ್ಕೆ ಬದಲಾಗಿ ಆರ್ಥಿಕ ಮತ್ತು ಸಾಮಾಜಿಕ ಅಂಶಗಳು ಯಾವ ಪ್ರಮಾಣದಲ್ಲಿ ಶಾಲಾ ಶಿಕ್ಷಣದ ಅಭಿವೃದ್ಧಿಗೆ ಪೂರಕವಾಗಿವೆ ಅಥವಾ ಪೂರಕವಾಗಿಲ್ಲವೇ ಎಂಬುದನ್ನು ಹಿಡಿದಿಡುವುದಾಗಿದೆ. ಇದರ ಜೊತೆ ಜೊತೆಗೆ ಸಾಮಾಜಿಕ ಮತ್ತು ಆರ್ಥಿಕ ಅಂಶಗಳು ಶಾಲಾ ಶಿಕ್ಷಣದ ಅಭಿವೃದ್ಧಿ ಚಲಕಗಳಾದ ಶಾಲಾ ದಾಖಲಾತಿ, ಹಾಜರಾತಿ, ಶಾಲೆಯನ್ನು ಮಧ್ಯದಲ್ಲಿ ಬಿಡುವುದು, ತರಗತಿಯೊಳಗೆ ಬೋಧನಾ ಮತ್ತು ಕಲಿಕಾ ಪ್ರಕ್ರಿಯೆಯನ್ನು ಪ್ರಭಾವಿಸುವ ಅಂಶಗಳನ್ನು ಈ ಎರಡು ನೆಲೆಗಟ್ಟಿನಲ್ಲಿ ನೋಡಿದಾಗ ಶಾಲಾ ಶಿಕ್ಷಣವನ್ನು ಪ್ರಭಾವಿಸುವ ಸಾಮಾಜಿಕ ಸಂಬಂಧಿ ಮತ್ತು ಆರ್ಥಿಕ ಸಂಬಂಧಿ ಅಂಶಗಳಲ್ಲಿ ಯಾವುದು ಹೆಚ್ಚು ಹಾಗೂ ಕಡಿಮೆ ಎಂಬುದನ್ನು ಗುರುತಿಸಬಹುದಾಗಿದೆ. ಹೀಗೆ ಮಾಡುವುದರಿಂದ ಶಾಲಾ ಶೈಕ್ಷಣಿಕ ವ್ಯವಸ್ಥೆಯನ್ನು ಪ್ರಭಾವಿಸುತ್ತಿರುವ ಒಟ್ಟು ಸಾಮಾಜಿಕ ವ್ಯವಸ್ಥೆ ಮತ್ತು ಅವ್ಯವಸ್ಥೆಯಲ್ಲಿ ಇರುವ ಯಾವ ಸಂಸ್ಥೆ ಪ್ರಭಾವ ಮತ್ತು ಪರಿಣಾಮವನ್ನು ಹಿಡಿದಿಡಬಹುದಾಗಿದೆ. ಇದು ಯೋಜನೆಗಳನ್ನು ರೂಪಿಸಲು ಅನುಕೂಲವಾಗದೆ ಇರಬಹುದು. ಆದರೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಆಚರಣೆಗೆ ತರುವಾಗ ಇವುಗಳ (ಸಾಮಾಜಿಕ-ಆರ್ಥಿಕ ಅಂಶಗಳು) ಪ್ರಭಾವದಿಂದ ಹೊರಬಂದು ಕಾರ್ಯಕ್ರಮಗಳನ್ನು ಆಚರಣೆಗೆ ತರಲು ಅನುಕೂಲವಾಗಬಹುದು.

ಈಗಾಗಲೇ ನಡೆದಿರುವ ಅಧ್ಯಯನಗಳ ಸೈದ್ಧಾಂತಿಕ ಸಂಗತಿಗಳನ್ನು ಅಧ್ಯಯನ ಸಂದರ್ಭದಲ್ಲಿ ಪರಿಗಣಿಸಿದ್ದರೂ ಪ್ರಸ್ತುತ ಅಧ್ಯಯನ ಮೂಲತಃ ದೃಷ್ಟಾಂತವಾದ ಎಂಫಿರಿಕಲ್ ಅಧ್ಯಯನವಾಗಿದೆ. ಅಧ್ಯಯನಕ್ಕೆ ಅಗತ್ಯವೆನಿಸಿದ ಮಾಹಿತಿಗಳನ್ನು ನಮಗೆಲ್ಲ ತಿಳಿದಿರುವಂತೆ ಎರಡು ಮೂಲಗಳಿಂದ ಸಂಗ್ರಹಿಸಲಾಗುವುದು. ಒಂದು ಪ್ರಾಥಮಿಕ, ಮತ್ತೊಂದು ಆನುಷಂಗಿಕ.

ಪ್ರಾಥಮಿಕ ಮಾಹಿತಿಯನ್ನು ವಿವಿಧ ಮಾರ್ಗಗಳ ಮೂಲಕ ಸಂಗ್ರಹಿಸಲಾಗುವುದು. ಹೀಗೆ ಮಾಡುವಾಗ ಆಯಾ ಉದ್ದೇಶಗಳಿಗೆ ಅನುಕೂಲವಾಗುವ ವಿಧಾನ ಬಳಸಿ ಮಾಹಿತಿ ಸಂಗ್ರಹಿಸಲಾಗುವುದು. ಮೊದಲನೇ ಉದ್ದೇಶ ಶಾಲಾ ಪ್ರಕ್ರಿಯೆಗೆ ಸಂಬಂಧಿಸಿದಂತೆ ಮಾಹಿತಿಯನ್ನು ಬೋಧನಾ ಮತ್ತು ಕಲಿಕಾ ಚಟುವಟಿಕೆಗಳು ನಡೆಯುತ್ತಿರುವ ಸಂದರ್ಭದಲ್ಲಿ ಯಾವುದೇ ಮಾಹಿತಿ ನೀಡದೆ ಶಾಲೆಗಳಿಗೆ ಭೇಟಿ ನೀಡಿ ಚಟುವಟಿಕೆಯನ್ನು ಅವಲೋಕಿಸಿ ಟಿಪ್ಪಣಿಯನ್ನು ತಯಾರಿಸಿಕೊಳ್ಳಲಾಗುವುದು. ಎರಡು ಮತ್ತು ಮೂರನೇ ಉದ್ದೇಶಕ್ಕೆ ಪೂರ್ವ ರಚಿತ ಪ್ರಶ್ನಾವಳಿ ಮೂಲಕ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಕುಟುಂಬಗಳ ಆದಾಯ, ವೃತ್ತಿ, ಜಾತಿ, ಧರ್ಮಶಾಲೆಯಲ್ಲಿ ಭಾಗವಹಿಸುತ್ತಿರುವ ಅಥವಾ ಭಾಗವಹಿಸದೆ ಇರುವ ಮಕ್ಕಳ ಸಂಖ್ಯೆ, ಶಿಕ್ಷಣದ ಬಗ್ಗೆ ಅವರ ಮನೋಭಾವ, ಆ ಕುಟುಂಬದ ಎಲ್ಲಾ ಸದಸ್ಯರ ಸಾಕ್ಷರತೆಯ ಮಟ್ಟ ಇತ್ಯಾದಿ ಮಾಹಿತಿಯನ್ನು ಸಂಗ್ರಹಿಸಲಾಗುವುದು. ನಾಲ್ಕನೇ ಉದ್ದೇಶಕ್ಕೆ ಸಂಬಂಧಿಸಿದ ಮಾಹಿತಿಯನ್ನು ಶಾಲೆಗಳಲ್ಲಿ ಇರುವ ಸೌಲಭ್ಯ ಹಾಗೂ ಆಚರಣೆಯಲ್ಲಿರುವ ಕಾರ್ಯಕ್ರಮಗಳನ್ನು ಮೊದಲಿಗೆ ಶಾಲೆಯಿಂದ ಶಿಕ್ಷಕರ ಜೊತೆ ಚರ್ಚಿಸಿ ಸಂಗ್ರಹಿಸಲಾಗುತ್ತದೆ. ಜೊತೆಗೆ ಶಾಲಾ ಸೌಲಭ್ಯ ಮತ್ತು ಕಾರ್ಯಕ್ರಮಗಳ ಬಗ್ಗೆ ಆಯ್ಕೆ ಮಾಡಿಕೊಂಡ ಕುಟುಂಬದ ಅಭಿಪ್ರಾಯಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಲಾಗುವುದು.

೧.೮.ಅಧ್ಯಯನ ಕ್ಷೇತ್ರ

ಪ್ರಸ್ತುತ ಅಧ್ಯಯನಕ್ಕೆ ಎರಡು ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಶಾಲೆ ಮತ್ತು ಗ್ರಾಮಗಳನ್ನು ಒಳಪಡಿಸುವ ಉದ್ದೇಶವಿದೆ. ಈ ಪಂಚಾಯತಿಗಳನ್ನು ಆಯ್ಕೆ ಮಾಡಿಕೊಳ್ಳುವ ಮೊದಲಿಗೆ ಕರ್ನಾಟಕದಲ್ಲಿ ಸಾಮಾನ್ಯ ಅಭಿವೃದ್ಧಿ ಸಾಧಿಸಿಕೊಂಡ ಎರಡು ಜಿಲ್ಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗುವುದು. ಇದನ್ನು ಟಿ.ಆರ್. ಚಂದ್ರಶೇಖರ್ ಅವರು ಅಭಿವೃದ್ಧಿ ಪಡಿಸಿರುವ ಜಿಲ್ಲಾವಾರು ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಂಕಗಳು : ಕರ್ನಾಟಕ-೨೦೦೧. ಇದರಲ್ಲಿ ಕರ್ನಾಟಕದಲ್ಲಿ ಇರುವ ಎಲ್ಲಾ ೨೭ ಜಿಲ್ಲೆಗಳ ಅಭಿವೃದ್ಧಿಯನ್ನು ಮೂರು ಭಾಗದಲ್ಲಿ ವಿಂಗಡಿಸಿದ್ದಾರೆ. ಅವೆಂದರೆ ಒಂದು : ಉನ್ನತ ಅಭಿವೃದ್ಧಿ ಸಾಧಿಸಿಕೊಂಡ ಜಿಲ್ಲೆಯು. ಎರಡು : ಸಾಮಾನ್ಯ ಅಭಿವೃದ್ಧಿ ಸಾಧಿಸಿಕೊಂಡ ಜಿಲ್ಲೆಯು. ಮೂರು : ಅಭಿವೃದ್ಧಿ ದುಸ್ಥಿತಿ ಅನುಭವಿಸುತ್ತಿರುವ ಜಿಲ್ಲೆಯು ಎಂದು ವಿಭಾಗಿಸಿದ್ದಾರೆ. ಮೇಲಿನಂತೆ ಕ್ರಮವಾಗಿ ಎಂಟು ಜಿಲ್ಲೆಯು ಉನ್ನತ ಅಭಿವೃದ್ಧಿ ಸಾಧಿಸಿಕೊಂಡ ಜಿಲ್ಲೆಗಳಾದರೆ, ೧೨ ಜಿಲ್ಲೆಯು ಸಾಮಾನ್ಯ ಅಭಿವೃದ್ಧಿ ಸಾಧಿಸಿಕೊಂಡ ಜಿಲ್ಲೆಗಳಾಗಿವೆ. ಸಾಮಾನ್ಯ ಅಭಿವೃದ್ಧಿ ಸಾಧಿಸಿಕೊಂಡಿರುವ ಒಟ್ಟು ೧೨ ಜಿಲ್ಲೆಗಳಲ್ಲಿ ಎರಡು ಜಿಲ್ಲೆಗಳನ್ನು ಅಧ್ಯಯನಕ್ಕೆ ಮೊದಲು ಆಯ್ಕೆ ಮಾಡಲಾಗಿದೆ. ಅವೆಂದರೆ ಒಂದು ಹಾಸನ ಮತ್ತೊಂದು ರಾಯಚೂರು. ಈ ಎರಡು ಜಿಲ್ಲೆಗಳನ್ನು ಆಯ್ಕೆ ಮಾಡಿಕೊಳ್ಳಲು ಕಾರಣ ಹಾಸನ ಜಿಲ್ಲೆ ದಕ್ಷಿಣ ಕರ್ನಾಟಕ ಪ್ರದೇಶದಲ್ಲಿದ್ದು, ಈ ಜಿಲ್ಲೆಯ ಸುತ್ತಮುತ್ತ ಉನ್ನತ ಅಭಿವೃದ್ಧಿ ಸಾಧಿಸಿಕೊಂಡ ಜಿಲ್ಲೆಗಳಾದ ಮೈಸೂರು, ಚಿಕ್ಕಮಗಳೂರು, ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿವೆ. ಇಲ್ಲಿ ನಮ್ಮಗೆ ಸ್ಪಷ್ಟವಾಗುವ ಅಂಶವೆಂದರೆ ಹಾಸನ ಜಿಲ್ಲೆಯು ಕರ್ನಾಟಕದಲ್ಲಿ ಸಾಪೇಕ್ಷ ಅಭಿವೃದ್ಧಿಯನ್ನು ಸಾಧಿಸಿಕೊಂಡ ಪ್ರದೇಶದಲ್ಲಿ ಇರುವುದಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ ರಾಯಚೂರು ಜಿಲ್ಲೆಯು ಸುತ್ತಮುತ್ತ ಅಭಿವೃದ್ಧಿ ದುಸ್ಥಿತಿ ಅನುಭವಿಸುತ್ತಿರುವ ಜಿಲ್ಲೆಗಳಾದ ಬಳ್ಳಾರಿ, ಕೊಪ್ಪಳ, ಬಾಗಲಕೋಟೆ, ಬಿಜಾಪುರ, ಯಾದಗಿರಿ ಮತ್ತು ಗುಲ್ಬರ್ಗಾ ಹಾಗೂ ಆಂಧ್ರಪ್ರದೇಶದಲ್ಲಿ ಸ್ವಲ್ಪ ಹಿಂದುಳಿದಿರುವ ಪ್ರದೇಶವಾದ ರಾಯಲ್‌ಸೀಮೆಯಿದೆ. ರಾಯಚೂರು ಜಿಲ್ಲೆಯು ಕರ್ನಾಟಕದಲ್ಲಿ ಅತ್ಯಂತ ಹಿಂದುಳಿದಿರುವ ಜಿಲ್ಲೆಯಾಗಿದೆ.

ಎರಡನೇ, ಹಂತದಲ್ಲಿ ಮೊದಲ ಹಂತದಲ್ಲಿ ಆಯ್ಕೆ ಮಾಡಿಕೊಂಡ ಜಿಲ್ಲೆಗಳಿಂದ ಶೈಕ್ಷಣಿಕ ಮೂಲಸೌಲಭ್ಯ ಸೂಚ್ಯಂಕವನ್ನು ಆಧರಿಸಿ ಒಂದೊಂದು ತಾಲೂಕನ್ನು ಪ್ರತಿ ಜಿಲ್ಲೆಯಿಂದ ಆಯ್ಕೆ ಮಾಡಿಕೊಳ್ಳಲಾಗುವುದು. ನಂತರ ಸಾಪೇಕ್ಷವಾಗಿ ಮುಂದುವರಿದ ಪ್ರದೇಶದಲ್ಲಿರುವ ಹಾಸನ ಜಿಲ್ಲೆಯಿಂದ, ಶೈಕ್ಷಣಿಕವಾಗಿ ಹಿಂದುಳಿದಿರುವ ಚನ್ನರಾಯಪಟ್ಟಣ ತಾಲ್ಲೂಕನ್ನು ಮತ್ತು ಅಭಿವೃದ್ಧಿಯಲ್ಲಿ ಹಿಂದುಳಿದಿರುವ ರಾಯಚೂರು ಜಿಲ್ಲೆಯಿಂದ ಮಾನವಿ ತಾಲ್ಲೂಕನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಮೂರನೇ ಹಂತದಲ್ಲಿ ಎರಡನೇ ಹಂತದಲ್ಲಿ ಆಯ್ಕೆ ಮಾಡಿಕೊಂಡ ತಾಲ್ಲೂಕುಗಳಿಂದ ಒಂದು ಗ್ರಾಮಪಂಚಾಯತಿಯನ್ನು ಒಟ್ಟು ಎರಡು ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿನ ಶಾಲೆ ಹಾಗೂ ಗ್ರಾಮಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅಂದರೆ, ಹಾಸನ ಜಿಲ್ಲೆಯ ಚನ್ನರಾಯಪಟ್ಟಣ

ತಾಲ್ಲೂಕಿನ ಬಳದರೆ ಗ್ರಾಮ ಪಂಚಾಯತಿಯನ್ನು ಹಾಗೂ ರಾಯಚೂರು ಜಿಲ್ಲೆಯ ಮಾನವಿ ತಾಲ್ಲೂಕಿನ ಹೀರಾ ಗ್ರಾಮ ಪಂಚಾಯತಿಯನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಎರಡು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಒಟ್ಟು ೨೪ ಗ್ರಾಮಗಳನ್ನು (ಬಳದರೆ ಗ್ರಾಮ ಪಂಚಾಯತಿಯಲ್ಲಿ ೧೪ಹಳ್ಳಿಗಳು ಹಾಗೂ ಹೀರಾ ಗ್ರಾಮ ಪಂಚಾಯತಿಯಲ್ಲಿ ೧೦ ಹಳ್ಳಿಗಳು) ಅಧ್ಯಯನಕ್ಕೆ ಒಳಪಡಿಸಲಾಗಿದೆ. ಪ್ರತಿ ಗ್ರಾಮ ಪಂಚಾಯತಿಯಿಂದ ಎರಡು ನೂರು ಕುಟುಂಬಗಳನ್ನು, ಅಂದರೆ ಒಟ್ಟು ನಾಲ್ಕು ನೂರು ಕುಟುಂಬಗಳನ್ನು ಅಧ್ಯಯನಕ್ಕೆ/ಸಮೀಕ್ಷೆಗೆ ಒಳಪಡಿಸಲಾಗಿದೆ. ಹೀಗೆ ಮಾಡುವಾಗ ಗ್ರಾಮದಲ್ಲಿ ಇರುವ ಎಲ್ಲಾ ಜಾತಿ, ಧರ್ಮ ಹಾಗೂ ವರ್ಗದ ಜನರನ್ನು ಅಧ್ಯಯನಕ್ಕೆ ಒಳಪಡಿಸಲು ಪ್ರಯತ್ನಿಸಲಾಗಿದೆ.

ಈ ಅಧ್ಯಯನಕ್ಕೆ ಆನುಷಂಗಿಕ ಮಾಹಿತಿಯನ್ನು ಶಾಲೆಗಳಲ್ಲಿ ದಾಖಲಾತಿ-ನೊಂದಾವಣೆಗೆ ಸಂಬಂಧಿಸಿದ ಮಾಹಿತಿ, ಸೌಲಭ್ಯ-ಸಲಕರಣೆ ಮಾಹಿತಿ, ಮಧ್ಯದಲ್ಲಿ ಶಾಲೆ ಬಿಟ್ಟ ಮಕ್ಕಳ ಮಾಹಿತಿ, ಶೈಕ್ಷಣಿಕ ಕಾರ್ಯಕ್ರಮಗಳ ವಿವರಗಳನ್ನು ಶಾಲಾ ದಾಖಲೆಗಳಿಂದ ಸಂಗ್ರಹಿಸಲಾಗುವುದು. ಜೊತೆಗೆ ತಾಲ್ಲೂಕು ಶಿಕ್ಷಣ ಅಧಿಕಾರಿ ಕಚೇರಿಯಿಂದಲೂ ಮಾಹಿತಿಯನ್ನು ಸಂಗ್ರಹಿಸಲಾಗುವುದು. ಈ ರೀತಿ ಸಂಗ್ರಹಿಸಿದ ಮಾಹಿತಿಗಳನ್ನು ವಿವರಣಾತ್ಮಕ ವಿಧಾನದಲ್ಲಿ ವಿಶ್ಲೇಷಿಸಲಾಗಿದೆ. ಗುಣಾತ್ಮಕ ವಿಶ್ಲೇಷಣೆಗೆ ಹೆಚ್ಚಿನ ಆದ್ಯತೆ ನೀಡಲು ಪ್ರಯತ್ನಿಸಲಾಗುವುದು. ಒಟ್ಟಾರೇ ಶಾಲೆಯ ಪರಿಸರ, ತರಗತಿಯ ಪ್ರಕ್ರಿಯೆ ಹಾಗೂ ಅಲ್ಲಿನ ಸ್ಥಳೀಯ ಸಾಮಾಜಿಕ-ಆರ್ಥಿಕ ಪರಿಸರಕ್ಕೆ ಸಂಬಂಧಿಸಿದ ಅಂಕಿ-ಅಂಶಗಳನ್ನು ಬಳಸಿಕೊಂಡು ಸರಕಾರ ಈಗಾಗಲೇ ನಿಗದಿಪಡಿಸಿದ ಮಾನದಂಡವನ್ನು ಆಧಾರವಾಗಿ ಇಟ್ಟುಕೊಂಡು ಸರಕಾರ ನಿಗದಿಪಡಿಸಿದ ಮಟ್ಟಕ್ಕೆ ಸಮ ಅಥವಾ ಅರ್ಧಕ್ಕಿಂತ ಹೆಚ್ಚು ಅಥವಾ ಕಡಿಮೆ ಎಂದು ವಿಶ್ಲೇಷಿಸಿ ಕೆಲವು ನಿರ್ಧಾರಗಳಿಗೆ ಬರಲಾಗಿದೆ.

೧.೯. ಅಧ್ಯಯನ ಮಿತಿ ಮತ್ತು ಮಹತ್ವ

ಸಮಯ ಹಾಗೂ ಸಂಪನ್ಮೂಲದ ಕೊರತೆಯಿಂದ ನಮ್ಮ ಅಧ್ಯಯನವನ್ನು ಕೇವಲ ಎರಡು ಜಿಲ್ಲೆಗಳ, ಎರಡು ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳು ಮತ್ತು ಶಾಲೆಗಳಿಗೆ ಸೀಮಿತಗೊಳಿಸಿಕೊಳ್ಳಲಾಗಿದೆ. ನಮ್ಮ ಅಧ್ಯಯನಗಳಿಂದ ಬಂದ ತಥ್ಯಗಳನ್ನು ಆಧರಿಸಿ ನೀತಿ-ನಿರೂಪಣಾ ಸಲಹೆ ನೀಡುವುದು ಕಷ್ಟ ಸಾಧ್ಯ. ಆದರೆ ನಮ್ಮ ಅಧ್ಯಯನವು ಜಿಲ್ಲಾಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಹಾಗೂ ಗ್ರಾಮ ಮಟ್ಟದಲ್ಲಿ ಪ್ರಾಥಮಿಕ ಶಾಲಾ ವ್ಯವಸ್ಥೆ ಹೇಗಿದೆ, ಅಲ್ಲಿನ ಸಮಸ್ಯೆಗಳಾವುವು ಎಂಬುದರ ಬಗ್ಗೆ ವಿವರವನ್ನು ನೀಡುತ್ತದೆ. ಇದು ಸ್ಥಳೀಯ ಮಟ್ಟದಲ್ಲಿ ಯೋಜನೆಗಳನ್ನು ತಯಾರಿಸಲು ಸಹಕಾರಿಯಾಗಬಹುದು.

೧.೧೦ ಅಧ್ಯಯನದ ವಿನ್ಯಾಸ

ಪ್ರಸ್ತುತ ಮಹಾಪ್ರಬಂಧದಲ್ಲಿ ಒಟ್ಟು ಆರು ಅಧ್ಯಾಯಗಳಿವೆ

ಅಧ್ಯಾಯ ಒಂದರಲ್ಲಿ ಪ್ರಸ್ತಾವನೆ, ಇದುವರೆಗೂ ನಡೆದಿರುವ ಅಧ್ಯಯನಗಳ ಸಮೀಕ್ಷೆ, ವಿಷಯದ

ಸಮಸ್ಯೀಕರಣ, ಅಧ್ಯಯನದ ಉದ್ದೇಶ, ವಿಧಾನ, ಮಹತ್ವ, ಮಿತಿ, ಅಧ್ಯಯನ ಕೇತ್ರದ ಆಯ್ಕೆ ಮತ್ತು ಪರಿಚಯ, ಅಧ್ಯಯನದ ವಿನ್ಯಾಸವನ್ನು ತಿಳಿಸಲಾಗಿದೆ.

ಅಧ್ಯಾಯ ಎರಡರಲ್ಲಿ, ಶಾಲಾ ಶಿಕ್ಷಣದ ಅಭಿವೃದ್ಧಿಗೆ/ ಸಾರ್ವತ್ರೀಕರಣಕ್ಕೆ ೧೮೫೪ ರಿಂದ ಶಿಕ್ಷಣ ಹಕ್ಕು ಮಸೂದೆ–೨೦೦೯ ವರಗೆ ನಡೆದಿರುವ ಪ್ರಯತ್ನಗಳು ವಿಶ್ಲೇಷಿಸಲಾಗಿದೆ.

ಅಧ್ಯಾಯ ಮೂರರಲ್ಲಿ, ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣದ ಪ್ರಸ್ತುತ ಸ್ಥಿತಿಯನ್ನು, ಅಧ್ಯಯನ ಕ್ಷೇತ್ರದಲ್ಲಿ ಸಾಕ್ಷರತೆ, ಶಾಲಾ-ದಾಖಲಾತಿ, ಶಾಲಾ ಹಾಜರಾತಿಯಲ್ಲಿನ ಸಾಧನೆ, ಶಾಲೆ ಬಿಟ್ಟ ಮಕ್ಕಳು, ಇತ್ಯಾದಿ. ಒಟ್ಟಾರೆ, ಅಧ್ಯಯನ ಕೇತ್ರದ ಶೈಕ್ಷಣಿಕ ಪರಿಸರವನ್ನು ರಾಜ್ಯ, ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದ ಶೈಕ್ಷಣಿಕ ಪರಿಸರದ ಜೊತೆಗೆ ತುಲನೆಮಾಡಿ ನೋಡುವ ಮೂಲಕ ಅಧ್ಯಯನಕ್ಕೆ ಒಳಪಡಿಸಲಾದ ಪ್ರದೇಶದ ಶೈಕ್ಷಣಿಕ ಪರಿಸ್ಥಿತಿಯನ್ನು ಹಿಡಿದಿಡಲು ಪ್ರಯತ್ನ ಮಾಡಲಾಗಿದೆ.

ಅಧ್ಯಾಯ ನಾಲ್ಕರಲ್ಲಿ, ಮಕ್ಕಳ ಶಿಕ್ಷಣದ ಬಗ್ಗೆ ಪೋಷಕರ ಮನೋಪ್ರವೃತ್ತಿ, ಗಂಡುಮಕ್ಕಳ ಶಿಕ್ಷಣಕ್ಕೆ ಪ್ರೇರಕಾಂಶಗಳು, ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರೇರಕಾಂಶಗಳು, ಶಿಕ್ಷಣ, ವಿವಾಹ, ಜಾತಿ, ಆರ್ಥಿಕ ಸ್ಥಿತಿ–ಗತಿ ಈ ಎಲ್ಲಾ ಅಂಶಗಳು ಹೊಂದಿರುವ ಅಂತರ್ ಸಂಬಂಧವನ್ನು ಮತ್ತು ಒಂದು ಮತ್ತೊಂದನ್ನು ಹೇಗೆ ಪ್ರಭಾವಿಸುತ್ತಿವೆ ಎಂಬುದನ್ನು ಹಿಡಿದಿಡಲು ಈ ಅಧ್ಯಾಯದಲ್ಲಿ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ ಐದರಲ್ಲಿ, ಶಾಲೆಯಲ್ಲಿರುವ ಮೂಲ ಸೌಲಭ್ಯಗಳು ಮತ್ತು ಶಾಲಾ ಬಿಸಿಯೂಟದಂತಹ ಪ್ರೋತ್ಸಾಹಕ ಕಾರ್ಯಕ್ರಮಗಳು ಹಾಗೂ ಶಾಲಾ ಶಿಕ್ಷಣದ ಅಭಿವೃದ್ಧಿಗೆ ಇರುವ ಸಹ ಸಂಬಂಧವನ್ನು ಈ ಅಧ್ಯಾಯದಲ್ಲಿ ಹಿಡಿದಿಡಲು ಪ್ರಯತ್ನ ಮಾಡಲಾಗಿದೆ.

ಅಧ್ಯಾಯ ಆರರಲ್ಲಿ ಸಮಾರೋಪ, ಅಧ್ಯಯನದ ಫಲಿತಗಳು, ಅನುಬಂಧಗಳು, ಆಕರ ಗ್ರಂಥಗಳು, ಇವೆ.

ಅಧ್ಯಾಯ ಎರಡು

ಶಾಲಾ ಶಿಕ್ಷಣದ ಅಭಿವೃದ್ಧಿಗೆ/ ಸಾರ್ವತ್ರೀಕರಣಕ್ಕೆ

೧೮೫೪ರಿಂದ ಶಿಕ್ಷಣ ಹಕ್ಕು ಮಸೂದೆ-೨೦೦೯ವರೆಗೆ ನಡೆದಿರುವ ಪ್ರಯತ್ನಗಳು

ಅಧ್ಯಾಯ ಎರಡು

ಶಾಲಾ ಶಿಕ್ಷಣದ ಅಭಿವೃದ್ಧಿಗೆ/ ಸಾರ್ವತ್ರೀಕರಣಕ್ಕೆ

೧೮೫೪ರಿಂದ ಶಿಕ್ಷಣ ಹಕ್ಕು ಮಸೂದೆ-೨೦೦೯ವರೆಗೆ ನಡೆದಿರುವ ಪ್ರಯತ್ನಗಳು

ಪ್ರಸ್ತುತ ಅಧ್ಯಾಯದಲ್ಲಿ ಶಾಲಾ ಶಿಕ್ಷಣದ ಸಾರ್ವತ್ರೀಕರಣಕ್ಕೆ ನಡೆದಿರುವ ಪ್ರಯತ್ನಗಳನ್ನು ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ. ಇದನ್ನು ಚಾರ್ಲ್ಸ್ ವುಡ್ಸ್ ವರದಿಯಿಂದ (೧೮೫೪) ಪ್ರಾರಂಭಿಸಿ, ಹಂಟರ್ ಆಯೋಗ (೧೮೮೨), ಸ್ಯಾಡ್ಲರ್ ಆಯೋಗ (೧೯೧೭), ಹಾರ್ಟಿಗ್ ಆಯೋಗ ವರದಿ (೧೯೨೯), ಸಾರ್ಜೆಂಟ್ ವರದಿ (೧೯೪೪) ಒಳಗೊಂಡಂತೆ, ಸಂವಿಧಾನ ಜಾರಿಗೆ ಬಂದ ನಂತರದ ಪ್ರಯತ್ನಗಳು, ಶಿಕ್ಷಣ ನೀತಿ (೧೯೬೮), ರಾಷ್ಟ್ರೀಯ ಶಿಕ್ಷಣ ನೀತಿ (೧೯೮೬) ಹಾಗೂ ಶಿಕ್ಷಣ ಹಕ್ಕು ಮಸೂದೆ-೨೦೦೯ರ ವರಗೆ ನಡೆದಿರುವ ಪ್ರಯತ್ನಗಳನ್ನು ಮತ್ತು ಅವುಗಳ ಸಾಧಕ ಬಾಧಕಗಳನ್ನು ವಸ್ತುನಿಷ್ಟವಾಗಿ ಚರ್ಚಿಸಲಾಗಿದೆ.

೨.೧ ಪ್ರಸ್ತಾವನೆ

ಒಂದು ದೇಶ/ಪ್ರದೇಶದ ಅಭಿವೃದ್ಧಿಯು ಆ ಪ್ರದೇಶದ ಶಿಕ್ಷಣ ನೀತಿ ಮತ್ತು ಅದರ ಪರಿಣಾಮಕಾರಿ ಅನುಷ್ಠಾನದಿಂದ ಪ್ರತಿಬಿಂಬಿತವಾಗುತ್ತದೆ. ಅಂದರೆ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯ ಮೇಲೆ ಆ ದೇಶದ ಪ್ರಗತಿಯು ನಿಂತಿದೆ. ಭಾರತ ಸರ್ಕಾರ ಪ್ರತಿಯೊಂದು ಮಗು ಪ್ರಾಥಮಿಕ ಶಿಕ್ಷಣ ಪಡೆಯಬೇಕೆಂದು ವಿವಿಧ ಕಾರ್ಯಕ್ರಮಗಳೊಂದಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಮಸೂದೆಯನ್ನು ಜಾರಿಗೆ ತಂದಿದೆ. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವೆಂದರೆ "ಮಗುವಿನ ಆರು ವರ್ಷದಿಂದ ಹದಿನಾಲ್ಕು ವರ್ಷದವರೆಗೆ ಯಾವುದೇ ಜಾತಿ, ಮತ, ಲಿಂಗ, ನಾಡು-ನುಡಿ ನೋಡದೆ ಕಡ್ಡಾಯ ಮತ್ತು ಉಚಿತವಾಗಿ ಶಿಕ್ಷಣ ನೀಡುವುದು". ಇಂತಹ ನಿಯಮಕ್ಕೆ ಪ್ರೇರಣೆಯಂತೆ ಹಲವು ವಿಚಾರವಂತರು, ಶಿಕ್ಷಣತಜ್ಞರು,

ಮಗುವಿಗೆ ಕಡ್ಡಾಯ ಮತ್ತು ಉಚಿತ ಶಿಕ್ಷಣ ಕೊಡಬೇಕೆಂದು ಒತ್ತಿ ಹೇಳಿದರು. ಉದಾಹರಣೆಗೆ. ಗೋಪಾಲಕೃಷ್ಣ ಗೋಖಲೆ, ದಾದಾಬಾಯಿ ನವರೋಜಿ ಮುಂತಾದವರು ೧೮೮೨ರಲ್ಲಿ ವಿಲಿಯಂ ಹಂಟರ್ ತನ್ನ ವರದಿಯಲ್ಲಿ ಪ್ರಥಮವಾಗಿ ಪ್ರಾಥಮಿಕ ಶಿಕ್ಷಣಕ್ಕೆ ಪ್ರಾಶಸ್ತ್ಯಕೊಟ್ಟರು. ನಂತರ ೧೯೦೬ ಮತ್ತು ೧೯೧೦ರಲ್ಲಿ ಭಾರತ ಸರ್ಕಾರ ಹಲವು ರಾಜ್ಯಗಳಲ್ಲಿ ಶಿಕ್ಷಣ ಕಡ್ಡಾಯಗೊಳಿಸಲು ಮುಂದಾಯಿತು. ಇಂಡಿಯಾದ ಸಾಮಾಜಿಕ ವ್ಯವಸ್ಥೆಯಲ್ಲಿ ಅನೇಕ ಸ್ವರೂಪದ ಜನಸಮುದಾಯಗಳು ಕಂಡುಬರುತ್ತವೆ. ವಿಭಿನ್ನ ಜನವರ್ಗಗಳಿಗೆ ಶಿಕ್ಷಣವನ್ನು ನೀಡುವ ಪ್ರಯತ್ನವು ಸ್ವಾತಂತ್ರ್ಯ ಪೂರ್ವದಿಂದಲೂ ನಿರಂತರವಾಗಿ ನಡೆಯುತ್ತಾ ಬಂದಿದೆ. ಇದನ್ನು ಅನೇಕ ಅಧ್ಯಯನಗಳು ಗುರುತಿಸಿವೆ (ಎಚ್.ಡಿ. ಪ್ರಶಾಂತ್; ೨೦೦೬; ರಾಮಚಂದ್ರನ್ ವಿ.ಕೆ.; ೧೯೯೬; ಅನಿತಾ; ೨೦೦೦). ಶಿಕ್ಷಣವನ್ನು ಮೂಲಭೂತವಾಗಿ ಸಮಾಜದ ಪ್ರತಿಯೊಬ್ಬರಿಗೂ ದೊರೆಯುವಂತೆ ಆಗಬೇಕು ಎನ್ನುವ ನಿಟ್ಟಿನಲ್ಲಿ ಸರ್ಕಾರ ಹಲವಾರು ಆಯೋಗಗಳನ್ನು ಜಾರಿಗೊಳಿಸಿದೆ.

ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳಬೇಕಾದರೆ ೧೯೫೦ಕ್ಕೆ ಮೊದಲು ಅಂದರೆ ಸ್ವಾತಂತ್ರ್ಯ ಚಳುವಳಿಯ ಸಂದರ್ಭದ ವಿವಿಧ ಕಾಲಘಟ್ಟದಲ್ಲಿ ಶಾಲಾ ಶಿಕ್ಷಣಕ್ಕೆ ನಡೆಸಿದ ಪ್ರಯತ್ನಗಳನ್ನು ನಾವು ಮೊದಲಿಗೆ ಅರ್ಥಮಾಡಿಕೊಳ್ಳಬೇಕು. ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಬಹಳ ಸ್ಪಷ್ಟವಾಗಿ ಅರ್ಥವಾಗುವ ವಿಷಯವೆಂದರೆ ತ್ಯಾಗ, ಬಲಿದಾನ ಯುದ್ಧಕ್ಕಿಂತಲೂ ಹೆಚ್ಚು ಚರ್ಚೆಯಾದ ಒಂದು ಪ್ರಮುಖ ವಿಚಾರವೆಂದರೆ ಶಾಲಾ ಶಿಕ್ಷಣದ ಸಾರ್ವತ್ರೀಕರಣ.

ಈ ಕಾಲಘಟ್ಟದಲ್ಲಿ ಜನರ ಒತ್ತಾಯಗಳಿಗೆ ಮಣಿದ ಬ್ರಿಟಿಷ್ ಸರ್ಕಾರ ಆಗಿಂದ್ದಾಗ್ಗೆ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವ ಪ್ರಯತ್ನವನ್ನು ಅನೇಕ ಆಯೋಗಗಳನ್ನು ರಚಿಸುವ ಮೂಲಕ ಪ್ರಾರಂಭಿಸಿತು. ಅವುಗಳಲ್ಲಿ ಪ್ರಮುಖವಾದವುಗಳು ಎಂದರೆ, ವುಡ್ಸ್ ಆಯೋಗ (೧೮೫೪), ಹಂಟರ್ ಆಯೋಗ (೧೮೮೨), ಸ್ಯಾಡ್ಲರ್ ಆಯೋಗ (೧೯೧೭), ಹರ್ಟಾಗ್ ಆಯೋಗ (೧೯೨೯), ಸಾರ್ಜೆಂಟ್ ಆಯೋಗ (೧೯೪೪) ಇದಲ್ಲದೆ ದೇಶೀಯವಾಗಿ ಮಹಾರಾಜ ಗಾಯ್ಕವಾಡ್ ಅವರ ಪ್ರಯತ್ನ, ದಾದಾಬಾಯಿ ನವರೋಜಿ ಅವರ ಒತ್ತಾಯ, ಮೈಸೂರು ಪ್ರಾಂತ್ಯದ ರಾಜಾಜ್ಞೆ, ಗಾಂಧೀಜಿ ಯವರ ಮೂಲಶಿಕ್ಷಣದ ಕಲ್ಪನೆ, ಗೋಪಾಲಕೃಷ್ಣ ಗೋಖಲೆ ಅವರ ಕಡ್ಡಾಯ ಶಿಕ್ಷಣ ಮಸೂದೆ ಮತ್ತು ಗೊತ್ತುವಳಿ ಮಂಡಿಸುವ ಪ್ರಯತ್ನ, ಇವು ಶಾಲಾ ಶಿಕ್ಷಣ ಸಾರ್ವತ್ರೀಕರಣ ಪ್ರಕ್ರಿಯೆಯಲ್ಲಿ ಅತ್ಯಂತ ಪ್ರಮುಖವಾದ ಘಟನೆಗಳಾಗಿವೆ.

ಭಾರತದಲ್ಲಿ ಬ್ರಿಟಿಷರ ಆಡಳಿತದ ಸಂದರ್ಭದಲ್ಲಿ, ಸಮಾಜ ಸುಧಾರಕರ ಹೋರಾಟ ಮತ್ತು ಪ್ರತಿಭಟನೆಯ ಫಲವಾಗಿ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವ ಪ್ರಯತ್ನಕ್ಕೆ ಬ್ರಿಟೀಷ್ ಸರ್ಕಾರವು ಪ್ರಥಮ ಬಾರಿಗೆ ಅಂದರೆ ಸುಮಾರು ೧೮೧೩ರ ಸನ್ನದಿಯಲ್ಲಿ ಶಿಕ್ಷಣದ ಸಲುವಾಗಿ ಪ್ರತಿವರ್ಷ ಒಂದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವಂತೆ ಈಸ್ಟ್ ಇಂಡಿಯಾ ಕಂಪನಿಯೂ ಸೂಚಿಸಿತು.

ಬ್ರಿಟೀಷ್ ಅಧಿಪತ್ಯದಲ್ಲಿರುವ ಎಲ್ಲಾ ಪ್ರಾಂತ್ಯಗಳು ಸೇರಿ ಈ ಒಂದು ಲಕ್ಷ ರೂಪಾಯಿಗಳನ್ನು ಶಿಕ್ಷಣದ ಸಲುವಾಗಿ ವ್ಯಯ ಮಾಡುತ್ತಿದ್ದವು. ಟ್ರಾವನ್‌ಕೋರ್ ಪ್ರಾಂತ್ಯದ (ಈಗಿನ ಕೇರಳ ರಾಜ್ಯದ ಪ್ರದೇಶ) ಮಹಾರಾಣಿಯು ಸಹ ೧೮೧೭ರಲ್ಲಿ ತಮ್ಮ ಆಡಳಿತದ ಸುತ್ತೋಲೆಗಳನ್ನು, ಆದೇಶಗಳನ್ನು ಹಾಗೂ ಅಲ್ಲಿನ ಪ್ರಜೆಗಳು ಸಕ್ರಿಯವಾಗಿ ಪಾಲ್ಗೊಳ್ಳಬೇಕಾದರೆ, ಶಿಕ್ಷಣವು ಅತ್ಯವಶ್ಯಕವೆಂದು ಅರಿತುಕೊಂಡು, ತಮ್ಮ ಪ್ರಾಂತ್ಯದ ಎಲ್ಲಾ ಪ್ರಜೆಗಳಿಗೆ ಸಾರ್ವತ್ರಿಕವಾಗಿ ಶಿಕ್ಷಣ ನೀಡುವಂತೆ ಘೋಷಣೆಯೊಂದನ್ನು ಜಾರಿಗೆ ತಂದರು. ಇದಾದ ಮೇಲೆ, ದಾದಾಬಾಯಿ ನವರೋಜಿಯವರು ೧೮೮೨ರಲ್ಲಿ ಮೂಲಭೂತವಾಗಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಪ್ರಮುಖ ಆದ್ಯತೆ ನೀಡಬೇಕೆಂದು ಬ್ರಿಟೀಷ್ ಸರ್ಕಾರದ ಭಾರತೀಯ ಶಿಕ್ಷಣ ಆಯೋಗ(ಹಂಟರ್)ವನ್ನು ಒತ್ತಾಯಿಸಿದರು. ಈ ಅವಧಿಯಲ್ಲಿ ಪ್ರಾಂತೀಯವಾಗಿ ಶಿಕ್ಷಣದ ಸಾರ್ವತ್ರೀಕರಣಕ್ಕೆ ಹಲವು ಪ್ರದೇಶಗಳಲ್ಲಿ ಮನ್ನಣೆ ದೊರೆಯುತ್ತಿದ್ದಂತೆ, ಬರೋಡಾದ ಮಹಾರಾಜ ಗಾಯಕವಾಡ್‌ರವರು ಸಹ ೧೮೯೩ರಲ್ಲಿ ತಮ್ಮ ರಾಜ್ಯದ ವ್ಯಾಪ್ತಿಗೆ ಒಳಪಡುವ ಸಣ್ಣ ಪ್ರಾಂತ್ಯವಾದ ಅಮರಾಲಿಯಲ್ಲಿ ಶಿಕ್ಷಣದ ಸಾರ್ವತ್ರೀಕರಣ ಪ್ರಕ್ರಿಯೆಗೆ ಚಾಲನೆ ನೀಡಿದರು.

ಮೊದಲ ಪ್ರಯತ್ನದಲ್ಲಿ ಅಪಾರ ಯಶಸ್ಸು ಹಾಗೂ ಜನರ ಮನ್ನಣೆ ಗಳಿಸಿತು. ಮಹಾರಾಜರು ಪುನಃ ೧೯೦೬ರಲ್ಲಿ ಶಿಕ್ಷಣದ ಸಾರ್ವತ್ರೀಕರಣವನ್ನು, ಬರೋಡ ಪ್ರಾಂತ್ಯದ ಉದ್ದಗಲಕ್ಕೂ ವಿಸ್ತರಣೆ ಮಾಡಿದರು. ಇದೇ ಸಂದರ್ಭದಲ್ಲಿ ಸಮಾಜ ಸುಧಾರಣೆಯ ಮುಖಂಡರಾದ ಗೋಪಾಲಕೃಷ್ಣ ಗೋಖಲೆಯವರು, ಕಡ್ಡಾಯ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ೧೯೧೧ರಲ್ಲಿ ಕೇಂದ್ರ ಶಾಸನ ಸಭೆಯಲ್ಲಿ ವರದಿಯೊಂದನ್ನು ಪ್ರಸ್ತುತಪಡಿಸಿ, ಶಿಕ್ಷಣದ ಸಾರ್ವತ್ರೀಕರಣಕ್ಕೆ ಸರ್ಕಾರ ಹೆಚ್ಚಿನ ಗಮನ ಕೊಟ್ಟು, ಕ್ರಮಕೈಗೊಳ್ಳಬೇಕೆಂದು ಒತ್ತಾಯಿಸಿದರು. ಆದರೆ ನಮ್ಮ ನಾಡಿನ ಜನರ ದುರಂತವೋ ಏನೋ? ಈ ಮಸೂದೆಗೆ ಒಪ್ಪಿಗೆ ದೊರೆಯಲಿಲ್ಲ.

ಶಿಕ್ಷಣದ ಸಾರ್ವತ್ರೀಕರಣದ ಪ್ರಯತ್ನವು ಕರ್ನಾಟಕ ಏಕೀಕರಣೋತ್ತರದಲ್ಲಿ ಮೈಸೂರು ಪ್ರಾಂತ್ಯದಲ್ಲಿಯೂ, ಸಹ ಅನೇಕ ರೀತಿಯಲ್ಲಿ ಜರುಗಿದವು. ಅದರಲ್ಲಿ ಮೈಸೂರಿನ ಮಹಾರಾಜರು ಶಿಕ್ಷಣದ ಸಾರ್ವತ್ರೀಕರಣಕ್ಕೆ ನಡೆಸಿದ ಪ್ರಯತ್ನ ಸ್ತುತ್ಯಾರ್ಹವಾದುದಾಗಿದೆ. ಇವರ ಆಡಳಿತಾವಧಿಯಲ್ಲಿ ಶಿಕ್ಷಣ ವ್ಯವಸ್ಥೆಯನ್ನು ವಿಕೇಂದ್ರಿಕರಣಗೊಳಿಸಿ, ೧೮೬೬ರಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರ ವ್ಯಾಪ್ತಿಗೆ ತರುವುದರ ಮೂಲಕ ಮೈಸೂರು ಪ್ರಾಂತ್ಯದಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕೆ ವಿನೂತನ ಚಾಲನೆ ನೀಡಲಾಯಿತು. ಇಲ್ಲಿ ನಾವು ಗಮನಿಸಬೇಕಾದ ವಿಶೇಷ ಅಂಶವೆಂದರೆ ೧೯೧೧ರಲ್ಲಿ ಪ್ರಾಥಮಿಕ ಶಿಕ್ಷಣ ಉಚಿತವೆಂದು ಹೇಳುವ ಒಂದು ರಾಜಾಜ್ಞೆಯನ್ನು ಜಾರಿಗೊಳಿಸಲಾಯಿತು. ಇನ್ನು ಮುಂದುವರಿದು ೧೯೩೪ರಲ್ಲಿ ಶಿಕ್ಷಣವನ್ನು ಕಡ್ಡಾಯಗೊಳಿಸುವ ಕಾಯಿದೆಯನ್ನು ಜಾರಿಗೆ ತರಲಾಯಿತು.

ಇಂತಹ ಹಲವು ಪ್ರಯತ್ನಗಳು ಭಾರತದ ಅನೇಕ ಪ್ರಾಂತೀಯ ಪ್ರದೇಶಗಳಲ್ಲಿ ಜಾರಿಗೊಂಡರೂ ಅದರಲ್ಲಿ ಕೆಲವೊಂದು ದಾಖಲಾತಿ ಆಗದೆ ಹೋದವು. ಸ್ವಾತಂತ್ರ್ಯಪೂರ್ವದಿಂದಲೂ ಪ್ರಾಥಮಿಕ

ಶಿಕ್ಷಣಕ್ಕೆ ಮನ್ನಣೆ ನೀಡುವುದರ ಮೂಲಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಲಾಯಿತು. ಭಾರತೀಯ ಸಮಾಜ ಸುಧಾರಕರ ಒತ್ತಾಯಕ್ಕೆ ಮಣಿದ ಬ್ರಿಟಿಷ್ ಸರ್ಕಾರ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವ ಕೆಲಸವನ್ನು ತೀವ್ರಗೊಳಿಸಲು ಹಲವು ಆಯೋಗಗಳನ್ನು ರಚಿಸಿತು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ: ೧. ವುಡ್ಸ್ ಆಯೋಗ, ೧೮೫೪; ೨. ಹಂಟರ್ ಆಯೋಗ, ೧೮೮೨; ೩. ಸ್ಯಾಡ್ಲರ್ ಆಯೋಗ, ೧೯೧೭; ೪. ಹರ್ಟಾಗ್ ಆಯೋಗ, ೧೯೨೯; ೫. ಸಾರ್ಜೆಂಟ್ ಆಯೋಗ, ೧೯೪೪; ೬. ಸಂವಿಧಾನ ಜಾರಿಗೆ ಬಂದ ನಂತರದ ಪ್ರಯತ್ನಗಳು; ೭. ಶಿಕ್ಷಣ ಆಯೋಗ, ೧೯೬೮; ೮. ರಾಷ್ಟ್ರೀಯ ಶಿಕ್ಷಣ ನೀತಿ, ೧೯೮೬; ೯.ಶಿಕ್ಷಣ ಹಕ್ಕು ಮಸೂದೆ ೨೦೦೯;

೨.೨ ಚಾರ್ಲ್ಸ್ ವುಡ್ಸ್ ವರದಿ

ಬ್ರಿಟಿಷ್ ಸಂವಿಧಾನದಲ್ಲಿ ಈಸ್ಟ್ ಇಂಡಿಯಾ ಕಂಪನಿಯು ಭಾರತದಲ್ಲಿ ಶಿಕ್ಷಣವನ್ನು ಉತ್ತಮಪಡಿಸಲು ಚಾರ್ಟರ್ ಕಾನೂನನ್ನು ಪ್ರತಿ ಇಪ್ಪತ್ತು ವರ್ಷಗಳಿಗೊಮ್ಮೆ ಬದಲಾಯಿಸುವ, ಉತ್ತಮಪಡಿಸುವ ವ್ಯವಸ್ಥೆಯನ್ನು ಹೊಂದಿತ್ತು. ಇದನ್ನು ೧೭೭೩ರಲ್ಲಿ ಬಳಕೆಗೆ ತರಲಾಯಿತು. ಆದರೆ ಇದಕ್ಕೆ ಕೆಲವು ಲೇಖನಗಳನ್ನು ಸೇರಿಸಬೇಕೆಂಬ ಆಪೇಕ್ಷೆ ವ್ಯಕ್ತಪಡಿಸಿದುದರಿಂದ ೧೮೧೩ರಲ್ಲಿ ಅದನ್ನು ಪೂರ್ಣಮಾಡಿ ಆಚರಣೆಗೆ ತರಲಾಯಿತು. ೧೮೫೩ರ ಶಿಕ್ಷಣದಲ್ಲಿ ಸ್ಪಷ್ಟ ಮತ್ತು ಸ್ಥಿರವಾದ ನೀತಿಯನ್ನು ತರಲು ಭದ್ರವಾದ ಸಮಿತಿಯನ್ನು ರಚಿಸಿ, ಶಿಕ್ಷಣದ ಅಭಿವೃದ್ಧಿಗೆ ಗಮನ ನೀಡಲಾಯಿತು.

ವುಡ್ಸ್ ವರದಿಯ ಶಿಫಾರಸ್ಸುಗಳು

ಉನ್ನತ ಮತ್ತು ದೀರ್ಘವಾದ ನೂರು ಪುಟಗಳ ಬಹುಮುಖ್ಯವಾದ ಶೈಕ್ಷಣಿಕ ಅಂಶಗಳನ್ನೊಳಗೊಂಡ ವರದಿಯನ್ನು ೧೮೫೮ರ ಜುಲೈ ೧೯ರಂದು ಬ್ರಿಟಿಷ್ ಸರ್ಕಾರಕ್ಕೆ ವುಡ್ಸ್‌ನ ಅಧ್ಯಕ್ಷತೆಯಲ್ಲಿ ಮಂಡಿಸಲಾಯಿತು. ಇದರ ಶಿಫಾರಸ್ಸುಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

೧. ಶೈಕ್ಷಣಿಕ ಪ್ರಗತಿಯನ್ನು ಸಾಧಿಸುವಲ್ಲಿ ಜವಾಬ್ದಾರಿಯುತವಾದ ಪ್ರಾಥಮಿಕ ಶಿಕ್ಷಣ ಜಾರಿಗೆ ತರಬೇಕೆಂದು ಹಾಗೂ ಅಂಗೀಕಾರ ಮಾಡಬೇಕೆಂದು ಒತ್ತಾಯಿಸಲಾಯಿತು.

೨. ಮಹಿಳಾ ಶಿಕ್ಷಣಕ್ಕೆ ಹೆಚ್ಚಿನ ಗಮನಕೊಟ್ಟು ಅವರಿಗೆ ಬೇಕಾಗಿರುವ ಸೌಲಭ್ಯಗಳನ್ನು ಒದಗಿಸಬೇಕೆಂದು ಹೇಳಿತು.

೩. ವೃತ್ತಿಪರ ಶಿಕ್ಷಣಕ್ಕೆ ಮಹತ್ವ ಕೊಟ್ಟು ಶಾಲಾ ಕಾಲೇಜುಗಳಲ್ಲಿ ವೃತ್ತಿಪರ ಶಿಕ್ಷಣದ ಬಗ್ಗೆ ಗಮನಕೊಟ್ಟು ಇದರ ಬಗ್ಗೆ ಜನಗಳು ಹೆಚ್ಚು ಲಾಭ ಪಡೆದುಕೊಳ್ಳುವಂತೆ ಮಾಡಬೇಕೆಂದು ಒತ್ತಾಯ ಮಾಡಿತು.

ಹೀಗೆ ವುಡ್ಸ್ ವರದಿಯೂ ಪ್ರಮುಖವಾದಂತಹ ಅಂಶಗಳನ್ನು ಶಿಫಾರಸ್ಸು ಮಾಡುವ ಮೂಲಕ ಒತ್ತಾಯಿಸಿತು.

೨.೩ ಹಂಟರ್ ಆಯೋಗ

ಹಂಟರ್ ಆಯೋಗವು ಭಾರತದ ಪ್ರಥಮ ಆಯೋಗವಾಗಿ ೧೮೮೨ರ ಫೆಬ್ರವರಿ ೩ ರಂದು ಭಾರತದ ಗೌರ್‍ನರ್ ಜನರಲ್ ಆಗಿದ್ದ ಲಾರ್ಡ್‌ರಿಪ್ಪನ್ ವಿಲಿಯು ಹಂಟರ್‌ನ ಅಧ್ಯಕ್ಷತೆಯಲ್ಲಿ ರಚಿಸಿದ್ದರಿಂದ ಇದಕ್ಕೆ ಹಂಟರ್ ಆಯೋಗವೆಂದೇ ನಾಮಕರಣ ಮಾಡಲಾಯಿತು. ಇದರ ಕಾರ್ಯದರ್ಶಿಯಾಗಿ ಬಿ.ಎಲ್. ರೈಸ್ ಅವರನ್ನು ನೇಮಕ ಮಾಡಲಾಯಿತು.

ಆಯೋಗದ ಶಿಫಾರಸ್ಸುಗಳು

- ಪ್ರಾಥಮಿಕ ಶಿಕ್ಷಣವು ಸಾಮಾನ್ಯ ಜನರಿಗೆ ಉಪಯೋಗವಾಗುವಂತಿರಬೇಕು. ಪ್ರಾಥಮಿಕ ಶಿಕ್ಷಣ ಕೊಡುವ ಮಾಧ್ಯಮವು ಭಾರತದ ಭಾಷೆಗಳಲ್ಲೇ ಆಗಬೇಕು.
- ಮಹಿಳಾ ಶಿಕ್ಷಣಕ್ಕೆ ಹೆಚ್ಚು ಒತ್ತು.
- ಮಹಿಳೆಯರಿಗಾಗಿ ಉಚಿತ ಶಿಕ್ಷಣ ನೀಡುವುದು.
- ಮಹಿಳಾ ಶಿಕ್ಷಕರನ್ನು ನೇಮಕ ಮಾಡುವಂತೆ, ಪರದಾ ಪದ್ಧತಿ ಅನುಸರಿಸುವ ಮಹಿಳೆಯರಿಗೆ ಪ್ರತ್ಯೇಕ ಶಿಕ್ಷಣದ ವ್ಯವಸ್ಥೆ ಮಾಡುವುದು.
- ಬಾಲಕಿಯರಿಗೆ ಪ್ರತ್ಯೇಕ ವಿದ್ಯಾರ್ಥಿ ನಿಲಯವನ್ನು ತೆರೆಯುವುದು.

ಒಟ್ಟಾರೆಯಾಗಿ ಹಂಟರ್ ಆಯೋಗವು ಪ್ರಾಥಮಿಕ ಶಾಲಾ ಶಿಕ್ಷಣದ ಸಮಸ್ಯೆಗಳನ್ನು ಗುರುತಿಸಿ, ಅದರ ಅಭಿವೃದ್ಧಿಗೆ ಸಲಹೆಗಳನ್ನು ಕೊಟ್ಟಿತು. ಇದರ ಜೊತೆಗೆ ಮಹಿಳಾ ಶಿಕ್ಷಣ ಮತ್ತು ನವೀನ ಶಿಕ್ಷಣದ ಬಗ್ಗೆಯೂ ಸಲಹೆಗಳನ್ನು ನೀಡಿತು. ಪ್ರಾಥಮಿಕ ಶಿಕ್ಷಣ ಮತ್ತು ಉನ್ನತ ಶಿಕ್ಷಣವನ್ನು ದೇಶದಾದ್ಯಂತ ಹೇಗೆ ವಿಸ್ತರಿಸಬೇಕು ಮತ್ತು ಹರಡಬೇಕೆಂಬುದನ್ನು ಈ ಆಯೋಗವು ತಳಹದಿ ಯನ್ನು ಹಾಕಿಕೊಡುವುದರ ಮೂಲಕ, ಸಲಹೆಗಳನ್ನು ನೀಡಿ ಶಿಫಾರಸ್ಸುಗಳನ್ನು ಮಾಡಿತು.

೨.೪ ಸ್ಯಾಡ್ಲರ್ ಆಯೋಗ (೧೯೧೭)

ಬ್ರಿಟಿಷ್ ಭಾರತ ಸರ್ಕಾರದ ಚೆಲ್ಸ್‌ಫರ್ಡ್‌ನು ಕಲ್ಕತ್ತ ವಿಶ್ವವಿದ್ಯಾಲಯದ ಸ್ಥಿತಿಗತಿಯನ್ನು ತಿಳಿಯಲು ಕ್ರಿ.ಶ. ೧೯೧೭ರಲ್ಲಿ ಸ್ಯಾಡ್ಲರ್ ನೇತೃತ್ವದಲ್ಲಿ ಒಂದು ಆಯೋಗ ನೇಮಿಸಿದನು. ಈ ಆಯೋಗದಲ್ಲಿ ಅಸಂತೋಷ ಮುಖರ್ಜಿ ಮತ್ತು ಡಾ. ಜಿಯಾ ಉದ್ದೀನ್ ಅಹಮದ್ ಎಂಬ ಇಬ್ಬರು ಭಾರತೀಯರು ಇದ್ದರು. ಈ ಆಯೋಗ ವಿಶ್ವವಿದ್ಯಾಲಯದ ಜೊತೆಗೆ ಪ್ರಾಥಮಿಕ, ಸೆಕೆಂಡರಿ ಹಾಗೂ ಕಾಲೇಜು ಶಿಕ್ಷಣಕ್ಕೆ ಸಂಬಂಧಪಟ್ಟ ಅಂಶಗಳ ಬಗ್ಗೆಯೂ ಅಧ್ಯಯನ ನಡೆಸಿ ಹಲವು ಶಿಫಾರಸ್ಸುಗಳನ್ನು ಮಾಡಿತು.

ಆಯೋಗದ ಶಿಫಾರಸ್ಸುಗಳು

- ವಿಶ್ವವಿದ್ಯಾಲಯಗಳಿಂದ ಇಂಟರ್ ಮಿಡಿಯಟ್ ಪ್ರತ್ಯೇಕಗೊಳ್ಳಬೇಕು. ಪ್ರಾಥಮಿಕ, ಸೆಕೆಂಡರಿ ಶಿಕ್ಷಣ ಹಾಗೂ ಇಂಟರ್ ಮಿಡಿಯಟ್‌ನ್ನು ನೋಡಿಕೊಳ್ಳಲು ಶಿಕ್ಷಣ ಮಂಡಳಿಯನ್ನು ನೇಮಿಸಬೇಕು. ವಿದ್ಯಾರ್ಥಿಯು ಇಂಟರ್ ಮಿಡಿಯಟ್ ಪರೀಕ್ಷೆಯನ್ನು ಪಾಸಾಗಿದ್ದರೆ ಮಾತ್ರ ವಿಶ್ವವಿದ್ಯಾಲಯಕ್ಕೆ ಪ್ರವೇಶ ಕೊಡಬೇಕು.
- ಪದವಿ ತರಗತಿಗಳ ಶಿಕ್ಷಣವನ್ನು ಮೂರು ವರ್ಷಗಳಿಗೆ ಮಿತಗೊಳಿಸಬೇಕು. ಪ್ರಾಂತೀಯ ಸರ್ಕಾರಗಳೇ ವಿಶ್ವವಿದ್ಯಾಲಯಗಳ ಆಡಳಿತವನ್ನು ನಿರ್ವಹಿಸಬೇಕು.
- ಮಹಿಳೆಯರ ವಿದ್ಯಾಭ್ಯಾಸ, ಅಧ್ಯಾಪಕರ ತರಬೇತಿ, ವಿಜ್ಞಾನ ಮತ್ತು ತಂತ್ರಜ್ಞಾನದ ತರಬೇತಿಗೆ ಪ್ರೋತ್ಸಾಹ ಕೊಡಲು ಈ ಆಯೋಗ ಸೂಚಿಸಿತು.

೨.೫ ಹಾರ್ಟಿಗ್ ಆಯೋಗ ವರದಿ (೧೯೨೯)

ಭಾರತದಲ್ಲಿ ರಾಜಕೀಯ ಆಂದೋಲನದ ಪರಿಣಾಮವಾಗಿ ಬ್ರಿಟೀಷ್ ಸರ್ಕಾರವು ಕ್ರಿ.ಶ. ೧೯೨೭ರಲ್ಲಿ 'ಸೈಮನ್' ಕಮೀಷನ್‌ನನ್ನು ನೇಮಕ ಮಾಡಿತು. ಈ ಆಯೋಗವು ಅಂದಿನ ಭಾರತದ ಶಿಕ್ಷಣದ ಪರಿಸ್ಥಿತಿಯನ್ನು ಅಧ್ಯಯನ ಮಾಡಿ, ಒಂದು ವರದಿಯನ್ನು ನೀಡುವಂತೆ ಒಂದು ಸಹಾಯಕ ಸಮಿತಿಯನ್ನು ಸರ್. ಫಿಲೀಪ್ ಹಾರ್ಟಿಗ್‌ರವರ ಅಧ್ಯಕ್ಷತೆಯಲ್ಲಿ ನೇಮಿಸಿತು. ಹಾರ್ಟಿಗ್ ಅವರು ಸ್ಯಾಡ್ಲರ್ ಆಯೋಗದ ಸದಸ್ಯರಾಗಿ ಹಾಗೂ ಕ್ರಿ.ಶ. ೧೯೨೧ರಲ್ಲಿ ಢಾಕಾ ವಿಶ್ವವಿದ್ಯಾಲಯದ ಉಪಕುಲಪತಿಯಾಗಿ ಸೇವೆ ಸಲ್ಲಿಸಿದ್ದರು. ಅವರು ಈ ಸಮಿತಿಗೆ ಅಧ್ಯಕ್ಷರಾಗಿದ್ದುದ್ದರಿಂದ 'ಹಾರ್ಟಿಗ್' ಸಮಿತಿಯು ೧೯೨೯ರ ಸೆಪ್ಟೆಂಬರ್ ಮಾಹೆಯಲ್ಲಿ ಶಿಕ್ಷಣದ ವಿವಿಧ ಅಂಶಗಳ ಬಗ್ಗೆ ವಿವರವಾದ ವರದಿಯನ್ನು ಸೈಮನ್ ಆಯೋಗಕ್ಕೆ ಸಲ್ಲಿಸಿತು.

ಹಾರ್ಟಿಗ್ ಆಯೋಗ ವರದಿ ಶಿಫಾರಸ್ಸುಗಳು

ಪ್ರಾಥಮಿಕ ಶಿಕ್ಷಣದ ಅವಧಿ ಕನಿಷ್ಠ ನಾಲ್ಕು ವರ್ಷ ಇದ್ದು, ಉನ್ನತ ಶಿಕ್ಷಣಕ್ಕೆ ತಳಪಾಯ ಹಾಕುವಂತಿರಬೇಕೆಂದು ಸಲಹೆ ಶಿಫಾರಸ್ಸು ಮಾಡಿತು.

೨.೬ ಸಾರ್ಜೆಂಟ್ ವರದಿ

೧೯೧೫ರಲ್ಲಿ ಎರಡನೇ ಮಹಾಯುದ್ಧದ ನಂತರ ಭಾರತ ಸರ್ಕಾರವು ಶಿಕ್ಷಣವನ್ನು ಅಭಿವೃದ್ಧಿ ಪಡಿಸಬೇಕೆಂದು ಮತ್ತು ಶಿಕ್ಷಣ ಪುನರ್‌ವ್ಯವಸ್ಥೆಗಾಗಿ ಹಲವು ಯೋಜನೆಗಳನ್ನು ಸಿದ್ಧಗೊಳಿಸಲಾಯಿತು. ಆಗ ಕೇಂದ್ರ ಸರ್ಕಾರದ ಶಿಕ್ಷಣ ಸಲಹೆಗಾರರಾಗಿದ್ದ ಸರ್‌ಜಾನ್ ಸಾರ್ಜೆಂಟ್‌ರವರಿಗೆ ಈ ಕಾರ್ಯವನ್ನು ವಹಿಸಲಾಯಿತು. ಆದ್ದರಿಂದ ೧೯೪೪ರಲ್ಲಿ ಸಾರ್ಜೆಂಟ್‌ರವರ ನೇತೃತ್ವದಲ್ಲಿ ಶಿಕ್ಷಣ ಅಭಿವೃದ್ಧಿಗೆ ವರದಿಯನ್ನು ಸಲ್ಲಿಸಲಾಯಿತು. ಹಾಗಾಗಿ ಇದನ್ನು ಸಾರ್ಜೆಂಟ್ ವರದಿಯೆಂದು ಕರೆಯಲಾಯಿತು.

ಸಾರ್ಜೆಂಟ್ ವರದಿಯು ಬಹುಮುಖ್ಯವಾಗಿ ರಾಷ್ಟ್ರೀಯ ಶಿಕ್ಷಣದ ಬೆಳವಣಿಗೆಯ ವ್ಯವಸ್ಥೆಗೆ ಸಂಬಂಧಪಟ್ಟಿದ್ದು. ಶೈಕ್ಷಣಿಕ ಸಮಸ್ಯೆಗಳನ್ನು ಪ್ರಾಥಮಿಕ ಶಿಕ್ಷಣದಿಂದ ವಿಶ್ವವಿದ್ಯಾಲಯದವರೆಗೆ ಮನದಟ್ಟು ಮಾಡಲು ಸಂಗ್ರಹಿಸಿರುವುದರಲ್ಲಿ ಇದು ಮೊದಲನೆಯ ವರದಿ ಎಂದು ಹೇಳಬಹುದು. ಈ ವರದಿಯೂ ಹನ್ನೆರಡು ಅಧ್ಯಾಯಗಳನ್ನು ಒಳಗೊಂಡಿದೆ. ಅವುಗಳಲ್ಲಿ ಮುಖ್ಯವಾದ ಶಿಫಾರಸ್ಸುಗಳನ್ನು ಈ ಕೆಳಗಿನಂತೆ ನೋಡಬಹುದು.

ಸಾರ್ಜೆಂಟ್ ಸಮಿತಿಯ ಶಿಫಾರಸ್ಸುಗಳು

- ೬ ರಿಂದ ೧೪ ವರ್ಷದವರೆಗೆ ಪೂರ್ವ ಪ್ರಾಥಮಿಕ ಅಥವಾ ಮೂಲ ಶಿಕ್ಷಣವನ್ನು ಸಾರ್ವತ್ರಿಕವಾಗಿ ಕಡ್ಡಾಯಗೊಳಿಸಬೇಕು.
- ದೈಹಿಕ ಶಿಕ್ಷಣ ಮತ್ತು ಆರೋಗ್ಯ ಶಿಕ್ಷಣವನ್ನು ಕಡ್ಡಾಯವಾಗಿ ಅಳವಡಿಸಬೇಕು.
- ಮನರಂಜನೆ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಹೆಚ್ಚಿನ ಅವಕಾಶ ಕೊಡಬೇಕು.

ಸಾರ್ಜೆಂಟ್ ವರದಿಯು ರಾಷ್ಟ್ರದ ಸಮಗ್ರ ಶಿಕ್ಷಣದ ಅಭಿವೃದ್ಧಿಗೆ ಸಲಹೆ ಮಾಡಿತು. ಕೇಂದ್ರ ಸರ್ಕಾರವು ಪ್ರಧಾನ ಅಂಶಗಳ ಶಿಫಾರಸ್ಸುಗಳನ್ನು ಮತ್ತು ಪ್ರತ್ಯೇಕ ಶಿಕ್ಷಣ ಇಲಾಖೆಯನ್ನು ೧೯೪೫ ರಲ್ಲಿ ಪ್ರಾರಂಭಿಸಿತು. ಸಾರ್ಜೆಂಟ್ ವರದಿಯ ಶಿಫಾರಸ್ಸುಗಳನ್ನು ಪಂಚವಾರ್ಷಿಕ ಯೋಜನೆಗಳಲ್ಲಿ ಅಳವಡಿಸಲಾಗುತ್ತದೆ. ಸದರಿ ವರದಿಯನ್ನು ೧೯೪೬ರಲ್ಲಿ ಆಚರಣೆಗೆ ತರಲಾಯಿತು.

ಸ್ವಾತಂತ್ರ್ಯ ಪೂರ್ವದಿಂದಲೂ ಪ್ರಾಥಮಿಕ ಶಿಕ್ಷಣಕ್ಕೆ ಗಮನ ನೀಡಿತು. ಈ ಹಿನ್ನೆಲೆಯಲ್ಲಿ ಆದಂತಹ ಆಯೋಗಗಳೆಂದರೆ ವುಡ್ಸ್, ಹಂಟರ್, ಹಾರ್ಟಿಗ್, ಸಾರ್ಜೆಂಟ್, ಸಂವಿಧಾನ ರಚನೆ ಸಂದರ್ಭದಲ್ಲಿನ ವಿಚಾರಗಳು, ೧೯೬೮ರ ಶಿಕ್ಷಣ ನೀತಿ ೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿ, ಕ್ರಿಯಾ ಯೋಜನೆ (೧೯೯೨) ಈ ಎಲ್ಲಾ ಆಯೋಗ ಮತ್ತು ನೀತಿಗಳಲ್ಲಿ ಪ್ರಮುಖವಾಗಿ ಶಾಲಾ ಶಿಕ್ಷಣದ ಸಾರ್ವತ್ರೀಕರಣ ಮತ್ತು ಮಹಿಳಾ ಶಿಕ್ಷಣದ ಬಗ್ಗೆ ಚರ್ಚಿಸುತ್ತಾ, ಇವರಿಗೆ ಅವಶ್ಯಕವಾಗಿರುವ ಸೌಲಭ್ಯಗಳನ್ನು ಕಲ್ಪಿಸಲು ಶಿಫಾರಸ್ಸುಗಳನ್ನು ಮಾಡಿದವು ಎಂದು ಹೇಳಬಹುದು.

೨.೭ ಸಂವಿಧಾನ ಜಾರಿಗೆ ಬಂದ ನಂತರದ ಪ್ರಯತ್ನಗಳು

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಶಿಕ್ಷಣ ಕ್ರಮವನ್ನು ಪುನರ್‌ರಚಿಸಲು ಸರ್ಕಾರ ತೀರ್ಮಾನಿಸಿತು. ಶಿಕ್ಷಣ ಸಾಮಾಜಿಕ ಬದಲಾವಣೆಯ ಹಾಗೂ ರಾಷ್ಟ್ರದ ಪ್ರಗತಿಯ ಪ್ರಧಾನ ಸಾಧನವೆಂಬ ಅಂಶವನ್ನು ಮನಗಂಡು, ಶಿಕ್ಷಣ ರಾಷ್ಟ್ರೀಯ ಅಭಿವೃದ್ಧಿಗೆ ಒಂದು ಬಂಡವಾಳ ಎಂಬುದನ್ನು ಅರಿತು, ಶಿಕ್ಷಣದ ಅಭಿವೃದ್ಧಿಗಾಗಿ ರಾಷ್ಟ್ರ ಹಾಗೂ ರಾಜ್ಯ ಮಟ್ಟಗಳೆರಡರಲ್ಲೂ ಶಿಕ್ಷಣ ವ್ಯವಸ್ಥೆ ಕ್ರಮಗಳನ್ನು ರೂಪಿಸಿ, ಸಲಹೆ ನೀಡಲು, ಸರ್ಕಾರ ಶಿಕ್ಷಣ ಆಯೋಗಗಳನ್ನು ನೇಮಿಸಿತು. ಅವುಗಳಲ್ಲಿ ರಾಧಾಕೃಷ್ಣನ್ ಆಯೋಗ,

ಪ್ರಾಥಮಿಕ ಹಾಗೂ ಉನ್ನತ ಶಿಕ್ಷಣದ ಭದ್ರಕೊಂಡಿಯಾದ ಸೆಕೆಂಡರಿ ಶಿಕ್ಷಣವನ್ನು ಉತ್ತಮಪಡಿಸಲು ಡಾ. ಎ. ಲಕ್ಷ್ಮಣಸ್ವಾಮಿ ಮೊದಲಿಯಾರ್ ಅವರ ಅಧ್ಯಕ್ಷತೆಯಲ್ಲಿ ಏರ್ಪಟ್ಟು, ಮೊದಲಿಯಾರ್ ಶಿಕ್ಷಣ ಆಯೋಗ, ರಾಷ್ಟ್ರೀಯ ಮಾದರಿ ಶಿಕ್ಷಣ ವ್ಯವಸ್ಥೆಪರಿಶೀಲಿಸಿ, ಶಿಕ್ಷಣದ ಅಭಿವೃದ್ಧಿಗೆ ಸಲಹೆ, ಸೂಚನೆಗಳನ್ನು ನೀಡಲು ಡಾ. ಕೊಠಾರಿಯವರ ಅಧ್ಯಕ್ಷತೆಯಲ್ಲಿ ನೇಮಕಗೊಂಡ ಕೊಠಾರಿ ಆಯೋಗಗಳು ಮುಖ್ಯವಾದುವು.

೨.೮ ೧೯೬೮ರ ಶಿಕ್ಷಣ ನೀತಿ

ಶಿಕ್ಷಣ ಸಮಿತಿಯ ವರದಿಯ ಬಗ್ಗೆ ರಾಷ್ಟ್ರದಾದ್ಯಂತ ಚರ್ಚೆ ಹಾಗೂ ಎಚ್ಚರಿಕೆಯ ಪರಿಶೀಲನೆಗಳು ಆದ ನಂತರ ೧೯೬೮ರಲ್ಲಿ ಕೇಂದ್ರ ಸರ್ಕಾರ ರಾಷ್ಟ್ರೀಯ ಶಿಕ್ಷಣ ನೀತಿಯೊಂದನ್ನು ಘೋಷಿಸಿತು. ಇದು ದೇಶದ ಅಭ್ಯುದಯಕ್ಕೆ ಅನೇಕ ಧ್ಯೇಯಗಳನ್ನು ಹೊಂದಿತು.

- ಹದಿನಾಲ್ಕು ವರ್ಷದವರೆಗಿನ ಎಲ್ಲಾ ಮಕ್ಕಳಿಗೂ ಉಚಿತ ಕಡ್ಡಾಯ ಶಿಕ್ಷಣ ನೀಡುವುದು.
- ಸಾಮಾನ್ಯ ಶಾಲೆಗಳಿಗೆ ಪ್ರೋತ್ಸಾಹ ನೀಡಿ, ಪ್ರಾದೇಶಿಕ ಅಸಮಾನತೆಯನ್ನು ದೂರಮಾಡಿ, ಶಿಕ್ಷಣ ಸೌಲಭ್ಯಗಳನ್ನು ನೀಡಿ, ಸಾಮಾಜಿಕ ಬದ್ಧತೆ ಮತ್ತು ರಾಷ್ಟ್ರೀಯ ಐಕ್ಯತೆಗೆ ಪ್ರೋತ್ಸಾಹಿಸುವುದು.
- ವಿವಿಧ ಕ್ಷೇತ್ರಗಳಲ್ಲಿ ಪ್ರತಿಭೆಯನ್ನು ಗುರುತಿಸಿ, ಪ್ರೋತ್ಸಾಹಿಸುವುದು.
- ಶಾಲಾ ಸಮುದಾಯ ಸಂಬಂಧವನ್ನು ವಿವಿಧ ಕಾರ್ಯಕ್ರಮಗಳಿಂದ ಸಂವರ್ಧಿಸುವುದು.

೨.೯ ರಾಷ್ಟ್ರೀಯ ಶಿಕ್ಷಣ ನೀತಿ (೧೯೮೬)

ನೀತಿಯ ಕೆಲವೊಂದು ಮುಖ್ಯಾಂಶಗಳು.

- ಸಾಮಾಜಿಕ ನ್ಯಾಯ ಹಾಗೂ ಮಾನವೀಯ ಮೌಲ್ಯಗಳ ಕಲ್ಪನೆಗೆ ಬದ್ಧರಾಗುವ ಕಲ್ಪನೆಯನ್ನು ಮೂಡಿಸಬೇಕಾಗಿರುವುದರಿಂದ ಎಲ್ಲ ವಿಧದ ಪ್ರಗತಿಗೆ ಶಿಕ್ಷಣ ಒಂದು ಸಾಧನವಾಗಿರುವುದರಿಂದ ನವಶಿಕ್ಷಣ ನೀತಿ ಅನಿವಾರ್ಯವಾಗಿದೆ ಎಂದು ಹೇಳಿದೆ.
- ಶಿಕ್ಷಣದ ಸಾರ ಮತ್ತು ಪಾತ್ರದ ಬಗ್ಗೆ ಉಲ್ಲೇಖಿಸುತ್ತಾ, ಮಾನವನ ಎಲ್ಲ ರೀತಿಯ ಅಭಿವೃದ್ಧಿಗೆ ಶಿಕ್ಷಣವೇ ಬಂಡವಾಳ ಎಂದು ತಿಳಿಸಿದೆ.
- ಮಹಿಳಾ ಶಿಕ್ಷಣದ ಸಮಾನತೆಗಾಗಿ ಅವರ ಶೈಕ್ಷಣಿಕ ಪ್ರವೇಶದಲ್ಲಿನ ಅಡೆತಡೆಗಳನ್ನು ತಪ್ಪಿಸಿ, ಪ್ರಾಥಮಿಕ ಶಿಕ್ಷಣಕ್ಕೆ ಆದ್ಯತೆ ನೀಡಿ, ವೃತ್ತಿಪರ ಹಾಗೂ ತಾಂತ್ರಿಕ ಶಿಕ್ಷಣ ಕ್ಷೇತ್ರಗಳಲ್ಲಿ ಹೆಚ್ಚು ಹೆಚ್ಚು ಮಹಿಳೆಯರು ಭಾಗವಹಿಸುವಂತೆ ಪ್ರೋತ್ಸಾಹಿಸಿ, ಶಿಕ್ಷಣವನ್ನು ಸ್ತ್ರೀಯರ ಮೂಲಭೂತ ಬದಲಾವಣೆಗೆ ಸಾಧನವನ್ನಾಗಿಸುತ್ತದೆ.

- ಹೊಸ ಶಿಕ್ಷಣ ನೀತಿಯು ಶಿಕ್ಷಣದಲ್ಲಿ ಅಸಮಾನತೆಯನ್ನು ತಪ್ಪಿಸಿ, ಇದುವರೆಗೆ ಶಿಕ್ಷಣದ ಸೌಲಭ್ಯದಿಂದ ವಂಚಿತರಾದ ಮಹಿಳೆಯರಿಗೆ, ಪರಿಶಿಷ್ಟ ಜಾತಿಯವರಿಗೆ, ಪರಿಶಿಷ್ಟ ವರ್ಗದವರಿಗೆ, ಅವರವರ ವಿಶೇಷ ಅವಶ್ಯಕತೆಗೆ ಅನುಗುಣವಾಗಿ, ವಿವಿಧ ಸೌಲಭ್ಯಗಳನ್ನು ಕಲ್ಪಿಸಿ, ವಿವಿಧ ರೀತಿಯ ಶಿಕ್ಷಣ ಮಾಧ್ಯಮ ಕಾರ್ಯಕ್ರಮಗಳಿಂದ ಶೈಕ್ಷಣಿಕ ಸಮಾನತೆಗೆ ಅವಕಾಶ ಕಲ್ಪಿಸುತ್ತದೆ.
- ಪರಿಶಿಷ್ಟ ಜಾತಿಯವರ ಪರಿಶಿಷ್ಟೇತರ ಜಾತಿಯವರೊಡನೆ ಸ್ತ್ರೀ-ಪುರುಷರೊಡನೆ ಸಮಾನತೆ ಸಾಧಿಸಲು ೧೪ ವರ್ಷದವರೆಗಿನ ಮಕ್ಕಳನ್ನು ಶಾಲೆಗೆ ಕಳುಹಿಸಲು ಆಕರ್ಷಿಸಿ, ಮೆಟ್ರಿಕ್ ವಿದ್ಯಾರ್ಥಿವೇತನ ನೀಡಿಕೆ, ಬಾಲವಾಡಿ, ವಿದ್ಯಾರ್ಥಿ ನಿಲಯದ ಸ್ಥಾಪನೆ ಹೀಗೆ ಇವರ ಶಿಕ್ಷಣವನ್ನು ಪ್ರೋತ್ಸಾಹಿಸುತ್ತದೆ.

ಒಟ್ಟಾರೆ ೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿಯು ಪ್ರಾಥಮಿಕ ಶಿಕ್ಷಣಕ್ಕೆ ಪ್ರಾಮುಖ್ಯತೆ ಕೊಟ್ಟು, ಮಹಿಳಾ ಶಿಕ್ಷಣ ಮತ್ತು ಸಮಾನತೆಗಾಗಿ ಹೆಚ್ಚು ಒತ್ತು ನೀಡಿದ್ದನ್ನು ಇದರ ಮುಖ್ಯಾಂಶಗಳಲ್ಲಿ ನೋಡಬಹುದು. ಇದಕ್ಕೆ ಪೂರಕವಾಗಿ ಅನೇಕ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸುವ ಉದ್ದೇಶದಿಂದ ೧೯೯೨ರಲ್ಲಿ ಕ್ರಿಯಾಯೋಜನೆಯನ್ನು ಮಾಡಲಾಯಿತು. ಈ ಕ್ರಿಯಾಯೋಜನೆಯ ಆಧಾರದ ಮೇಲೆ ಬಹುತೇಕ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತರಲಾಯಿತು.

ಸ್ವಾತಂತ್ರ್ಯ ನಂತರ ಪ್ರಜಾಪ್ರಭುತ್ವ ವ್ಯವಸ್ಥೆಯ ಬಲವರ್ಧನೆಗೆ ಶಾಲಾ ಶಿಕ್ಷಣದ ಅವಶ್ಯಕತೆ ಮತ್ತು ಮಹತ್ವವನ್ನು ಮನಗಂಡ ಸಂವಿಧಾನದ ರಚನಾಕಾರರು, ೧೪ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡುವ ಆಶಯ ಹೊಂದಿದ್ದರು. ಸಂವಿಧಾನದ ೪ನೇ ಅಧ್ಯಾಯದ ರಾಜ್ಯ ನಿರ್ದೇಶಕ ತತ್ವ ೪೫ನೇ ಪರಿಚ್ಛೇದದಲ್ಲಿ ಸೇರಿಸಲಾದ ಒಂದೇ ಒಂದು ಕಾಲಮಿತಿಯ ಕಾರ್ಯಕ್ರಮವೆಂದರೆ, ಸಂವಿಧಾನ ಜಾರಿಗೆ ಬಂದ ೧೦ ವರ್ಷದಲ್ಲಿ ಎಲ್ಲಾ ಮಕ್ಕಳಿಗೂ ಉಚಿತ ಕಡ್ಡಾಯ ಶಿಕ್ಷಣ ನೀಡಬೇಕು ಎಂಬುದಾಗಿತ್ತು. ಅದರ ಪ್ರಕಾರ ೧೯೬೦ರ ಮೊದಲು ಭಾರತದಲ್ಲಿ ಇದ್ದಂತಹ ೬ ರಿಂದ ೧೪ರ ವಯೋಮಾನದ ಪ್ರತಿಯೊಂದು ಮಗುವು ಶಿಕ್ಷಣವನ್ನು ಪಡೆಯಬೇಕಾಗಿತ್ತು. ಆಗಿನ ಅಂಕಿ-ಸಂಖ್ಯೆಗಳನ್ನು ತೆಗೆದುಕೊಂಡರೆ ಸುಮಾರು ಶೇಕಡ ೬೦ ರಿಂದ ೭೦ರಷ್ಟು ಮಕ್ಕಳು ಶಾಲೆಯಿಂದ ಹೊರಗುಳಿದಿದ್ದರು.

೧೯೬೦ರ ನಂತರ ಏಕೆ ನಮ್ಮ ಶಿಕ್ಷಣ ವ್ಯವಸ್ಥೆ ಉದ್ದೇಶಿತ ಗುರಿಯನ್ನು ಸಂವಿಧಾನದ ಆಶಯದಂತೆ ಈಡೇರಿಸಲಿಕ್ಕೆ ಆಗಲಿಲ್ಲವೆಂದರೆ, ಮೂಲಭೂತ ವ್ಯವಸ್ಥೆಯಲ್ಲಿ ಏನೋ ದೋಷವಿರಬಹುದೆಂದು ತಿಳಿಯಲಾಯಿತು. ಇದನ್ನು ಅರ್ಥಮಾಡಿಕೊಳ್ಳುವ ಉದ್ದೇಶದಿಂದ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿನ ಲೋಪ-ದೋಷಗಳೇನೆಂಬುದನ್ನು ತಿಳಿಯಲು ಶಿಕ್ಷಣ ವ್ಯವಸ್ಥೆಯ ಸಮಗ್ರ ಅಧ್ಯಯನಕ್ಕಾಗಿ ಆಯೋಗವನ್ನು (ಕಮೀಷನ್) ಜುಲೈ ೧೪, ೧೯೬೪ರಲ್ಲಿ ರಚನೆ ಮಾಡಲಾಯಿತು. ಅದನ್ನು ಕೊಠಾರಿ ಶಿಕ್ಷಣ ಆಯೋಗವೆಂದು ಕರೆಯಲಾಯಿತು. ಡಾ. ಕೊಠಾರಿ ಅವರ ಅಧ್ಯಕ್ಷತೆಯಲ್ಲಿ ಈ ಆಯೋಗವು ೧೯೬೪-

೬೬ರ ಅವಧಿಯಲ್ಲಿ ನಮ್ಮ ಶೈಕ್ಷಣಿಕ ವ್ಯವಸ್ಥೆಯನ್ನು (ಕಾನೂನು ಮತ್ತು ವೈದ್ಯಕೀಯ ಶಿಕ್ಷಣ ಹೊರತುಪಡಿಸಿ) ಸಮಗ್ರವಾಗಿ ಅಧ್ಯಯನ ಮಾಡಿ, ತನ್ನ ವರದಿಯನ್ನು ನಾಲ್ಕು ಸಂಪುಟಗಳಲ್ಲಿ ಸಲ್ಲಿಸಿತ್ತು. ಇದನ್ನು ಕೊಠಾರಿ ಶಿಕ್ಷಣದ ವರದಿ ಎಂದು ಕರೆಯಲಾಯಿತು. ಇದು ಇಂದಿಗೂ 'ಇಂಡಿಯಾದ ಶೈಕ್ಷಣಿಕ ವ್ಯವಸ್ಥೆಯ ಬೈಬಲ್'. ಇವತ್ತು ನಮ್ಮೆಲ್ಲಾ ಶೈಕ್ಷಣಿಕ ತೀರ್ಮಾನಗಳು ಹಾಗೂ ಎಲ್ಲಾ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳು ರೂಪುಗೊಳ್ಳುತ್ತಿರುವುದು ಕೊಠಾರಿ ಆಯೋಗದ ಆಧಾರದ ಮೇಲೆ. ಈ ಆಯೋಗವು ಸಂವಿಧಾನದ ಉದ್ದೇಶವನ್ನು ಪರಿಣಾಮಕಾರಿಯಾಗಿ ಈಡೇರಿಸಲಾಗಲಿಲ್ಲ. ಇದನ್ನು ಕನಿಷ್ಠ ೧೯೭೬ರ ಒಳಗೆ ಈಡೇರಿಸಬೇಕೆಂದು ಹೇಳಿತು. ರಾಷ್ಟ್ರೀಯ ಒಟ್ಟು ಉತ್ಪನ್ನದಲ್ಲಿ ಶಿಕ್ಷಣಕ್ಕೆ ಶೇಕಡ ೬ರಷ್ಟು ಹಣವನ್ನು ಮೀಸಲಿಡಲಾಯಿತು. ಒಟ್ಟಾರೆ ದೇಶದ ಶಾಲಾ ಶಿಕ್ಷಣ ವ್ಯವಸ್ಥೆ ಮತ್ತು ತರಗತಿಯೊಳಗೆ ನಡೆಯುವ ಬೋಧನಾ ಮತ್ತು ಕಲಿಕಾ ಚಟುವಟಿಕೆಯ ಆಧಾರದ ಮೇಲೆ ಎಂದು ಒತ್ತಾಯ ಪೂರಕವಾದ ವರದಿ ನೀಡಿತು. ಈ ವರದಿಯ ಆಧಾರದ ಮೇಲೆ ನಮ್ಮಲ್ಲಿ ಮೊದಲ ಶಿಕ್ಷಣ ನೀತಿ ಜಾರಿಗೆ ಬಂದಿದ್ದು ೧೯೬೮ರಲ್ಲಿ ಅದರ ಸ್ವರೂಪ ಸಂಪೂರ್ಣವಾಗಿ ಕೊಠಾರಿ ಆಯೋಗದ ವರದಿಯ ಹಿನ್ನೆಲೆಯಲ್ಲಿ ರೂಪಿತವಾಗಿದೆ. ಅಲ್ಲಿಯವರೆಗೆ (೧೯೫೦-೧೯೬೮) ಅಂದರೆ ಸಂವಿಧಾನ ಜಾರಿಗೆ ಬಂದ ೧೮ ವರ್ಷಗಳ ಕಾಲ ಸಂವಿಧಾನದ ಆಶಯವನ್ನು ಈಡೇರಿಸಲಿಕ್ಕೆ ನಮ್ಮ ದೇಶದಲ್ಲಿ ಒಂದು ಶಿಕ್ಷಣ ನೀತಿ ಇರಲಿಲ್ಲವೆಂಬುದು ಗಮನಾರ್ಹವೇ ಸರಿ. ಈ ವರದಿಯ ಆಧಾರದ ಮೇಲೆಯೇ ೧೯೬೮ರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸಿ ಜಾರಿಗೊಳಿಸಲಾಯಿತು.

ನಂತರ ೧೯೮೬ರಲ್ಲಿ, ೧೯೬೮ರ ಶಿಕ್ಷಣ ನೀತಿಯನ್ನು ಪರಿಷ್ಕರಿಸಿದ ಸರ್ಕಾರ ಕೆಲವು ಹೊಸ ಆಯಾಮಗಳೊಂದಿಗೆ ೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸಿತು. ಇದಕ್ಕೆ ಮೊದಲು ೧೯೭೦-೭೬ ಶಿಕ್ಷಣವನ್ನು ಸಮವರ್ತಿತ ಪಟ್ಟಿಯಲ್ಲಿ ಸೇರಿಸಲಾಯಿತು. ೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ೧೯೯೨ರ ಆಚಾರ್ಯ ರಾಮಮೂರ್ತಿ ಅವರ ನೇತೃತ್ವದಲ್ಲಿ ಪುನರ್ ಪರಿಷ್ಕರಣೆಗೊಳಿಸಿ, ರಾಷ್ಟ್ರೀಯ ಶಿಕ್ಷಣ ನೀತಿಯ ಕ್ರಿಯಾ ಯೋಜನೆ ೧೯೯೨ರಲ್ಲಿ ಸಂಸತ್ತಿನಲ್ಲಿ ಅಂಗೀಕಾರವನ್ನು ಪಡೆಯಿತು. ಈ ಎಲ್ಲಾ ಬೆಳವಣಿಗೆಗಳ ನಡುವೆಯೂ ೧೯೬೦ಕ್ಕೆ ಪೂರ್ಣಗೊಳ್ಳಬೇಕಿದ್ದ ಸಂವಿಧಾನದ ಆಶಯವು ಅನೇಕ ಬಾರಿ ಮುಂದೂಡಲ್ಪಟ್ಟಿತ್ತು. ಸಂವಿಧಾನ ಜಾರಿಯಾದ ೬೧ ವರ್ಷಗಳ ನಂತರವೂ ಈ ಗುರಿಯನ್ನು ಮುಟ್ಟದಿರುವುದು ಒಂದು ವಿಪರ್ಯಾಸವಾಗಿದೆ.

೨.೧೦ ೧೯೯೦ರ ನಂತರದ ಬೆಳವಣಿಗೆಗಳು

೧೯೯೦ರ ನಂತರ ನಮ್ಮ ಸರ್ಕಾರಗಳು ಶಾಲಾ ಶಿಕ್ಷಣದ ಸಾರ್ವತ್ರೀಕರಣಕ್ಕೆ ಅಂತರಾಷ್ಟ್ರೀಯ ಮಟ್ಟದ ಒತ್ತಡಗಳನ್ನು ಮತ್ತು ಸಹಯೋಗಗಳನ್ನು ಪಡೆಯಲು ಪ್ರಯತ್ನ ನಡೆಸಿತು. ೧೯೯೦ರ ಮಾರ್ಚ್‌ನಲ್ಲಿ 'ಜಾಮ್‌ಟೈ'ನಲ್ಲಿ ನಡೆದ ವಿಶ್ವ ಶೈಕ್ಷಣಿಕ ಸಮಾವೇಶದಲ್ಲಿ ೨೦೦೦ದ ಒಳಗೆ ಎಲ್ಲರಿಗೂ ಶಿಕ್ಷಣವನ್ನು ನೀಡುತ್ತೇವೆ ಎನ್ನುವ ವಾಗ್ದಾನವನ್ನು ನಮ್ಮ ಸರ್ಕಾರಗಳು ಮಾಡಿದವು. ಈ ಹಿನ್ನೆಲೆಯಲ್ಲಿ

ಅಂತರಾಷ್ಟ್ರೀಯ ಹಣಕಾಸು ಸಹಯೋಗವು ನಮ್ಮ ಶೈಕ್ಷಣಿಕ ಅಭಿವೃದ್ಧಿಗೆ ಸಹಾಯಕವಾಯಿತು. ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಎರಡು ಪ್ರಮುಖವಾದಂತಹ ಕಾರ್ಯಕ್ರಮಗಳನ್ನು ಜಾರಿಗೆ ತರಲಾಯಿತು. ಒಂದು, ಶಿಕ್ಷಕರಿಗೆ ಪುನರ್‌ಮನನ ಕಾರ್ಯಕ್ರಮಗಳು (ಸೇವಾನಿರತ ತರಬೇತಿಗಳು). ಎರಡು, ಅನೌಪಚಾರಿಕ ಶಿಕ್ಷಣ. ಇದೇ ಸಂದರ್ಭದಲ್ಲಿ ಆಂಧ್ರ ಪ್ರದೇಶದ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ (೧೯೮೯); ಬಿಹಾರ್ ಶಿಕ್ಷಣ ಕಾರ್ಯಕ್ರಮ (೧೯೯೧); ಉತ್ತರ ಪ್ರದೇಶ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ (೧೯೯೩); ಕಪ್ಪು ಹಲಗೆ ಕಾರ್ಯಕ್ರಮ ಈ ಎಲ್ಲಾ ಕಾರ್ಯಕ್ರಮಕ್ಕೆ ಸ್ವಲ್ಪಮಟ್ಟಿನ ಹಣಕಾಸಿನ ಸಹಯೋಗ ದೊರಕಿತ್ತು. ಆದರೆ ಸಂಪೂರ್ಣವಾಗಿ ಅಂತರಾಷ್ಟ್ರೀಯ ಸಹಯೋಗದೊಂದಿಗೆ ಜಾರಿಗೆ ಬಂದ ಕಾರ್ಯಕ್ರಮವೆಂದರೆ "ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ" (ಡಿ.ಪಿ.ಇ.ಪಿ.); ಈ ಕಾರ್ಯಕ್ರಮ ಪ್ರಾಥಮಿಕ ಶಾಲಾ ಶಿಕ್ಷಣ ಸಮಸ್ಯೆಗಳನ್ನು ಮತ್ತು ಸವಾಲುಗಳನ್ನು ಪರಿಹರಿಸುವ ದೃಷ್ಟಿಯಿಂದ ನಿರ್ದಿಷ್ಟವಾದಂತಹ ಕೆಲವು ಗುರಿಗಳನ್ನು ಹೊಂದಿತ್ತು. ಜಿಲ್ಲಾ ಪ್ರಾಥಮಿಕ ಕಾರ್ಯಕ್ರಮಕ್ಕೆ ಯುನಿಸೆಫ್, ಯುಎನ್‌ಡಿಪಿ, ಓಡಿಎ, ಎಸ್‌ಐಡಿಎ ಇವುಗಳಿಂದ ಹಣಕಾಸಿನ ಸಹಯೋಗವನ್ನು ಪಡೆದುಕೊಳ್ಳಲಾಯಿತು. ಈ ಕಾರ್ಯಕ್ರಮವನ್ನು ದೇಶದ ೨೭೦ ಜಿಲ್ಲೆ ಹಾಗೂ ೧೮ ರಾಜ್ಯಗಳಲ್ಲಿ ಜಾರಿಗೆ ತರಲಾಯಿತು.

ನಂತರ ೨೦೦೧ರಲ್ಲಿ ಶಾಲಾ ಶಿಕ್ಷಣವನ್ನು ೨೦೧೦ರ ಒಳಗೆ ೧೪ರ ವಯೋಮಾನದ ಎಲ್ಲಾ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಬೇಕು ಎನ್ನುವ ಉದ್ದೇಶದಿಂದ ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮವನ್ನು ಜಿಲ್ಲಾ ಪ್ರಾಥಮಿಕ ಶಿಕ್ಷಣಕ್ಕೆ (ಡಿ.ಪಿ.ಇ.ಆರ್) ಮುಂದುವರಿಕೆಯಾಗಿ ಜಾರಿಗೊಳಿಸಲಾಗಿದೆ. ಸರ್ವಶಿಕ್ಷಣ ಅಭಿಯಾನ ಕೂಡ ಅಂತರಾಷ್ಟ್ರೀಯ ನೆರವಿನಿಂದ ನಡೆಯುತ್ತಿರುವ ಕಾರ್ಯಕ್ರಮವಾಗಿದೆ.

ಹೀಗೆ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಪ್ರಯತ್ನಗಳ ಜೊತೆ-ಜೊತೆಯಾಗಿ ಸಾಗುತ್ತಿದ್ದ ಸಂದರ್ಭದಲ್ಲಿ ಭಾರತದ ಸರ್ವೋಚ್ಛ ನ್ಯಾಯಾಲಯವು ಶಾಲಾ ಶಿಕ್ಷಣವನ್ನು ಮೂಲಭೂತ ಹಕ್ಕು ಎಂದು ಘೋಷಿಸುವ ಮೂಲಕ, ಈ ಎಲ್ಲಾ ಪ್ರಯತ್ನಗಳಿಗೆ ಒಂದು ಹೊಸ ತಿರುವನ್ನು ನೀಡಿತ್ತು. ಇದು ಶಿಕ್ಷಣ ವಂಚಿತ ಮಕ್ಕಳ ಬದುಕಿನಲ್ಲಿ ಒಂದು ಹೊಸ ಆಶಾಭಾವನೆಯನ್ನು ಮೂಡಿಸಿತು. ಆಂಧ್ರಪ್ರದೇಶ ಸರ್ಕಾರ ಮತ್ತು ಉನ್ನಿಕೃಷ್ಣನ್ ಅವರ ಮೊಕದ್ದಮೆಗೆ ಸಂಬಂಧಿದಂತೆ ೧೯೯೩ರ ಶಿಕ್ಷಣ ಮೂಲಭೂತ ಹಕ್ಕು ಎನ್ನುವುದನ್ನು ಸರ್ವೋಚ್ಛ ನ್ಯಾಯಾಲಯ ತೀರ್ಪು ನೀಡಿತು. ಈ ತೀರ್ಪಿನ ಪ್ರಮುಖ ಸಾರಾಂಶ ಸಂವಿಧಾನದ ಪರಿಚ್ಛೇದ ೪೫ರ ಅನ್ವಯ ಮಗುವನ್ನು ಶಾಲೆಗೆ ಕರೆದುಕೊಂಡು ಬರುವುದು ಒಳ್ಳೆಯ ಉದ್ದೇಶದಿಂದ, ಆದರೆ ಆ ಮಗು ಕಲಿಯದೇ ಮಧ್ಯದಲ್ಲಿ ಶಾಲೆಗೆ ಬರಲಿಲ್ಲವೆಂದರೆ ಏನು ಮಾಡಲಿಕ್ಕೆ ಆಗೋಲ್ಲ ಎಂದು ಆಂಧ್ರ ಪ್ರದೇಶದ ಶಿಕ್ಷಣ ಇಲಾಖೆ ವಾದಿಸಿತ್ತು. ಈ ದೃಷ್ಟಿಕೋನ ಹೊಂದಿದ್ದ ಪರಿಚ್ಛೇದ ೪೫ನ್ನು ಪ್ರಶ್ನೆ ಮಾಡಿ ಸರ್ವೋಚ್ಛ ನ್ಯಾಯಾಲಯಕ್ಕೆ ಹೋದಾಗ ನ್ಯಾಯಾಲಯ ಏನು ನಿರ್ದೇಶನ ಮಾಡಿತ್ತೆಂದರೆ ಪರಿಚ್ಛೇದದ ೨೧ರ ಪ್ರಕಾರ ಎಲ್ಲರಿಗೂ ಜೀವಿಸುವ ಹಕ್ಕು ಇರುವ ಹಾಗೇ ಶಿಕ್ಷಣವನ್ನು ಪಡೆದುಕೊಳ್ಳುವುದು ನಮ್ಮ ಮೂಲಭೂತ ಹಕ್ಕು

ಎಂದು ಹೇಳಿತು. ಪರಿಚ್ಛೇದ ೪೫ನ್ನು ೨೧ರ ಜೊತೆ ಸೇರಿಸಿಕೊಂಡು ಪರಿಚ್ಛೇದ ೨೧(ಎ)ರಲ್ಲಿ ಇದನ್ನು ಸೇರಿಸಲಾಯಿತು. ಯಾವಾಗ ಶಿಕ್ಷಣ ಮೂಲಭೂತ ಹಕ್ಕಾಯಿತೋ ಆಗ ಸರ್ಕಾರಗಳಿಗೆ ಶಾಲಾ ಶಿಕ್ಷಣ ಅಭಿವೃದ್ಧಿಗೆ ಹೆಚ್ಚಿನ ಆಸಕ್ತಿ ಬರಲು ಬೇರೆ ಎಲ್ಲಾ ಕಾರಣಗಳಿಗಿಂತಲೂ ಸುಪ್ರೀಂಕೋರ್ಟ್ ಶಾಲಾ ಶಿಕ್ಷಣ 'ಮೂಲಭೂತ ಹಕ್ಕು' ಎಂದು ಪರಿಗಣಿಸಿದ್ದು ಅತ್ಯಂತ ಪ್ರಮುಖವಾಯಿತು. ಇವತ್ತು ಶಾಲಾ ಶಿಕ್ಷಣ ಮೂಲಭೂತ ಹಕ್ಕನ್ನು ಕಸಿದುಕೊಂಡರೆ ಅದಕ್ಕೆ ಕಾನೂನಿನ ಚೌಕಟ್ಟಿನಲ್ಲಿ ಶಿಕ್ಷೆ ಇದೆ. ಹಾಗಾಗಿ ಶಿಕ್ಷಣಕ್ಕೆ ಹೊಸ ದೃಷ್ಟಿಕೋನ ಬಂದಿದ್ದು ೧೯೯೩ರ ಸರ್ವೋಚ್ಛ ನ್ಯಾಯಾಲಯದ ತೀರ್ಪಿನ ನಂತರ ಕೇಂದ್ರ ಸರ್ಕಾರ ಕಾನೂನಿನ ಮೂಲಕ ಸೂಕ್ತವೆನಿಸಿದ ನಿರ್ಧಾರ ಕೈಗೊಂಡು ೦೬-೧೪ರ ವಯೋಮಾನದ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕೆಂಬುದನ್ನು ಸಂವಿಧಾನ ಪರಿಚ್ಛೇದ ೨೧(ಎ) ಕೆಳಗೆ ಇದನ್ನು ಸೇರಿಸಲಾಯಿತು. ಇದಕ್ಕೆ ೮೬ರ ಸಂವಿಧಾನ ಕಾಯ್ದೆ ಹಾಗೂ ೯೩ರ ಕಾಯ್ದೆ ಮತ್ತು ಗೊತ್ತುವಳಿಗಳು ರಾಷ್ಟ್ರಪತಿಗಳ ಅನುಮೋದನೆಯೊಂದಿಗೆ ಕಾಯ್ದೆಯಾಗಿದೆ.

ಈ ಕಾಯ್ದೆ ಆಚರಣೆಗೆ ಬರಬೇಕಾದರೆ ಕೇಂದ್ರ ಸರ್ಕಾರವು ಶಾಸನವನ್ನು ರೂಪಿಸಿ ಜಾರಿಗೊಳಿಸಬೇಕು. ಶಾಸನ ರೂಪಿಸಿದ ಪ್ರಕ್ರಿಯೆಗೆ ೨೦೦೩ರಲ್ಲಿ ಚಾಲನೆ ದೊರೆಯಿತು. ಪ್ರಾರಂಭದಲ್ಲಿ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಮಸೂದೆ ೨೦೦೪ ಎಂಬ ಹೆಸರಿನಲ್ಲಿ ಕರಡು ಪ್ರತಿ ತಯಾರಿಸಿ ಚರ್ಚಿಸಲಾಯಿತು. ಈ ಎರಡು ಕರಡು ಮಸೂದೆಗಳಲ್ಲಿ ಇದ್ದ ಲೋಪದೋಷಗಳ ಬಗ್ಗೆ ಶಿಕ್ಷಣ ಆಸಕ್ತರು, ಸಂಶೋಧಕರು ಮತ್ತು ನಾಗರಿಕ ಸಮಾಜ ಹಲವಾರು ಆಕ್ಷೇಪಗಳನ್ನು ಎತ್ತಿದ್ದರಿಂದ ಎರಡು ಮಸೂದೆಗಳು ಸಂಸತ್ತಿನಲ್ಲಿ ಮಂಡನೆಯಾಗಲಿಲ್ಲ.

ನಂತರ ಬದಲಾದ ರಾಜಕೀಯ ಪರಿಸ್ಥಿತಿಯನ್ನು ಎನ್.ಡಿ.ಎ. ಸರ್ಕಾರದ ಬದಲಾಗಿ ಯು.ಪಿ.ಎ. ಸರ್ಕಾರ ಅಧಿಕಾರಕ್ಕೆ ಬಂದಿದ್ದನ್ನು ಬಳಸಿಕೊಂಡ ಹೊರಗಿನ ಮತ್ತು ಒಳಗಿನ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಈ ಮಸೂದೆ ೨೦೦೫ರ ತಲೆಬರಹದಲ್ಲಿ, ನಂತರ ಅದನ್ನು ಮಾದರಿ ಶಿಕ್ಷಣ ಹಕ್ಕು ಮಸೂದೆ ೨೦೦೬ ಎಂದು ರೂಪಿಸಲಾಯಿತು. ಇದನ್ನು **ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು ಕಾಯಿದೆ–೨೦೦೯ ಎಂದು ಕರೆಯಲಾಗಿದೆ**(ಹೆಚ್ಚಿನ ವಿವರಣೆಗೆ ಯಥಾವತ್ತು ಅನುಬಂಧದಲ್ಲಿ ನೀಡಲಾಗಿದೆ).

ಅಲ್ಲದೇ ಇದನ್ನು ಮಾದರಿ ಶಿಕ್ಷಣ ಮಸೂದೆ ಜಾರಿಗೆ ತಂದ ರಾಜ್ಯ ಸರ್ಕಾರಗಳಿಗೆ ಸರ್ವಶಿಕ್ಷಣ ಅಭಿಯಾನದ ಮೂಲಕ ಶೇಕಡ ೭೫.೨೫ರ ಅನುಪಾತದ ಹಣವನ್ನು ಶೇಕಡ ೫೦.೫೦ಕ್ಕೆ ಇಳಿಸಲಾಗುತ್ತಿದೆ ಎಂಬ ಹೆದರಿಕೆ ಕೂಡ ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರ ನೀಡಿದೆ. ಇದಕ್ಕೆ ಅನೇಕ ಒತ್ತಡಗಳು ಕಾರಣವಾಗಿವೆ. ಇವತ್ತು ಜಾಗತೀಕರಣ, ಖಾಸಗೀಕರಣ ಹಾಗೂ ಉದಾರೀಕರಣದ ಹಿನ್ನೆಲೆಯಲ್ಲಿ ಎಲ್ಲವನ್ನೂ ಒಂದು ಮಾರಾಟ ವಸ್ತುವನ್ನಾಗಿ ಮಾಡುವಂತಹ ಹುನ್ನಾರುಗಳು ಕೂಡ ನಡೆಯುತ್ತಿವೆ.

ಕಳೆದ ೬೩ ವರ್ಷಗಳಲ್ಲಿ ಪ್ರಜಾಪ್ರಭುತ್ವ ಮಾದರಿಯಲ್ಲಿ ಕಟ್ಟಿ ಬೆಳೆಸಿರುವ ನಮ್ಮ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಹೇಗೆ ಉಳಿಸಿಕೊಳ್ಳಬೇಕು ಎಂಬುದನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕಾಗಿದೆ. ನಮ್ಮ ೬೧ ವರ್ಷಗಳ ಶಾಲಾ ಶೈಕ್ಷಣಿಕ ನೀತಿ-ನಿಯಮಗಳು ಹಾಗೂ ಕಾರ್ಯಕ್ರಮಗಳಲ್ಲಿ ನಾವು ಅನೇಕ ತಪ್ಪು ಹೆಜ್ಜೆಗಳನ್ನು ಇಟ್ಟಿರಬಹುದು. ಆದರೆ ಆ ತಪ್ಪು ಹೆಜ್ಜೆಗಳನ್ನು ಸಾರ್ವತ್ರಿಕ ಮನೋಭಾವನೆಯಿಂದ ಪ್ರಜಾಪ್ರಭುತ್ವ ಮಾದರಿಯಲ್ಲಿ ಚರ್ಚಿಸಿ ನಮ್ಮ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವ ಪ್ರಯತ್ನವನ್ನು ನಾವು ನಿರಂತರವಾಗಿ ಮಾಡುತ್ತಿದ್ದೇವೆ. ಆದರೆ ಈಗ ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟವೇ ಇಲ್ಲ ಎನ್ನುವ ಪ್ರಚಾರವನ್ನು ಉದ್ದೇಶಪೂರಕವಾಗಿ ಮಾಡುತ್ತಿರುವ ದೊಡ್ಡ ದೊಡ್ಡ ಫೌಂಡೇಷನ್‌ಗಳ ಹಿನ್ನೆಲೆಯನ್ನು ಗಮನಿಸಿದರೆ, ಅಲ್ಲಿ ಬಂಡವಾಳಶಾಹಿಗಳ ಹಿತಾಸಕ್ತಿ ಇರುವುದು ಕಂಡುಬರುತ್ತದೆ. ಈಗಾಗಲೇ ನಮ್ಮ ರಾಷ್ಟ್ರದ ಯೋಜನಾ ಆಯೋಗದ ಉಪಾಧ್ಯಕ್ಷರಾದ ಮಾನ್‌ಟೆಕ್‌ಸಿಂಗ್ ಅಹ್ಲುವಾಲಿಯ ಅವರು ೧೧ನೇ ಪಂಚವಾರ್ಷಿಕ ಯೋಜನೆ ಕುರಿತು ಚರ್ಚೆ ನಡೆಸುವ ಸಂದರ್ಭದಲ್ಲಿ ಶಾಲಾ ಶಿಕ್ಷಣದಲ್ಲಿ ನಾವು ಇನ್ನು ಮುಂದೆ ವೋಚರ್ ಸಿಸ್ಟಮ್‌ನ್ನು ತರುತ್ತೇವೆ ಎಂದು ಹೇಳಿದ್ದಾರೆ. ವೋಚರ್ ಸಿಸ್ಟಮ್ ಎಂದರೆ ಒಂದು ಮಗು ಸರ್ಕಾರಿ ಶಾಲೆಯಲ್ಲಿ ಓದಲಿಕ್ಕೆ ಎಷ್ಟು ಹಣ ಖರ್ಚಾಗುತ್ತದೆ ಎಂಬುದನ್ನು ಲೆಕ್ಕಾಚಾರ ಮಾಡಲಾಗುವುದು. ಅದನ್ನು ಕೂಪನ್ ರೀತಿಯಲ್ಲಿ ಮಗುವಿನ ತಂದೆ ತಾಯಿಯವರಿಗೆ ಕೊಡಲಾಗುತ್ತದೆ. ಅದನ್ನು ತೆಗೆದುಕೊಂಡು ಎಲ್ಲಿ ಬೇಕಾದರೂ ಅವರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಬಹುದು ಅಥವಾ ಸರ್ಕಾರಿ ಶಾಲೆಗಳನ್ನು ಬಿಟ್ಟು ಖಾಸಗಿ ಶಾಲೆಗೆ ಬೇಕಾದರೂ ಹೋಗಬಹುದು.

ಅದು ಯಾವ ಬಗೆಯ ಅಪಾಯವನ್ನು ಉಂಟುಮಾಡುತ್ತದೆಯೆಂದರೆ ೬೦೦; ೭೦೦; ೧೦೦೦ ರೂಪಾಯಿಗಳ ವೋಚರ್ ಪಡೆದುಕೊಂಡು ಸರ್ಕಾರಿ ಶಾಲೆಯನ್ನು ಬಿಟ್ಟು ಹೋಗುತ್ತೇವೆ ಎಂದು ಊಹಿಸಿಕೊಳ್ಳಿ. ಎರಡು ಮೂರು ತಿಂಗಳ ನಂತರ ಅಥವಾ ಆರು ತಿಂಗಳ ನಂತರ ಖಾಸಗಿ ಶಾಲೆಗಳು ೧೩೦೦, ೧೫೦೦, ೨೦೦೦ ರೂಪಾಯಿಗಳನ್ನು ಕೇಳಿದಾಗ ಇದನ್ನು ಪೋಷಕರು ಕೊಡಲಿಕ್ಕೂ ಆಗದೇ ಮಗುವನ್ನು ಆ ಕಡೆ ಸರ್ಕಾರಿ ಶಾಲೆಗೂ ಕಳುಹಿಸಲಾಗದೇ, ಇತ್ತಾ ಖಾಸಗಿ ಶಾಲೆಯಲ್ಲಿಯೂ ಮಗುವಿಗೆ ಅವಕಾಶವಿಲ್ಲದೇ ಮಗುವಿನ ಶಿಕ್ಷಣ ಅತಂತ್ರವಾಗುತ್ತದೆ. ಇದು ಈಗಾಗಲೇ ಲ್ಯಾಟಿನ್ ಅಮೇರಿಕಾದ ಬೇರೆ ಬೇರೆ ದೇಶಗಳಲ್ಲಿ ಆಗಿರುವಂತಹ ಬಹುದೊಡ್ಡ ಅನಾಹುತ. ಇನ್ನು ನಮ್ಮ ರಾಷ್ಟ್ರದ ನಗರ ಪ್ರದೇಶದಲ್ಲಿರುವ ಬಹುಸಂಖ್ಯಾತ ಗ್ರಾಮೀಣ ಪ್ರದೇಶದ ಬಡಮಕ್ಕಳಿಗೆ ಪ್ರಜಾಸತ್ತಾತ್ಮಕ ಮಾದರಿಯಲ್ಲಿ ಶಿಕ್ಷಣ ಒದಗಿಸಿಕೊಡಲು ಸಾಧ್ಯವೇ? ಈಗಾಗಲೇ ಇರುವ ಪ್ರಜಾಸತ್ತೆಯನ್ನು ಜಾತಿ, ಸೃಜನಾತ್ಮಕ ಪಕ್ಷಪಾತ, ಧರ್ಮ ಎಲ್ಲವೂ ಬೇರೂರಿರುವಾಗ ಪ್ರಜಾಪ್ರಭುತ್ವ ಮಾದರಿ ಯಲ್ಲಿ ನಾವು ಈಗಾಗಲೇ ಕಟ್ಟಿ ಬೆಳೆಸಿರುವಂತಹ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಪ್ರಜಾಪ್ರಭುತ್ವ ಮಾದರಿಯಲ್ಲಿ ಉಳಿಸಿಕೊಳ್ಳುವುದು ನಮ್ಮೆಲ್ಲರ ಬಹುದೊಡ್ಡ ಕರ್ತವ್ಯವಾಗಿದೆ. ಇಲ್ಲದೇ ಹೋದರೆ ಈ ಜಾಗತೀಕರಣ ಎನ್ನುವ ಒಂದು ಬೃಹತ್ ಅಲೆಯಲ್ಲಿ ನಾವು ಕಣ್ಮರೆಯಾಗಬಹುದು. ಈ ಜಾಗತೀಕರಣ ಎಂಬುದೊಂದು

ಬಹುದೊಡ್ಡ ಜಾಲ, ಈ ಜಾಲ ಎಲ್ಲವನ್ನೂ ಆಕ್ರಮಿಸುತ್ತಾ ಹೋಗುತ್ತದೆ. ಇಂದು ನೀರನ್ನು ಜಾಗತೀಕರಣ ಮಾಡಿದ್ದೇವೆ. ಸಂಸ್ಕೃತಿಯನ್ನು ಜಾಗತೀಕರಣ ಮಾಡ್ತಾ ಇದ್ದೇವೆ. ನಮ್ಮ ಸ್ವಂತಿಕೆಯನ್ನು ದುಡ್ಡಿಗಾಗಿ ಮಾರಾಟ ಮಾಡ್ತಾ ಇದ್ದೇವೆ. ನಮ್ಮದು ಎನ್ನುವುದು ಏನು ಉಳಿತಾ ಇಲ್ಲ. ಹಾಗಾಗಿ ಜಾಗತೀಕರಣದ ಪರಿಸರ ಮತ್ತು ಪರಿಸ್ಥಿತಿಯಲ್ಲಿ ನಮ್ಮದೇ ಆದಂತಹ ಒಂದು ಶಿಕ್ಷಣ ವ್ಯವಸ್ಥೆಯನ್ನು ಕಟ್ಟಿಬೆಳೆಸುವಂತಹ ಬಹುದೊಡ್ಡ ಜವಾಬ್ದಾರಿ ನಮ್ಮ ಮುಂದಿದೆ.

೨.೧೧ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ ೨೦೦೯: ಅನುಬಂಧದಲ್ಲಿ ಯಥಾವತ್ತಾಗಿ ನಿರೂಪಿಸಲಾಗಿದೆ.

ಅಧ್ಯಾಯ ಮೂರು

ಅಧ್ಯಯನ ಕ್ಷೇತ್ರದಲ್ಲಿ ಶೈಕ್ಷಣಿಕ ಪರಿಸರದ ಸ್ಥಿತಿ–ಗತಿ

ಅಧ್ಯಾಯ ಮೂರು

ಅಧ್ಯಯನ ಕ್ಷೇತ್ರದಲ್ಲಿ ಶೈಕ್ಷಣಿಕ ಪರಿಸರದ ಸ್ಥಿತಿ-ಗತಿ

ಈ ಅಧ್ಯಾಯದಲ್ಲಿ ಸಾಕ್ಷರತೆ, ಶಾಲಾ-ದಾಖಲಾತಿ, ಶಾಲಾ ದಾಖಲಾತಿಯ ಸಾಧನೆ, ಶಾಲೆ ಬಿಟ್ಟ ಮಕ್ಕಳು, ಇತ್ಯಾದಿ ಅಂಶಗಳನ್ನು ರಾಜ್ಯ, ಜಿಲ್ಲೆ, ತಾಲ್ಲೂಕು, ಗ್ರಾಮ ಪಂಚಾಯತಿ ಮತ್ತು ಅಧ್ಯಯನಕ್ಕೆ ಒಳಪಡಿಸಿದ ಗ್ರಾಮಗಳ ಜೊತೆಗೆ ತುಲನೆಮಾಡಿ ನೋಡುವ ಮೂಲಕ ಆಯಾ ಗ್ರಾಮಗಳ ಶೈಕ್ಷಣಿಕ ಸ್ಥಿತಿ-ಗತಿಯನ್ನು ಗುರುತಿಸುವ ಪ್ರಯತ್ನಮಾಡಲಾಗಿದೆ.

೩.೧ ಪ್ರಸ್ತಾವನೆ

ಭಾರತದ ಸ್ವಾತಂತ್ರ್ಯಾನಂತರದ ಶೈಕ್ಷಣಿಕ ಅಭಿವೃದ್ಧಿಯ ಗುರಿಗಳಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವು ಅತ್ಯಂತ ಪ್ರಮುಖವಾಗಿದೆ. ನಮ್ಮ ಸಂವಿಧಾನ ಜಾರಿಗೆ ಬಂದ ಹತ್ತು ವರ್ಷದೊಳಗೆ ಹದಿನಾಲ್ಕು ವರ್ಷ ವಯಸ್ಸಿನವರೆಗಿನ ಎಲ್ಲಾ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಪ್ರಾಥಮಿಕ ಶಿಕ್ಷಣ ನೀಡಬೇಕೆಂಬ ನಿರ್ದೇಶನವನ್ನು ಅನುಚ್ಛೇದ ೪೫ರಲ್ಲಿ ನೀಡಲಾಗಿದೆ. ೧೯೬೦ರ ವೇಳೆಗೆ ಸಾಧಿಸಬೇಕಾಗಿದ್ದ ಗುರಿ ಮುಟ್ಟಲಾಗಲಿಲ್ಲ. ಇದರಿಂದಾಗಿ ಉದ್ದೇಶಿತ ಕಾಲವನ್ನು ಮೊದಲು ೧೯೭೦ಕ್ಕೆ, ನಂತರ ೧೯೭೫ ಮತ್ತು ಅನಂತರ ೧೯೯೦ಕ್ಕೆ ವಿಸ್ತರಿಸಲಾಯಿತು. ೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿಯು ಇದನ್ನು ೧೯೯೫ಕ್ಕೆಂದು ನಿಗದಿಪಡಿಸಿದ್ದು, ಪರಿಷ್ಕೃತ ನೀತಿಯಲ್ಲಿ ಹೀಗೆ ಹೇಳಲಾಗಿದೆ. "ನಾವು ೨೧ನೇ ಶತಮಾನಕ್ಕೆ ಕಾಲಿಡುವ ಮೊದಲು ೧೪ ವರ್ಷದವರೆಗಿನ ಎಲ್ಲ ಮಕ್ಕಳಿಗೂ ಉಚಿತ ಹಾಗೂ ಕಡ್ಡಾಯ ಮಾತ್ರವಲ್ಲದೇ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವುದು ಖಚಿತವಾಗಬೇಕಾಗಿದೆ. ಈ ಗುರಿ ಸಾಧನೆಗಾಗಿ ಒಂದು ರಾಷ್ಟ್ರೀಯ ಮಿಷನ್ ಪ್ರಾರಂಭಿಸಲಾಗಿದೆ." ೨೦೦೦ದ ವಿಶ್ವ ಶಿಕ್ಷಣ ಸಮಾವೇಶವು ನಿರ್ಧರಿಸಿರುವಂತೆ ಭಾರತವು ಈ ಗುರಿಯನ್ನು ೨೦೧೦ರ ವೇಳೆಗೆ ಸಾಧಿಸಬೇಕಾಗಿದೆ.

ಪ್ರಸ್ತುತದಲ್ಲಿ ೨೦೧೦ನೇ ಇಸವಿ ಮುಗಿಯುತ್ತಾ ಬಂದರೂ ಸಹ ಇದು ತನ್ನ ಗುರಿ ಮುಟ್ಟಿಲ್ಲ. ಸಾಕ್ಷರತೆಯ ಪ್ರಮಾಣವನ್ನು ಸೂಕ್ಷ್ಮವಾಗಿ ನೋಡುವುದಾದರೆ ಪ್ರದೇಶ, ವರ್ಗ, ಜಾತಿ ಮತ್ತು ಲಿಂಗಾಧಾರಿತ ಪರಿಮಾಣದಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಭಾರತದ ದಕ್ಷಿಣ-ಪಶ್ಚಿಮ ಭಾಗದಲ್ಲಿ ಸಾಕ್ಷರತೆಯು ಉತ್ತರ-ಪೂರ್ವ ಭಾಗಕ್ಕಿಂತ ಬಹಳ ಹೆಚ್ಚಿನ ಪ್ರಮಾಣದ ಸಾಧನೆಯನ್ನು ಮಾಡಿರುವುದು ನೋಡಬಹುದು. ಶೈಕ್ಷಣಿಕ ಅಭಿವೃದ್ಧಿಯ ಸೂಚ್ಯಂಕಗಳಲ್ಲಿ ಒಂದಾದ ಸಾಕ್ಷರತೆಯ ದಶವಾರ್ಷಿಕ ಬೆಳವಣಿಗೆಯನ್ನು ವಿಮರ್ಶಾತ್ಮಕವಾಗಿ ಗಮನಿಸಿದರೆ, ಸಾಕ್ಷರತಾ ಬೆಳವಣಿಗೆಯ ಪ್ರಾದೇಶಿಕ ಅಂಶಗಳು ಬೆಳಕಿಗೆ ಬರುತ್ತವೆ. ೧೯೫೧-೬೧ರ ದಶಕದಲ್ಲಿ ಶೇಕಡ ೧೦.೦೦ರ ಪ್ರಮಾಣದಲ್ಲಿ, ೧೯೬೧-೭೧ರ ದಶಕದಲ್ಲಿ ಶೇಕಡ ೬.೦೧ರ ಪ್ರಮಾಣದಲ್ಲಿ, ೧೯೭೧-೮೧ರ ದಶಕದಲ್ಲಿ ಶೇಕಡ ೯.೦೧ರ ಪ್ರಮಾಣದಲ್ಲಿ, ೧೯೮೧-೯೧ರ ದಶಕದಲ್ಲಿ ಶೇಕಡ ೮.೦೭ರ ಪ್ರಮಾಣದಲ್ಲಿ ಮತ್ತು ೧೯೯೧-೨೦೦೧ರ ದಶಕದಲ್ಲಿ ಶೇಕಡ ೧೨.೦೯ರ ಪ್ರಮಾಣದಲ್ಲಿ ಸಾಕ್ಷರತೆಯ ದಶವಾರ್ಷಿಕ ಬೆಳವಣಿಗೆಯಾಗಿದೆ. ಇದೇ ಅವಧಿಯಲ್ಲಿ (೧೯೬೧-೨೦೦೧) ಅನಕ್ಷರಸ್ಥರ ಸಂಖ್ಯೆ ೨೯೪.೦೦ ಮಿಲಿಯನ್‌ನಿಂದ ೨೬೮.೪೨ ಮಿಲಿಯನ್‌ಗೆ ಹೆಚ್ಚಳವಾಗಿದೆ (ಜನಗಣತಿ ೧೯೬೧; ೨೦೦೧, ರಾಷ್ಟ್ರೀಯ ಸಾಕ್ಷರತಾ ಮಿಶನ್ ೨೦೦೦). ಈ ಅಂಕಿ ಅಂಶಗಳಿಂದ ಸ್ಪಷ್ಟವಾಗುವ ಅಂಶವೆಂದರೆ ಕಳೆದ ೬೦ ವರ್ಷಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಮೈಲಿಗಲ್ಲುಗಳನ್ನು ಕಂಡುಕೊಳ್ಳುವುದರ ಜೊತೆಗೆ ಸಾಧಿಸಿರುವ ಪ್ರಗತಿ ಸಣ್ಣ ಪ್ರಮಾಣದ್ದು ಎಂದು ಹೇಳಲು ಬರುವುದಿಲ್ಲ. ಆದರೆ ಎಲ್ಲರಿಗೂ ಶಿಕ್ಷಣ ನೀಡುವ ಗುರಿಯನ್ನು ಸಾಧಿಸುವಲ್ಲಿ ಹಿಂದುಳಿದಿರುವುದು ವಿಷಾದಕರ ಸಂಗತಿಯಾಗಿದೆ.

ಕೋಷ್ಟಕ- ೩.೧೨

ಸಾಕ್ಷರತೆಯ ದಶವಾರ್ಷಿಕ ಬೆಳವಣಿಗೆಯ ಪ್ರಮಾಣ

ವರ್ಷ	*ಸಾಕ್ಷರತಾ ಪ್ರಮಾಣ ದಶವಾರ್ಷಿಕ ಬೆಳವಣಿಗೆಯ ಪ್ರಮಾಣ ಶೇಕಡವಾರು*	*ಅನಕ್ಷರಸ್ಥರ ಸಂಖ್ಯೆ ಶೇಕಡವಾರು*	*ಮಿಲಿಯನ್‌ಗಳಲ್ಲಿ*
೧೯೫೧	೧೮.೦೩	--	--
೧೯೬೧	೨೮.೦೩	೧೦.೦೦	೨೯೪.೪೦
೧೯೭೧	೩೪.೦೪	೦೬.೦೧	೨೮೩. ೦೩
೧೯೮೧	೪೫.೦೫	೦೯.೦೧	೩೦೫.೩೧
೧೯೯೧	೫೨.೦೨	೦೮.೦೭	೩೨೮.೮೮
೨೦೦೧	೬೫.೦೪	೧೨.೦೯	೨೬೮.೪೨

ಮೂಲ: ಜನಗಣತಿ ೨೦೦೧ ರಾಷ್ಟ್ರೀಯ ಸಾಕ್ಷರತಾ ಮಿಶನ್ ೨೦೦೦

೩.೨ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ

ಕರ್ನಾಟಕ ರಾಜ್ಯವು ರಾಷ್ಟ್ರದ ಶೈಕ್ಷಣಿಕ ಪರಿಸರದಲ್ಲಿ ಬಿಹಾರದಷ್ಟು ಹಿಂದುಳಿಯದೆ, ಕೇರಳ ರಾಜ್ಯದಷ್ಟು ಅಭಿವೃದ್ಧಿ ಸಾಧಿಸದೆ, ಹಿಮಾಚಲ ಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಷ್ಟು ಪ್ರಗತಿ ಕಾಣದಿದ್ದರೂ ತನ್ನದೇ ಆದಂತಹ ಪ್ರಾತಿನಿಧ್ಯವನ್ನು ಪಡೆದಿರುತ್ತದೆ. ಈ ದೃಷ್ಟಿಯಿಂದ ಕರ್ನಾಟಕ ರಾಜ್ಯವು ಮಧ್ಯಮಗತಿಯ ರಾಜ್ಯವಾಗಿದೆ (ಚಂದ್ರಶೇಖರ್ ಟಿ.ಆರ್., ೨೦೦೩). ೨೦೦೧ರ ಜನಗಣತಿ ಪ್ರಕಾರ ಕರ್ನಾಟಕದ ಒಟ್ಟು ಸಾಕ್ಷರತೆಯ ಪ್ರಮಾಣ ಶೇಕಡ ೬೭.೦೪ರಷ್ಟಿದೆ. ಇದರಲ್ಲಿ ಪುರುಷ ಸಾಕ್ಷರತೆ ಶೇಕಡ ೭೬.೨೯ರಷ್ಟು ಮತ್ತು ಮಹಿಳಾ ಸಾಕ್ಷರತೆ ಶೇಕಡ ೫೭.೪೫ರಷ್ಟಿದೆ. ಇದು ರಾಷ್ಟ್ರದ ಸರಾಸರಿ ಮಹಿಳಾ ಸಾಕ್ಷರತೆಗಿಂತಲೂ ಕಡಿಮೆ. ಮಹಿಳೆಯರ ಅತ್ಯಧಿಕ ಸಾಕ್ಷರತೆ ಶೇಕಡ ೮೨.೨೪ ರಷ್ಟಿದ್ದರೆ, ಪುರುಷರ ಅತ್ಯಧಿಕ ಸಾಕ್ಷರತೆಯ ಪ್ರಮಾಣ ಶೇಕಡ ೯೨.೫೪ರಷ್ಟಾಗಿರುತ್ತದೆ. ಒಟ್ಟಿನಲ್ಲಿ ಶೇಕಡ ೧೦.೦೨ರಷ್ಟು ಸಾಕ್ಷರತೆಯ ಲಿಂಗ ತಾರತಮ್ಯ ಕಂಡುಬರುತ್ತದೆ. ಒಟ್ಟಾರೆ, ಪುರುಷರ ಸಾಕ್ಷರತೆ ಪ್ರಮಾಣ ಗ್ರಾಮ-ನಗರವಾರು ಮಹಿಳೆಯರ ಸಾಕ್ಷರತೆಗಿಂತ ಅಧಿಕವಾಗಿದೆ (ಸೆನ್ಸಸ್, ೨೦೦೧). ಇಲ್ಲಿ ಶೈಕ್ಷಣಿಕ ಪ್ರಗತಿಗೆ ಏನು ಪ್ರಯತ್ನಗಳು ನಡೆದಿಲ್ಲವೆ? ಎನ್ನುವಷ್ಟರ ಮಟ್ಟಿಗೆ ಕೆಲವು ಪ್ರದೇಶದ ಜನಸಮುದಾಯಗಳ ಶೈಕ್ಷಣಿಕ ಅಭಿವೃದ್ಧಿ ಹಿಂದುಳಿದಿರುವುದು ತಿಳಿಯುತ್ತದೆ. ಇದರ ಅರ್ಥ ಶೈಕ್ಷಣಿಕ ಅಭಿವೃದ್ಧಿಯ ಪ್ರಯತ್ನಗಳು ನಡೆದಿಲ್ಲ ಎಂದಲ್ಲ. ಅವು ಯಾರನ್ನು ತಲುಪಬೇಕಿತ್ತೋ ಅವರನ್ನು ತಲುಪದಿರುವುದು ನಿಜವಾಗಿಯೂ ಒಂದು ರೀತಿಯ ಸವಾಲಾಗಿದೆ. ಸಾಕ್ಷರತೆ ಮತ್ತು ಶಿಕ್ಷಣದ ಪ್ರಗತಿಯು ಯಾವುದೇ ಸಮಾಜದಲ್ಲಿಯಾದರೂ ಸಾಮಾಜಿಕವಾಗಿರುತ್ತದೆಯೇ ಹೊರತು ಜೈವಿಕವಾದುದಲ್ಲ.

ಕರ್ನಾಟಕದಲ್ಲಿರುವ ಮಹಿಳೆಯರ ಕೆಳಮಟ್ಟದ ಸಾಕ್ಷರತೆ ದರವು ಶಿಕ್ಷಣವು ಮಹಿಳೆಯರಿಗೆ ಸಹಜವಾದ ಹಕ್ಕು ಎಂಬುದನ್ನು ಮಾನ್ಯತೆ ಮಾಡಲು ಸಿದ್ಧವಿಲ್ಲದಿರುವುದನ್ನು ಮತ್ತು ಇದು ಲಿಂಗ ಸಂಬಂಧಿ ಪಕ್ಷಪಾತವೆಂದು ಪ್ರತ್ಯಕ್ಷವಾಗಿ ರುಜುವಾತುಪಡಿಸುತ್ತದೆ. ಜಾತಿ, ಅಂತಸ್ತು ಮತ್ತು ಭೌಗೋಳಿಕ ಅಂಶಗಳು ಸಮಾನತೆಯ ಇತರೆ ಮೂಲಗಳಾಗಿದ್ದು, ಇವು ಮಹಿಳಾ ಸಾಕ್ಷರತಾ ಮಟ್ಟವನ್ನು ರೂಪುಗೊಳಿಸುತ್ತವೆ. ಇದು ಅಂತರ ಜಿಲ್ಲಾ ಮಹಿಳಾ ಸಾಕ್ಷರತೆಯ ನಿರ್ವಹಣೆಯನ್ನು ವಿಶ್ಲೇಷಿಸಿದಾಗ ಸ್ಪಷ್ಟವಾಗುತ್ತದೆ. ಬೆಂಗಳೂರು ನಗರದಲ್ಲಿ ಮಹಿಳಾ ಸಾಕ್ಷರತೆಯು ಶೇ.೭೭.೪೮ರಷ್ಟು ಗರಿಷ್ಟ ಪ್ರಮಾಣದಲ್ಲಿ ದಾಖಲಾಗಿದ್ದರೆ, ರಾಯಚೂರಿನಲ್ಲಿ ಅತಿ ಕಡಿಮೆ ಅಂದರೆ, ಶೇ.೩೫.೬೩ರಷ್ಟು ಕಂಡುಬಂದಿದೆ. ಅದೇ ರೀತಿ ಗುಲಬರ್ಗಾ ಮತ್ತು ಕೊಪ್ಪಳ ಜಿಲ್ಲೆಗಳು ಅನುಕ್ರಮವಾಗಿ ಶೇ.೩೭.೯೦ ಮತ್ತು ಶೇ.೩೯.೬೧ರಷ್ಟು ಮಹಿಳಾ ಸಾಕ್ಷರತೆಯನ್ನು ಹೊಂದಿವೆ. ಭೌಗೋಳಿಕವಾಗಿ ಗುಲ್ಬರ್ಗಾ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳು ಸಮೀಪವಾಗಿದ್ದು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಕೆಳಮಟ್ಟದ ಅಭಿವೃದ್ಧಿ ಹೊಂದಿದ ಗುಣಲಕ್ಷಣಗಳನ್ನು ಹಂಚಿಕೊಂಡಿವೆ (ಎಚ್.ಡಿ. ಪ್ರಶಾಂತ್, ೨೦೦೭).

ಕೋಷ್ಟಕ ೩.೨೨

ಸಾಮಾಜಿಕ ಗುಂಪುವಾರು ಸಾಕ್ಷರತಾ ದರದಲ್ಲಿನ ಗುಣಸಂಖ್ಯಾ ವ್ಯತ್ಯಾಸಗಳು (ಶೇಕಡವಾರು)

ಲಿಂಗ	ಒಟ್ಟು		ಪರಿಶಿಷ್ಟ ಜಾತಿ		ಪರಿಶಿಷ್ಟ ಪಂಗಡ	
	೧೯೯೧	೨೦೦೧	೧೯೯೧	೨೦೦೧	೧೯೯೧	೨೦೦೧
			ದಕ್ಷಿಣ ಕರ್ನಾಟಕ			
ಪುರುಷ	೧೨.೭	೧೦.೪	೧೬.೨	೯.೧	೨೨.೬	೧೫.೧
ಸ್ತ್ರೀ	೨೪.೩	೧೭.೨	೩೨.೩	೧೬.೭	೩೬.೯	೨೨.೫
ಒಟ್ಟು	೧೭.೨	೧೩.೨	೨೧.೫	೧೨.೦	೨೭.೧	೧೭.೯
			ಉತ್ತರ ಕರ್ನಾಟಕ			
ಪುರುಷ	೧೫.೨	೯.೯	೨೨.೪	೧೩.೫	೨೭.೮	೧೭.೨
ಸ್ತ್ರೀ	೩೧.೫	೨೦.೪	೪೧.೨	೨೭.೧	೪೭.೫	೩೧.೮
ಒಟ್ಟು	೨೦.೯	೧೪.೦	೨೮.೫	೧೮.೪	೩೩.೪	೨೨.೨
			ಎಲ್ಲಾ ಜಿಲ್ಲೆಗಳು			
ಪುರುಷ	೧೪.೦	೧೦.೬	೧೯.೦	೧೧.೮	೨೪.೭	೧೬.೫
ಸ್ತ್ರೀ	೨೯.೬	೨೧.೩	೩೭.೫	೨೫.೦	೪೪.೬	೩೦.೪
ಒಟ್ಟು	೧೯.೮	೧೪.೮	೨೪.೮	೧೬.೭	೩೦.೫	೨೧.೫

ಮೂಲ: ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ, ಪ್ರಾಥಮಿಕ ಜನಗಣತಿ, ಭಾರತದ ಜನಗಣತಿ ೨೦೦೧ರ ಮಾಹಿತಿ.

ಈ ಕೋಷ್ಟಕದ ಪ್ರಕಾರ ಉತ್ತರ ಕರ್ನಾಟಕದಲ್ಲಿ ಸಾಕ್ಷರತೆಯಲ್ಲಿನ ಲಿಂಗ ಆಧಾರಿತ ತಾರತಮ್ಯವು ದಕ್ಷಿಣ ಕರ್ನಾಟಕಕ್ಕಿಂತ ಹೆಚ್ಚಾಗಿದ್ದು, ದಕ್ಷಿಣ ಕರ್ನಾಟಕದಲ್ಲಿನ ಲಿಂಗತಾರತಮ್ಯವು ಕನಿಷ್ಠ ಮಟ್ಟದ್ದಾಗಿದೆ ಎಂದು ಸುಲಭವಾಗಿ ಗೋಚರಿಸುತ್ತದೆ. ಕಳೆದ ದಶಕದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮಹಿಳಾ ಸಾಕ್ಷರತಾ ದರದಲ್ಲಿ ಸುಧಾರಣೆಯಾಗಿರಬಹುದಾದರೂ, ಇದು ನಗರ ಕೇಂದ್ರದ ಪಕ್ಕದಲ್ಲಿರುವಂತಹ ಅನುಕೂಲ ಹೊಂದಿರುವ ಜಿಲ್ಲೆಗೆ ಬಹಳ ಕಡಿಮೆಯೇ ಆಗಿರುತ್ತದೆ. ದಕ್ಷಿಣ ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ ತಾರತಮ್ಯದ ತೀಕ್ಷ್ಣತೆಯು ಕಡಿಮೆ ಇದ್ದರೂ ಸಹ ಇಲ್ಲಿಯೂ ತಾರತಮ್ಯವಿದೆ. ಇದು ಮಹಿಳೆಯರ ಆರೋಗ್ಯ ಮತ್ತು ಬಡತನದ ಮೇಲೆ ಗಂಭೀರ ಪರಿಣಾಮವನ್ನು ಉಂಟುಮಾಡುತ್ತದೆ. ಒಟ್ಟಾರೆ, ಸಾಕ್ಷರತೆಯಲ್ಲಿ ಲಿಂಗಾಧಾರಿತ ತಾರತಮ್ಯವು ಕಡಿಮೆಯಾಗುತ್ತಿದ್ದು, ಇದು ಕಡಿಮೆ ಅಭಿವೃದ್ಧಿ ಹೊಂದಿದ ಜಿಲ್ಲೆಗಳಲ್ಲಿ ವೇಗವಾಗಿರುವುದು ಧೈರ್ಯ ನೀಡುವಂತದ್ದಾಗಿದ್ದರೂ, ಸಹಸ್ರಮಾನದ ಗುರಿಗಳನ್ನು ಸಾಧಿಸಿಕೊಳ್ಳಲು ಕರ್ನಾಟಕದಲ್ಲಿ ಹೆಚ್ಚು ಶೈಕ್ಷಣಿಕ ನೀತಿ ಮತ್ತು ಕಾರ್ಯಕ್ರಮಗಳ ಮಧ್ಯಸ್ಥಿಕೆಯ ಅವಶ್ಯಕತೆ ಇದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದವರಲ್ಲಿ ಕೆಳಮಟ್ಟದ

ಸಾಕ್ಷರತಾ ಪ್ರಮಾಣವಿದ್ದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆ ಹೆಚ್ಚಾಗಿರುವ ಜಿಲ್ಲೆಗಳಲ್ಲಿ ಸಾಕ್ಷರತಾ ದರವು ಕೆಳಮಟ್ಟದಲ್ಲಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ (ಎಚ್.ಡಿ. ಪ್ರಶಾಂತ್, ೨೦೦೭).

ಪ್ರಾಥಮಿಕ ಶಿಕ್ಷಣ ಸೌಲಭ್ಯವು ಎಲ್ಲರಿಗೂ ದೊರಕಬೇಕೆಂಬ ಪ್ರಯತ್ನಗಳು ಕೂಡ ನಿರಂತರವಾಗಿಯೇ ನಡೆಯುತ್ತವೆ. ೦೬-೧೪ ವಯೋಮಾನದ ಎಲ್ಲಾ ಮಕ್ಕಳಿಗೆ ಸಾರ್ವತ್ರಿಕವಾಗಿ, ಉಚಿತ ಮತ್ತು ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣವನ್ನು ನೀಡಬೇಕೆಂಬುದು ನಮ್ಮ ಸಂವಿಧಾನ ರಚನಾಪೂರ್ವದ ಆಶಯವಾಗಿರುತ್ತದೆ. ೧೮೦೭ರಲ್ಲಿ ಟ್ರಾವಂಕೂರ್ ಮಹಾರಾಣಿ, ಪ್ರಾಂತ್ಯದ ಎಲ್ಲರಿಗೆ ಶಿಕ್ಷಣ ನೀಡುವ ಘೋಷಣೆ ಮಾಡಿದ ನಂತರ, ದಾದಾಬಾಯಿ ನವರೋಜಿಯವರು ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಬ್ರಿಟಿಷ್ ಸರ್ಕಾರದ ಭಾರತೀಯ ಶಿಕ್ಷಣ ಆಯೋಗವನ್ನು ಒತ್ತಾಯಿಸಿದ್ದಾರೆ. ಬರೋಡಾದ ಮಹಾರಾಜ ಗಾಯಕ್ವಾಡ ಅಮಾರಾಯಲಿ ೧೯೦೬ರಲ್ಲಿ ಬರೋಡ ಪ್ರಾಂತ್ಯದಲ್ಲಿ ಕಡ್ಡಾಯ ಶಿಕ್ಷಣವನ್ನು ಜಾರಿಗೊಳಿಸಿದರು. ಶಿಕ್ಷಣಕ್ಕೆ ಸಂಬಂಧಿಸಿದಂತೆಯೇ ಗೋಪಾಲಕೃಷ್ಣ ಗೋಖಲೆಯವರು ೧೯೧೧ರಲ್ಲಿ ಕೇಂದ್ರ ಶಾಸನ ಸಭೆಯಲ್ಲಿ ಗೊತ್ತುವಳಿ ಮಂಡಿಸಿದರು. ಇದೇ ಸಂದರ್ಭದಲ್ಲಿ ಶಿಕ್ಷಣದ ಸಾರ್ವತ್ರಿಕರಣಕ್ಕಾಗಿ ಸಾರ್ವಜನಿಕರ ಒತ್ತಾಯದ ಕಾರಣದಿಂದ ಬ್ರಿಟಿಷ್ ಸರ್ಕಾರ ಅನೇಕ ಆಯೋಗಗಳನ್ನು ರಚಿಸಿತು. ನಂತರ ಸಂವಿಧಾನ ಜಾರಿಗೊಂಡ ೧೦ ವರ್ಷದೊಳಗೆ ಎಲ್ಲರಿಗೂ ಸಾರ್ವತ್ರಿಕ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ ನೀಡುತ್ತೇವೆ ಎಂದು ಸಂವಿಧಾನದ ರಚನಾಕಾರರು ಸಂವಿಧಾನದ ರಚನೆಯ ಸಂದರ್ಭದಲ್ಲಿ ಸೇರಿಸಿದ್ದು ಒಂದು ಕಾಲಮಿತಿಯ ಕಾರ್ಯಕ್ರಮವಾಗಿ ಕಂಡುಬರುತ್ತದೆ.

ಆನಂತರದಲ್ಲಿ ಅನೇಕ ರಾಷ್ಟ್ರೀಯ ಶಿಕ್ಷಣ ಆಯೋಗಗಳ ನೀತಿ ಮತ್ತು ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕವಾಗಿ ಶಿಕ್ಷಣದ ಸಾರ್ವತ್ರೀಕರಣದ ಪ್ರಯತ್ನಗಳು ನಿರಂತರವಾಗಿ ಮುಂದು ವರಿದಿವೆ. ೧೯೬೪ರ ಜುಲೈ ೧೪ರಲ್ಲಿ ಕೊಠಾರಿಯವರ ಅಧ್ಯಕ್ಷತೆಯಲ್ಲಿ ರಚನೆಯಾದ ಶಿಕ್ಷಣದ ಆಯೋಗದ ಪ್ರಕಾರವಾಗಿ ೧೯೬೮ರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯುನ್ನು ರೂಪಿಸಿ ಅನುಷ್ಠಾನಗೊಳಿಸಲಾಯಿತು. ಈ ನೀತಿಯ ಆಧಾರದ ಮೇಲೆ ೧೯೮೬ರ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸಿ ಅದನ್ನು ೧೯೯೨ರಲ್ಲಿ ಆಚಾರ್ಯ ರಾಮಮೂರ್ತಿಯವರ ಅಧ್ಯಕ್ಷತೆಯಲ್ಲಿ ಪರಿಷ್ಕರಿಸಿ ಸಂಸತ್ತಿನಲ್ಲಿ ಅನುಮೋದನೆ ಪಡೆದುಕೊಳ್ಳಲಾಯಿತು. ೧೯೯೦ರ ನಂತರದ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಸಮ್ಮೇಳನಗಳಲ್ಲಿ 'ಎಲ್ಲರಿಗೂ ಶಿಕ್ಷಣ' ನೀಡುವ ಅಗತ್ಯವನ್ನು ಒತ್ತಿಹೇಳಲಾಗಿದೆ. ಇದಕ್ಕೆ ಪುಷ್ಟಿಯಾಗಿ ೧೯೯೩ರಲ್ಲಿ ಭಾರತದ ಸುಪ್ರೀಂಕೋರ್ಟ್ ಶಿಕ್ಷಣ ಪಡೆಯುವುದು ರಾಷ್ಟ್ರದ ಪ್ರತಿಯೊಬ್ಬ ನಾಗರಿಕನ 'ಮೂಲಭೂತ ಹಕ್ಕು' ಎಂಬ ಮಹತ್ವದ ತೀರ್ಪು ನೀಡಿದೆ. ಈ ತೀರ್ಪಿನ ಆಧಾರದ ಮೇಲೆ ಭಾರತದ ಸಂವಿಧಾನವನ್ನು ತಿದ್ದುಪಡಿ (೮೬ನೇ ತಿದ್ದುಪಡಿ) ಮಾಡಿ, ಜೀವಿಸುವ ಹಕ್ಕಿನ ೨೧ನೇ ಪರಿಚ್ಛೇದದ ಜೊತೆಯಲ್ಲಿ 'ಶಿಕ್ಷಣ ಪಡೆಯುವುದು ಮೂಲಭೂತ ಹಕ್ಕೆಂದು' ತಿಳಿಸುವ

೨೧-ಎ ಎಂಬ ಹೊಸ ಪರಿಚ್ಛೇದವನ್ನು ಸೃಷ್ಟಿಸಲಾಗಿದೆ. ಮುಂದುವರಿದಂತೆ ಪರಿಚ್ಛೇದ ೫೧-ಎ (ಕೆ) ಪ್ರಕಾರ ೦೬-೧೪ಳ ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಪೋಷಕರು ಶಾಲಾ ಕಲಿಕೆಗೆ ಅವಕಾಶ ಕಲ್ಪಿಸಬೇಕಾಗಿದೆ. ಈ ಬೆಳವಣಿಗೆಯಿಂದಾಗಿ ಶಿಕ್ಷಣದ ಸಾರ್ವತ್ರೀಕರಣಕ್ಕೆ ಹೊಸ ಆಯಾಮ ಲಭಿಸಿದಂತಾಗಿ ರಾಷ್ಟ್ರದಾದ್ಯಂತ ಹೊಸ ಶೈಕ್ಷಣಿಕ ಯೋಜನೆಗಳನ್ನು ಜಾರಿಗೆ ತರುವಂತಹ ಪ್ರಯತ್ನಗಳು ಪ್ರಾರಂಭವಾದವು.

ಭಾರತದ ಸ್ವಾತಂತ್ರ್ಯ ಹೋರಾಟದ ಕಾಲದಿಂದ ಇಲ್ಲಿಯವರೆಗೆ ಶಿಕ್ಷಣದ ಸಾರ್ವತ್ರೀಕರಣದ ಪ್ರಯತ್ನಗಳು ನಿರಂತರವಾಗಿದ್ದರೂ, ಸಮಾಜದ ಎಲ್ಲಾ ವರ್ಗದ ಜನರು ಸಮನಾಗಿ ಶಿಕ್ಷಣ ಪಡೆದು ಕೊಳ್ಳುವುದು ಸಾಧ್ಯವಾಗಿಲ್ಲ. ಇದರಿಂದ ಶಿಕ್ಷಣದ ವಿಷಯದಲ್ಲಿ ಜಾತಿ ವರ್ಗ, ಲಿಂಗ ಮತ್ತು ಪ್ರದೇಶ ವಾರು ಭಿನ್ನತೆಗಳು ಇನ್ನೂ ಜೀವಂತವಾಗಿ ಉಳಿದುಕೊಂಡಿವೆ. ಈ ಹಿನ್ನೆಲೆಯಲ್ಲಿ ಪ್ರಾಥಮಿಕ ಶಿಕ್ಷಣ ವನ್ನು ಒದಗಿಸುವ ಪ್ರಯತ್ನ ಮತ್ತು ಅದನ್ನು ಪಡೆದುಕೊಳ್ಳುವ ಸಾಮಾಜಿಕ ಶಕ್ತಿ-ಆಸಕ್ತಿಗಳನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಹೀಗೆ ಪರಿಗಣಿಸುವಾಗ ಭಾರತದಲ್ಲಿ ಶತಮಾನಗಳಿಂದಲೂ ವಂಚಿತರಾದ ಮತ್ತು ಶೈಕ್ಷಣಿಕವಾಗಿ ನಿಕೃಷ್ಟವಾಗಿರುವ ದಲಿತರ ಕಡೆಗೆ ಅದರಲ್ಲಿಯೂ ಪರಿಶಿಷ್ಟ ಜಾತಿಯವರ ಕಡೆಗೆ ಗಮನಹರಿಸಬೇಕಾಗಿದೆ. ದಲಿತರ ಶಿಕ್ಷಣದ ಕಡೆಗೆ ಗಮನಹರಿಸುವಾಗ ಸಾಮಾಜಿಕ ನ್ಯಾಯ ದೃಷ್ಟಿಯಿಂದ ನೋಡಬೇಕಾಗಿರುತ್ತದೆ. ಹೀಗೆ ನೋಡುವಾಗ ದಲಿತರಲ್ಲಿನ ಮಧ್ಯಮವರ್ಗ, ಬಡವರ್ಗ ಮತ್ತು ಮಹಿಳೆಯರ ಶೈಕ್ಷಣಿಕ ಪರಿಸರ, ದಲಿತ ಮಕ್ಕಳ ಶಿಕ್ಷಣ ಮತ್ತು ಇತರ ಅಂಶಗಳು ಬೆಳಕಿಗೆ ಬರುವ ಸಾಧ್ಯತೆಗಳಿವೆ.

ಸಾಕ್ಷರತೆಯು ಸಮಾಜದ ಸ್ಥಿತಿಗತಿಯನ್ನು ಅಭಿವ್ಯಕ್ತಪಡಿಸುವ ಒಂದು ಸೂಚಿಯಾಗಿದೆ. ಇದನ್ನು ಸಮಾಜದ ಚೌಕಟ್ಟಿನಿಂದ ಪ್ರತ್ಯೇಕ ಮಾಡಿ ನೋಡುವುದು ಅಥವಾ ಪರಿಭಾವಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ. ಸಾಕ್ಷರತೆ ಮತ್ತು ಶಿಕ್ಷಣಗಳು ಮೌಲ್ಯ ನಿರಪೇಕ್ಷವಾದವುಗಳಲ್ಲ. ಆದ್ದರಿಂದಲೇ ಅಭಿವೃದ್ಧಿ ಕುರಿತ ಚರ್ಚೆಯಲ್ಲಿ ಸಾಕ್ಷರತೆಯ ಬಗ್ಗೆ ಒಂದು ನಿರ್ದಿಷ್ಟವಾದ ನಿಲುವು ತಳೆಯುವುದು ತುಂಬಾ ಅವಶ್ಯಕವಾಗಿದೆ. ಸಾಕ್ಷರತೆ ಯಾರಿಗೆ ಸಿಗಬೇಕು? ಯಾರಿಗೆ ಸಿಗಬಾರದು? ಮತ್ತು ಯಾರಿಗೆ ಎಷ್ಟು ಸಿಗಬೇಕು? ಎಂಬ ಸಂಗತಿಗಳನ್ನೆಲ್ಲಾ ನಮ್ಮ ಸಾಮಾಜಿಕ ವ್ಯವಸ್ಥೆಯು ನಿರ್ಧರಿಸುತ್ತಿರುತ್ತದೆ. ಈ ಕಾರಣದಿಂದಲೇ ನಮ್ಮ ಸಮಾಜದಲ್ಲಿ ಸಾಕ್ಷರತೆಗೆ ಸಂಬಂಧಿಸಿದಂತೆ ಜಾತಿಭೇದ, ವರ್ಗಭೇದ, ಮತ/ ಲಿಂಗ ಭೇದಗಳು ತೀವ್ರವಾಗಿರುವುದನ್ನು ನೋಡಬಹುದಾಗಿದೆ. ಮಹಿಳೆಯರ ಸಾಕ್ಷರತಾ ಪ್ರಮಾಣ, ಪುರುಷರ ಸಾಕ್ಷರತೆಗಿಂತ ಕಡಿಮೆಯಾಗಿರುವುದು ಕೇವಲ ಜೈವಿಕ ಸ್ವರೂಪದ ಫಲವಾಗಿರದೆ ಸಾಮಾಜಿಕ ಸ್ವರೂಪದ ಅಂಶವೂ ಆಗಿರುತ್ತದೆ. ಸಾಕ್ಷರತೆಗೆ ಸಂಬಂಧಿಸಿದ ಸಾಧನೆ ಮತ್ತು ವೈಫಲ್ಯಗಳನ್ನು ವ್ಯಕ್ತಿಗತ ಅಥವಾ ಜೈವಿಕ-ನೈಸರ್ಗಿಕ-ಪ್ರಾಕೃತಿಕ ನೆಲೆಗಳಲ್ಲಿ ಪರಿಭಾವಿಸುವುದು ಸಾಧ್ಯವಾಗುವುದಿಲ್ಲ. ಇವೆಲ್ಲಾ ಸಾಮಾಜಿಕ ವ್ಯವಸ್ಥೆಯು ರೂಪಿಸಿದ ಒಂದು ಸಂಗತಿಯಾಗಿರುತ್ತದೆ (ಚಂದ್ರಶೇಖರ್ ಟಿ.ಆರ್, ೨೦೦೦). ಈ ಹಿನ್ನೆಲೆಯಲ್ಲಿ ದಲಿತರ ಶೈಕ್ಷಣಿಕ ಪರಿಸರ ಮತ್ತು ಪರಿಸ್ಥಿತಿಯನ್ನು ಗುರುತಿಸುವುದು ಪ್ರಸ್ತುತ ಅಧ್ಯಯನದ ಮೂಲ ಆಶಯವಾಗಿರುತ್ತದೆ.

ನಮ್ಮ ಸಂವಿಧಾನವು ಸಮಾನತೆಯನ್ನು ನೀಡಿ ಲಿಂಗಬೇಧವನ್ನು ನಿಷೇಧಿಸಿತ್ತಾದರೂ ವಾಸ್ತವದಲ್ಲಿ ಮಹಿಳಾ ಶಿಕ್ಷಣದಲ್ಲಿ ನಾವೆಣಿಸಿದಷ್ಟು ಪ್ರಗತಿ ಕಂಡಿಲ್ಲ. ನಮ್ಮ ದೇಶದ ಒಟ್ಟು ಜನಸಂಖ್ಯೆಯಲ್ಲಿ ಮಹಿಳೆಯರು ಸರಿ ಸುಮಾರು ಅರ್ಧದಷ್ಟು ಇದ್ದಾರೆ. ಮಹಿಳೆ ಮತ್ತು ಪುರುಷರ ಶಿಕ್ಷಣದ ನಡುವೆ ಸಾಕಷ್ಟು ಅಂತರವಿದೆ. ಮಹಿಳಾ ಸಾಕ್ಷರತೆಯ ಪ್ರಮಾಣ ೧೯೫೧ರಲ್ಲಿ ಶೇಕಡ ೮.೮೬ರಷ್ಟಿದ್ದರೆ, ಅದು ೨೦೦೧ರಲ್ಲಿ ಶೇಕಡ ೫೪.೧೬ರಷ್ಟಿರುವುದು ಕಂಡುಬರುತ್ತದೆ. ಆದರೆ ಪುರುಷರ ಸಾಕ್ಷರತೆಯ ಪ್ರಮಾಣವು ೧೯೫೧ರಲ್ಲಿ ೨೭.೧೬ರಷ್ಟಿದ್ದುದು ೨೦೦೧ರ ವೇಳೆಗೆ ಶೇಕಡಾ ೭೫.೮೫ಕ್ಕೆ ಏರಿರುವುದು ಕಂಡುಬರುತ್ತದೆ. ಇದನ್ನು ನೋಡಿದರೆ ಈ ಸಮಾಜದಲ್ಲಿ ಶಿಕ್ಷಣದ ಅವಕಾಶದ ಬಳಕೆಯಲ್ಲಿ ಲಿಂಗ ತಾರತಮ್ಯವು ಎಷ್ಟರಮಟ್ಟಿಗೆ ಇದೆ ಎಂಬುದು ಮನದಟ್ಟಾಗುತ್ತದೆ.

ಕೋಷ್ಟಕ-೩.೨ಬ

ಭಾರತದಲ್ಲಿ ಮಹಿಳೆಯರ ಮತ್ತು ಪುರುಷರ ಶೇಕಡವಾರು ಸಾಕ್ಷರತೆ ಪ್ರಮಾಣ

ವರ್ಷ	ಪುರುಷರು	ಮಹಿಳೆಯರು	ದೇಶದ ಒಟ್ಟು ಸಾಕ್ಷರತಾ ಪ್ರಮಾಣ
೧೯೫೧	೨೭.೧೬	೮.೮೬	೧೮.೩೩
೧೯೬೧	೪೦.೪೦	೧೫.೩೪	೨೮.೩೦
೧೯೭೧	೪೫.೯೫	೨೧.೯೭	೩೪.೪೫
೧೯೮೧	೫೩.೪೫	೨೮.೪೬೩	೪.೪೭
೧೯೯೧	೬೪.೧೩	೩೯.೨೯	೫೨.೨೧
೨೦೦೧	೭೫.೮೫	೫೪.೧೬	೬೫.೩೮
ಗ್ರಾಮೀಣ			
೨೦೦೧	೭೧.೪೦	೪೬.೭೦	೫೯.೪೦
ನಗರ			
೨೦೦೧	೮೬.೭೦	೭೩.೨೦	೮೦.೩೦

ಮೂಲ : ೨೦೦೧ರ ಜನಗಣತಿ ವರದಿ.

ಕೋಷ್ಟಕ ೩.೨ಬಿಯಲ್ಲಿ ತೋರಿಸಿರುವಂತೆ ಮಹಿಳೆ ಮತ್ತು ಪುರುಷರ ಸಾಕ್ಷರತೆಯ ಪ್ರಮಾಣದಲ್ಲಿ ವ್ಯತ್ಯಾಸವಿರುವುದಷ್ಟೇ ಅಲ್ಲ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲೂ ಸಾಕ್ಷರತೆಯ ಪ್ರಮಾಣದಲ್ಲಿ ಅಗಾಧವಾದ ವ್ಯತ್ಯಾಸಗಳಿರುವುದು ಕಂಡುಬರುತ್ತದೆ. ನಗರ ಪ್ರದೇಶದಲ್ಲಿ ಮಹಿಳಾ ಸಾಕ್ಷರತೆಯ ಪ್ರಮಾಣ ಶೇಕಡ ೭೩.೨೦ರಷ್ಟಿದ್ದರೆ ಅದು ಗ್ರಾಮೀಣ ಪ್ರದೇಶದಲ್ಲಿ ಈ ಪ್ರಮಾಣವು ಶೇಕಡ ೪೬.೭೦ರಷ್ಟು ಮಾತ್ರವಿದೆ.

೨೦೦೧ರ ಜನಗಣತಿಯ ಪ್ರಕಾರ ಭಾರತದ ಒಟ್ಟು ಸಾಕ್ಷರತೆ ಪ್ರಮಾಣ ಶೇಕಡ ೬೫.೩೮ರಷ್ಟು ಇದೆ. ಇದರಲ್ಲಿ ಪುರುಷರ ಸಾಕ್ಷರತೆ ಪ್ರಮಾಣ ಶೇಕಡ ೭೫.೮೫ರಷ್ಟಿದ್ದರೆ, ಮಹಿಳೆಯರ ಸಾಕ್ಷರತಾ ಪ್ರಮಾಣ ಶೇಕಡ ೫೪.೧೬ರಷ್ಟು ಇದೆ. ಸ್ವಾತಂತ್ರ್ಯ ನಂತರ ಪ್ರತಿ ವರ್ಷವು ಸ್ವಲ್ಪಮಟ್ಟಿಗೆ ಮಹಿಳಾ ಸಾಕ್ಷರತೆಯಲ್ಲಿ ಏರಿಕೆಯಾಗುತ್ತಾ ಬಂದಿದೆ. ಆದರೂ ಸಹ ಎಲ್ಲರಿಗೂ ಸಾರ್ವತ್ರಿಕವಾಗಿ ಶಿಕ್ಷಣ ಒದಗಿಸುವ ಸರಕಾರದ ಪ್ರಯತ್ನ ಮಂದಗತಿಯದ್ದಾಗಿದೆ ಎಂದು ಹೇಳಬಹುದು. ಕರ್ನಾಟಕ ರಾಜ್ಯವು ಬೇರೆಲ್ಲಾ ರಾಜ್ಯಗಳಿಗೆ ಹೋಲಿಸಿದಾಗ ಶಿಕ್ಷಣ ಮಟ್ಟದಲ್ಲಿ ಅತ್ತ ಹಿಂದುಳಿಯದೇ ಇತ್ತ ಮುಂದೆಯೂ ಸಾಗದೇ ಮಧ್ಯಮಗತಿಯಲ್ಲಿ ಸಾಗುತ್ತಿದೆ ಎನ್ನಬಹುದು. ದೇಶದಲ್ಲಿ ಕೇರಳ ಮತ್ತು ಹಿಮಾಚಲ ಪ್ರದೇಶ ರಾಜ್ಯಗಳು ಅತ್ಯಂತ ಹೆಚ್ಚು ಸಾಕ್ಷರತೆಯನ್ನು ಹೊಂದಿದ ರಾಜ್ಯಗಳಾಗಿವೆ. ಹಾಗೆಯೇ ಕೇರಳ ರಾಜ್ಯದಲ್ಲಿ ಅತಿಹೆಚ್ಚು ಮಹಿಳಾ ಸಾಕ್ಷರತೆಯಿದ್ದು ಬಿಹಾರ ರಾಜ್ಯದಲ್ಲಿ ಅತ್ಯಂತ ಕಡಿಮೆ (೩೩.೫೭) ಮಟ್ಟದ ಮಹಿಳಾ ಸಾಕ್ಷರತೆಯನ್ನು ನಾವು ಕಾಣಬಹುದು.

ಕೋಷ್ಟಕ-೩.೨೩

ಕರ್ನಾಟಕದಲ್ಲಿ ಮಹಿಳೆ ಮತ್ತು ಪುರುಷರ ಸಾಕ್ಷರತಾ ಪ್ರಮಾಣದಲ್ಲಿನ ವ್ಯತ್ಯಾಸಗಳು

ವರ್ಷ	**ಒಟ್ಟು**	**ಸಾಕ್ಷರತಾ ಪ್ರಮಾಣ ವ್ಯತ್ಯಾಸಗಳು**	**ಪುರುಷ**	**ಮಹಿಳೆ**
೧೯೬೧	೨೯.೮೦	೪೨.೨೯	೧೬.೭೦	೨೫.೫೯
೧೯೭೧	೩೬.೮೩	೪೮.೫೧	೨೪.೫೫	೨೩.೯೬
೧೯೮೧	೪೬.೨೧	೫೮.೭೩	೩೩.೦೭	೨೫.೫೬
೧೯೯೧	೫೬.೦೪	೬೭.೨೬	೪೪.೩೪	೨೨.೯೨
೨೦೦೧	೬೭.೪	೭೬.೨೯	೫೭.೪೫	೧೮.೮೪

ಮೂಲ : ಜನಗಣತಿ ವರದಿಗಳು.

ಕರ್ನಾಟಕದಲ್ಲಿ ಸಾಕ್ಷರತಾ ಪ್ರಮಾಣವು ೧೯೬೧ರಲ್ಲಿ ಒಟ್ಟು ಶೇಕಡ ೨೯.೮೦ರಷ್ಟು ಇದ್ದು, ಇದರಲ್ಲಿ ಮಹಿಳೆಯರ ಸಾಕ್ಷರತಾ ಪ್ರಮಾಣ ಶೇಕಡ ೧೬.೭೦ರಷ್ಟಿದೆ. ರಾಜ್ಯದಲ್ಲಿ ೧೯೬೧ ರಿಂದ ೨೦೦೧ರ ವರೆಗೆ ಪುರುಷರ ಮತ್ತು ಮಹಿಳೆಯರ ಸಾಕ್ಷರತಾ ಪ್ರಮಾಣದಲ್ಲಿ ಶೇಕಡ ೧೮.೮೪ರಷ್ಟು ವ್ಯತ್ಯಾಸವಿರುವುದನ್ನು ಕಾಣಬಹುದು. ಮಹಿಳೆಯರ ಸಾಕ್ಷರತೆಯೂ ವರ್ಷದಿಂದ ವರ್ಷಕ್ಕೆ ಏರಿಕೆಯಾಗಿರುವುದು ತಿಳಿಯುತ್ತದೆ.

ಕೋಷ್ಟಕ-೩.೨೮

ವಿಭಾಗ ಮತ್ತು ಪ್ರದೇಶವಾರು ಸಾಕ್ಷರತೆಯ ಪ್ರಮಾಣ (ಕರ್ನಾಟಕದಲ್ಲಿ)

ಕ್ರಸಂ.	ವಿಭಾಗ / ಪ್ರದೇಶ	ಒಟ್ಟು	ಸಾಕ್ಷರತೆ	
			ಪುರುಷರು	ಮಹಿಳೆಯರು
೦೧	ಬೆಂಗಳೂರು ವಿಭಾಗ	೭೨.೯೧	೮೦.೫೬	೬೪.೭೮
೦೨	ಬೆಳಗಾವಿ ವಿಭಾಗ	೬೫.೪೦	೭೬.೩೦	೫೪.೦೬
೦೩	ಗುಲಬರ್ಗಾ ವಿಭಾಗ	೫೪.೪೦	೬೬.೫೧	೪೧.೯೨
೦೪	ಮೈಸೂರು ವಿಭಾಗ	೬೯.೩೦	೭೭.೦೨	೬೧.೬೪
೦೫	ಉತ್ತರ ಕರ್ನಾಟಕ	೬೦.೮೨	೭೨.೨೪	೪೮.೯೯
೦೬	ದಕ್ಷಿಣ ಕರ್ನಾಟಕ	೭೦.೫೦	೬೯.೨೦	೬೩.೫೨
೦೭	ಕರ್ನಾಟಕ	೬೭.೦೪	೭೬.೨೬	೫೭.೪೫

ಮೂಲ : ಜನಗಣತಿ ವರದಿ ೨೦೦೧, ಅಭಿವೃದ್ಧಿ ಅಧ್ಯಯನ, ೨೦೦೩

ಸಾಕ್ಷರತಾ ಪ್ರಮಾಣವನ್ನು ನಾವು ವಿಭಾಗವಾರು ನೋಡಿದಾಗ ಅನೇಕ ಭಿನ್ನತೆಗಳು ಕಾಣುತ್ತವೆ. ಬೆಂಗಳೂರು ವಿಭಾಗದ ಒಟ್ಟು ಸಾಕ್ಷರತಾ ಪ್ರಮಾಣ ಶೇಕಡ ೭೨.೯೧ರಷ್ಟಿದೆ. ಪುರುಷರ ಸಾಕ್ಷರತೆ ಶೇಕಡ ೮೦.೫೬ ಮತ್ತು ಮಹಿಳೆಯರ ಸಾಕ್ಷರತೆ ಶೇಕಡ ೬೪.೭೮ರಷ್ಟಿದೆ. ಇದು ಇತರ ಮೂರು ವಿಭಾಗಗಳಿಗಿಂತ ಹೆಚ್ಚಾಗಿದೆ. ಬೆಳಗಾವಿ ಕಂದಾಯ ವಿಭಾಗದ ಒಟ್ಟು ಸಾಕ್ಷರತೆ ಶೇಕಡ ೬೫.೪೦ರಷ್ಟು, ಈ ವಿಭಾಗದಲ್ಲಿ ಪುರುಷರ ಸಾಕ್ಷರತೆ ಶೇಕಡ ೭೬.೩೦ರಷ್ಟು ಮತ್ತು ಮಹಿಳಾ ಸಾಕ್ಷರತೆ ಶೇಕಡ ೫೪.೦೬ ರಷ್ಟಿದೆ. ಗುಲ್ಬರ್ಗಾ ವಿಭಾಗದ ಒಟ್ಟು ಸಾಕ್ಷರತೆ ಶೇಕಡ ೫೪.೪೦ರಷ್ಟಿದೆ. ಪುರುಷರ ಸಾಕ್ಷರತೆ ಶೇಕಡ ೬೬.೫೧ರಷ್ಟು ಮತ್ತು ಮಹಿಳಾ ಸಾಕ್ಷರತೆ ಪ್ರಮಾಣ ಶೇಕಡ ೪೧.೯೨ರಷ್ಟಿದೆ. ಇಲ್ಲಿ ರಾಜ್ಯದ ಒಟ್ಟು ಪುರುಷರ ಮತ್ತು ಮಹಿಳೆಯರ ಸಾಕ್ಷರತೆಗಿಂತ ಗುಲ್ಬರ್ಗಾ ವಿಭಾಗದಲ್ಲಿ ಪುರುಷರ ಮತ್ತು ಮಹಿಳೆಯರ ಸಾಕ್ಷರತೆಯಲ್ಲಿ ಕ್ರಮವಾಗಿ ಶೇಕಡ ೯.೭೫ ಅಂಶಗಳಷ್ಟು ಮತ್ತು ೧೫.೫೩ ಅಂಶಗಳಷ್ಟು ಅಂತರವಿದೆ. ಮೈಸೂರು ವಿಭಾಗವು ಸಾಕ್ಷರತೆಯ ದೃಷ್ಟಿಯಿಂದ ಎರಡನೆಯ ಸ್ಥಾನ ಪಡೆದಿದೆ. ಈ ವಿಭಾಗದಲ್ಲಿ ಒಟ್ಟು ಸಾಕ್ಷರತೆ ೬೯.೩೦ರಷ್ಟಿದ್ದರೆ, ಪುರುಷರ ಸಾಕ್ಷರತಾ ಪ್ರಮಾಣ ಶೇಕಡ ೭೭.೦೨ರಷ್ಟು ಮತ್ತು ಮಹಿಳೆಯರ ಸಾಕ್ಷರತಾ ಪ್ರಮಾಣ ಶೇಕಡ ೬೧.೬೪ರಷ್ಟಿದೆ. ಈ ವಿಭಾಗದ ಸಾಕ್ಷರತೆಯೂ ಎಲ್ಲಾ ದೃಷ್ಟಿಯಿಂದ ರಾಜ್ಯದ ಒಟ್ಟು ಸರಾಸರಿಗಿಂತ ಸ್ವಲ್ಪ ಹೆಚ್ಚಿನ ಪ್ರಮಾಣದ್ದಾಗಿದೆ. ಉತ್ತರ ಕರ್ನಾಟಕ ಪ್ರದೇಶದ ಒಟ್ಟು ಸಾಕ್ಷರತೆಯೂ ೬೦.೮೨ರಷ್ಟಿದೆ. ಉತ್ತರ ಕರ್ನಾಟಕ ಪ್ರದೇಶ ಮಹಿಳೆಯರ ಸಾಕ್ಷರತೆ ಶೇಕಡ ೪೮.೯೯ರಷ್ಟು ಮತ್ತು ರಾಜ್ಯದ ಮಹಿಳೆಯರ ಸಾಕ್ಷರತೆ ಶೇಕಡ ೫೭.೪೫ರಷ್ಟಿದ್ದು, ಇಲ್ಲಿ ಈ ಎರಡರ ನಡುವಿನ ಅಂತರ ಶೇಕಡ ೮.೪೬ ಅಂಶಗಳಷ್ಟಿದೆ. ದಕ್ಷಿಣ ಕರ್ನಾಟಕ ಪ್ರದೇಶದ ಮಹಿಳಾ

ಸಾಕ್ಷರತೆಯು ಉತ್ತರ ಕರ್ನಾಟಕ ಪ್ರದೇಶದ ಮಹಿಳೆಯರ ಸಾಕ್ಷರತೆಗಿಂತ ಶೇಕಡ ೧೪.೫೩ ಅಂಶಗಳಷ್ಟು ಮತ್ತು ಕರ್ನಾಟಕದ ಒಟ್ಟು ಮಹಿಳೆಯರ ಸಾಕ್ಷರತೆಗಿಂತ ಶೇಕಡ ೬.೦೭ ಅಂಶಗಳಷ್ಟು ಹೆಚ್ಚಾಗಿದೆ. ಒಟ್ಟಾರೆಯಾಗಿ ಮಹಿಳಾ ಸಾಕ್ಷರತೆಯಲ್ಲಿ ಗುಲ್ಬರ್ಗ ವಿಭಾಗವು ಹಿಂದುಳಿದಿದೆ ಎಂದು ಹೇಳಬಹುದು.

ಮಾನವ ಅಭಿವೃದ್ಧಿ ಅನುಸೂಚಿಯಲ್ಲಿ ಸಾಕ್ಷರತೆಯು ೨ನೇ ಸ್ಥಾನವನ್ನು ಪಡೆದಿದೆ. ಮಾನವ ಅಭಿವೃದ್ಧಿ ಅತ್ಯಾವಶ್ಯಕವಾಗಿರುವ ಧಾರಣಶಕ್ತಿಯನ್ನು ಒದಗಿಸುವ ಗುಣ ಸಾಕ್ಷರತೆಗೆ ಇದೆ. ಸಾಕ್ಷರತೆಯೇ ಅಭಿವೃದ್ಧಿ. ಸಾಕ್ಷರತೆಯ ವೈಫಲ್ಯವು ಅಭಿವೃದ್ಧಿಯ ಹಿನ್ನೆಡೆಗೆ ಕಾರಣವಾಗುತ್ತದೆ. ಸಾಕ್ಷರತೆಯು ಸಮಾಜದಲ್ಲಿನ ಪರಿಸ್ಥಿತಿಯನ್ನು ವ್ಯಕ್ತಪಡಿಸುವ ಒಂದು ಸೂಚಿಯಾಗಿದೆ. ಸಾಕ್ಷರತೆಯಲ್ಲಿನ ಲಿಂಗ ಅಸಮಾನತೆಯು, ಸಮಾಜದಲ್ಲಿ ಮಹಿಳೆಯನ್ನು ನಿರ್ಲಕ್ಷಿಸಲಾಗುತ್ತಿದೆ ಎಂಬುದರ ಪ್ರತಿಬಿಂಬವಾಗಿದೆ. "ಮಹಿಳೆಯರ ಸಾಕ್ಷರತೆ ಪುರುಷರ ಸಾಕ್ಷರತೆಗಿಂತ ಕಡಿಮೆ ಇದ್ದರೆ ಅದು ಆಕೆಯ ಜೈವಿಕ ಸ್ವರೂಪದ ಫಲವಲ್ಲ. ಅದು ಸಮಾಜವು ಕಟ್ಟಿರುವ ಒಂದು ನಿರ್ಬಂಧ. ಸಾಮಾನ್ಯ ಜನಸಂಖ್ಯೆಯ ಸಾಕ್ಷರತೆ ಪ್ರಮಾಣವು ಪರಿಶಿಷ್ಟ ಜನಸಂಖ್ಯೆಯ ಸಾಕ್ಷರತೆ ಪ್ರಮಾಣಕ್ಕಿಂತ ಅಧಿಕವಾಗಿದ್ದರೆ ಅದು ಸಾಮಾಜಿಕ ವ್ಯವಸ್ಥೆಯ ಒಂದು ಪರಿಣಾಮವಾಗಿದೆ. ಸಾಕ್ಷರತೆಗೆ ಸಂಬಂಧಿಸಿದ ಸಿದ್ಧ ಸಾಧನೆಗಳನ್ನು, ವೈಫಲ್ಯಗಳನ್ನು ವ್ಯಕ್ತಿಗತ ನೆಲೆಯಲ್ಲಿ (ಅಥವಾ ಜೈವಿಕ-ನೈಸರ್ಗಿಕ ನೆಲೆಯಲ್ಲಿ) ಪರಿಭಾವಿಸುವುದು ಸಾಧ್ಯವಿಲ್ಲ. ಇವೆಲ್ಲವೂ ಸಾಮಾಜಿಕ ವ್ಯವಸ್ಥೆಯೊಂದು ರೂಪಿಸಿದ ಸಂಗತಿಯಾಗಿದೆ" (ಚಂದ್ರಶೇಖರ್, ೧೯೯೯).

೩.೩ ಅಧ್ಯಯನ ಕ್ಷೇತ್ರದಲ್ಲಿ ಸಾಕ್ಷರತೆ

ಕರ್ನಾಟಕದ ಅಕ್ಷರಸ್ಥರ ಪ್ರಮಾಣ ಪುರುಷರು ೭೬.೨೯, ಮಹಿಳೆಯರದ್ದು ೫೭.೪೫, ಒಟ್ಟು ೬೭.೦೪ರಷ್ಟು ಇದೆ. ಹಾಸನ ಜಿಲ್ಲೆಯದ್ದು ಪುರುಷರ ಅಕ್ಷರಸ್ಥರ ಪ್ರಮಾಣ ೭೮.೦೪ ಮತ್ತು ಮಹಿಳೆಯರದ್ದು ೫೯.೦೦ ಒಟ್ಟು ೬೮.೦೬. ಹಾಗೆಯೇ ರಾಯಚೂರು ಜಿಲ್ಲೆಯ ಅಕ್ಷರಸ್ಥರ ಪ್ರಮಾಣ ಪುರುಷರು ೬೧.೫ ಮಹಿಳೆಯರದ್ದು ೩೫.೯, ಒಟ್ಟು ೪೮.೮ರಷ್ಟು ಪ್ರಮಾಣ ಇದೆ (ಜನಗಣತಿ ೨೦೦೧).

ಕೋಷ್ಟಕ - ೩.೩.೨

ಹಾಸನ ಜಿಲ್ಲೆಯ ಸಾಕ್ಷರತೆ ಪ್ರಮಾಣ ೨೦೦೧ ಜನಗಣತಿ ಪ್ರಕಾರ

ಪ್ರದೇಶ	ಒಟ್ಟು	ಸಾಕ್ಷರತೆ	
		ಪುರುಷರ	ಮಹಿಳೆಯರ
ಒಟ್ಟು	೬೮ .೦೬	೭೮ .೪	೫೯.೦೦
ಗ್ರಾಮೀಣ	೬೫.೦೨	೭೫.೦೯	೫೪.೭
ನಗರ	೮೪ .೪	೮೯.೩	೭೯.೪

ಮೂಲ: ಡಿಸ್ಟ್ರಿಕ್ಟ್ ಪಾಪ್ಯುಲೇಶನ್ ಬುಕ್‌ಲೆಟ್, ೨೦೦೧.

ಕೋಷ್ಟಕ - ೩.೩ಬಿ

ಚನ್ನರಾಯಪಟ್ಟಣ ತಾಲ್ಲೂಕು ಸಾಕ್ಷರತಾ ಪ್ರಮಾಣ

ಪ್ರದೇಶ	ಒಟ್ಟು	ಪುರುಷರ	ಮಹಿಳೆಯರ
ಒಟ್ಟು	೬೭.೩	೭೮.೨	೫೬.೬
ಗ್ರಾಮೀಣ	೬೫.೪	೭೭.೧	೫೪.೧
ನಗರ	೮೧.೦	೮೬.೫	೭೫.೪

ಮೂಲ: ಡಿಸ್ಟ್ರಿಕ್ಟ್ ಪಾಪ್ಯುಲೇಶನ್ ಬುಕ್‌ಲೆಟ್, ೨೦೦೧.

ಕೋಷ್ಟಕ - ೩.೩ಸಿ

ಬಳದರೆ ಪಂಚಾಯಿತಿ ಪ್ರದೇಶದ ಹಳ್ಳಿಗಳ ಸಾಕ್ಷರತಾ ಪ್ರಮಾಣ

ಹಳ್ಳಿಗಳಹೆಸರು	ಒಟ್ಟು	ಪುರುಷರು	ಮಹಿಳೆಯರು
ಬಳದರೆ	೬೦.೭	೭೪.೩	೪೬.೭
ತೆಂಕನಹಳ್ಳಿ	೫೯.೩	೬೭.೬	೫೦.೮
ದಂಡಿಗನಹಳ್ಳಿ	೬೮.೨	೭೯.೨	೫೮.೨
ಮುರಾರನಹಳ್ಳಿ	೫೨.೯	೬೫.೮	೪೧.೩
ಅಣ್ಣೇನಹಳ್ಳಿ	೬೯.೯	೮೨.೪	೫೮.೨
ಮುದ್ದನಹಳ್ಳಿ	೭೩.೪	೮೫.೨	೬೨.೩
ವಗರಹಳ್ಳಿ	೭೦.೭	೮೩.೩	೫೯.೦
ಹಿರೀಹಳ್ಳಿ	೫೮.೯	೭೦.೬	೪೮.೧
ಅಪ್ಪೇನಹಳ್ಳಿ	೬೦.೨	೭೩.೧	೪೭.೩
ಯಲಿಯೂರು	೬೮.೩	೮೦.೩	೫೬.೪
ವೈ.ಸಿಂಗೇನಹಳ್ಳಿ	೭೯.೯	೮೯.೭	೬೮.೯
ಉದಯಪುರ	೬೧.೨	೭೫.೬	೪೭.೨
ಬೆಟ್ಟದಪುರ	೬೫.೮	೮೫.೩	೫೦.೦
ಜೋಡಿಗಟ್ಟೆ	೬೩.೭	೭೩.೯	೫೩.೦

ಮೂಲ: ಡಿಸ್ಟ್ರಿಕ್ಟ್ ಪಾಪ್ಯುಲೇಶನ್ ಬುಕ್‌ಲೆಟ್, ೨೦೦೧.

ಕೋಷ್ಟಕ ೩.೩ಸಿನಲ್ಲಿ ಬಳದರೆ ಗ್ರಾಮಪಂಚಾಯಿತಿ ಸಾಕ್ಷರತೆ ಪ್ರಮಾಣವನ್ನು ತೋರಿಸಲಾಗಿದೆ. ಹಾಗೆಯೇ ಬಳದರೆ ಗ್ರಾಮಪಂಚಾಯಿತಿ ವ್ಯಾಪ್ತಿಯ ಹದಿನಾಲ್ಕು ಶಾಲೆ ಇರುವ ಹಳ್ಳಿಗಳ ಸಾಕ್ಷರತೆ ಪ್ರಮಾಣವನ್ನು ತಿಳಿಸುವುದರ ಜೊತೆಗೆ ಮಹಿಳೆ ಮತ್ತು ಪುರುಷ ಸಾಕ್ಷರತೆ ಪ್ರಮಾಣವನ್ನು ತಿಳಿಸಲಾಗಿದೆ.

ಮೇಲ್ಕಂಡ ಕೋಷ್ಟಕ ೩.೩ಸಿ ಅನ್ವಯ ಚನ್ನರಾಯಪಟ್ಟಣ ತಾಲ್ಲೂಕಿನ ಒಟ್ಟು ಸಾಕ್ಷರತೆ ಶೇಕಡ ೬೭.೩ರಷ್ಟಿದೆ. ಇದರಲ್ಲಿ ಪುರುಷರ ಸಾಕ್ಷರತೆ ಶೇಕಡ ೭೮.೨, ಮಹಿಳೆಯರ ಸಾಕ್ಷರತೆ ಶೇಕಡ ೫೬.೬ರಷ್ಟಾಗಿದೆ. ಇವೆರಡರ ನಡುವಿನ ಅಂತರ ೨೨.೦೦ರಷ್ಟು, ಗ್ರಾಮೀಣ ಪ್ರದೇಶದ ಒಟ್ಟು ಸಾಕ್ಷರತೆ ಶೇಕಡ ೬೫.೪ರಷ್ಟು, ಪುರುಷರ ಪ್ರಮಾಣ ಶೇಕಡ ೭೭.೧ ಮತ್ತು ಮಹಿಳೆಯರ ಶೇಕಡ ಪ್ರಮಾಣ ೫೪.೧. ಪುರುಷ ಮತ್ತು ಮಹಿಳೆಯರ ನಡುವಿನ ಅಂತರ ಶೇಕಡ ೨೩.೨ರಷ್ಟು ಅಂತರ ಇದೆ. ನಗರ ಪ್ರದೇಶದ ಸಾಕ್ಷರತೆ ಒಟ್ಟು ೮೧.೦, ಪುರುಷರ ಪ್ರಮಾಣ ಶೇಕಡ ೮೬.೫, ಮಹಿಳೆಯರ ಪ್ರಮಾಣ ಶೇಕಡ ೭೫.೪ರಷ್ಟು, ಇವೆರಡರ ನಡುವೆ ಅಂತರ ಶೇಕಡ ೧೩.೭ರಷ್ಟು ಇದೆ.

ಕೋಷ್ಟಕ - ೩.೩ಡಿ

ರಾಯಚೂರು ಜಿಲ್ಲೆಯ ಸಾಕ್ಷರತೆ ಪ್ರಮಾಣ ೨೦೦೧ ಜನಗಣತಿ ಪ್ರಕಾರ

ಪ್ರದೇಶ	ಒಟ್ಟು	ಸಾಕ್ಷರತೆ	
		ಪುರುಷರು	ಮಹಿಳೆಯರು
ಒಟ್ಟು	೪೮.೮	೬೧.೫	೩೫.೯
ಗ್ರಾಮೀಣ	೪೨.೫	೫೬.೧	೨೮.೯
ನಗರ	೬೬.೯	೭೬.೮	೫೬.೫

ಮೂಲ: ಡಿಸ್ಟ್ರಿಕ್ಟ್ ಪಾಪ್ಯುಲೇಶನ್ ಬುಕ್‌ಲೆಟ್, ೨೦೦೧.

ಕೋಷ್ಟಕ - ೩.೩ಇ

ಮಾನವಿ ತಾಲ್ಲೂಕು ಸಾಕ್ಷರತಾ ಪ್ರಮಾಣ

ಪ್ರದೇಶ	ಒಟ್ಟು	ಸಾಕ್ಷರತೆ	
		ಪುರುಷರು	ಮಹಿಳೆಯರು
ಒಟ್ಟು	೪೨.೩	೫೪.೫	೩೦.೧
ಗ್ರಾಮೀಣ	೪೦.೭	೫೩.೨	೨೮.೧
ನಗರ	೫೫.೩	೬೫.೧	೪೫.೨

ಮೂಲ: ಡಿಸ್ಟ್ರಿಕ್ಟ್ ಪಾಪ್ಯುಲೇಶನ್ ಬುಕ್‌ಲೆಟ್, ೨೦೦೧.

ಕೋಷ್ಟಕ - ೩.೩ಎಫ್

ಹೀರಾ ಗ್ರಾಮ ಪಂಚಾಯಿತಿ ಪ್ರದೇಶದ ಹಳ್ಳಿಗಳ ಸಾಕ್ಷರತಾ ಪ್ರಮಾಣ

ಹಳ್ಳಿಗಳಹೆಸರು	ಒಟ್ಟು	ಪುರುಷರ	ಮಹಿಳೆಯರ
ಹೀರಾ	೩೪.೩	೪೮.೭	೨೦.೮
ಬುದ್ದಿನ್ನಿ	೪೮.೧	೬೮.೭	೨೫.೮

ತಪ್ಪಲದೊಡ್ಡಿ	೪೨.೯	೫೯.೭	೨೫.೧
ತಿಮ್ಮಾಪುರ	೩೧.೬	೪೩.೩	೨೦.೨
ಬುಳ್ಳಾಪುರ	೩೬.೫	೫೦.೦	೨೩.೩
ಚಿಂಚರಕಿ	೪೬.೨	೫೮.೯	೩೨.೭
ಡೋಣಮರಡಿ	೧೬.೭	೨೭.೪	೦೫.೯
ಹುಡಾ	೧೯.೪	೩೦.೩	೦೮.೯
ಕಲಮಗೆರಾ	೩೦.೨	೪೬.೬	೧೩.೬
ಕಸನದೊಡ್ಡಿ	೧೬.೨	೨೫.೨	೦೭.೭

ಮೂಲ: ಡಿಸ್ಟ್ರಿಕ್ಟ್ ಪಾಪ್ಯುಲೇಶನ್ ಬುಕ್‌ಲೆಟ್, ೨೦೦೧.

ಕೋಷ್ಟಕ ೩.೩ಎಫ್‌ರಲ್ಲಿ ಹೀರಾ ಗ್ರಾಮಪಂಚಾಯಿತಿ ಸಾಕ್ಷರತೆ ಪ್ರಮಾಣವನ್ನು ತೋರಿಸಲಾಗಿದೆ. ಹಾಗೆಯೇ ಹೀರಾ ಗ್ರಾಮಪಂಚಾಯಿತಿ ವ್ಯಾಪ್ತಿಯ ಹತ್ತು ಶಾಲೆ ಇರುವ ಹಳ್ಳಿಗಳ ಸಾಕ್ಷರತೆ ಪ್ರಮಾಣವನ್ನು ತಿಳಿಸುವುದರ ಜೊತೆಗೆ ಮಹಿಳೆ ಮತ್ತು ಪುರುಷ ಸಾಕ್ಷರತೆ ಪ್ರಮಾಣವನ್ನು ತಿಳಿಸಲಾಗಿದೆ.

ಕೋಷ್ಟಕ ೩.೩ಇರ ಅನ್ವಯ ಮಾನವಿ ತಾಲ್ಲೂಕಿನ ಒಟ್ಟು ಸಾಕ್ಷರತೆ ಶೇಕಡ ೪೨.೩ರಷ್ಟಿದ್ದರೆ ಇದರಲ್ಲಿ ಪುರುಷರ ಸಾಕ್ಷರತೆ ಶೇಕಡ ೫೪.೫, ಮಹಿಳೆಯರ ಸಾಕ್ಷರತೆ ಶೇಕಡ ೩೦.೧ರಷ್ಟು, ಇವೆರಡರ ನಡುವಿನ ಅಂತರ ೨೪.೮೨ರಷ್ಟು, ಗ್ರಾಮೀಣ ಪ್ರದೇಶದ ಒಟ್ಟು ಸಾಕ್ಷರತೆ ಶೇಕಡ ೪೦.೭ರಷ್ಟು, ಪುರುಷರ ಪ್ರಮಾಣ ಶೇಕಡ ೫೩.೨ ಮತ್ತು ಮಹಿಳೆಯರ ಶೇಕಡ ಪ್ರಮಾಣ ೨೮.೧. ಪುರುಷ ಮತ್ತು ಮಹಿಳೆಯರ ನಡುವಿನ ಅಂತರ ಶೇಕಡ ೨೬.೨ರಷ್ಟು ಅಂತರ ಇದೆ. ನಗರ ಪ್ರದೇಶದ ಸಾಕ್ಷರತೆ ಒಟ್ಟು ೫೫.೩, ಪುರುಷರ ಪ್ರಮಾಣ ಶೇಕಡ ೬೫.೧, ಮಹಿಳೆಯರ ಪ್ರಮಾಣ ಶೇಕಡ ೪೫.೨ರಷ್ಟು, ಇವೆರಡರ ನಡುವೆ ಅಂತರ ಶೇಕಡ ೨೫.೬ರಷ್ಟು ಇದೆ. ಕೋಷ್ಟಕ ೩.೩ಎಫ್‌ನಲ್ಲಿ ಹೀರಾ ಗ್ರಾಮಪಂಚಾಯಿತಿ ಸಾಕ್ಷರತಾ ಪ್ರಮಾಣವನ್ನು ತಿಳಿಸಲಾಗಿದೆ. ಒಟ್ಟು ಸಾಕ್ಷರತೆ ಶೇಕಡ ೩೫.೦. ಪುರುಷರ ಸಾಕ್ಷರತಾ ಪ್ರಮಾಣ ಶೇಕಡ ೪೭.೨ ಮತ್ತು ಮಹಿಳೆಯರದ್ದು ಶೇಕಡ ೧೮.೦ರಷ್ಟು. ಈ ಗ್ರಾಮಪಂಚಾಯಿತಿಯಲ್ಲಿ ೧೦ ಹಳ್ಳಿಗಳಿದ್ದು ಪ್ರತಿಯೊಂದು ಹಳ್ಳಿಯ ಸಾಕ್ಷರತೆಯನ್ನು ತೋರಿಸಲಾಗಿದೆ.

ಅಧ್ಯಯನಕ್ಕೊಳಪಡಿಸಿದ ಎರಡು ಗ್ರಾಮಪಂಚಾಯಿತಿಗಳ ಸಾಕ್ಷರತೆಯನ್ನು ಮೇಲಿನ ಕೋಷ್ಟಕಗಳನ್ವಯ ಗಮನಿಸಿ ತುಲನೆ ಮಾಡಿದಾಗ ನಮಗೆ ಕೆಲವು ಅಂಶಗಳು ಸಿಗುತ್ತವೆ. ಹೀರಾ ಗ್ರಾಮ ಪಂಚಾಯಿತಿಯಲ್ಲಿರುವ ೧೦ ಹಳ್ಳಿಗಳಲ್ಲಿ ದೋಣಮರಡಿ, ಹುಡಾ, ಕಲಮಗೆರಾ ಮತ್ತು ಕಸನದೊಡ್ಡಿಗಳಲ್ಲಿ ಮಹಿಳಾ ಸಾಕ್ಷರತೆಯು ಶೇಕಡ ೧೫ಕ್ಕಿಂತ ಕಡಿಮೆಯಿರುವುದು ತಿಳಿದುಬರುತ್ತದೆ. ವಿಶೇಷವೆಂದರೆ ದೋಣಮರಡಿ ಗ್ರಾಮದಲ್ಲಿ ಮಹಿಳಾ ಸಾಕ್ಷರತೆಯು ಶೇಕಡ ೫.೯ ಇರುವುದು ಶೋಚನೆಯ ಸಂಗತಿ. ಬಳದರೆ ಗ್ರಾಮ ಪಂಚಾಯಿತಿಯಲ್ಲಿರುವ ಹದಿನಾಲ್ಕು ಹಳ್ಳಿಗಳನ್ನು (೩.೩ಸಿ) ಹೀರಾ ಗ್ರಾಮಪಂಚಾಯಿತಿಯಲ್ಲಿರುವ ಹಳ್ಳಿಗಳ ಮಹಿಳಾ ಸಾಕ್ಷರತೆಯ ಪ್ರಮಾಣಕ್ಕೆ ತುಲನೆ ಮಾಡಿದಾಗ ವ್ಯತಿರಿಕ್ತವಾದ ಅಂಶಗಳು ಕಂಡುಬರುತ್ತವೆ. ಬಳದರೆ ಗ್ರಾಮಪಂಚಾಯಿತಿಯ ಮುರಾರನಹಳ್ಳಿ

ಹೊರತುಪಡಿಸಿದರೆ ಉಳಿದ ಹದಿಮೂರು ಹಳ್ಳಿಗಳಲ್ಲಿ ಮಹಿಳಾ ಸಾಕ್ಷರತೆಯು ಶೇಕಡ ೫೦ಕ್ಕಿಂತಲೂ ಹೆಚ್ಚು ಇರುವುದು ತಿಳಿಯುತ್ತದೆ. ಹಾಗೆಯೇ ಉದಯಪುರ, ಬಳದರೆ, ಹಿರಿಹಳ್ಳಿ, ಅಪ್ಪೇನಹಳ್ಳಿ ಹೊರತುಪಡಿಸಿದರೆ ಇನ್ನುಳಿದ ಒಂಭತ್ತು ಹಳ್ಳಿಗಳಲ್ಲಿ ಸಾಕ್ಷರತಾ ಪ್ರಮಾಣ ರಾಜ್ಯದ ಮಹಿಳಾ ಸಾಕ್ಷರತಾ ಪ್ರಮಾಣಕ್ಕಿಂತ ಹೆಚ್ಚಾಗಿರುತ್ತದೆ.

೩.೪ ಶಾಲಾ-ದಾಖಲಾತಿ

ಇಂದು ಲಿಂಗಸಂಬಂಧಿ ಆಯಾಮಕ್ಕೆ ಹೆಚ್ಚಿನ ಮಹತ್ವ ನೀಡಿದ್ದರ ಫಲವಾಗಿ ಪ್ರಾಥಮಿಕ ಶಿಕ್ಷಣದಲ್ಲಿ ಹೆಣ್ಣುಮಕ್ಕಳ ಭಾಗವಹಿಸುವಿಕೆ ಹೆಚ್ಚಾಗಿದೆ. ಶಾಲಾ ದಾಖಲಾತಿಯಲ್ಲಿ ಹೆಣ್ಣು ಮತ್ತು ಗಂಡುಮಕ್ಕಳ ನಡುವಿನ ಅಂತರ ಸಾಕಷ್ಟು ಕಡಿಮೆಯಾಗಿದ್ದರೂ, ಗಂಡುಮಕ್ಕಳ ಶಾಲಾ ದಾಖಲಾತಿಗೆ ಹೋಲಿಸಿದರೆ ಹೆಣ್ಣುಮಕ್ಕಳ ಶಾಲಾ ದಾಖಲಾತಿ ಸ್ವಲ್ಪ ಕಡಿಮೆ ಇದೆ. ಒಟ್ಟು ಶಾಲಾ ದಾಖಲಾತಿ ಸಂಖ್ಯೆಯನ್ನು ಪರಿಗಣನೆಗೆ ತೆಗೆದುಕೊಂಡಾಗ ನಗರ ಗ್ರಾಮೀಣ ಪ್ರದೇಶದಲ್ಲಿ ಹೆಣ್ಣುಮಕ್ಕಳ ಶಾಲಾ ದಾಖಲಾತಿ ದರದಲ್ಲಿ ಸಾಕಷ್ಟು ವ್ಯತ್ಯಾಸವಿರುವುದು ಕಂಡುಬರುತ್ತದೆ. ಅದರಲ್ಲಿಯೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರ ಹಿಂದುಳಿದ ಜಾತಿ ಹಾಗೂ ಕೆಲವು ಅಲ್ಪಸಂಖ್ಯಾತ ಗುಂಪುಗಳಿಗೆ ಸೇರಿದ ಹೆಣ್ಣುಮಕ್ಕಳ ಶಾಲಾ ದಾಖಲಾತಿಯಲ್ಲಿ ಬಹಳ ಅಂತರವಿರುವುದು ಕಂಡುಬರುತ್ತದೆ.

ಕೋಷ್ಟಕ-೩.೪ಎ

ಭಾರತದಲ್ಲಿ ಶಾಲಾ ದಾಖಲಾತಿಯ ಒಟ್ಟು ಪ್ರಮಾಣ

ವರ್ಷ	ಪ್ರಾಥಮಿಕ /		ಒಟ್ಟು	ಮಾಧ್ಯಮಿಕ / ಹಿರಿಯ ಪ್ರಾಥಮಿಕ		ಒಟ್ಟು
	ಬಾಲಕರು	ಬಾಲಕಿಯರು		ಬಾಲಕರು	ಬಾಲಕಿಯರು	
೯೦-೯೧	೧೧೪.೦	೮೫.೫	೧೦೦.೧	೭೬.೬	೪೭.೦	೬೨.೧
೯೧-೯೨	೧೧೨.೮	೮೬.೯	೧೦೦.೨	೭೫.೧	೪೯.೬	೬೧.೪
೯೨-೯೩	೯೫.೦	೭೩.೫	೭೪.೬	೭೨.೫	೪೮.೯	೬೭.೫
೯೪-೯೫	೯೬.೬	೭೮.೨	೭೭.೭	೬೮.೯	೫೦.೦	೬೦.೦
೯೫-೯೬	೯೭.೧	೭೯.೪	೮೮.೬	೬೭.೮	೪೯.೮	೫೯.೩
೯೬-೯೭	೯೮.೭	೮೧.೯	೯೦.೬	೭೦.೯	೫೨.೮	೬೨.೪
೯೭-೯೮	೯೭.೭	೮೧.೨	೮೯.೭	೬೬.೫	೪೯.೫	೫೮.೫
೯೮-೯೯	೧೦೦.೯	೮೨.೯	೯೨.೧	೬೫.೩	೬೯.೧	೫೭.೬
೯೯-೨೦೦೦	೧೦೪.೧	೮೫.೨	೯೪.೯	೬೭.೨	೪೯.೭	೫೮.೮
೨೦೦೦-೦೧	೧೦೪.೯	೮೫.೯	೯೫.೭	೬೬.೭	೪೯.೯	೫೮.೬

ಮೂಲ : ಮಹಿಳೆ ಮತ್ತು ಅಭಿವೃದ್ಧಿ, ೨೦೦೭.

ಪ್ರಾಥಮಿಕ ಹಂತದ ಶಿಕ್ಷಣದಲ್ಲಿ ದಾಖಲಾತಿಯ ಪ್ರಮಾಣವು ೧೯೫೦-೫೧ರಲ್ಲಿ ೧೯:೧೬ ಮಿಲಿಯನ್ ಇದ್ದದ್ದು ೨೦೦೦-೦೧ರ ಅವಧಿಯಲ್ಲಿ ೧೧೩ ಮಿಲಿಯನ್‌ಗೆ ಏರಿಕೆಯಾಯಿತು. ೧೪

ವರ್ಷದ ಒಳಗಿನ ಮಕ್ಕಳ ಪ್ರಾಥಮಿಕ ಶಿಕ್ಷಣದ ದಾಖಲಾತಿಯಲ್ಲಿ ಗಣನೀಯವಾಗಿ ಹೆಚ್ಚಳ ಕಂಡರೂ, ಇದು ಸಂವಿಧಾನದ ಸಾರ್ವತ್ರಿಕ ಗುರಿಯನ್ನು ತಲುಪುವಲ್ಲಿ ಯಶಸ್ವಿಯಾಗಿಲ್ಲ ಎಂಬುದು ಮೇಲಿನ ಅಂಕಿ–ಅಂಶಗಳಿಂದ ತಿಳಿದುಬರುತ್ತದೆ.

೨೦೦೩-೦೪ರ ಅಂಕಿ–ಅಂಶಗಳ ಪ್ರಕಾರ ಕರ್ನಾಟಕದಲ್ಲಿ ೫೧,೯೦೪ ಪ್ರಾಥಮಿಕ ಶಾಲೆಗಳಿದ್ದು (೧-೮ನೇ ತರಗತಿ) ಇವುಗಳ ಪೈಕಿ ೪೩,೪೪೭ ಸರ್ಕಾರಿ ಶಾಲೆಗಳು ಇರುತ್ತವೆ. ೧೯೯೦-೯೧ ರಿಂದ ೨೦೦೩-೦೪ರಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿನ (೧-೭ನೇ ತರಗತಿ) ದಾಖಲಾತಿಯು ವಾರ್ಷಿಕ ಶೇಕಡ ೧.೪ರ ದರದಲ್ಲಿ ಬೆಳವಣಿಗೆ ಹೊಂದಿದ್ದು, ಅದು ಬಾಲಕರಲ್ಲಿ ಶೇಕಡ ೧ ಹಾಗೂ ಬಾಲಕಿಯರಲ್ಲಿ ಶೇಕಡ ೨ರ ಗಡಿ ಒಳಗೊಂಡಿದ್ದು, ಹೆಣ್ಣುಮಕ್ಕಳ ಶಿಕ್ಷಣಕ್ಕೆ ಚಾಲನೆ ದೊರಕಿರುವುದನ್ನು ಅದು ಸೂಚಿಸುತ್ತದೆ. ೧೯೯೭-೯೮ರಲ್ಲಿ ಬಾಲಕಿಯರ ದಾಖಲಾತಿಯಲ್ಲಿ ಬಿಜಾಪುರ ಜಿಲ್ಲೆಯು ಅತಿಕೆಳಗಿನ ಸ್ಥಾನ ಪಡೆದಿದೆ. ಬಾಲಕಿಯರ ದಾಖಲಾತಿ ಪ್ರಮಾಣವು ೧೯೯೭-೯೮ರಲ್ಲಿ ಶೇಕಡ ೪೨.೨ ರಿಂದ ೨೦೦೩-೦೪ರಲ್ಲಿ ಶೇಕಡ ೪೬.೮ಕ್ಕೆ ಏರಿಕೆಯಾದರೂ ಸಹ, ಜಿಲ್ಲೆಯು ಕೊನೆಯ ಸ್ಥಾನದಲ್ಲಿಯೇ ಮುಂದುವರಿದಿದೆ. ಬಾಲಕಿಯರ ದಾಖಲಾತಿಯಲ್ಲಿ ಜಿಲ್ಲೆಗಳ ನಡುವೆ ಹೆಚ್ಚಿನ ವ್ಯತ್ಯಾಸವಿರುವುದಿಲ್ಲ. ಪರಿಶಿಷ್ಟ ಪಂಗಡಕ್ಕೆ ಸೇರಿದ ಬಾಲಕಿಯರ ದಾಖಲಾತಿಯೂ ಗುಲ್ಬರ್ಗಾದಲ್ಲಿ ಅತಿಕಡಿಮೆ ಇದೆ. ಅತಿಹೆಚ್ಚಿನ ಹಾಗೂ ಅತಿಕಡಿಮೆ ದಾಖಲಾತಿ ಸಂಖ್ಯೆಯಲ್ಲಿನ ವ್ಯತ್ಯಾಸವು ಗಣನೀಯವಾಗಿಲ್ಲದಿದ್ದರೂ ಸಹ ಬೆಂಗಳೂರು ನಗರದಲ್ಲಿ ಅತಿಹೆಚ್ಚಿನ ಹಾಗೂ ಬಳ್ಳಾರಿಯಲ್ಲಿ ಅತಿಕಡಿಮೆ ದಾಖಲಾತಿ ಪ್ರಮಾಣಗಳು ಕಂಡುಬರುತ್ತದೆ.

ರಾಜ್ಯದಲ್ಲಿ ಒಟ್ಟು ದಾಖಲಾತಿ ದರವು ೧೯೯೬-೯೭ರಲ್ಲಿ ಶೇಕಡ ೯೨ರಷ್ಟು ೨೦೦೦-೦೧ರಲ್ಲಿ ಶೇಕಡ ೯೯ಕ್ಕೆ ಏರಿ, ಪುನಃ ೨೦೦೩-೦೪ರಲ್ಲಿ ಶೇಕಡ ೯೪.೧೪ಕ್ಕೆ ಇಳಿಮುಖವಾಯಿತು. ೧೯೯೮-೯೯ರಲ್ಲಿ ರಾಯಚೂರಿನಲ್ಲಿ ಅತಿಕಡಿಮೆ ಒಟ್ಟು ದಾಖಲಾತಿ ದರವಿದ್ದು, ಅದು ಉಡುಪಿಯಲ್ಲಿ ಅತಿ ಹೆಚ್ಚಾಗಿತ್ತು. ೨೦೦೦-೦೧ರಲ್ಲಿ ಒಟ್ಟು ದಾಖಲಾತಿ ದರದಲ್ಲಿ ರಾಯಚೂರಿನ ಸ್ಥಾನಮಾನದಲ್ಲಿ ಯಾವುದೇ ಬದಲಾವಣೆಯಾಗದೇ ಅದು ಅತಿಕೊನೆಯಲ್ಲಿದ್ದರೆ, ಬೆಂಗಳೂರು ನಗರ(ಶೇ. ೧೨೮.೨೧)ದಲ್ಲಿ ಅತಿಹೆಚ್ಚು ಒಟ್ಟು ದಾಖಲಾತಿ ದರವಿರುತ್ತದೆ. ೨೦೦೩-೦೪ರಲ್ಲಿ ದಕ್ಷಿಣ ಕನ್ನಡದಲ್ಲಿ ಅತಿಹೆಚ್ಚು ಒಟ್ಟು ದಾಖಲಾತಿ ದರವಿತ್ತು. ಈಗಲೂ ಸಹ ರಾಯಚೂರಿನಲ್ಲಿ ಅತಿಕಡಿಮೆ ಒಟ್ಟು ದಾಖಲಾತಿ ದರವಿದೆ. ಜಾತಿವಾರು ಪರಿಶಿಷ್ಟ ಪಂಗಡಗಳಿಗೆ ಸೇರಿದವರಲ್ಲಿ ಒಟ್ಟು ದಾಖಲಾತಿ ದರವು ಸಾಮಾನ್ಯ ವರ್ಗ ಹಾಗೂ ಪರಿಶಿಷ್ಟ ಜಾತಿಗೆ ಸೇರಿದವರಿಗಿಂತ ಕಡಿಮೆ ಇರುತ್ತದೆ. ವಾಸ್ತವದಲ್ಲಿ ಪರಿಶಿಷ್ಟ ಜಾತಿಗೆ ಸೇರಿದವರಲ್ಲಿನ ಒಟ್ಟು ದಾಖಲಾತಿ ದರದಲ್ಲಿ ಉತ್ತಮ ಸುಧಾರಣೆ ಕಂಡಿದ್ದು, ಇದು ೨೦೦೦-೦೧ರಲ್ಲಿ ಸಾಮಾನ್ಯ ಒಟ್ಟು ದಾಖಲಾತಿ ದರವನ್ನು ಹಿಂದಕ್ಕೆ ಹಾಕಿದೆ. ಇದು ಸರ್ಕಾರದ ವಿಶೇಷ ಪ್ರೋತ್ಸಾಹಕ ಯೋಜನೆಗಳ ನೇರ ಫಲಿತಾಂಶವಾಗಿರುತ್ತದೆ. ಪರಿಶಿಷ್ಟ ಜಾತಿಗೆ ಸಂಬಂಧಪಟ್ಟಂತೆ ಅವರದೇ ಆದ ಹಾಗೂ ವಿಭಿನ್ನವಾದ

ಸಮಸ್ಯೆಗಳಿದ್ದು, ಅವುಗಳನ್ನು ಪುನರ್ ವಿಮರ್ಶಿಸುವ ಹಾಗೂ ಅದಕ್ಕೆ ತಕ್ಕ ಪರಿಹಾರಗಳನ್ನು ಹುಡುಕಬೇಕಾದ ಅವಶ್ಯಕತೆ ಇರುತ್ತದೆ (ಕರ್ನಾಟಕದ ಮಾನವ ಅಭಿವೃದ್ಧಿ ವರದಿ, ೨೦೦೫).

ಶಾಲಾ ದಾಖಲಾತಿ ಕುರಿತ ಸಂಗತಿಗಳನ್ನು ಚರ್ಚಿಸುವಾಗ ಮೊದಲಿಗೆ ೧೯೫೭-೫೮ರಿಂದ ೨೦೦೪-೦೫ರವರೆಗೆ ಶಾಲಾ ದಾಖಲಾತಿಯನ್ನು ಹಿಡಿದಿಡಲಾಗಿದೆ. ವಿಶೇಷವಾಗಿ ೧೯೯೦-೯೧ರಿಂದ ೨೦೦೪-೦೫ರವರೆಗೆ ಶಾಲಾ ದಾಖಲಾತಿಯಲ್ಲಿನ ಬೆಳವಣಿಗೆಯ ಪ್ರಮಾಣವನ್ನು ವಿಶ್ಲೇಷಿಸಲಾಗಿದೆ. ಹಾಗೆಯೇ, ೨೦೦೧ರ ಕರ್ನಾಟಕದ ಜನಸಂಖ್ಯೆಯನ್ನು ಆಧಾರವಾಗಿ ಇಟ್ಟುಕೊಂಡು ಶಾಲಾ ದಾಖಲಾತಿಯ ಸಾಮಾಜಿಕ ಹಾಗೂ ಪ್ರಾದೇಶಿಕ ಆಯಾಮಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ೧೯೫೦-೫೧ರಲ್ಲಿ ಶಾಲೆಗೆ ೧ರಿಂದ ೭ ದಾಖಲಾದ ಒಟ್ಟು ಮಕ್ಕಳ ಸಂಖ್ಯೆ ೬,೩೫,೨೦೬ ಇದ್ದರೆ, ೨೦೦೪-೦೫ರಲ್ಲಿ ಶಾಲೆಗೆ ದಾಖಲಾದ ಒಟ್ಟು ಮಕ್ಕಳ ಸಂಖ್ಯೆ ೭೯,೦೦,೭೩೩ ಆಗಿದೆ. ಪ್ರಾಥಮಿಕ ಶಾಲೆಗಳ ಒಟ್ಟು ದಾಖಲಾತಿ ಪ್ರಮಾಣ ೧೯೮೦-೮೧ರಲ್ಲಿ ಶೇ. ೬೬.೦೦ರಷ್ಟು, ೧೯೯೬-೯೭ರಲ್ಲಿ ಶೇ. ೯೨.೦೦ ಹಾಗೂ ೨೦೦೪-೦೫ರಲ್ಲಿ ಶೇ. ೯೮.೮೦ ತಲುಪಿದೆ. ಬಾಲಕಿಯರ ಶಾಲಾ ದಾಖಲಾತಿ ಪ್ರಮಾಣವು ೧೯೮೦-೮೧ರಲ್ಲಿ ಶೇ. ೪೪.೫ ಇದ್ದದ್ದು, ೧೯೯೭-೯೮ರಲ್ಲಿ ಶೇ. ೪೮.೦೦ ರಷ್ಟನ್ನು ಮತ್ತು ೨೦೦೪-೦೫ರಲ್ಲಿ ಶೇ. ೯೬.೧೦ ತಲುಪಿದೆ.

ಕೋಷ್ಟಕ-೩.೪ಬಿ

ಶಾಲಾ ದಾಖಲಾತಿಯ ಬೆಳವಣಿಗೆ (ಲಕ್ಷಗಳಲ್ಲಿ)

ವರ್ಷಗಳು	ಬಾಲಕರು	ಬಾಲಕಿಯರು	ಒಟ್ಟು
೧೯೫೭-೫೮	೯.೦೯	೪.೩೩	೧೩.೪೨
೧೯೭೮-೭೯	೧೯.೨೮	೧೩.೨೨	೩೨.೫೦
೧೯೯೩-೯೪	೪೦.೬೫	೩೪.೮೫	೭೫.೫೦
೨೦೦೧-೦೨	೪೨.೮೨	೪೨.೯೯	೮೫.೮೧
೨೦೦೪-೦೫	೪೭.೫೧	೫೧.೮೪	೯೯.೩೬

೧೯೯೦-೯೧ರಿಂದ ೨೦೦೪-೦೫ರಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿನ (೧ರಿಂದ ೭ನೇ ತರಗತಿಗಳು) ದಾಖಲಾತಿಯು ವಾರ್ಷಿಕ ಶೇಕಡ ೧.೫ರಷ್ಟು ದರದಲ್ಲಿ ಬೆಳವಣಿಗೆ ಹೊಂದಿದ್ದು, ಬಾಲಕರಲ್ಲಿ ಶೇ. ೧.೧ ಹಾಗೂ ಬಾಲಕಿಯರಲ್ಲಿ ಶೇ. ೨.೦೦ರಷ್ಟು ಪ್ರಮಾಣದಲ್ಲಿ ವಾರ್ಷಿಕ ಬೆಳವಣಿಗೆ ಹೊಂದಿದೆ. ಇದು ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಚಾಲನೆ ದೊರಕಿರುವುದನ್ನು ಸೂಚಿಸುತ್ತದೆ. ಒಟ್ಟು ದಾಖಲಾತಿಯಲ್ಲಿ ಬಾಲಕಿಯರ ದಾಖಲಾತಿಯು ೧೯೯೦-೯೧ರಲ್ಲಿ ಶೇ. ೩೬.೦೦ರಿಂದ ೨೦೦೪-೦೫ರಲ್ಲಿ ಶೇ. ೪೯.೦೦ರಷ್ಟು ಬೆಳವಣಿಗೆಯನ್ನು ಹೊಂದಿದೆ. ೧೯೯೭-೯೮ರಲ್ಲಿ ಬಾಲಕಿಯರ ದಾಖಲಾತಿಯಲ್ಲಿ ಬಿಜಾಪುರ ಜಿಲ್ಲೆಯು ಅತಿಕಡಿಮೆ ಸ್ಥಾನವನ್ನು ಹೊಂದಿದ್ದು, ೧೯೯೭-೯೮ರಲ್ಲಿ ಬಾಲಕಿಯರ ದಾಖಲಾತಿ

ಪ್ರಮಾಣವು ಶೇ. ೪೨.೨೧ರಿಂದ ೨೦೦೩-೦೪ರಲ್ಲಿ ಶೇ. ೪೬.೮ರಷ್ಟು ಏರಿಕೆಯನ್ನು ಹೊಂದಿದೆ. ಬಾಲಕಿಯರ ದಾಖಲಾತಿಯಲ್ಲಿ ಜಿಲ್ಲೆ ಜಿಲ್ಲೆಗಳ ನಡುವೆ ಹೆಚ್ಚಿನ ವ್ಯತ್ಯಾಸ ವಿರುವುದಿಲ್ಲ. ಪರಿಶಿಷ್ಟ ಪಂಗಡಕ್ಕೆ ಸೇರಿದ ಬಾಲಕಿಯರ ದಾಖಲಾತಿಯು ಮಂಡ್ಯದಲ್ಲಿ ಹೆಚ್ಚಾಗಿದ್ದು, ಪರಿಶಿಷ್ಟ ಜಾತಿಗೆ ಸೇರಿದ ಬಾಲಕಿಯರ ದಾಖಲಾತಿಯು ಗುಲ್ಬರ್ಗದಲ್ಲಿ ಅತಿ ಕಡಿಮೆ ಇರುತ್ತದೆ. ಅತಿಹೆಚ್ಚಿನ ಹಾಗೂ ಅತಿಕಡಿಮೆ ದಾಖಲಾತಿಯ ಸಂಖ್ಯೆಯಲ್ಲಿನ ವ್ಯತ್ಯಾಸವು ಅಷ್ಟಾಗಿ ಇಲ್ಲದಿದ್ದರೂ ಸಹ ಬೆಂಗಳೂರು ನಗರದಲ್ಲಿ ಅತಿಹೆಚ್ಚಿನ ದಾಖಲಾತಿ ಹಾಗೂ ಬಳ್ಳಾರಿಯಲ್ಲಿ ಅತಿಕಡಿಮೆ ದಾಖಲಾತಿ ಇರುತ್ತದೆ.

ಒಟ್ಟು ಹಾಗೂ ನಿವ್ವಳ ದಾಖಲಾತಿ ಪರಿಮಾಣವು ಶಿಕ್ಷಣದ ಬಹುಮುಖ ಕ್ಷೇತ್ರಗಳನ್ನು ತಿಳಿಸುತ್ತದೆ. ಇದು ಒಟ್ಟು ದಾಖಲಾತಿ ಮತ್ತು ನಿವ್ವಳ ದಾಖಲಾತಿ ದರದ ಪರಿಕಲ್ಪನೆಯಲ್ಲಿನ ಭೇದವನ್ನು ತೋರಿಸುವಲ್ಲಿ ಉಪಯೋಗವಾಗಿದೆ. ಸಾಮಾನ್ಯವಾಗಿ ಒಟ್ಟು ಹಾಗೂ ನಿವ್ವಳ ದಾಖಲಾತಿ ಪರಿಮಾಣಗಳನ್ನು ಮಕ್ಕಳ ಶಿಕ್ಷಣವನ್ನು ಕಂಡುಹಿಡಿಯಲು ಬಳಸುತ್ತಾರೆ. ದಾಖಲಾತಿ ದರವನ್ನು ಶಾಲೆಯಲ್ಲಿ ಒಟ್ಟು ಮಕ್ಕಳ ಸಂಖ್ಯೆಯನ್ನು ಅದೇ ವಯಸ್ಸಿನ ಗುಂಪಿನ ಮಕ್ಕಳ ಜನಸಂಖ್ಯೆಯಿಂದ ಭಾಗಿಸುವುದರಿಂದ ಬರುವ ಸಂಖ್ಯೆಯೆಂದು ವ್ಯಾಖ್ಯಾನಿಸುತ್ತಾರೆ. ಒಟ್ಟು ದಾಖಲಾತಿ ದರವು ನಿರ್ದಿಷ್ಟ ಶಿಕ್ಷಣ ಮಟ್ಟವನ್ನು ಹೊಂದಿದ ಮಕ್ಕಳು, ಅವರ ಸಂಬಂಧಪಟ್ಟ ವಯಸ್ಸಿನ ಗುಂಪಿನ ಭಾಗಲಬ್ಧವನ್ನು ಉಪಯೋಗಿಸುವ ವಯಸ್ಸಿಗಿಂತ ಹೆಚ್ಚು ಅಥವಾ ಕಡಿಮೆ ವಯಸ್ಸನ್ನು ಹೊಂದಿರುವಂತಹವರನ್ನು ಒಳಗೊಂಡಿರುತ್ತದೆ. ನಿವ್ವಳ ದಾಖಲಾತಿ ದರವು ಸಂಬಂಧಪಟ್ಟ ವಯಸ್ಸಿನ ಗುಂಪಿನ ನಿರ್ದಿಷ್ಟ ಹಂತದಲ್ಲಿ ದಾಖಲಾದ ಒಟ್ಟು ಮಕ್ಕಳ ಸಂಖ್ಯೆಯನ್ನು ನಿರ್ದಿಷ್ಟ ವಯಸ್ಸಿನ ಗುಂಪಿನ ಒಟ್ಟು ಮಕ್ಕಳ ಜನಸಂಖ್ಯೆಯಿಂದ ಭಾಗಿಸುವುದರಿಂದ ದೊರಕುತ್ತದೆ. ಆದುದರಿಂದ ಒಟ್ಟು ದಾಖಲಾತಿ ದರವು ಶೇಕಡ ೧೦೦ನ್ನು ಮೀರಬಹುದು.

ರಾಜ್ಯದಲ್ಲಿ ಒಟ್ಟು ದಾಖಲಾತಿ ದರವು ೧೯೯೬-೯೭ರಲ್ಲಿ ಶೇ. ೯೨.೦೦ರಿಂದ ೨೦೦೦-೦೧ರಲ್ಲಿ ಶೇ. ೯೯.೦೦ಕ್ಕೆ ಏರಿಕೆಯಾಗಿದ್ದು ೨೦೦೪-೦೫ರಲ್ಲಿ ಶೇ. ೯೬.೧೧ಕ್ಕೆ ಇಳಿಕೆಯಾಗಿರುತ್ತದೆ. ೧೯೯೮-೯೯ರಲ್ಲಿ ರಾಯಚೂರಿನಲ್ಲಿ ಅತಿಕಡಿಮೆ ಒಟ್ಟು ದಾಖಲಾತಿ ದರವಿದ್ದು ಉಡುಪಿಯಲ್ಲಿ ಅತಿ ಹೆಚ್ಚು ಇರುತ್ತದೆ. ೨೦೦೧-೦೨ರಲ್ಲಿ ಒಟ್ಟು ದಾಖಲಾತಿ ದರದಲ್ಲಿ ರಾಯಚೂರಿನ ಸ್ಥಾನಮಾನ (೭೪.೫೪)ದಲ್ಲಿ ಯಾವುದೇ ವ್ಯತ್ಯಾಸವಿಲ್ಲದೆ ಆ ಜಿಲ್ಲೆ ಪುನಃ ಅತಿ ಕೆಳಸ್ಥಾನದಲ್ಲಿರುತ್ತದೆ. ಆದರೆ ಬೆಂಗಳೂರು ನಗರ(೧೨೮.೨೧)ದಲ್ಲಿ ಅತಿಹೆಚ್ಚು ಒಟ್ಟು ದಾಖಲಾತಿ ದರವಿರುತ್ತದೆ. ೨೦೦೪-೦೫ರಲ್ಲಿ ದಕ್ಷಿಣ ಕನ್ನಡದಲ್ಲಿ ಅತಿಹೆಚ್ಚು ಒಟ್ಟು ದಾಖಲಾತಿ ದರವಿದ್ದು ಈಗಲೂ ಸಹ ರಾಯಚೂರಿನಲ್ಲಿ ಅತಿಕಡಿಮೆ ದಾಖಲಾತಿ ದರವಿರುತ್ತದೆ. ಬೀದರ್‌ನಲ್ಲಿ ಒಟ್ಟು ದಾಖಲಾತಿ ದರದಲ್ಲಿ ಅದರಲ್ಲೂ ಬಾಲಕಿಯರ ದಾಖಲಾತಿ ದರದಲ್ಲಿ ಗುರುತರವಾದ ಸುಧಾರಣೆಯಾಗಿದ್ದು, ಇದು ಬಾಲಕರ ದಾಖಲಾತಿ ದರಕ್ಕೆ ಸಮನಾಗಿದೆ. ಜಾತಿವಾರು, ಪರಿಶಿಷ್ಟ ಪಂಗಡಗಳಿಗೆ ಸೇರಿದವರಲ್ಲಿ ಒಟ್ಟು ದಾಖಲಾತಿ ದರವು ಸಾಮಾನ್ಯ ಜನರು ಹಾಗೂ ಪರಿಶಿಷ್ಟ ಜಾತಿಗೆ ಸೇರಿದವರಿಗಿಂತ ಕಡಿಮೆ ಇರುತ್ತದೆ. ಪರಿಶಿಷ್ಟ ಜಾತಿಗೆ ಸೇರಿದವರಲ್ಲಿನ ಒಟ್ಟು ದಾಖಲಾತಿ ದರದಲ್ಲಿ ಉತ್ತಮ ಸುಧಾರಣೆಯಾಗಿದ್ದು, ಇದು ೨೦೦೪-೦೫ರಲ್ಲಿ ಸಾಮಾನ್ಯ

ಜನರ ಒಟ್ಟು ದಾಖಲಾತಿ ದರವನ್ನು ಹಿಂದಕ್ಕೆ ಹಾಕಿದೆ. ಇದು ಸರ್ಕಾರದ ವಿಶೇಷ ಪ್ರೋತ್ಸಾಹಕ ಯೋಜನೆಗಳ ಫಲವಾಗಿರುತ್ತದೆ. ಪರಿಶಿಷ್ಟ ಜಾತಿಗೆ ಸಂಬಂಧಪಟ್ಟಂತೆ ಕೆಲವು ಸಮಸ್ಯೆಗಳು ಇದ್ದು, ಸ್ವಲ್ಪಮಟ್ಟಿನ ಪರಿಹಾರದ ಅವಶ್ಯಕತೆ ಇರುತ್ತದೆ.

೩.೫ ಶಾಲಾ ದಾಖಲಾತಿಯ ಸಾಧನೆ

೨೦೦೫ಕ್ಕೆ ಸಂಬಂಧಿಸಿದಂತೆ ೧ರಿಂದ ೭ನೆಯ, ೮ರಿಂದ ೧೦ನೆಯ ಹಾಗೂ ಒಟ್ಟು ೧ರಿಂದ ೧೦ನೆಯ ತರಗತಿಗಳ ದಾಖಲಾತಿ ವಿವರಗಳನ್ನು ಕಂದಾಯ ವಿಭಾಗವಾರು ನೀಡಲಾಗಿದೆ. ಒಂದರಿಂದ ಹತ್ತನೆಯ ತರಗತಿವರೆಗಿನ ದಾಖಲಾತಿ ಸಂಖ್ಯೆ ೯೯.೩೬ ಲಕ್ಷ. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ೧-೧೦ನೆಯ ತರಗತಿಯಲ್ಲಿರುವ ಮಕ್ಕಳ ಪ್ರಮಾಣವು ಶೇ. ೧೮.೮೦ರಷ್ಟಿದೆ.

ತೋರಿಸುತ್ತಿರುವ ಒಂದು ಕುತೂಹಲಕಾರಿ ಸಂಗತಿ ಬಗ್ಗೆ ವಿವರವಾಗಿ ಚರ್ಚಿಸುವ ಅಗತ್ಯವಿದೆ. ಒಟ್ಟು ಮಕ್ಕಳ ದಾಖಲಾತಿಯ ಪ್ರಾದೇಶಿಕ ಸ್ವರೂಪಕ್ಕೆ ಇದು ಸಂಬಂಧಿಸಿದೆ. ಕರ್ನಾಟಕ ರಾಜ್ಯದ ಎರಡು ಪ್ರದೇಶಗಳಾದ ದಕ್ಷಿಣ ಕರ್ನಾಟಕ(ದ.ಕ.) ಮತ್ತು ಉತ್ತರ ಕರ್ನಾಟಕ(ಉ.ಕ.)ಗಳ ನಡುವೆ ಜನಸಂಖ್ಯೆಯ ಹಂಚಿಕೆಗಿಂತ ದಾಖಲಾದ ಮಕ್ಕಳ ಹಂಚಿಕೆಯು ಭಿನ್ನವಾಗಿದೆ. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ದಕ್ಷಿಣ ಕರ್ನಾಟಕದ ಪಾಲು ಶೇ. ೫೭.೩೦ರಷ್ಟಿದ್ದರೆ, ಉತ್ತರ ಕರ್ನಾಟಕದ ಪಾಲು ಕೇವಲ ಶೇ. ೪೨.೭೦. ಆದರೆ ೧ರಿಂದ ೧೦ನೆಯ ತರಗತಿವರೆಗಿನ ಮಕ್ಕಳ ದಾಖಲಾತಿಯಲ್ಲಿ ಇದು ತಿರುವು ಮುರುವು ಆಗಿರುವುದು ಕಂಡುಬರುತ್ತದೆ. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ. ೫೭.೩೦ ಪಾಲು ಪಡೆದಿರುವ ದಕ್ಷಿಣ ಕರ್ನಾಟಕ ಪ್ರದೇಶವು ೧ ರಿಂದ ೧೦ನೆಯ ತರಗತಿವರೆಗಿನ ಶಾಲಾ ಮಕ್ಕಳಿಗೆ ಸಂಬಂಧಿಸಿದಂತೆ ಅದರ ಪಾಲು ಕೇವಲ ಶೇ. ೫೩.೪೮ರಷ್ಟು, ಇದಕ್ಕೆ ಪ್ರತಿಯಾಗಿ ಜನಸಂಖ್ಯೆಯಲ್ಲಿ ಶೇ. ೪೨.೭೦ ಪಾಲು ಪಡೆದಿರುವ ಉತ್ತರ ಕರ್ನಾಟಕ ಪ್ರದೇಶವು, ಶಾಲಾ ಮಕ್ಕಳಲ್ಲಿ ಶೇ. ೪೬.೫೨ ಪಾಲು ಪಡೆದಿದೆ. ಇದನ್ನು ಅರ್ಥ ಮಾಡಿಕೊಳ್ಳಲು ನಾವು ರಾಜ್ಯದಲ್ಲಿನ ೦-೬ ವಯೋಮಾನದ ಮಕ್ಕಳ ಹಂಚಿಕೆಯನ್ನು ಪರಿಗಣಿಸಬೇಕಾಗುತ್ತದೆ.

ಕರ್ನಾಟಕದಲ್ಲಿ ೧೯೯೧ರಿಂದ ೨೦೦೧ರವರೆಗಿನ ೦–೬ವಯೋಮಾನದ ಮಕ್ಕಳ ದಶವಾರ್ಷಿಕ ಬೆಳವಣಿಗೆಯ ದರವನ್ನು ಸೂಕ್ಷ್ಮವಾಗಿ ಗಮನಿಸಿದರೆ, ಈ ದಶಕದಲ್ಲಿ ೦-೬ ವಯೋಮಾನದ ಒಟ್ಟು ಮಕ್ಕಳ ಸಂಖ್ಯೆಯು ಶೇಕಡ ೮.೭೨ರಷ್ಟು ಕಡಿಮೆಯಾಗಿದೆ. ಆದರೆ ಕಡಿಮೆಯಾಗುತ್ತಿರುವ ಪ್ರಮಾಣ ಎಲ್ಲ ಪ್ರದೇಶದಲ್ಲೂ ಏಕರೂಪಿಯಾಗಿಲ್ಲ. ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ ಅದು ಶೇ. ೧೧.೩೪ರಷ್ಟು ಕಡಿಮೆಯಾಗಿದ್ದರೆ, ಉತ್ತರ ಕರ್ನಾಟಕ ಪ್ರದೇಶದಲ್ಲಿ ಅದು ಕೇವಲ ಶೇ. ೫.೮೧ರಷ್ಟು ಕಡಿಮೆಯಾಗಿದೆ. ಇದರಿಂದಾಗಿ ೦-೬ ವಯೋಮಾನದ ಮಕ್ಕಳಿಗೆ ಸಂಬಂಧಿಸಿದಂತೆ ಉತ್ತರ ಕರ್ನಾಟಕ ಪ್ರದೇಶದ ಪಾಲು ೧೯೯೧ರಲ್ಲಿ ಶೇ. ೪೭.೪೫ ರಷ್ಟಿದ್ದುದು ೨೦೦೧ರಲ್ಲಿ ಅದು ಶೇ. ೪೮.೯೬ಕ್ಕೆ ಏರಿಕೆಯಾಗಿದೆ. ಇದಕ್ಕೆ ಪ್ರತಿಯಾಗಿ ದಕ್ಷಿಣ ಕರ್ನಾಟಕ ಪ್ರದೇಶದ ಪಾಲು ಇದೇ ಅವಧಿಯಲ್ಲಿ ಶೇ. ೫೨.೫೫ರಿಂದ

ಶೇ. ೫೧.೦೪ಕ್ಕೆ ಇಳಿದಿದೆ. ಒಟ್ಟಾರೆ ೧೯೯೧-೨೦೦೧ರ ದಶಕದಲ್ಲಿ ೦-೬ ವಯೋಮಾನದ ಮಕ್ಕಳ ಪ್ರಮಾಣವು ಉತ್ತರ ಕರ್ನಾಟಕ ಪ್ರದೇಶದಲ್ಲಿ ಸಾಪೇಕ್ಷವಾಗಿ ಅಧಿಕಗೊಂಡಿದೆ (ಚಂದ್ರಶೇಖರ್ ಟಿ.ಆರ್., ೨೦೦೩). ಮಕ್ಕಳ ದಾಖಲಾತಿಗೆ ಸಂಬಂಧಿಸಿದ ಪ್ರಾದೇಶಿಕ ಸ್ವರೂಪವು ಜನಸಂಖ್ಯೆಯ ಪ್ರಾದೇಶಿಕ ಹಂಚಿಕೆಗಿಂತ ಯಾಕೆ ಭಿನ್ನವಾಗಿದೆ ಎಂಬುದನ್ನು ಸೂಚಿಗಳಿಂದ ತಿಳಿದುಕೊಳ್ಳಬಹುದಾಗಿದೆ. ಮತ್ತೊಂದು ದೃಷ್ಟಿಯಿಂದ ಈ ಅಂಕಿ-ಅಂಶ ಮಹತ್ವವಾದುದಾಗಿದೆ. ಕರ್ನಾಟಕದಲ್ಲಿ ಜನಸಂಖ್ಯೆಯ ಬೆಳವಣಿಗೆಯ ತೀವ್ರತೆಯು ಯಾವ ಭಾಗದಲ್ಲಿ ಅಧಿಕವಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳಬಹುದಾಗಿದೆ. ಈ ಸಂಗತಿಯು ಜನಸಂಖ್ಯಾ ನೀತಿ ಕಾರ್ಯಕ್ರಮದ ದೃಷ್ಟಿಯಿಂದ ಉಪಯುಕ್ತವಾದುದಾಗಿದೆ.

ಈ ಅಂಕಿ-ಅಂಶಗಳಿಂದ ತುಂಬಾ ಮಹತ್ವವಾದ ಅಸಮಾನತೆಯ ಸೂಕ್ಷ್ಮ ನೆಲೆಯನ್ನು ಗುರುತಿಸುವ ದೃಷ್ಟಿಯಿಂದ ನಿರ್ಣಾಯಕವಾದುದಾಗಿದೆ. ಈ ದಾಖಲಾತಿಯನ್ನು ೧ರಿಂದ ೭ನೆಯ ತರಗತಿ ಹಾಗೂ ೮ರಿಂದ ೧೦ನೆಯ ತರಗತಿವರೆಗೆ ವರ್ಗೀಕರಿಸಿ ನೀಡಲಾಗಿದೆ. ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆ ಬಗ್ಗೆ ತುಂಬಾ ಸಾಮಾನ್ಯೀಕರಿಸಿದ ರೀತಿಯಲ್ಲಿ ಮಾತನಾಡುವುದು ಕಂಡು ಬರುತ್ತದೆ. ಅದರ ಸೂಕ್ಷ್ಮ ನೆಲೆಗಳನ್ನು ಕುರಿತಂತೆ ಚರ್ಚೆಗಳು ಕಡಿಮೆ. ಕೋಷ್ಟಕ-೧೨ರ ಮೂರನೆಯ ಅಂಕಣವು ತೋರಿಸುವಂತೆ ದಕ್ಷಿಣ ಕರ್ನಾಟಕ ಪ್ರದೇಶವು ಜನಸಂಖ್ಯೆಯಲ್ಲಿ ಎಷ್ಟು ಪಾಲು ಪಡೆದಿದೆಯೋ ಅದಕ್ಕಿಂತ ಕಡಿಮೆ ಪಾಲನ್ನು ೧ರಿಂದ ೭ನೆಯ ತರಗತಿಯಲ್ಲಿನ ದಾಖಲಾದ ಮಕ್ಕಳಲ್ಲಿ ಪಡೆದಿದೆ. ಆದರೆ ಪ್ರೌಢಶಾಲೆಗಳ ಹಂತಕ್ಕೆ (೮-೧೦) ಬಂದರೆ ದಕ್ಷಿಣ ಕರ್ನಾಟಕ ಪ್ರದೇಶದ ಪಾಲು ಒಟ್ಟು ಜನಸಂಖ್ಯೆಯಲ್ಲಿನ ಪಾಲಿಗಿಂತ ಅಧಿಕವಿರುವುದು ಕುತೂಹಲಕಾರಿಯಾಗಿದೆ. ಇದಕ್ಕೆ ಪ್ರತಿಯಾಗಿ ಉತ್ತರ ಕರ್ನಾಟಕ ಪ್ರದೇಶವು ಜನಸಂಖ್ಯೆಯಲ್ಲಿ ಎಷ್ಟು ಪಾಲು ಪಡೆದಿದೆಯೋ (ಶೇ. ೪೨.೭೦) ಅದಕ್ಕಿಂತಲೂ ಹೆಚ್ಚಿನ ಪಾಲನ್ನು ಅದು ೧-೭ನೆಯ ತರಗತಿ ಮಕ್ಕಳ ದಾಖಲಾತಿಯಲ್ಲಿ ಪಡೆದಿದೆ (ಶೇ. ೪೮.೬೫). ಆದರೆ ಪ್ರೌಢಶಾಲೆ ಹಂತಕ್ಕೆ ಬಂದರೆ (೮ರಿಂದ ೧೦ನೆಯ ತರಗತಿ) ಅದರ ಪಾಲು ಜನಸಂಖ್ಯೆಯಲ್ಲಿ ಪಡೆದ ಪಾಲಿಗಿಂತ ಕಡಿಮೆಯಾಗಿರುವುದು (ಶೇ. ೩೮.೨೯) ಆಘಾತಕಾರಿ ಸಂಗತಿಯಾಗಿದೆ. ಇದು ಪ್ರಮುಖವಾಗಿ ಮಕ್ಕಳು ಶಾಲೆಯನ್ನು ಮಧ್ಯದಲ್ಲಿ ಬಿಡುವ ಪ್ರಮಾಣವು ದಕ್ಷಿಣ ಕರ್ನಾಟಕ ಪ್ರದೇಶಕ್ಕಿಂತ ಉತ್ತರ ಕರ್ನಾಟಕ ಪ್ರದೇಶದಲ್ಲಿ ಅಧಿಕವಾಗಿರುವುದನ್ನು ಸೂಚಿಸುತ್ತದೆ. ರಾಜ್ಯದಲ್ಲಿ ೨೦೦೫ರಲ್ಲಿ ೮ರಿಂದ ೧೦ನೆಯ ತರಗತಿವರೆಗೆ ಕಲಿಯುತ್ತಿರುವ ಒಟ್ಟು ಮಕ್ಕಳಲ್ಲಿ (೨೦.೩೬ ಲಕ್ಷ) ಕೇವಲ ಶೇ. ೩೮.೨೯ರಷ್ಟು ಉತ್ತರ ಕರ್ನಾಟಕ ಪ್ರದೇಶಕ್ಕೆ ಸೇರಿದ್ದರೆ, ಶೇ. ೬೧.೭೧ರಷ್ಟು ದಕ್ಷಿಣ ಕರ್ನಾಟಕ ಪ್ರದೇಶಕ್ಕೆ ಸೇರಿದ್ದಾರೆ. ಇದು ಶಾಲಾ ದಾಖಲಾತಿಗೆ ಸಂಬಂಧಿಸಿದ ಒಟ್ಟು ಸಾಧನೆ ಹಾಗೂ ಅದರ ಪ್ರಾದೇಶಿಕ ಸ್ವರೂಪವನ್ನು ಸ್ಪಷ್ಟವಾಗಿ ತೋರಿಸುತ್ತದೆ. ಈ ಮೇಲಿನ ಅಂಕಿ-ಸಂಖ್ಯೆಯ ಮೂಲಕ ಮೂರು ಮುಖ್ಯ ತಥ್ಯಗಳನ್ನು ರೂಪಿಸಬಹುದಾಗಿದೆ.

೧. ಕರ್ನಾಟಕದಲ್ಲಿ ಇಂದು ೧ರಿಂದ ೧೦ನೆಯ ತರಗತಿಗಳಲ್ಲಿ ಕಲಿಯುತ್ತಿರುವ ಮಕ್ಕಳ ಸಂಖ್ಯೆ ಸರಿಸುಮಾರು ೧೦೦ ಲಕ್ಷ ಇದೆ. ಆದರೆ ದಕ್ಷಿಣ ಕರ್ನಾಟಕ ಪ್ರದೇಶವು ರಾಜ್ಯದ ಜನಸಂಖ್ಯೆಯಲ್ಲಿ

ಎಷ್ಟು ಪಾಲು ಪಡೆದಿದೆಯೋ ಅದಕ್ಕಿಂತ ಕಡಿಮೆ ಪಾಲು ರಾಜ್ಯದ ಮಕ್ಕಳ ದಾಖಲಾತಿಯಲ್ಲಿ ಪಡೆದಿದೆ. ಇದಕ್ಕೆ ಪ್ರತಿಯಾಗಿ ಉತ್ತರ ಕರ್ನಾಟಕ ಪ್ರದೇಶವು ರಾಜ್ಯದ ಜನಸಂಖ್ಯೆಯಲ್ಲಿ ಎಷ್ಟು ಪಾಲು ಪಡೆದಿದೆಯೋ ಅದಕ್ಕಿಂತ ಅಧಿಕ ಪಾಲನ್ನು ರಾಜ್ಯದ ಶಾಲಾಮಕ್ಕಳ ಸಂಖ್ಯೆಯಲ್ಲಿ ಪಡೆದಿದೆ. ಆದರೆ ಇಂತಹ ಹಂಚಿಕೆ ೧-೭ನೆಯ ತರಗತಿ ದಾಖಲಾತಿಗೆ ಮಾತ್ರ ಅನ್ವಯಿಸುತ್ತದೆ. ಮುಂದೆ ೮-೧೦ನೆಯ ತರಗತಿಯ ದಾಖಲಾತಿ ತೆಗೆದುಕೊಂಡರೆ ಪರಿಸ್ಥಿತಿ ಆಶಾದಾಯಕವಾಗಿಲ್ಲ. ಇಲ್ಲಿ ದಕ್ಷಿಣ ಕರ್ನಾಟಕದ ಪಾಲು ಅಧಿಕವಾಗಿದೆ ಮತ್ತು ಉತ್ತರ ಕರ್ನಾಟಕದ ಪಾಲು ಕಡಿಮೆಯಾಗಿದೆ.

೨. ಪ್ರಾದೇಶಿಕವಾಗಿ ದಾಖಲಾದ ಮಕ್ಕಳ ಹಂಚಿಕೆಯು ಜನಸಂಖ್ಯೆಯ ಹಂಚಿಕೆಗಿಂತ ಭಿನ್ನವಾಗಿದ್ದರೆ ಅದಕ್ಕೆ ಉತ್ತರವನ್ನು ೦-೬ ವಯೋಮಾನದ ಮಕ್ಕಳ ಪ್ರಾದೇಶಿಕ ಹಂಚಿಕೆಯಲ್ಲಿ ಕಂಡುಕೊಳ್ಳಬಹುದಾಗಿದೆ.

೩. ಪ್ರಾದೇಶಿಕವಾಗಿ ೦-೬ ವಯೋಮಾನದ ಮಕ್ಕಳ ಹಂಚಿಕೆಯ ಆಧಾರದ ಮೇಲೆ ರಾಜ್ಯದಲ್ಲಿ ಜನಸಂಖ್ಯೆಯ ಬೆಳವಣಿಗೆ ಒತ್ತಡ ಯಾವ ಪ್ರದೇಶದಲ್ಲಿ ಅಧಿಕವಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬಹುದಾಗಿದೆ.

೩.೬ ಅಧ್ಯಯನ ಕ್ಷೇತ್ರದಲ್ಲಿ ಶಾಲೆ ಬಿಟ್ಟ ಮಕ್ಕಳು

ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ ನಾವು ಎದುರಿಸುತ್ತಿರುವ ಸಮಸ್ಯೆಯೆಂದರೆ ಮಕ್ಕಳು ಶಾಲೆಯನ್ನು ಮಧ್ಯದಲ್ಲಿ ಬಿಡುವ ಸಂಗತಿಯಾಗಿದೆ. ಪ್ರತಿಯೊಂದು ಮಗುವಿಗೆ ೧೦ ವರ್ಷಗಳ ಶಾಲಾ ಶಿಕ್ಷಣವನ್ನು ಕಡ್ಡಾಯವಾಗಿ ಮತ್ತು ಉಚಿತವಾಗಿ ಒದಗಿಸುವ ಜವಾಬ್ದಾರಿಗೆ ಸಮಾಜವು ಬದ್ಧವಾಗಿದೆ. ಆದರೆ ೧೦ ವರ್ಷಗಳ ಶಾಲಾ ಶಿಕ್ಷಣವನ್ನು ಪಡೆಯುವ ಅವಕಾಶ ಅನೇಕ ಮಕ್ಕಳಿಗಿರುವುದಿಲ್ಲ. ಇದಕ್ಕೆ ಬಡತನವನ್ನು ಮುಖ್ಯ ಕಾರಣವನ್ನಾಗಿ ನೀಡುತ್ತಾ ಬರಲಾಗಿದೆ. ಆದರೆ ಮಕ್ಕಳು ಶಾಲೆಯನ್ನು ಬಿಡಲು ಅನೇಕ ಕಾರಣಗಳು ಸಾಧ್ಯವಿದ್ದು, ಅದಕ್ಕೆ ಬಡತನವನ್ನು ಮಾತ್ರವೇ ಕಾರಣ ಮಾಡುವುದು ಸೂಕ್ತವೆನಿಸುವುದಿಲ್ಲ.

ಅನೇಕ ಸಾಮಾಜಿಕ-ರಾಜಕೀಯ-ಚಾರಿತ್ರಿಕ ಕಾರಣಗಳು ಇದರ ಹಿಂದಿರಲು ಸಾಧ್ಯ. ಮೊದಲ ತಲೆಮಾರಿನ ಅಕ್ಷರಸ್ಥ ಮಕ್ಕಳ ಸಮಸ್ಯೆ ಒಂದು ಬಗೆಯದ್ದಾದರೆ, ವಲಸೆ ಹೋಗುವ ಕುಟುಂಬಗಳಲ್ಲಿನ ಮಕ್ಕಳ ಸಮಸ್ಯೆ ಇದಕ್ಕಿಂತ ಭಿನ್ನವಾಗಿದೆ. ಇತ್ತೀಚಿನ ಅಧ್ಯಯನಗಳು ತೋರಿಸಿರುವಂತೆ ಶಾಲೆಯೊಳಗಿನ ವಾತಾವರಣವೂ ಬಹಳ ಮುಖ್ಯ. ಮಕ್ಕಳಿಗೆ ಶಾಲೆ-ಪಾಠ ಆಕರ್ಷಣೀಯವಾಗುವಂತೆ ಮಾಡುವುದು, ಉಚಿತ ಊಟ, ಪಠ್ಯಪುಸ್ತಕ, ಪಠ್ಯಕ್ರಮ, ಸಮವಸ್ತ್ರ ಮುಂತಾದವುಗಳನ್ನು ಒದಗಿಸುವುದು ಮಕ್ಕಳು

ಶಾಲೆಯನ್ನು ಮಧ್ಯದಲ್ಲಿ ಬಿಡುವುದನ್ನು ಕಡಿಮೆ ಮಾಡಬಲ್ಲವು (ಪ್ರಶಾಂತ ಹೆಚ್.ಡಿ., ೨೦೦೫; ೨೦೦೬). ಆವರ್ತನ ರೀತಿಯ ವಲಸೆಯು ವ್ಯಾಪಕವಾಗಿರುವ ಪ್ರದೇಶಗಳಲ್ಲಿ ಉದ್ಯೋಗ ಭದ್ರತೆಯ ಪಾತ್ರ ತುಂಬಾ ಮುಖ್ಯವಾಗುತ್ತದೆ. ಈ ಸಮಸ್ಯೆಯು ದಲಿತ ಮಕ್ಕಳಲ್ಲಿ ಅಧಿಕವಾಗಿರುವುದು ಅಚ್ಚರಿಯ ಸಂಗತಿಯೇನಲ್ಲ. ಹಾಗೆಯೇ ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳಲ್ಲಿ ಅಧಿಕವಾಗಿರುವುದು ಅಚ್ಚರಿಯ ಸಂಗತಿಯೇನಲ್ಲ. ಹಾಗೆಯೇ, ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳು ಶಾಲೆಯನ್ನು ಮಧ್ಯದಲ್ಲಿ ಬಿಡುವುದು ಅಧಿಕ. ಹೀಗೆ ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳಿಗೆ ಸಂಬಂಧಿಸಿದ ಸಮಸ್ಯೆಗೆ ಅನೇಕ ಮುಖಗಳಿವೆ. ಇದಕ್ಕೆ ಸ್ಥಳೀಯ ಕಾರಣ, ಬೋಧನಾ ವಿಧಾನ, ಪಠ್ಯಕ್ರಮದಲ್ಲಿ ಸ್ಥಳೀಯ ಪರಿಸರದ ಅಂಶಗಳ ಕೊರತೆ, ಇದಕ್ಕೆ ಮೇಲಿನಿಂದ ಕೆಳಕ್ಕೆ ಹರಿದು ಬರುವ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳು ಕೂಡ ಕಾರಣವಾಗಿವೆ (ಪ್ರೋಬ್, ೧೯೯೮; ವಿಮಲಾ ರಾಮಚಂದ್ರನ್, ೨೦೦೩; ಪ್ರಶಾಂತ್ ಹೆಚ್.ಡಿ. ೨೦೦೬).

ಅಧ್ಯಯನ ಮಾಡಿದ ಕ್ಷೇತ್ರಗಳಲ್ಲಿ ಹಾಸನ ಜಿಲ್ಲೆಯ ಬಳದರೆ ಗ್ರಾಮ ಪಂಚಾಯಿತಿಯನ್ನು ರಾಯಚೂರು ಜಿಲ್ಲೆಯ ಹೀರಾ ಗ್ರಾಮ ಪಂಚಾಯಿತಿಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಬಳದರೆ ಗ್ರಾಮ ಪಂಚಾಯಿತಿಯಲ್ಲಿ ೧ನೇ ತರಗತಿಯಿಂದ ೪ನೇ ತರಗತಿಯವರೆಗೂ ನಾಲ್ಕು ಗಂಡುಮಕ್ಕಳು ಮತ್ತು ಒಂದು ಹೆಣ್ಣು ಮಗು ಶಾಲೆ ಬಿಟ್ಟಿದ್ದಾರೆ. ೫ನೇ ತರಗತಿಯಿಂದ ೭ನೇ ತರಗತಿಯವರೆಗೂ ಆರು ಗಂಡುಮಕ್ಕಳು ಮತ್ತು ನಾಲ್ಕು ಹೆಣ್ಣುಮಕ್ಕಳು ಶಾಲೆ ಬಿಟ್ಟಿದ್ದಾರೆ. ಅದೇ ರೀತಿ ಮತ್ತೊಂದು ಹೀರಾ ಗ್ರಾಮ ಪಂಚಾಯಿತಿಯಲ್ಲಿ ೧ನೇ ತರಗತಿಯಿಂದ ೪ನೇ ತರಗತಿಯವರೆಗೂ ಮುವ್ವತ್ತೆಂಟು ಗಂಡುಮಕ್ಕಳು ಮತ್ತು ನಲವತ್ತೊಂಬತ್ತು ಹೆಣ್ಣುಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ೫ನೇ ತರಗತಿಯಿಂದ ೭ನೇ ತರಗತಿಯವರೆಗೂ ಇಪ್ಪತ್ತೆಂಟು ಗಂಡುಮಕ್ಕಳು ಮತ್ತು ಮುವ್ವತ್ತಾರು ಹೆಣ್ಣುಮಕ್ಕಳ ಶಾಲೆಬಿಟ್ಟಿದ್ದಾರೆ.

ಒಟ್ಟಾರೆಯಾಗಿ ಎರಡು ಕ್ಷೇತ್ರಗಳನ್ನು ತುಲನಾತ್ಮಕವಾಗಿ ನೋಡಿದಾಗ ಬಳದರೆಯಲ್ಲಿ ಒಟ್ಟು ೧ನೇ ತರಗತಿಯಿಂದ ೭ನೇ ತರಗತಿಯವರೆಗೂ ಹದಿನೈದು ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಇದರಲ್ಲಿ ಹತ್ತು ಗಂಡುಮಕ್ಕಳು ಮತ್ತು ನಾಲ್ಕು ಹೆಣ್ಣುಮಕ್ಕಳು. ಹೀರಾ ಗ್ರಾಮ ಪಂಚಾಯಿತಿಯಲ್ಲಿ ೧ನೇ ತರಗತಿಯಿಂದ ೭ನೇ ತರಗತಿಯವರೆಗೂ ಒಟ್ಟು ನೂರೈವತ್ತೊಂದು ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಇವರಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಎಂಬತ್ತೈದು. ಗಂಡುಮಕ್ಕಳು ಸಂಖ್ಯೆ ಅರವತ್ತಾರು. ಇಲ್ಲಿ ಗಮನಿಸುವ ಅಂಶವೆಂದರೆ ಬಳದರೆ ಗ್ರಾಮ ಪಂಚಾಯಿತಿಗಿಂತ ಹೀರಾ ಗ್ರಾಮ ಪಂಚಾಯಿತಿಯಲ್ಲಿ ಹೆಚ್ಚು ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಅದರಲ್ಲೂ ಹೆಣ್ಣುಮಕ್ಕಳ ಸಂಖ್ಯೆ ಅಧಿಕವಾಗಿದೆ. ಇದನ್ನು ಈ ಕೆಳಗಿನ ಕೋಷ್ಟಕದಲ್ಲಿ ನೋಡಬಹುದು.

ಕೋಷ್ಟಕ-೩.೬ಎ

ಅಧ್ಯಯನಕ್ಕೊಳಪಡಿಸಿದ ಕ್ಷೇತ್ರದಲ್ಲಿ ಶಾಲೆ ಬಿಟ್ಟ ಮಕ್ಕಳ ವಿವರಗಳು

ಪಂಚಾಯತಿಗಳು	ಗಂಡು	ಹೆಣ್ಣು	ಒಟ್ಟು
೧ ರಿಂದ ೪ನೇ ತರಗತಿ			
ಬಳದರೆ	೦೪	೦೧	೦೫
ಹೀರಾ	೩೮	೪೯	೮೭
೫ ರಿಂದ ೭ನೇ ತರಗತಿ			
ಬಳದರೆ	೦೬	೦೪	೧೦
ಹೀರಾ	೨೮	೩೬	೬೪
ಒಟ್ಟು	**೭೬**	**೯೦**	**೧೬೬**

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

೩.೭ ಶಾಲೆ ಬಿಡಲು ಕಾರಣವಾದ ಅಂಶಗಳು

ಬಳದರೆ ಮತ್ತು ಹೀರಾ ಗ್ರಾಮ ಪಂಚಾಯಿತಿಯಲ್ಲಿ ಒಟ್ಟು ನೂರಾ ಅರವತ್ತಾರು ಮಕ್ಕಳು ಶಾಲೆ ಬಿಟ್ಟಿದ್ದಾರೆ. ಇದರಲ್ಲಿ ಬಳದರೆ ಗ್ರಾಮ ಪಂಚಾಯಿತಿಗಿಂತ ಹೀರಾ ಗ್ರಾಮ ಪಂಚಾಯಿತಿಯಲ್ಲಿ ಹೆಚ್ಚು ಮಕ್ಕಳು ಶಾಲೆ ಬಿಟ್ಟಿದ್ದಾರೆ. ಇದಕ್ಕೆ ಹಲವಾರು ಕಾರಣಗಳಿವೆ. ಅವುಗಳಲ್ಲಿ ಮನೆ ಕೆಲಸಕ್ಕೆಂದು ಶೇಕಡ ೧೪.೫೦ರಷ್ಟು, ಕುಟುಂಬದ ವಲಸೆಗಾಗಿ ಎಂದು ಶೇಕಡ ೩೫.೬೦ರಷ್ಟು ಎಂದು ಕುಟುಂಬಗಳು ಹೇಳಿದರೆ, ಓದಲು ಆಸಕ್ತಿಯಿಲ್ಲವೆಂದು ಶೇಕಡ ೨೦.೨೩ರಷ್ಟು ಹೇಳಿದ್ದಾರೆ. ಅದೇ ರೀತಿ ಇತರೆ ಕಾರಣಗಳೆಂದು ಶೇಕಡ ೨೯.೬೭ರಷ್ಟು ಹೇಳಿದ್ದಾರೆ. ಈ ಎಲ್ಲಾ ಕಾರಣಗಳನ್ನು ಗಮನಿಸಿದಾಗ ಪ್ರಮುಖವಾಗಿ ವಲಸೆ, ಮನೆಗೆಲಸ, ಸಣ್ಣಮಕ್ಕಳ ಪಾಲನೆಗಾಗಿ ಹೆಚ್ಚು ಮಕ್ಕಳು ಶಾಲೆ ಬಿಟ್ಟಿರುವುದು ನಮ್ಮ ಅಧ್ಯಯನ ಕ್ಷೇತ್ರದಲ್ಲಿ ಕಂಡುಬಂದಿದೆ.

ಕೋಷ್ಟಕ-೩.೭ಎ

ಅಧ್ಯಯನಕ್ಕೊಳಪಡಿಸಿದ ಕ್ಷೇತ್ರದಲ್ಲಿ ಶಾಲೆ ಬಿಡಲು ಕಾರಣವಾದ ಅಂಶಗಳು

ಕಾರಣಗಳು	ಶೇಕಡವಾರು
ಮನೆಗೆಲಸ	೧೪.೫೦
ಕುಟುಂಬದ ವಲಸೆ	೩೫.೬೦
ಓದಲು ಆಸಕ್ತಿ ಇಲ್ಲದಿರುವುದು	೨೦.೨೩
ಗ್ರಾಮದಲ್ಲಿ ಶಾಲಾ ಸೌಲಭ್ಯಗಳ ಕೊರತೆ	೦೧.೮೦
ಇತರೆ	೨೭.೮೭

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಮಕ್ಕಳು ಶಾಲೆ ಬಿಡುವುದನ್ನು ತಡೆಗಟ್ಟುವ ಕಾರ್ಯಯೋಜನೆಯೂ ಕೂಡ ಬಹುರೂಪಿಯಾಗಿರಬೇಕಾಗುತ್ತದೆ. ಸರ್ಕಾರವು ಶಾಲಾ ಸೌಲಭ್ಯಗಳನ್ನು ಅಧಿಕಗೊಳಿಸುವುದರ ಮತ್ತು ಅದನ್ನು ಉತ್ತಮಪಡಿಸುವುದರ ಮೂಲಕ ಸಮಸ್ಯೆಯನ್ನು ತಡೆಗಟ್ಟಬಹುದೆಂದು ತಿಳಿದಿರುವಂತಿದೆ. ಆದರೆ ಅವಕಾಶಗಳನ್ನು ಒಂದು ಕಡೆ ವಿಸ್ತರಿಸಿದಂತೆ ಇನ್ನೊಂದು ಕಡೆ ಅವುಗಳನ್ನು ಧಾರಣೆ ಮಾಡಿಕೊಳ್ಳಲು ಅವಶ್ಯಕವಾದ ಜನರ ಸಾಮರ್ಥ್ಯವನ್ನು ಉತ್ತಮಪಡಿಸಬೇಕಾಗುತ್ತದೆ. ದಲಿತರು ಹಾಗೂ ಹಿಂದುಳಿದ ವರ್ಗಗಳ ವಿಷಯದಲ್ಲಿ ಇದು ಬಹಳ ಮುಖ್ಯವಾಗಿದೆ. ಈ ಕುರಿತು ಹೆಚ್ಚಿನ ಚರ್ಚೆ ಹಾಗೂ ಹೆಚ್ಚು ಗಂಭೀರವಾದ ಸಂಶೋಧನೆಗಳನ್ನು ನಡೆಸಲು ಕ್ರಮಕೈಗೊಳ್ಳಬೇಕಾಗಿದೆ.

ಅಧ್ಯಾಯ ನಾಲ್ಕು

ಮಕ್ಕಳ ಮತ್ತು ಪೋಷಕರ ಮನೋಭಾವ

ಅಧ್ಯಾಯ ನಾಲ್ಕು

ಮಕ್ಕಳ ಮತ್ತು ಪೋಷಕರ ಮನೋಭಾವ

ಪೋಷಕರು ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಯಾವ ರೀತಿಯ ಮನೋಪ್ರವೃತ್ತಿ ಹೊಂದಿದ್ದಾರೆ, ಕುಟುಂಬ, ಆದಾಯ, ವಿವಾಹ, ಜಾತಿ ಇತ್ಯಾದಿ ಸಾಮಾಜಿಕ ಅಂಶಗಳಿಗೂ ಮಕ್ಕಳ ಶಾಲಾ ಭಾಗವಹಿಸುವಿಕೆಗೂ ಇರುವ ಸಂಬಂಧ ಏನು ಎಂಬುದನ್ನು ಅರ್ಥಮಾಡಿಕೊಳ್ಳುವುದು ಈ ಅಧ್ಯಾಯದ ಮೂಲ ಆಶಯವಾಗಿದೆ.

೪.೧ ಪ್ರಸ್ತಾವನೆ

ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸಲು ಹೊಂದಿರುವ ಮನೋಪ್ರವೃತ್ತಿ ಕುರಿತು ಎರಡು ವಾದಗಳು ಈಗಾಗಲೇ ಪ್ರಚಲಿತದಲ್ಲಿವೆ. ಒಂದು, ಶೈಕ್ಷಣಿಕ ಕ್ಷೇತ್ರದಲ್ಲಿ ನಡೆಯುತ್ತಿರುವ ಕೆಲವು ಸಂಶೋಧನೆಗಳು ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸಲು ಆಸಕ್ತಿ ಹೊಂದಿದ್ದಾರೆ ಎಂದು ವಾದಿಸುತ್ತಿವೆ. ಎರಡು, ಕೆಲವು ಸಂಶೋಧನೆಗಳು ಸೇರಿದಂತೆ, ದಿನಪತ್ರಿಕೆ ಹಾಗೂ ಇತರ ಮಾಧ್ಯಮಗಳಲ್ಲಿ ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸಲು ವಿಶೇಷ ಆಸಕ್ತಿ ತೋರಿಸುತ್ತಿಲ್ಲ ಎಂಬ ಅಭಿಪ್ರಾಯ ಆಗಿಂದ್ದಾಗೆ ಪ್ರಕಟವಾಗುತ್ತಿದೆ. ಅಲ್ಲದೆ, ಪೋಷಕರು ಮಕ್ಕಳ ಶಿಕ್ಷಣಕ್ಕೆ ಆಸಕ್ತಿ ಹೊಂದಿಲ್ಲ ಎಂಬ ಬಹಳ ಸಾಮಾನ್ಯವಾದ ನಂಬಿಕೆಯು ಅಧಿಕಾರಶಾಹಿ ವರ್ಗ ಮತ್ತು ಅಧಿಕಾರದಲ್ಲಿ ಇರುವವರಲ್ಲಿದೆ. ಈ ಅಭಿಪ್ರಾಯಗಳು ಎಷ್ಟರ ಮಟ್ಟಿಗೆ ಸರಿ ಎಂಬುದನ್ನು ಅರ್ಥಮಾಡಿಕೊಳ್ಳಲು ಪ್ರಸ್ತುತ ಅಧ್ಯಾಯದಲ್ಲಿ ಪ್ರಯತ್ನಿಸಲಾಗಿದೆ. ಅಧ್ಯಯನದ ಅನುಕೂಲಕ್ಕಾಗಿ ಈ ಅಧ್ಯಾಯವನ್ನು ಮೂರು ಭಾಗವಾಗಿ ವಿಂಗಡಿಸಲಾಗಿದೆ. ಭಾಗ-೧ರಲ್ಲಿ ಮಕ್ಕಳ ಶಿಕ್ಷಣದ ಬಗ್ಗೆ ಪೋಷಕರು ಹೊಂದಿರುವ ಮನೋಪ್ರವೃತ್ತಿ ಮತ್ತು ಆ ಪ್ರವೃತ್ತಿಯಲ್ಲಿ ಇರುವ ಲಿಂಗ ತಾರತಮ್ಯದ ದೃಷ್ಟಿಕೋನವನ್ನು ವಿಶ್ಲೇಷಣೆ ಮಾಡಲಾಗಿದೆ,

ಭಾಗ-೨ರಲ್ಲಿ ಶಿಕ್ಷಣಕ್ಕೂ, ವಿವಾಹಕ್ಕೂ, ಜಾತಿಗೂ ಇರುವ ಸಂಬಂಧ, ಅದರ ಸಾಮಾಜಿಕ ಆಯಾಮಗಳು ಮತ್ತು ವಾಸ್ತವಿಕವಾಗಿ ಶಿಕ್ಷಣವನ್ನು ಎಷ್ಟರಮಟ್ಟಿಗೆ ಪ್ರಭಾವಿಸುತ್ತದೆ, ಹಾಗೂ ಶಾಲಾ ವ್ಯವಸ್ಥೆ ಮತ್ತು ಶೈಕ್ಷಣಿಕ ಭರವಸೆಗಳಿಗೆ ಸಂಬಂಧಿಸಿದ ವಿಶ್ಲೇಷಣೆ ಇದೆ. ಭಾಗ-೩ರಲ್ಲಿ ಪ್ರಾಥಮಿಕ ಶಿಕ್ಷಣ ಎಷ್ಟರ ಮಟ್ಟಿಗೆ ಉಚಿತ, ಶಾಲೆಯಿಂದ ಹೊರಗಿರುವ ಮಕ್ಕಳು ಯಾವ ರೀತಿ ಚಟುವಟಿಕೆಯಲ್ಲಿ ಭಾಗವಹಿಸುತ್ತಿದ್ದಾರೆ, ಸಮಾಜದ ಎಲ್ಲಾ ಜಾತಿ-ವರ್ಗಗಳ ಜನರಿಗೆ ಶಾಲೆಗಳು ದೊರಕುತ್ತಿದೆಯೇ? ಎಂಬುದನ್ನು ಕುರಿತು ಚರ್ಚಿಸಲಾಗಿದೆ.

ಪೋಷಕರು ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಯಾವ ರೀತಿಯ ಮನೋಪ್ರವೃತ್ತಿ ಹೊಂದಿದ್ದಾರೆ ಎಂಬುದನ್ನು ಈ ಭಾಗದಲ್ಲಿ ಚರ್ಚಿಸಲಾಗಿದೆ.

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಭಾರತವು ತನ್ನ ಗುರಿಯನ್ನು ಸಾಧಿಸದೆ ಇರುವುದಕ್ಕೆ ಆಡಳಿತಶಾಹಿ ವರ್ಗ, ಅಧಿಕಾರದಲ್ಲಿ ಇರುವ ವರ್ಗ ಮತ್ತು ಯೋಜನಾಕಾರರ ನಂಬಿಕೆಗೆ ವಿರುದ್ಧವಾದ ಅಂಶವನ್ನು ಪ್ರಸ್ತುತ ಅಧ್ಯಯನ ಗುರುತಿಸಿದೆ. ಮಕ್ಕಳ ಶಿಕ್ಷಣದ ಬಗ್ಗೆ ಪೋಷಕರು ಹೊಂದಿರುವ ಉದಾಸಿನತೆಯು ವಿಶಾಲವಾಗಿದ್ದರೂ ಹೆಚ್ಚಿನ ಪೋಷಕರು ಮಕ್ಕಳ ಪ್ರಾಥಮಿಕ ಶಿಕ್ಷಣಕ್ಕೆ ಪ್ರಮುಖ ಆದ್ಯತೆಯನ್ನು ನೀಡಿದ್ದಾರೆ. ಉದಾಹರಣೆಗೆ ಶಿಕ್ಷಣ ಇಂದು ಅವಶ್ಯಕವೆ ಎಂಬ ಪ್ರಶ್ನೆಗೆ ಶೇಕಡ ೯೧.೨೪ರಷ್ಟು ಅವಶ್ಯಕ ಎಂದು ಹೇಳಿದ್ದಾರೆ. ಶೇಕಡ ೩.೨೪ರಷ್ಟು ಪೋಷಕರು ಯಾವುದೇ ಉತ್ತರ ನೀಡಲಿಲ್ಲ. ಶೇಕಡ ೪.೪೦ರಷ್ಟು ಪೋಷಕರು ನಿಖರವಾದ ಉತ್ತರವನ್ನು ನೀಡುವಲ್ಲಿ ವಿಫಲರಾಗಿದ್ದಾರೆ. ಗಂಡುಮಕ್ಕಳಿಗೆ ಶಿಕ್ಷಣ ಪ್ರಮುಖವೆ ಅಥವಾ ಗಂಡು ಮಕ್ಕಳು ವಿದ್ಯಾವಂತರಾಗುವುದು ಪ್ರಾಮುಖ್ಯವೆ ಎಂಬ ಪ್ರಶ್ನೆಗೆ ಹೌದು ಎಂದು ಉತ್ತರ ನೀಡುವ ಪೋಷಕರ ಪ್ರಮಾಣ ಶೇಕಡ ೯೬.೯೦ ರಷ್ಟಿದ್ದರೆ, ಈ ಪ್ರಶ್ನೆಗೆ ಶೇಕಡ ೦೨.೦೦ ಪೋಷಕರು ಯಾವುದೇ ಉತ್ತರ ನೀಡಲಿಲ್ಲ. ಆದರೆ ಶೇಕಡ ೦೧.೯೦ರಷ್ಟು ಪೋಷಕರು ಅಗತ್ಯವಿಲ್ಲ ಎಂದು ಉತ್ತರಿಸಿದ್ದಾರೆ. ಹೆಣ್ಣು ಮಕ್ಕಳಿಗೆ ಶಿಕ್ಷಣ ಅವಶ್ಯಕ ಎಂದು ಹೇಳುವ ಪೋಷಕರ ಪ್ರಮಾಣ ಶೇಕಡ ೮೯.೧೦ ಅಂಶಗಳಿಷ್ಟಿದೆ. ಈ ಪ್ರಶ್ನೆಗೆ ಶೇಕಡ ೬.೩೧ರಷ್ಟು ಪೋಷಕರು ಯಾವುದೇ ಉತ್ತರ ನೀಡಿಲ್ಲ. ಉಳಿದ ಶೇಕಡ ೪.೫೯ರಷ್ಟು ಪೋಷಕರು ಹೆಣ್ಣು ಮಕ್ಕಳಿಗೆ ಶಿಕ್ಷಣ ಬೇಡ ಎಂಬ ಅಭಿಪ್ರಾಯ ಹೊಂದಿದ್ದಾರೆ. ಇಲ್ಲಿ ಲಿಂಗ ತಾರತಮ್ಯದ ಅಂತರ ಶೇಕಡ ೦೮.೫೯ ಅಂಶಗಳಷ್ಟಿದೆ.

ಬಹುತೇಕ ಪೋಷಕರು ತಮ್ಮ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡುತ್ತಿರುವುದು ಸ್ಪಷ್ಟವಾಗುತ್ತದೆ. ಇದಕ್ಕೆ ಪೋಷಕರೆ ಕೆಲವು ಆಧಾರಗಳನ್ನು ಸಹ ನೀಡುತ್ತಾರೆ. ಈ ಕಾಲದಲ್ಲಿ ವಿದ್ಯಾಭ್ಯಾಸವಿಲ್ಲದೆ ಏನನ್ನು ಮಾಡಲು ಸಾಧ್ಯವಿಲ್ಲ. ನೌಕರಿ ಸಿಗದೆ ಇದ್ದರೂ, ದಿನನಿತ್ಯದ ಆಗು-ಹೋಗುಗಳಿಗೆ ಮತ್ತು ಕುಟುಂಬದ ವ್ಯವಹಾರಕ್ಕೆ ಪ್ರಾಥಮಿಕ ಶಿಕ್ಷಣದ ಅವಶ್ಯಕತೆ ಇದೆ ಎಂದು ಹೇಳುವವರ ಸಂಖ್ಯೆ ಕಡಿಮೆ ಇಲ್ಲ. ಇದನ್ನು ಸರಳವಾಗಿ ಅಲ್ಲಗಳೆಯಲು ಸಾಧ್ಯವಿಲ್ಲ. ಇದು ವಾಸ್ತವ ಸಂಗತಿ.

ಪೋಷಕರಲ್ಲಿ ಶಿಕ್ಷಣದ ಬಗ್ಗೆ ಇರುವ ಮನೋಭಾವನೆಯ ವಿಭಿನ್ನತೆಯು, ನಿರ್ದಿಷ್ಟವಾಗಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ಭಿನ್ನವಾಗಿದೆ. ಅಲ್ಲದೇ ಗಂಡು ಮಕ್ಕಳ ಶಿಕ್ಷಣಕ್ಕಿಂತಲೂ ಅತ್ಯಂತ ಕಡಿಮೆ ಮಹತ್ವವನ್ನು ನೀಡುವ ಕುಟುಂಬಗಳನ್ನು ವಿಶೇಷವಾಗಿ ಮುಸ್ಲಿಂರಲ್ಲಿ ಕಾಣಬಹುದು (ಪ್ರೋಬ್. ೧೯೯೯). ಇದರಿಂದ ಸ್ಪಷ್ಟವಾಗುವ ಅಂಶ, ಶಿಕ್ಷಣದ ಬಗ್ಗೆ ಇರುವ ಸಾಮಾನ್ಯ ಪ್ರವೃತ್ತಿಯು ಒಂದೇ ಆಗಿರದೇ ವಿಭಿನ್ನವಾಗಿದೆ ಎಂಬುದು. ಹೀಗಾಗಿ ಪೋಷಕರಲ್ಲಿ ಇರುವ ವಿಭಿನ್ನತೆಯು ವಿಭಿನ್ನ ಕಾರಣಗಳಿಂದ ಹುಟ್ಟಿದವು ಎಂದು ಹೇಳಬಹುದು. ಈ ದ್ವಂದ್ವದ ನಡುವೆಯು ನಮ್ಮ ಅಧ್ಯಯನಕ್ಕೆ ಮಾದರಿಯಾಗಿ ಆಯ್ಕೆ ಮಾಡಿಕೊಂಡ ಬಹುತೇಕ ಕುಟುಂಬಗಳು ಮತ್ತು ಪೋಷಕರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ದೊರಕಬೇಕು ಎಂಬುದರ ಬಗ್ಗೆ ಆಸಕ್ತಿ ತೋರಿಸಿದ್ದಾರೆ. ನಮ್ಮ ಗಮನಕ್ಕೆ ಬಂದ ಮತ್ತೊಂದು ಅಂಶವೆಂದರೆ ಕೆಲವು ಗ್ರಾಮಸ್ಥರು ಮತ್ತು ಪೋಷಕರು ಶಾಲೆಯಿಂದಲೆ ತಮ್ಮ ಮಕ್ಕಳಿಗೆ ಸ್ಪಷ್ಟವಾದ ಎಲ್ಲಾ ಕುಶಲತೆಯು ಬರುತ್ತದೆ ಎಂಬುದನ್ನು ಯಾವಾಗಲೂ ಹೇಳಲು ಸಾಧ್ಯವೇ ಇಲ್ಲ ಎಂಬ ಅಭಿಪ್ರಾಯವನ್ನು ಸಹ ವ್ಯಕ್ತಪಡಿಸಿದ್ದಾರೆ. ಈ ಎಲ್ಲಾ ವಿಷಯಗಳನ್ನು ವಿಶದವಾಗಿ ಮುಂದೆ ಚರ್ಚಿಸಲಾಗಿದೆ.

ಸಾಮಾನ್ಯವಾಗಿ ಮಕ್ಕಳ ಶಿಕ್ಷಣ ಕುರಿತು ಪೋಷಕರು ಹೆಚ್ಚಿನ ಆಸಕ್ತಿ ಹೊಂದಿದ್ದಾರೆ ಎಂಬುದು ನಮಗೆ ಈಗಾಗಲೇ ತಿಳಿದಿದೆ. ಅದರಲ್ಲಿಯೂ ಶೈಕ್ಷಣಿಕವಾಗಿ ಬಹಳ ನಿಧಾನವಾದ ಪ್ರಗತಿ ಸಾಧಿಸುತ್ತಿರುವ ಪ್ರದೇಶ ಹಾಗೂ ರಾಜ್ಯಗಳಲ್ಲಿ ಕೂಡ ಪೋಷಕರ ಆಸಕ್ತಿ ಸ್ವಲ್ಪಮಟ್ಟಿಗೆ ಹೆಚ್ಚಾಗಿಯೇ ಇದೆ. ಶಿಕ್ಷಣವನ್ನು ಆಧುನಿಕ ಸಮಾಜದಲ್ಲಿ ಯಾರು ಕಡೆಗಣಿಸಲಾಗುವುದಿಲ್ಲ ಎಂದು ಅನೇಕ ಪೋಷಕರು ಸ್ಪಷ್ಟವಾಗಿ ಹೇಳುತ್ತಾರೆ. ನಮ್ಮ ಅಧ್ಯಯನದ ಉದಾಹರಣೆಗಳನ್ನು ಹೇಳುವುದಾದರೆ, ಅನಕ್ಷರಸ್ಥರಾಗಿದ್ದರೆ ದಿನನಿತ್ಯದ ಬದುಕಿನಲ್ಲಿ ಅನೇಕ ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ಓದು ಬರಹ ಬರುವ ಒಬ್ಬರು ಮನೆಯಲ್ಲಿ ಇದ್ದರೆ, ಹೊರಗಿನ ಪ್ರಪಂಚದ ಜೊತೆ ವ್ಯವಹರಿಸುವುದು ಸರಳ. ಈ ಪ್ರಪಂಚದಲ್ಲಿ ಅನಕ್ಷರಸ್ಥರನ್ನು ನಂಬಿಸಿ, ಬೇಗನೆ ಮೋಸ ಮಾಡುವವರು ಹೆಚ್ಚಾಗಿದ್ದಾರೆ. ಅನಕ್ಷರಸ್ಥರು ಒಂದು ಪ್ರಾಣಿಗಿಂತಲೂ ಕಡೆ ಎಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ನಾವು ಸಂದರ್ಶನ ನಡೆಸಿದ ಬಹುತೇಕರು ಹೇಳುತ್ತಾರೆ.

ಪೋಷಕರಲ್ಲಿ ಮಕ್ಕಳನ್ನು ಶಾಲೆಗೆ ಕಳುಹಿಸುವ ಮತ್ತು ಅವರ ಶಿಕ್ಷಣ ಕುರಿತು ಹೆಚ್ಚಾಗಿರುವ ಆಸಕ್ತಿಯಿಂದ ಶಾಲೆಗೆ ದಾಖಲಾಗದ ಮಕ್ಕಳ ಸಂಖ್ಯೆಯು ಅತಿ ವೇಗವಾಗಿ ಕಡಿಮೆಯಾಗುತ್ತಿದೆ. ಇದು ರಾಷ್ಟ್ರೀಯ ಮಾದರಿ ಸಮಿಕ್ಷೆ (ಎನ್.ಎಸ್.ಎಸ್)ಯ ವರದಿಗಳು, ಶೈಕ್ಷಣಿಕ ವರದಿಗಳು ಮತ್ತು ಪ್ರತಿವರ್ಷ ನಡೆಯುವ ಮಕ್ಕಳ ಜನಗಣತಿಯಿಂದ ತಿಳಿಯುತ್ತದೆ. ಬಿಮಾರು (ಬಿಹಾರ, ಮಧ್ಯಪ್ರದೇಶ, ಉತ್ತರ ಪ್ರದೇಶ ಮತ್ತು ರಾಜಾಸ್ಥಾನ) ರಾಜ್ಯಗಳಲ್ಲಿ ೧೯೮೦-೯೦ರ ದಶಕದಲ್ಲಿ ೬-೧೪ ವಯೋಮಾನದ ಸುಮಾರು ಅರ್ಧದಷ್ಟು ಮಕ್ಕಳು ಶಾಲೆಗೆ ದಾಖಲಾಗುತ್ತಿರಲಿಲ್ಲ (ಆರ್. ಗೋವಿಂದ, ೧೯೯೭). ೧೯೯೬ರ ಸೆಪ್ಟೆಂಬರ್‌ನಿಂದ ಡಿಸೆಂಬರ್ ೧೯೯೬ರ ವರೆಗೆ ಭೀಮಾರು ರಾಜ್ಯದ ೦೬-೧೪ ವಯೋಮಾನದ ಮಕ್ಕಳು ಶಾಲೆಗೆ ದಾಖಲಾಗದೆ ಇರುವ ಪ್ರಮಾಣ ಶೇಕಡ ೧೯ಕ್ಕಿಂತಲೂ ಕಡಿಮೆ

(ಫ್ರೋಬ್., ೧೯೯೯). ಕರ್ನಾಟಕದಲ್ಲಿ ೧ ರಿಂದ ೪ನೇ ತರಗತಿಗೆ ೧೯೫೯-೬೦ರಲ್ಲಿ ೨-೩ ಮಿಲಿಯನ್ ಮಕ್ಕಳು ಶಾಲೆಗೆ ನೊಂದಣಿಯಾಗಿದ್ದರೆ, ೨೦೦೧-೦೨ರಲ್ಲಿ ೮.೫ ಮಿಲಿಯನ್‌ಗೆ ಏರಿಕೆಯಾಗಿದೆ. ೨೦೦೪ರ ಫೆಬ್ರವರಿಯಲ್ಲಿ ನಡೆಸಿದ ಮಕ್ಕಳ ಜನಗಣತಿ ಪ್ರಕಾರ ೬-೧೪ ವಯೋಮಾನದ ಮಕ್ಕಳು ಶಾಲೆಗೆ ದಾಖಲಾಗದೆ ಇರುವ ಮಕ್ಕಳ ಪ್ರಮಾಣ ಶೇಕಡ ೩.೧೨ ರಷ್ಟಿದೆ. ಈ ಅಂಕಿ-ಸಂಖ್ಯೆಗಳು ೬-೧೪ ವಯೋಮಾನದ ಮಕ್ಕಳು ಶಾಲೆಗೆ ದಾಖಲಾಗದೆ ಇರುವುದು ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿರುವ ಸೂಚನೆ ನೀಡುತ್ತವೆ. ಇದನ್ನು ಹೀಗೂ ಹೇಳಬಹುದು. ಇಂದು ಬಹುತೇಕ ಪೋಷಕರು ಮಕ್ಕಳಿಗೆ ಶಾಲೆಗೆ ದಾಖಲಾಗುವ ಅವಕಾಶ ಕೊಡುತ್ತಿದ್ದಾರೆ.

ಹೀಗೆ ಇನ್ನು ಅನೇಕ ಸೂಚನೆಗಳು ಪೋಷಕರು ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಹೆಚ್ಚಿನ ಆಸಕ್ತಿ ತೋರಿಸುತ್ತಿರುವುದು ನಮ್ಮ ಗಮನಕ್ಕೆ ಬರುತ್ತದೆ. ಇಲ್ಲಿ ನಮ್ಮ ಅಧ್ಯಯನದ ಉದಾಹರಣೆ ನೀಡುವುದಾದರೆ, ನಾವು ಅಧ್ಯಯನ ನಡೆಸಿದ ಶೇಕಡ ೯೧.೪೪ರಷ್ಟು ಕುಟುಂಬಗಳ ಪೋಷಕರು ಎಲ್ಲಾ ಮಕ್ಕಳಿಗೂ ಶಿಕ್ಷಣ ಉಚಿತ ಕಡ್ಡಾಯ ಮಾಡಿರುವುದು ಸರಿ ಎಂದು ಹೇಳಿದ್ದಾರೆ. ಶೇಕಡ ೮.೬೪ರಷ್ಟು ಪೋಷಕರು ಈ ಪ್ರಶ್ನೆಗೆ ಯಾವುದೇ ಉತ್ತರವನ್ನು ನೀಡಲಿಲ್ಲ. ಇದರ ಅರ್ಥ ಇವರು ಕಡ್ಡಾಯ ಪ್ರಾಥಮಿಕ ಶಿಕ್ಷಣ ಬೇಡ ಎಂಬ ಮನೋಭಾವನೆಯನ್ನು ಹೊಂದಿದ್ದಾರೆ ಎಂದು ಅಲ್ಲ. ಅವರಿಗೆ ಕಡ್ಡಾಯ ಪ್ರಾಥಮಿಕ ಶಿಕ್ಷಣ ಎಂದರೆ ಏನು ಎಂಬುದು ತಿಳಿಯದ ಕಾರಣ ಅವರು ಈ ಉತ್ತರ ನೀಡಿದ್ದಾರೆ. ಆರ್ಥಿಕವಾಗಿ ಸ್ವಲ್ಪ ಉತ್ತಮ ಸ್ಥಿತಿಯಲ್ಲಿ ಇರುವವರು ಮತ್ತು ಸಾಮಾಜಿಕವಾಗಿ ಪ್ರಬಲವಾಗಿರುವ ಕೆಲವರು ಉತ್ತಮ ಗುಣಮಟ್ಟದ ಶಿಕ್ಷಣಕ್ಕಾಗಿ ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಕಳುಹಿಸುವ ಆಸಕ್ತಿ ಹೊಂದಿದ್ದಾರೆ. ಉತ್ತಮ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ಅನೇಕ ರಾಜ್ಯ ಸರ್ಕಾರಗಳು ಪ್ರಾಥಮಿಕ ಶಿಕ್ಷಣದಲ್ಲಿ ಗುಣಮಟ್ಟದ ಶಿಕ್ಷಣಕ್ಕೆ ವಿವಿಧ ಕಾರ್ಯಕ್ರಮಗಳನ್ನು ಜಾರಿಗೆ ತಂದಿವೆ. ಈ ನಿಟ್ಟಿನಲ್ಲಿ ಶಾಲಾ ಸೌಲಭ್ಯಗಳು ಇಲ್ಲದ ಜನವಸತಿ ನೆಲೆಗಳಲ್ಲಿ, ಅದರಲ್ಲಿಯೂ ಬುಡಕಟ್ಟಿನ ಜನರು ಹೆಚ್ಚಾಗಿ ವಾಸವಾಗಿರುವ ಪ್ರದೇಶಗಳಲ್ಲಿ ಶಾಲೆಗಳನ್ನು ತೆರೆಯಲಾಗಿದೆ. ವಿಶೇಷವಾಗಿ ಮಧ್ಯಪ್ರದೇಶ ಸರ್ಕಾರವು ಬುಡಕಟ್ಟಿನ ಜನ ವಸತಿ ನೆಲೆಗಳಿಂದ ಶಾಲಾ ಸೌಲಭ್ಯ ಒದಗಿಸಿ ಎಂಬ ಮನವಿಯನ್ನು ೧೯೯೬-೯೭ನೆಯ ಶೈಕ್ಷಣಿಕ ವರ್ಷದಲ್ಲಿ ಸುಮಾರು ೧೫,೦೦೦ಕ್ಕೂ ಹೆಚ್ಚಿನ ಅರ್ಜಿಗಳನ್ನು ಸ್ವೀಕರಿಸಿದೆ (ಪ್ರೋಬ್. ೧೯೯೯). ಇದೇ ರೀತಿಯಲ್ಲಿ ವಿವಿಧ ರಾಜ್ಯ ಸರ್ಕಾರಗಳು ಸಹ ಪ್ರಾಥಮಿಕ ಶಿಕ್ಷಣದ ಬೇಡಿಕೆ ಇರುವ ಪ್ರದೇಶದಲ್ಲಿ ಶಾಲೆಗಳನ್ನು ತೆರೆದಿವೆ. ಶಾಲೆಯನ್ನು ಪೂರ್ಣ ಪ್ರಮಾಣದಲ್ಲಿ ತೆರೆಯಲು ಸಾಧ್ಯವಾಗದೇ ಇರುವ ಸ್ಥಳ ಅಥವಾ ಜನವಸತಿ ನೆಲೆಗಳಲ್ಲಿ ಮೊಬೈಲ್ ಶಾಲೆಗಳನ್ನು ಹಾಗೂ ವಿವಿಧ ಔಪಚಾರಿಕ ಮತ್ತು ಅನೌಪಚಾರಿಕ ಕಾರ್ಯಗಳನ್ನು ಜಾರಿಗೆ ತಂದಿವೆ. ಆ ಮೂಲಕ ಜನರ ಶಿಕ್ಷಣದ ಬೇಡಿಕೆಯನ್ನು ಪೂರೈಸಲು ಹಾಗೂ ಶೈಕ್ಷಣಿಕ ಅಭಿವೃದ್ಧಿ ಸಾಧಿಸಲು ಸರ್ಕಾರಗಳು ಪ್ರಯತ್ನಿಸುತ್ತಿವೆ.

ಪೋಷಕರು ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಯಾವ ರೀತಿಯ ಮನೋಪ್ರವೃತ್ತಿ ಹೊಂದಿದ್ದಾರೆ ಎಂಬುದನ್ನು ಈ ಕೆಳಗಿನಂತೆ ನೋಡಬಹುದು. ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಪೋಷಕರು ಹೊಂದಿರುವ

ಉದಾಸೀನತೆಯು ವಿಶಾಲವಾಗಿದ್ದರೂ, ಹೆಚ್ಚಿನ ಪೋಷಕರು ಮಕ್ಕಳ ಶಿಕ್ಷಣಕ್ಕೆ ಪ್ರಮುಖ ಆದ್ಯತೆಯನ್ನು ನೀಡಿದ್ದಾರೆ. ಉದಾಹರಣೆಗೆ ಬಳದರೆ ಗ್ರಾಮ ಪಂಚಾಯಿತಿಯ ಪ್ರದೇಶದಲ್ಲಿ ಬರುವ ಕುಟುಂಬದ ಪೋಷಕರಿಗೆ, ನಿಮ್ಮ ಆದಾಯದಲ್ಲಿ ಯಾವ ಮಗುವಿಗೆ ಶಿಕ್ಷಣ ನೀಡಲು ಮೊದಲ ಆದ್ಯತೆ ನೀಡುತ್ತೀರಾ ಎಂಬ ಪ್ರಶ್ನೆಗೆ ೨೦೦ ಕುಟುಂಬಗಳಲ್ಲಿ ಶೇಕಡ ೪೯.೬೬ರಷ್ಟು ಕುಟುಂಬಗಳು ಗಂಡು ಮತ್ತು ಹೆಣ್ಣುಮಕ್ಕಳಿಬ್ಬರಿಗೂ ಆದ್ಯತೆ ನೀಡುತ್ತೇವೆ ಎಂದು ಉತ್ತರಿಸಿದ್ದಾರೆ. ಶೇಕಡ ೨೭.೩೩ರಷ್ಟು ಕುಟುಂಬದ ಪೋಷಕರು ಗಂಡು ಮಗುವಿಗೆ ಮೊದಲ ಆದ್ಯತೆ ನೀಡುತ್ತೇವೆ ಎಂದು ಹೇಳಿದ್ದಾರೆ. ಶೇಕಡ ೨೧.೩೩ರಷ್ಟು ಪೋಷಕರು ಹೆಣ್ಣುಮಕ್ಕಳಿಗೆ ಮೊದಲ ಆದ್ಯತೆ ನೀಡುತ್ತೇವೆ ಎಂದಿದ್ದಾರೆ. ಶೇಕಡ ೧.೬೮ರಷ್ಟು ಪೋಷಕರು ಯಾವುದೇ ಉತ್ತರ ನೀಡುವಲ್ಲಿ ವಿಫಲರಾಗಿದ್ದಾರೆ.

ಒಟ್ಟಾರೆಯಾಗಿ ಹೇಳುವುದಾದರೆ, ಬಹುತೇಕ ಪೋಷಕರು ಇಬ್ಬರಿಗೂ ಸಮಾನವಾದ ಶಿಕ್ಷಣ ಕೊಡಿಸುತ್ತೇವೆ ಎಂದಿದ್ದಾರೆ. ಇಬ್ಬರಿಗೂ ಮೊದಲ ಆದ್ಯತೆ ನೀಡುತ್ತೇವೆ ಮತ್ತು ಯಾವುದೇ ರೀತಿಯಲ್ಲಿ ಲಿಂಗ-ತಾರತಮ್ಯ ಮಾಡುವುದಿಲ್ಲ ಎಂದು ಉತ್ತರಿಸಿದರು. ಇದನ್ನು ಜಾತಿವಾರು ಪ್ರಮಾಣದಲ್ಲಿ ನೋಡಿದಾಗ ಪರಿಶಿಷ್ಟ ಜಾತಿ ಸಮುದಾಯವನ್ನು ಸಂದರ್ಶಿಸಿದಾಗ ಶೇಕಡ ೫೧.೩೩ರಷ್ಟು ಗಂಡು ಮತ್ತು ಹೆಣ್ಣುಮಕ್ಕಳಿಬ್ಬರಿಗೂ ಮೊದಲ ಆದ್ಯತೆ ನೀಡುತ್ತೇವೆ ಎನ್ನುವ ಪೋಷಕರನ್ನು ಕಾಣಬಹುದು. ಅಲ್ಲದೆ, ಶೇಕಡ ೨೦.೦೦ರಷ್ಟು ಪೋಷಕರು ಗಂಡು ಮಗುವಿಗೆ ಮೊದಲ ಆದ್ಯತೆ ನೀಡುತ್ತೇವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶೇಕಡ ೫೨.೬೬ರಷ್ಟು ಹೆಣ್ಣುಮಗುವಿಗೆ ಆದ್ಯತೆ ನೀಡುತ್ತೇವೆ ಎನ್ನುವ ಪಾಲಕರು ಇದ್ದಾರೆ. ಅದೇ ರೀತಿ ಪರಿಶಿಷ್ಟ ಪಂಗಡ ಕುಟುಂಬದ ಪೋಷಕರಿಗೆ ಪ್ರಶ್ನೆ ಕೇಳಿದಾಗ ಶೇಕಡ ೪೨.೬೬ರಷ್ಟು ಪೋಷಕರು ಇಬ್ಬರಿಗೂ ಮೊದಲ ಆದ್ಯತೆ ನೀಡುತ್ತೇವೆ ಎಂದಿದ್ದಾರೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಮುಸ್ಲಿಂ, ಇತರೆ ಸಮುದಾಯದ ಗುಂಪುಗಳನ್ನು ಸಂದರ್ಶಿಸಿದಾಗ ನಮಗೆ ತಿಳಿದು ಬಂದ ಅಂಶವೆಂದರೆ ಎಲ್ಲರೂ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವಲ್ಲಿ ಉತ್ತಮ ಅಭಿಪ್ರಾಯ ಹೊಂದಿದ್ದಾರೆ.

ಮತ್ತೊಂದು ಅಧ್ಯಯನ ಕ್ಷೇತ್ರವಾದ ಹೀರಾ ಗ್ರಾಮ ಪಂಚಾಯಿತಿಯ ಕುಟುಂಬಗಳನ್ನು ಅಧ್ಯಯನಕ್ಕೊಳಪಡಿಸಿದಾಗ ನಿಮಗೆ ಬರುವಂತಹ ಆದಾಯದಲ್ಲಿ ಯಾವ ಮಗುವಿಗೆ ಪ್ರಾಥಮಿಕ ಶಿಕ್ಷಣ ನೀಡಲು ಮೊದಲ ಆದ್ಯತೆ ನೀಡುತ್ತೀರಾ ಎಂಬ ಪ್ರಶ್ನೆಗೆ, ಶೇಕಡ ೨೮.೦೦ರಷ್ಟು ಕುಟುಂಬಗಳು ಗಂಡು ಮತ್ತು ಹೆಣ್ಣು ಮಕ್ಕಳಿಬ್ಬರಿಗೂ ಮೊದಲ ಆದ್ಯತೆ ನೀಡುತ್ತೇವೆ ಎಂದು ಹೇಳಿದ್ದಾರೆ. ಶೇಕಡ ೫೮.೩೩ರಷ್ಟು ಕುಟುಂಬಗಳು ಗಂಡು ಮಗುವಿಗೆ ಮೊದಲ ಆದ್ಯತೆ ನೀಡುತ್ತೇವೆ ಎಂದರು. ಶೇಕಡ ೧೩.೬೭ರಷ್ಟು ಕುಟಂಬಗಳು ಮಾತ್ರ ಹೆಣ್ಣು ಮಗುವಿಗೆ ಮೊದಲ ಆದ್ಯತೆ ನೀಡುತ್ತೇವೆ ಎನ್ನುತ್ತಾರೆ. ಇದನ್ನು ಜಾತಿವಾರು ಪ್ರಮಾಣದಲ್ಲಿ ನೋಡಿದಾಗ ಪರಿಶಿಷ್ಟ ಜಾತಿ ಕುಟುಂಬದ ಪೋಷಕರಲ್ಲಿ ಶೇಕಡ ೩.೦೦ರಷ್ಟು ಪೋಷಕರು ಮಾತ್ರ ಹೆಣ್ಣು ಮಗುವಿಗೆ ಮೊದಲ ಆದ್ಯತೆ ನೀಡುತ್ತೇವೆ ಎಂದಿದ್ದಾರೆ.

ಬಹುತೇಕ ಪೋಷಕರು ಗಂಡು ಮಗುವಿಗೆ ಹೆಚ್ಚಿನ ಒಲವು ತೋರಿರುವುದು ಕಂಡುಬರುತ್ತದೆ. ಅದೇ ರೀತಿಯಾಗಿ ಪರಿಶಿಷ್ಟ ಪಂಗಡಕ್ಕೆ ಸೇರಿದ ಪೋಷಕರನ್ನು ಸಂದರ್ಶನ ಮಾಡಿ ಪ್ರಶ್ನೆ ಕೇಳಿದಾಗ ಕೇವಲ ಶೇಕಡ ೨.೦೦ರಷ್ಟು ಪೋಷಕರು ಮಾತ್ರ ಹೆಣ್ಣು ಮಗುವಿಗೆ ಶಿಕ್ಷಣ ಕೊಡಿಸುವಲ್ಲಿ ಮೊದಲ ಆದ್ಯತೆ ನೀಡುತ್ತೇವೆ ಎಂದಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪೋಷಕರೊಂದಿಗೆ ಹೋಲಿಸಿದಾಗ ಎರಡು ಸಮುದಾಯದಲ್ಲೂ ಗಂಡು ಮಗುವಿಗೆ ಹೆಚ್ಚಿನ ಮಹತ್ವ ನೀಡಿರುವುದು ಕಂಡುಬರುತ್ತದೆ. ಆದರೆ ಪರಿಶಿಷ್ಟ ಜಾತಿಗಿಂತ ಪರಿಶಿಷ್ಟ ಪಂಗಡದ ಪೋಷಕರು ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಅಷ್ಟೇನು ಒಲವನ್ನು ಹೊಂದಿರದೇ ಇರುವುದು ತಿಳಿದುಬರುತ್ತದೆ.

ಬಳದರೆ ಗ್ರಾಮ ಪಂಚಾಯಿತಿಗಿಂತ ಹೀರಾ ಗ್ರಾಮ ಪಂಚಾಯಿತಿಯಲ್ಲಿ ಪೋಷಕರು ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಅಷ್ಟೇನು ಉತ್ತಮವಾದ ಅಭಿಪ್ರಾಯ ಹೊಂದಿಲ್ಲ ಎಂಬುದು ತಿಳಿದುಬರುತ್ತದೆ. ಮಕ್ಕಳ ಶಿಕ್ಷಣದ ಬಗ್ಗೆ ಪೋಷಕರ ಮನೋಪ್ರವೃತ್ತಿಯನ್ನು ತಿಳಿದುಕೊಳ್ಳುವ ಉದ್ದೇಶದಿಂದಾಗಿ ಕೆಲವೊಂದು ಕೇಸ್ ಸ್ಟಡಿಯನ್ನು ಹೀರಾ ಮತ್ತು ಬಳದರೆ ಗ್ರಾಮ ಪಂಚಾಯಿತಿಯಲ್ಲಿ ಮಾಡಲಾಯಿತು. ಸಂದರ್ಶನ ಮಾಡುವಾಗ ಜಾತಿವಾರು ಕುಟುಂಬದ ಪೋಷಕರನ್ನು ಸಂದರ್ಶಿಸಲಾಯಿತು. ಉದಾಹರಣೆಗೆ, ದಲಿತ ಸಮದಾಯಕ್ಕೆ ಸೇರಿದ ರಾಮಣ್ಣನನ್ನು ಸಂದರ್ಶಿಸಿದಾಗ ಮೀಸಲಾತಿ ಅನ್ವಯ ಉದ್ಯೋಗ ಮತ್ತು ಮೂಲಭೂತ ಸೌಲಭ್ಯಗಳು ನಮಗೆ ದೊರೆಯುತ್ತವೆ. ಅದಕ್ಕೋಸ್ಕರವಾಗಿ ನಾವು ನಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುತ್ತೇವೆ. ಉದ್ಯೋಗ ದೊರೆತರೆ ಮುಂದೆ ಅವರ ಜೀವನ ಉತ್ತಮವಾಗಿರುತ್ತದೆ ಎಂದು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡರು.

ಸಾಮಾನ್ಯ ವರ್ಗಕ್ಕೆ ಸೇರಿದ ಕುಟುಂಬದ ಮಕ್ಕಳ ಪೋಷಕರನ್ನು ಸಂದರ್ಶಿಸಿ ಪ್ರಶ್ನೆ ಕೇಳಿದಾಗ ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಉತ್ತಮ ಅಭಿಪ್ರಾಯ ಹೊಂದಿರುವುದು ಗೊತ್ತಾಗುತ್ತದೆ. ನಾವಂತೂ ಶಾಲೆ ಕಲಿಯಲಿಲ್ಲ, ನಮ್ಮ ಮಕ್ಕಳಾದರೂ ಕಲಿತು ಒಂದಿಷ್ಟು ಬುದ್ಧಿವಂತರಾಗಲಿ ಎಂದು ಶಿಕ್ಷಣ ಕೊಡಿಸುತ್ತೇವೆ. ನಮ್ಮ ಆದಾಯದಲ್ಲಿ ಅವರಿಗೆ ಪುಸ್ತಕ, ಬಟ್ಟೆ, ಶುಲ್ಕವನ್ನು ಭರಿಸಲು ನಮ್ಮಿಂದ ಸಾಧ್ಯವಾಗುತ್ತಿಲ್ಲ. ಆದರೂ ನಾವು ಗಂಡು-ಹೆಣ್ಣು ಎಂಬ ತಾರತಮ್ಯ ಮಾಡದೇ ಇಬ್ಬರಿಗೂ ಶಿಕ್ಷಣ ಕೊಡಿಸುತ್ತೇವೆ. ಆದರೆ ಸರ್ಕಾರವೇ ಒಂದು ರೀತಿಯಲ್ಲಿ ತಾರತಮ್ಯ ಮಾಡುತ್ತಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಸರ್ಕಾರ ಪರಿಶಿಷ್ಟ ಜಾತಿ ಮತ್ತು ೧ಪರಿಶಿಷ್ಟ ಪಂಗಡದ ಮಕ್ಕಳಿಗೆ ಉಚಿತವಾಗಿ ನೋಟ್‌ಬುಕ್, ಬ್ಯಾಗ್, ಶುಲ್ಕದಲ್ಲಿ ವಿನಾಯಿತಿ ಇತ್ಯಾದಿ ಸೌಲಭ್ಯಗಳನ್ನು ಕೊಡುತ್ತಿವೆ. ಅದೇ ರೀತಿ ನಮ್ಮ ಮಕ್ಕಳಿಗೆ ಸರ್ಕಾರ ಯಾಕೆ ಕೊಡುತ್ತಿಲ್ಲ ಎಂದು ಮತ್ತೇ ನಮ್ಮನ್ನು ಪ್ರಶ್ನಿಸಿದರು. ಸರ್ಕಾರದ ಈ ಧೋರಣೆಯನ್ನು ತಪ್ಪಿಸಿ ಎಲ್ಲಾ ಬಡಕುಟುಂಬಗಳಿಂದ ಬಂದ ಮಕ್ಕಳಿಗೆ ಸಮಾನವಾದ ಸೌಲಭ್ಯಗಳನ್ನು ಒದಗಿಸಬೇಕು ಎಂದರು.

ಮುಸ್ಲಿಂ ಸಮುದಾಯದ ರಹೀಂ ಎಂಬ ಪೋಷಕನನ್ನು ಸಂದರ್ಶಿಸಿ ಪ್ರಶ್ನೆ ಕೇಳಿದಾಗ, ನಾವು ನಮ್ಮ ಮಕ್ಕಳನ್ನು ಉರ್ದು ಶಾಲೆಗೆ ಕಳುಹಿಸುತ್ತೇವೆ, ಕನ್ನಡ ಶಾಲೆಗೆ ಕಳುಹಿಸುವುದಿಲ್ಲ. ನಮ್ಮ

ಮನೆಯಲ್ಲಿ ಐದು ಜನ ಮಕ್ಕಳಿದ್ದಾರೆ, ಮೂರು ಗಂಡು, ಎರಡು ಹೆಣ್ಣು. ಗಂಡು ಮಕ್ಕಳು ಎರಡನೇ ಮತ್ತು ಮೂರನೇ ತರಗತಿಯವರೆಗೂ ಓದಿಸಿ, ಶಾಲೆ ಬಿಡಿಸಿ ಅವರನ್ನು ವರ್ಕ್‌ಶಾಪ್ ಕೆಲಸಕ್ಕೆ ಕಳುಹಿಸುತ್ತೇವೆ. ಇಬ್ಬರು ಹೆಣ್ಣುಮಕ್ಕಳನ್ನು ಉರ್ದು ಶಾಲೆಗೆ ಕಳುಹಿಸಲಾಗಿದೆ. ಏಕೆ ನಿಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿಲ್ಲ ಎಂದು ಕೇಳಿದರೆ, ಒಬ್ಬರು ದುಡಿದು ತರುವ ಆದಾಯ ಸಾಕಾಗುತ್ತಿಲ್ಲ. ಆದ್ದರಿಂದ ಇವರು ದುಡಿದರೆ ಜೀವನಕ್ಕೆ ಸ್ವಲ್ಪಮಟ್ಟಿಗೆ ಸಹಾಯವಾಗುತ್ತದೆ ಎಂದು ಹೇಳಿದರು.

ಮೇರಿ ಎಂಬ ಕ್ರಿಶ್ಚಿಯನ್ ಮಹಿಳೆಯನ್ನು ಸಂದರ್ಶಿಸಿದಾಗ ನನಗೆ ಇಬ್ಬರು ಗಂಡುಮಕ್ಕಳು, ಗಂಡ ಸತ್ತು ಐದು ವರ್ಷವಾಯಿತು. ಒಬ್ಬ ಮಗ ೩ನೇ ತರಗತಿ ಓದುತ್ತಿದ್ದಾನೆ, ಇನ್ನೊಬ್ಬ ಮಗ ಆಸ್ಟಿನ್ ಎಂಬುವವನು ೬ನೇ ತರಗತಿ ಓದುತ್ತಿದ್ದಾನೆ. ನಮಗೆ ಜೀವನ ಸಾಗಿಸಲು ತುಂಬಾ ಕಷ್ಟವಾಗುತ್ತಿತ್ತು. ನನ್ನ ಮಗ ಶಾಲೆ ಬಿಟ್ಟು ಚಪ್ಪಲಿ ಹೊಲೆಯುವ ಕೆಲಸ ಮಾಡಿ ಒಂದು ದಿನಕ್ಕೆ ೬೦ ರೂಪಾಯಿ ತರುತ್ತಾನೆ. ಇದರಿಂದ ನಾವು ಜೀವನ ಸಾಗಿಸುತ್ತಿದ್ದೇವೆ. ನನಗೂ ಆಸೆ ಇದೆ ನನ್ನ ಮಗನನ್ನು ಹೆಚ್ಚು ಓದಿಸಬೇಕು ಅಂತ, ಆದರೆ ನಾನು ಕೆಲಸಕ್ಕೆ ಹೋಗಲು ಅನಾರೋಗ್ಯದ ತೊಂದರೆ ಇರುವುದರಿಂದ ಸಾಧ್ಯವಾಗುತ್ತಿಲ್ಲ ಎಂದು ತನ್ನ ಅಳಲನ್ನು ತೋಡಿಕೊಂಡರು.

ಮಕ್ಕಳ ಶಿಕ್ಷಣದ ಬಗ್ಗೆ ಪೋಷಕರ ಆಸಕ್ತಿಯಲ್ಲಿ ವಿವಿಧ ಸಾಮಾಜಿಕ ಗುಂಪುಗಳ ನಡುವೆ ಅಷ್ಟೇನೂ ವ್ಯತ್ಯಾಸಗಳು ಕಂಡುಬರುವುದಿಲ್ಲ. ಆದರೆ ಬಾಲಕ-ಬಾಲಕಿಯರಿಗೆ ಶಿಕ್ಷಣ ನೀಡುವಾಗ ವ್ಯತ್ಯಾಸಗಳು ಕಂಡುಬಂದಿವೆ. ಬಹುತೇಕ ಪೋಷಕರು (ತಂದೆ ಅಥವಾ ತಾಯಿ) ಗಂಡು ಮಗುವಿಗೆ ಶಿಕ್ಷಣ ನೀಡಲು ಹೆಚ್ಚಿನ ಕಾಳಜಿಯನ್ನು ಹೊಂದಿದ್ದಾರೆ. ಆದರೆ ಅದೇ ಆಸಕ್ತಿಯನ್ನು ಹೆಣ್ಣುಮಗುವಿನ ಶಿಕ್ಷಣದ ಬಗ್ಗೆ ಹೊಂದಿಲ್ಲ. ಇದನ್ನು ನಮ್ಮ ಅಧ್ಯಯನದ ಅನುಭವದಿಂದ ಸ್ಪಷ್ಟಪಡಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಶೇಕಡ ೩.೦೦ರಷ್ಟು ಪೋಷಕರು ಮಾತ್ರ ಬಾಲಕರಿಗೆ ಉನ್ನತ ಶಿಕ್ಷಣ ಪ್ರಮುಖವಲ್ಲ ಎಂದು ಹೇಳಿದರೆ, ಶೇಕಡ ೯೦.೦೦ರಷ್ಟು ಪೋಷಕರು ಬಾಲಕಿಯರಿಗೆ ಹೆಚ್ಚಿನ ಶಿಕ್ಷಣ ಕೊಡಿಸುವುದು ಪ್ರಮುಖವಲ್ಲ ಎಂದು ಹೇಳಿದ್ದಾರೆ. ಅದೇ ರೀತಿ ಎಲ್ಲಿಯವರೆಗೆ ನಿಮ್ಮ ಗಂಡು ಮಗುವನ್ನು ಅಥವಾ ಹೆಣ್ಣುಮಗುವನ್ನು ವಿದ್ಯಾಭ್ಯಾಸ ಮಾಡಿಸಲು ಆಸಕ್ತಿ ಹೊಂದಿದ್ದೀರಿ ಎಂಬ ಪ್ರಶ್ನೆಗೆ, ಗಂಡು ಮಕ್ಕಳಿಗೆ ಎಲ್ಲಿಯವರೆಗೆ ಸಾಧ್ಯವೋ ಅಲ್ಲಿಯವರೆಗೆ ವಿದ್ಯಾಭ್ಯಾಸ ಕೊಡಿಸಲು ಶೇಕಡ ೮೦.೦೦ರಷ್ಟು ಪೋಷಕರು ಆಸಕ್ತಿ ಹೊಂದಿದ್ದರೆ, ಹೆಣ್ಣು ಮಕ್ಕಳಿಗೆ ಹತ್ತನೆಯ ತರಗತಿಯವರೆಗೆ ಮಾತ್ರ ವಿದ್ಯಾಭ್ಯಾಸ ಕೊಡಿಸಲು ಶೇಕಡ ೬೬.೮೯ರಷ್ಟು ಪೋಷಕರು ಆಸಕ್ತಿ ಹೊಂದಿದ್ದಾರೆ. ಇನ್ನು ಉಳಿದ ಶೇಕಡ ೩೩.೯೦ರಷ್ಟು ಪೋಷಕರು ಹೆಣ್ಣುಮಕ್ಕಳನ್ನು ತಮ್ಮ ಗ್ರಾಮದ ಶಾಲೆಯಲ್ಲಿ ತರಗತಿಗಳು ಇರುವವರೆಗೆ ವಿದ್ಯಾಭ್ಯಾಸ ಕೊಡಿಸಲು ಆಸಕ್ತರಾಗಿದ್ದಾರೆ. ಹೀಗೆ ಬಾಲಕರಿಗೆ ಮತ್ತು ಬಾಲಕಿಯರಿಗೆ ವಿದ್ಯಾಭ್ಯಾಸ ನೀಡುವಾಗ ಇರುವ ಲಿಂಗತಾರತಮ್ಯದ ಸೂಚನೆಗಳು ನಾವು ಸಂಗ್ರಹಿಸಿದ ಪರಿಮಾಣಾತ್ಮಕ ಮತ್ತು ಗುಣಾತ್ಮಕ ಮಾಹಿತಿಗಳಿಂದ ದೊರಕುತ್ತವೆ.

೪.೨ ಗಂಡು ಮಕ್ಕಳಿಗೆ ಇರುವ ಪ್ರೇರಕಾಂಶಗಳು

ಏಕೆ ಗಂಡು ಮಗುವಿನ ಶಿಕ್ಷಣಕ್ಕೆ ಹೆಚ್ಚಿನ ಒಲವು ಹೊಂದಿದ್ದಾರೆ ಎಂಬ ಪ್ರಶ್ನೆಗೆ ಬಹುತೇಕ ಪೋಷಕರು ಇದಕ್ಕೆ ನೀಡುವ ಕಾರಣ ಆರ್ಥಿಕವಾದುದು. ನಾವು ಅಧ್ಯಯನ ನಡೆಸಿರುವ ಕುಟುಂಬಗಳ ಪೋಷಕರು ತಮ್ಮ ಗಂಡು ಮಗುವಿಗೆ ಹೆಚ್ಚಿನ ವಿದ್ಯಾಭ್ಯಾಸ ನೀಡಿದರೆ ನೌಕರಿ ಸಿಗುವ ಅವಕಾಶಗಳು ಹೆಚ್ಚಾಗುತ್ತವೆ ಎಂದು ಹೇಳಿದ್ದಾರೆ.

ದಲಿತ ಸಮುದಾಯಕ್ಕೆ ಸೇರಿದ ಪೋಷಕರೊಬ್ಬರು ಗಂಡು ಮಗುವಿಗೆ ಶಿಕ್ಷಣ ದೊರೆತರೆ ಅವನಿಗೆ ಉದ್ಯೋಗ ಸಿಗಬಹುದು, ಇಲ್ಲವೇ ವ್ಯಾಪಾರ ಮಾಡಬಹುದು, ಅಥವಾ ಅಂಗಡಿ ನಡೆಸಬಹುದು, ಹೈನುಗಾರಿಕೆ ಹಾಗೂ ಕೃಷಿ ಸಂಬಂಧಿತ ಕಸುಬುಗಳನ್ನು ವೈಜ್ಞಾನಿಕವಾಗಿ ಕೈಗೊಳ್ಳಬಹುದು. ಹೀಗೆ ಯಾವುದೋ ಒಂದು ವೃತ್ತಿಯ ಮೂಲಕ ಉತ್ತಮ ಜೀವನ ನಡೆಸಬಹುದು ಎಂದು ಹೇಳುತ್ತಾರೆ. ಶಿಕ್ಷಣಕ್ಕೆ ಉದ್ಯೋಗಾಧಾರಿತ ಪ್ರೇರಣೆ ಇರುವ ಅಂಶವನ್ನು ಈಗಾಗಲೇ ನಡೆದಿರುವ ಅನೇಕ ಅಧ್ಯಯನಗಳು ಗುರುತಿಸಿವೆ. ಕೇವಲ ಈ ರೀತಿಯ ಆರ್ಥಿಕ ಪ್ರೇರಕ ಅಂಶವು ಸಂಕುಚಿತ ಮತ್ತು ಭೌತಿಕ (ಮೈಟೀರಿಯಲಿಸ್ಟಿಕ್) ಪ್ರೇರಣೆ. ಈ ರೀತಿಯ ಪ್ರೇರಣೆಯು ಅಭಿವೃದ್ಧಿಯಾಗಲು ಇರುವ ಸಾಮಾಜಿಕ ಒತ್ತಡಕ್ಕೆ ಇರುವ ಕಾರಣವೆಂದರೆ, ಬಹುತೇಕ ಪೋಷಕರು ಶಿಕ್ಷಣಕ್ಕೆ ಇರುವ ಆರ್ಥಿಕ ಮೌಲ್ಯವೇ ಪ್ರಮುಖ ಎಂದು ತಿಳಿದಿರುವುದು. ಈ ಶಂಕೆಯನ್ನು ಸರಳವಾಗಿ ಅರ್ಥಮಾಡಿಕೊಳ್ಳಬಹುದು. ಆದರೆ ಶಿಕ್ಷಣಕ್ಕೆ ಇರುವ ಆರ್ಥಿಕೇತರ ಮೌಲ್ಯಗಳನ್ನು ಅರ್ಥಮಾಡಿಕೊಳ್ಳದೆ ಇರುವುದು. ಇದೇ ಸಮಯದಲ್ಲಿ ಶಿಕ್ಷಣಕ್ಕೆ ಇರುವ ಆರ್ಥಿಕ ಆಯಾಮಗಳನ್ನು ಸಾರಾಸಗಟಾಗಿ ತಳ್ಳಿಹಾಕಲು ಯಾವುದೇ ಆಧಾರಗಳು ಇಲ್ಲ. ಉತ್ತಮ ಉದ್ಯೋಗಾವಕಾಶಕ್ಕೆ ಆರ್ಥಿಕವಾಗಿ ಹಿಂದುಳಿದ ಪೋಷಕರು ಹಾತೊರೆಯುವುದು ಒಳ್ಳೆಯ ಕಾರಣಕ್ಕಾಗಿ. ಇದಕ್ಕೆ ಶಿಕ್ಷಣ ಸಹಾಯ ಮಾಡುತ್ತದೆ ಎಂಬುದು ಅವರ ನಂಬಿಕೆ.

ಮುಂದುವರಿದು ಹೇಳುವುದಾದರೆ, ಪೋಷಕರು ಶಿಕ್ಷಣವನ್ನು ಕೇವಲ ಆರ್ಥಿಕ ಅನುಕೂಲಕ್ಕಾಗಿಯೇ ಪಡೆದುಕೊಳ್ಳುವುದು ಎಂದು ಹೇಳುವುದು ಕೂಡ ಸರಿಯಲ್ಲ. ಅವರು ಶಿಕ್ಷಣಕ್ಕೆ ಇರುವ ಅನೇಕ ಆರ್ಥಿಕೇತರ ಅನುಕೂಲಗಳನ್ನು ತಿಳಿದವರಾಗಿದ್ದಾರೆ. ಅವುಗಳಲ್ಲಿ ಪ್ರಮುಖವಾದವು ಎಂದರೆ, ಸ್ವಾಭಿಮಾನ ಮತ್ತು ಸಾಮಾಜಿಕ ಸ್ಥಾನವನ್ನು ಹೆಚ್ಚಿಸುವಲ್ಲಿ ಶಿಕ್ಷಣದ ಪಾತ್ರ ಅತ್ಯಂತ ಪ್ರಮುಖ ಎಂಬ ಅರಿವು ಆವರಿಸಿರುವುದು. ಉದಾಹರಣೆಗೆ ಜೋಡಿಗಟ್ಟೆ ಗ್ರಾಮದ ಒಬ್ಬ ವ್ಯಕ್ತಿ ಹೇಳುವಾಗ, ಶಿಕ್ಷಣದಿಂದ ಹೊರಗಿನ ಪ್ರಪಂಚದ ಎಲ್ಲಾ ವ್ಯವಹಾರಗಳು ಜೊತೆಗೆ ತೀಕ್ಷ್ಣವಾಗಿ ವ್ಯವಹರಿಸಬಹುದು. ಅಲ್ಲದೆ ವ್ಯವಹಾರಗಳನ್ನು ಧೈರ್ಯವಾಗಿ ಎದುರಿಸುವ ಮತ್ತು ಇತರರೊಡನೆ ಮಾತನಾಡುವ ಆತ್ಮಸ್ಥೈರ್ಯವನ್ನು ಶಿಕ್ಷಣ ನೀಡುತ್ತದೆ. ಇಲ್ಲಿ ಕೆಲವು ಸಾಮಾನ್ಯ ಅನುಭವಗಳನ್ನು ಮಾತ್ರ ಬಳಸಿಕೊಂಡು ಶಿಕ್ಷಣ ಕುರಿತು ಅವರಿಗೆ ಇರುವ ಮನೋಭಾವದ ಅಂಶಗಳನ್ನು ತಿಳಿಯಪಡಿಸಲು ಪ್ರಯತ್ನಿಸಲಾಗಿದೆ. ಇದಕ್ಕೆ ಪೂರಕವಾದಂತೆ ಶಿಕ್ಷಣವು ಪ್ರತಿಯೊಬ್ಬರ ಹಕ್ಕು ಬಾಧ್ಯತೆಗಳನ್ನು ರೂಪಿಸುವುದಲ್ಲದೆ ಹಕ್ಕುಗಳನ್ನು

ರಕ್ಷಿಸುತ್ತದೆ. ಉದಾಹರಣೆಗೆ ಶಿಕ್ಷಣ ಪಡೆದರೆ ಯಾವುದೇ ಕಛೇರಿಗೆ ಹೋಗಿ ಅಧಿಕಾರಿಗಳ ಜೊತೆ ಮಾತನಾಡಲು, ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಮಾಹಿತಿಗಳನ್ನು ಪಡೆಯಲು, ಅವಶ್ಯಕವೆನಿಸಿದ ಅರ್ಜಿ ನಮೂನೆಗಳನ್ನು ತುಂಬಲು ಹಿಂಜರಿಯುವುದಿಲ್ಲ. ಅಲ್ಲದೆ, ಹೆಚ್ಚಿನ ಆತ್ಮವಿಶ್ವಾಸದಿಂದ ಕಛೇರಿಯ ವ್ಯವಹಾರಗಳನ್ನು ನಿರ್ವಹಿಸುತ್ತಾರೆ. ನಮ್ಮ ಅಧ್ಯಯನದ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಬಂದ ಅಂಶಗಳೆಂದರೆ ಶಿಕ್ಷಣಕ್ಕೆ ಇರುವ ಇತರ ಅನುಕೂಲಗಳನ್ನು ಕುರಿತು ಉಲ್ಲೇಖಿತವಾದ ಒಳ್ಳೆಯದು ಕೆಟ್ಟದನ್ನು ಯೋಚಿಸುವ ಶಕ್ತಿ ದೊರಕುತ್ತದೆ, ಆಧುನಿಕ ಕೃಷಿ ತಂತ್ರಜ್ಞಾನ ಅಳವಡಿಸಿಕೊಳ್ಳಲು, ಕೃಷಿ ಮಾರುಕಟ್ಟೆಯಲ್ಲಿ ವ್ಯವಹರಿಸಲು, ಆಸ್ಪತ್ರೆ ಮತ್ತು ಔಷಧಿ ಅಂಗಡಿಗಳಿಗೆ ಹೋದಾಗ ಅಸಲಿ-ನಕಲಿ ಔಷಧಗಳನ್ನು ಗುರುತಿಸಲು, ಹೀಗೆ ಕ್ಷೇತ್ರಕಾರ್ಯದಲ್ಲಿ ದೊರೆತ ಎಲ್ಲಾ ಉತ್ತರ ಅಥವಾ ಮಾಹಿತಿಗಳನ್ನು ಒಂದು ಕಡೆಗೆ ಸೇರಿಸಿದಲ್ಲಿ ಅವು ಶಿಕ್ಷಣದಿಂದ ಇರುವ (ಗಂಡು ಮಕ್ಕಳ ಶಿಕ್ಷಣವೂ ಸೇರಿದಂತೆ) ಅನುಕೂಲಗಳು ವೈಯಕ್ತಿಕ ಹಾಗೂ ಸಾಮಾಜಿಕ ದೃಷ್ಟಿಕೋನಗಳನ್ನು ಹೊಂದಿದವುಗಳಾಗಿವೆ.

೪.೩ ಹೆಣ್ಣು ಮಕ್ಕಳಿಗೆ ಇರುವ ಪ್ರೇರಕಾಂಶಗಳು

ಮಹಿಳೆಯರ ಅಥವಾ ಹೆಣ್ಣುಮಕ್ಕಳ ಶಿಕ್ಷಣ ಕುರಿತು ಪೋಷಕರು ಹೊಂದಿರುವ ಮನೋಭಾವನೆಯನ್ನು ಅರ್ಥಮಾಡಿಕೊಳ್ಳುವ ಮೊದಲು, ವಿಶೇಷವಾಗಿ ಉತ್ತರ ಭಾರತದಲ್ಲಿ ಪೋಷಕರು ಹೆಣ್ಣುಮಕ್ಕಳು ಶಾಲೆಗೆ ಸೇರುವುದು ಕೇವಲ ಅವಳ ಮದುವೆ ದೃಷ್ಟಿಯಿಂದ ಎಂಬುದನ್ನು ಅನೇಕ ಅಧ್ಯಯನಗಳು ಗುರುತಿಸಿವೆ (ಪ್ರೋಬ್, ೧೯೯೯; ರೇಖಾ ಕೌಲ್, ೧೯೯೩; ರೇಖಾ ವಾಜೀರ್, ೨೦೦೧; ಡ್ರೀಜ್ ಮತ್ತು ಘಜಡರ್, ೧೯೯೬; ವಾಸವಿ, ೨೦೦೦; ಬ್ಯಾನರ್ಜಿ ರುಕ್ಮಿಣಿ ೧೯೯೫; ೧೯೯೮; ಡ್ರೀಜ್ ಆಂಡ್ ಕಿಂಗ್‌ಡಂ, ೨೦೦೧). ಭಾರತದ ಬಹುತೇಕ ಹೆಣ್ಣುಮಕ್ಕಳು ಮದುವೆಯ ನಂತರ ತಮ್ಮ ಪೋಷಕರ ಮನೆಯನ್ನು ತೊರೆದು, ಗಂಡನ ಮನೆ ಅಥವಾ ಗ್ರಾಮವನ್ನು ಸೇರುವುದು ಸಾಮಾನ್ಯ. ಅಲ್ಲದೆ ಆಕೆಯ ಸಂಬಂಧವು ತಮ್ಮ ಪೋಷಕರ ಜೊತೆ ಸ್ವಲ್ಪಮಟ್ಟಿಗೆ ಅಂತರದಿಂದ ಇರುತ್ತದೆ. ಹೀಗಾಗಿ ಹೆಣ್ಣುಮಕ್ಕಳ ಶಿಕ್ಷಣಕ್ಕಿಂತ ಮದುವೆಯೇ ಪೋಷಕರ ಮೊದಲ ಆದ್ಯತೆಯಾಗಿರುತ್ತದೆ. ಆದರೆ ಗಂಡುಮಕ್ಕಳಿಗೆ ಶಿಕ್ಷಣ ಕೊಡಿಸುವ ಕುರಿತು ಪರಿಸ್ಥಿತಿ ಸಂಪೂರ್ಣ ವಿಭಿನ್ನವಾಗಿದೆ. ಗಂಡುಮಕ್ಕಳು ಮದುವೆಯ ನಂತರವು ತಮ್ಮ ಜೊತೆ (ಪೋಷಕರ) ಇರುತ್ತಾರೆ. ಅಲ್ಲದೆ ತಮ್ಮ ಇಳಿವಯಸ್ಸಿನಲ್ಲಿ ನಮ್ಮನ್ನು ಸಾಕುತ್ತಾರೆ ಎಂಬ ಭಾವನೆ ಬಹುತೇಕ ಪೋಷಕರಲ್ಲಿದೆ. ಮತ್ತೊಂದು ಬಹಳ ಸಂಕೀರ್ಣವಾದ ವಿಷಯವೆಂದರೆ, ಪುರುಷರಿಗಿಂತ ಮಹಿಳೆಯರಿಗೆ ಉದ್ಯೋಗ ಅವಕಾಶಗಳು ಬಹಳ ಸೀಮಿತವಾಗಿರುವುದು. ಈ ಬಗೆಯ ಸಾಮಾಜಿಕ ಒಪ್ಪಂದಗಳಲ್ಲಿ ಅನೇಕ ಬದಲಾವಣೆ ಆಗಿರಬಹುದು (ವಿಶೇಷವಾಗಿ ನಗರ ಪ್ರದಶದಲ್ಲಿ). ಆದರೆ ಈ ರೀತಿಯ ಸಾಮಾಜಿಕ ನೀತಿ ಅಥವಾ ಮೌಲ್ಯಗಳು ಇನ್ನು ತಮ್ಮ ಪ್ರಾಬಲ್ಯತೆಯನ್ನು ಗ್ರಾಮೀಣ ಪ್ರದೇಶದಲ್ಲಿ ಹೊಂದಿವೆ.

ಈ ದೃಷ್ಟಿಕೋನದಲ್ಲಿ ಒಂದು ಅನುಮಾನವಿದೆ. ಅದೇನೆಂದರೆ, ಕೆಲವು ಬೆರಳೆಣಿಕೆ ಪ್ರಮಾಣದಷ್ಟು ಪೋಷಕರು ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಸ್ವಲ್ಪ ಭಿನ್ನವಾದ ಮನೋಭಾವನೆ ಹೊಂದಿದವರಾಗಿದ್ದಾರೆ.

ಅವರ ದೃಷ್ಟಿಕೋನದಿಂದಲೇ ಹೇಳುವುದಾದರೆ, ಅದರಲ್ಲಿ ಬಹಳ ಮಟ್ಟದ ವ್ಯತ್ಯಾಸಗಳು ಕಂಡುಬರುವುದಿಲ್ಲ. ಹೇಗಿದ್ದರೂ ಅವಳು ನಮ್ಮಿಂದ ದೂರವಾಗುತ್ತಾಳೆ ಎಂಬ ದೃಷ್ಟಿಯಿಂದ ಹೆಣ್ಣುಮಗಳ ಶಿಕ್ಷಣಕ್ಕೆ ಬಂಡವಾಳ ಹಾಕುವುದು ಗಂಡು ಮಕ್ಕಳಿಗಿಂತ ಅತ್ಯಂತ ಕಡಿಮೆ. ಆದರೆ ಈ ದೃಷ್ಟಿಕೋನವು ಗಂಡು ಮಕ್ಕಳ ವಿಷಯದಲ್ಲಿ ಹೆಚ್ಚು ಪ್ರಬಲವಾಗಿದ್ದರೆ, ಹೆಣ್ಣುಮಕ್ಕಳ ವಿಷಯದಲ್ಲಿ ಬಹಳ ದುರ್ಬಲವಾಗಿದೆ. ಅದನ್ನು ಹೀಗೂ ಹೇಳಬಹುದು. ಹೆಣ್ಣುಮಕ್ಕಳಿಗೆ ಹೆಚ್ಚಿನ ಶಿಕ್ಷಣ ನೀಡುವ ಅಗತ್ಯವಿಲ್ಲ ಎಂದು ಅಭಿಪ್ರಾಯ ಪಡುವಾಗ ಪೋಷಕರು ಅನೇಕ ಭಿನ್ನತೆ ಹಾಗೂ ದ್ವಂದ್ವದಲ್ಲಿದ್ದಾರೆ. ಪೋಷಕರು ಈ ವಿಷಯವನ್ನು ಕುರಿತು ವಿವರಣೆ ನೀಡುವ ಅಂಶಗಳೆಂದರೆ : ನಾವು ಹೆಣ್ಣುಮಕ್ಕಳನ್ನು ಬಹಳ ಚಿಕ್ಕವಯಸ್ಸಿನಲ್ಲಿ ಮದುವೆ ಮಾಡುತ್ತೇವೆ. ಹೆಣ್ಣುಮಕ್ಕಳನ್ನು ಉದ್ಯೋಗಕ್ಕಾಗಿ ಹೊರಗೆ ಹೋಗುವುದು ಮತ್ತು ಹೆಚ್ಚಿನ ವಿದ್ಯಾಭ್ಯಾಸ ಕೊಡಿಸುವುದು ನಮ್ಮ ಸಮುದಾಯ ಜಾತಿಯಲ್ಲಿ ಇಲ್ಲ. ಅವಳು ಮುಂದೆ (ಮದುವೆ ನಂತರ) ಮಾಡಬೇಕಾದ ಮನೆ ಕೆಲಸ ಸೇರಿದಂತೆ ಇತರ ಕೆಲಸಗಳನ್ನು ಚೆನ್ನಾಗಿ ಮಾಡುವುದನ್ನು ಕಲಿತರೆ ಸಾಕು. ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದು ಮದುವೆಯ ಕಾರಣಕ್ಕಾಗಿ. ಅಂದರೆ ವಿವಾಹಕ್ಕೆ ಉತ್ತಮ ಅವಕಾಶ ದೊರಕುತ್ತದೆ ಎಂಬುದು ಸಾಮಾನ್ಯ ಅಂಶವಾದರೂ ಅದು ಮತ್ತೊಂದು ಸಕಾರಾತ್ಮಕ ಕಾರಣವನ್ನು ಒಳಗೊಂಡಿದೆ. ಆ ಕಾರಣಕ್ಕಾಗಿಯೇ ಪೋಷಕರು ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸ ನೀಡಲು ಆಸಕ್ತಿ ಹೊಂದಿದವರಾಗಿದ್ದಾರೆ. ತುಂಬಾ ಆಸಕ್ತಿಯುತವಾದ ಅಂಶವೆಂದರೆ ಕ್ಷೇತ್ರಕಾರ್ಯದಲ್ಲಿ ಆಗಿಂದ್ದಾಗ್ಗೆ ಪೋಷಕರು ನೀಡಿದ ಕಾರಣಗಳೆಂದರೆ ವಿದ್ಯಾವಂತ ಹೆಣ್ಣುಮಕ್ಕಳು ಪತ್ರ ಬರೆಯುವ ಮೂಲಕ ಸಂಪರ್ಕ ಇಟ್ಟುಕೊಳ್ಳುತ್ತಾರೆ. ಮನೆಯ ಸಾಮಾನ್ಯ ಲೆಕ್ಕಪತ್ರಗಳನ್ನು ನಿರ್ವಹಿಸಬಲ್ಲ ಶಕ್ತಿಯನ್ನು ಹೊಂದಿದವರಾಗಿದ್ದಾರೆ. ಕ್ಷೇತ್ರಕಾರ್ಯದಲ್ಲಿ ಉತ್ತರಿಸಿದ ಬಹುತೇಕ ವಕ್ತೃಗಳು ಅದರಲ್ಲಿಯೂ ಮಹಿಳಾ ವಕ್ತೃಗಳು ಯೋಚಿಸುವ ಅಂಶವೆಂದರೆ, ವಿವಾಹಿತ ಮಗಳು ವಿದ್ಯಾವಂತಳಾಗಿದ್ದಲ್ಲಿ, ಅವಳು ತೊಂದರೆ ಒಳಗಾದ ಸಂದರ್ಭದಲ್ಲಿ (ಪೋಷಕರಿಗೆ) ನಮ್ಮನ್ನು ಸಂಪರ್ಕಿಸಲು ಅನುಕೂಲವಾಗುತ್ತದೆ. ಅಲ್ಲದೆ, ನಮ್ಮ ಮಗಳ ಜೊತೆಗೆ ಸ್ವಲ್ಪ ಪ್ರಮಾಣದ ಸಂಪರ್ಕವಿಟ್ಟುಕೊಳ್ಳಲು ಶಿಕ್ಷಣ ಅವಶ್ಯಕವಾಗಿದೆ. ಇದು ಮಹಿಳಾ ಶಿಕ್ಷಣಕ್ಕೆ ಸಾಮಾನ್ಯವಾಗಿ ಕಂಡುಬರುವ ಮತ್ತೊಂದು ಪ್ರೇರಕ ಶಕ್ತಿಯಾಗಿದ್ದರೂ ಕೂಡ ಇದು ವಿವಾಹದ ಜೊತೆಗೆ ಸಹ ಸಂಬಂಧವನ್ನು ಹೊಂದಿದೆ. ಇದು ಉತ್ತಮವಾದ ಹುಡುಗನನ್ನು ಹುಡುಕಲು ಅವಕಾಶ ನೀಡುತ್ತದೆ. ಮಗಳಿಗೆ ತನ್ನ ಮಕ್ಕಳನ್ನು ಸರಿಯಾಗಿ ವಿದ್ಯಾಭ್ಯಾಸ ನೀಡಿ ಬಳಸಲು ಸಹಾಯಕವಾಗುತ್ತದೆ. ಒಂದು ವೇಳೆ ವಿವಾಹದ ನಂತರ ವಿಚ್ಛೇದನವಾದರೂ ಅಥವಾ ವಿಧವೆಯಾಗಿ ಜೀವನ ನಿಭಾಯಿಸುವ ಶಕ್ತಿಯನ್ನು ಶಿಕ್ಷಣ ನೀಡುತ್ತದೆ ಎಂದು ಹೇಳುತ್ತಾರೆ.

ಹೀರಾ ಗ್ರಾಮ ಪಂಚಾಯಿತಿಯಲ್ಲಿ ಪೋಷಕರು ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಭಿನ್ನವಾದ ಮನೋಭಾವನೆ ಹೊಂದಿದವರಾಗಿದ್ದಾರೆ. ಅವರ ದೃಷ್ಟಿಕೋನದಿಂದಲೇ ಹೇಳುವುದಾದರೆ ಮದುವೆಯಾದ ಮೇಲೆ ಅವಳು ಬೇರೆಯವರ ಮನೆಗೆ ಹೋಗುತ್ತಾಳೆ. ಅವಳು ನಮಗೆ ಆಸರೆಯಾಗುವುದಿಲ್ಲ ಮತ್ತು ವಿವಾಹದ ಸಂದರ್ಭದಲ್ಲಿ ಹೆಚ್ಚು ವರದಕ್ಷಿಣೆ ಕೊಡಬೇಕಾಗುತ್ತದೆ ಎಂದು ಅನೇಕ ಪೋಷಕರು

ಹೇಳಿದರೆ, ಇನ್ನು ಕೆಲವು ಪೋಷಕರು ಹೇಗಿದ್ದರೂ ಅವಳು ನಮ್ಮಿಂದ ದೂರವಾಗುತ್ತಾಳೆ ಎಂಬ ದೃಷ್ಟಿಯಿಂದ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಬಂಡವಾಳ ಹಾಕುವುದು, ಗಂಡು ಮಕ್ಕಳಿಗಿಂತ ಕಡಿಮೆ. ಆದರೆ ಈ ದೃಷ್ಟಿಕೋನವು ಗಂಡುಮಕ್ಕಳ ವಿಷಯದಲ್ಲಿ ಹೆಚ್ಚು ಪ್ರಬಲವಾಗಿದ್ದರೆ, ಹೆಣ್ಣುಮಕ್ಕಳ ವಿಷಯದಲ್ಲಿ ಇದು ಅತ್ಯಂತ ಕಡಿಮೆ ಇದೆ. ಹಲವು ಪೋಷಕರು ಹೇಳುವ ಹಾಗೇ ಹೆಚ್ಚಿನ ವಿದ್ಯಾಭ್ಯಾಸ ಕೊಡಿಸುವುದು ನಮ್ಮ ಸಮುದಾಯದ ಜಾತಿಯಲ್ಲಿ ಇಲ್ಲ ಎಂದಿದ್ದಾರೆ.

ಕೆಲವು ಪೋಷಕರು ಮದುವೆ ಸಂಬಂಧದ ಆಚೆಗೂ, ಉದ್ಯೋಗ ಅವಕಾಶಗಳ ಹೆಚ್ಚಳ, ಸ್ವಾವಲಂಬನೆ ಬೆಳವಣಿಗೆಯ ದೃಷ್ಟಿಯಿಂದಲೂ ಶಿಕ್ಷಣದ ಮಹತ್ವವನ್ನು ಪರಿಗಣಿಸುತ್ತಾರೆ. ಅಧ್ಯಯನಕ್ಕೆ ಒಳಪಡಿಸಿದ ಶೇಕಡ ೪೦.೦೦ರಷ್ಟು ಪೋಷಕರು ಮಹಿಳೆಯರ ಶಿಕ್ಷಣಕ್ಕೆ ಆದ್ಯತೆ ನೀಡಿದರೆ, ಗಂಡು ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡುವವರು ಶೇಕಡ ೮೭.೦೦ರಷ್ಟಿದ್ದಾರೆ. ಇಲ್ಲಿ ಶೇಕಡ ೪೭.೦೦ರಷ್ಟು ಅಂತರವನ್ನು ಗುರುತಿಸಬಹುದು. ಆದರೆ ಸ್ವಲ್ಪ ಹೆಚ್ಚು ಕಡಿಮೆ, ಮಹಿಳೆಯರು ಉದ್ಯೋಗದಲ್ಲಿ ತೊಡಗುವ ಅವಕಾಶ ನೀಡುವುದನ್ನು ಹೆಚ್ಚಿಸಿದ ಪಕ್ಷದಲ್ಲಿ ಮಹಿಳೆಯರ ಶಿಕ್ಷಣಕ್ಕೆ ಹೆಚ್ಚಿನ ಆಸಕ್ತಿಯನ್ನು ಗ್ರಾಮೀಣ ಪೋಷಕರು ಬೆಳೆಸಿಕೊಳ್ಳಬಹುದಾದ ಸೂಚನೆಗಳಿವೆ. ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡಲು ಪೋಷಕರು ಸ್ವಲ್ಪಮಟ್ಟಿನ ಅಪಾಯಕಾರಿ ಮನೋಭಾವನೆನ್ನು ಹೊಂದಿದ್ದಾರೆ. ಈ ರೀತಿಯ ಮನೋಭಾವನೆಗೆ ಪೋಷಕರು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ತಗಲುವ ವೆಚ್ಚ ಮತ್ತು ಅದರ ಹಿಂದಿರುವ ಪರಿಶ್ರಮವನ್ನು ಮುಂದು ಮಾಡುತ್ತಾರೆ. ಹೆಣ್ಣುಮಕ್ಕಳ ಶಿಕ್ಷಣಕ್ಕೆ ಇಂದು ಹೆಚ್ಚಿನ ಖರ್ಚು ತಗಲುತ್ತದೆ ಎಂಬುದು ಪೋಷಕರಲ್ಲಿ ಇರುವ ಪ್ರಮುಖ ವಿರೋಧವಾಗಿದೆ. ಇದರ ಜೊತೆಗೆ ಅವರು ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಹೆಚ್ಚಿನ ಬಂಡವಾಳ ವ್ಯಯಿಸಲು ತಯಾರಿಲ್ಲ. ಸೇಬಿನಕಟ್ಟೆ ಗ್ರಾಮದ ಒಬ್ಬ ಪೋಷಕರ ಪ್ರಕಾರ ಇಂದು ಶಿಕ್ಷಣಕ್ಕೆ ಹೆಚ್ಚಿನ ಹಣ ವ್ಯಹಿಸಬೇಕು. ನನ್ನ ಆರ್ಥಿಕ ಪರಿಸ್ಥಿತಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಹಣ ಖರ್ಚು ಮಾಡುವ ಸ್ಥಿತಿಯಲ್ಲ ಎಂದು ಹೇಳುತ್ತಾರೆ. ಅದೇ ಗ್ರಾಮದ ದಲಿತ ವಿದ್ಯಾವಂತ ಮಹಿಳೆಯೊಬ್ಬರ ಪ್ರಕಾರ, ನಮ್ಮ ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸುವಷ್ಟು ಹಣ ನಮ್ಮಲ್ಲಿ ಇಲ್ಲ. ನಮ್ಮ ಜಾತಿಯಲ್ಲಿ ಹೆಣ್ಣುಮಕ್ಕಳನ್ನು ಬಹಳ ಚಿಕ್ಕವಯಸ್ಸಿಗೆ ಮದುವೆ ಮಾಡುತ್ತೇವೆ. ಮನ್ಮಥನಾಳ ಗ್ರಾಮದ ವೃದ್ಧರೊಬ್ಬರ ಪ್ರಕಾರ ಗಂಡುಮಕ್ಕಳ ಶಿಕ್ಷಣದಷ್ಟು ಪ್ರಮುಖವಾದದ್ದು ಹೆಣ್ಣುಮಕ್ಕಳ ಶಿಕ್ಷಣ, ಏಕೆಂದರೆ ಹೆಣ್ಣುಮಕ್ಕಳು ಮನೆಯ ಎಲ್ಲಾ ವ್ಯವಹಾರಗಳನ್ನು ನಿರ್ವಹಿಸಬೇಕು. ಅಲ್ಲದೆ ಇತ್ತೀಚೆಗೆ ಪ್ರತಿಯೊಬ್ಬರೂ ಕೂಡ ವಿದ್ಯಾವಂತ ಹುಡುಗಿಯರನ್ನು ಮದುವೆ ಯಾಗಲು ಬಯಸುತ್ತಿದ್ದಾರೆ ಎಂದು ಹೇಳುತ್ತಾರೆ.

ಹೀಗೆ ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಸಕಾರಾತ್ಮಕವಾಗಿ ಚಿಂತಿಸುವವರು ಇದ್ದರೂ ಕೂಡ ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ನೀಡಲು ಉದ್ದೇಶಿಸಿರುವ ಮಟ್ಟ ಬಹಳ ಕಡಿಮೆ. ಕೋಷ್ಟಕ ಮೂರು ಸೂಚಿಸುವಂತೆ ಅತ್ಯಧಿಕ ಸಂಖ್ಯೆ ಪೋಷಕರು ತಮ್ಮ ಗಂಡುಮಗ ಓದುವ ತನಕ ಶಿಕ್ಷಣ ಕೊಡಿಸಲು ಆಸಕ್ತಿ ಹೊಂದಿದ್ದಾರೆ.

ಕನಿಷ್ಟ ಪಕ್ಷ ೧೦ನೆಯ ತರಗತಿಯವರೆಗೆ ಓದಿಸಲು ಕಟ್ಟಿಬದ್ಧರಾಗಿದ್ದಾರೆ. ಆದರೆ ಬಹುತೇಕ ಪೋಷಕರು ಹೆಣ್ಣುಮಗಳ ಶಿಕ್ಷಣ ಕುರಿತು ಇಂತಹ ಮನೋಭಾವನೆಯನ್ನು ಹೊಂದಿರುವುದಿಲ್ಲ. ಸ್ವಲ್ಪ ಪ್ರಮಾಣದ ಪೋಷಕರು, ಹೆಣ್ಣುಮಕ್ಕಳು ಪ್ರಾಥಮಿಕ ಶಿಕ್ಷಣಕ್ಕಿಂತ ಹೆಚ್ಚಿನ ಶಿಕ್ಷಣ ಪಡೆಯುವುದನ್ನು ವಾಸ್ತವಿಕವಾಗಿ ಒಪ್ಪಿಕೊಳ್ಳುವ ಸ್ಥಿತಿಯಲ್ಲಿಲ್ಲ. ಇದಕ್ಕೆ ಪ್ರಮುಖ ಕಾರಣ ತಮ್ಮ ಗ್ರಾಮದಿಂದ ಸ್ವಲ್ಪ ದೂರದಲ್ಲಿ ಇರುವ ಮತ್ತೊಂದು ಗ್ರಾಮದ ಶಾಲೆಗೆ ಹೆಣ್ಣುಮಕ್ಕಳು ಹೋಗುವುದು ಕೆಲವು ಪೋಷಕರಿಗೆ ಮನಸಿಲ್ಲದಿರುವುದು. ಜೊತೆಗೆ ಪೋಷಕರಲ್ಲಿ ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಸಾಮಾನ್ಯವಾಗಿ ಹೆಚ್ಚಿನ ಆಸೆ ಆಕಾಂಕ್ಷೆಗಳು ಇಲ್ಲದಿರುವುದು ಮತ್ತೊಂದು ಕಾರಣವಾಗಿದೆ. ಇದು ಗ್ರಾಮಗಳಲ್ಲಿ ಮಾಧ್ಯಮಿಕ ಶಾಲೆಗಳು ಮತ್ತು ಪ್ರೌಢ ಶಾಲೆಗಳು ದೊರೆಯದೆ ಇರುವ ಸಮಸ್ಯೆಯನ್ನು ಎತ್ತಿ ತೋರಿಸುತ್ತದೆ. ಪೋಷಕರು ಉನ್ನತ ಶಿಕ್ಷಣ ಪಡೆದ ಹೆಣ್ಣು ಮಕ್ಕಳ ಮದುವೆ ಮಾಡುವುದು ಕೆಲವು ಪರಿಸ್ಥಿತಿಯಲ್ಲಿ ಸ್ವಲ್ಪ ಕಷ್ಟವಾಗುತ್ತದೆ ಎಂದು ಮತ್ತೊಂದು ಪ್ರಮುಖ ಕಾರಣ ನೀಡುತ್ತಾರೆ.

೪.೪ ಶಿಕ್ಷಣ-ವಿವಾಹ-ಜಾತಿ

ಅಧ್ಯಯನಕ್ಕೆ ಒಳಪಡಿಸಿದ ಪೋಷಕರನ್ನು ; ವಿದ್ಯಾವಂತ ಹೆಣ್ಣುಮಗಳನ್ನು ವಿವಾಹ ಮಾಡುವುದು ಸರಳವೇ ಅಥವಾ ಹೆಚ್ಚಿನ ಕಷ್ಟವೇ ಎಂಬ ಪ್ರಶ್ನೆಯನ್ನು ಕೇಳಿದಾಗ, ಶೇಕಡ ೬೦.೧೭ರಷ್ಟು ಸರಳ ಎಂದು ಶೇಕಡ ೩೯.೮೩ರಷ್ಟು ಪೋಷಕರು ಹೆಚ್ಚು ಕಷ್ಟವಾಗುತ್ತದೆ ಎಂದು ಉತ್ತರಿಸಿದ್ದಾರೆ. ಈ ರೀತಿಯ ಉತ್ತರಗಳನ್ನು ಸಮನ್ವಯಗೊಳಿಸಿದಾಗ ನಮ್ಮಗೆ ವಿವಾಹದ ನಿರೀಕ್ಷೆಗಳು ಮತ್ತು ವಿವಾಹದ ವೆಚ್ಚದ ನಡುವೆ ಇರುವ ಭಿನ್ನತೆಯನ್ನು ಅಥವಾ ಇವೆರಡನ್ನು ಬೇರೆ ಬೇರೆಯಾಗಿ ನೋಡಬಹುದು. ಶಿಕ್ಷಣ ಪಡೆದ ಹೆಣ್ಣುಮಕ್ಕಳಿಗೆ ಸಾಮಾನ್ಯವಾಗಿ ಉತ್ತಮ ವಿದ್ಯಾವಂತ ಗಂಡನ ನಿರೀಕ್ಷೆ ಇರುತ್ತದೆ. ಆ ಸಮಯದಲ್ಲಿ ಅವಳ ಮದುವೆಯ ವೆಚ್ಚವು ಕೂಡ ಹೆಚ್ಚಳವಾಗುತ್ತದೆ. ಏಕೆಂದರೆ, ಕೆಲವು ಸಾಮಾಜಿಕ ನಿಯಮಗಳು ಅವಳಿಗೆ ಉತ್ತಮ ಸುಶಿಕ್ಷಿತ ಹುಡುಗನನ್ನು ಹುಡುಕುವಂತೆ ಒತ್ತಾಯಿಸುತ್ತವೆ. ಈ ದ್ವಂದ್ವವನ್ನು ಪೋಷಕರು ಹೇಗೆ ನಿಭಾಯಿಸುತ್ತಾರೆ ಎಂಬುದನ್ನು ಅವರ ಹಣಕಾಸಿನ ಸಂಪನ್ಮೂಲ ಮತ್ತು ಹೆಣ್ಣುಮಗಳ ಭವಿಷ್ಯದ ಯೋಗಕ್ಷೇಮವನ್ನು ಅವಲಂಬಿಸಿರುತ್ತದೆ. ಇದು ವಿವಾಹ ಜವಾಬ್ದಾರಿಗಳು ಮತ್ತು ವಿವಾಹ ವೆಚ್ಚ, ಈ ಎರಡು ಅಂಶಗಳ ಜೊತೆಗೆ ಹೆಣ್ಣುಮಕ್ಕಳ ಶಿಕ್ಷಣದ ಮಟ್ಟವನ್ನು ಅವಲಂಬಿಸಿರುತ್ತದೆ. ಪೋಷಕರು ವಿವಾಹದ ವೆಚ್ಚವು ಹೆಣ್ಣುಮಕ್ಕಳ ಶಿಕ್ಷಣದ ಜೊತೆಗೆ ಹೆಚ್ಚಳವಾಗುತ್ತದೆ ಎಂದು ನಿರೀಕ್ಷಿಸಿದ್ದಾರೆ. ಇದು ಬಹುಶಃ ತನ್ನ ನಿರೀಕ್ಷೆಯ ನಿಯಮ ಪಾಲಿಸುವಂತೆ ನಿರ್ದೇಶಿಸುತ್ತದೆ. ಈ ರೀತಿಯ ದೃಷ್ಟಿಕೋನವು ಒಂದು ಪ್ರಮುಖ ಅಂಶವನ್ನು ಅವಲಂಬಿಸಿದೆ. ಇದು ಆಯಾ ಜಾತಿ ಅಥವಾ ಜನ ಸಮುದಾಯದ ಸಾಮಾನ್ಯ ಶಿಕ್ಷಣದ ಮಟ್ಟವನ್ನು, ಅದರಲ್ಲಿಯೂ ಪುರುಷರ ಶಿಕ್ಷಣವನ್ನು ಅವಲಂಬಿಸಿರುತ್ತದೆ.

ಇದನ್ನು ಹೀಗೂ ವಿಶ್ಲೇಷಿಸಬಹುದು. ಒಂದು ಜನಸಮುದಾಯದಲ್ಲಿ ಪುರುಷರ ಶಿಕ್ಷಣದ ಪ್ರಮಾಣ ಹೆಚ್ಚಳವಾಗಿದ್ದರೆ, ಆ ಜನಸಮುದಾಯದಲ್ಲಿ ವಿದ್ಯಾವಂತ ಹುಡುಗರ ಸಂಖ್ಯೆ

ಹೆಚ್ಚಳವಾಗಿರುವುದರಿಂದ ಹೆಣ್ಣುಮಕ್ಕಳನ್ನು ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲಾ ಹಂತದವರೆಗೆ ಓದಿಸುವುದು, ಅವಳ ವಿವಾಹದ ವೆಚ್ಚವನ್ನು ಬಹಳ ಪ್ರಮಾಣದಲ್ಲಿ ಹೆಚ್ಚಿಸುವುದಿಲ್ಲ. ಪುರುಷರ ಶಿಕ್ಷಣದ ಮಟ್ಟ ಅತಿಕಡಿಮೆ ಇರುವ ಜನಸಮುದಾಯಗಳಲ್ಲಿ, ಪೋಷಕರು ತಮ್ಮ ಹೆಣ್ಣುಮಗಳಿಗೆ ಹೆಚ್ಚಿನ ಶಿಕ್ಷಣ ನೀಡಲು ಭಯಪಡುತ್ತಾರೆ. ಏಕೆಂದರೆ ತಮ್ಮ ಹೆಣ್ಣುಮಕ್ಕಳಿಗೆ ಸಮಂಜಸವಾದ ಹಾಗೂ ತಮ್ಮ ಖರ್ಚುವೆಚ್ಚಗಳಿಗೆ ಹೊಂದಿಕೊಳ್ಳುವವರು ಸಿಗುವುದು ಬಹಳ ಕಷ್ಟವಾಗುತ್ತದೆ ಎಂಬ ಅತಂಕದ ವಾತಾವರಣ ಆ ಪೋಷಕರಿಗೆ ಇರುತ್ತದೆ. ತಮ್ಮ ಆದಾಯದ ಮಿತಿಯಲ್ಲಿ, ವಿದ್ಯಾವಂತ ಮಗಳಿಗೆ ಸಮಂಜಸವಾದ ವರ ಸಿಗುವುದಿಲ್ಲವೆಂದು ಅವರು ಭಯ ಪಡುತ್ತಾರೆ. ಅತಿ ಬಡತನದ ಕುಟುಂಬಗಳಿಂದ ಬಂದ ಹೆಣ್ಣುಮಕ್ಕಳು ಉತ್ತಮ ವಿದ್ಯಾಭ್ಯಾಸ ಮಾಡುವುದು ಬಹಳ ಕಷ್ಟ. ಏಕೆಂದರೆ, ಅದು ಬಹಳ ವೆಚ್ಚದಾಯಕ. ಜೊತೆಗೆ ವಿದ್ಯಾವಂತ ಹೆಣ್ಣುಮಕ್ಕಳನ್ನು ವಿವಾಹ ಮಾಡಬೇಕಾದರೆ ವರದಕ್ಷಿಣೆಯನ್ನು ಯಾರಾದರೂ ನೀಡಬೇಕು.

ಈ ಕಾರಣಗಳು ಪ್ರಸ್ತುತ ಅಧ್ಯಯನದ ಸಮೀಕ್ಷೆಗೆ ಆಯ್ಕೆ ಮಾಡಿಕೊಂಡ ಗ್ರಾಮಗಳ ಪೋಷಕರಲ್ಲಿ ಅಧ್ಯಯನದ ಉದ್ದಕ್ಕೂ ಅತ್ಯಂತ ಪ್ರಖರವಾಗಿ ಕಂಡುಬರುತ್ತವೆ. ಉತ್ತಮ ಶಿಕ್ಷಣ ಪಡೆದಿರುವ ಜಾತಿ-ವರ್ಗಗಳಲ್ಲಿ ಹೆಣ್ಣುಮಕ್ಕಳು ಹೆಚ್ಚಿನ ವಿದ್ಯಾಭ್ಯಾಸ ಮಾಡುವುದರಿಂದ ಅವರ ವಿವಾಹ ಸ್ವಲ್ಪಮಟ್ಟಿಗೆ ಸರಳವಾಗುತ್ತದೆ ಎಂಬ ಪ್ರವೃತ್ತಿ ಇದೆ. ಅವಕಾಶವಂಚಿತ ಜಾತಿ-ಜನಸಮುದಾಯಕ್ಕೆ ಸೇರಿದ, ಅದರಲ್ಲಿಯೂ ನಿರ್ದಿಷ್ಟವಾಗಿ ದಲಿತ ಜನಸಮುದಾಯಕ್ಕೆ ಸೇರಿದ ಕೆಲವು ಪೋಷಕರ ಪ್ರಕಾರ ವಿದ್ಯಾವಂತ ಹೆಣ್ಣುಮಕ್ಕಳ ಮದುವೆಗೆ ಹೆಚ್ಚಿನ ಬೇಡಿಕೆ ಇದೆ. ಏಕೆಂದರೆ, ಅವಳಿಗೆ ಹೆಚ್ಚಿನ ಉದ್ಯೋಗ ಅವಕಾಶಗಳಿವೆ. ಇತ್ತೀಚಿನ ದಿನಮಾನದಲ್ಲಿ ಸರ್ಕಾರಿ ಕೆಲಸಗಳು ನಮ್ಮ ಸಮುದಾಯದ ವಿದ್ಯಾವಂತ ಹೆಣ್ಣುಮಕ್ಕಳಿಗೆ ಹೆಚ್ಚಾಗಿ ದೊರಕುತ್ತಿರುವುದೇ ಇದಕ್ಕೆ ಕಾರಣವಾಗಿದೆ. ಆದರೆ ವಿದ್ಯಾವಂತ ಹೆಣ್ಣುಮಕ್ಕಳನ್ನು ವಿವಾಹ ಮಾಡುವುದು ಕಷ್ಟ ಎಂದು ಅವಕಾಶ ವಂಚಿತ ಜನಸಮುದಾಯಕ್ಕೆ ಸೇರಿದ ಬಹುತೇಕ ಪೋಷಕರ ದೃಷ್ಟಿಕೋನವಾಗಿದೆ. ನಾವು ನಮ್ಮ ಹೆಣ್ಣುಮಕ್ಕಳಿಗೆ ಹೆಚ್ಚಿನ ವಿದ್ಯಾಭ್ಯಾಸ ಕೊಡಿಸಿದರೆ, ಅವರಿಗೆ ವಿದ್ಯಾವಂತ ವರನನ್ನು ಹುಡುಕಬೇಕು. ಆ ಸಮಯದಲ್ಲಿ ವಿದ್ಯಾವಂತ ವರನ ಕುಟುಂಬದವರು ಹೆಚ್ಚಿನ ಪ್ರಮಾಣದ ವರದಕ್ಷಿಣೆ ಕೇಳುತ್ತಾರೆ ಎಂದು ಬಾರ್‌ಕೇರ್ ಜನ ಸಮುದಾಯಕ್ಕೆ ಸೇರಿದ ಮಹಿಳೆಯೊಬ್ಬರು ಹೇಳುತ್ತಾರೆ. ಕ್ಷೌರಿಕ ಜನಸಮುದಾಯಕ್ಕೆ ಸೇರಿದ ವ್ಯಕ್ತಿಯ ಪ್ರಕಾರ ಉತ್ತಮ ಮತ್ತು ವಿದ್ಯಾವಂತ ಒಳ್ಳೆಯ ಹುಡುಗರ ಕೊರತೆ ಇದಕ್ಕೆ ಪ್ರಮುಖ ಕಾರಣವಾಗಿದೆ. ಇದಕ್ಕೆ ಮರಾಠಿ ಜನ ಸಮುದಾಯಕ್ಕೆ ಸೇರಿದ ಮತ್ತೊಬ್ಬರು ನೀಡುವ ವಿವರಣೆ ಎಂದರೆ, ವಿದ್ಯಾವಂತ ವರನನ್ನು ಹುಡುಕಲು ದೂರದ ಸ್ಥಳಗಳಿಗೆ ಹೋಗಬೇಕು. ಈ ಪ್ರದೇಶದಲ್ಲಿ ನಮ್ಮ ಜಾತಿಗೆ ಸೇರಿದ ವರ ಸಿಗುವುದು ಬಹಳ ಕಡಿಮೆ ಎಂದು ಹೇಳುತ್ತಾರೆ. ವಿದ್ಯಾವಂತ ವರನ ಕುಟುಂಬದ ಸದಸ್ಯರು ಅಥವಾ ಕೆಲವು ಪೋಷಕರು ವಿದ್ಯಾವಂತ ಹೆಣ್ಣುಮಕ್ಕಳನ್ನು ಮನೆಯ ಸೊಸೆ ಮಾಡಿಕೊಳ್ಳುವ ಆಸಕ್ತಿಯನ್ನು ಹೊಂದಿಲ್ಲದಿರುವವರಾಗಿದ್ದಾರೆ. ಸೊಸೆಯಾಗಿ ಬರುವ ಹುಡುಗಿ ಕೇವಲ ಮನೆ ಕೆಲಸ ಮಾಡಬೇಕು. ಸಂಬಂಧಿಕರ ಮನೆಗಳಿಗೆ ಹೋಗಿ ಬರಬೇಕು ಎಂಬ

ಮನೋಭಾವನೆ ಹೊಂದಿರುವವರು, ವಿದ್ಯಾಭ್ಯಾಸ ಹೆಚ್ಚು ಮಾಡಿರುವ ಹುಡುಗಿಯನ್ನು ಮನೆಯ ಸೊಸೆ ಮಾಡಿಕೊಳ್ಳಲು ಹೆಚ್ಚಿನ ಆಸಕ್ತಿ ತೋರಿಸದಿರುವುದು ಕಂಡುಬರುತ್ತದೆ (ಪ್ರಶಾಂತ್ ಎಚ್.ಡಿ., ೨೦೦೩).

ಬಳದರೆ ಗ್ರಾಮ ಪಂಚಾಯಿತಿಯಲ್ಲಿ ಹೆಣ್ಣುಮಕ್ಕಳಿಗೆ ಹೆಚ್ಚು ಶಿಕ್ಷಣ ಕೊಡಿಸಿದರೆ ವಿವಾಹ ಮಾಡಿಕೊಡಲು ತೊಂದರೆಯಾಗುತ್ತದೆಯೇ ಎಂಬ ಪ್ರಶ್ನೆಯನ್ನು ಕೇಳಿದಾಗ ಶೇಕಡ ೭೪.೬೭ರಷ್ಟು ಇಲ್ಲ ಎಂದೂ, ಶೇಕಡ ೨೨.೦೦ರಷ್ಟು ಪೋಷಕರು ಕಷ್ಟವಾಗುತ್ತದೆ ಎಂದೂ ಹೇಳಿದ್ದಾರೆ. ಶೇಕಡ ೩.೩೩ರಷ್ಟು ಯಾವುದೇ ಉತ್ತರ ನೀಡಿಲ್ಲ. ಅದೇ ರೀತಿ ಹೀರಾ ಗ್ರಾಮ ಪಂಚಾಯಿತಿಯಲ್ಲಿ ಹೆಣ್ಣುಮಕ್ಕಳಿಗೆ ಹೆಚ್ಚು ಶಿಕ್ಷಣ ಕೊಡಿಸಿದರೆ ವಿವಾಹ ಮಾಡಿಕೊಡಲು ತೊಂದರೆಯಾಗುತ್ತದೆಯೇ ಎಂದೂ ಕೇಳಿದಾಗ ಶೇಕಡ ೫೬.೦೦ರಷ್ಟು ಕಷ್ಟವಾಗುತ್ತದೆ ಎಂದು ಹೇಳಿದ್ದಾರೆ. ಶೇಕಡ ೨೭.೬೭ರಷ್ಟು ಪೋಷಕರು ಸರಳ ಎಂದಿದ್ದಾರೆ. ಶೇಕಡ ೧೬.೩೩ರಷ್ಟು ಯಾವುದೇ ಉತ್ತರ ನೀಡಿಲ್ಲ. ಯಾವ ಕಾರಣಕ್ಕೆ ಹೆಣ್ಣುಮಕ್ಕಳಿಗೆ ಹೆಚ್ಚು ಶಿಕ್ಷಣ ಕೊಡಿಸಿದರೆ ವಿವಾಹ ಮಾಡಿಕೊಡಲು ತೊಂದರೆಯಾಗುತ್ತದೆ ಎಂದು ಕೇಳಿದಾಗ ಶೇಕಡ ೨೮.೬೬ರಷ್ಟು ಪೋಷಕರು ವರದಕ್ಷಿಣೆ ಹೊರೆ ಹೆಚ್ಚಾಗುತ್ತದೆ ಎಂದೂ, ಶೇಕಡ ೧೫.೦೦ರಷ್ಟು ವಿವಾಹದ ವೆಚ್ಚ ಹೆಚ್ಚಾಗುತ್ತದೆ ಎಂದೂ ಹೇಳಿದ್ದಾರೆ. ಇದಲ್ಲದೆ ಇತರೆ ಬೇರೆ ಕಾರಣಗಳನ್ನು ನೀಡಿದ್ದಾರೆ. ಅವುಗಳಲ್ಲಿ ವರ ಲಭ್ಯತೆಯ ಸಮಸ್ಯೆ, ಸಂಪ್ರದಾಯ ಇತರೆ ಕಾರಣಗಳಾಗಿವೆ. ಅದೇ ರೀತಿ ಬಳದರೆ ಗ್ರಾಮ ಪಂಚಾಯಿತಿಯಲ್ಲಿ ಹೆಣ್ಣುಮಕ್ಕಳಿಗೆ ಹೆಚ್ಚು ಶಿಕ್ಷಣ ಕೊಡಿಸಿದರೆ ವಿವಾಹ ಮಾಡಿಕೊಡಲು ಯಾವ ಕಾರಣಕ್ಕಾಗಿ ತೊಂದರೆಯಾಗಿದೆ ಎಂದು ಕೇಳಿದಾಗ ಬೆರಳಣಿಕೆಯಷ್ಟು ಅಂದರೆ ಶೇಕಡ ೯.೬ರಷ್ಟು ವರದಕ್ಷಿಣೆ ಹೊರೆ ಹೆಚ್ಚಾಗುತ್ತದೆ ಎಂದು ಹೇಳುತ್ತಾರೆ. ಶೇಕಡ ೯.೦೦ರಷ್ಟು ಪೋಷಕರು ವಿವಾಹದ ವೆಚ್ಚ ಹೆಚ್ಚಾಗುತ್ತದೆ ಎನ್ನುತ್ತಾರೆ. ಶೇಕಡ ೫.೬೬ರಷ್ಟು ವರ ಲಭ್ಯತೆಯ ಸಮಸ್ಯೆ ಎಂದು, ಶೇಕಡ ೨.೦೦ರಷ್ಟು ಪೋಷಕರು ಸಂಪ್ರದಾಯ ಮತ್ತು ಇತರೆ ಕಾರಣ ಎಂದು ಉತ್ತರಿಸಿದ್ದಾರೆ.

ಹೀರಾ ಗ್ರಾಮ ಪಂಚಾಯಿತಿಗಿಂತ ಬಳದರೆ ಗ್ರಾಮ ಪಂಚಾಯಿತಿಯಲ್ಲಿ ಹೆಣ್ಣುಮಕ್ಕಳಿಗೆ ಹೆಚ್ಚು ಶಿಕ್ಷಣ ಕೊಡಿಸಿದರೆ ವಿವಾಹ ಮಾಡಿಕೊಡಲು ಸರಳ ಎಂದು ಉತ್ತರಿಸಿದ್ದಾರೆ. ಹೇಗೆ ಎಂದು ಮರುಪ್ರಶ್ನೆ ಕೇಳಿದಾಗ ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸಿದಷ್ಟು ಹೆಚ್ಚು ತಿಳುವಳಿಕೆ ಮತ್ತು ಮೀಸಲಾತಿಯ ಆಧಾರದಲ್ಲಿ ಉದ್ಯೋಗಾವಕಾಶಗಳು ದೊರೆಯುವುದರಿಂದ ಅವಳ ಮದುವೆಯ ಸಂದರ್ಭದಲ್ಲಿ ಅಷ್ಟೇನು ಕಷ್ಟವಾಗುವುದಿಲ್ಲ ಎಂದಿದ್ದಾರೆ. ಈ ಎರಡು ಗ್ರಾಮ ಪಂಚಾಯಿತಿಗಳಿಗೆ ಭೇಟಿ ನೀಡಿ ಕ್ಷೇತ್ರಾಧ್ಯಯನದ ಮೂಲಕ ಸಮೀಕ್ಷೆ ಮಾಡಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಕುಟುಂಬದ ವಿವರಗಳನ್ನು ಪಡೆದುಕೊಳ್ಳುವಾಗ ಕುಟುಂಬದ ಒಟ್ಟು ಸದಸ್ಯರ ಸಂಖ್ಯೆ, ವಿಭಕ್ತ ಕುಟುಂಬ, ಅವಿಭಕ್ತ ಕುಟುಂಬಗಳ ಜೊತೆಗೆ ಕುಟುಂಬದ ವೃತ್ತಿ, ಆದಾಯ, ಶಿಕ್ಷಣ, ಸದಸ್ಯರ ವಯಸ್ಸು ಇತ್ಯಾದಿ ವಿವರಗಳನ್ನು ಪಡೆಯಲಾಗಿದೆ.

ಕುಟುಂಬಗಳ ವಿವರ : ಆಯ್ದುಕೊಂಡ ಎರಡು ಗ್ರಾಮ ಪಂಚಾಯಿತಿಗಳಲ್ಲಿ ಒಟ್ಟು ೪೦೦ ಕುಟುಂಬಗಳ ಸಮೀಕ್ಷೆ ಮಾಡಲಾಗಿದೆ. ಶೈಕ್ಷಣಿಕವಾಗಿ ಹಿಂದುಳಿದಿರುವ ಪ್ರದೇಶವಾದ ಮಾನವಿ

ತಾಲ್ಲೂಕಿನ ಹೀರಾ ಗ್ರಾಮ ಪಂಚಾಯಿತಿಯಿಂದ ಒಟ್ಟು ೨೦೦ ಕುಟುಂಬಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಶೈಕ್ಷಣಿಕವಾಗಿ ಮುಂದುವರಿಯುತ್ತಿರುವ ಚನ್ನರಾಯಪಟ್ಟಣ ತಾಲ್ಲೂಕಿನ ಬಳದರೆ ಗ್ರಾಮ ಪಂಚಾಯಿತಿಯಿಂದ ೨೦೦ ಕುಟುಂಬಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಪ್ರತಿಯೊಂದು ಗ್ರಾಮ ಪಂಚಾಯಿತಿಯಿಂದ ಪರಿಶಿಷ್ಟ ಜಾತಿಗೆ ಸೇರಿದ ೫೦ ಕುಟುಂಬಗಳನ್ನು, ಪರಿಶಿಷ್ಟ ಪಂಗಡಕ್ಕೆ ಸೇರಿದ ೭೫ ಕುಟುಂಬಗಳನ್ನು, ಮುಸ್ಲಿಂ ಸಮುದಾಯಕ್ಕೆ ಸೇರಿದ ೨೫ ಕುಟುಂಬಗಳನ್ನು ಮತ್ತು ಇತರೆ ಸಮುದಾಯಕ್ಕೆ ಸೇರಿದ ೫೦ ಕುಟುಂಬಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಕೋಷ್ಟಕ-೪.೪ಎ

ವಿವಿಧ ಸಾಮಾಜಿಕ ಗುಂಪುಗಳ ವಿವರ

ಕ್ರಸಂ	ಗ್ರಾಮಪಂಚಾಯಿತಿ ಹೆಸರು	ಕುಟುಂಬಗಳ ಸಂಖ್ಯೆ	ಕುಟುಂಬಗಳ ವರ್ಗ			
			ಪ.ಜಾತಿ	ಪ.ಪಂಗಡ	ಮುಸ್ಲಿಂ	ಇತರೆ
೦೧	ಬಳದರೆ	೨೦೦	೫೦	೭೫	೨೫	೫೦
೦೨	ಹೀರಾ	೨೦೦	೫೦	೭೫	೨೫	೫೦
ಒಟ್ಟು		**೪೦೦**	**೧೦೦**	**೧೫೦**	**೫೦**	**೧೦೦**

ಮೂಲ : ಕ್ಷೇತ್ರಕಾರ್ಯದ ಮಾಹಿತಿ.

ಕುಟುಂಬದ ವಿವಿಧ ವರ್ಗಗಳ ದತ್ತಾಂಶ ವಿವರವು ರೇಖಾಚಿತ್ರದಲ್ಲಿ ಈ ಮೇಲಿನಂತೆ ಕಂಡುಬಂದಿದೆ.

ಕೋಷ್ಟಕ-೪.೪ಬಿ

ಅಧ್ಯಯನಕ್ಕೊಳಪಡಿಸಿದ ಕುಟುಂಬಗಳ ಸದಸ್ಯರ ಮಾಹಿತಿ

ಕ್ರಸಂ	ಗ್ರಾಮಪಂಚಾಯತಿ ಹೆಸರು	ಕುಟುಂಬಗಳ ಸಂಖ್ಯೆ	ಒಟ್ಟು ಕುಟುಂಬದಲ್ಲಿನ ಸದಸ್ಯರ ಸಂಖ್ಯೆ		
			ಗಂಡಸರು	ಹೆಂಗಸರು	ಒಟ್ಟು
೦೧	ಬಳದರೆ	೨೦೦	೫೧೮	೬೦೩	೧೧೨೧
೦೨	ಹೀರಾ	೨೦೦	೬೭೦	೭೦೮	೧೩೭೮
ಒಟ್ಟು		**೪೦೦**	**೧೧೮೮**	**೧೩೧೧**	**೨೪೯೯**

ಮೂಲ : ಕ್ಷೇತ್ರಕಾರ್ಯದ ಮಾಹಿತಿ.

ಪ್ರಾಥಮಿಕ ಮೂಲಗಳ ಪ್ರಕಾರ ಎರಡು ಗ್ರಾಮ ಪಂಚಾಯಿತಿಗಳ ೪೦೦ ಕುಟುಂಬಗಳಲ್ಲಿ ಗಂಡಸರು ೧೧೮೮, ಹೆಂಗಸರು ೧೩೧೧, ಒಟ್ಟು ೨೪೯೯ ಕುಟುಂಬದ ಸದಸ್ಯರಿದ್ದಾರೆ. ಅತಿಹೆಚ್ಚಿನ ಸದಸ್ಯರನ್ನು ಹೊಂದಿದ ಹೀರಾ ಗ್ರಾಮ ಪಂಚಾಯಿತಿಯಲ್ಲಿ ೨೦೦ ಕುಟುಂಬಗಳಿಗೆ ೧೩೭೮ ಮಂದಿ ಸದಸ್ಯರಿದ್ದಾರೆ. ಇದರಲ್ಲಿ ಗಂಡಸರು ೬೭೦, ಹೆಂಗಸರು ೭೦೮ರಷ್ಟು ಇದ್ದಾರೆ. ಅತ್ಯಂತ ಕಡಿಮೆ

ಸಂಖ್ಯೆಯನ್ನು ಹೊಂದಿದ ಗ್ರಾಮ ಪಂಚಾಯಿತಿ ಬಳದರೆ. ಈ ಪಂಚಾಯಿತಿಯ ಕುಟುಂಬಗಳ ಸಂಖ್ಯೆ ೨೦೦, ಇದರಲ್ಲಿ ಗಂಡಸರು ೫೧೮, ಹೆಂಗಸರು ೬೦೩, ಒಟ್ಟು ೧೧೨೧ರಷ್ಟು ಕುಟುಂಬದ ಸದಸ್ಯರಿದ್ದಾರೆ. ಜನಸಂಖ್ಯೆಯಲ್ಲಿ ಒಂದು ಗ್ರಾಮ ಪಂಚಾಯಿತಿಯಿಂದ ಮತ್ತೊಂದು ಗ್ರಾಮ ಪಂಚಾಯಿತಿಗೆ ವ್ಯತ್ಯಾಸವಿರುವುದು ಕಂಡುಬರುತ್ತದೆ. ಎರಡು ಗ್ರಾಮ ಪಂಚಾಯಿತಿಗಳಲ್ಲಿ ಗಂಡಸರಿಗಿಂತ ಹೆಂಗಸರ ಸಂಖ್ಯೆಯಲ್ಲಿ ಹೆಚ್ಚಳವಾಗಿರುವುದು ಕಂಡುಬಂದಿದೆ.

ಎರಡೂ ಗ್ರಾಮ ಪಂಚಾಯಿತಿಗಳ ಕುಟುಂಬದ ಸದಸ್ಯರ ಸಂಖ್ಯೆಯನ್ನು ಮುಂದಿನ ರೇಖಾ ಚಿತ್ರದಲ್ಲಿ ಕಾಣಬಹುದು. ರೇಖಾಚಿತ್ರದ ವಿಶ್ಲೇಷಣೆಯಿಂದ ತಿಳಿದುಬರುವ ಅಂಶವೇನೆಂದರೆ ಎರಡು ಗ್ರಾಮ ಪಂಚಾಯಿತಿಗಳಲ್ಲಿ ಹೆಂಗಸರು ಹೆಚ್ಚು ಇರುವುದು ಕಂಡುಬರುತ್ತದೆ. ಶಾಲೆಗೆ ದಾಖಲಾಗಿರುವ ಹಾಗೂ ದಾಖಲಾಗದಿರುವ ಬಾಲಕ, ಬಾಲಕಿಯರ ಪರಿಮಾಣದ ಬಗ್ಗೆ ವಿಶ್ಲೇಷಿಸಲು ಇದು ನೆರವಾಗುತ್ತದೆ. ಎರಡು ಗ್ರಾಮ ಪಂಚಾಯಿತಿಗಳ ಕುಟುಂಬಗಳ ವಿವರಕ್ಕೆ ಸಂಬಂಧಿಸಿದಂತೆ ಮತ್ತು ಅವು ಯಾವ ಯಾವ ಗುಂಪುಗಳಾಗಿ ಜೀವನ ನಿರ್ವಹಿಸುತ್ತಿವೆ ಎಂದು ದತ್ತಾಂಶದಿಂದ ತಿಳಿಯಬಹುದು.

ಕುಟುಂಬದ ಸ್ವರೂಪ : ಅಧ್ಯಯನ ಮಾಡಿದ ಗ್ರಾಮ ಪಂಚಾಯಿತಿಗಳ ಸಾಮಾಜಿಕ ಚಿತ್ರಣ ಪಡೆಯಲು ಅಲ್ಲಿನ ಕುಟುಂಬಗಳ ಅರಿವು (ತಿಳುವಳಿಕೆ) ಅಗತ್ಯ. ಅಲ್ಲದೆ, ಮಕ್ಕಳ ಶೈಕ್ಷಣಿಕ ಪ್ರಗತಿಯ ಮೇಲೆ ಕುಟುಂಬದ ರಚನೆಯ ಪ್ರಭಾವವಿರುತ್ತದೆ. ಈ ಹಿನ್ನೆಲೆಯಲ್ಲಿ ಕುಟುಂಬಗಳ ವಿಶ್ಲೇಷಣೆ ಮಾಡಲಾಗಿದೆ. ಕುಟುಂಬವು ಒಂದು ಸಾರ್ವತ್ರಿಕವಾದ ಸಂಸ್ಥೆ ಎಂಬುದು ತಿಳಿದ ಸಂಗತಿ. ಸಮಾಜವು ಕುಟುಂಬದ ಅವಿಭಾಜ್ಯ ಅಂಗ. ಕುಟುಂಬವಿಲ್ಲದೇ ಸಮಾಜವಿಲ್ಲ. ಮಾನವ ಜೀವನದ ತಳಹದಿಯೂ ಕೂಡ ಕುಟುಂಬವೇ ಆಗಿದೆ. ಮಗುವಿನ ಪ್ರಪ್ರಥಮ ಸಾಮಾಜಿಕ ಪರಿಸರ ಹಾಗೂ ಸಮೂಹ, ನವಜಾತ ಶಿಶುವಿಗೆ ಸಂಸ್ಕಾರ ನೀಡುವುದು, ಶಿಕ್ಷಣ ಕೊಡುವುದು, ಅವನನ್ನು ಸಮಾಜದ ಜವಾಬ್ದಾರಿಯುತ ಪ್ರಜೆಯನ್ನಾಗಿ ಮಾಡುವುದು ಕುಟುಂಬದ ಕಾರ್ಯವಾಗಿದೆ.

"ನಮ್ಮ ಸಾಮಾಜಿಕ ಜೀವನಕ್ಕೆ ಒಂದು ನೆಲೆಯನ್ನು ಮತ್ತು ಸ್ಥಿರತೆಯನ್ನು ಕೊಡುವುದು ಕುಟುಂಬವೇ, ಉಳಿದೆಲ್ಲಾ ಸಂಸ್ಥೆಗಳಿಗಿಂತ ಅದು ಹೆಚ್ಚು ಶಾಶ್ವತವೂ ಪ್ರಭಾವಿಯೂ ಆಗಿದೆ. ಅದು ನಮ್ಮ ವೈಯಕ್ತಿಕ ಜೀವನಕ್ಕೆ ಸಂಬಂಧಿಸಿದ್ದು. ನಾವೆಲ್ಲರೂ ಒಂದಲ್ಲ ಒಂದು ಕುಟುಂಬಕ್ಕೆ ಸೇರಿದವರಾಗಿದ್ದು, ನಮ್ಮ ಜೀವಿತದ ಬಹುಪಾಲು ಜೀವನವನ್ನು ಕುಟುಂಬಗಳಲ್ಲಿಯೇ ಕಳೆಯುವವರಿದ್ದೇವೆ" ಎಂಬ ಸಮಾಜಶಾಸ್ತ್ರಜ್ಞರ ವ್ಯಾಖ್ಯಾನವು ಕುಟುಂಬದ ಪರಿಕಲ್ಪನೆಯನ್ನು ಪರಿಚಯಿಸುತ್ತದೆ. ಕುಟುಂಬದ ಅರ್ಥವನ್ನು ವಿವಿಧ ಸಮಾಜಶಾಸ್ತ್ರಜ್ಞರು ತಮ್ಮದೇ ಆದ ವ್ಯಾಖ್ಯಾನದ ಮೂಲಕ ವಿವರಿಸಿದ್ದಾರೆ.

"ರಕ್ತ ಸಂಬಂಧಿಗಳಿಂದ ಕೂಡಿದ ಮತ್ತು ಕನಿಷ್ಠ ಎರಡು ತಲೆಮಾರುಗಳನ್ನು ಒಳಗೊಂಡಿರುವ ಅತಿಸೂಕ್ಷ್ಮ ಸಾಮಾಜಿಕ ಸಂಘಟನೆಯೇ ಕುಟುಂಬ" (ಸಮ್ನರ್ ಮತ್ತು ಕೆಲ್ಲರ್). "ಗಂಡ/ಹೆಂಡತಿ ಮತ್ತು ಮಕ್ಕಳುಗಳನ್ನೊಳಗೊಂಡಿರುವ ಜೈವಿಕ, ಸಾಮಾಜಿಕ ಘಟಕವೇ ಕುಟುಂಬ" (ಇಲಿಯೆಟ್

ಮತ್ತು ಮೆರಿಲ್). ಮೇಲಿನ ವ್ಯಾಖ್ಯಾನಗಳ ಹಿನ್ನೆಲೆಯಲ್ಲಿ ಸಮೀಕ್ಷಿಸಿದ ಕುಟುಂಬಗಳ ವಿವರಗಳನ್ನು ವಿಶ್ಲೇಷಿಸಲಾಗಿದೆ.

ಕೋಷ್ಟಕ-೪.೪ಎ

ಅಧ್ಯಯನಕ್ಕೊಳಪಡಿಸಿದ ಕುಟುಂಬದ ಮಾದರಿ

ಕ್ರಸಂ	ಗ್ರಾಮಪಂಚಾಯತಿ ಹೆಸರು	ಕುಟುಂಬಗಳ ಸಂಖ್ಯೆ	ಕುಟುಂಬದ ವಿವರ	
			ವಿಭಕ್ತ	ಅವಿಭಕ್ತ
೦೧	ಬಳದರೆ	೨೦೦	೧೮೭	೧೩
೦೨	ಹೀರಾ	೨೦೦	೧೬೨	೨೮
ಒಟ್ಟು		೪೦೦	೩೪೯	೫೧

ಮೂಲ : ಕ್ಷೇತ್ರಕಾರ್ಯದ ಮಾಹಿತಿ.

ಒಟ್ಟು ಎರಡು ಗ್ರಾಮ ಪಂಚಾಯಿತಿಗಳ ೪೦೦ ಕುಟುಂಬಗಳಲ್ಲಿ ವಿಭಕ್ತ ಕುಟುಂಬ ಶೇಕಡ ೮೪.೧(೩೪೯)ರಷ್ಟಿದೆ. ಒಟ್ಟಾರೆಯಾಗಿ ಹೇಳುವುದಾದರೆ, ಅವಿಭಕ್ತ ಕುಟುಂಬ ಕಣ್ಮರೆಯಾಗುವುದಕ್ಕೆ ನಗರೀಕರಣ, ಯಾಂತ್ರಿಕ ಜೀವನ ಪದ್ಧತಿಗಳು ಇದಕ್ಕೆ ಪ್ರಮುಖ ಕಾರಣವಾಗಿವೆ ಎಂದು ಹೇಳಬಹುದು. ಬಳದರೆ ಗ್ರಾಮದಲ್ಲಿ ಶೇಕಡ ೮೯.೦೨ ವಿಭಕ್ತ ಕುಟುಂಬವಿದ್ದರೆ, ಅವಿಭಕ್ತ ಕುಟುಂಬ ಶೇಕಡ ೧೨.೯೨ರಷ್ಟು ಇದೆ. ಹೀರಾ ಗ್ರಾಮದಲ್ಲಿ ಶೇಕಡ ೮೦.೦೨ರಷ್ಟು ವಿಭಕ್ತ ಕುಟುಂಬವಿದ್ದರೆ, ಅವಿಭಕ್ತ ಕುಟುಂಬ ಶೇಕಡ ೧೯.೯೮ರಷ್ಟು ಇದೆ.

ಕೋಷ್ಟಕ-೪.೪ಬಿ

ಅಧ್ಯಯನಕ್ಕೊಳಪಡಿಸಿದ ಕುಟುಂಬದ ಸದಸ್ಯರ ಶೈಕ್ಷಣಿಕ ವಿವರ

ಕ್ರಸಂ	ಗ್ರಾಮಪಂಚಾಯತಿ ನೆಸರು	ಕುಟುಂಬದ ಸದಸ್ಯರ ಸಂಖ್ಯೆ			ಅನಕ್ಷರಸ್ಥರು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೦೧	ಬಳದರೆ	೫೧೮	೬೦೩	೧೧೨೧	೧೦೨	೧೨೪	೨೨೬
೦೨	ಹೀರಾ	೬೭೦	೭೦೮	೧೩೭೮	೩೦೯	೪೮೧	೭೯೦
	ಒಟ್ಟು	೧೧೮೮	೧೩೧೧	೨೪೯೯	೪೧೧	೬೦೫	೧೦೧೬

ಮೂಲ : ಕ್ಷೇತ್ರಕಾರ್ಯದ ಮಾಹಿತಿ.

ಸಾಕ್ಷರತೆಗೆ ಸಂಬಂಧಿಸಿದಂತೆ ಈಗಾಗಲೇ ಹಿಂದಿನ ಅಧ್ಯಾಯಗಳಲ್ಲಿ ಚರ್ಚಿಸಲಾಗಿದೆ. ಎರಡು ಗ್ರಾಮ ಪಂಚಾಯಿತಿಗಳಲ್ಲಿನ ಎಲ್ಲಾ ಕುಟುಂಬದ ಸದಸ್ಯರ (ಶಾಲೆಗೆ ಹೋಗುವ ಮಕ್ಕಳನ್ನು ಸೇರಿಸಿಕೊಂಡು) ಶೈಕ್ಷಣಿಕ ವಿವರವನ್ನು ಸಂಗ್ರಹಿಸಲಾಗಿದೆ. ಆ ಪ್ರಕಾರ ಎರಡು ಗ್ರಾಮ ಪಂಚಾಯಿತಿಗಳಲ್ಲಿ

ಗಂಡಸರು ಮತ್ತು ಹೆಂಗಸರಲ್ಲಿ ಅಕ್ಷರಸ್ಥರು ಮತ್ತು ಅನಕ್ಷರಸ್ಥರ ವಿವರ ಸಂಗ್ರಹಿಸಲಾಗಿದೆ. ಲಭ್ಯವಿರುವ ದತ್ತಾಂಶದ ಪ್ರಕಾರ ೪೦೦ ಕುಟುಂಬಗಳಲ್ಲಿ ೨೪೯೯ ಸದಸ್ಯರಿದ್ದಾರೆ. ಇದರಲ್ಲಿ ೧೧೮೮ ಗಂಡಸರು ೧೩೧೧ ಹೆಂಸಗರು, ಒಟ್ಟು ೧೦೧೬ ಜನರು ಅನಕ್ಷರಸ್ಥರಿದ್ದಾರೆ. ಒಟ್ಟಾರೆಯಾಗಿ ಈ ಪ್ರಮಾಣ ಶೇಕಡ ೩೯.೮೮ರಷ್ಟಿದೆ. ಇದರಲ್ಲಿ ಮಹಿಳಾ ಸಾಕ್ಷರತಾ ಪ್ರಮಾಣ ಗಂಡಸರಿಗಿಂತಲೂ ಕಡಿಮೆ ಇರುವುದು ಕಂಡುಬರುತ್ತದೆ. ಉಳಿದಂತೆ ೧೧೮೮ ಗಂಡಸರು, ೧೩೧೧ ಹೆಂಗಸರು, ಒಟ್ಟು ೨೪೯೯, ಇವರಲ್ಲಿ ೧೪೮೩ ಅಕ್ಷರಸ್ಥರು ಇರುವುದು ಕಂಡುಬಂದಿದೆ. ಇವರೆಲ್ಲರೂ ವಿವಿಧ ಹಂತಗಳಲ್ಲಿ ಶಿಕ್ಷಣ ಪಡೆದವರಾಗಿದ್ದಾರೆ.

ಯಾವುದೇ ಪ್ರದೇಶದಲ್ಲಿ ಅಕ್ಷರಸ್ಥರು ಅಥವಾ ಶಿಕ್ಷಣ ಪಡೆದವರ ಸಂಖ್ಯೆ ಎಲ್ಲಿ ಅಧಿಕವಿರುತ್ತದೆಯೋ ಅಂತಹ ಪ್ರದೇಶಗಳಲ್ಲಿ ಅಭಿವೃದ್ಧಿ ಯೋಜನೆಗಳ ಕುರಿತು ತಿಳುವಳಿಕೆ ಹೆಚ್ಚು ಇರುತ್ತದೆ ಎಂಬ ಮಾತುಗಳು ಕೇಳಿಬರುತ್ತವೆ. ಎಲ್ಲಿ ಮಹಿಳಾ ಸಾಕ್ಷರತಾ ಪ್ರಮಾಣವು ಹೆಚ್ಚು ಇದೆಯೋ ಅಲ್ಲೆಲ್ಲಾ ಶಿಕ್ಷಣದ ಬಗ್ಗೆ ಒಲವು ಹೆಚ್ಚು ಎಂಬ ನಂಬಿಕೆ ಇದೆ. ಅಂತಹ ಕಡೆ ಮಹಿಳೆಯರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಿ ಕೊಡುವ ಆಸಕ್ತಿಯನ್ನು ಹೊಂದಿದವರಾಗಿರುತ್ತಾರೆ. ಎಲ್ಲಿ ಮಹಿಳೆಯರ ಸಾಕ್ಷರತೆ ಪ್ರಮಾಣ ಕಡಿಮೆ ಇದೆಯೋ ಅಂತಹ ಕಡೆ ಶಿಕ್ಷಣದ ಬಗ್ಗೆ ಅಷ್ಟಾಗಿ ಕಾಳಜಿ ಕಂಡುಬರುವುದಿಲ್ಲ. ಮೇಲಿನ ಕುಟುಂಬಗಳ ಸಂಖ್ಯೆ, ಶಿಕ್ಷಣ ಪಡೆದವರ ಮಾಹಿತಿಯ ವಿಶ್ಲೇಷಣೆಯೂ ಮುಂದಿನ ವಿಷಯಗಳ ವಿಶ್ಲೇಷಣೆಗೆ ಕೊಂಡಿಯಾಗಿರುತ್ತದೆ.

೪.೫ ಸಾಮಾಜಿಕ ಆಯಾಮಗಳು

ಇಲ್ಲಿಯವರೆಗೆ ಪೋಷಕರ ಶಿಕ್ಷಣದ ದೃಷ್ಟಿಕೋನ ಮತ್ತು ಪೋಷಕರ ಇನ್ನಿತರ ದೃಷ್ಟಿಕೋನ ಕುರಿತು ಚರ್ಚಿಸಲಾಗಿದೆ. ಈವರೆಗೆ ಚರ್ಚಿಸಿದ ವಿಷಯವೇನಿದ್ದರೂ ವಾಸ್ತವದಲ್ಲಿ ಪೋಷಕರ ಮನೋಭಾವನೆಯು ಹೆಚ್ಚಾಗಿ (ಇಂಟರ್ ಡಿಪೆಂಡೆಂಟ್) ಒಂದು ಮತ್ತೊಂದನ್ನು ಅವಲಂಬಿಸಿರುವ ಸಾಧ್ಯತೆಗಳೇ ಹೆಚ್ಚು ಎಂದು ತೋರಿಸುತ್ತದೆ. ಶಿಕ್ಷಣ ಮೌಲ್ಯ ಕುರಿತು ಒಬ್ಬ ವ್ಯಕ್ತಿಗೆ ಇರುವ ಚಿಂತನೆ ಅಥವಾ ಮನೋಭಾವನೆಯು ಮತ್ತೊಬ್ಬರಿಂದ ಪ್ರಭಾವಿತವಾದದ್ದಾಗಿರಬಹುದು. ಈ ರೀತಿಯ ಪ್ರಭಾವಗಳು ಒಂದೇ ಕುಟುಂಬದಲ್ಲಿ ಅವನ/ಅವಳ ಮೇಲೆ ಬೀರಬಹುದಾದ ಪ್ರಭಾವಗಳು ಸಮುದಾಯದಿಂದಲೇ ಉಂಟಾಗಿರಬಹುದು ಅಥವಾ ನೆರೆ-ಹೊರೆಯವರ ಪ್ರಭಾವಕ್ಕೆ ಒಳಗಾಗಿರಬಹುದು. ಈ ದೃಷ್ಟಿಯಿಂದ ಶಿಕ್ಷಣಕ್ಕೆ ಇರುವ ಪ್ರೇರಣಾ ಶಕ್ತಿಯು ಪ್ರಮುಖವಾಗಿ ಸಾಮಾಜಿಕ ಆಯಾಮ ಹೊಂದಿದೆ ಎಂದು ಹೇಳಬಹುದು.

ಇದನ್ನು ಉದಾಹರಣೆಗಳ ಜೊತೆಗೆ ವಿವರಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಕೆಲವು ಪೋಷಕರು ನಮ್ಮ ಜಾತಿಯಲ್ಲಿ ಹೆಣ್ಣುಮಕ್ಕಳನ್ನು ಓದಿಸುವ ಪರಿಪಾಠವಿಲ್ಲ ಎಂದು ಬಹಳ ಸರಳವಾಗಿ ಹೇಳುತ್ತಾರೆ. ಇದನ್ನು ಹೀಗೂ ಹೇಳಬಹುದು. ಅವರು ಇದನ್ನು ಒಂದು ಸಾಮಾಜಿಕ ನೀತಿ ಎಂದು ನೋಡಲು

ಮತ್ತು ಅದನ್ನು ಪಾಲಿಸಲು ಪ್ರಯತ್ನಿಸುತ್ತಿದ್ದಾರೆ. ಕೆಲವರು ಇತರ ಎಲ್ಲರ ಮನೆಗಳಲ್ಲಿ ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸುತ್ತಿದ್ದಾರೆ. ಹೀಗಾಗಿ ನಾವು ನಮ್ಮ ಹೆಣ್ಣುಮಕ್ಕಳನ್ನು ಕೂಡ ಶಾಲೆಗೆ ಕಳುಹಿಸುತ್ತಿದ್ದೇವೆ ಎಂದು ಹೇಳುತ್ತಾರೆ. ಈ ಎಲ್ಲಾ ಹೇಳಿಕೆಗಳಲ್ಲಿ ಕಂಡುಬರುವ ಅಂಶವೆಂದರೆ ಶಿಕ್ಷಣದ ಬಗ್ಗೆ ಇರುವ ಸಾಮಾಜಿಕ ಆಯಾಮಗಳು ಸಕಾರಾತ್ಮಕ ಮತ್ತು ನಕಾರಾತ್ಮಕ ಪ್ರಭಾವವನ್ನು ಹೊಂದಿರುವುದು ಸ್ಪಷ್ಟವಾಗುತ್ತದೆ. ಈ ಎರಡು ಅಂಶಗಳು ಶಿಕ್ಷಣದ ಮೇಲೆ ತಮ್ಮದೇ ಪ್ರಭಾವವನ್ನು ಬೀರುವ ಮತ್ತು ಅದನ್ನು ಹೊರಹಾಕುವ ಸಾಧ್ಯತೆ ಇದೆ ಎಂಬುದನ್ನು ಒತ್ತಿ ಹೇಳುತ್ತೇವೆ.

ಹೆಣ್ಣುಮಗುವಿನ ಶಿಕ್ಷಣ ಪ್ರಮುಖವೇ ಎಂಬ ಪ್ರಶ್ನೆಗೆ, ಒಬ್ಬ ದಲಿತ ಮಹಿಳೆಯು ಮತ್ತೊಂದು ಆಸಕ್ತಿಯುತ ವಿಷಯವನ್ನು ನಮ್ಮ ಮುಂದೆ ವಿವರಿಸಿದರು. ಅದು ನನಗೆ ಹೇಗೆ ಗೊತ್ತಾಗಬೇಕು? ನಾನು ನನ್ನ ಜೀವನದಲ್ಲಿ ಇದುವರೆಗೆ ವಿದ್ಯಾವಂತರನ್ನು ನೋಡಿಯೇ ಇಲ್ಲ! ಎಂದು ಹೇಳುತ್ತಾರೆ. ಇವರ ಅಭಿಪ್ರಾಯವು ಸಕಾರಾತ್ಮಕ ಮತ್ತು ನಕಾರಾತ್ಮಕ ಎರಡು ಅಂಶಗಳನ್ನು ಒಳಗೊಂಡಿದೆ. ಇದು ಜನರು ಶಿಕ್ಷಣದ ಮೌಲ್ಯವನ್ನು ಅರ್ಥಮಾಡಿಕೊಂಡಿರುವ ರೀತಿಯನ್ನು ತಿಳಿಸುವ ಕ್ರಮವಾಗಿದೆ. ವಿದ್ಯಾವಂತರು ಮತ್ತು ಅವಿದ್ಯಾವಂತರ ನಡವಳಿಕೆಯ ಪ್ರವೃತ್ತಿಯಲ್ಲಿ ಯಾವುದೇ ವ್ಯತ್ಯಾಸಗಳನ್ನು ಗುರುತಿಸಲು ಸಾಧ್ಯವಾಗುತ್ತಿಲ್ಲ ಎಂಬುದನ್ನು ತಿಳಿಸುತ್ತದೆ. ರೋಲ್ ಮಾಡಲ್‌ನ್ನು ಉಪೇಕ್ಷೆ ಮಾಡಿ ಹೇಳುವುದು ಕೂಡ ರೋಲ್ ಮಾಡಲ್‌ನ ಪ್ರಭಾವಕ್ಕೆ ಒಳಪಟ್ಟಿರುತ್ತದೆ. ಅಧ್ಯಯನ ಸಂದರ್ಭದಲ್ಲಿ ನಾವು ಕೆಲವು ಗ್ರಾಮಗಳಲ್ಲಿ ಗಮನಿಸಿರುವಂತೆ, ಅಂಗನವಾಡಿಗಳನ್ನು ನಡೆಸುತ್ತಿರುವ ಮಹಿಳೆಯರನ್ನು ನೋಡಿ, ಕೆಲವು ಮಹಿಳೆಯರಿಗೆ ಅದರಲ್ಲಿಯೂ ವಿದ್ಯಾವಂತ ಮಹಿಳೆಯರಿಗೆ ಉದ್ಯೋಗ ಅವಕಾಶಗಳು ದೊರಕುತ್ತವೆ ಎಂಬುದು ಕೂಡ ಹೆಣ್ಣುಮಕ್ಕಳ ಶಿಕ್ಷಣದಲ್ಲಿ ಸ್ವಲ್ಪಮಟ್ಟಿನ ಪರಿಣಾಮ ಬೀರಿದೆ. ಈ ರೀತಿ ಸಾಮಾಜಕ ಪ್ರಭಾವಗಳು ಕೂಡ ಯಾವ ಬಗೆಯ ಪಾತ್ರವನ್ನು ವಹಿಸುತ್ತವೆ ಎಂಬುದು ಜನರು ಅದನ್ನು ಹೇಗೆ ನೋಡುತ್ತಾರೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ಉದಾಹರಣೆಗೆ ಹೀಗೆ ಊಹಿಸಿಕೊಳ್ಳೋಣ. ಒಂದು ಕುಗ್ ಗ್ರಾಮದಿಂದ ಬಂದ ಮೇಲುಜಾತಿಗೆ ಸೇರಿದ ಹುಡುಗನಿಗೆ ವಿದ್ಯಾಭ್ಯಾಸದ ನಂತರ ಉತ್ತಮವಾದ ಉದ್ಯೋಗ ದೊರೆಯುತ್ತದೆ ಎಂದು ಇಟ್ಟು ಕೊಳ್ಳೋಣ. ಇದು ಮೇಲುಜಾತಿಗೆ ಸೇರಿದ ಹುಡುಗರಲ್ಲಿ ಶಿಕ್ಷಣದ ಬಗ್ಗೆ ಆಸಕ್ತಿಯನ್ನು ಹೆಚ್ಚು ಮಾಡಬಹುದಾದ ಒಂದು ಘಟನೆ ಎಂದು ಗ್ರಹಿಸಬಹುದು. ಇದೇ ಘಟನೆ ತಳಜಾತಿಗೆ ಸೇರಿದ ಕುಟುಂಬಗಳ ಮೇಲೆ ಯಾವ ತರಹದ ಪರಿಣಾಮ ಬೀರಬಲ್ಲದಾಗಿದೆ ಎಂಬುದು, ಅವರು ಅದೇ ರೀತಿಯ ಉದ್ಯೋಗ ಅವಕಾಶ ನಮಗೆ ದೊರಕುತ್ತದೆ ಎಂಬುದನ್ನು ಹೇಗೆ ಪರಿಭಾವಿಸಿಕೊಳ್ಳುತ್ತಾರೆ ಎಂಬುದನ್ನು ಅವಲಂಬಿಸಿದೆ. ಹಾಗೆಯೇ ಸಮಾಜದಿಂದ ಪಡೆದುಕೊಂಡ ಮೌಲ್ಯಗಳ ಪ್ರಭಾವಕ್ಕೆ ಒಳಪಟ್ಟು ಹೆಣ್ಣುಮಕ್ಕಳ ಶಿಕ್ಷಣ ಪ್ರಮುಖ ಅಥವಾ ಪ್ರಮುಖವಲ್ಲ ಎಂದು ಪರಿಗಣಿಸುವುದು ಕೂಡ ಲಿಂಗಾಧಾರಿತ ಶ್ರಮವಿಭಜನೆಯನ್ನು ಅವಲಂಬಿಸಿದೆ. ಇಂತಹ ಪ್ರಭಾವಗಳು ಯಾವುದೇ ಸಮಾಜದಲ್ಲಿ ಸಣ್ಣ-ಸಣ್ಣ ಜಾತಿ-ವರ್ಗ ಮತ್ತು ಲಿಂಗಾಧಾರಿತವಾಗಿ ವಿಂಗಡಿಸಿ ನೋಡಿದಾಗ ರೋಲ್‌ಮಾಡಲ್‌ನ ಪ್ರಭಾವಗಳು ಕೂಡ ಹೆಚ್ಚು ನಿರ್ದಿಷ್ಟವಾಗಿರುತ್ತವೆ.

ಶಿಕ್ಷಣ ಕುರಿತಂತೆ ಇರುವ ಸಾಮಾಜಿಕ ಆಯಾಮಗಳಿಗೆ ಇರುವ ಮತ್ತೊಂದು ಸಾಕ್ಷಿ ಎಂದರೆ ಕಡ್ಡಾಯ ಶಿಕ್ಷಣಕ್ಕೆ ಕುರಿತು ಸಮೀಕ್ಷೆಗೆ ಒಳಪಡಿಸಿದ ಪೋಷಕರು ನೀಡಿದ ಅಭಿಪ್ರಾಯಗಳು. ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ನೀವು ಒಪ್ಪುತ್ತೀರ ಎಂಬ ಪ್ರಶ್ನೆಗೆ ಅತ್ಯಧಿಕ ಪ್ರಮಾಣದಲ್ಲಿ ಶೇಕಡ ೯೧.೦೦ರಷ್ಟು ಹೌದು ಎಂದು ಉತ್ತರಿಸಿದ್ದಾರೆ. ಉಳಿದ ಶೇಕಡ ೯.೦೦ರಷ್ಟು ಪೋಷಕರು ಇಲ್ಲ ಎಂದು ವಿರೋಧಿಸದೇ ಇದ್ದರೂ ಅದರ ಬಗ್ಗೆ ಯಾವ ನಿರ್ಧಾರಗಳನ್ನು ಹೇಳಲು ಸಾಧ್ಯವಿಲ್ಲ ಎಂದು ಉತ್ತರಿಸಿದ್ದಾರೆ. ಹೀಗೆ ಇದನ್ನು ವಿರೋಧಿಸುವವರು ಕೂಡ ಕೆಲವು ಸಣ್ಣ-ಪುಟ್ಟ ಕಾರಣಗಳಿಗೆ ಸೀಮಿತಗೊಳಿಸಿದ್ದಾರೆ. ಈ ವಿರೋಧವು ಯಾವುದೇ ಬಗೆಯ ತತ್ವ ಆಧಾರಿತವಾದುದ್ದಲ್ಲ. ಕೆಲವರು ನಿರ್ದಿಷ್ಟ ವರ್ಷಗಳವರೆಗೆ ಕಡ್ಡಾಯ ಶಿಕ್ಷಣ ಎಂಬುದನ್ನು ಕಾನೂನು ಮಾಡಿದರೂ ಅದನ್ನು ಆಚರಣೆಗೆ ತರಲು ವಿಫಲವಾಗಿರುವುದರಿಂದ, ಮಕ್ಕಳನ್ನು ಕ್ರಮಬದ್ಧವಾಗಿ ಕೆಲಸ ಮಾಡದೆ ಇರುವ ಶಾಲೆಗಳಿಗೆ ಸುಮ್ಮನೆ ಕಳುಹಿಸುವುದು ನಿರರ್ಥಕ ಎಂದು ಹೇಳಿದ್ದಾರೆ. ಒಟ್ಟಾರೆ, ಕಡ್ಡಾಯ ಶಿಕ್ಷಣದ ಕಡೆಗೆ ಪೋಷಕರ ಮನೋಭಾವನೆ ಅಧಿಕ ಪ್ರಮಾಣದಲ್ಲಿ ಸಕಾರಾತ್ಮಕವಾಗಿದೆ. ಒಂದು ನಿರ್ದಿಷ್ಟವಾದ ಕಾರಣಕ್ಕಾಗಿಯೇ ಮಕ್ಕಳನ್ನು ಶಾಲೆಗೆ ಕಳುಹಿಸಲಾಗುತ್ತಿದೆ ಎಂಬುದಕ್ಕೆ ಬಹುದೊಡ್ಡದಾದ ಸಾಮಾಜಿಕ ಆಯಾಮ ನೀಡಿ, ಅನೇಕ ಪೋಷಕರು ಅದನ್ನು ಸಮರ್ಥಿಸಿ, ಸ್ವಯಂ ಇಚ್ಛೆಯಿಂದ ಮಕ್ಕಳನ್ನು ಶಾಲೆಗೆ ಕಳುಹಿಸ ತೊಡಗಿದ್ದಾರೆ. ಇತರರು ಕೂಡ ಇದನ್ನು ಅನುಸರಿಸಿ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಾರೆ. ಕಡ್ಡಾಯ ಶಿಕ್ಷಣವು ಮಕ್ಕಳ ಶಿಕ್ಷಣದ ಬಗ್ಗೆ ಉದಾಸೀನ ಹೊಂದಿರುವ ಪೋಷಕರಿಂದ ಮಕ್ಕಳನ್ನು ರಕ್ಷಿಸಬಹುದಾದ ಶಕ್ತಿಯನ್ನು ಹೊಂದಿದೆ ಎಂದು ಇನ್ನು ಕೆಲವು ಸಂದರ್ಭಗಳಲ್ಲಿ ಕೆಲವು ಪೋಷಕರು ಹೇಳುತ್ತಾರೆ.

ಪ್ರತಿಯೊಂದು ಮಗುವು ೬-೧೪ ವಯೋಮಾನದವರೆಗೆ ತಪ್ಪದೆ ಶಾಲೆಗೆ ಹೋಗಲು ಮತ್ತು ಪೋಷಕರು ಮಕ್ಕಳಿಗೆ ಶಿಕ್ಷಣ ಕೊಡಿಸುವ ಬಗ್ಗೆ ಹೊಂದಿರುವ ಮನೋಪ್ರವೃತ್ತಿಯು ಶಿಕ್ಷಣದ ಸಾಮಾಜಿಕ ಆಯಾಮವನ್ನು ಸೂಚಿಸುವ ಪ್ರಮುಖ ಅಂಶವಾಗಿದೆ. ಒಂದು ರೀತಿಯ ಸಾಮಾಜಿಕ ಒಪ್ಪಿಗೆ ಹಾಗೂ ಒಮ್ಮತವನ್ನು ಮೂಡಿಸಬೇಕು ಎಂಬುದನ್ನು ಪೋಷಕರ ಮನೋಪ್ರವೃತ್ತಿ ಮತ್ತು ಸಾಮಾಜಿಕ ಆಯಾಮ ತಿಳಿಸುತ್ತದೆ.ಇಂತಹ ಸಾಮಾಜಿಕ ಒಪ್ಪಿಗೆಯನ್ನು ಈಗಾಗಲೇ ಕೇರಳದಲ್ಲಿ ಸಾಧಿಸಿರುವುದು ಕಂಡುಬಂದಿದೆ. ಒಂದು ಸಂಶೋಧನೆಯು ಗುರುತಿಸಿರುವಂತೆ ಕೇರಳದಲ್ಲಿ ಮಕ್ಕಳು ಯಾಕೆ ಶಾಲೆಗೆ ಹೋಗುತ್ತಾರೆ ಎಂದು ಪೋಷಕರನ್ನು ಕೇಳಿದ್ದಾರೆ. ಕೆಲವರು ಈ ಪ್ರಶ್ನೆಗೆ ಏನು ಉತ್ತರ ಹೇಳಬೇಕು ಎಂಬುದು ತಿಳಿಯದೆ ಸುಮ್ಮನೆ ನಕ್ಕಿದ್ದಾರೆ. ಮುಂದುವರಿದು ಸ್ವಯಂ ಪ್ರೇರಣೆಯಿಂದ ಮಕ್ಕಳು ಶಾಲೆಗೆ ಹೋಗುತ್ತಾರೆ. ಬಹುತೇಕ ಮಕ್ಕಳು ಇದನ್ನೆ ಅನುಸರಿಸುತ್ತಾರೆ. ಅಲ್ಲದೆ, ಶಿಕ್ಷಣದಿಂದ ಇರುವ ಅನುಕೂಲಗಳನ್ನು ನಾವು ಪೋಷಕರು ನಿರ್ದಿಷ್ಟವಾಗಿ ಇದೇ ಎಂದು ಹೇಳುವುದು ತಪ್ಪು. ಏಕೆಂದರೆ, ಹೀಗೆ ಮಾಡುವುದರಿಂದ ಶಿಕ್ಷಣಕ್ಕೆ ಇರುವ ಉಪಯೋಗವನ್ನು ನಿರ್ದಿಷ್ಟಗೊಳಿಸಿದಂತೆ

ಆಗುತ್ತದೆ ಎಂದು ಹೇಳುತ್ತಾರೆ. ಸ್ವಲ್ಪಮಟ್ಟಿಗೆ ಇದೇ ಬಗೆಯ ಮನೋಪ್ರವೃತ್ತಿಯು ಹಿಮಾಚಲ ಪ್ರದೇಶದಲ್ಲಿ ಬೆಳವಣಿಗೆಯಾಗಿರುವುದನ್ನು ಪ್ರೋಬ್ ತಂಡ ಗುರುತಿಸಿದೆ.

೪.೬ ಪ್ರೇರಕಾಂಶಗಳ ಪ್ರಭಾವ?

ಮಕ್ಕಳ ಶಿಕ್ಷಣ ಕುರಿತು ಪೋಷಕರ ಮನೋಪ್ರವೃತ್ತಿಯಲ್ಲಿ ಬದಲಾವಣೆಗಳಾಗಿರುವುದನ್ನು ನಾವು ಈಗಾಗಲೇ ಚರ್ಚಿಸಿದ್ದೇವೆ. ಕಳೆದ ಹತ್ತು ಹದಿನೈದು ವರ್ಷಗಳ ಹಿಂದಕ್ಕೆ ಹೋಲಿಸಿ ನೋಡಿದರೆ ಪೋಷಕರು ಇಂದು ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಹೆಚ್ಚಿನ ಜವಾಬ್ದಾರಿ ಮತ್ತು ಆಸಕ್ತಿಯನ್ನು ಹೊಂದಿದವರಾಗಿದ್ದಾರೆ. ಇತ್ತೀಚಿನ ದಿನಮಾನಗಳಲ್ಲಿ ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಪೋಷಕರ ಪ್ರವೃತ್ತಿಯಲ್ಲಿ ಉಂಟಾಗಿರುವ ಬದಲಾವಣೆಯನ್ನು ನಾವು ಬೆಂಬಲಿಸಬಹುದಾಗಿದೆ. ಮಹಿಳೆಯರ ಶಿಕ್ಷಣದ ಬಗ್ಗೆ ಪೋಷಕರು ಬಹಳ ಹಿಂದಕ್ಕೆ ಹೋಗುವ ಅವಶ್ಯಕತೆ ಇಲ್ಲ. ವಿಶೇಷವಾಗಿ ಉತ್ತರ ಭಾರತದ ಪೋಷಕರು ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಹೊಂದಿರುವ ನಕಾರಾತ್ಮಕ ಮನೋಭಾವನೆ ಒಂದು ರೀತಿ ಜಾಡ್ಯವಾಗಿದೆ. ಇಂತಹ ಒಂದು ದೃಷ್ಟಿಕೋನ ಪ್ರೋಬ್ ವರದಿಯಲ್ಲಿದೆ. "among the more extreme ones, was that an educated women was likely to become a widow" (ಪ್ರೋಬ್. ೧೯೯೯. ಪುಟ. ೨೫). ಈ ರೀತಿಯ ಮನೋಭಾವನೆಯನ್ನು ನಮ್ಮ ಅಧ್ಯಯನ ಸಂದರ್ಭದಲ್ಲಿ ನಾವು ಗುರುತಿಸಲಾಗಲಿಲ್ಲ. ಇಂದು ಬಹುತೇಕ ಪೋಷಕರು ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಸ್ವಲ್ಪ ಮಟ್ಟಿನ ಆಸಕ್ತಿಯನ್ನು ಹೊಂದಿದವರಾಗಿದ್ದಾರೆ. ಪ್ರಮುಖವಾಗಿ ನವ-ನಾಗರಿಕತೆಯ ವಿಷಯಗಳನ್ನು ಬೆಳೆಸಿಕೊಳ್ಳುವ ಮಟ್ಟಿಗಾದರೂ ಹೆಣ್ಣುಮಕ್ಕಳಿಗೆ ಶಿಕ್ಷಣ ಪ್ರಮುಖವಾಗಿ ಬೇಕು ಎಂಬ ಆಸೆಯನ್ನು ಹೊಂದಿದವರಾಗಿದ್ದಾರೆ. ಪೋಷಕರಲ್ಲಿ ಇರುವ ಈ ರೀತಿಯ ಪ್ರವೃತ್ತಿಯು ಭವಿಷ್ಯದ ದಿನಮಾನಗಳಲ್ಲಿ ಅಭಿವೃದ್ಧಿಯಾಗುವ ಸಾಧ್ಯತೆ ಇರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಪ್ರಾಯಶಃ ಕೆಲವು ಬದಲಾವಣೆಗಳು ಇಂದು ಉಂಟಾಗುತ್ತಿರುವುದನ್ನು ಗುರುತಿಸಬಹುದು. ಇಂತಹ ಪ್ರವೃತ್ತಿಯನ್ನು ಸ್ವಾಭಾವಿಕವಾಗಿ ಹೆಚ್ಚಳಗೊಳಿಸಬೇಕಾದರೆ, ಸಾರ್ವಜನಿಕರ ಸಹಭಾಗಿತ್ವ ಅವಶ್ಯಕವೆ ಎಂಬುದಕ್ಕೆ ನಮ್ಮ ಉತ್ತರ ಹೌದು ಎಂದಾಗಿದೆ.

ಈ ಹಿನ್ನೆಲೆಯಲ್ಲಿ ಅನೇಕ ಅಧ್ಯಯನಗಳು ಈಗಾಗಲೇ ಕೆಲವು ಸಕಾರಾತ್ಮಕ ಸಲಹೆಗಳನ್ನು ನೀಡಿವೆ. ವಿಶೇಷವಾಗಿ ಮಹಿಳಾ ಉದ್ಯೋಗದ ಮೀಸಲಾತಿ ಪಾಲನೆಯು ಅವಕಾಶ ವಂಚಿತ ಸಮುದಾಯಗಳ ಪೋಷಕರು ಹೆಣ್ಣುಮಕ್ಕಳ ಶಿಕ್ಷಣಕ್ಕೆ ತೋರಿಸುವ ಆಸಕ್ತಿಯನ್ನು ಸ್ಪಷ್ಟವಾಗಿ ಇಮ್ಮಡಿಗೊಳಿಸಬಲ್ಲ ಶಕ್ತಿಯನ್ನು ಹೊಂದಿದೆ. ಈ ನಿಟ್ಟಿನಲ್ಲಿ ಮಹಿಳಾ ಉದ್ಯೋಗದ ಮೀಸಲಾತಿ ಪ್ರಮುಖ ಪಾತ್ರವಹಿಸುವುದರಲ್ಲಿ ಯಾವುದೇ ಅನುಮಾನಗಳಿಲ್ಲ. ಹಾಗೆಯೇ ಶಾಲಾ ಬಿಸಿಯೂಟ, ಉಚಿತ ಪಠ್ಯ ಪುಸ್ತಕ, ಉಚಿತ ಸಮವಸ್ತ್ರ ಹಾಗೂ ಇತರ ಪ್ರೋತ್ಸಾಹಕ ಕಾರ್ಯಕ್ರಮಗಳು ತಮ್ಮದೆ ಆದ ಪ್ರಭಾವ ಮತ್ತು ಪರಿಣಾಮವನ್ನು ಬೀರಿ ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ

ಒಪ್ಪಿಸುವಲ್ಲಿ ಸ್ವಲ್ಪಮಟ್ಟಿಗೆ ಯಶಸ್ವಿಯಾಗಿವೆ. ಯಾವುದೆ ಬಗೆಯ ಭೌತಿಕ ಆಕರ್ಷಣೆ ಇಲ್ಲದೆಯೂ ಕೂಡ ಪೋಷಕರಲ್ಲಿ ಶೈಕ್ಷಣಿಕ ಆಸಕ್ತಿಯನ್ನು ಹೆಚ್ಚಿಸುವ ಪ್ರಬಲವಾದ ಅಂಶವನ್ನು ಶಿಕ್ಷಣವೆ ಹೊಂದಿದೆ. ಇದನ್ನು ಸಂಪೂರ್ಣ ಸಾಕ್ಷರತೆ ನಡೆದಿರುವ ಜಿಲ್ಲೆಗಳಲ್ಲಿ ಈಗಾಗಲೇ ಬೀದಿ ನಾಟಕಗಳ ಮೂಲಕ ಪ್ರದರ್ಶಿಸಲಾಗಿದೆ. ಈ ಕಾರ್ಯಕ್ರಮಕ್ಕೆ ಸಾರ್ವಜನಿಕರ ಮತ್ತು ಸ್ಥಳೀಯ ನಾಯಕರ ಸಂಪೂರ್ಣ ಬೆಂಬಲ ವ್ಯಕ್ತವಾಗಿರುವ ಜಿಲ್ಲೆಗಳಲ್ಲಿ ಇದರ ಪ್ರಭಾವ ಅತ್ಯಂತ ಮಹತ್ವದ್ದಾಗಿದೆ.

ಪೋಷಕರು ಮಕ್ಕಳ ಶಿಕ್ಷಣ ಕುರಿತು ಹೊಂದಿರುವ ಮನೋಪ್ರವೃತ್ತಿ ಬಗೆಗಿನ ಚರ್ಚೆಯನ್ನು ಅಂತ್ಯಗೊಳಿಸುವ ಮೊದಲು, ಮಕ್ಕಳ ಶಿಕ್ಷಣದ ಬಗ್ಗೆ ಅತ್ಯಧಿಕ ಕಾಳಜಿ ಹೊಂದಿರುವ ಕೆಲವು ಪೋಷಕರು ಶಾಲಾ ಚಟುವಟಿಕೆ ಕುರಿತು ಯಾವ ಪ್ರಮಾಣದಲ್ಲಿ ಲೆಕ್ಕಾಚಾರಗಳನ್ನು ಹೊಂದಿದ್ದಾರೆ ಎಂಬುದನ್ನು ತಿಳಿಸಬೇಕು. ಬಹಳ ವಿರಳವಾಗಿ ಕೆಲವು ಪೋಷಕರು ತಮ್ಮ ಅಭಿಪ್ರಾಯ ಹೇಳುವಾಗ ಸ್ಥಳೀಯ ಶಾಲೆಯ ಶೈಕ್ಷಣಿಕ ಚಟುವಟಿಕೆಗಳು ಮಕ್ಕಳಲ್ಲಿ ಇರುವ ಕ್ರಿಯಾಶೀಲತೆಯನ್ನು ರಚನಾತ್ಮಕವಾಗಿ ನಿರ್ಮಾಣ ಮಾಡುವ ಮಾದರಿಯಲ್ಲಿ ಇಲ್ಲ ಎಂದು ಹೇಳುತ್ತಾರೆ. ಇದರ ಜೊತೆಗೆ ಶಿಕ್ಷಕರ ಮತ್ತು ಶಾಲಾ ಆಡಳಿತದ ಅನಾಸಕ್ತಿ, ಶಾಲಾ ವ್ಯವಸ್ಥೆಯಲ್ಲಿ ಇರುವ ತೊಡಕುಗಳನ್ನು ಹೇಳುತ್ತಾರೆ. ಈ ಕುರಿತು ಅನೇಕ ಮನವಿಗಳನ್ನು ಮೇಲಿನ ಅಧಿಕಾರಿಗಳಿಗೆ ನೀಡಿದ್ದರೂ ಶಾಲಾ ವ್ಯವಸ್ಥೆಯಲ್ಲಿ ಯಾವುದೇ ಬದಲಾವಣೆಗಳಾಗಿಲ್ಲ ಎಂದು ಹೇಳುತ್ತಾರೆ. ಇದು ನಮಗೆ ಏನನ್ನು ಸೂಚಿಸುತ್ತದೆ ಎಂದರೆ ಸ್ಥಳೀಯ ಪೋಷಕರಿಗೆ ಇರುವ ಅಧಿಕಾರದ ಆಸಕ್ತಿಯನ್ನು ತಿಳಿಸುತ್ತದೆ. ಮತ್ತು ಗ್ರಾಮಗಳಲ್ಲಿ ಇರುವ ಸಾಮಾಜಿಕ ವಿಭಿನ್ನತೆಯನ್ನು ತುಂಡು ತುಂಡಾಗಿ ಒಡೆದು ಹೋಗಿರುವ ಗ್ರಾಮ ಸಮುದಾಯವನ್ನು ತಿಳಿಸುತ್ತದೆ. ಈ ಕುರಿತು ಇನ್ನೂ ಹೆಚ್ಚಿನ ಅಧ್ಯಯನಗಳನ್ನು ಎದುರು ನೋಡಬೇಕಾಗಿದೆ.

೪.೭ ಶೈಕ್ಷಣಿಕ ಭರವಸೆಗಳು

ಶಿಕ್ಷಣದ ಬಗ್ಗೆ ಪೋಷಕರಲ್ಲಿ ಹೆಚ್ಚಾಗಿರುವ ಆಸಕ್ತಿಯು ಶಾಲೆಯ ಪ್ರತಿದಿನದ ಹಾಜರಾತಿಯನ್ನು ಮತ್ತು ದಾಖಲಾತಿಯನ್ನು ಹೆಚ್ಚಿಸುತ್ತದೆ ಎಂದು ಹೇಳಲು ಬರುವುದಿಲ್ಲ. ಶಿಕ್ಷಣ ಕುರಿತು ಇರುವ ಮನೋಭಾವನೆ ಹಾಗೂ ಮಕ್ಕಳನ್ನು ಶಾಲೆಗೆ ಕಳುಹಿಸುವ ಮನೋಪ್ರವೃತ್ತಿ ಒಂದೇ ಇರಲು ಸಾಧ್ಯವಿಲ್ಲ. ನಿರ್ದಿಷ್ಟವಾಗಿ ಹೇಳುವುದಾದರೆ, ಪೋಷಕರು ಶಿಕ್ಷಣಕ್ಕೆ ಇರುವ ಬಹು-ಉಪಯೋಗಿ ಆಯಾಮವನ್ನು ಅರ್ಥಮಾಡಿಕೊಂಡಿರಬಹುದು. ಆದರೆ ಸ್ಥಳೀಯ ಶಾಲಾ ವ್ಯವಸ್ಥೆಯು ಉತ್ತಮವಾದ ಶಿಕ್ಷಣವನ್ನು ನೀಡುವಲ್ಲಿ ವಿಫಲವಾಗಿದೆ ಎಂದೂ ಶಾಲೆಯಲ್ಲಿ ಪೋಷಕರು ಎದುರು ನೋಡುತ್ತಿರುವ ಶಿಕ್ಷಣವನ್ನು ಮಕ್ಕಳಿಗೆ ನೀಡುತ್ತಿಲ್ಲ ಎಂದೂ ಹೇಳಲಾಗುತ್ತಿದೆ. ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಆಸಕ್ತಿ ಹೊಂದಿಲ್ಲದಿರುವುದಕ್ಕೆ ಅನೇಕ ಕಾರಣಗಳಿರಬಹುದು. ಉದಾಹರಣೆಗೆ, ಉತ್ತಮ ಸೌಲಭ್ಯವಿಲ್ಲದಿರುವುದು, ಶಾಲೆಯ ಖಾಸಗಿ ವೆಚ್ಚ ಹೆಚ್ಚಾಗಿರುವುದು, ಮನೆಯಲ್ಲಿ ಸಣ್ಣ ಪುಟ್ಟ ಕೆಲಸಗಳಿಗೆ ಮಕ್ಕಳು ಅಗತ್ಯವಿರುವುದು, ಇತ್ಯಾದಿ.

ಗುಣಮಟ್ಟದ ಶಿಕ್ಷಣ ಅಗತ್ಯವಾಗಿದೆ

ಶಿಕ್ಷಣದ ಬಗ್ಗೆ ಇರುವ ಆಸಕ್ತಿ ಮತ್ತು ಮಕ್ಕಳನ್ನು ಶಾಲೆಗೆ ಕಳುಹಿಸುವ ಆಸಕ್ತಿಯ ನಡುವಿನ ಅಂತರವನ್ನು ಒಂದು ಚಿಕ್ಕ ಪ್ರಶ್ನೆಯ ಮೂಲಕ ಪ್ರಾರಂಭಿಸಬಹುದು. ಪೋಷಕರು ಯಾವ ರೀತಿಯ ಅಥವಾ ಯಾವ ವಿಧಾನದ ಶಿಕ್ಷಣ ಬೇಕು ಎಂದು ಕೇಳುತ್ತಿದ್ದಾರೆ ? ಸಮೀಕ್ಷೆಗೆ ಒಳಪಡಿಸಿದ ಪೋಷಕರು ಬಹಳ ಭಿನ್ನವಾಗಿ ಏನಿಲ್ಲಾ 'ಗುಣಮಟ್ಟದ ಶಿಕ್ಷಣ' ಬೇಕು ಎಂದು ಅವರ ತಿಳಿವಳಿಕೆಯ ಮಟ್ಟದಲ್ಲಿಯೇ ಹೇಳುತ್ತಾರೆ. ಈ ರೀತಿಯ ಉತ್ತರ ಸಕಾರಾತ್ಮಕ ಮತ್ತು ನಕಾರಾತ್ಮಕ ಎರಡು ಅಂಶಗಳನ್ನು ಒಳಗೊಂಡಿದೆ. ಸಕಾರಾತ್ಮಕ ಅಂಶದಲ್ಲಿ ಹಿಂದುಳಿದ ಮತ್ತು ಬಡತನದಲ್ಲಿ ಇರುವ ಪೋಷಕರು ಉತ್ತಮ ಗುಣಮಟ್ಟದ ಶಿಕ್ಷಣ ಬಗ್ಗೆ ಕಾಳಜಿ ಹೊಂದಿದ್ದಾರೆ. ಇದರ ಬಗ್ಗೆ ವಿವಿಧ ಸಾಮಾಜಿಕ ಗುಂಪುಗಳ ನಡುವೆ ಮೂಲಭೂತ ವ್ಯತ್ಯಾಸ ಕಾಣಿಸದೆ ಇದ್ದರೂ ಈ ವಿಷಯದಲ್ಲಿ ಸ್ವಲ್ಪ ಪ್ರಮಾಣದ ಭಿನ್ನ ಭಾವನೆ ಮೇಲುಜಾತಿ-ವರ್ಗಕ್ಕೆ ಸೇರಿದವರಲ್ಲಿದೆ. ಸ್ಥಿತಿವಂತ (ಎಲೈಟಿಸ್) ಕುಟುಂಬಗಳು ಒಂದು ಬಗೆ ಗುಣಾತ್ಮಕ ಶಿಕ್ಷಣವನ್ನು ಬಯಸಿದ್ದರೆ, ಬಡ ಕುಟುಂಬಗಳ ಪೋಷಕರು ಮತ್ತೊಂದು ವಿಧಾನದಲ್ಲಿ ಗುಣಮಟ್ಟದ ಶಿಕ್ಷಣ ಕೇಳುತ್ತಾರೆ. ಹೀಗೆ ಎರಡು ಬಗೆಯ ಮತ್ತು ಎರಡು ವಿಧಾನದ ಶಿಕ್ಷಣವನ್ನು ನಿರ್ದಿಷ್ಟವಾಗಿ ಒಂದು ಉದಾಹರಣೆಯ ಮೂಲಕ ವಿವರಿಸಬಹುದು. ಬಡತನದಲ್ಲಿ ಇರುವ ಪೋಷಕರು ತಮ್ಮ ಮಕ್ಕಳು ಶಾಲೆಯಲ್ಲಿ ಬುದ್ಧಿವಂತಿಕೆ ಆಧಾರಿತ ಜ್ಞಾನಕ್ಕಿಂತ ಕೈಕುಶಲತೆಯನ್ನು ಕಲಿಯಬೇಕು ಎಂದು ಬಯಸುತ್ತಾರೆ. ಬಹುಶ ಈ ದೃಷ್ಟಿಕೋನವನ್ನು ಅವರು ಹೊಂದಿರುವುದಕ್ಕೆ ಅವರ ಮಕ್ಕಳಿಗೆ ಓದು- ಬರಹ, ಗಣಿತ ಇತ್ಯಾದಿ ಪಠ್ಯಪುಸ್ತಕಕ್ಕೆ ಸಂಬಂಧಪಟ್ಟ ಜ್ಞಾನಕ್ಕಿಂತ ಕುಶಲತೆ ಆಧಾರಿತ ತಿಳಿವಳಿಕೆ ಅತ್ಯಂತ ಉಪಯೋಗವಾಗುತ್ತದೆ ಎಂದು ನಂಬಿರುವುದು. ನಮ್ಮ ಅಧ್ಯಯನದಲ್ಲಿ ಸಾಮಾನ್ಯ ವರ್ಗಕ್ಕೆ ಸೇರಿದ ಬಹುತೇಕ ಪೋಷಕರು ಈ ದೃಷ್ಟಿಕೋನಕ್ಕೆ ಸ್ವಲ್ಪ ಮಟ್ಟಿನ ಬೆಂಬಲ ಸೂಚಿಸುತ್ತಾರೆ.

ಅದೇನೆ ಇದ್ದರೂ ಪೋಷಕರಿಗೆ ತಮ್ಮ ಮಕ್ಕಳು ಶಾಲೆಯಲ್ಲಿ ಶ್ರಮದಾಯಕ ಕುಶಲ ಕೆಲಸ ಮಾಡುವ ಬಗ್ಗೆ ವಿರೋಧವಿದೆ. ಬಹುತೇಕ ಪೋಷಕರ ಆಸಕ್ತಿ ಮಕ್ಕಳು ಶಾಲೆಯಲ್ಲಿ ಜ್ಞಾನ ಆಧಾರಿತ ಬುದ್ಧಿವಂತಿಕೆಯಲ್ಲಿ ಅಭಿವೃದ್ಧಿಯಾಗಬೇಕು ಎಂಬುದಕ್ಕೆ ಹೆಚ್ಚಿನ ಮಹತ್ವ ನೀಡುತ್ತಾರೆ. ಅಲ್ಲದೆ, ಅವರು ಶಾಲೆಯಲ್ಲಿ ಶ್ರಮದಾಯಕ ಕುಶಲ ಕೆಲಸವು ಜ್ಞಾನ ಆಧಾರಿತ ಬುದ್ಧಿವಂತಿಕೆಯನ್ನು ವಿಮುಖವಾಗಿಸುತ್ತದೆ ಎಂದು ಪ್ರಬಲವಾಗಿ ನಂಬಿದ್ದಾರೆ. ಇದರ ಅರ್ಥ ಶಾಲೆಯ ಪಠ್ಯಕ್ರಮದಲ್ಲಿ ಶ್ರಮ ಆಧಾರಿತ ಕುಶಲತೆಯನ್ನು ಸೇರಿಸುವುದು ಸರಿಯಲ್ಲ ಎಂದು ಅಲ್ಲ. ಪಠ್ಯಕ್ರಮದ ರಚನೆಯ ಸಂದರ್ಭದಲ್ಲಿ ವಿಶಾಲವಾಗಿ ಚರ್ಚಿಸಿ ಇದನ್ನು ಸೇರಿಸಬೇಕು ಎಂದು ಪ್ರಬಲವಾದ ಚರ್ಚೆಗಳು ಅಲ್ಲಲ್ಲಿ ನಡೆಯುತ್ತಿವೆ. ಅವೆಂದರೆ: ಎ. ಕುಶಲತೆ ಅಭಿವೃದ್ಧಿ ಪಡಿಸುವ ಶಿಕ್ಷಣ ಶಾಲೆಯಲ್ಲಿ ನೀಡುವುದನ್ನು ಮುಂದಕ್ಕೆ ತಳ್ಳಬೇಕು ಎಂಬುದು ಪೋಷಕರ ಬೇಡಿಕೆಯಲ್ಲ. ಒಂದು ವೇಳೆ ಹಾಗೆ ಇದ್ದರೂ ಅದರ ಪ್ರಮಾಣ ಬಹಳ ಕಡಿಮೆ ಮಟ್ಟದ್ದಾಗಿದೆ. ಬಿ. ಪಠ್ಯಕ್ರಮ ಕುರಿತ ಚರ್ಚೆಯು ಎಲ್ಲಾ ಮಕ್ಕಳಿಗೂ ಅನ್ವಯಿಸುತ್ತದೆ. ಅದು ಕೇವಲ ಆರ್ಥಿಕವಾಗಿ ಅತ್ಯಂತ ಹಿಂದುಳಿದ ದುಡಿಮೆಗಾರ ವರ್ಗಕ್ಕೆ ಮಾತ್ರ ಸೀಮಿತವಾಗಿಲ್ಲ.

ನಾವು ಈಗಾಗಲೇ ಹೇಳಿರುವ ವಿಷಯದ ನಕಾರಾತ್ಮಕ ಅಂಶದ ಕಡೆಗೆ ಒಂದು ಬಾರಿ ನೋಡೋಣ. ಪೋಷಕರು ತಮ್ಮ ಸಾಮಾನ್ಯ ತಿಳಿವಳಿಕೆಯ ಹಿನ್ನೆಲೆಯಲ್ಲಿ ಗುಣಮಟ್ಟದ ಶಿಕ್ಷಣದ ಬಗ್ಗೆ ಹೆಚ್ಚಿನ ಆಸಕ್ತಿ ಹೊಂದಿದ್ದಾರೆ. ದುರ್ದೈವ ಸಂಗತಿ ಎಂದರೆ, ಸಾಮಾನ್ಯ ದೃಷ್ಟಿಕೋನದಲ್ಲಿ ಗುಣಮಟ್ಟದ ಶಿಕ್ಷಣ ಎಂಬುದು ಏನನ್ನು ಒಳಗೊಂಡಿರುತ್ತದೆ ಎಂದರೆ, ಸಮಾಜದಲ್ಲಿ ಈಗಾಗಲೇ ಇರುವ ಪ್ರಬಲ ಮೌಲ್ಯ ವ್ಯವಸ್ಥೆಯಿಂದ ಅದು ಹೆಚ್ಚು ಪ್ರಭಾವಿತವಾಗಿರುತ್ತದೆ. ಇದನ್ನು ಸ್ವಲ್ಪ ವಿಸ್ತೃತವಾಗಿ ನೋಡಿದರೆ ಬಡತನದಲ್ಲಿ ಇರುವ ಪೋಷಕರಿಗೆ ಶಿಕ್ಷಣವು ತಮ್ಮ ಮಕ್ಕಳನ್ನು ಸರ್ಕಾರಿ ನೌಕರನನ್ನಾಗಿಸುವ ಒಂದು ಸಾಧನವಾಗಿ ಅಥವಾ ನೌಕರಿಗೆ ಅವಕಾಶ ಒದಗಿಸುವ ಅಂಶವಾಗಿದೆ. ಇದು ನಗರಗಳಲ್ಲಿರುವ ಮಧ್ಯಮ ವರ್ಗ ರೂಪಿಸಿರುವ ಪ್ರಮುಖ ಅಂಶವಾಗಿದೆ. ಈ ರೀತಿಯ 'ರೋಲ್ ಮಾಡಲ್' ಬಹುಶಃ ಠಾಗೂರ್ ಅವರ ಅರ್ಥದಲ್ಲಿ ಬಹಳ ಸೀಮಿತ ಅರ್ಥದ ಶಿಕ್ಷಣವಾಗಿದೆ. ಅಂದರೆ ಶಾಲೆಗೆ ಹೋಗುವ ಪ್ರಮುಖ ಉದ್ದೇಶವನ್ನು ವಿಶಾಲವಾದ ಅರ್ಥದಲ್ಲಿ ನೋಡಬೇಕಾಗಿದೆ.

ಈ ರೀತಿಯ ದೃಷ್ಟಿಕೋನದಲ್ಲಿ ಇರುವ ಒಂದು ನಿರ್ದಿಷ್ಟ ಅಂಶವೆಂದರೆ, ಪಠ್ಯಕ್ರಮಕ್ಕೆ ಸಂಬಂಧಿಸಿದ ಬದಲಾವಣೆಯನ್ನು ಪ್ರಬಲ ಮೌಲ್ಯಗಳಿಂದ ಕೂಡಿದ ಸಾಂಪ್ರದಾಯಿಕ, ಸಾಮಾಜಿಕ ವ್ಯವಸ್ಥೆಯು ಸ್ವಲ್ಪಮಟ್ಟಿಗೆ ಪ್ರತಿರೋಧಿಸುತ್ತದೆ. ನಾವು ಗಮನಿಸಿದಂತೆ ಗ್ರಾಮೀಣ ಪ್ರದೇಶದ ಬಹುತೇಕ ಪೋಷಕರು ಶಾಲಾ ವ್ಯವಸ್ಥೆಯ ಬಗ್ಗೆ ಸ್ವಲ್ಪಮಟ್ಟಿಗೆ ಸಾಂಪ್ರದಾಯ ಪಾಲಕರಾಗಿದ್ದಾರೆ. ಅಲ್ಲದೆ ಅವರು ಸಾಂಪ್ರದಾಯಿಕ ಮಾದರಿಯ ಬೋಧನಾ ವಿಧಾನವನ್ನು ಮನೆಯಲ್ಲಿ ಬಿಟ್ಟು ಬಿಟ್ಟಿದ್ದಾರೆ. ಶಾಲಾ ಸಮವಸ್ತ್ರ, ಔಪಚಾರಿಕ ಪರೀಕ್ಷಾ ವಿಧಾನ ಮತ್ತು ಸ್ವಲ್ಪಮಟ್ಟಿಗೆ ದೈಹಿಕ ಶಿಕ್ಷೆ ಇವುಗಳಲ್ಲಿ ಅವರಿಗೆ ಹೆಚ್ಚಿನ ನಂಬಿಕೆ ಇರುವುದರಿಂದ ಬಹಳ ಹಿಂದಿನಿಂದಲೂ ಪರ್ಯಾಯ ಪಠ್ಯಕ್ರಮದ ರಚನೆಯ ಕುರಿತು ಅವರಿಗೆ ತಗಾದೆ ಇದೆ. ಇತ್ತೀಚಿನ 'ಕಲಿ -ನಲಿ ' ಬೋಧನಾ ವಿಧಾನದ ಪ್ರಯತ್ನಗಳನ್ನು ಅವರು ಬಹಳ ಸಂದೇಹದಿಂದಲೇ ನೋಡುತ್ತಾರೆ. ಈ ಬೋಧನಾ ವಿಧಾನದ ಬಗ್ಗೆ ಕೆಲವು ಪೋಷಕರ ಆರೋಪ ವೆಂದರೆ "ನಮ್ಮ ಊರಿನ ಶಾಲೆಯ ಬಹುತೇಕ ಶಿಕ್ಷಕರು, ಅವರ ಸ್ವಂತ ಮಕ್ಕಳನ್ನು ಕಾನ್ವೆಂಟ್ ಶಾಲೆಗೆ ಕಳುಹಿಸುತ್ತಾರೆ. ಆದರೆ ನಮ್ಮ ಮಕ್ಕಳನ್ನು ಕೋತಿಯಂತೆ ಕುಣಿಯಲು ಹೇಳುತ್ತಾರೆ ". ಇವರಿಗೆ ಬಹುಶಃ 'ಕಲಿ -ನಲಿ' ಬೋಧನಾ ವಿಧಾನವು ಮಕ್ಕಳಲ್ಲಿ ಕಲಿಕಾ ಆಸಕ್ತಿ ಮತ್ತು ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಬಹಳ ಮಟ್ಟಿಗೆ ಉಪಯುಕ್ತವಾಗಿದೆ ಎಂಬುದು ತಿಳಿದಿಲ್ಲ. ಆದರೆ 'ಕಲಿ -ನಲಿ'ಯಿಂದ ಬೋಧನೆ ಮತ್ತು ಕಲಿಕೆಯಲ್ಲಿ ಹಾಗಿರುವ ಪ್ರಯೋಜನವನ್ನು ಯಾವುದೇ ಕಾರಣದಿಂದಲೂ ನಿರಾಕರಿಸುವಂತಿಲ್ಲ ಅಥವಾ ಬೋಧನೆ ಮತ್ತು ಕಲಿಕೆಗೆ ಸಂಬಂಧಿಸಿದ ವಿಷಯದಲ್ಲಿ ಪೋಷಕರ ಸಂದೇಹ ಬದಲಾಗದ ಸ್ಥಿತಿಯನ್ನು ಅವರ ಹಕ್ಕು ಎಂದು ಹೇಳಲು ಬರುವುದಿಲ್ಲ.

'ಆಸ್ಪರೇಶನ್ ಹ್ಯಾವ್ ಬಿಕಂ ಸೋ ಯುನಿವರ್ಸಲೈಜಡ್ ದಟ್ ಟುಡೇ. ಇಟ್ ಈಸ್ ಪ್ರಾಕ್ಟಿಕಲಿ ಇಂಪಾಸಿಬಲ್ ಟು ಡಿಸ್ಟಿಂಗ್ವಿಶ್ ಬಿಟ್‌ವೀನ್ ದಿ ಡ್ರೀಮ್ಸ್ ಆಫ್ ಆ್ಯನ್ ಆವರೇಜ್ ಫ್ಯಾಮಿಲಿ ಎನಿವೇರ್

ಇನ್ ದ ಕಂಟ್ರಿ ಫಾರ್ ದೇರ್ ಚಿಲ್ಡ್ರನ್ಸ್ ಫ್ಯೂಚರ್. ದೇ ಬೋತ್ ದ ಗೌರ್ನಮೆಂಟ್‌ದ ಸೇಮ್ ಸೆಂಟ್ರಲೈಸ್ಡ್ ಸಿಸ್ಟಮ್, ಬೋರ್ಡ್ ಎಕ್ಸಾಮ್ಸ್, ಇಂಗ್ಲೀಷ್ ಮೀಡಿಯಂ ಯುನಿಫಾರಂಸ್, ಪ್ಲೆಂಟಿ ಆಫ್ ಬುಕ್ಸ್ ಅ್ಯಂಡ್ ಹೋಂವರ್ಕ್, ಪೈಯೋನೀರಿಂಗ್ ಅ್ಯಂಡ್ ಇನ್ನೋವೇಟಿವ್ ಅಟೆಮ್ಪ್ಟ್ಸ್ ಅಟ್ ಮಾಡಿಫೈಯಿಂಗ್ ಕರಿಕ್ಯುಲಂ ಟು ಮೇಕ್ ಇಟ್ ಮೋರ್ ಕಾಂಪ್ಲೆಕ್ಚುಯಲ್ ಅ್ಯಂಡ್ ರಿಲೆವೆಂಟ್. ರೆಡ್ಯೂಸಿಂಗ್ ದಿ ಬರ್ಡನ್ ಆಫ್ ದಿ ಬುಕ್ಸ್, ಟೀಚಿಂಗ್ ಇನ್ ಲೋಕಲ್ ಡೈಯಲೆಕ್ಟ್ಸ್ ಅ್ಯಂಡ್ ಲೋವರಿಂಗ್ ಕಾಸ್ಟ್ ಬೈ ಎಂಪ್ಲಾಯಿಂಗ್ 'ನಾನ್ ಡಿಗ್ರಿ ಹೋಲ್ಡರ್ಸ್' ಆರ್ ಆಲ್ ಪರ್ಸೀವ್ಡ್ ಅ್ಯಸ್ ಡಿಸ್ ಕ್ರಿಮಿನೇಟರಿ ಅ್ಯಂಡ್ ಎಗನೆಸ್ಟ್ ದೇರ್ ಇಂಟರೆಸ್ಟ್ ಬೈದ ಕಾಮನ್ ಮ್ಯಾನ್ ಗೀವನ್ ದಿ ಆಪರ್‌ಚುನಿಟಿ ದೇ ವುಡ್ ರ್‍ಯಾದರ್ ಪುಟ್ ದೇರ್ ಚಿಲ್ಡ್ರನ್ ಇನ್ ದ ಮೋಸ್ಟ್ ಎಲೈಟಿಸ್ಟ್ ಸ್ಕೂಲ್ ವಿಥಿನ್ ದೇರ್ ಮೀನ್ಸ್, ಜಸ್ಟ್ ಅ್ಯಸ್ ವೀ ವುಡ್ (ಪ್ರೋಬ್. ೧೯೯೯).

ಹೀಗೆ ಸಾಮಾಜಿಕ ದೃಷ್ಟಿಕೋನಗಳು ವ್ಯಾಖ್ಯಾನಿಸುತ್ತಿರುವ, ಗುಣಮಟ್ಟದ ಶಿಕ್ಷಣದ ಪರಿಕಲ್ಪನೆ ಮುಂದಿನ ದಿನಮಾನಗಳಲ್ಲಿ ಬದಲಾಗಬಹುದು ಮತ್ತು ಇದು ಶೈಕ್ಷಣಿಕ ವ್ಯವಸ್ಥೆಯನ್ನು ಬದಲಾವಣೆಯತ್ತ ಕೊಂಡ್ಯೊಯ್ಯುವ ಒಂದು ದೂರಗಾಮಿ ಕಾರ್ಯ ಸೂಚಿಯನ್ನಾಗಿ ಇದನ್ನು ನೋಡಬೇಕು. ನಮಗೆ ತಕ್ಷಣವೇ ಕಾಣುವ ಸಮಸ್ಯೆ ಎಂದರೆ, ಉತ್ತಮ ಗುಣಮಟ್ಟದ ಶಿಕ್ಷಣ. ಇದನ್ನು ಪುನರ್ ವ್ಯಾಖ್ಯಾನಿಸಿಕೊಳ್ಳುವಾಗ ಕೆಲವು ಸಾಮಾನ್ಯ ಅಗತ್ಯಗಳನ್ನು (ಅವೆಂದರೆ, ಶಾಲೆಗಳಲ್ಲಿ ಮೂಲ ಸೌಲಭ್ಯಗಳು ಅಗತ್ಯ ಪ್ರಮಾಣದಲ್ಲಿ ಇಲ್ಲದಿರುವುದು, ಶಿಕ್ಷಕರು ಜವಾಬ್ದಾರಿಯಿಂದ ಕಲಿಕೆ ಹಾಗೂ ಪಠ್ಯಕ್ರಮ ಚಟುವಟಿಕೆಯಲ್ಲಿ ಭಾಗವಹಿಸದಿರುವುದು ಇತ್ಯಾದಿ) ಇನ್ನೂ ಪೂರೈಸಲು ಸಾಧ್ಯವಾಗದ ಸ್ಥಿತಿ ಇದೆ. ಹೀಗೆ ಶಾಲೆಗಳಲ್ಲಿ ಇರುವ ನಿರುತ್ಸಾದಾಯಕ ಪರಿಸ್ಥಿತಿಯು ಯಾವುದೇ ರೀತಿಯಲ್ಲಾದರೂ ಗುಣಮಟ್ಟದ ಶಿಕ್ಷಣವನ್ನು ಹೊರಹಾಕುವ ಸಾಧ್ಯತೆ ಇದೆ. ಈ ಕಾರಣಕ್ಕಾಗಿಯೇ ಪೋಷಕರ ಮನೋಭಾವನೆಯಲ್ಲಿ ಈಗಾಗಲೇ ಇರುವ ಶಾಲಾ ವ್ಯವಸ್ಥೆ ಕುರಿತು ತಾತ್ಸಾರ ಭಾವನೆ ಹೆಚ್ಚಿನ ಪ್ರಮಾಣದಲ್ಲಿ ಇರುವುದು.

ಡೋಣಮರಡಿ ಗ್ರಾಮದಲ್ಲಿ ಮೂರು ಮಕ್ಕಳಿರುವ ಒಂದು ಕುಟುಂಬದಲ್ಲಿ ಯಲ್ಲಮ್ಮ ಒಬ್ಬಳೆ ಹೆಣ್ಣುಮಗಳು. ಅವಳು ಎಂದೂ ಶಾಲೆಗೆ ಹೋದವಳಲ್ಲ. ಅವಳ ತಾಯಿ ಲಕ್ಷ್ಮೀದೇವಮ್ಮ (೫೧ ವಯಸ್ಸು) ತಮ್ಮ ಊರಿನ ಶಾಲೆಯ ಬಗ್ಗೆ ಸ್ವಲ್ಪ ಒರಟಾಗಿಯೆ ಉತ್ತರಿಸಿದ್ದರು. ನಮ್ಮ ಮಗಳನ್ನು ಶಾಲೆಗೆ ಕಳುಹಿಸಿದ್ದರೆ, ಮನೆ ಕೆಲಸಕ್ಕೆ ಹೊರಗಿನವರನ್ನು ಕರೆಯಬೇಕು ಮತ್ತು ಅವರಿಗೆ ಕೂಲಿಯನ್ನು ಕೊಡಬೇಕು. ಒಂದು ಪಕ್ಷ ಅವಳನ್ನು ಶಾಲೆಗೆ ಕಳುಹಿಸಿದ್ದರೂ ಅಲ್ಲಿ ಅವಳು ಏನನ್ನು ಕಲಿಯುವುದಿಲ್ಲ ಎಂದರು. ಆದರೆ ಇವಳ (ಯಲ್ಲಮ್ಮನ) ಇಬ್ಬರೂ ಸಹೋದರರಲ್ಲಿ ಒಬ್ಬ ಏಳನೆಯ ತರಗತಿಯವರೆಗೆ ಕಲಿತಿದ್ದಾನೆ. ಮತ್ತೊಬ್ಬ ಐದನೆಯ ತರಗತಿಯಲ್ಲಿ ಕಲಿಯುತ್ತಿದ್ದಾನೆ. ಏಳನೆಯ ತರಗತಿಯವರೆಗೆ ಓದಿದ ಮಗನಿಗೆ ಓದಲು-ಬರೆಯಲು ಬರುವುದಿಲ್ಲ ಎಂದು ಲಕ್ಷ್ಮೀದೇವಮ್ಮ ಹೇಳಿದ್ದರು.

ಅದೇ ರೀತಿ ಹುಡಾ ಗ್ರಾಮದ ಅಹಮದ್ ಸಾಹಿಬ್ ತಂದೆ, ಜಮೀಲ್ ಸಾಹಿಬ್ (೪೪ ವಯಸ್ಸು) ಶಾಲೆಯಲ್ಲಿ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ದೊರೆಯುತ್ತಿಲ್ಲ ಎಂದು ಆರೋಪಿಸಿದರು.

ಶಾಲೆಗಳಲ್ಲಿ ಮಕ್ಕಳಿಗೆ ಕಲಿಸುವ ಪ್ರಕ್ರಿಯೆಯು ನಿರಂತರವಾಗಿ ನಡೆಯುತ್ತಿಲ್ಲ, ಹೀಗಾಗಿ ಮಕ್ಕಳು ಕಲಿಕೆಯಲ್ಲಿ ಬಹಳ ಹಿಂದುಳಿದಿದ್ದಾರೆ. ಸರಿಯಾಗಿ ಕಲಿಯದಿದ್ದರೆ ಮಕ್ಕಳು ಶಾಲೆಗೆ ಹೋದರೂ ಏನು ಪ್ರಯೋಜನವಿಲ್ಲ. ಆದುದರಿಂದ ನನ್ನ ಇಬ್ಬರೂ ಮಕ್ಕಳನ್ನು ಶಾಲೆಯಿಂದ ಬಿಡಿಸಿ ವರ್ಕ್‌ಶಾಪ್‌ನ ಕೆಲಸಕ್ಕೆ ಕಳುಹಿಸುತ್ತಿದ್ದೇನೆ ಎಂದರು. ಕಸನದೊಡ್ಡಿ ಗ್ರಾಮದ ಒಬ್ಬ ಪೋಷಕರು ಶಾಲಾ ವ್ಯವಸ್ಥೆಯನ್ನು ಕುರಿತು ಬಹಳ ಕೋಪಗೊಂಡಿದ್ದರೂ. ಅವರೇ ಹೇಳುವಂತೆ ಅವರ ಮಗ ಆರನೆಯ ತರಗತಿಯಲ್ಲಿ ಕಲಿಯುತ್ತಿದ್ದಾನೆ. ಅವನಿಗೆ ಸರಿಯಾಗಿ ಏನನ್ನು ಓದಲು ಬರೆಯಲು, ಲೆಕ್ಕ ಮಾಡಲು ಬರುವುದಿಲ್ಲ. ಶಾಲೆಗೆ ಕಳುಹಿಸಿ ಏನು ಮಾಡುವುದು ಎಂದು ನಮ್ಮನ್ನೆ ಪ್ರಶ್ನಿಸಿದರು.

ಮೇಲಿನ ಈ ಎಲ್ಲಾ ಕಥೆಗಳು ವಿಶದಗೊಳಿಸುವ ಅಂಶವೆಂದರೆ ಪೋಷಕರು ಬಯಸುತ್ತಿರುವ ಸಾಮಾನ್ಯ ಗುಣಮಟ್ಟದ ಶಿಕ್ಷಣವನ್ನು ನೀಡಲು ಶಾಲೆಗಳಿಗೆ ಸಾಧ್ಯವಾಗದಿರುವುದು. ಪೋಷಕರಿಗೆ ತಮ್ಮ ಮಕ್ಕಳನ್ನು ಶಾಲೆಗೆ ದಿನನಿತ್ಯ ಕಳುಹಿಸಿ ಶಿಕ್ಷಣ ಕೊಡಿಸಬೇಕು ಎಂಬ ಆಸಕ್ತಿ ನಿಜವಾಗಿ ಇದ್ದರೂ ಕೂಡ ಮೇಲೆ ತಿಳಿಸಿದ ಅಂಶಗಳಿಂದ ಅವರನ್ನು ಎದೆಗುಂದಿಸುವ ಸಾಧ್ಯತೆಯೇ ಹೆಚ್ಚು, ನಾವು ಈಗಾಗಲೇ ತಿಳಿಸಿದಂತೆ ಪೋಷಕರ ಅಭಿಪ್ರಾಯಗಳು ಪ್ರತ್ಯೇಕ ಅಥವಾ ವಿಶೇಷವಾದವು (ಐಸೊಲೇಟ್)ಗಳಲ್ಲ. ಇಲ್ಲಿ ನಾವು ಪೋಷಕರ ಉತ್ಸಾಹ ಕುಗ್ಗಿಸುವಂತಹ ಅನುಭವ ವಿಸ್ತೀರ್ಣವಾಗಿರುವುದನ್ನು ಗುರುತಿಸಬಹುದು. ಆದರೆ ಅನುಭವದ ಪ್ರಮಾಣದಲ್ಲಿ ಪೋಷಕರಿಂದ ಪೋಷಕರಿಗೆ ವ್ಯತ್ಯಾಸಗಳಿವೆ. ಶಾಲಾ ವ್ಯವಸ್ಥೆಯನ್ನು ಕುರಿತು ಪೋಷಕರ ಆರೋಪಗಳು ಒಂದು ರೀತಿಯಲ್ಲಿ ಮುಗಿಯದ ಕಥೆಯಾಗಿದೆ. ಆದರೆ ಶಾಲಾ ವ್ಯವಸ್ಥೆಯಲ್ಲಿ ಅತ್ಯಂತ ನಿಧಾನಗತಿಯ ಪ್ರಗತಿಗೆ ಪೋಷಕರ ನಿಷ್ಫಲತೆಯೂ ಒಂದು ಕಾರಣವಾಗಿದೆ.

ನಮ್ಮ ಅಧ್ಯಯನದಲ್ಲಿ ಮಕ್ಕಳ ಶೈಕ್ಷಣಿಕ ಸಾಧನೆಯನ್ನು ಔಪಚಾರಿಕವಾಗಿ ಒರೆಗೆ ಹಚ್ಚುವ ಪ್ರಯತ್ನವನ್ನು ಮಾಡಿಲ್ಲ. ಆದರೆ ಶಾಲೆಗಳಿಗೆ ಭೇಟಿ ಮಾಡಿದಾಗ ಮಕ್ಕಳೊಂದಿಗೆ ನಡೆಸಿದ ಮಾತುಕತೆಯಿಂದ ಅವರು ಶಾಲೆಯಲ್ಲಿ ಕಲಿತಿರುವುದು ಬಹಳ ಕಡಿಮೆ ಎಂದು ತಿಳಿದುಬಂದಿದೆ. ಉದಾಹರಣೆಗೆ ನಾವು ಗುರುತಿಸಿದಂತೆ ಹಲವಾರು ಮಕ್ಕಳು ಶಾಲೆಯಲ್ಲಿ ನಾಲ್ಕು, ಐದು ವರ್ಷಗಳು ಕಲಿತಿದ್ದರೂ ಅವರಿಗೆ ಓದಲು ಬರೆಯಲು ಬರುವುದಿಲ್ಲ. ಇದನ್ನು ಹೀಗೂ ಹೇಳಬಹುದು, ಆ ಮಕ್ಕಳಿಗೆ ಎರಡು, ಮೂರು ಅಕ್ಷರಗಳಿರುವ ಸರಳ ವಾಕ್ಯಗಳನ್ನು ಹೇಳಲು ಸಾಧ್ಯವಾಗದ ಸ್ಥಿತಿ ಇದೆ. ಮಕ್ಕಳು ಕಲಿಕೆಯಲ್ಲಿ ಬಹಳ ಹಿಂದುಳಿದಿರುವುದನ್ನು ನೋಡಿದರೆ ವಿಷಾದವಾಗುತ್ತದೆ.

ಹೀಗಿದ್ದರೂ ಪೋಷಕರು ಇನ್ನೂ ಯಾಕೆ ಶಾಲೆ ವ್ಯವಸ್ಥೆಯ ಬಗ್ಗೆ ಸ್ವಲ್ಪಮಟ್ಟಿನ ಆಸಕ್ತಿ ಹೊಂದಿದ್ದಾರೆ ಎಂದರೆ, ಶಿಕ್ಷಣಕ್ಕೆ ಇರುವ ವಿಶೇಷ ಮೌಲ್ಯ ಮತ್ತು ಅದರ ಬಗೆಗಿನ ಗೌರವದಿಂದ ಎಂದು ಹೇಳಬಹುದು. ಉದಾಹರಣೆಗೆ ಅವರು ಶಿಕ್ಷಣವನ್ನು ಪಡೆದುಕೊಳ್ಳುವುದು ಬಹಳ ಉತ್ತಮವಾದುದು ಎಂದು ತಿಳಿದಿರುವುದು. ಆದರೆ ಅವರು ಶಿಕ್ಷಣ ಪಡೆದುಕೊಳ್ಳುವುದೇ ಸಾಧನೆ ಎಂದು ಭಾವಿಸಿಲ್ಲ ಅಥವಾ ಬಹುಶಃ ಅವರು ಶಿಕ್ಷಣದಿಂದ ಇರುವ ಅನುಕೂಲಗಳಿಗೆ ಮತ್ತು ಅದರ ಪ್ರಾಮುಖ್ಯತೆಗೆ ಒಂದು

ಹಂತದವರೆಗೆ ಮಾತ್ರ ಆದ್ಯತೆ ನೀಡಲು ಬಯಸುತ್ತಾರೆ. ಹೀಗೆ ಇನ್ನೂ ಮುಂತಾದ ವೈವಿಧ್ಯಮಯ ಅಂಶಗಳ ಪರಿಣಾಮಗಳನ್ನು ಗಮನದಲ್ಲಿ ಇಟ್ಟುಕೊಂಡು ಶಾಲಾ ವ್ಯವಸ್ಥೆಯನ್ನು ವಿಶ್ಲೇಷಿಸಬೇಕು. ಅವಕಾಶ ವಂಚಿತ ಕುಟುಂಬಗಳನ್ನು ಕುರಿತು ಚರ್ಚಿಸುವಾಗ ಈ ಅಂಶಗಳಿಗೆ ವಿಶೇಷ ಒತ್ತು ನೀಡಬೇಕು.

ಶಾಲಾ ವ್ಯವಸ್ಥೆಯನ್ನು ಕುರಿತು ಇರುವ ನಿರುತ್ಸಾಹಕ ಅಂಶಗಳು ಕೇವಲ ಪೋಷಕರಿಗೆ ಮಾತ್ರ ಸೇರಿದವುಗಳಲ್ಲ. ಇದು ಮಕ್ಕಳಲ್ಲಿಯೂ ಕಂಡುಬರುತ್ತದೆ. ಪ್ರಾರಂಭದಲ್ಲಿ ಮಕ್ಕಳು ಶಾಲೆಗೆ ಸಜ್ಜುಗೊಳ್ಳುವುದು ಸಾಮಾನ್ಯವಾಗಿ ಸಕಾರಾತ್ಮಕವಾಗಿರುತ್ತದೆ. ಇದು ಯಾವಾಗ ಎಂದರೆ ಶಾಲೆಯ ಕಾರ್ಯಚಟುವಟಿಕೆಗಳು ಮಕ್ಕಳ ಮನೋಭಾವನೆಯನ್ನು ಸರಳವಾಗಿ ಉಳಿಸಿಕೊಳ್ಳುವ ಪ್ರಯತ್ನ ಮಾಡಿದಾಗ ಮಾತ್ರ. ಉತ್ತಮ ಶಾಲೆಯಲ್ಲಿ ಮಕ್ಕಳು ಅತ್ಯುತ್ಸಾಹದಿಂದ ಕಲಿಕೆಯಲ್ಲಿ ತೊಡಗಿರುವುದನ್ನು ನೋಡಿದರೆ ಖುಷಿಯಾಗುತ್ತದೆ. ಅಲ್ಲದೆ, ತರಗತಿಗಳು ಕ್ರಮಬದ್ಧವಾಗಿ ನಡೆಯದೇ ಇರುವ ಶಾಲೆಗಳಿಗೂ ಮಕ್ಕಳು ಹೋಗುವ ಆಸಕ್ತಿಯನ್ನು ಹೊಂದಿದ್ದಾರೆ. ಏಕೆಂದರೆ, ಇದು ಅವರಿಗೆ ಇತರ ಮಕ್ಕಳೊಂದಿಗೆ ಕಲಿತು ಆಟವಾಡಲು ಒಂದು ಅವಕಾಶವನ್ನು ಒದಗಿಸುತ್ತದೆ. ಇದನ್ನು ಸ್ವಾಗತಿಸಬಹುದು. ಕಾರಣ ಇದು ತಮ್ಮ ದೈಹಿಕ ಬೆಳವಣಿಗೆಯ ಮೊದಲೇ ಕುಟುಂಬದ ಕೆಲಸದಲ್ಲಿನ ದುಡಿಮೆಯಿಂದ ವಿಮೋಚನೆಯನ್ನು ಒದಗಿಸುತ್ತದೆ.

ಆದರೆ ಕೆಲವು ಮಕ್ಕಳು ನಿಧಾನವಾಗಿ ಶಾಲೆಗೆ ಹಾಜರಾಗುವಲ್ಲಿ ಅನಾಸಕ್ತಿ ತೋರಿಸುತ್ತಿರುವುದು ಕಂಡುಬರುತ್ತದೆ. ಇದಕ್ಕೆ ಬಹಳ ಸಾಮಾನ್ಯ ಕಾರಣ ಶಾಲೆಯಲ್ಲಿ ಶಿಕ್ಷಕರು ಮಕ್ಕಳಿಗೆ ದೈಹಿಕ ಶಿಕ್ಷೆ ನೀಡುವುದು ಅಥವಾ ಶಿಕ್ಷಕರು ಮಕ್ಕಳನ್ನು ತೇಜೋವಧೆ ಮಾಡುವುದು. ಈ ರೀತಿಯ ಭಾವನೆಯನ್ನು ಒಂದು ಮಗು ವ್ಯಕ್ತಪಡಿಸಿದ್ದರೆ, ಇದನ್ನು ಇನ್ನೂ ಹಲವು ಮಕ್ಕಳು ಸಮ್ಮತಿಸುತ್ತಾರೆ. ಆದರೆ ಶಾಲೆಯಲ್ಲಿ ಕಲಿಯುವಾಗ ಶಿಕ್ಷಕರು ಹೊಡೆದು ಬುದ್ಧಿಹೇಳಿ, ಶಿಕ್ಷೆ ನೀಡದಿದ್ದರೆ ನಾವು ಕಲಿತು ಈ ಮಟ್ಟಕ್ಕೆ ಬರುತ್ತಿರಲಿಲ್ಲ ಎಂದು ಹೇಳುವವರ ಸಂಖ್ಯೆ ಕೂಡ ಕಡಿಮೆ ಇಲ್ಲ. ಹೀಗಾಗಿ ಮಕ್ಕಳು ಶಾಲೆಯನ್ನು ಮಧ್ಯದಲ್ಲಿ ಬಿಡಲು, ಶಾಲೆಯಲ್ಲಿ ಶಿಕ್ಷಕರು ನೀಡುವ ಶಿಕ್ಷೆ ಪ್ರಮುಖ ಕಾರಣ ಎಂದು ಹೇಳುವುದು ಅಸಾಮಾನ್ಯ. ಅಲ್ಲದೆ, ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಎಲ್ಲಾ ಮಕ್ಕಳಿಗೆ ಮಾತ್ರ ಇದು ಅನ್ವಯಿಸುವುದಿಲ್ಲ. ತರಗತಿಯಲ್ಲಿ ಮೇಸ್ಟ್ರ ಹೊಡೆಯುವುದರಿಂದ, ಪಾಠ ಸರಿಯಾಗಿ ಅರ್ಥವಾಗದೇ ಇದ್ದಾಗ, ಕಲಿಕೆಯಲ್ಲಿ ಬೇಸರ ಇತ್ಯಾದಿ ಕಾರಣಗಳಿಂದ ಮಕ್ಕಳಿಗೆ ಶಾಲೆಯ ಬಗ್ಗೆ ನಿರುತ್ಸಾಹ ಉಂಟಾಗಬಹುದು. ಶಾಲೆಯಲ್ಲಿ ಇರಬಹುದಾದ ಸಾಮಾಜಿಕ ಬೇಧ ಭಾವನೆ (ಮೇಲುಜಾತಿಗೆ ಸೇರಿದ ಶಿಕ್ಷಕರು ದಲಿತ ಮಕ್ಕಳನ್ನು ತಾತ್ಸಾರದಿಂದ ನೋಡುವುದು) ಕೂಡ ಮಕ್ಕಳಿಗೆ ಶಾಲೆಯ ಬಗ್ಗೆ ಅನಾಸಕ್ತಿ ಉಂಟು ಮಾಡಲು ಕಾರಣವಾಗಿದೆ. ವಿಶೇಷವಾಗಿ ಅವಕಾಶ ವಂಚಿತ ಕುಟುಂಬಗಳಿಂದ ಬಂದ ಮಕ್ಕಳ ಮೇಲೆ ಇದು ತನ್ನದೇ ಪರಿಣಾಮವನ್ನು ಬೀರುವುದರಲ್ಲಿ ಸಂದೇಹವಿಲ್ಲ.

ಹೀಗೆ ನಿರುತ್ಸಾಹಕ ಅಂಶವು ಪೋಷಕರಲ್ಲಿ ಅಥವಾ ಮಕ್ಕಳ ಮೇಲೆ ತನ್ನ ಪ್ರಭಾವವನ್ನು ಬೀರಬಹುದು. ಆದರೆ ಇದರ ಪರಿಣಾಮ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುವುದು ಬಡತನದ

ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ. ನಿರ್ದಿಷ್ಟ ಪ್ರಮಾಣದ ಕಲಿಕಾ ಚಟುವಟಿಕೆಗಳು ನಡೆಯದೆ ಇರುವ ಶಾಲೆಗಳಿರುವ ಪ್ರದೇಶಗಳಲ್ಲಿ ಇದು ಹೆಚ್ಚಾಗಿ ಕಂಡುಬರುತ್ತದೆ. ಉದಾಹರಣೆಗೆ ಖಾಸಗಿಯಾಗಿ ಮಕ್ಕಳನ್ನು ಮನೆ ಪಾಠಕ್ಕೆ ಕಳುಹಿಸಲಾಗದ ಮತ್ತು ಮನೆಯಲ್ಲಿಯೇ ಮಕ್ಕಳ ಕಲಿಕೆಗೆ ಪೂರಕವಾದ ಪರಿಸರವನ್ನು ಒದಗಿಸಲಾಗದ ಪರಿಸ್ಥಿತಿ ಇರುವ ಕುಟುಂಬಗಳಲ್ಲಿ ಶಾಲೆ-ಶಿಕ್ಷಣ-ಸಾಕ್ಷರತೆಯನ್ನು ಕುರಿತು ಅನಾಸಕ್ತಿ ಅಥವಾ ತಾತ್ಸಾರ ಹೆಚ್ಚಾಗಿದೆ. ಅದೇ ರೀತಿ ಮನೆಯಲ್ಲಿ ಕಲಿತ ಮೊದಲ ತಲೆಮಾರಿನರು ಮತ್ತು ಅವರ ಪೋಷಕರ ನಿರುತ್ಸಾಹದ ಮಾತುಗಳು ಜನರನ್ನು ಇನ್ನಷ್ಟು ಘಾಸಿಗೊಳಿಸುತ್ತಿದೆ.

ಶಾಲೆಯ ತರಗತಿಗಳಲ್ಲಿ ಯಾವ ರೀತಿಯ ಪ್ರಕ್ರಿಯೆ ನಡೆಯುತ್ತಿದೆ ಎಂಬುದನ್ನು ಅನಕ್ಷರಸ್ಥ ಪೋಷಕರು ಆಗಿಂದ್ದಾಗ್ಗೆ ಅವರು ಶಿಕ್ಷಕರಿಂದ ವಿವರ ಪಡೆಯವುದು ಅಥವಾ ಅದನ್ನು ಪುನರ್ ಪರಿಶೀಲನೆ ಮಾಡಿ ನಿರ್ಧಾರಗಳನ್ನು ವ್ಯಕ್ತಪಡಿಸುವುದು ಬಹಳ ಕಷ್ಟ ಅಲ್ಲದೆ, ತಮ್ಮ ಮಕ್ಕಳ ಕಲಿಕೆಗೆ ಸಹಕರಿಸುವುದು ಕೂಡ ಅವರಿಗೆ ಕಷ್ಟ ಹೀಗಾಗಿ ಅವರು ತಮ್ಮನ್ನು ತಾವೇ ದೂಷಿಸಿಕೊಳ್ಳುವುದು ಅಥವಾ ಅವರ ಮಕ್ಕಳನ್ನು ದೂಷಿಸುವುದರ ಮೂಲಕ ಶಾಲಾ ವ್ಯವಸ್ಥೆಯಲ್ಲಿ ಇರುವ ನ್ಯೂನತೆಗಳನ್ನು ಗುರುತಿಸುತ್ತಾರೆ.

೪.೮ ಶಿಕ್ಷಣಕ್ಕೆ ತಗಲುವ ಖಾಸಗಿ ವೆಚ್ಚ

ಪ್ರಾಥಮಿಕ ಶಿಕ್ಷಣ ಎಲ್ಲರಿಗೂ ಉಚಿತವಾಗಿ ನೀಡಬೇಕು ಎಂಬುದು ಸಂವಿಧಾನದ ಹಕ್ಕು ಎಂಬ ನಂಬಿಕೆ ಇದೆ. ಇದು ಉಚಿತವಾಗಿರಬಹುದು ಅಥವಾ ಉಚಿತಕ್ಕೆ ಸ್ವಲ್ಪ ಹತ್ತಿರವಿರಬಹುದು. ನಿಯಮಾನುಸಾರ ಸರ್ಕಾರಿ ಶಾಲೆಗಳಲ್ಲಿ ಪ್ರವೇಶ ಶುಲ್ಕ ಸರಾಸರಿ ಪ್ರತಿ ವಿದ್ಯಾರ್ಥಿಗೆ ೧೫ ರೂ.ಗಳಾಗಿದೆ. ಇದು ಅತ್ಯಂತ ಕಡಿಮೆಯಾಗಿದೆ. ಆದರೆ ಇದರ ನಿರ್ದಿಷ್ಟ ಅರ್ಥ ಶಿಕ್ಷಣ ಉಚಿತ ಎಂದಲ್ಲ. ಇದು ಪೋಷಕರ ಖಾಸಗಿ ಶಾಲಾ ಖರ್ಚು ವೆಚ್ಚಗಳನ್ನು ಸೇರಿಸಿಕೊಂಡಿಲ್ಲ. ಇತ್ತೀಚಿನ ಸಮೀಕ್ಷೆಗಳು ಸೂಚಿಸುವಂತೆ ಶಿಕ್ಷಣಕ್ಕೆ ಮಾಡುವ ಖಾಸಗಿ ನಗದು ಖರ್ಚು ಬಡತನದ ರೇಖೆಗಿಂತ ಕೆಳಗಿರುವ ಕುಟುಂಬದ ಮಕ್ಕಳು ಶಾಲೆಗೆ ಬರದಂತೆ ಎದೆಗುಂದಿಸುತ್ತದೆ. ಉತ್ತಮ ಗುಣಮಟ್ಟದ ಶಿಕ್ಷಣ ಸರಕಾರಿ ಶಾಲೆಗಳಲ್ಲಿ ದೊರಕದೆ ಇದ್ದಾಗ ಈ ಅಂಶ ಎದ್ದುಕಾಣುತ್ತದೆ.

ಸರ್ಕಾರಿ ಪ್ರಾಥಮಿಕ ಶಾಲೆಗೆ ಕಳುಹಿಸಲು ಪೋಷಕರಿಗೆ ಪ್ರತಿ ವರ್ಷಕ್ಕೆ ಒಂದು ಮಗುವಿಗೆ ಎಷ್ಟು ಖರ್ಚು ಬರುತ್ತದೆ ಎಂಬುದನ್ನು ಎನ್.ಎಸ್.ಎಸ್ (೧೯೮೬-೮೭); ಎನ್.ಸಿ.ಎ. ಇ.ಆರ್ (೧೯೯೪) ಸಂಸ್ಥೆಗಳು ಹಾಗೂ ಪ್ರೋಬ್ ತಂಡ ಸಮೀಕ್ಷೆ (೧೯೯೯) ನಡೆಸಿವೆ. ಈ ಸಮೀಕ್ಷೆಗಳು ಒಂದು ಮಗುವಿಗೆ ಕ್ರಮವಾಗಿ ೨೧೨ ರೂಪಾಯಿಗಳು, ೪೭೮ ರೂಪಾಯಿಗಳು ಮತ್ತು ೩೧೮ ರೂಪಾಯಿಗಳಷ್ಟು ಖಾಸಗಿ ಖರ್ಚು ಬರುತ್ತದೆ ಎಂದು ಅಂದಾಜು ಮಾಡಿವೆ. ಈ ಖರ್ಚು ವೆಚ್ಚಗಳು ಮುಖ್ಯವಾಗಿ ಫೀ, ಸ್ಲೇಟ್, ನೋಟ್‌ಬುಕ್, ಸೀಸದ ಕಡ್ಡಿ, ಪೆನ್, ಬಳಪ, ಮನೆಪಾಠ, ಶಾಲಾ ಸಾಂಸ್ಕೃತಿಕ ಚಟುವಟಿಕೆಗಳು ಇತ್ಯಾದಿ ಒಳಗೊಂಡಿವೆ. ಪ್ರಸ್ತುತ ಅಧ್ಯಯನದಲ್ಲಿಯೂ ಇದೇ ಮಾದರಿಯಲ್ಲಿ

ಸರ್ಕಾರಿ ಶಾಲೆಗೆ ಹೋಗುವ ಮಕ್ಕಳಿಗೆ ಒಂದು ವರ್ಷಕ್ಕೆ ಎಷ್ಟು ಖರ್ಚುಬರುತ್ತದೆ ಎಂಬುದನ್ನು ಅಂದಾಜು ಮಾಡಲು ಪ್ರಯತ್ನಿಸಿದೆ (ತಿಲಕ್, ೧೯೯೬; ೨೦೦೦ಎ; ೨೦೦೦ಬಿ).

ಪ್ರಾಥಮಿಕ ಶಿಕ್ಷಣಕ್ಕಾಗಿ ಒಂದು ವರ್ಷಕ್ಕೆ ಒಂದು ಮಗುವಿಗೆ ವಾರ್ಷಿಕ ಖರ್ಚು ಎಷ್ಟು ಎಂಬ ಪ್ರಶ್ನೆಗೆ ನಮ್ಮ ಅಧ್ಯಯನದಲ್ಲಿ ಸಮೀಕ್ಷೆಗೆ ಒಳಪಡಿಸಿದ ಕುಟುಂಬಗಳ ಉತ್ತರವನ್ನು ಮುಂದೆ ವಿವರಿಸಲಾಗಿದೆ. ಒಟ್ಟು ೪೦೦ ಕುಟುಂಬಗಳಲ್ಲಿ ಶೇಕಡ ೪೨.೨೧ರಷ್ಟು (೧೭೦)ಕುಟುಂಬಗಳು ಒಂದು ಮಗುವನ್ನು ಪ್ರಾಥಮಿಕ ಶಾಲೆಗೆ ಕಳುಹಿಸಲು ಕನಿಷ್ಠ ೫೦೦ ರೂಪಾಯಿಗಳಿಂದ ೧೦೦೦ ರೂಪಾಯಿಗಳ ವರೆಗೆ ಖಾಸಗಿ ಖರ್ಚು ಬರುತ್ತದೆ ಎಂದು ಹೇಳಿವೆ. ಶೇಕಡ ೩೩.೨೫ರಷ್ಟು (೧೪೦) ಕುಟುಂಬಗಳು ೧೦೦೦ ರೂಪಾಯಿಗಳಿಂದ ೧೫೦೦ ರೂಪಾಯಿಗಳಷ್ಟು ವೆಚ್ಚವಾಗುತ್ತದೆ ಎಂದು, ಶೇಕಡ ೧೨.೯೭ರಷ್ಟು (೫೦) ಕುಟುಂಬಗಳು ೧೫೦೦ ರೂಪಾಯಿಗಳಿಂದ ೨೦೦೦ ರೂಪಾಯಿಗಳಷ್ಟು ವೆಚ್ಚವಾಗುತ್ತದೆ ಎಂದು ಉತ್ತರಿಸಿವೆ. ವಿಶೇಷವೆಂದರೆ ಶೇಕಡ ೧೧.೫೫ ರಷ್ಟು (೪೦) ಕುಟುಂಬಗಳು ಈ ವೆಚ್ಚ ಎಷ್ಟಾಗುತ್ತದೆ ಎಂದು ಗೊತ್ತಾಗುವುದಿಲ್ಲ ಎಂದು ಹೇಳಿವೆ. ಹೀಗೆ ನಮ್ಮ ಅಧ್ಯಯನ ಸಂದರ್ಭದಲ್ಲಿ ಸ್ವಲ್ಪಕಡಿಮೆ ಅರ್ಧದಷ್ಟು ಕುಟುಂಬಗಳು ಕನಿಷ್ಠ ೧೦೦೦ ರೂಪಾಯಿಗಳು ಪ್ರತಿ ಮಗುವಿನ ಒಂದು ವರ್ಷದ ಪ್ರಾಥಮಿಕ ಶಿಕ್ಷಣಕ್ಕೆ ಖರ್ಚು ಮಾಡುತ್ತಿರುವುದು ತಿಳಿದುಬರುತ್ತದೆ.

ಕೋಷ್ಟಕ ೪.೮ಎ

ಪ್ರಾಥಮಿಕ ಶಿಕ್ಷಣಕ್ಕೆ ಪ್ರತಿ ಮಗುವಿಗೆ ತಗುಲಬಹುದಾದ ಶಾಲಾ ವೆಚ್ಚ ರೂಪಾಯಿಗಳಲ್ಲಿ

ಕ್ರಸಂ.	ಅಂದಾಜು ಮೊತ್ತ ರೂ.ಗಳಲ್ಲಿ	ಕುಟುಂಬಗಳ ಸಂಖ್ಯೆ	ಶೇಕಡವಾರು ಪ್ರಮಾಣ
೦೧	೫೦೦೦ – ೧೦೦೦	೧೭೦	೪೨.೨೧
೦೨	೧೦೦೧ – ೧೫೦೦	೧೪೦	೩೩.೨೫
೦೩	೧೫೦೦ – ೨೦೦೦	೫೦	೧೨.೯೭
೦೪	ಗೊತ್ತಾಗಿಲ್ಲ	೪೦	೧೧.೫೫
	ಒಟ್ಟು	೪೦೦	೧೦೦

ಮೂಲ: ಕ್ಷೇತ್ರಕಾರ್ಯದ ಮಾಹಿತಿ

ಪ್ರಾಥಮಿಕ ಶಾಲೆಗೆ ಹೋಗುವ ಮಕ್ಕಳಿಗೆ ಯಾವ ಬಗೆಯ ಖರ್ಚು ಬರುತ್ತದೆ ಎಂಬುದಕ್ಕೆ ಅವರ ಅಭಿಪ್ರಾಯ ಹೀಗಿದೆ. ಸರ್ಕಾರದಿಂದ ಪುಸ್ತಕ ಮಾತ್ರ ಉಚಿತವೆನಿಸುತ್ತದೆ. ಶಾಲಾ ಬಟ್ಟೆಯನ್ನು (ಸಮವಸ್ತ್ರ) ಒಂದು ಜೊತೆ ಮಾತ್ರ ಸರಕಾರ ನೀಡುತ್ತದೆ. ಆ ಬಟ್ಟೆ ಹೆಚ್ಚಿನ ಮಟ್ಟಿಗೆ ಉದ್ದ ಅಥವಾ ತುಂಡಾಗಿರುತ್ತದೆ. ಅದನ್ನು ಮರು ಹೊಲಿಗೆ ಮಾಡದೆ ನೇರವಾಗಿ ತೊಡಲು ಬರುವುದಿಲ್ಲ. ಅಲ್ಲದೆ ಪ್ರತಿದಿನ ಶಾಲೆಗೆ ಹೋಗುವ ಮಕ್ಕಳಿಗೆ ಒಂದೇ ಜೊತೆ ಬಟ್ಟೆ ಸಾಕಾಗುವುದಿಲ್ಲ. ಆದುದರಿಂದ ನಮ್ಮ ಹಣದಿಂದ ಮಕ್ಕಳಿಗೆ ಕನಿಷ್ಠ ಎರಡು ಜೊತೆ ಹೊಸ ಬಟ್ಟೆಯನ್ನಾದರೂ ಖರೀದಿಸಬೇಕು. ಇದಕ್ಕೆ

ಕನಿಷ್ಠ ೨೦೦ ರೂಪಾಯಿಗಳಿಂದ ೪೫೦ ರೂಪಾಯಿಗಳಾಗುತ್ತವೆ. ಸ್ಲೇಟ್, ಪುಸ್ತಕ, ನೋಟ್‌ಬುಕ್, ಇತ್ಯಾದಿಗಳನ್ನು ಶಾಲೆಗೆ ತೆಗೆದುಕೊಂಡು ಹೋಗಲು ಮಕ್ಕಳಿಗೆ ವರ್ಷಕ್ಕೆ ಕನಿಷ್ಠ ಎರಡು ಶಾಲಾ ಬ್ಯಾಗ್ ಬೇಕಾಗುತ್ತದೆ. ಇದಕ್ಕೆ ವಾರ್ಷಿಕವಾಗಿ ಕನಿಷ್ಠ ೧೦೦ ರೂಪಾಯಿ ಬೇಕಾಗುತ್ತದೆ. ಪುಸ್ತಕ ಕಳೆದು ಹೋದಾಗ, ಅಥವಾ ಹರಿದಾಗ ಹೊಸ ಪುಸ್ತಕ, ನೋಟ್‌ಬುಕ್, ಕಾಫಿ ಬರವಣಿಗೆಯ ಪುಸ್ತಕ, ಪೆನ್, ಸೀಸದಕಡ್ಡಿ, ಬಳಪ ಇತ್ಯಾದಿ ದಿನನಿತ್ಯದ ಶಾಲಾ ಅವಶ್ಯಕತೆಗಳಿಗೆ ೩೦೦ ರೂಪಾಯಿಗಳು ವಾರ್ಷಿಕವಾಗಿ ಬೇಕು. ರಾಷ್ಟ್ರೀಯ ಹಬ್ಬ ಮತ್ತು ಸಾಂಸ್ಕೃತಿಕ ಆಚರಣೆಗಳ ಸಂದರ್ಭದಲ್ಲಿ ಮಕ್ಕಳಿಗೆ ಕನಿಷ್ಠ ೫೦ ರಿಂದ ೧೦೦ ರೂಪಾಯಿಗಳವರೆಗೆ ನೀಡಬೇಕು. ಕೆಲವರು ಮನೆಯಲ್ಲಿ ಮಕ್ಕಳಿಗೆ ಓದು ಹೇಳಿಕೊಡಲು ನಮಗೆ ಸಾಧ್ಯವಿಲ್ಲ, ಹೀಗಾಗಿ ಮಕ್ಕಳನ್ನು ಮನೆ ಪಾಠಕ್ಕೆ ಕಳುಹಿಸುತ್ತೇವೆ. ಅದಕ್ಕಾಗಿ ವಾರ್ಷಿಕ ೨೦೦ ರೂಪಾಯಿಗಳಿಂದ ೩೫೦-೪೦೦ ರೂಪಾಯಿಗಳು ಬೇಕಾಗುತ್ತದೆ. ಹೀಗೆ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ತಗಲಬಹುದಾದ ಖರ್ಚು ವೆಚ್ಚಗಳ ಪಟ್ಟಿಯನ್ನು ನೀಡುತ್ತಾರೆ. ಈ ಅಂಕಿ-ಸಂಖ್ಯೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಒಂದು ಮಗುವನ್ನು ಪ್ರಾಥಮಿಕ ಶಾಲೆಗೆ ಕಳುಹಿಸಲು ಕನಿಷ್ಠ ೧೦೦೦ ರೂಪಾಯಿಗಳು ಅಥವಾ ಅದಕ್ಕಿಂತ ಹೆಚ್ಚಿನ ಹಣ ಬೇಕಾಗುತ್ತದೆ ಎಂಬ ನಿರ್ಧಾರಕ್ಕೆ ನಾವು ಬರಬಹುದು. ಹೀಗಾಗಿ ಉಚಿತ ಶಿಕ್ಷಣ ಎಲ್ಲಿದೆ ಎಂದು ಸಂಶೋಧಿಸಬೇಕಾಗಿದೆ. ನಗರ ಪ್ರದೇಶದ ಶಾಲಾ ಖರ್ಚು ವೆಚ್ಚಗಳಿಗೆ ಹೋಲಿಸಿದರೆ ಇದು ಅತ್ಯಂತ ಕಡಿಮೆ ಎಂದು ನಾವು ಭಾವಿಸಿದ್ದರೂ ಇದು ವಿಶೇಷವಾಗಿ ಬಡತನದ ರೇಖೆಯಲ್ಲಿ ಮತ್ತು ಆ ರೇಖೆಗಿಂತ ಕೆಳಗೆ ಇರುವ ಕುಟುಂಬಗಳಿಗೆ ಪ್ರಮುಖ ಹಣಕಾಸಿನ ಹೊರೆಯಾಗುತ್ತದೆ.

ಈ ಎಲ್ಲಾ ಖರ್ಚುಗಳು ಮಾಡಿದರೂ ಮಕ್ಕಳು ಶಾಲೆಗೆ ಬರುವ ರೀತಿ ಮಾತ್ರ ಬದಲಾವಣೆಯಾಗಿಲ್ಲ. ಅಧ್ಯಯನ ನಡೆಸಿದ ೨೦ ಶಾಲೆಗಳಲ್ಲಿ ಹೆಚ್ಚಿನ ಮಕ್ಕಳು ಶಾಲೆಗೆ ಬರುವಾಗ ಕೊಳೆತ ಬಟ್ಟೆ, ಹರಿದ ಬ್ಯಾಗ್, ಹರಿದ ಪುಸ್ತಕ ಮತ್ತು ನೋಟ್ ಬುಕ್, ಒಡೆದ ಸ್ಲೇಟ್, ಮುರಿದ ಬಳಪ ಅಥವಾ ಸೀಸದಕಡ್ಡಿ ಹಾಗೂ ಕನಿಷ್ಠ ಮಟ್ಟದ ಶುಚಿತ್ವ ಇಲ್ಲದಿರುವುದನ್ನು ನಾವು ಅಧ್ಯಯನ ನಡೆಸಿದ ಶಾಲೆಯಲ್ಲಿ ನೋಡಿದ್ದೇವೆ.

೪.೯ ಆರ್ಥಿಕ ಸ್ಥಿತಿ–ಗತಿ

ಮಾನವ ಅಭಿವೃದ್ಧಿಯನ್ನು ನಿರ್ಧರಿಸುವ ಅಂಶಗಳಲ್ಲಿ ವರಮಾವೂ ಒಂದು. ಮಾನವ ಬದುಕಿನ ಅವಕಾಶಗಳನ್ನು ವೃದ್ಧಿಸುವಲ್ಲಿ ವರಮಾನದ ಮಹತ್ವವನ್ನು ಅಲ್ಲಗಳೆಯುವಂತಿಲ್ಲ. ವರಮಾನವು ಜನತೆಯ ಭೌತಿಕ ಜೀವನಕ್ಕೆ ಅಗತ್ಯವಾಗುವ ಸಂಪನ್ಮೂಲಗಳನ್ನು ಗಳಿಸಿಕೊಳ್ಳಲು ಇರುವ ಒಂದು ಸಾಧನವಾಗಿದೆ. ಆದಾಯವು ಬದುಕನ್ನು ಉತ್ತಮಪಡಿಸಿಕೊಳ್ಳಲಿಕ್ಕಿರುವ ಪ್ರಮುಖ ಅಂಶಗಳಲ್ಲಿ ಒಂದಾಗಿದೆ.

ಒಬ್ಬ ವ್ಯಕ್ತಿ ಸಾಮಾಜಿಕ ಸ್ಥಾನಮಾನಗಳನ್ನು ನಿರ್ಧರಿಸುವಲ್ಲಿ ಆರ್ಥಿಕ ಚಟುವಟಿಕೆಗಳು ಮುಖ್ಯ ಪಾತ್ರವಹಿಸುತ್ತವೆ. ಸಮಾಜದಲ್ಲಿ ಉಳ್ಳವರು, ಇಲ್ಲದಿರುವವರು, ಮೇಲುಕೀಳು, ಬಡವ ಬಲ್ಲಿದ ಎಂಬ

ಶ್ರೇಣೀಕರಣ ಇರುವುದನ್ನು ಕಾಣುತ್ತೇವೆ. ಹಾಗೆಯೇ ಎರಡು ಪಟ್ಟಣ ಪಂಚಾಯಿತಿಗಳನ್ನು ಅಧ್ಯಯನಕ್ಕೊಳಪಡಿಸಿದಾಗ ಶ್ರೇಣೀಕರಣ ಇರುವುದು ಕಂಡುಬರುತ್ತದೆ. ಮಹಿಳೆಯು ಆರ್ಥಿಕವಾಗಿಯೂ ತಾನು ಸಬಲಳಾಗಿದ್ದಾಳೆ. ಅದರ ಮುಖಾಂತರ ಅವಳು ಯಶಸ್ಸನ್ನು ಪಡೆದಿದ್ದಾಳೆ. ಆರ್ಥಿಕ ಸ್ವಾತಂತ್ರ್ಯ ಪಡೆದ ಮಹಿಳೆ ಅಧಿಕ ಜವಾಬ್ದಾರಿಗಳೊಂದಿಗೆ ತಮ್ಮ ಆಸೆ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳುವತ್ತ ಗಮನ ಹರಿಸಿದ್ದಾಳೆ. ಅವರ ದುಡಿಮೆಯಿಂದ ದೇಶದ ಆರ್ಥಿಕತೆಗೆ ತನ್ನದೇ ಆದ ಕೊಡುಗೆಯನ್ನು ನೀಡುತ್ತಿದ್ದಾಳೆ.

ಬಳದರೆ ಮತ್ತು ಹೀರಾ ಗ್ರಾಮ ಪಂಚಾಯಿತಿಗಳಲ್ಲಿ ಮಹಿಳೆಯರು ಬೇರೆ ಬೇರೆ ರೀತಿಯಾದ ವೃತ್ತಿಯಲ್ಲಿ ತೊಡಗಿರುವುದು ಕಂಡುಬರುತ್ತದೆ. ಬಳದರೆ ಗ್ರಾಮ ಪಂಚಾಯಿತಿಯಲ್ಲಿ ಮಹಿಳೆಯರು ಫ್ಯಾಕ್ಟರಿಗಳಲ್ಲಿ ಕೆಲಸ ಮಾಡಲು, ಕೃಷಿ, ಮನೆ ಕೆಲಸಕ್ಕೆ ಹಾಗೂ ಮನೆಯಲ್ಲಿ ಟೈಲರಿಂಗ್, ಬೀಡಿ ಕಟ್ಟುವುದು, ಬ್ಯಾಗ್ ಹಾಕುವುದು, ರೇಷ್ಮೆ ಗೂಡುವಿನಲ್ಲಿ ಹಾರ ಮಾಡುವುದು ಇನ್ನು ಮುಂತಾದ ವೃತ್ತಿಯಲ್ಲಿ ತೊಡಗಿದ್ದಾರೆ. ಇನ್ನು ವ್ಯಾಪಾರ ಕ್ಷೇತ್ರಕ್ಕೆ ಬಂದಾಗ ಹೆಚ್ಚಾಗಿ ಹೂ ಮಾರುವುದು, ಸಣ್ಣ ಪುಟ್ಟ ಅಂಗಡಿಗಳನ್ನು ಇಟ್ಟಿಕೊಂಡಿರುವುದು ಮತ್ತು ತರಕಾರಿ ಮಾಡುವುದು ಇತ್ಯಾದಿ. ಮಹಿಳೆ ಕೃಷಿ ಕೆಲಸದಲ್ಲಿ ನಿರತಳಾಗಿದ್ದು ಪುರುಷನಿಗಿಂತ ಹೆಚ್ಚು ಪಾಲ್ಗೊಳ್ಳುತ್ತಿದ್ದಾಳೆ. ಅಲ್ಲಿ ಆಕೆಗೆ ಕಡಿಮೆ ಕೂಲಿ ಸಿಗುತ್ತಿದ್ದರೂ, ಕೃಷಿ ಕ್ಷೇತ್ರಕ್ಕೆ ತನ್ನನ್ನು ಸೀಮಿತಗೊಳಿಸಿಕೊಂಡಿದ್ದಾಳೆ. ತನ್ನ ಮನೆಯ ಖರ್ಚು ವೆಚ್ಚವನ್ನು ಇದರಿಂದ ತೂಗಿಸಿಕೊಂಡು ಹೋಗುತ್ತಿದ್ದಾಳೆ. ಆಕೆ ಕಾರ್ಖಾನೆಗಳಲ್ಲಿ ಪುರುಷರಂತೆ ಸರಿಸಮಾನವಾಗಿ ದುಡಿದು ಸಮಾನ ವೇತನವನ್ನು ಪಡೆಯುತ್ತಿದ್ದಾಳೆ. ಅಲ್ಲದೆ ಆಕೆ ಸೇವಾ ವಲಯಗಳಲ್ಲೂ ಸಹ ತನ್ನ ಪಾತ್ರವನ್ನು ನಿರ್ವಹಿಸುತ್ತಿದ್ದಾಳೆ. ಮಹಿಳೆ ಇಂದು ವೈದ್ಯಳಾಗಿ, ವಕೀಲಳಾಗಿ, ಶಿಕ್ಷಕಿಯಾಗಿ, ವ್ಯಾಪಾರ ವ್ಯವಹಾರದಲ್ಲಿ, ಬ್ಯಾಂಕುಗಳಲ್ಲಿ ಇನ್ನೂ ಮುಂತಾದ ಹತ್ತು ಹಲವು ಕ್ಷೇತ್ರಗಳಲ್ಲಿ ತನ್ನನ್ನು ವಿಸ್ತರಿಸಿಕೊಂಡಿದ್ದಾಳೆ.

ಹೀರಾ ಗ್ರಾಮ ಪಂಚಾಯಿತಿಯಲ್ಲಿ ಮಹಿಳೆಯರು ಹೆಚ್ಚಾಗಿ ಕೃಷಿ ಕೂಲಿ ಕೆಲಸಕ್ಕೆ ಹೋಗುತ್ತಾರೆ. ಕೃಷಿ ಕೂಲಿ ಎಂದರೆ ಬೇರೆಯವರ ಜಮೀನಿನಲ್ಲಿ ಗೊತ್ತುಪಡಿಸಿದ ಕೆಲಸಕ್ಕಾಗಿ ಸಂಬಳದ ರೂಪದಲ್ಲಿ ಹಣ ಇಲ್ಲವೆ ಧಾನ್ಯಗಳನ್ನು ಕೂಲಿಯ ರೂಪದಲ್ಲಿ ಪಡೆಯುತ್ತಾರೆ. ಲಿಂಗ-ತಾರತಮ್ಯವಿಲ್ಲದೆ ಸ್ತ್ರೀ-ಪುರುಷರಿಬ್ಬರು ಬೇರೆಯವರ ಜಮೀನುಗಳಲ್ಲಿ ದುಡಿಯಲು ಹೋಗುತ್ತಾರೆ. ಈ ಜನರಿಗೆ ಕೂಲಿ ಮಹತ್ವದ ಆರ್ಥಿಕ ಚಟುವಟಿಕೆಯಾಗಿದೆ. ಶ್ರಮಕ್ಕೆ ಪ್ರತಿಫಲವಾಗಿ ಇವರು ಪಡೆಯುವ ಕೂಲಿಯು ಅವರ ಆರ್ಥಿಕ ಸ್ಥಿತಿಗತಿಯ ಜೊತೆಗೆ ಸಾಮಾಜಿಕ ಜೀವನ ವಿಧಾನವನ್ನು ಸಹ ತೋರಿಸುತ್ತದೆ. ಕೂಲಿಗಾಗಿ ಇವರು ಮೇಲ್ಜಾತಿಯವರ ಮನೆಗೆ ಹಾಗೂ ಸುತ್ತಮುತ್ತಲಿನ ಕೃಷಿಕರ ಜಮೀನುಗಳಲ್ಲಿ, ತೋಟಗಳಲ್ಲಿ ಕೆಲಸ ಮಾಡಲು ಹೋಗುತ್ತಾರೆ. ಇವರೊಂದಿಗೆ ಭೂಮಾಲಿಕರ ಹೆಣ್ಣುಮಕ್ಕಳು ವೇತನ ಪಡೆಯದೇ ಕೃಷಿ ಕೆಲಸದಲ್ಲಿ ತೊಡಗಿರುವುದು ಕಾಣಸಿಗುತ್ತದೆ.

ಕೂಲಿಯಲ್ಲಿ ವ್ಯತ್ಯಾಸವಿರುವುದನ್ನು ಸಾಮಾನ್ಯವಾಗಿ ಎಲ್ಲಾ ಗ್ರಾಮೀಣ ಪ್ರದೇಶದಲ್ಲಿ ನಾವು ಕಾಣಬಹುದು. ಪುರುಷ ಮತ್ತು ಮಹಿಳೆಯರ ನಡುವಿನ ಕೂಲಿಯ ತಾರತಮ್ಯದ ಜೊತೆಗೆ ಕೂಲಿ ನೀಡುವ ಹಣದಲ್ಲಿಯೂ ತಾರತಮ್ಯವಿದೆ. ಕೂಲಿಯ ಪ್ರಮಾಣವು ದಿನದ ಕೂಲಿಯಲ್ಲಿ ಪುರುಷರಿಗೆ ಅವರು ಮಾಡುವ ಕೆಲಸದ ಆಧಾರದ ಮೇಲೆ ನಿಗದಿಪಡಿಸಲಾಗಿದೆ. ಸಾಮಾನ್ಯವಾಗಿ ಪುರುಷರಿಗೆ ಹೆಚ್ಚಿನ ಕೂಲಿಯನ್ನು ನೀಡಿದರೆ, ಇದಕ್ಕಿಂತ ಕಡಿಮೆ ಕೂಲಿಯನ್ನು ಮಹಿಳೆಗೆ ನೀಡಲಾಗುತ್ತಿದೆ. ಉದಾಹರಣೆಗೆ ಪುರುಷರಿಗೆ ೭೦/- ರೂಪಾಯಿ ಕೂಲಿ ನೀಡಿದರೆ, ಮಹಿಳೆಯರಿಗೆ ೩೦/- ಅಥವಾ ೪೦/- ರೂಪಾಯಿ ನೀಡುವರು. ಇಬ್ಬರು ಸಮಾನ ಕೆಲಸ ಮಾಡಿದರೂ ಸಹ ಹಣ ನೀಡುವುದರಲ್ಲಿ ವ್ಯತ್ಯಾಸವಿದೆ.

ಕೂಲಿಯು ಶ್ರಮ ಶಕ್ತಿಯ ಬೆಲೆಯ ಅಥವಾ ಮೌಲ್ಯದ ಪರಿವರ್ತಿತ ರೂಪ. ಕಾರ್ಮಿಕನು ತನ್ನ ಶ್ರಮ ಶಕ್ತಿಗೆ ಪ್ರತಿಫಲವಾಗಿ ಏನನ್ನು ಪಡೆಯುತ್ತಾನೋ ಅದೇ ಕೂಲಿ. ಇರುವ ಸ್ವಂತದ ಊರಿನಲ್ಲಿ ದುಡಿಮೆ ಇಲ್ಲದ ಪರಿಸ್ಥಿತಿಯಲ್ಲಿ ಬೇರೆ ಊರಿಗೆ ವಲಸೆ ಹೋಗುವುದು ಇತ್ತೀಚಿನ ದಿನಗಳಲ್ಲಿ ಸಾಮಾನ್ಯ ಸಂಗತಿಯಾಗಿದೆ. ಹೀರಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಜನರು ಊರಿನಲ್ಲಿ ಕೆಲಸ ಇಲ್ಲದೇ ಇರುವ ಸಂದರ್ಭದಲ್ಲಿ ಪಕ್ಕದ ಊರಿಗೆ ಕೂಲಿಗಾಗಿ ಹೋಗುತ್ತಿದ್ದಾರೆ. ಮಹಿಳೆಯರು ಟೈಲರಿಂಗ್, ಬೀಡಿ ಕಟ್ಟುವುದು, ಹಗ್ಗ ಮಾಡುವುದನ್ನು ಅನೇಕ ಮಹಿಳೆಯರು ವೃತ್ತಿಯನ್ನಾಗಿಸಿಕೊಂಡಿದ್ದಾರೆ. ಎಷ್ಟೇ ಬಡತನವಿದ್ದರೂ ತಮ್ಮ ಮಕ್ಕಳಿಗೆ ತಮ್ಮ ದುಡಿಮೆಯಿಂದಲೇ ಓದಿಸಿದ್ದಾರೆ. ಇದರ ಫಲವಾಗಿ ಸರ್ಕಾರದ ಮೀಸಲಾತಿಯನ್ನು ಬಳಸಿಕೊಂಡು ಕೆಲವರು ಇಂದು ನೌಕರಿಯಲ್ಲಿ ನಿರತರಾಗಿದ್ದಾರೆ. ಕ್ಲರ್ಕ್, ಅಟೆಂಡರ್, ಶಿಕ್ಷಕಿ, ನರ್ಸ್ ಆಗಿ ಬಾಲವಾಡಿ ಟೀಚರ್ ಆಗಿ ಇನ್ನು ಮುಂತಾದ ವೃತ್ತಿಯಲ್ಲಿ ತೊಡಗಿದ್ದಾರೆ.

ಆ ಹಿನ್ನೆಲೆಯಲ್ಲಿಯೇ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದು ಕೇವಲ ಹಣದ ವ್ಯಯ ಎಂದು ಬಹುತೇಕರು ಭಾವಿಸಿದ್ದಾರೆ. ಇದಕ್ಕೆ ಪೋಷಕರು ನೀಡುವ ಬಹುತೇಕ ಕಾರಣಗಳು ಸಾಮಾಜಿಕವಾದವು. ಅವುಗಳಲ್ಲಿ ಪ್ರಮುಖವಾದದ್ದು ಅವಳ ಶಿಕ್ಷಣವನ್ನು ಅವಳ ಮದುವೆಯ ದೃಷ್ಟಿಯಿಂದ ನೋಡುವುದು ಅಥವಾ ಜಾತಿಯ ದೃಷ್ಟಿಯಿಂದ ನೋಡುವುದು ಅಥವಾ ಅವಳ ರಕ್ಷಣೆಯ ದೃಷ್ಟಿಯಿಂದ ನೋಡುವುದು. ಮತ್ತೊಂದು ಬಹಳ ಸಂಕೀರ್ಣವಾದ ವಿಷಯವೆಂದರೆ ಪುರುಷರಿಗಿಂತ ಮಹಿಳೆಯರಿಗೆ ಉದ್ಯೋಗ ಅವಕಾಶಗಳು ಬಹಳ ಸೀಮಿತವಾಗಿವೆ ಎಂದು ಬಹುತೇಕರು ಭಾವಿಸಬಹುದು. ಈ ಬಗೆಯ ಸಾಮಾಜಿಕ ಒಪ್ಪಂದಗಳಲ್ಲಿ ಅನೇಕ ಬದಲಾವಣೆಗಳಾಗಿದ್ದರೂ, ಇನ್ನೂ ಬಹುತೇಕರು ಸಾಮಾಜಿಕ ಒಪ್ಪಂದಗಳಿಂದ ಮುಂದಕ್ಕೆ ಹೆಣ್ಣುಮಕ್ಕಳ ಶಿಕ್ಷಣವನ್ನು ನೋಡಬೇಕಾದ ಅಗತ್ಯವಿದೆ. ನಮ್ಮ ಅಧ್ಯಯನದ ಸಂದರ್ಭದಲ್ಲಿ ಬೆರಳೆಣಿಕೆ ಪ್ರಮಾಣದ ಪೋಷಕರು ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಸಕಾರಾತ್ಮಕವಾಗಿ ಚಿಂತಿಸಿದ್ದಾರೆ. ಇಲ್ಲಿ ನಮಗೆ ಸ್ಪಷ್ಟವಾಗುವ ಅಂಶವೆಂದರೆ, ಹೆಣ್ಣುಮಕ್ಕಳ ಶಿಕ್ಷಣಕ್ಕೆ ಇರುವ ವಿರೋಧಗಳು, ಕೇವಲ

ಪೋಷಕರಿಂದಲೇ ಹುಟ್ಟಿಕೊಂಡಿರುವಂತವುಗಳಲ್ಲ. ಇದು ಆರ್ಥಿಕ-ಸಾಮಾಜಿಕ ಹಾಗೂ ಸಾಂಸ್ಕೃತಿಕವಾದದ್ದು. ಅಂದರೆ ಒಪ್ಪಿತ ಸಾಂಸ್ಕೃತಿಕ ನಡವಳಿಕೆಗಳು ಹೆಣ್ಣುಮಕ್ಕಳ ಶಿಕ್ಷಣದ ಬೆಳವಣಿಗೆಯ ಮೇಲೆ ತನ್ನ ಪ್ರಭಾವವನ್ನು ಬೀರುತ್ತಿದೆ ಎಂಬದು ಇಲ್ಲಿ ಸ್ಪಷ್ಟ. ಹೀಗಾಗಿ ಹೆಣ್ಣುಮಕ್ಕಳ ಶಿಕ್ಷಣ ಕುರಿತು ಇರುವ ಸಕಾರಾತ್ಮಕ ಮನೋಭಾವನೆಯು ಕೇವಲ ವೈಯಕ್ತಿಕ ಮಟ್ಟದಲ್ಲಿ ಹೆಚ್ಚಳವಾದರೆ ಸಾಲದು, ಸಾಂಸ್ಥಿಕ ಹಾಗೂ ಸಾಮಾಜಿಕ ಮಟ್ಟದಲ್ಲಿಯು ಬದಲಾಗಬೇಕಾದ ಆಗತ್ಯವಿದೆ. ಈ ದೆಸೆಯಲ್ಲಿ ನಾವೆಲ್ಲರು ಚಿಂತಿಸಬೇಕಾಗಿದೆ.

ಶಾಲಾವ್ಯವಸ್ಥೆ ಮತ್ತು ಶೈಕ್ಷಣಿಕ ಭರವಸೆಗಳಿಗೆ ಸಂಬಂಧಿಸಿದಂತೆ ಗುಣಮಟ್ಟದ ಶಿಕ್ಷಣ ಪರಿಕಲ್ಪನೆಯನ್ನು ಸಮಾಜೋ-ಅರ್ಥಿಕ ಅಂಶಗಳು ಪ್ರಭಾವಿಸುತ್ತಿವೆ ಎಂಬುದನ್ನು ನಮ್ಮ ಅಧ್ಯಯನ ಸ್ಪಷ್ಟವಾಗಿ ಗುರುತಿಸಿದೆ. ಆದರೆ ಪೋಷಕರು ಶಿಕ್ಷಣದ ಬಗ್ಗೆ ಹೊಂದಿರುವ ಮನೋಭಾವದ ಪ್ರಮಾಣವು ಪೋಷಕರಿಂದ ಪೋಷಕರಿಗೆ ವ್ಯತ್ಯಾಸವಾಗುತ್ತದೆ. ಶಿಕ್ಷಣ ಮತ್ತು ಶಾಲಾವ್ಯವಸ್ಥೆಯನ್ನು ಕುರಿತ ಪೋಷಕರ ಆರೋಪಗಳು ಒಂದು ರೀತಿಯಲ್ಲಿ ಮುಗಿಯದ ಕಥೆ ಎಂದು ಭಾವಿಸಿದರೂ ಶಾಲಾ ವ್ಯವಸ್ಥೆಯಲ್ಲಿ ಇರುವ ನಿಷ್ಫಲತೆ ಇದಕ್ಕೆ ಪ್ರಮುಖ ಕಾರಣ ಎಂಬುದು ಸ್ಪಷ್ಟ

೪.೧೦ ಮಕ್ಕಳು ದುಡಿಯುತ್ತಿದ್ದಾರೆಯೇ?

ಶಾಲೆಯಿಂದ ಹೊರಗೆ ಇರುವ ಮಕ್ಕಳು ಶಿಕ್ಷಣ ಪಡೆಯುವುದು ಕಷ್ಟ ಏಕೆಂದರೆ ಅವರು ಕೆಲಸ ಮಾಡುತ್ತಾರೆ ಎಂಬ ಸಾಮಾನ್ಯ ಅಭಿಪ್ರಾಯ ಇದೆ. ಈ ನಂಬಿಕೆಗೆ ಉತ್ತೇಜನಕಾರಿಯಾಗಿ ಬಾಲಕಾರ್ಮಿಕರು ನಿರ್ದಿಷ್ಟ ಪ್ರದೇಶ ಮತ್ತು ವೃತ್ತಿಗಳಲ್ಲಿ ಪೂರ್ಣಪ್ರಮಾಣದಲ್ಲಿ ಕೆಲಸ ಮಾಡುತ್ತಿರುವುದು ಆಶ್ಚರ್ಯಕರ. ಅವೆಂದರೆ ಬೆಂಗಳೂರಿನಂತಹ ನಗರಗಳಲ್ಲಿ, ಹೋಟೆಲ್ ಕೆಲಸ, ಮೀಟರ್ ರೀಪೇರಿ ಶಾಪ್‌ಗಳಲ್ಲಿ ಸಹಾಯಕರಾಗಿ ದುಡಿಯುವುದು, ಬಡಗಿ ಕೆಲಸ, ಬಳೆ ಮಾಡುವ ಕೆಲಸ, ಪಟಾಕಿ ಕಾರ್ಖಾನೆಗಳಲ್ಲಿ ಕೆಲಸ, ಇನ್ನೂ ಮುಂತಾದ ಕೆಲಸಗಳು. ಇಂತಹ ಸಂಘಟನೆಗಳಲ್ಲಿ ಸುಮಾರು ೬೫ ಮಿಲಿಯನ್‌ಗೂ ಹೆಚ್ಚಿನ ಮಕ್ಕಳು ದಿನದಲ್ಲಿ ೮ ಗಂಟೆಗಳ ಕಾಲ ಅಥವಾ ಇನ್ನೂ ಹೆಚ್ಚಿನ ಕಾಲ ದುಡಿಯುತ್ತಿದ್ದಾರೆ (ಬೊರ್ರಾ ನೇಹ್ರಾ, ೧೯೯೫; ಕಂಬರ್ಗಿ, ೧೯೯೧; ವೇನರ್, ೧೯೯೧; ಕಬೀರ್ ನೈಲ, ೨೦೦೧; ದೊರೆಸ್ವಾಮಿ ಮಾಲತಿ, ೨೦೦೦; ಲಿಕ್ಲಾರ್ಕ್ ಫನ್‌ಕೊಸ್ಸ್, ೨೦೦೧ ಎ; ೨೦೦೧ ಬಿ). ಈ ಹಿನ್ನೆಲೆಯಲ್ಲಿ ಕಾಡುವ ಪ್ರಶ್ನೆ ಎಂದರೆ ೬೫ ಮಿಲಿಯನ್ ಹೆಚ್ಚು ಮಕ್ಕಳು ಪೂರ್ಣ ಪ್ರಮಾಣದ ಬಾಲಕಾರ್ಮಿಕರಾಗಿ ದುಡಿಯುತ್ತಿರುವಾಗ ರಾಷ್ಟ್ರದಲ್ಲಿ ಸಂಪೂರ್ಣ ಸಾಕ್ಷರತೆ ಸಾಧಿಸುವುದು ಹೇಗೆ? (ಪ್ರಜಾವಾಣಿ, ೨ ಜನವರಿ, ೧೯೯೭).

ಕನಿಷ್ಠ ಸೌಲಭ್ಯಗಳು ಇಲ್ಲದ ವ್ಯವಸ್ಥೆಯಲ್ಲಿ ಪೂರ್ಣಪ್ರಮಾಣದ ಬಾಲಕಾರ್ಮಿಕರಾಗಿ ದುಡಿಯುತ್ತಿರುವ ಸಂದರ್ಭದಲ್ಲಿ ಮತ್ತು ಮೇಲಿನ ಹೇಳಿಕೆಯು ಗಂಭೀರವಾದ ಆಸಕ್ತಿಯನ್ನು ಈ ಕ್ಷೇತ್ರದಲ್ಲಿ ಹುಟ್ಟಿಸುತ್ತದೆ. ಅದೇನೇ ಇದ್ದರೂ ಬಾಲಕಾರ್ಮಿಕ ಸಮಸ್ಯೆಯ ವಾಸ್ತವಿಕ ವಿಶ್ಲೇಷಣೆ ಮತ್ತು

ಶಾಲೆಯ ಪರಿಸರದ ಸಂಬಂಧವು ಮೇಲಿನ ಹೇಳಿಕೆಯನ್ನು ಮೂರು ರೀತಿಯಲ್ಲಿ ತಪ್ಪು ಅಭಿಪ್ರಾಯವನ್ನು ಹುಟ್ಟಿಸುತ್ತದೆ.

ಮೊದಲನೆಯದು, ಈ ಸಮಸ್ಯೆಯ ಬಾಹುಳ್ಯತೆಯನ್ನು ತುಂಬಾ ವಿಸ್ತೃತವಾಗಿ ಉತ್ಪ್ರೇಕ್ಷಿಸುವುದು. ಕಾರ್ಮಿಕ ಶಕ್ತಿಯಾಗಿ ಭಾಗವಹಿಸುತ್ತಿರುವುದರ ಬಗ್ಗೆ ದೊರಕುವ ಅಂಕಿ ಅಂಶ ಹಾಗೂ ಮಾಹಿತಿಗಳಿಂದ ಜನಗಣತಿಗಳು, ರಾಷ್ಟ್ರಮಟ್ಟದ ಸಮೀಕ್ಷೆ ಹಾಗೂ ಅಧ್ಯಯನಗಳು ಸೂಚಿತವಾಗುವ ಅಂಶ, ಚಿಕ್ಕ ಪ್ರಮಾಣದಲ್ಲಿ ಮಕ್ಕಳು ಭಾರತದಲ್ಲಿ ಪೂರ್ಣ ಪ್ರಮಾಣದ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ ಎಂಬುದು. ಎರಡನೆಯದು, ಇಂತಹ ಹೇಳಿಕೆಗಳು ಬಾಲಕಾರ್ಮಿಕರು ಮಾಡುತ್ತಿರುವ ಕೆಲಸದ ಸ್ವರೂಪವನ್ನು ತಪ್ಪಾಗಿ ಗ್ರಹಿಸುವುದು. ಮಕ್ಕಳು ಹೆಚ್ಚಿನ ಪ್ರಮಾಣದಲ್ಲಿ ತಮ್ಮ ಮನೆ ಕೆಲಸ ಅಥವಾ ಹೊಲದ ಕೆಲಸಗಳಲ್ಲಿ ಪೋಷಕರಿಗೆ ಸಹಾಯಕರಾಗಿ ಕೆಲಸ ಮಾಡುತ್ತಿದ್ದಾರೆಯೇ ಹೊರತು, ಕೂಲಿ ಕೆಲಸವನ್ನಲ್ಲ. ಈ ವ್ಯತ್ಯಾಸವು ಬಾಲ ಕಾರ್ಮಿಕರು ಮತ್ತು ಶಾಲೆಗಳ ನಡುವೆ ಪರಸ್ಪರ ಸಂಬಂಧ ಹೊಂದಿರುವುದನ್ನು ಸೂಚಿಸುತ್ತದೆ. ಉದಾಹರಣೆಗೆ ಕೆಲಸದ ಸಮಯದಲ್ಲಿ ಕುಟುಂಬದ ಸದಸ್ಯರಿಗಿಂತ, ಕೂಲಿ ಕೆಲಸಗಾರರಿಗೆ ಹೆಚ್ಚಿನ ಕೆಲಸ ಮಾಡಬೇಕಾದ ಒತ್ತಡವಿರುತ್ತದೆ. ಮೂರನೆಯದಾಗಿ, ಮೇಲಿನ ಹೇಳಿಕೆಗಳು ಬಾಲಕಾರ್ಮಿಕರ ಸಮಸ್ಯೆಗೆ ಕಾರಣವನ್ನು ಮತ್ತು ಶೈಕ್ಷಣಿಕ ಕ್ಷೇತ್ರದ ಸ್ಥಿತಿಸ್ಥಾಪಕತೆಯನ್ನು ತುಂಬಾ ಸರಳೀಕರಿಸುತ್ತವೆ. ಪೂರ್ಣಪ್ರಮಾಣದಲ್ಲಿ ಕೆಲಸ ಮಾಡುತ್ತಿರುವ ಬಾಲಕಾರ್ಮಿಕರು ಶಾಲೆಗಳಿಗೆ ಹೋಗಲು ಸಾಧ್ಯವಿಲ್ಲ, ಏಕೆಂದರೆ ಅವರು ದುಡಿಮೆಯಲ್ಲಿ ತೊಡಗಬೇಕು ಎಂದು ಮೇಲಿನ ಹೇಳಿಕೆ ಮಾಡುವವರು ನಿರ್ದಿಷ್ಟವಾಗಿ ಹೇಳುತ್ತಾರೆ. ಇದಕ್ಕೆ ವಿರುದ್ಧವಾಗಿ ಮಕ್ಕಳು ಕೆಲಸ ಮಾಡುವುದು ಏಕೆಂದರೆ ಅವರು ಶಾಲೆಯನ್ನು ಮಧ್ಯದಲ್ಲಿ ಬಿಟ್ಟಿದ್ದಾರೆ. ಆದರೆ ವಾಸ್ತವಿಕ ಆಚರಣೆಯಲ್ಲಿ ಈ ಎರಡು ಮಾದರಿಗಳು ಸಾಧ್ಯ

ನಮ್ಮ ಅಧ್ಯಯನವು ಎರಡು ಗ್ರಾಮಪಂಚಾಯಿತಿಗಳಲ್ಲಿ ಇಪ್ಪತ್ನಾಲ್ಕು ಗ್ರಾಮಗಳ ಇಪ್ಪತ್ನಾಲ್ಕು ಶಾಲೆಗಳಲ್ಲಿ ಶಾಲೆಯಿಂದ ಹೊರಗಿರುವವರನ್ನು ಗುರುತಿಸಿದೆ. ಅಂಥ ಮಕ್ಕಳ ಪ್ರಮಾಣ ಈ ರೀತಿ ಇದೆ. ಬಳದರೆ ಗ್ರಾಮಪಂಚಾಯಿತಿಯಲ್ಲಿ ೨೦೦೫-೨೦೦೬ರ ಮಧ್ಯದಲ್ಲಿ ಶಾಲೆ ಬಿಟ್ಟ ಮಕ್ಕಳು, ಸರಾಸರಿ ಒಟ್ಟು ಪ್ರಮಾಣ ಶೇಕಡ ೭.೮೦ರಷ್ಟಿದ್ದರೆ, ಇದೇ ಅವಧಿಯಲ್ಲಿ ಹೀರಾ ಗ್ರಾಮಪಂಚಾಯಿತಿಯಲ್ಲಿ ಶೇಕಡ ೨೯.೮೧ರಷ್ಟು ಮಕ್ಕಳು ಶಾಲೆಯನ್ನು ಮಧ್ಯದಲ್ಲಿ ಬಿಟ್ಟಿದ್ದಾರೆ. ೨೦೦೮-೦೯ನೇ ಶೈಕ್ಷಣಿಕ ವರ್ಷಕ್ಕೆ ಬಳದರೆ ಗ್ರಾಮಪಂಚಾಯಿತಿಯಲ್ಲಿ ಶೇಕಡ ೧೨.೭೨ರಷ್ಟು ಮಕ್ಕಳು, ಇದೇ ಅವಧಿಯಲ್ಲಿ ಹೀರಾ ಪಂಚಾಯಿತಿಯಲ್ಲಿ ಶೇಕಡ ೩೨.೬೧ರಷ್ಟು ಮಕ್ಕಳು ಮಧ್ಯದಲ್ಲಿ ಶಾಲೆಯನ್ನು ಬಿಟ್ಟಿದ್ದಾರೆ. ಅಧ್ಯಯನಕ್ಕೆ ಒಳಪಡಿಸಿದ ಒಟ್ಟು ೪೦೦ ಕುಟುಂಬಗಳಲ್ಲಿ ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳ ತಂದೆ–ತಾಯಿಗಳನ್ನು ಏಕೆ ನಿಮ್ಮ ಮಗ ಮಗಳು ಶಾಲೆಯನ್ನು ಬಿಟ್ಟಿದ್ದಾರೆ ಎಂದು ಪ್ರಶ್ನಿಸಿದರೆ ಅವರು ನೀಡುವ ಉತ್ತರಗಳ ಪಟ್ಟಿ ಈ ರೀತಿ ಇದೆ. ಮನೆಯ ಕೆಲಸ, ನಾವು ಕೆಲಸಕ್ಕೆ ಹೋಗುತ್ತೇವೆ,

ಮನೆಯಲ್ಲಿ ಚಿಕ್ಕಮಕ್ಕಳನ್ನು ನೋಡಿಕೊಳ್ಳುವವರು ಇಲ್ಲ. ಹೀಗಾಗಿ ಮಗಳನ್ನು ಬಿಡಿಸಿದ್ದೇವೆ. ಎಷ್ಟು ಸಲ ಹೇಳಿದರೂ ನಮ್ಮ ಮಕ್ಕಳು ಶಾಲೆಗೆ ಹೋಗುವುದಿಲ್ಲ. ಶಾಲೆಗೆ ಹೋಗಲು ಕಳುಹಿಸಿದರೆ ಬೇರೆ ಎಲ್ಲಿಯೊ ಆಟವಾಡಲು ಹೋಗುತ್ತಾನೆ. ಶಾಲೆಗೆ ನಮ್ಮ ಮಕ್ಕಳು ಹೋಗುತ್ತಿದ್ದರೂ ಓದಲು ಬರೆಯಲು ಬರುತ್ತಿರಲಿಲ್ಲ. ಗುಣಾತ್ಮಕ ಶಿಕ್ಷಣದ ಬೋಧನೆ ಕೊರತೆ, ಇನ್ನೂ ಮುಂತಾದ ಕಾರಣಗಳನ್ನು ನೀಡುವವರೆ ಹೆಚ್ಚು. ಇದರ ಅರ್ಥ, ಸಂಪಾದನೆಗಾಗಿ ಮಕ್ಕಳನ್ನು ಶಾಲೆ ಬಿಡಿಸಿರುವವರು ಇಲ್ಲ ಎಂದಲ್ಲ, ಇಂತಹ ಕುಟುಂಬಗಳು ಇವೆ. ಆದರೆ ಅವುಗಳ ಸಂಖ್ಯೆ ಬೆರಳೆಣಿಕೆಯಷ್ಟು.

ಇದನ್ನು ಯಾವುದೇ ಕಾರಣದಿಂದಲೂ ತಳ್ಳಿಹಾಕುವಂತಿಲ್ಲ. ಪೂರ್ಣ ಪ್ರಮಾಣದಲ್ಲಿ ಬಾಲಕಾರ್ಮಿಕರ ಸ್ವಭಾವಗಳು ನಕಾರಾತ್ಮಕ ಅಂಶಗಳನ್ನು ಒಳಗೊಂಡಿವೆ. ಆದರೆ ಮನೆಯ ಕೆಲಸಗಳಲ್ಲಿ ಅರೆಕಾಲಿಕೆ ಕೆಲಸ ಮಾಡುವ ಬಾಲ ಕೆಲಸಗಾರರು ಶಾಲಾ ವ್ಯವಸ್ಥೆಯ ಅಥವಾ ಪರಿಸರದ ಜೊತೆ ಯಾವಾಗಲೂ ಅನುರೂಪವಾದ ಸಂಬಂಧವನ್ನು ಹೊಂದಿರುತ್ತಾರೆ ಎಂದು ಹೇಳಲು ಸಾಧ್ಯವಿಲ್ಲ. ಕೃಷಿಯಲ್ಲಿ ಹೆಚ್ಚಿನ ಚಟುವಟಿಕೆಗಳು ಇದ್ದ ಸಮಯದಲ್ಲಿ, ಬಡತನದ ರೇಖೆಗಿಂತ ಕೆಳಗಿರುವ ಅಥವಾ ಬಡತನದಲ್ಲಿ ಇರುವ ಕುಟುಂಬಗಳು ಹೆಚ್ಚು ಆರ್ಥಿಕ ಒತ್ತಡದಿಂದಾಗಿ ಮಕ್ಕಳನ್ನು ಪೂರ್ಣ ಪ್ರಮಾಣದ ಕೆಲಸಕ್ಕೆ ತಳ್ಳುತ್ತವೆ. ಇದರಿಂದ ಮಕ್ಕಳು ಸಾಕಷ್ಟು ಪ್ರಮಾಣದಲ್ಲಿ ಶಾಲೆಯಿಂದ ಹೊರಗೆ ಇರಬೇಕಾಗುತ್ತದೆ. ಒಟ್ಟಾರೆ ಈ ಅಂಶಗಳು ಮಕ್ಕಳು ಶಾಲೆಯನ್ನು ಬಹಿಷ್ಕರಿಸುವಂತೆ ಮಾಡುತ್ತವೆ. ಮಕ್ಕಳಿಗೆ ವಯೋಮಾನ ಹೆಚ್ಚಿದಂತೆ ಈ ಸಮಸ್ಯೆಯು ಬಹಳ ಕಠಿಣವಾಗುತ್ತಿದೆ.

೪.೧೧ ಶಾಲೆಗಳು ಎಲ್ಲರಿಗೂ ದೊರಕುತ್ತಿವೆಯೇ?

ಸ್ವಾತಂತ್ರ್ಯ ನಂತರ ಶಾಲಾ ವ್ಯವಸ್ಥೆಯನ್ನು ಸುಧಾರಿಸಲು ಅನೇಕ ಪ್ರಗತಿಪರ ಯೋಜನೆಗಳು ರೂಪಿತವಾಗಿವೆ. ಉದಾಹರಣೆಗೆ ಪ್ರಾಥಮಿಕ ಶಾಲೆಗಳ ಒಟ್ಟು ಸಂಖ್ಯೆಯಲ್ಲಿ ಮೂರು ಪಟ್ಟು ಹೆಚ್ಚಳವಾಗಿದೆ. ೧೯೯೩ರಲ್ಲಿ ಶೇಕಡ ೯೪ರಷ್ಟು ಗ್ರಾಮೀಣ ಜನರು ೧ ಕಿ.ಮೀ ಒಳಗೆ ಪ್ರಾಥಮಿಕ ಶಾಲೆಗಳು ಇರುವಲ್ಲಿ ವಾಸಿಸುತ್ತಿದ್ದಾರೆ. ಶಾಲೆ ಮತ್ತು ಮನೆಯ ನಡುವಿನ ಬೌದ್ಧಿಕ ಅಂತರದ ಸಮಸ್ಯೆಗಳು ಕಡಿಮೆಯಾಗಿದೆ ಎಂಬುದು ಇಲ್ಲಿ ಸ್ಪಷ್ಟ. ಹೀಗಾಗಿ ಪ್ರಾಥಮಿಕ ಶಾಲೆಗೆ ಬಹಳ ದೂರದವರೆಗೆ ಕ್ರಮಿಸಬೇಕಾದ ಪ್ರಸಂಗ ಬಹಳ ಮಟ್ಟಿಗೆ ಇಂದು ಪರಿಹಾರಗೊಂಡಿದೆ. ೧೯೯೭-೯೮ರ ಶಿಕ್ಷಣ ಇಲಾಖೆಯ ವರದಿ ಪ್ರಕಾರ ಶಾಲಾ ಸೌಲಭ್ಯ ದೊರೆಯುವುದು ಮುಖ್ಯ ಸಮಸ್ಯೆಯಲ್ಲ. ಆದರೆ ಅನೇಕ ಕಾರಣಗಳಿಂದ ಇದು ಅಷ್ಟು ಸರಳವಾಗಿಲ್ಲ.

ಮೊದಲನೆಯದಾಗಿ, ಶಾಲೆಯ ದೊರೆಯುವಿಕೆಯನ್ನು ಕೇವಲ ಬೌದ್ಧಿಕ ಅಂತರದಿಂದ ಪರಿಗಣಿಸದೆ, ಸಾಮಾಜಿಕ ಅಂತರದಿಂದ ಕೂಡ ಪರಿಗಣಿಸಬೇಕು. ಸ್ಥಳೀಯ ಶಾಲೆಗೆ ಮಕ್ಕಳು ಹೋಗುವಾಗ ಇರಬಹುದಾದ ಅನೇಕ ಅಡೆತಡೆಗಳನ್ನು ಪರಿಗಣನೆ ಮಾಡಬೇಕಾಗುತ್ತದೆ. ಅನೇಕ ಪ್ರದೇಶಗಳಲ್ಲಿ ಹಳ್ಳಿಗಳು ಬಹಳ ಮಟ್ಟಿಗೆ ಬೇರೆ ಬೇರೆ ಜನವಸತಿಗಳಾಗಿ ವಿಂಗಡಣೆಯಾಗಿರುತ್ತವೆ (ಇದು ಜಾತಿ

ಆಧಾರಿತವಾಗಿಯೂ ಇರಬಹುದು). ಮತ್ತು ಒಂದು ಜನವಸತಿಯಲ್ಲಿ ಮಕ್ಕಳು ಮತ್ತೊಂದು ಜನವಸತಿಯಲ್ಲಿರುವ ಶಾಲೆಗೆ ಜಾತಿ ಒತ್ತಡಗಳಿಂದಾಗಿ ಹೋಗಲು ಸಾಧ್ಯವಾಗದಿರಬಹುದು.

ಭಾರತದ ಒಟ್ಟು ಜನವಸತಿ ನೆಲೆಗಳಲ್ಲಿ ಶೇಕಡ ೫೦.೦೦ಕ್ಕಿಂತಲೂ ಹೆಚ್ಚಿನ ಜನವಸತಿ ನೆಲೆಗಳು ಪ್ರಾಥಮಿಕ ಶಾಲೆಯನ್ನು ಹೊಂದಿವೆ. ಕರ್ನಾಟಕದಲ್ಲಿ ಈ ನಮೂನೆಯಲ್ಲಿನ ಹಾಗೆಯೇ ಕಸನದೊಡ್ಡಿ ಮತ್ತು ಕಲಮಗೆರಾ ಗ್ರಾಮಪಂಚಾಯಿತಿಯಲ್ಲಿ ಪ್ರೌಢಶಾಲೆ ಇಲ್ಲ. ಈ ಗ್ರಾಮಗಳ ಮಕ್ಕಳು ಪ್ರೌಢಶಾಲೆಗೆ ಹೋಗಬೇಕಾದರೆ, ಕನಿಷ್ಟ ೫ ರಿಂದ ೧೦ ಕಿ.ಮೀಟರ್ ದೂರ ಕ್ರಮಿಸಬೇಕು. ಜನವಸತಿ ಶಾಲೆಗಳು ಶೇಕಡ ೩೫ಕ್ಕೂ ಹೆಚ್ಚು ಇವೆ. ಉತ್ತರ ಕರ್ನಾಟಕದಲ್ಲಿ ಹಾಗೂ ಕರಾವಳಿ ಕರ್ನಾಟಕದ ಗುಡ್ಡಗಾಡುಗಳಲ್ಲಿ ಇಂತಹ ಜನವಸತಿ ನೆಲೆಗಳು ಅರ್ಧಕ್ಕಿಂತ ಹೆಚ್ಚಾಗಿವೆ. ಹೆಣ್ಣುಮಕ್ಕಳಿಗೆ ಶೈಕ್ಷಣಿಕ ಸ್ವಾತಂತ್ರ್ಯ ಚಾಲನೆಯಲ್ಲಿ ಹೆಚ್ಚಿನ ಅವಕಾಶ ಇಲ್ಲದಿರುವುದು ಗ್ರಾಮೀಣ ಪ್ರದೇಶಗಳಲ್ಲಿ ಈಗಲೂ ಹೆಚ್ಚಾಗಿ ಕಂಡುಬರುತ್ತದೆ. ಇದು ಸಾಮಾಜಿಕ ಅಂತರದಲ್ಲಿ ಇರುವ ಒಂದು ಮೂಲ ಸಮಸ್ಯೆಯೇ ಸರಿ. ನಮ್ಮ ಅಧ್ಯಯನದ ಒಂದು ಗ್ರಾಮವಾದ ಚಿಂಚರಕಿಯಲ್ಲಿ ಇದೇ ರೀತಿಯ ಉದಾಹರಣೆ ಸಿಗುತ್ತದೆ. ಆ ಗ್ರಾಮದಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆ (ಕನ್ನಡ)ಯು ಗ್ರಾಮದ ಮುಂದೆ ಅಥವಾ ಕೋಟೆಯ ಪಕ್ಕದಲ್ಲಿದೆ. ಈ ಶಾಲೆಯ ಸುತ್ತಮುತ್ತ ಇರುವ ಮುಖ್ಯ ಸಮುದಾಯ ಲಿಂಗಾಯತ. ಈ ಸಮುದಾಯವು ಈ ಪ್ರದೇಶದಲ್ಲಿ ಭೂ ಹಿಡುವಳಿಯನ್ನು ಹೊಂದಿರುವ ಪ್ರಮುಖ ಕೃಷಿಕ ಸಮುದಾಯವಾಗಿದೆ. ಇದನ್ನು ಬುಳ್ಳಾಪುರ ಗ್ರಾಮದಲ್ಲಿಯೂ ಕಾಣಬಹುದು. ಈ ಸಮುದಾಯ ಆರ್ಥಿಕವಾಗಿ ಸಾಮಾಜಿಕವಾಗಿ ಮತ್ತು ರಾಜಕೀಯ ಪ್ರಬಲತೆಯನ್ನು ಸಹ ಹೊಂದಿದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಶಾಲೆಯಿಂದ ದೂರದಲ್ಲಿ, ಕೋಟೆಗೆ ಹೊಂದಿಕೊಂಡಂತೆ ನೆಲೆಸಿರುವ ಸಮುದಾಯಗಳು ಹಿಂದುಳಿದ ಜಾತಿ-ವರ್ಗಕ್ಕೆ ಸೇರಿದ್ದು ಅಲ್ಪಸಂಖ್ಯಾತರು ಮತ್ತು ಪರಿಶಿಷ್ಟ ಜಾತಿ ಪಂಗಡಕ್ಕೆ ಸೇರಿದ್ದಾರೆ.

ಅಲ್ಲದೆ ಇವರು ಆ ಗ್ರಾಮದಲ್ಲಿ ಆರ್ಥಿಕವಾಗಿ ಅತ್ಯಂತ ಹಿಂದುಳಿದಿರುವವರು. ಇವರಿಗೆ ಶಾಲೆಯು ಬೌದ್ಧಿಕವಾಗಿ ದೊರೆತರೂ ಶಾಲಾ ವ್ಯವಸ್ಥೆಯು ಸರಳವಾಗಿ ದೊರಕುವುದು ಕಷ್ಟ ಸಾಧ್ಯ ಇದೇ ರೀತಿಯ ಮತ್ತೊಂದು ಉದಾಹರಣೆ ತಿಮ್ಮಾಪುರದ ಹೊರಭಾಗದಲ್ಲಿ ಪರಿಶಿಷ್ಟ ಜನರ ವಸತಿ ನೆಲೆಯೊಂದಿದೆ. ಅಲ್ಲಿನ ಸಮುದಾಯ ಭವನದಲ್ಲಿ (ಪೂರ್ವ ಪ್ರಾಥಮಿಕ) ಅಂಗನವಾಡಿ ಇದೆ. ಅದೇ ಕಟ್ಟಡದಲ್ಲಿ ೨೦೦೭-೦೮ನೇ ಶೈಕ್ಷಣಿಕ ಸಾಲಿನಲ್ಲಿ ಒಬ್ಬ ಶಿಕ್ಷಕರನ್ನು ಪ್ರತಿನಿಯೋಜನೆಯಲ್ಲಿ ನೇಮಿಸಿ ಪ್ರಾಥಮಿಕ ಶಾಲೆಯನ್ನು ಆರಂಭಿಸಲಾಗಿದೆ. ಆ ಶಾಲೆಗೆ ಅಧಿಕೃತ ಕಟ್ಟಡವಿದ್ದರೂ ಶಿಕ್ಷಕನಾಗಲೀ, ಮೂಲ ಸೌಲಭ್ಯ ಗಳಾಗಲೀ ಮಂಜೂರು ಮಾಡದಿರುವುದು, ನಮ್ಮ ಗ್ರಾಮೀಣ ಪರಿಸರದಲ್ಲಿ ಶೈಕ್ಷಣಿಕ ಸೌಲಭ್ಯಗಳಿದ್ದರೂ ಅವುಗಳು ಸಾಮಾಜಿಕವಾಗಿ ದೊರಕದೆ ಇರುವುದನ್ನು ತಿಳಿಸುತ್ತದೆ.

ಎರಡನೆಯದಾಗಿ, ಸಂವಿಧಾನ ನಿರ್ದೇಶಕ ತತ್ವವಾದ ಎಲ್ಲರಿಗೂ ೧೪ ವರ್ಷದ ವರೆಗೆ ಶಿಕ್ಷಣ ನೀಡಬೇಕೆಂಬ ನಿರ್ಣಯದ ಹಿನ್ನೆಲೆಯಲ್ಲಿ ಶಾಲಾ ಸೌಲಭ್ಯಗಳು ದೊರಕುವ ಭೌತಿಕ ಅಂತರ

ವಿಶ್ಲೇಷಿಸಬೇಕಾದ ಅಂಶವಾಗಿದೆ. ಶಾಲಾ ಸೌಲಭ್ಯಗಳ ದೊರಕುವಿಕೆಯು ಕೇವಲ ಪ್ರಾಥಮಿಕ ಶಾಲೆಗಳಿಗೆ ಮಾತ್ರ ಸೀಮಿತವಾಗದೆ, ಮಾಧ್ಯಮಿಕ ಶಾಲೆಗಳಿಗೂ ಕೂಡ ಅನ್ವಯವಾಗುವುದು ಕಂಡುಬರುತ್ತದೆ. ಪ್ರಾಥಮಿಕ ಶಾಲಾ ವ್ಯವಸ್ಥೆಯಿಂದ ಮಾಧ್ಯಮಿಕ ಮತ್ತು ಪ್ರೌಢಶಾಲಾ ವ್ಯವಸ್ಥೆಯ ಕಡೆ ಒಂದು ಬಾರಿ ಗಮನವನ್ನು ಸೂಕ್ಷ್ಮವಾಗಿ ಬದಲಿಸಿದರೆ, ಶಾಲಾ ಮೂಲಭೂತ ಸೌಲಭ್ಯ ಸಾಕಾಗದಿರುವುದು ಬಹಳ ದೊಡ್ಡ ಸಮಸ್ಯೆಯಾಗಿರುವುದು ಕಾಣುತ್ತದೆ. ಅಧ್ಯಯನ ಗ್ರಾಮವಾದ ಹೀರಾ ಉರ್ದು ಪ್ರಾಥಮಿಕ ಶಾಲೆಯಲ್ಲಿ ಕೇವಲ ೫ನೇ ತರಗತಿಯವರೆಗೆ ಮಾತ್ರ ಇದೆ. ನಂತರದ ತರಗತಿಗಳಿಗೆ ಮಕ್ಕಳು ಮಾನವಿ, ರಾಯಚೂರಿಗೆ ಹೋಗಬೇಕಾಗುತ್ತದೆ. ಈ ಪರಿಸ್ಥಿತಿಗೆ ಪ್ರಮುಖವಾಗಿ ಬಲಿಯಾಗುವವರು ಹೆಣ್ಣುಮಕ್ಕಳು. ಏಕೆಂದರೆ ಹೆಚ್ಚಿನ ಸಂಖ್ಯೆಯ ಪೋಷಕರು ವಿಶೇಷವಾಗಿ ಮುಸ್ಲಿಂರಲ್ಲಿ ತಮ್ಮ ಹೆಣ್ಣುಮಕ್ಕಳನ್ನು ಮತ್ತೊಂದು ಗ್ರಾಮದ ಶಾಲೆಗೆ ಹೋಗಲು ಆಸಕ್ತಿ ತೋರಿಸದಿರುವುದು ಅಥವಾ ಅದಕ್ಕೆ ವಿರೋಧವನ್ನು ವ್ಯಕ್ತಪಡಿಸುವುದು ಕಂಡುಬರುತ್ತದೆ (ಈ ಕುರಿತು ಹೆಚ್ಚಿನ ವಿವರಣೆಯನ್ನು ಈ ಅಧ್ಯಾಯದಲ್ಲಿ ಮೊದಲ ಭಾಗದಲ್ಲಿ ಚರ್ಚಿಸಲಾಗಿದೆ). ಇದಕ್ಕೆ ಉದಾಹರಣೆ ಎಂದರೆ ಉರ್ದು ಪ್ರಾಥಮಿಕ ಶಾಲೆಯ ೧ನೇ ತರಗತಿಯಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಎರಡು ಉರ್ದು ಶಾಲೆಗಳು ಸೇರಿ ೮೮ ಇದ್ದರೆ, ೫ನೇ ತರಗತಿಯಲ್ಲಿ ೨೫ ಮಂದಿ ಮತ್ತು ೭ನೇ ತರಗತಿಯಲ್ಲಿ ಕೇವಲ ೧೧ ಮಂದಿ ಹೆಣ್ಣುಮಕ್ಕಳು ಇರುತ್ತಾರೆ. ಈ ಹಿನ್ನೆಲೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಹೆಣ್ಣುಮಕ್ಕಳಿಗೆ ಇನ್ನೂ ಗುಣಮಟ್ಟದ ಶಿಕ್ಷಣ ದೊರಕುತ್ತಿಲ್ಲ ಎಂದು ಹೇಳಬಹುದು.

ಮೂರನೆಯದಾಗಿ, ಮೂಲಸಮಸ್ಯೆಯಾದ ಭೌತಿಕ ಮತ್ತು ಸಾಮಾಜಿಕ ಅಂತರವು ಹೆಚ್ಚಿನ ಅಲ್ಪಸಂಖ್ಯಾತ ಮತ್ತು ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಕುಟುಂಬದ ಮಕ್ಕಳನ್ನು ಪ್ರಾಥಮಿಕ ಶಾಲೆಯಿಂದ ಶಾಶ್ವತವಾಗಿ ದೂರವಿರಿಸಿದೆ. ಇದೇ ರೀತಿ ಅನೇಕ ಗ್ರಾಮ ಮತ್ತು ಜನವಸತಿ ನೆಲೆಗಳಲ್ಲಿ ಶಾಲಾ ವ್ಯವಸ್ಥೆ ಇದ್ದರೂ ವಾಸ್ತವಿಕವಾಗಿ ಇಲ್ಲವಾಗಿದೆ. ಇದರ ಜೊತೆಗೆ ಪ್ರತಿಕೂಲ ಭೌಗೋಳಿಕ ಪರಿಸರವು ಕೂಡ ಪ್ರಮುಖ ಸಮಸ್ಯೆಯಾಗಿದೆ. ವಿಶೇಷವಾಗಿ ಚಿಕ್ಕಮಕ್ಕಳಿಗೆ ಗ್ರಾಮದಲ್ಲಿ ಶಾಲೆಯು ಇದ್ದರೂ ಕೂಡ ಗುಡ್ಡಗಾಡು ಪ್ರದೇಶದಲ್ಲಿ ಪ್ರತ್ಯೇಕ ಜನವಸತಿ ನೆಲೆಗಳಿಂದ ಚಿಕ್ಕಮಕ್ಕಳು ಗುಡ್ಡ ಹತ್ತಿ ಇಳಿದು, ತೊರೆ ಹಳ್ಳಗಳನ್ನು ದಾಟಿ ಗ್ರಾಮದಲ್ಲಿರುವ ಶಾಲೆಯನ್ನು ಸೇರಬೇಕಾಗುತ್ತದೆ. ರಸ್ತೆಗಳೇ ಇಲ್ಲದ ಜನವಸತಿ ನೆಲೆಗಳು ಮತ್ತು ಗ್ರಾಮಗಳಿಂದ ಮಕ್ಕಳು ಮಳೆಗಾಲದಲ್ಲಿ ಶಾಲೆಗೆ ಬರುವುದು ಸಾಹಸದ ಕೆಲಸವಾಗಿದೆ. ಇದೇ ಪರಿಸ್ಥಿತಿ ಬುದ್ದಿನ್ನಿ, ತಿಮ್ಮಾಪುರ, ಬುಳ್ಳಾಪುರ ಗ್ರಾಮದಲ್ಲಿದೆ. ಮಳೆಗಾಲದಲ್ಲಿ ರಸ್ತೆ ನೀರು ಹರಿಯುವುದರಿಂದ ಚರಂಡಿಗಳೇ ಇಲ್ಲದ ಈ ಗ್ರಾಮದಲ್ಲಿ ಜನರು ನಡೆದಾಡುವುದು ಬಹಳ ಕಷ್ಟ. ಅಲ್ಲದೆ ಈ ಗ್ರಾಮವು ತಗ್ಗು ಪ್ರದೇಶದಲ್ಲಿ ಇರುವುದರಿಂದ ಹಾಗೂ ಕೃಷಿ ಮಣ್ಣಿನ ಲಕ್ಷಣವಿರುವುದರಿಂದ ಮಳೆಗಾಲದಲ್ಲಿ ಜೋಗು ಹರಿಯುತ್ತದೆ. ಇದರಿಂದ ಅನೇಕ ಸಾಂಕ್ರಾಮಿಕ ರೋಗಗಳು ಹುಟ್ಟಲಿಕ್ಕೆ ಪೂರಕವಾಗುತ್ತದೆ. ಈ ಎಲ್ಲಾ ಅಡೆತಡೆಗಳು ಸಾಧಾರಣವೆನಿಸಿದರೂ ವಿಶೇಷವಾಗಿ ಚಿಕ್ಕಮಕ್ಕಳು ಮತ್ತು ಹೆಣ್ಣುಮಕ್ಕಳು ಮಳೆಯಲ್ಲಿ ಮತ್ತು ಈಶಾನ್ಯ ಕರ್ನಾಟಕದ ಬಿರು ಬೇಸಿಗೆಯಲ್ಲಿ

ಶಾಲೆಗೆ ಬರುವುದು ಬಹಳ ಕಷ್ಟ. ಶಾಲಾ ವ್ಯವಸ್ಥೆಯನ್ನು ಪಡೆದುಕೊಳ್ಳುವುದು ಎಲ್ಲಾ ನಾಗರಿಕರ ಮೂಲಭೂತಹಕ್ಕು. ಈ ಕ್ಷೇತ್ರದಲ್ಲಿ ಎದ್ದು ಕಾಣುವ ಅನೇಕ ಸಮಸ್ಯೆಗಳ ಬಗೆಹರಿಸುವ ಬಗ್ಗೆ ಸಂಕಲ್ಪ ಮಾಡಬೇಕಾದ ಅಗತ್ಯವಿದೆ.

ಶಾಲಾ ವ್ಯವಸ್ಥೆಯು ಉಪಯೋಗವಾಗುವ ಅಂತರದಲ್ಲಿ ದೊರೆತರೂ ಅವು ಗುಣಾತ್ಮಕವಾಗಿ ಮತ್ತು ಪ್ರಮಾಣಾತ್ಮವಾಗಿ ಅನೇಕ ಕೊರತೆಗಳನ್ನು ಹೊಂದಿದೆ ಎಂಬ ಮತ್ತೊಂದು ಸಂಶಯ ಎದುರಾಗುತ್ತದೆ. ಪ್ರಾಥಮಿಕ ಶಾಲೆ ಒಂದು ಕಿ.ಮೀ ಅಂತರದ ಒಳಗೆ ಇದ್ದರೂ, ಅದು ಹೆಚ್ಚಿನ ಮಟ್ಟದಲ್ಲಿ ಕನಿಷ್ಟ ವಿದ್ಯಾರ್ಥಿಗಳನ್ನು ಹೊಂದಿದೆಯೇ? ಮೂಲಭೂತ ಸೌಲಭ್ಯಗಳನ್ನು ಹೊಂದಿದೆಯೇ? ಮುಂತಾದವನ್ನು ಪರಿಶೀಲಿಸಿ ಪರಿಗಣಿಸಬೇಕಾದ ಅವಶ್ಯಕತೆ ಇದೆ. ನಮ್ಮ ಅಧ್ಯಯನದ ಗ್ರಾಮಗಳ ಶಾಲೆಗಳಲ್ಲಿ ನಾವು ಗಮನಿಸಿರುವ ಅಥವಾ ನೋಡಿರುವಂತೆ, ಮೇಲಿನ ಎಲ್ಲಾ ಅಂಶಗಳನ್ನು ಸಾಮಾನ್ಯಕ್ಕಿಂತ ಬಹಳ ಭಿನ್ನವಾಗಿರುವ ಪರಿಸ್ಥಿತಿಯಲ್ಲಿ ಗುರುತಿಸಿದ್ದೇವೆ. ಇದನ್ನು ಮುಂದಿನ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಅಧ್ಯಾಯ ಐದು

ಶಾಲೆಯಲ್ಲಿ ಇರುವ ಮೂಲ ಸೌಲಭ್ಯಗಳು ಮತ್ತು ಶಾಲಾ ಬಿಸಿಯೂಟ

೫.೧ ಪ್ರಸ್ತಾವನೆ

ಭಾಗ-೧

೫.೨ ಕೊಠಡಿಗಳ ಸ್ಥಿತಿ-ಗತಿ

೫.೩ ಇರುವ ಕೊಠಡಿಗಳ ಸ್ಥಿತಿ-ಗತಿ

೫.೪ ಕುಡಿಯುವ ನೀರು ಮತ್ತು ಶೌಚಾಲಯ ವ್ಯವಸ್ಥೆ

೫.೫ ಕಾಂಪೌಂಡ್

ಭಾಗ-೨

೫.೬ ಕಲಿಕಾ ಸಾಮಗ್ರಿಗಳು

೫.೭ ಪರಿಣಾಮಕಾರಿ ಬೋಧನಾ ಸಮಯ

೫.೮ ಶಿಕ್ಷಕರ ಚಟುವಟಿಕೆಗಳು ಮತ್ತು ಚಟುವಟಿಕೆಯ ಸ್ವರೂಪ

೫.೯ ಸಾಮಾಜಿಕ ಅಸಮಾನತೆ ಮತ್ತು ಲಿಂಗಾಧಾರಿತ ಪಕ್ಷಪಾತ

ಭಾಗ – ೩

೫.೧೦ ಬಿಸಿಯೂಟ ಕಾರ್ಯಕ್ರಮದ ಹಿನ್ನೆಲೆ

೫.೧೧ ಆಹಾರ ಧಾನ್ಯ ವಿತರಣೆಯ ಸಾಧಕ-ಬಾಧಕಗಳು

೫.೧೨ ಶಾಲಾ ಬಿಸಿಯೂಟದ ಮೂಲ ಉದ್ದೇಶ

೫.೧೩ ದಾಖಲಾತಿ-ಹಾಜರಾತಿ-ಸಾಮಾಜೀಕರಣ-ಲಿಂಗ ಸಮಾನತೆ

೫.೧೪ ಬಿಸಿಯೂಟ-ದಾಖಲಾತಿ–ಹಾಜರಾತಿ

೫.೧೫ ಮಕ್ಕಳ ಹಸಿವನ್ನು ಕಡಿಮೆಗೊಳಿಸುತ್ತದೆ

೫.೧೬ ಬಿಸಿಯೂಟ-ಸಾಮಾಜೀಕರಣ ಮತ್ತು ಲಿಂಗ ಸಮಾನತೆ

ಅಧ್ಯಾಯ ಐದು

ಶಾಲೆಯಲ್ಲಿ ಇರುವ ಮೂಲ ಸೌಲಭ್ಯಗಳು ಮತ್ತು ಶಾಲಾ ಬಿಸಿಯೂಟ

ಪ್ರಸ್ತುತ ಅಧ್ಯಾಯದಲ್ಲಿ ಶಾಲೆಗಳಲ್ಲಿ ಇರುವ ಭೌತಿಕ, ಬೋಧನಾ ಮತ್ತು ಕಲಿಕಾ ಸಾಮಗ್ರಿಗಳ ಪರಿಸ್ಥಿತಿಯನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಇವುಗಳನ್ನು ಗುರುತಿಸುವಾಗ ವಿವಿಧ ಶೈಕ್ಷಣಿಕ ಅಭಿವೃದ್ಧಿ ಕಾರ್ಯಗಳ ಮತ್ತು ಸರ್ಕಾರಗಳ ಗುರಿಗಳನ್ನು ಮಾನದಂಡವಾಗಿ ಬಳಸಿಕೊಳ್ಳಲಾಗಿದೆ. ಈ ಅಧ್ಯಾಯವನ್ನು ಮೂರು ಭಾಗಗಳಾಗಿ ವಿಂಗಡಿಸಿದೆ. ಭಾಗ-೧ರಲ್ಲಿ ವಿವಿಧ ಶೈಕ್ಷಣಿಕ ಕಾರ್ಯಗಳ ಗುರಿ ಹಾಗೂ ಭೌತಿಕ ಸೌಲಭ್ಯಗಳ ವಿಶ್ಲೇಷಣೆ ಮಾಡುವುದರ ಜೊತೆಗೆ ಭೌತಿಕ ಸೌಲಭ್ಯಗಳ ಸ್ಥಿತಿ-ಗತಿಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಭಾಗ-೨ರಲ್ಲಿ ಬೋಧನಾ ಮತ್ತು ಕಲಿಕಾ ಸಾಮಗ್ರಿಗಳ ವಿಶ್ಲೇಷಣೆಯ ಜೊತೆಗೆ ಅವುಗಳ ಬಳಕೆಯನ್ನು ಗುರುತಿಸಲಾಗಿದೆ. ಇದರ ಜೊತೆಗೆ ಶಿಕ್ಷಕ ಸಂಪನ್ಮೂಲ, ಮಕ್ಕಳು ಶಿಕ್ಷಕರ ಪರಿಮಾಣ, ಪರಿಣಾಮಕಾರಿ ಬೋಧನಾ ಸಮಯ, ಶಿಕ್ಷಕರ ಚಟುವಟಿಕೆಗಳ ಸ್ವರೂಪ, ಸಾಮಾಜಿಕ ಹಾಗೂ ಲಿಂಗಾಧಾರಿತ ಪಕ್ಷಪಾತಗಳು ತರಗತಿಯ ಒಳಗೆ ಹೇಗೆ ನಡೆಯುತ್ತಿದೆ ಎಂಬುದನ್ನು ಸೂಕ್ಷ್ಮವಾಗಿ ವಿಶ್ಲೇಷಿಸಲಾಗಿದೆ. ಭಾಗ–೩ರಲ್ಲಿ ಶಾಲಾ ಬಿಸಿಯೂಟ ಜಾರಿಗೆ ಬಂದ ನಂತರ ಶಾಲಾ ದಾಖಲಾತಿ ಮತ್ತು ಶಾಲಾ ಹಾಜರಾತಿಯಲ್ಲಿ ಉಂಟಾಗಿರುವ ಬೆಳವಣಿಗೆಯ ಸಾಧಕ–ಬಾಧಕಗಳನ್ನು ಚರ್ಚಿಸಲಾಗಿದೆ.

ಭಾಗ-೧

೫.೧ ಪ್ರಸ್ತಾವನೆ

ಇತ್ತೀಚಿನ ವರ್ಷಗಳಲ್ಲಿ ಶಾಲಾ ವ್ಯವಸ್ಥೆಯ ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ ಮಹತ್ವದ ಹೆಜ್ಜೆಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿವಿಧ ಕಾರ್ಯಕ್ರಮಗಳ ಮೂಲಕ ಕೈಗೊಂಡಿವೆ.

ಅವೆಂದರೆ : ಸಂಪೂರ್ಣ ಸಾಕ್ಷರತಾ ಆಂದೋಲನ; ಕಪ್ಪು ಹಲಗೆ ಕಾರ್ಯಕ್ರಮ; ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ (ಡಿ.ಪಿ.ಇ.ಪಿ); ಉಚಿತ ಕಾರ್ಯಕ್ರಮ(ಉಚಿತ ಪುಸ್ತಕ, ಸಮವಸ್ತ್ರ, ಅಹಾರ ಧಾನ್ಯ ಮತ್ತು ಬಿಸಿಯೂಟ)ಗಳು; ಸರ್ವಶಿಕ್ಷಾ ಅಭಿಯಾನ ಇತ್ಯಾದಿ. ಈ ಎಲ್ಲಾ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳು ಅವಶ್ಯಕತೆಗೆ ತಕ್ಕಂತೆ ನಿಯಮಿಸಿದ್ದ ಸ್ವರೂಪವನ್ನು ಹೊಂದಿವೆ. ಆದರೆ ಇವುಗಳ ಮೂಲ ಉದ್ದೇಶ ಮಾತ್ರ, ಶಾಲೆಗಳಿಗೆ ಬೇಕಾಗುವ ಮೂಲ ಸೌಲಭ್ಯಗಳನ್ನು ಕಲ್ಪಿಸುವ ಮೂಲಕ ಶೈಕ್ಷಣಿಕ ಅಭಿವೃದ್ಧಿಯನ್ನು ಕಂಡುಕೊಳ್ಳುವುದಾಗಿದೆ.

ಪ್ರಾಥಮಿಕ ಶಾಲೆಗಳ ಮೂಲ ಸೌಲಭ್ಯಗಳು ಕಳೆದ ಹತ್ತು ವರ್ಷಗಳಲ್ಲಿ ಬಹಳ ಮಟ್ಟಿಗೆ ಪ್ರಗತಿಯನ್ನು ಕಂಡಿದೆ. ಉದಾಹರಣೆಗೆ ೫ನೆಯ ಅಖಿಲ ಭಾರತ ಶೈಕ್ಷಣಿಕ ಸಮೀಕ್ಷೆಯಿಂದ (೧೯೮೬) ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ಪ್ರತಿಯೊಂದು ತರಗತಿಗಳು ಉಪಯೋಗಿಸಲು ಯೋಗ್ಯವಾದ ಕನಿಷ್ಟ ಒಂದು ಕಪ್ಪು ಹಲಗೆ ಇರುವುದು ತಿಳಿಯುತ್ತದೆ. ೧೯೮೬ರಲ್ಲಿ ರಾಷ್ಟ್ರದ ಶೇಕಡ ೨೭.೦೦ ರಷ್ಟು ಶಾಲೆಗಳು ಏಕ ಶಿಕ್ಷಕ ಶಾಲೆಗಳಾಗಿದ್ದವು. ಆದರೆ ೧೯೯೬ರಲ್ಲಿ ಇವುಗಳ ಪ್ರಮಾಣ ಶೇಕಡ ೧೨.೦೦ಕ್ಕೆ ಇಳಿದಿದೆ. ಇದೊಂದು ಆಶಾದಾಯಕ ಬೆಳವಣಿಗೆ.

ಆದರೂ ಶಾಲಾ ಪರಿಸರದ ಮೂಲ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಮಹತ್ವದ ಪ್ರಗತಿ ಮಾತ್ರ ಇಲ್ಲವಾಗಿದೆ. ಇಲ್ಲಿನ ಕೊರತೆಯು ಕೊರತೆಯಾಗಿಯೇ ಉಳಿದಿದೆ. ಇದನ್ನು ರಾಜ್ಯ ಸರ್ಕಾರಗಳು ತನ್ನ ಶಿಕ್ಷಣ ಮಾದರಿಯಲ್ಲಿ, ಸಾರ್ವತ್ರಿಕ ಶಿಕ್ಷಣಕ್ಕೆ ಯೋಜಿಸಿದ ಕಾರ್ಯಕ್ರಮಗಳಲ್ಲಿ ವಿಶ್ಲೇಷಿಸಿ ಪರಿಗಣಿಸಬೇಕು. ಹೀಗೆ ಮಾಡುವಾಗ ಶಿಕ್ಷಣ ಇಲಾಖೆಯ ಕಾರ್ಯಕ್ರಮಗಳ ಗುರಿಗಳನ್ನು ಮೊದಲಿಗೆ ಗುರುತಿಸಬೇಕು. ಉದಾಹರಣೆಗೆ ಕಪ್ಪು ಹಲಗೆ ಕಾರ್ಯಕ್ರಮದ ಗುರಿ. ರಾಷ್ಟ್ರದ ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ಕನಿಷ್ಟ ಎರಡು ಪಕ್ಕಾ ಕೊಠಡಿಯನ್ನು ಒದಗಿಸಬೇಕು. ಒಂದು ಶಾಲೆ ಕನಿಷ್ಟ ಇಬ್ಬರು ಶಿಕ್ಷಕರನ್ನು ಹೊಂದಿರಬೇಕು. ಬೋಧನೆ ಮತ್ತು ಕಲಿಕೆಗೆ ಬೇಕಾಗುವ ಮಾಹಿತಿ ಮತ್ತು ಮಾದರಿ ಸಲಕರಣೆಗಳನ್ನು ಹೊಂದಿರಬೇಕು. ಅವೆಂದರೆ ಬರೆಯಲು ಯೋಗ್ಯವಾದ ಕಪ್ಪು ಹಲಗೆ, ನಕ್ಷೆ, ಚಿತ್ರಗಳು, ಪುಟ್ಟಗ್ರಂಥಾಲಯ, ಎಲ್ಲಾ ಹವಾಗುಣಗಳಿಗೂ ಅನುಕೂಲವಾಗುವ ಎರಡು ವಿಶಾಲವಾದ ಕೊಠಡಿಗಳು, ಹೆಣ್ಣು ಹಾಗೂ ಗಂಡು ಮಕ್ಕಳಿಗೆ ಪ್ರತ್ಯೇಕ ಶೌಚಾಲಯದ ಸೌಲಭ್ಯ, ಇಬ್ಬರು ಶಿಕ್ಷಕರಲ್ಲಿ ಕನಿಷ್ಟ ಒಬ್ಬರು ಮಹಿಳಾ ಶಿಕ್ಷಕರು, ಆಟಿಕೆಗಳು, ಆಟದ ಮೈದಾನ ಇತ್ಯಾದಿ(ಶಿಕ್ಷಣ ಇಲಾಖೆಯ ವಾರ್ಷಿಕ ವರದಿ, ೧೯೯೭-೯೮; ೨೦೦೭-೦೮).

ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮ ಶಾಲೆಯಲ್ಲಿ ಇರುವ ಭೌತಿಕ ಮತ್ತು ಬೌದ್ಧಿಕ ಮೂಲಸೌಲಭ್ಯ ಕೊರತೆಯನ್ನು ತುಂಬುವ ಮೂಲಕ ಶೈಕ್ಷಣಿಕ ಅಭಿವೃದ್ಧಿ ಸಾಧಿಸಲು ರೂಪಿತವಾಗಿದೆ. ಈ ಕಾರ್ಯಕ್ರಮದ ಮೂಲ ಉದ್ದೇಶ ೨೦೧೦ರೊಳಗೆ ರಾಷ್ಟ್ರದ ೦೬-೧೪ ವಯೋಮಾನದ ಎಲ್ಲಾ ಮಕ್ಕಳಿಗೂ ಜೀವನಕ್ಕೆ ಉಪಯುಕ್ತವಾಗುವ ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದಾಗಿದೆ. ಅಲ್ಲದೆ,

ಶಿಕ್ಷಣ-ಸಾಕ್ಷರತಾ ಕ್ಷೇತ್ರದಲ್ಲಿ ಇರುವ ಸಾಮಾಜಿಕ, ಲಿಂಗಾಧಾರಿತ ಮತ್ತು ಪ್ರಾದೇಶಿಕ ತಾರತಮ್ಯಗಳನ್ನು ಹೋಗಲಾಡಿಸುವುದು. ಹಾಗೂ ಸ್ಥಳೀಯ ಸಮುದಾಯವನ್ನು ಶೈಕ್ಷಣಿಕ ಅಭಿವೃದ್ಧಿಗೆ ಸಕ್ರಿಯವಾಗಿ ತೊಡಗಿಸಬೇಕು ಎಂಬ ಉದ್ದೇಶವನ್ನು ಕೂಡ ಹೊಂದಿದೆ. ಈ ಕಾರ್ಯಕ್ರಮವು ಮಕ್ಕಳು ಮತ್ತು ಶಿಕ್ಷಕರಿಗೆ ಬೇಕಾಗುವ ಬೌದ್ಧಿಕ ಸೌಲಭ್ಯಗಳನ್ನು ನೀಡುವ ಜೊತೆಗೆ ಶಾಲೆಗೆ ಬೇಕಾಗುವ ಭೌತಿಕ ಸೌಲಭ್ಯಗಳಾದ ಶಾಲಾ ಕಟ್ಟಡ ಅಥವಾ ಹೆಚ್ಚುವರಿ ಕೊಠಡಿಗಳು, ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯ, ಶಾಲಾ ಕಾಂಪೌಂಡ್, ವಿದ್ಯುಚ್ಛಕ್ತಿ ಮತ್ತು ಕುಡಿಯುವ ನೀರಿನ ಸೌಲಭ್ಯಗಳನ್ನು ಪೂರೈಸುವ ಆಶಯವನ್ನು ಹೊಂದಿದೆ (ಸರ್ವಶಿಕ್ಷಾ ಅಭಿಯಾನ ಕಾರ್ಯಕ್ರಮ, ೨೦೦೧).

ಶಾಲೆಗಳಲ್ಲಿ ಮೂಲ ಸೌಲಭ್ಯಗಳ ಕೊರತೆ ಯಾವಾಗ ಹೆಚ್ಚು ಪ್ರಖರವಾಗಿ ಕಾಣುತ್ತದೆ ಎಂದರೆ, ಪ್ರಸ್ತುತ ಇರುವ ಸೌಲಭ್ಯಗಳ ಜೊತೆಗೆ ಅವಶ್ಯಕವಾಗಿ ಇರಬೇಕಾದ ಸೌಲಭ್ಯಗಳನ್ನು ಹೋಲಿಸಿ ನೋಡಿದಾಗ. ಇದರ ಜೊತೆಗೆ ರಾಷ್ಟ್ರ ಹಾಗೂ ರಾಜ್ಯಮಟ್ಟದ ಅಂಕಿ-ಅಂಶಗಳನ್ನು ಇಡಿಯಾಗಿ ನೋಡದೆ ಬಿಡಿ ಬಿಡಿಯಾಗಿ ನೋಡಿದಾಗ ಸ್ಥಳೀಯ ಅಥವಾ ಗ್ರಾಮ ಮಟ್ಟದಲ್ಲಿ ಇರಬಹುದಾದ ಮೂಲಸೌಲಭ್ಯದ ಕೊರತೆಯನ್ನು ಗುರುತಿಸಬಹುದು. ಶಾಲೆಗಳ ಮಟ್ಟಿಗೆ ಇದನ್ನು ಗುರುತಿಸುವುದು ಸ್ವಲ್ಪಮಟ್ಟಿಗೆ ಸರಳ. ಶಾಲಾ ಕೊಠಡಿ, ಮಕ್ಕಳು ಕುಳಿತುಕೊಳ್ಳುವ ಸ್ಥಳ, ಬೋಧನೆ ಮತ್ತು ಕಲಿಕಾ ಸಾಮಗ್ರಿಗಳ ಬಳಕೆ ಮತ್ತು ಸಂಘಟನೆ, ಕುಡಿಯುವ ನೀರು, ಹೆಣ್ಣು ಹಾಗೂ ಗಂಡು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ, ವಿದ್ಯುತ್ ಸೌಲಭ್ಯ, ಆಟದ ಮೈದಾನ, ಇನ್ನೂ ಮುಂತಾದ ಸೌಲಭ್ಯಗಳನ್ನು ಗುರುತಿಸಿ ವಿಶ್ಲೇಷಿಸಿದಾಗ ಅನೇಕ ಕಾರ್ಯಕ್ರಮಗಳ ಗುರಿ ಎಷ್ಟರ ಮಟ್ಟಿಗೆ ಸಾಧಿತವಾಗಿದೆ ಎಂಬುದನ್ನು ನಾವು ಕಂಡುಕೊಳ್ಳಬಹುದು. ಉದಾಹರಣೆಗೆ, ಕಪ್ಪು ಹಲಗೆ ಕಾರ್ಯಕ್ರಮದ ಪ್ರಮುಖ ಗುರಿ ದೊಡ್ಡದಾದ ಮತ್ತು ಎಲ್ಲಾ ರೀತಿಯ ಹವಾಗುಣಗಳಿಗೂ ಪ್ರತಿರೋಧ ಹೊಂದಿದ ಎರಡು ಕೊಠಡಿಗಳನ್ನು ಪ್ರತಿ ಶಾಲೆಗೆ ನೀಡಬೇಕು ಎಂಬ ಮಹತ್ವಾಕಾಂಕ್ಷೆಯು ಅನೇಕ ಶಾಲೆಗಳಲ್ಲಿ ಇನ್ನೂ ದೊರಕಬೇಕಾಗಿರುವ ಅಂಶವಾಗಿಯೇ ಉಳಿದಿದೆ. ಕರ್ನಾಟಕ ರಾಜ್ಯದಲ್ಲಿ ಇರುವ ಒಟ್ಟು ೪೩ ಸಾವಿರ ಸರ್ಕಾರಿ ಪ್ರಾಥಮಿಕ ಶಾಲೆಗಳ ಪೈಕಿ, ಎರಡು ಸಾವಿರ ಶಾಲೆಗಳಿಗೆ ಸ್ವಂತ ಕಟ್ಟಡಗಳಿಲ್ಲ. ಮೂರು ಸಾವಿರ ಶಾಲೆಗಳಲ್ಲಿ ಕೊಠಡಿಗಳ ಕೊರತೆ ಇದೆ. ಶೇಕಡ ೮೦.೦೦ರಷ್ಟು ಶಾಲೆಗಳಲ್ಲಿ ಶೌಚಾಲಯಗಳಿಲ್ಲ. ಶೇಕಡ ೬೭.೦೦ರಷ್ಟು ಶಾಲೆಗಳಲ್ಲಿ ಕುಡಿಯುವ ನೀರಿನ ಸೌಲಭ್ಯವಿಲ್ಲ. ಜೊತೆಗೆ ಎಷ್ಟೋ ಶಾಲೆಗಳಲ್ಲಿ ಮಕ್ಕಳಿಗೆ ಆಟವಾಡಲು ಆಟದ ಮೈದಾನವಿಲ್ಲ. ಈ ಹಿನ್ನೆಲೆಯಲ್ಲಿ ನಾವು ಅಧ್ಯಯನ ನಡೆಸಿದ ಶಾಲೆಗಳಲ್ಲಿ ಇರುವ ಬೌದ್ಧಿಕ ಮತ್ತು ಭೌತಿಕ ಮೂಲಸೌಲಭ್ಯಗಳ ಕುರಿತ ವಿಶ್ಲೇಷಣೆ ಈ ಅಧ್ಯಾಯದಲ್ಲಿದೆ.

೫.೨ ಕೊಠಡಿಗಳ ಸ್ಥಿತಿ-ಗತಿ

ಶಾಲೆಗಳಿಗೆ ಪ್ರತಿ ತರಗತಿಯ ಪ್ರತ್ಯೇಕ ಬೋಧನೆಗೆ ಪ್ರತ್ಯೇಕ ಕೊಠಡಿ ಅತ್ಯಂತ ಅವಶ್ಯಕ. ಶಾಲೆಯಲ್ಲಿನ ತರಗತಿಗಳ ಸಂಖ್ಯೆಗೆ ಅನುಗುಣವಾಗಿ ಕೊಠಡಿಗಳು ಇರಬೇಕು. ಇದು ಸರ್ಕಾರದ ನಿಯಮ ಕೂಡ. ನಾವು ಅಧ್ಯಯನ ನಡೆಸಿದ ಎರಡು ಗ್ರಾಮ ಪಂಚಾಯತಿಯ ೨೪ ಗ್ರಾಮಗಳ ೨೪

ಶಾಲೆಗಳಲ್ಲಿ ಅಗತ್ಯವಾಗಿ ಇರಬೇಕಾದ ಕೊಠಡಿಗಳ ಸಂಖ್ಯೆ ೧೫೦. ಆದರೆ ಆ ಶಾಲೆಗಳಲ್ಲಿ ಪ್ರಸ್ತುತ ಇರುವ ಕೊಠಡಿಗಳ ಸಂಖ್ಯೆ ೭೩. ಈ ಶಾಲೆಗಳಿಗೆ ಅವಶ್ಯಕವಾಗಿ ಬೇಕಾಗಿರುವ ಕೊಠಡಿಗಳ ಸಂಖ್ಯೆ ೭೭. ಇದನ್ನು ಗ್ರಾಮಪಂಚಾಯತಿವಾರು ಗುರುತಿಸಬಹುದು. ಹೀರಾ ಗ್ರಾಮ ಪಂಚಾಯತಿಯಲ್ಲಿ ಇರುವ ೧೦ ಶಾಲೆಗಳಲ್ಲಿ ಪ್ರಸ್ತುತ ೨೮ ಕೊಠಡಿಗಳಿವೆ. ಈ ಪಂಚಾಯತಿ ಶಾಲೆಗಳಿಗೆ ಅವಶ್ಯಕವಾಗಿ ಇರಬೇಕಾದ ಕೊಠಡಿಗಳ ಸಂಖ್ಯೆ ೫೪. ಇನ್ನೂ ಅಗತ್ಯವಾಗಿ ೨೬ ಕೊಠಡಿಗಳು ಬೇಕಾಗಿದೆ. ಬಳದರೆ ಗ್ರಾಮಪಂಚಾಯತಿಯಲ್ಲಿ ಇರುವ ೧೪ ಶಾಲೆಗಳಲ್ಲಿ ಪ್ರತಿ ತರಗತಿಗಳನ್ನು ಪ್ರತ್ಯೇಕವಾಗಿ ನಡೆಸಲು ಅವಶ್ಯಕವಾಗಿ ೯೬ ಕೊಠಡಿಗಳು ಬೇಕಾಗಿದೆ. ಅಂದರೆ ಈ ಪಂಚಾಯತಿಯಲ್ಲಿ ಇರುವ ಶಾಲೆಗಳಿಗೆ ಇನ್ನೂ ಅಗತ್ಯವಾಗಿ ಬೇಕಾಗಿರುವ ಕೊಠಡಿಗಳ ಸಂಖ್ಯೆ ೫೧. ಅಂದರೆ ಪ್ರತಿ ತರಗತಿಗಳನ್ನು ಪ್ರತ್ಯೇಕವಾಗಿ ನಡೆಸಲು ಅವಶ್ಯಕವಾಗಿ ಒಟ್ಟು ೯೬ ಕೊಠಡಿ ಬೇಕಿದು ಅಲ್ಲಿ ಲಭ್ಯವಿರುವುದು ಕೇವಲ ೪೫ ಕೊಠಡಿಗಳು ಮಾತ್ರ. ಒಟ್ಟು ಎರಡು ಪಂಚಾಯತಿಗಳ ೨೪ಶಾಲೆಗಳಲ್ಲಿ ಇರಬೇಕಾದ ಕೊಠಡಿಗಳ ಸಂಖ್ಯೆ ೧೫೦. ಆದರೆ ಪ್ರಸ್ತುತ ೭೩ ಕೊಠಡಿಗಳಿವೆ. ಇನ್ನು ೭೭ಕೊಠಡಿಗಳು ಅವಶ್ಯಕವಾಗಿ ಬೇಕಾಗಿದೆ.

೫.೩ ಇರುವ ಕೊಠಡಿಗಳ ಸ್ಥಿತಿ-ಗತಿ

ಅಧ್ಯಯನ ನಡೆಸಿದ ಶಾಲೆಗಳಲ್ಲಿ ಈಗಾಗಲೇ ಇರುವ ೭೩ ಕೊಠಡಿಗಳಲ್ಲಿ ೪೭ ಕೊಠಡಿಗಳ ಮೇಲ್‌ಚಾವಣಿ ಆರ್.ಸಿ.ಸಿಯಾಗಿದ್ದರೆ, ೨೦ ಕೊಠಡಿಗಳ ಮೇಲ್‌ಚಾವಣಿ ಹೆಂಚು, ಉಳಿದ ೦೬ರ ಕೊಠಡಿಗಳ ಮೇಲ್‌ಚಾವಣಿ ಶೀಟ್ ಆಗಿರುತ್ತದೆ. ಬಹುತೇಕ ಎಲ್ಲಾ ಶಾಲಾ ಕೊಠಡಿಗಳ ನೆಲಕ್ಕೆ ಪಾರ್ಟಿಕಲ್ಲನ್ನು ಜೋಡಿಸಲಾಗಿದೆ. ಕೆಲವು ಶಾಲೆಗಳ ಕೊಠಡಿಗಳ ನೆಲ ಸಿಮೆಂಟು-ಮರಳು-ಜಲ್ಲಿಯಿಂದ ನಿರ್ಮಿಸಲಾಗಿದೆ. ಹೆಂಚಿನ ಕೊಠಡಿಗಳು ಹಾಗೂ ತುಂಬಾ ಹಿಂದೆ ನಿರ್ಮಿಸಲಾಗಿರುವ ಶಾಲಾ ಕೊಠಡಿಗಳ ಗೋಡೆಗಳನ್ನು ಗಾರೆಯಿಂದ ನಿರ್ಮಿಸಲಾಗಿದೆ. ಆದರೆ ಇತ್ತೀಚೆಗೆ ಅಂದರೆ ಸುಮಾರು ೧೦-೧೫ ವರ್ಷಗಳ ಹಿಂದೆ ನಿರ್ಮಿಸಲಾಗಿರುವ ಕೊಠಡಿಗಳ ಕಟ್ಟಡಕ್ಕೆ ಸಿಮೆಂಟ್ ಬಳಸಲಾಗಿದೆ. ವಿಶೇಷವೆಂದರೆ, ಶಾಲೆಗಳಲ್ಲಿ ಇರುವ ಎಲ್ಲಾ ಕೊಠಡಿಗಳ ಆಕಾರ ಒಂದೇ ರೀತಿಯಲ್ಲಿವೆ ಕೊಠಡಿಗಳ ಉದ್ದ-ಅಗಲ ಇಲ್ಲದಿರುವುದು ಮತ್ತು ಎತ್ತರ ಸಹ ಒಂದು ಕೊಠಡಿಯಿಂದ ಮತ್ತೊಂದು ಕೊಠಡಿಗೆ ಬದಲಾವಣೆಯಾಗಿದೆ. ಆರ್.ಸಿ.ಸಿ ಮತ್ತು ಶೀಟ್‌ನ ಮೇಲ್‌ಚಾವಣಿ ಹೊಂದಿರುವ ಕೊಠಡಿಗಳ ಎತ್ತರ ಅಗಲ ಕಡಿಮೆ ಇದ್ದರೆ, ಹೆಂಚಿನ ಮೇಲ್‌ಚಾವಣಿ ಇರುವ ಕೊಠಡಿಗಳು ಎತ್ತರ-ಅಗಲದಲ್ಲಿ ಸ್ವಲ್ಪ ವಿಸ್ತೀರ್ಣವಾಗಿವೆ. ಕೊಠಡಿಗಳ ಆಕಾರ -ಸ್ವರೂಪದಲ್ಲಿ ವ್ಯತ್ಯಾಸವಿರುವುದಕ್ಕೆ ಪ್ರಮುಖ ಕಾರಣ ಶಾಲೆಗೆ ಕೊಠಡಿ ನಿರ್ಮಾಣ ಮಾಡಲು ಹಣ ಮಂಜುರಾಗಿರುವುದು ವಿವಿಧ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ. ಉದಾಹರಣೆಗೆ ಕಪ್ಪು ಹಲಗೆ ಕಾರ್ಯಕ್ರಮದಲ್ಲಿ ಮಂಜೂರಾದ ಕೊಠಡಿಗಳ ಆಕಾರ ಒಂದು ರೀತಿ ಇದ್ದರೆ, ಡಿ.ಪಿ.ಇ.ಪಿ ಮತ್ತು ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದಲ್ಲಿ ನಿರ್ಮಿಸಲಾದ ಕೊಠಡಿಗಳ ಆಕಾರ ಮತ್ತೊಂದು ರೀತಿಯಲ್ಲಿದೆ. ಅಲ್ಲದೆ ವಿವಿಧ ಕಾರ್ಯಕ್ರಮಗಳನ್ನು ಆಚರಣೆಗೆ ತರುವಾಗ ವಿವಿಧ ಇಲಾಖೆಗಳು ಪ್ರತೇಕವಾಗಿ ಕಟ್ಟಿ ನಿರ್ಮಾಣ ಮಾಡಿರುವುದು ಕಂಡುಬರುತ್ತದೆ.

ಹೊಸದಾಗಿ ನಿರ್ಮಿಸಲಾಗಿರುವ ಕೆಲವು ಶಾಲಾ ಕೊಠಡಿಗಳನ್ನು ಹೊರತು ಪಡಿಸಿದರೆ ಉಳಿದ ಕೊಠಡಿಗಳ ರಿಪೇರಿ ಮಾಡುವ ಅವಶ್ಯಕತೆ ಇದೆ. ಹೆಂಚಿನ ಮೇಲ್‌ಚಾವಣಿ ಇರುವ ಕೊಠಡಿಗಳಲ್ಲಿ ಕೆಲವು ಜಂತೆಗಳನ್ನು ಮತ್ತು ಅಂಚುಗಳನ್ನು ಬದಲಾಯಿಸಬೇಕು. ಶೀಟ್ ಮೇಲ್ ಹೊದಿಕೆ ಇರುವ ಕೆಲವು ಕೊಠಡಿಗಳಲ್ಲಿ ಕೆಲವು ಭಾಗದಲ್ಲಿ ಶೀಟ್‌ಗಳು ಹಾಳಾಗಿವೆ. ಹೀರಾ ಪಂಚಾಯತಿಯ ಶಾಲೆಗಳ ಕೆಲವು ಕೊಠಡಿಗಳ ನೆಲ ಸಂಪೂರ್ಣವಾಗಿ ಕಿತ್ತುಹೋಗಿದೆ. ಆ ಕೊಠಡಿಗಳಲ್ಲಿ ಮಕ್ಕಳು ಅಲ್ಲಿಯೇ ಕುಳಿತುಕೊಳ್ಳುತ್ತಿದ್ದಾರೆ. ಹೀಗೆ ಹಾಳಾಗಿರುವ ಕೊಠಡಿಗಳು ರಿಪೇರಿ ಬಯಸಿವೆ. ಕೊಠಡಿಗಳ ಆಕಾರ ಮತ್ತು ವಿಸ್ತೀರ್ಣದಲ್ಲಿ ವಿಶಾಲವಾಗಿ ಇಲ್ಲದೆ ಇರುವ ಕಾರಣ ಕೊಠಡಿಗಳು ಎಲ್ಲಾ ಹವಾಗುಣಕ್ಕೆ ಹೊಂದಿಕೊಳ್ಳುವ ಲಕ್ಷಣ ಹೊಂದಿಲ್ಲ. ಹೆಂಚಿನ ಮೇಲ್‌ಚಾವಣಿ ಇರುವ ಕೊಠಡಿಗಳನ್ನು ಹೊರತುಪಡಿಸಿ ಬಹುತೇಕ ಕೊಠಡಿಗಳು ಎತ್ತರ ಕಡಿಮೆ ಇರುವ ಕಾರಣ ಬಿರುಬೇಸಿಗೆಯಲ್ಲಿ ಮಕ್ಕಳು ಕೊಠಡಿಯ ಒಳಗೆ ಕುಳಿತು ಕೊಳ್ಳುವುದೇ ದುಸ್ತರ. ಅದರಲ್ಲಿಯೂ ಶೀಟ್ ಮೇಲ್‌ಚಾವಣಿ ಹೊಂದಿರುವ ಕೊಠಡಿಗಳಲ್ಲಿ ಬೇಸಿಗೆಯಲ್ಲಿ ಕುಳಿತುಕೊಳ್ಳವುದೇ ಒಂದು ಸಾಹಸ. ಇನ್ನೂ ಈ ಕೊಠಡಿಗಳಲ್ಲಿ ಬೋಧನೆ ಕಲಿಕೆ ಕಷ್ಟ ಸಾಧ್ಯವಾದ ಮಾತು. ನಾವು ಭೇಟಿ ನೀಡಿದ ಎಲ್ಲಾ ಶಾಲೆಗಳಲ್ಲಿ ಮುಖ್ಯಶಿಕ್ಷಕರ ಕಛೇರಿಯನ್ನು ಹೊರತುಪಡಿಸಿ, ಇತರ ಕೊಠಡಿಗಳಲ್ಲಿ ಯಾವುದೇ ರೀತಿಯ ಗಾಳಿಯಂತ್ರಗಳು ಕಾಣಲು ಸಿಗಲಿಲ್ಲ. ಕೆಲವು ಕೊಠಡಿಗಳ ಬಾಗಿಲು ಮತ್ತು ಕಿಟಕಿಗಳು ಹಾಳಾಗಿವೆ. ಕೆಲವು ಕೊಠಡಿಗಳ ಕಿಟಕಿಗಳು ಆಕಾರದಲ್ಲಿ ಅತಿ ಚಿಕ್ಕದಾಗಿವೆ. ಹೀಗಾಗಿ ಅಂತಹ ಶಾಲಾ ಕೊಠಡಿಗಳಲ್ಲಿ ಗಾಳಿ ಮತ್ತು ಬೆಳಕಿನ ಕೊರತೆ ಸ್ವಲ್ಪ ಹೆಚ್ಚಾಗಿದೆ.

ಶಾಲಾ ಕಟ್ಟಡಗಳ ಆಕಾರ-ವಿಸ್ತೀರ್ಣದಲ್ಲಿ ಚಿಕ್ಕದಾಗಿರುವುದನ್ನು ಅಸಮಾನ್ಯ ಎಂದು ಪರಿಗಣಿಸಬಹುದು. ಅಧಿಕೃತವಾಗಿ ಮಂಜೂರಾತಿ ದೊರೆತ ಕಟ್ಟಡದ ಮೂಲ ಪ್ಲ್ಯಾನ್ ಕಟ್ಟಡ ನಿರ್ಮಿಸುವ ಹಂತದಲ್ಲಿ ಬದಲಾವಣೆಯಾಗಿರುವುದು, ನಿರುತ್ಸಾಹದಾಯಕವಾದ ಕಟ್ಟಡ ನಿರ್ಮಾಣ, ಕಟ್ಟಡ ನಿರ್ಮಾಣಕ್ಕೆ ಕಡಿಮೆ ಗುಣಮಟ್ಟದ ಸಾಮಗ್ರಿಗಳ ಬಳಕೆ ಅಸಾಮಾನ್ಯ ಎಂದು ಪರಿಗಣಿಸಲು ಸಾಧ್ಯವಿಲ್ಲ. ಹೊಸದಾಗಿ ನಿರ್ಮಾಣವಾದ ಶಾಲಾ ಕೊಠಡಿಗಳು ಮಂಜೂರಾತಿ ದೊರೆತ ಪ್ಲ್ಯಾನ್‌ಗಿಂತ ಆಕಾರದಲ್ಲಿ ವಿಸ್ತೀರ್ಣದಲ್ಲಿ ಚಿಕ್ಕದಾಗಿವೆ. ಅಂದರೆ ಕೊಠಡಿಗಳ ನಿರ್ಮಾಣದ ಹಂತದಲ್ಲಿಯೇ ಪ್ಲ್ಯಾನ್ ಬದಲಾಗಿರುವುದು ಸ್ಪಷ್ಟ. ಹೊಸದಾಗಿ ನಿರ್ಮಾಣವಾದ ಕೊಠಡಿ ಕಟ್ಟಡಗಳು ಹಾಗೂ ಹೊಸದಾಗಿ ರಿಪೇರಿಯಾದ ಕೊಠಡಿಗಳ ಮೇಲ್‌ಚಾವಣಿ ನಿರ್ಮಾಣದಲ್ಲಿ ಕೊರತೆ ಇರುವುದು ಸಾಮಾನ್ಯ ಜನರಿಗೂ ಎದ್ದುಕಾಣುತ್ತದೆ. ಕೊಠಡಿಗಳ ನೆಲ ಗೋಡೆ ಬಿರುಕು ಬಿಟ್ಟಿರುವ ಪ್ರಮಾಣ ಹೆಚ್ಚಾಗಿದೆ. ಗಮನಿಸಬೇಕಾದ ಅಂಶವೆಂದರೆ ಶಾಲಾ ಕೊಠಡಿಗಳು ಹೊಸದಾಗಿದ್ದರೂ ಆಕಾರದಲ್ಲಿ ವಿಸ್ತೀರ್ಣದಲ್ಲಿ ಚಿಕ್ಕದಾಗಿದ್ದು ಗಾಳಿ ಬೆಳಕಿನ ತೊಂದರೆ ಎದುರಿಸುತ್ತಿವೆ. ಹೀರಾ ಉರ್ದು ಶಾಲೆಯ ಕಟ್ಟಡ ಸಂಪೂರ್ಣ ಹೊಸದಾಗಿದ್ದರೂ ಗಾಳಿ ಮತ್ತು ಬೆಳಕಿನ ತೊಂದರೆ ಆ ಶಾಲೆಯ ಕೊಠಡಿಗಳಲ್ಲಿವೆ. ಇದಕ್ಕೆ ಆ ಶಾಲೆಯ ಕಟ್ಟಡಕ್ಕೆ ಸೇರಿದಂತೆ ಎತ್ತರವಾದ ಕೋಟೆ ಗೋಡೆ ಇದೆ. ಶಾಲೆಯ ಕಟ್ಟಡ ನಿರ್ಮಾಣದಲ್ಲಿ ಇದನ್ನು ಗಮನಿಸದೆ

ಕೇವಲ ಶಾಲೆಗೆ ಕೊಠಡಿಗಳು ಬೇಕು ಎಂಬ ಒಂದೇ ಉದ್ದೇಶದಿಂದ ನಿರ್ಮಾಣ ಮಾಡಲಾಗಿದೆ. ಇದರಿಂದ ಸ್ಪಷ್ಟವಾಗುವ ಅಂಶವೆಂದರೆ ಶಾಲಾ ಕೊಠಡಿಗಳ ನಿರ್ಮಾಣ ಹಂತದಲ್ಲಿ ಉದಾಸೀನತೆಯಿಂದ ಶಾಲೆ ನಡೆಸಲು ಅಗತ್ಯವಾಗಿ ಗಾಳಿ ಬೆಳಕು ಕೊಠಡಿಗೆ ಪ್ರವೇಶಿಸದಂತೆ ಶಾಲಾ ಕೊಠಡಿಗಳನ್ನು ನಿರ್ಮಿಸಲಾಗುತ್ತಿದೆ. ಇದನ್ನು ಸಂಬಂಧಪಟ್ಟ ಎಲ್ಲರೂ ಗಂಭೀರವಾಗಿ ಪರಿಗಣಿಸಬೇಕಾಗಿದೆ.

ಶಾಲಾ ಕೊಠಡಿಗಳ ನಿರ್ಮಾಣದಲ್ಲಿ ಉಂಟಾಗಿರುವ ಕೊರತೆ ಅಥವಾ ತೊಂದರೆಗಳು ಅನಿರೀಕ್ಷಿತವಾದುದ್ದಲ್ಲ. ಕಟ್ಟಡ ನಿರ್ಮಾಣದ ಸಂದರ್ಭದಲ್ಲಿ ಮೇಲ್‌ಉಸ್ತುವಾರಿ ನೋಡುತ್ತಿದ್ದ ಅಧಿಕಾರಿಗಳು ಗುತ್ತಿಗೆದಾರರಿಂದ ಹಣ ತೆಗೆದುಕೊಂಡು ನಿರ್ದಿಷ್ಟ ಪ್ರಮಾಣದಲ್ಲಿ ನಿರ್ಮಾಣ ಸಾಮಗ್ರಿಗಳನ್ನು ಬಳಸದೆ ಕನಿಷ್ಟ ಮಟ್ಟದ ನಿರ್ಮಾಣ ಮಾಡಿದ್ದಾರೆ ಎಂದು ಗ್ರಾಮಸ್ಥರು ಮತ್ತು ಶಿಕ್ಷಕರು ತಿಳಿಸುತ್ತಾರೆ. ಅಲ್ಲದೆ, ಶಾಲಾ ಕೊಠಡಿಗಳ ನಿರ್ಮಾಣದಲ್ಲಿ ಶಿಕ್ಷಣ ಇಲಾಖೆಯ ಪಾತ್ರ ಇರುವುದಿಲ್ಲ. ಜಿಲ್ಲಾ ಪಂಚಾಯತಿ ಅಥವಾ ಕರ್ನಾಟಕ ಭೂಸೇನಾ ನಿಗಮ, ಅಥವಾ ಪಿ.ಡಬ್ಲ್ಯೂಡಿ ಇಲಾಖೆಯವರು ಸಾಮಾನ್ಯವಾಗಿ ಶಾಲಾ ಕಟ್ಟಡದ ಯೋಜನೆಯನ್ನು ತಯಾರು ಮಾಡುತ್ತಾರೆ. ಹೀಗಾಗಿ ಶಾಲಾ ಕೊಠಡಿಗಳನ್ನು ತರಗತಿಗೆ ಉಪಯೋಗವಾಗುವ ರೀತಿ ನಿರ್ಮಾಣ ಮಾಡಲು ಸಾಧ್ಯವಿಲ್ಲ. ವಾಸ್ತವಿಕವಾಗಿ ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಶಿಕ್ಷಣ ಇಲಾಖೆಯ ಅಧಿಕಾರಿಗಳು ಮತ್ತು ಸ್ಥಳೀಯ ಶಿಕ್ಷಕರನ್ನು ತೊಡಗಿಸಿಕೊಳ್ಳುವುದರಿಂದ ಕೊಠಡಿಗಳನ್ನು ಉತ್ತಮವಾಗಿ ನಿರ್ಮಾಣ ಮಾಡಿಕೊಳ್ಳಬಹುದು.

ಮತ್ತೊಂದು ಪ್ರಮುಖ ಅಂಶ-ತುಂಬಾ ಹಳೆಯದಾಗಿರುವ ಕಟ್ಟಡಗಳನ್ನು ಸರಿಯಾಗಿ ಕಾಲ ಕಾಲಕ್ಕೆ ರಿಪೇರಿಯ ನಿರ್ವಹಣೆಯಾಗದಿರುವುದು. ಇದಕ್ಕೆ ಹಣ ತಾಲ್ಲೂಕು ಪಂಚಾಯತಿಯಿಂದ ಬರುತ್ತದೆ. ಹೀಗೆ ಬಂದ ಹಣವನ್ನು ಗ್ರಾಮಪಂಚಾಯತಿಯ ಮೂಲಕ ಖರ್ಚುಮಾಡಬೇಕು. ಹೀಗಾಗಿ ಗ್ರಾಮಪಂಚಾಯತಿ ಕಾರ್ಯದರ್ಶಿ ಮತ್ತು ಅಧ್ಯಕ್ಷರು ಸುಣ್ಣ, ಬಣ್ಣ, ಇತರ ಸಣ್ಣ-ಪುಟ್ಟ ಕೆಲಸಗಳನ್ನು ಮಾಡಿ ಹಣವನ್ನು ಪಡೆದುಕೊಳ್ಳುತ್ತಾರೆ. ಬಹುತೇಕ ಸಂದರ್ಭಗಳಲ್ಲಿ ಯಾವುದೇ ಕೆಲಸವನ್ನು ಮಾಡದೆ ಹಣ ತಗೆದುಕೊಂಡಿರುವ ನಿದರ್ಶನಗಳು ಇವೆ. ಇಂತಹ ಕೆಲಸ ಮಾಡುವವರು ಸ್ಥಳೀಯರಾಗಿರುವುದರಿಂದ ನಾವು ಯಾವುದೇ ಕ್ರಮ ಕೈಗೊಳ್ಳಲು ಅಸಹಾಯಕರಾಗಿದ್ದೀವಿ ಎಂದು ಬಹುತೇಕ ಎಲ್ಲಾ ಶಾಲೆಗಳ ಮುಖ್ಯ ಶಿಕ್ಷಕರು ಹೇಳುತ್ತಾರೆ. ಹೀಗೆ ಇನ್ನೂ ಅನೇಕ ಒತ್ತಡಗಳು ಮತ್ತು ಕಾರಣಗಳಿಂದಾಗಿ ಉತ್ತಮ ಗುಣಮಟ್ಟದ ಕೊಠಡಿಗಳನ್ನು ಗ್ರಾಮೀಣ ಪ್ರದೇಶದಲ್ಲಿ ನಿರ್ಮಾಣ ಮಾಡಲು ಸಾಧ್ಯವಾಗದ ಪರಿಸ್ಥಿತಿಯೇ ಹೆಚ್ಚಾಗಿ ಕಂಡುಬರುತ್ತದೆ.

೫.೪ ಕುಡಿಯುವ ನೀರು ಮತ್ತು ಶೌಚಾಲಯ ವ್ಯವಸ್ಥೆ

ಪ್ರಾಥಮಿಕ ಶಾಲೆ ಕಾರ್ಯನಿರ್ವಹಿಸಲು ಕುಡಿಯುವ ನೀರಿನ ಅವಶ್ಯಕತೆ ಇದೆ. ಮಕ್ಕಳಿಗೆ ಕುಡಿಯುವ ನೀರನ್ನು ಶಾಲೆಯ ಆವರಣದಲ್ಲಿ ಪೂರೈಸಲು ಸಾಧ್ಯವಾಗದೆ ಇದ್ದಾಗ, ಇದಕ್ಕೆ ಮಕ್ಕಳು

ಶಾಲೆಯಿಂದ ಹೊರಗೆ ಹೋಗಿ ನೀರು ಕುಡಿದು ಶಾಲೆಗೆ ಮರಳುವುದು ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಬಹಳ ಕಷ್ಟ. ಭಾರತದಲ್ಲಿ ಶೇಕಡ ೫೯ಕ್ಕಿಂತಲೂ ಹೆಚ್ಚಿನ ಪ್ರಾಥಮಿಕ ಶಾಲೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಪ್ರಸ್ತುತ ಅಧ್ಯಯನವು ಅಧ್ಯಯನಕ್ಕೆ ಒಳಪಡಿಸಿದ ಒಟ್ಟು ಶಾಲೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಶಾಲೆಯ ಆವರಣದಲ್ಲಿ ಇರುವುದು ಕೇವಲ ೬ ಶಾಲೆಗಳಲ್ಲಿ, ಅಂದರೆ ಶೇಕಡ ೨೫ ರಷ್ಟು ಶಾಲೆಗಳಲ್ಲಿ ಮಾತ್ರ. ಇನ್ನೂ ಉಳಿದ ಶೇಕಡ ೭೫ರಷ್ಟು (೧೮ ಶಾಲೆಗಳಲ್ಲಿ) ಶಾಲಾ ಆವರಣದಲ್ಲಿ ಯಾವುದೇ ಬಗೆಯ ಕುಡಿಯುವ ನೀರಿನ ವ್ಯವಸ್ಥೆ ಇರುವುದಿಲ್ಲ.

ಗ್ರಾಮ ಪರಿಸರದಲ್ಲಿ ಶೌಚಾಲಯ ವ್ಯವಸ್ಥೆಯು ಅವಶ್ಯಕ. ಗ್ರಾಮಗಳಲ್ಲಿ ಇತ್ತೀಚೆಗೆ ಕಡಿಮೆಯಾಗುತ್ತಿರುವ ವಿಶಾಲ ಪ್ರದೇಶ, ಅನುಕೂಲವಾದ ಸ್ಥಳದಲ್ಲಿ ಶೌಚಾಲಯಗಳು ಅಗತ್ಯ ಪ್ರಮಾಣದಲ್ಲಿ ಇಲ್ಲದಿರುವುದು ಶಾಲೆಯ ಹತ್ತಿರ ಅಥವಾ ಸುತ್ತಮುತ್ತಲಿನ ಪರಿಸರ ಅಮೇಧ್ಯ ಮತ್ತು ಹೊಲಸು ಅಸ್ಥಿತ್ವಕ್ಕೆ ಬರಲು ಪೂರಕವಾಗಿದೆ. ಇದು ವಿಶೇಷವಾಗಿ ಹೆಣ್ಣುಮಕ್ಕಳಿಗೆ ಮತ್ತು ಮಹಿಳಾ ಶಿಕ್ಷಕಿಯರಿಗೆ ಬಹಳ ಮುಜುಗರ ಮತ್ತು ಅನಾನುಕೂಲತೆಯನ್ನು ಸೃಷ್ಟಿಸುತ್ತದೆ. ಭಾರತದಲ್ಲಿ ಶೇಕಡ ೮೯ರಷ್ಟು ಪ್ರಾಥಮಿಕ ಶಾಲೆಗಳಲ್ಲಿ ಶೌಚಾಲಯ ವ್ಯವಸ್ಥೆ ಇದೆಯಾದರೂ, ಶೇಕಡ ೮೫ಕ್ಕಿಂತ ಹೆಚ್ಚಿನ ಶಾಲೆಗಳಲ್ಲಿ ಶೌಚಾಲಯಗಳು ಉಪಯೋಗಿಸುವ ಸ್ಥಿತಿಯಲ್ಲಿ ಇಲ್ಲ. ಕೆಲವು ಶಾಲೆಗಳಲ್ಲಿ ಇರುವ ಶೌಚಾಲಯವನ್ನು ಶಿಕ್ಷಕರು ಉಪಯೋಗಿಸುತ್ತಿದ್ದಾರೆ (ಪ್ರೋಬ್, ೧೯೯೯; ಪ್ರಶಾಂತ್,೨೦೦೫;೨೦೦೬,).

ನಾವು ಅಧ್ಯಯನ ನಡೆಸಿದ ಶೇಕಡ ೭೭ರಷ್ಟು ಶಾಲೆಗಳಲ್ಲಿ ಶೌಚಾಲಯವನ್ನು ಇತ್ತೀಚೆಗೆ ಸರ್ವಶಿಕ್ಷಾ ಅಭಿಯಾನ ಕಾರ್ಯಕ್ರಮದಲ್ಲಿ ನಿರ್ಮಿಸಲಾಗಿದೆ. ಇನ್ನೂ ಶೇಕಡ ೨೩ರಷ್ಟು ಶಾಲೆಗಳಿಗೆ ಶೌಚಾಲಯವನ್ನು ಕಲ್ಪಿಸಬೇಕಾಗಿದೆ. ಈಗಾಗಲೇ ಶೌಚಾಲಯ ವ್ಯವಸ್ಥೆ ಇರುವ ಶೇಕದ ೫೫ರಷ್ಟು ಶಾಲೆಗಳಲ್ಲಿ ಶೌಚಾಲಯಗಳನ್ನು ಮಕ್ಕಳು ಉಪಯೋಗಿಸದ ಸ್ಥಿತಿ ಇದೆ. ಕೆಲವು ಶಾಲೆಯಲ್ಲಿ ಇರುವ ಶೌಚಾಲಯವನ್ನು ಶಿಕ್ಷಕರು ಮಾತ್ರ ಉಪಯೋಗಿಸಿ, ನಂತರ ಬೀಗ ಹಾಕುತ್ತಾರೆ. ಇದಕ್ಕೆ ಶಿಕ್ಷಕರೇ ನೀಡುವ ಕಾರಣ ಮಕ್ಕಳಿಗೆ ಶೌಚಾಲಯವನ್ನು ಸರಿಯಾಗಿ ಉಪಯೋಗಿಸಲು ಬರುವುದಿಲ್ಲ. ಹೀಗಾಗಿ ಅದು ಗಲೀಜು ಆಗುತ್ತದೆ. ಅದಕ್ಕೆ ನಾವುಗಳು ಮಾತ್ರ ಇದನ್ನು ಉಪಯೋಗಿಸಿ ಬೀಗಹಾಕುತ್ತೇವೆ ಎಂದು ಹೇಳುತ್ತಾರೆ. ಬಹುತೇಕ ಎಲ್ಲಾ ಶಾಲೆಗಳಲ್ಲಿ ಇತ್ತೀಚೆಗೆ ಶೌಚಾಲಯವನ್ನು ಸರ್ವಶಿಕ್ಷಾ ಅಭಿಯಾನ ಕಾರ್ಯಕ್ರಮದಲ್ಲಿ ನಿರ್ಮಿಸಲಾಗಿದೆ. ಸ್ವಲ್ಪ ಹೆಚ್ಚು ಕಡಿಮೆ ಶೌಚಾಲಯಗಳು ಇರುವ ಶಾಲೆಗಳಲ್ಲಿ ಶೌಚಾಲಯಗಳ ಸ್ಥಿತಿ ಉಪಯೋಗದ ಸ್ಥಿತಿಯಲ್ಲಿದ್ದರೆ, ಅವುಗಳನ್ನು ಶಿಕ್ಷಕರು ಮಾತ್ರ ಉಪಯೋಗಿಸುತ್ತಿದ್ದಾರೆ. ಇಲ್ಲವಾದರೆ ಅವುಗಳು ಉಪಯೋಗಿಸಲಾರದ ಸ್ಥಿತಿಯಲ್ಲಿವೆ. ಶೌಚಾಲಯಗಳು ಇಲ್ಲದೆ ಇರುವ ಶೇಕಡ ೪೫ರಷ್ಟು ಶಾಲೆಗಳಲ್ಲಿ ಶೇಕಡ ೩೦ರಷ್ಟು ಶಾಲೆಗಳಲ್ಲಿ ಶೌಚಾಲಯ ನಿರ್ಮಾಣ ಮಾಡಲು ಶಾಲೆಯ ಆವರಣದಲ್ಲಿ ಸ್ಥಳ ಅವಕಾಶವಿಲ್ಲ. ಉದಾಹರಣೆಗೆ ಹೀರಾ ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಗಳಲ್ಲಿ ಶೌಚಾಲಯ ನಿರ್ಮಾಣಕ್ಕೆ ಶಾಲೆಯ ಆವರಣದಲ್ಲಿ ಸ್ಥಳಾವಕಾಶವಿಲ್ಲ. ಈ ಪಂಚಾಯತಿಯ

ವ್ಯಾಪ್ತಿಯ ಗ್ರಾಮದಲ್ಲಿ ಶಾಲೆಯ ಕಟ್ಟಡದ ಕೊರತೆಯಿಂದ ಬೇರೆ ಬೇರೆ ಸ್ಥಳ ಹಾಗೂ ಕಟ್ಟಡಗಳಲ್ಲಿ ತರಗತಿಗಳು ನಡೆಯುತ್ತಿವೆ.

ಶಾಲೆಗಳಲ್ಲಿ ಇರುವ ಶೌಚಾಲಯಗಳು ಉಪಯೋಗಿಸದ ಸ್ಥಿತಿ ತಲುಪಲು ಪ್ರಮುಖ ಮೂರು ಕಾರಣಗಳನ್ನು ಗುರುತಿಸಬಹುದು. ಒಂದು, ಈಗಾಗಲೇ ಶೌಚಾಲಯ ವ್ಯವಸ್ಥೆ ಇರುವ ಶಾಲೆಗಳಲ್ಲಿ ಶೌಚಾಲಯವನ್ನು ವ್ಯವಸ್ಥಿತವಾಗಿ ಉಪಯೋಗಿಸಲು ಬೇಕಾಗುವ ಪ್ರಮಾಣದ ನೀರಿನ ಸೌಲಭ್ಯದ ಕೊರತೆ ಇರುವುದು. ಎರಡು, ಶೌಚಾಲಯವನ್ನು ಏಕೆ ಉಪಯೋಗಿಸಬೇಕು? ಅದನ್ನು ಉಪಯೋಗಿಸುವುದರಿಂದ ಇರುವ ಅನುಕೂಲಗಳು ಯಾವುವು? ಇನ್ನು ಮುಂತಾದ ವಿಷಯಗಳು ಮಕ್ಕಳಿಗೆ ಮತ್ತು ಸ್ಥಳೀಯರಿಗೆ ಸಂಪೂರ್ಣವಾಗಿ ತಿಳಿಯದಿರುವುದು. ಮೂರು, ಶೌಚಾಲಯಗಳನ್ನು ಉಪಯೋಗಿಸುವುದರ ಬಗ್ಗೆ ಸ್ಥಳೀಯರಲ್ಲಿ ಮತ್ತು ಮಕ್ಕಳಲ್ಲಿ ಕೆಲವು ಪೂರ್ವಾಗ್ರಹಗಳು ಇರುವುದು. ಈ ಮೂರು ಪ್ರಮುಖ ಅಂಶಗಳು ವ್ಯವಸ್ಥಿತವಾಗಿ ಬಗೆಹರಿಸಿದರೆ ಮಾತ್ರ ನಿರ್ಮಿಸಿದ ಶೌಚಾಲಯಗಳ ಉಪಯೋಗ ಸಾಧ್ಯ. ಇದನ್ನು ಮಾಡುವುದು ನೀರಿನ ವಿಷಯದಲ್ಲಿ ಸ್ವಲ್ಪ ಕಷ್ಟವೆನಿಸುತ್ತದೆ. ಏಕೆಂದರೆ ನಾವು ಅಧ್ಯಯನ ನಡೆಸಿದ ಎಲ್ಲಾ ಗ್ರಾಮಗಳಲ್ಲಿ ಕುಡಿಯುವ ನೀರಿನ ತೊಂದರೆಯೇ ದೊಡ್ಡ ಸಮಸ್ಯೆಯಾಗಿದೆ. ಹೀಗಿರುವಾಗ ಶಾಲೆಗಳಲ್ಲಿ ಶೌಚಾಲಯಗಳ ಉಪಯೋಗಕ್ಕೆ ನೀರನ್ನು ಪೂರೈಸುವುದು ಕಷ್ಟ ಸಾಧ್ಯ. ಸ್ಥಳೀಯರಿಗೆ ಮತ್ತು ಮಕ್ಕಳಿಗೆ ಶೌಚಾಲಯವನ್ನು ಉಪಯೋಗಿಸುವುದರಿಂದ ಇರುವ ಅನುಕೂಲಗಳ ಬಗ್ಗೆ ಅರಿವನ್ನು ವಿವಿಧ ರೀತಿಯಲ್ಲಿ ಮೂಡಿಸಬೇಕು. ಹೀಗೆ ಮಾಡುವುದರಿಂದ ಇರುವ ಮತ್ತೆರಡು ಕಾರಣಗಳನ್ನು ಸರಳವಾಗಿ ಬಗೆಹರಿಸಬಹುದು. ಇದು ಕೇವಲ ಸಮಸ್ಯೆಗೆ ಪರಿಹಾರವಾಗದೆ, ಭವಿಷ್ಯ ದಿನಗಳಲ್ಲಿ ಮಕ್ಕಳ-ಸ್ಥಳೀಯ ಜನರ ಆರೋಗ್ಯದ ದೃಷ್ಟಿಯಿಂದ ಅನುಕೂಲವಾಗುತ್ತದೆ.

೫.೫ ಕಾಂಪೌಂಡ್

ಶಾಲೆಯು ಗಡಿಬೇಲಿ ಅಥವಾ ಕಾಂಪೌಂಡನ್ನು ಅವಶ್ಯಕವಾಗಿ ಹೊಂದಿರಬೇಕು. ಕಾಂಪೌಂಡ್ ಇದ್ದರೆ ಶಾಲೆಗೆ ಅನೇಕ ಅನುಕೂಲಗಳು ಇರುತ್ತವೆ. ಶಾಲೆಗೆ ಸೇರಿದ ಆಸ್ತಿ ಮತ್ತು ಆವರಣವನ್ನು ಒತ್ತುವರಿ ಮಾಡದಂತೆ ತಡೆಯಬಹುದು. ಸಾರ್ವಜನಿಕರಿಂದ ಮತ್ತು ಹೊರಗಿನಿಂದ ಶಾಲೆಯಲ್ಲಿ ತರಗತಿ ನಡೆಸಲು ಆಗಬಹುದಾದ ಶಬ್ದ-ಗಲಾಟೆಯನ್ನು ಕಡಿಮೆಯಾಗುವಂತೆ ತಡೆಯಬಹುದು. ಗ್ರಾಮದಲ್ಲಿನ ಕೆಲವು ಪ್ರಾಣಿಗಳು ಶಾಲೆಯ ಜಗುಲಿಗೆ ಬಾರದಂತೆ ತಡೆಯಬಹುದು. ಇನ್ನೂ ಮುಂತಾದ ತೊಂದರೆಗಳಿಂದ ಶಾಲೆಯನ್ನು ರಕ್ಷಿಸಲು ಕಾಂಪೌಂಡ್ ಅವಶ್ಯಕ. ನಮ್ಮ ಶೈಕ್ಷಣಿಕ ವ್ಯವಸ್ಥೆಯಲ್ಲಿ ಪ್ರಾಥಮಿಕ ಶಾಲೆಗಳು ಬಹಳ ಮಟ್ಟಿಗೆ ಕಾಂಪೌಂಡ್ ಹೊಂದಿಲ್ಲ.

ನಾವು ಅಧ್ಯಯನ ನಡೆಸಿದ ಶೇಕಡ ೭೫ರಷ್ಟು ಶಾಲೆಗಳಲ್ಲಿ ಶಾಲೆಗೆ ಗಡಿಬೇಲಿ ಅಥವಾ ಕಾಂಪೌಂಡ್ ಇರುವುದಿಲ್ಲ. ಇನ್ನೂ ಶೇಕಡ ೨೫ರಷ್ಟು ಶಾಲೆಗಳಲ್ಲಿ ಕಾಂಪೌಂಡ್ ಇದೆ. ಕಾಂಪೌಡ್ ಇರುವ ಶಾಲೆಗಳಲ್ಲಿ ಶೇಕಡ ೧೭ರಷ್ಟು ಶಾಲೆಗಳ ಕಾಂಪೌಂಡ್ ನಾಲ್ಕು ದಿಕ್ಕುಗಳಲ್ಲಿ ಇರದೇ ಕೇವಲ

ಎರಡು ದಿಕ್ಕು ಅಥವಾ ಮೂರು ದಿಕ್ಕು ಅಥವಾ ಒಂದು ದಿಕ್ಕಿನಲ್ಲಿ ಮಾತ್ರ ಇದೆ. ಸಂಪೂರ್ಣ ಕಾಂಪೌಂಡ್ ಇರುವುದು ಶೇಕಡ ೮ ರಷ್ಟು ಶಾಲೆಗಳಲ್ಲಿ ಮಾತ್ರ.

ಭಾಗ-೨

೫.೬ ಕಲಿಕಾ ಸಾಮಗ್ರಿಗಳು

ಬೋಧನಾ ಮತ್ತು ಕಲಿಕೆಯ ಸಾಮಗ್ರಿಗಳು ಶಿಕ್ಷಣದ ಗುಣಾತ್ಮಕ ಪ್ರಗತಿಗೆ ಅವಶ್ಯಕವಾಗಿ ಬೇಕು. ಇವುಗಳ ಕೊರತೆ ಮತ್ತು ದಾಸ್ತಾನು ಬಹಳ ಶಾಲೆಗಳಲ್ಲಿ ಇದೆ ಎಂಬುದು ಸಾಮಾನ್ಯ ಅಭಿಪ್ರಾಯ. ಇದು ಸ್ವಲ್ಪಮಟ್ಟಿಗೆ ವಾಸ್ತವವು ಹೌದು. ಬೋಧನಾ ಮತ್ತು ಕಲಿಕಾ ಸಾಮಗ್ರಿಗಳು ಸಾಕಾಗುವಷ್ಟು ಪ್ರಮಾಣದಲ್ಲಿ ಎಲ್ಲಾ ಶಾಲೆಗಳಲ್ಲಿ ದೊರಕದೆ ಇರಬಹುದು. ಆದರೆ ಎಲ್ಲಾ ಶಾಲೆಗಳಲ್ಲಿ ಪೂರ್ಣ ಪ್ರಮಾಣದಲ್ಲಿ ದೊರಕುವ ಬೋಧನೆಯ ಉಪಕರಣವೆಂದರೆ ಕೋಲು ಅಥವಾ ಮಕ್ಕಳಿಗೆ ಒಡೆಯುವ ಕೋಲು. ವಿಶೇಷವೆಂದರೆ ನಾವು ಅಧ್ಯಯನ ನಡೆಸಿದ ೨೪ ಶಾಲೆಗಳಲ್ಲಿ ವಿಜ್ಞಾನ ಕೀಟ್‌ಗಳು, ಗ್ಲೋಬ್ ಭೂಪಟ, ನಕ್ಷೆ ಇತ್ಯಾದಿ ಬೋಧನಾ ಮತ್ತು ಕಲಿಕಾ ಸಾಮಗ್ರಿಗಳ ಕೊರತೆಯು ಹೆಚ್ಚಿನ ಪ್ರಮಾಣದಲ್ಲಿ ಕಂಡುಬರಲಿಲ್ಲ (ಪ್ರಯೋಗ ಸಾಮಗ್ರಿ). ಆದರೆ ಶಾಲೆಯಲ್ಲಿ ಈಗಾಗಲೇ ಇರುವ ಬೋಧನಾ ಸಾಮಗ್ರಿಗಳನ್ನು ಬಹಳ ಮಟ್ಟಿಗೆ ಉಪಯೋಗಿಸದೆ ಇರುವ ಸ್ಥಿತಿಯನ್ನು ಕಾಣಬಹುದು. ಅವು ಮಕ್ಕಳಿಗೆ ಸಿಗದ ಹಾಗೆ ಜೋಪಾನವಾಗಿ, ಬೀಗ ಹಾಕಿ ಕಪಾಟುಗಳಲ್ಲಿ ಇಡಲಾಗಿದೆ. ಈ ಸ್ಥಿತಿ ಏಕೆ ಎಂದು ಶಿಕ್ಷಕರನ್ನು ಕೇಳಿದಾಗ, ಪ್ರಾಥಮಿಕ ಹಂತದಲ್ಲಿ ಇವುಗಳನ್ನು (ಬೋಧನಾ ಮತ್ತು ಕಲಿಕಾ ಸಾಮಗ್ರಿ) ಉಪಯೋಗಿಸುವುದು ಬಹಳ ಕಷ್ಟ ಮಕ್ಕಳಿಗೆ ಉಪಯೋಗಿಸಲು ಬರುವುದಿಲ್ಲ, ಅವುಗಳನ್ನು ಹಾಳು ಮಾಡುತ್ತಾರೆ. ಬೋಧನಾ ಸಾಮಗ್ರಿಗಳನ್ನು ಬಳಸಿ ಬೋಧನೆ ಮಾಡಿದರೂ ಮಕ್ಕಳಿಗೆ ಅರ್ಥವಾಗುವುದಿಲ್ಲ. ಹೀಗಾಗಿ ಅವುಗಳನ್ನು ಮಾಧ್ಯಮಿಕ ಹಂತದಲ್ಲಿ ಬೋಧನೆ ಮತ್ತು ಕಲಿಕೆಗಾಗಿ ಆಗಾಗ ಉಪಯೋಗಿಸುತ್ತೇವೆ ಎಂದು ಶಿಕ್ಷಕರು ಹೇಳುತ್ತಾರೆ. ನಾವು ಉತ್ತಮ ಗುಣಮಟ್ಟದ ಶಿಕ್ಷಣಕ್ಕೆ ಬುನಾದಿ ಹಾಕಬೇಕಾಗಿರುವುದು ಪ್ರಾಥಮಿಕ ಹಂತದಲ್ಲಿ. ಈ ಹಂತದಲ್ಲಿ ಬುನಾದಿಯನ್ನು ಕ್ರಮಬದ್ಧವಾಗಿ ಹಾಕದೇ, ಮಾಧ್ಯಮಿಕ ಹಂತದಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣಕ್ಕಾಗಿ ಪ್ರಯತ್ನಿಸುವುದು ಎಷ್ಟರಮಟ್ಟಿಗೆ ಸರಿ. ಇನ್ನಾದರೂ ಈಗಾಗಲೇ ಇರುವ ಬೋಧನಾ ಮತ್ತು ಕಲಿಕಾ ಉಪಕರಣಗಳ ಸಮರ್ಪಕ ಬಳಕೆ ಸರಿಯಾದ ರೀತಿಯಲ್ಲಿ ನಡೆಯಲಿ ಎಂಬುದು ಈ ಅಧ್ಯಯನದ ಆಶಯ.

ನಾವು ಅಧ್ಯಯನ ನಡೆಸಿದ ಪ್ರಾಥಮಿಕ ಶಾಲೆಗಳಲ್ಲಿ ಇರುವ ಅತ್ಯಂತ ಗಂಭೀರವಾದ ಸಮಸ್ಯೆ ಎಂದರೆ ಇರುವ ಸೌಲಭ್ಯಗಳನ್ನು ಸರಿಯಾಗಿ ನಿರ್ವಹಣೆ ಮಾಡದಿರುವುದು ಮತ್ತು ಉಪಯೋಗಿಸದಿರುವುದು. ಕೊರತೆ ಇರುವ ಸೌಲಭ್ಯಗಳನ್ನು ನೀಡಿದರೆ, ಅವುಗಳನ್ನು ಕ್ರಮಬದ್ಧವಾಗಿ ನಿರ್ವಹಣೆ ಮಾಡುವ ಮತ್ತು ಪರಿಣಾಮಕಾರಿಯಾಗಿ ಉಪಯೋಗಿಸುವ ನಂಬಿಕೆಯು ಸಹ ಇರಬೇಕು. ಗ್ರಾಮದ ಜನರು ಶಿಕ್ಷಕರ ಜೊತೆ ಸ್ವಲ್ಪ ಪ್ರಯತ್ನ ಪಟ್ಟರೆ ದೊರೆಯುವ ಎಲ್ಲಾ ಸೌಲಭ್ಯಗಳನ್ನು

ಪಡೆದುಕೊಳ್ಳಬಹುದು. ಅಲ್ಲದೆ ಸ್ಥಳೀಯವಾಗಿ ಇರುವ ಸವಲತ್ತುಗಳನ್ನು ಪಡೆದು ಶಾಲೆಗಳಲ್ಲಿ ಕಲಿಕೆಯ ಅವಕಾಶಗಳನ್ನು ವಾಸ್ತವಿಕ ನೆಲೆಯಲ್ಲಿ ಹುಟ್ಟುಹಾಕುವ ಮೂಲಕ ಬೋಧನೆ ಮತ್ತು ಕಲಿಕೆಗೆ ಹಿತಕರ ಶಾಲಾ ಪರಿಸರವನ್ನು ಕಟ್ಟಬಹುದು ಎಂಬುದಕ್ಕೆ ಕೆಲವು ಉದಾಹರಣೆಗಳಿವೆ.

ಅನೇಕ ಶಾಲೆಗಳ ಸುತ್ತಲಿನ ಆವರಣವು ಆಕರ್ಷಕವಾಗಿಲ್ಲದೆ ಇದ್ದರೆ, ಕೆಲವು ವಾಸ್ತವಿಕವಾಗಿ ಅಸಹ್ಯಕರವಾಗಿವೆ. ತರಗತಿಗಳು ನಡೆಯುವ ಕೆಲವು ಕೊಠಡಿಗಳಂತೂ ಸಹಜವಲ್ಲದ ರೂಪ ಹೊಂದಿವೆ. ಅವುಗಳು ಸ್ವಲ್ಪಮಟ್ಟಿಗೆ ಉಗ್ರಾಣಗಳಂತೆ ಕಂಡುಬರುತ್ತವೆ. ಈ ಸ್ಥಿತಿ ಮಕ್ಕಳ ಕಲಿಕೆಗೆ ಉತ್ತೇಜನಕಾರಿಯಾಗಿಲ್ಲ. ಸ್ವಲ್ಪ ಹೆಚ್ಚುಕಡಿಮೆ ಎಲ್ಲಾ ಶಾಲೆಗಳ ಹೊರಭಾಗದ ಆವರಣ ಕಸ ಕಡ್ಡಿಗಳಿಂದ ತುಂಬಿ ಅಸಹಜ ವಾತಾವರಣದಿಂದ ಕೂಡಿದೆ.

ಶಾಲೆಗಳಲ್ಲಿ ಕೊಠಡಿಗಳ ಕೊರತೆ ಇರುವುದು ಒಂದು ಕಡೆಯಾದರೆ, ಮತ್ತೊಂದು ಕಡೆ ಇರುವ ಕೊಠಡಿಗಳನ್ನು ಪೂರ್ಣಪ್ರಮಾಣದಲ್ಲಿ ಉಪಯೋಗಿಸದೆ ಇರುವುದು ಇದೆ. ಕೆಲವು ಶಾಲೆಗಳಲ್ಲಿ ತರಗತಿಯನ್ನು ನಡೆಸಲು ಬೇಕಾಗುವ ಸಂಖ್ಯೆಯಲ್ಲಿ ಕೊಠಡಿಗಳು ಇದ್ದರೂ ಇಬ್ಬರು ಮೂವರು ಶಿಕ್ಷಕರು ಒಂದೇ ದಿನ ರಜೆ ಹಾಕಿದ ಸಂದರ್ಭಗಳಲ್ಲಿ ೦೨-೦೩ನೆಯ ತರಗತಿಗಳನ್ನು ಒಟ್ಟಿಗೆ ಕೂಡಿಸಿ ಕೊಂಡಿರುವ ಸ್ಥಿತಿಯೂ ಇದೆ. ಈ ಪರಿಸ್ಥಿತಿಯೂ ಹೀರ ಪಂಚಾಯತಿಯಲ್ಲಿನ ಉರ್ದು ಪ್ರಾಥಮಿಕ ಶಾಲೆಯಲ್ಲಿ ಇರುವುದನ್ನು ನಾವು ಆ ಶಾಲೆಗೆ ಭೇಟಿ ನೀಡಿದ ಸಮಯದಲ್ಲಿ ಗುರುತಿಸಿದ್ದೇವೆ.

ಶಾಲೆಗಳಲ್ಲಿ ಬೋಧನಾ ಕಲಿಕಾ ಸಾಮಗ್ರಿಗಳು ದೊರೆಯುತ್ತವೆ. ಇವುಗಳನ್ನು ಕಪ್ಪು ಹಲಗೆ ಕಾರ್ಯಕ್ರಮ, ಡಿ.ಪಿ.ಇ.ಪಿ ಕಾರ್ಯಕ್ರಮ, ಇನ್ನೂ ಮುಂತಾದ ಕಾರ್ಯಕ್ರಮಗಳಲ್ಲಿ ಪೂರೈಸಲಾಗಿದೆ. ಆದರೆ ಇವು ಉಪಯೋಗಿಸದ ಮಾದರಿಯಲ್ಲಿ ಇರುವುದು ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ಸಾಮಾನ್ಯ ಅದೇನೆಂದರೆ ಈಗಾಗಲೇ ಇರುವ ಬೋಧನಾ-ಕಲಿಕಾ ಸಾಮಗ್ರಿಗಳನ್ನು ಪೆಟ್ಟಿಗೆಯಲ್ಲಿ ಬೀಗಹಾಕಿ ಮಕ್ಕಳಿಗೆ ಸಿಗದಂತೆ ಎತ್ತರವಾದ ಸ್ಥಳದಲ್ಲಿ ಇಡಲಾಗಿದೆ. ಸಾಮಗ್ರಿಗಳು ಕಳೆದು ಹೋಗುವ ಅಥವಾ ಒಡೆದು ಹೋಗುವ ಭಯ ಶಿಕ್ಷಕರಲ್ಲಿ ಬಹಳ ಸಾಮಾನ್ಯವಾಗಿ ಕಂಡುಬರುತ್ತದೆ. ಕೆಲವು ಸಾಮಗ್ರಿಗಳು ಶಾಲೆಯ ದಾಸ್ತಾನಿನಲ್ಲಿ ಮಾತ್ರ ಇವೆ. ಕೆಲವು ಶಿಕ್ಷಕರ ಮನೆಯಲ್ಲಿ ಇರುವ ಪರಿಸ್ಥಿತಿಯೂ ಕಂಡುಬರುತ್ತದೆ. ಹೀಗೆ ಬೋಧನಾ ಮತ್ತು ಕಲಿಕಾ ಸಾಮಗ್ರಿಗಳ ಕೊರತೆಯು ಶಾಲೆಗಳಲ್ಲಿ ಇರುವುದಕ್ಕೆ ಅನೇಕ ಕಾರಣಗಳು ಇವೆ. ಇದರ ಜೊತೆಗೆ ಕೆಲವು ಶಿಕ್ಷಕರು ಬೋಧನಾ ಕಲಿಕಾ ಸಾಮಗ್ರಿಗಳನ್ನು ತರಗತಿಗಳಲ್ಲಿ ಉಪಯೋಗಿಸಲು ಅಸಹಾಯಕರಾಗಿದ್ದಾರೆ. ನಮ್ಮ ಅಧ್ಯಯನ ಸಂದರ್ಭದಲ್ಲಿ ಶೇಕಡ ೫೦ಕ್ಕಿಂತಲೂ ಕಡಿಮೆ ಶಿಕ್ಷಕರು ಬೋಧನಾ ಕಲಿಕಾ ಸಾಮಗ್ರಿಗಳನ್ನು ಉಪಯೋಗಿಸುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ.

ಇತ್ತೀಚಿನ ದಿನಗಳಲ್ಲಿ ಅನೇಕ ತೊಡಕುಗಳಿಂದ ಬೋಧನಾ ಕಲಿಕೆಯ ಉಪಕರಣಗಳ ಬಳಕೆ ಮತ್ತು ನಿರ್ವಹಣೆಯಲ್ಲಿನ ಪರಿಣಾಮ ಶೂನ್ಯವಾಗಿದೆ. ಶಾಲಾ ಪರಿಸರವನ್ನು ಉತ್ತಮಗೊಳಿಸಲು ಕುರ್ಚಿ, ಮೇಜು, ಕಲಿಕಾ ಸಾಮಗ್ರಿಗಳು ಮತ್ತು ಇತ್ಯಾದಿ ಉಪಕರಣಗಳ ಪೂರೈಕೆಯಿಂದ ಮಾತ್ರ

ಸಾಧ್ಯ ಎಂಬುದು ಹುಸಿಯಾಗಿದೆ. ನಮ್ಮ ಅನುಭವಗಳು ನಮಗೆ ತಿಳಿಸುವಂತೆ ಬಹಳ ವಿಸ್ತೃತವಾದ ಇಂತಹ ಉಪಕರಣಗಳು ಅತ್ಯಂತ ಕಡಿಮೆ ಅವಧಿಯಲ್ಲಿಯೇ ಇವುಗಳ ಪರಿಣಾಮ ಶೂನ್ಯವಾಗಿರುವುದು ತಿಳಿಯುತ್ತದೆ. ಬೌದ್ಧಿಕ ಉಪಕರಣಗಳಿಗಿಂತ ಹೆಚ್ಚಾಗಿ, ಸ್ಥಳೀಯವಾಗಿ ದೊರಕುವ ಸಂಪನ್ಮೂಲಗಳ ಬಳಕೆಯಿಂದ ಕಲಿಕೆಗೆ ಹಿತಕರ ಮತ್ತು ಆಕರ್ಷಕವಾದ ಪರಿಸರನ್ನು ಶಾಲಾ ಆವರಣದಲ್ಲಿ ಹುಟ್ಟುಹಾಕುವಲ್ಲಿ ಅನೇಕ ಶಾಲೆಗಳು ವಿಫಲವಾಗಿವೆ. ಹೆಚ್ಚಿನ ವ್ಯವಹಾರಿಕ ಶಾಲೆಗಳು (ಖಾಸಗಿ) ರಚನಾತ್ಮಕ ಕಾರ್ಯಕ್ರಮಗಳನ್ನೂ ರೂಪಿಸಿ ಸರಳ ಕಲಿಕಾ ಶಾಲಾ ಪರಿಸರವನ್ನೂ ಉತ್ತಮ ಭೌತಿಕ ಪರಿಸರವಾಗಿ ಪರಿವರ್ತಿಸುವಲ್ಲಿ ಸ್ವಲ್ಪಮಟ್ಟಿಗೆ ಸಫಲವಾಗಿವೆ. ಅವುಗಳೆಂದರೆ ಶಾಲಾ ಆವರಣವನ್ನು ಸ್ವಚ್ಛವಾಗಿಡುವುದು, ಮಾದರಿಗಳನ್ನು ಮಕ್ಕಳ ಮೂಲಕ ಮಾಡಿಸುವುದು, ಬಣ್ಣ ಬಣ್ಣದ ಆಕರ್ಷಕ ಚಿತ್ರಗಳನ್ನು, ನಕ್ಷೆಗಳನ್ನು ತರಗತಿಗಳ ಗೋಡೆಗೆ ನೇತು ಹಾಕಿರುವುದು, ಚಿಕ್ಕ ಪ್ರಮಾಣದ ಕೈತೋಟ ಮಾಡಿಸುವುದು, ಪೋಷಕರ ಜೊತೆಗಿನ ಸಭೆಗಳು ಇತ್ಯಾದಿ. ಈ ಮಾದರಿಯು ಅಧ್ಯಯನ ನಡೆಸಿದ ಪರಿಸರದಲ್ಲಿ ಇಲ್ಲದಿರುವುದು ವಿಷಾದ ಸಂಗತಿ.

೫.೭ ಪರಿಣಾಮಕಾರಿ ಬೋಧನಾ ಸಮಯ

ನಾವು ಅಧ್ಯಯನ ನಡೆಸಿದ ಶಾಲೆಗಳಲ್ಲಿ ಯಾವ ಶಿಕ್ಷಕರು ರಜೆ ಹಾಕದೆ ಇರುವ ಪರಿಸ್ಥಿತಿ ನಮಗೆ ನೋಡಲು ಸಹ ಸಿಗಲಿಲ್ಲ. ಉದಾಹರಣೆಗೆ ಹೀರ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಇಬ್ಬರು ಮಹಿಳಾ ಶಿಕ್ಷಕರು ಅನಾರೋಗ್ಯದ ಕಾರಣ ದೀರ್ಘಾವಧಿ ರಜೆಯಲ್ಲಿ ಹೋಗಿರುತ್ತಾರೆ. ಎರಡು ಗ್ರಾಮದ ಶಾಲೆಗಳಲ್ಲಿ ತರಬೇತಿಗೆಂದು ಪ್ರತಿ ಶಾಲೆಯಿಂದ ಒಬ್ಬರು ಶಿಕ್ಷಕರು ಹೋಗಿರುತ್ತಾರೆ. ಒಂದು ಅಧ್ಯಯನದ ಪ್ರಕಾರ ಪ್ರತಿವರ್ಷದಲ್ಲಿ ಶಿಕ್ಷಕರ ಸಂಭವನೀಯ ಹಾಜರಾತಿ ೨೨೦ ದಿನಗಳು ಮಾತ್ರ. ಇದಲ್ಲದೆ ಸುಮಾರು ೩೦ಕ್ಕೂ ಹೆಚ್ಚಿನ ದಿನಗಳು ಅಥವಾ ಕೆಲ ವಿಶೇಷ ಸಮಯಗಳಲ್ಲಿ ಇದರ ಹೆಚ್ಚಿನ ರಜೆ ದಿನಗಳು ಶಿಕ್ಷಕರಿಗೆ ಔಪಚಾರಿಕವಾಗಿ ದೊರೆಯುವ ರಜೆಗಳಾಗಿರುತ್ತವೆ. ಹೀಗಾಗಿ ನಾವು ಶಾಲೆಗೆ ಭೇಟಿ ನೀಡಿದ ಸಂದರ್ಭಗಳಲ್ಲಿ, ಒಂದೇ ಕೊಠಡಿಯಲ್ಲಿ ಎರಡು ತರಗತಿಗಳು ನಡೆಯುತ್ತಿದ್ದುದು ಸಾಮಾನ್ಯವಾಗಿತ್ತು. ಹೀಗಾಗಿ ಶಾಲೆಯಲ್ಲಿ ದೊರೆಯುವ ಶಿಕ್ಷಕ-ವಿದ್ಯಾರ್ಥಿಗಳ ಪರಿಮಾಣ ಕೇವಲ ಔಪಚಾರಿಕ. ಹೆಚ್ಚಿನ ಸಂದರ್ಭಗಳಲ್ಲಿ ಒಬ್ಬ ಶಿಕ್ಷಕರು ೪೫ ಕ್ಕಿಂತಲೂ ಹೆಚ್ಚಿನ ವಿದ್ಯಾರ್ಥಿಗಳಿಗೆ ಬೋಧನೆ ಕಲಿಕೆಯನ್ನು ಹೇಳಿಕೊಡುತ್ತಿದ್ದುದು ಕಂಡುಬರುತ್ತದೆ. ಇದು ಉತ್ತಮ ಗುಣಮಟ್ಟದ ಬೋಧನೆಯನ್ನು ಕಾಪಾಡಿಕೊಂಡು ಬರಲು ಸಹಕಾರಿಯಾಗುವುದಿಲ್ಲ. ಇನ್ನಾದರೂ ಈ ಸಮಸ್ಯೆ ಪರಿಹರಿಸಲು ಹೆಚ್ಚಿನ ಆದ್ಯತೆ ನೀಡಲಿ ಎಂದು ಈ ಅಧ್ಯಯನ ಆಶಿಸುತ್ತದೆ.

ಏಕ-ಶಿಕ್ಷಕ ಶಾಲೆಗಳನ್ನು ಶಿಕ್ಷಣ ಇಲಾಖೆಯು ದಾಖಲೆಗಳಲ್ಲಿ ಔಪಚಾರಿಕವಾಗಿ ನಿಷೇಧಿಸಿದೆ. ಆದರೆ ರಾಷ್ಟ್ರದಲ್ಲಿ ಶೇಕಡ ೧೧ಕ್ಕಿಂತಲೂ ಹೆಚ್ಚಿನ ಪ್ರಾಥಮಿಕ ಶಾಲೆಗಳು ಏಕ-ಶಿಕ್ಷಕ ಶಾಲೆಗಳಾಗಿವೆ ಎಂದು ಕೆಲವು ಸಮೀಕ್ಷೆಗಳಿಂದ ತಿಳಿಯುತ್ತದೆ. (ಪ್ರೋಬ್, ೧೯೯೯). ನಾವು ಅಧ್ಯಯನ ನಡೆಸಿದ

ಶಾಲೆಗಳಲ್ಲಿ ಯಾವ ಶಾಲೆಯೂ ಏಕ-ಶಿಕ್ಷಕ ಶಾಲೆಯಲ್ಲ. ಅಲ್ಲದೆ ಅಧ್ಯಯನ ಸಮಯದಲ್ಲಿ ಒಂದು ಶಾಲೆಯ ಎಲ್ಲಾ ತರಗತಿಗಳನ್ನು ಒಬ್ಬರೇ ಶಿಕ್ಷಕರು ನಡೆಸುತ್ತಿರುವ ಶಾಲೆಯನ್ನು ನಾವು ನೋಡಲಿಲ್ಲ. ಆದರೆ ಒಬ್ಬರೆ ಶಿಕ್ಷಕರು ಎರಡು ತರಗತಿಗಳನ್ನು ಅಥವಾ ಮೂರು ತರಗತಿಗಳನ್ನು ಒಂದೇ ಕೊಠಡಿಯಲ್ಲಿ ಬೋಧನೆ-ಕಲಿಕೆ ಪ್ರಕ್ರಿಯೆಯನ್ನು ನಿರ್ವಹಿಸುತ್ತಿರುವ ಪರಿಸ್ಥಿತಿಯನ್ನು ಗುರುತಿಸಿದ್ದೇವೆ. ಇಲ್ಲಿ ಸ್ಪಷ್ಟವಾಗುವ ಅಂಶವೆಂದರೆ, ವಿವಿಧ ವಯೋಮಾನದ ಗುಂಪುಗಳಿಗೆ ಮತ್ತು ಅಧಿಕ ಸಂಖ್ಯೆಯ ಮಕ್ಕಳಿಗೆ ಒಬ್ಬರೇ ಶಿಕ್ಷಕರು ಬೋಧನೆ ಕಲಿಕೆಯ ಕಾರ್ಯದಲ್ಲಿ ತೊಡಗಿದಾಗ ಈ ಚಟುವಟಿಕೆಯ ಗುಣಮಟ್ಟದ ಕನಿಷ್ಟ ಮಟ್ಟಕ್ಕೆ ಇಳಿಯುವ ಸಾಧ್ಯತೆಗಳು ಹೆಚ್ಚು. ಇದು ಕೇವಲ ವಿದ್ಯಾರ್ಥಿಗಳ ಕಲಿಕೆಯ ಮಟ್ಟದ ಮೇಲೆ ಮಾತ್ರ ನಕರಾತ್ಮಕ ಪರಿಣಾಮ ಬೀರುವುದಿಲ್ಲ, ಶಿಕ್ಷಕರ ನೈತಿಕ ಮತ್ತು ಬೋಧನಾ ಸ್ಥಿತಿಯ ಮೇಲು ಪರಿಣಾಮ ಬೀರುತ್ತದೆ. ಈ ಸಮಸ್ಯೆಯ ಪರಿಣಾಮವು ಮಕ್ಕಳಿಂದ, ಮಕ್ಕಳಿಗೆ ಮತ್ತು ಶಿಕ್ಷಕರ ನಡುವೆ ಭಿನ್ನವಾಗಿರ ಬಹುದು. ಆದರೆ ಏಕಕಾಲದಲ್ಲಿ ಬಹು ತರಗತಿಗಳಿಗೆ ಬೋಧನಾ ಸ್ಥಿತಿಯು ಶೇಕಡ ೫೦ರಷ್ಟು ಶಾಲೆಗಳಲ್ಲಿ ಕಂಡುಬರುವುದು ಸಾಮಾನ್ಯ ನಮ್ಮ ಶೈಕ್ಷಣಿಕ ವ್ಯವಸ್ಥೆಯಲ್ಲಿ ಒಂದು ತರಗತಿಗೆ ಒಬ್ಬ ಶಿಕ್ಷಕ ಅಥವಾ ಒಂದು ವಿಷಯಕ್ಕೆ ಒಬ್ಬರೇ ಶಿಕ್ಷಕರು ಇರುವುದು ಕೇವಲ ಕೆಲವೇ ಸರಕಾರಿ ಶಾಲೆಗಳಲ್ಲಿ. ಇಂತಹ ಸ್ಥಿತಿ ಬಹಳ ಮಟ್ಟಿಗೆ ನಗರ ಅಥವಾ ಪಟ್ಟಣ ಪ್ರದೇಶದ ಶಾಲೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಕೊರತೆಯನ್ನು ಎರಡು ವಿಧಾನದಲ್ಲಿ ಗುರುತಿಸಬಹುದು. ಒಂದು, ಶಿಕ್ಷಕ-ಮಕ್ಕಳ ಪರಿಮಾಣವನ್ನು ಗುರುತಿಸುವುದರಿಂದ. ಮತ್ತೊಂದು ವಿಧಾನ ಶಿಕ್ಷಕರು ಕೆಲಸ ಮಾಡುವ ಸಮಯದ ಲೆಕ್ಕಚಾರದಿಂದಲೂ ಸೂಕ್ಷ್ಮವಾಗಿ ವಿಶ್ಲೇಷಿಸಬಹುದು. ಇದನ್ನು ಈ ರೀತಿ ಪ್ರಾರಂಭಿಸಬಹುದು. ಸರಕಾರಿ ಪ್ರಾಥಮಿಕ ಶಾಲೆಗಳು ಒಂದು ವರ್ಷದಲ್ಲಿ ಸರಾಸರಿ ೧೨ ವಾರಗಳು ವಾರ್ಷಿಕ ರಜೆಯಲ್ಲಿ ಮುಚ್ಚಿರುತ್ತವೆ. ಉಳಿದ ೪೦ ವಾರಗಳಲ್ಲಿ ೬೦ ದಿನಗಳ ರಜೆಯು ಭಾನುವಾರ ಮತ್ತು ಶನಿವಾರದ ಮಾದರಿಯಲ್ಲಿ ಇರುತ್ತವೆ (ಶಾಲೆಗಳು ಅರ್ಧದಿನ ಕೆಲಸ ಮಾಡಿದರೂ). ಇನ್ನು ಉಳಿದ ೨೨೦ ಸಂಭವನೀಯ ಶಿಕ್ಷಕರ ಹಾಜರಾತಿ ಅಥವಾ ಶಾಲೆ ಔಪಚಾರಿಕವಾಗಿ ನಡೆಯುವ ದಿನಗಳು. ಇದರಲ್ಲಿ ೨೦ ದಿನಗಳು ಅಥವಾ ಕೆಲವು ವಿಶೇಷ ಸಮಯಗಳಲ್ಲಿ ಇದಕ್ಕಿಂತ ಹೆಚ್ಚು (ಗಲಭೆ, ಮುಷ್ಕರ, ಬಂದ್ ಇತ್ಯಾದಿ) ರಜೆ ಹಾಗೂ ಅನೌಪಚಾರಿಕವಾಗಿ ದೊರೆಯುವ ರಜೆಗಳಾಗಿವೆ. ಹವಾಮಾನದ ವ್ಯತ್ಯಾಸದಿಂದ ಶಾಲೆಗಳು (ಭಾರಿ ಮಳೆ ಮತ್ತು ಬಿಸಿಲಿನ-ಧಗೆ) ಸರಾಸರಿ ೧೨ ದಿನಗಳು ಮುಚ್ಚಿರುತ್ತವೆ. ಮಕ್ಕಳ ಜನಗಣತಿ, ಚುನಾವಣೆ, ಇತರ ಸಮೀಕ್ಷೆಗಳು, ಇದಕ್ಕೆ ಸಂಬಂಧಿಸಿದ ತರಬೇತಿಗಳಿಂದ ಸುಮಾರು ಒಂಬತ್ತು ದಿನಗಳು, ಬೋಧನೇತರ ಕೆಲಸಗಳು, ತಿಂಗಳಿಗೆ ಸರಾಸರಿ ಒಂದು ದಿನ ಸಂಬಳಕ್ಕೆ, ಇಲಾಖೆಯ ಕೆಲಸಗಳಿಗೆ ಒಂಬತ್ತು ದಿನಗಳು-ಅವೆಂದರೆ ಸರಕಾರದಿಂದ ದೊರೆಯುವ ಉಚಿತ ಕಾರ್ಯಕ್ರಮ ನಿರ್ವಹಣೆಗೆ, ಉಚಿತ ಪುಸ್ತಕ ಮತ್ತು ಸಮವಸ್ತ್ರ ವಿತರಣೆ, ಬಿಸಿಯೂಟಕ್ಕೆ ಒಬ್ಬ ಶಿಕ್ಷಕರ ಮೇಲು ಉಸ್ತುವಾರಿ ಇತ್ಯಾದಿ ಕಾರ್ಯಕ್ರಮಗಳು. ಇವಲ್ಲದೆ, ಶಾಲೆ

ಆಡಳಿತದಲ್ಲಿ ಸಹಾಯ, ಸೇವೆಯಲ್ಲಿ ತರಬೇತಿ ಇತ್ಯಾದಿ ಸಾಂಪ್ರದಾಯಿಕ ಕೆಲಸಗಳನ್ನು ಔಪಚಾರಿಕವಾಗಿ ಶಿಕ್ಷಕರು ನಿರ್ವಹಿಸುತ್ತಿದ್ದು ಇದನ್ನು ಪರಿಗಣಿಸಲು ಸಾಧ್ಯವಿಲ್ಲ. ಈ ಎಲ್ಲಾ ಕಡಿತಗಳ ನಂತರ ಒಂದು ವರ್ಷದಲ್ಲಿ ಶಾಲೆ ನಡೆಸಲು ದೊರಕುವುದು ಕೇವಲ ೧೫೦ ದಿನಗಳು ಮಾತ್ರ. ಇದನ್ನು ಅನೇಕ ಪರಿಶೀಲನೆಯ (Cross-cheks) ಮೂಲಕ ದೊರೆತ ಮಾಹಿತಿಯನ್ನು ವಾಸ್ತವಿಕ ಜಗತ್ತನ್ನು ವಿವೇಚನೆಗೆ ಒಳಪಡಿಸಿದ ನಮ್ಮ ಅಧ್ಯಯನವು ಈ ನಿರ್ಧಾರಕ್ಕೆ ಬಂದಿದೆ. ಇದು ನಮ್ಮ ಶೈಕ್ಷಣಿಕ ವ್ಯವಸ್ಥೆಯ ಪ್ರತಿನಿಧಿಗಳಾದ ಶಿಕ್ಷಕರು ತಮ್ಮ ಕೆಲಸವನ್ನು ವಿವೇಚನೆಯಿಂದ ವಿಶ್ಲೇಷಣೆ ಮಾಡಿ ಕ್ರಮ ತಪ್ಪದಂತೆ ಎಚ್ಚರವಹಿಸುವಂತೆ ಸೂಚಿಸುತ್ತದೆ.

ಉಳಿದ ೧೫೦ ದಿನಗಳಲ್ಲಿ ಪ್ರತಿದಿನ ಒಬ್ಬ ಶಿಕ್ಷಕರು ಸರಾಸರಿ ಆರು ಘಂಟೆಗಳು ಶಾಲೆಯಲ್ಲಿ ಇರುತ್ತಾರೆ. ಆದರೆ ಶಾಲೆಗೆ ತಡಮಾಡಿಬರುವುದು ಮತ್ತು ಶಾಲೆಯಿಂದ ಬೇಗ ಹೊರಡುವುದು, ಸಾಮಾನ್ಯ ಗೈರು ಹಾಜರಿ ಅನೇಕ ಶಾಲೆಗಳಲ್ಲಿ ಒಪ್ಪಿತ ಅಭ್ಯಾಸ. ನಾವು ಅಧ್ಯಯನ ನಡೆಸಿದ ಸರಿಸುಮಾರು ಅರವತ್ತು ದಿನಗಳಲ್ಲಿ ಹತ್ತು ದಿನಗಳಿಗೂ ಹೆಚ್ಚಿನ ದಿನಗಳಲ್ಲಿ ಶಿಕ್ಷಕರು ಗೈರುಹಾಜರಿದ್ದರು. ಇದಕ್ಕೆ ಮುಖ್ಯಶಿಕ್ಷಕರು ಹೊರತಾಗಿರಲಿಲ್ಲ. ಮುಖ್ಯಶಿಕ್ಷಕರಾಗಿ ನೀವೇ ಹೀಗೆ ಮಾಡುವುದು ಎಷ್ಟರಮಟ್ಟಿಗೆ ಸರಿ ಎಂದಾಗ, ಅವರು ನಾನು ಮತ್ತು ಶಿಕ್ಷಕರು ಔಪಚಾರಿಕ ಕೆಲಸದಲ್ಲಿ ಬಿ.ಇ.ಓ ಕಛೇರಿ, ಬಿ.ಆರ್.ಸಿ ಕಛೇರಿ, ತಾಲ್ಲೂಕು ಪಂಚಾಯತಿ, ಇತರ ಇಲಾಖೆಗಳಿಗೆ ಹೋಗಿರುತ್ತೇವೆ ಎಂದು ಹೇಳುತ್ತಾರೆ. ಅಧ್ಯಯನ ನಡೆಸಿದ ಶಾಲೆಗಳಲ್ಲಿ ಇರುವ ಮತ್ತೊಂದು ಸಾಮಾನ್ಯ ಮಾದರಿ ಎಂದರೆ ಊಟದ ನಂತರ ಮಧ್ಯಾಹ್ನದ ಶಾಲೆಯು ಬೆಳಗಿನ ಮರುರೂಪ ಪಡೆಯದೇ ಇರುವುದು. ಇದಕ್ಕೆ ಕಾರಣ ಕೇಳಿದಾಗ, ಶಿಕ್ಷಕರು ಕೆಲವು ಮಕ್ಕಳು ಮನೆಗೆ ಹೋದರೆ ಬರುವುದೇ ಇಲ್ಲ. ಇದಕ್ಕೆ ಸಂಬಂಧಿಸಿ ನಾವು ಎಲ್ಲ ಪ್ರಯತ್ನ ಮಾಡಿದ್ದೇವೆ ಎಂದು ಉತ್ತರಿಸುತ್ತಾರೆ. ಒಟ್ಟಾರೆ ಮೇಲಿನ ಎಲ್ಲಾ ಅಂಶಗಳನ್ನು ಚರ್ಚಿಸಿ, ಅವಲೋಕಿಸಿ, ಪೋಷಕರು ಶಿಕ್ಷಕರಿಗೆ ನೀಡಿರುವ ಪ್ರಶಂಸಾ ಪತ್ರ ಮತ್ತು ದೂರು ಪತ್ರಗಳ ಮಾಹಿತಿಯ ಹಿನ್ನೆಲೆಯಲ್ಲಿ ಸರಾಸರಿ ಒಬ್ಬ ಶಿಕ್ಷಕರು ನಾಲ್ಕು ಗಂಟೆಗಳ ಕಾಲ (ಕೆಲಸದ ದಿನಗಳಲ್ಲಿ) ಶಾಲೆಯಲ್ಲಿ ಇರುವುದು ತಿಳಿಯುತ್ತದೆ.

ಕೊನೆಯದಾಗಿ ಶೈಕ್ಷಣಿಕ ಪರಿಸರದ ಪ್ರತಿನಿಧಿಗಳಾದ ಶಿಕ್ಷಕರುಗಳು ವಾಸ್ತವಿಕವಾಗಿ ಶಾಲೆಯಲ್ಲಿ ಏನನ್ನು ಮಾಡುತ್ತಿದ್ದಾರೆ ಎಂಬುದನ್ನು ನಾವು ಪರಿಗಣನೆ ಮಾಡಬೇಕಾಗಿದೆ. ಇದನ್ನು ಮುಂದೆ ವಿಶ್ಲೇಷಿಸಲಾಗಿದೆ. ನಾವು ಶಾಲೆಗೆ ಭೇಟಿ ನೀಡಿದಾಗ ಬಹಳ ಮಟ್ಟಿಗೆ ಎಲ್ಲಾ ಶಿಕ್ಷಕರು ಯಾವುದಾದರೂ ರೀತಿಯ ಬೋಧನಾ ಚಟುವಟಿಕೆಯಲ್ಲಿ ತೊಡಗಿರುವುದನ್ನು ಗುರುತಿಸಿದ್ದೇವೆ. ಒಂದು ವರ್ಷದ ನೂರಾ ಐವತ್ತು ದಿನಗಳಲ್ಲಿ ಒಬ್ಬ ಶಿಕ್ಷಕ ಪರಿಣಾಮಕಾರಿ ಬೋಧನೆಯಲ್ಲಿ ತೊಡಗಿರುವ ಸಮಯ ಪ್ರತಿದಿನಕ್ಕೆ ಸರಾಸರಿ ಎರಡು ಗಂಟೆಗಳು ಮಾತ್ರ. ಇದನ್ನು ಒಂದು ಗಂಟೆಗೆ ಐವತ್ತು ವಿದ್ಯಾರ್ಥಿಗಳಿಗೆ ಸೀಮಿತಗೊಳಿಸಿ ಭಾಗಿಸಿದರೆ ಬರುವ ಅಂದಾಜು ಸಮಯ ಒಬ್ಬ ವಿದ್ಯಾರ್ಥಿಗೆ ಬೋಧನೆಗೆ ಆಸಕ್ತಿವಹಿಸಿ ಗಮನಹರಿಸಬಹುದಾದ ಸಮಯ ಒಂದು ನಿಮಿಷ. ಇದನ್ನು ಇಡೀ ವರ್ಷಕ್ಕೆ ವಿಸ್ತರಿಸಿದರೆ ಒಬ್ಬ

ವಿದ್ಯಾರ್ಥಿಗೆ ಒಂದು ವರ್ಷದಲ್ಲಿ ಆಸಕ್ತಿವಹಿಸಿ ಬೋಧನೆ ಮಾಡಬಹುದಾದ ಸಮಯ ಒಂದು ದಿನ ಮಾತ್ರ. ಇದನ್ನು ಹೀಗೂ ನೋಡಬಹುದು. ಒಬ್ಬ ಶಿಕ್ಷಕ ಇಡೀ ವರ್ಷದಲ್ಲಿ ಒಬ್ಬ ವಿದ್ಯಾರ್ಥಿಗೆ ಬೋಧನೆ ಮಾಡಲು ಗಮನಹರಿಸಲು ಸಿಗುವ ಸಮಯ ಒಂದು ದಿನ ಮಾತ್ರ.

೫.೮ ಶಿಕ್ಷಕರ ಚಟುವಟಿಕೆಗಳು ಮತ್ತು ಚಟುವಟಿಕೆಯ ಸ್ವರೂಪ

ಶಿಕ್ಷಕರ ಚಟುವಟಿಕೆಗಳು ಹಾಗೂ ತರಗತಿಯ ಒಳಗೆ ನಡೆಯುವ ವಿವಿಧ ಪ್ರಕ್ರಿಯೆಗಳನ್ನು ತಿಳಿದುಕೊಳ್ಳುವುದು ಈ ಅಧ್ಯಯನದ ಉದ್ದೇಶಗಳಲ್ಲಿ ಒಂದು. ಹೀಗಾಗಿ ಅಧ್ಯಯನ ಸಮಯವನ್ನು ನಾವು ಶಾಲೆಯ ಶಿಕ್ಷಕರಿಗೆ ಮತ್ತು ಮುಖ್ಯ ಗುರುಗಳಿಗೆ ತಿಳಿಸುತ್ತಿರಲಿಲ್ಲ. ಅಲ್ಲದೆ ನಾವು ಶಾಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಶಾಲಾ ಚಟುವಟಿಕೆಗಳನ್ನು ದಾಖಲಿಸಿ ಕೊಳ್ಳಲಾಯಿತು. ಅವೆಂದರೆ ಮಕ್ಕಳು ತರಗತಿಗಳಲ್ಲಿ ಬೇರೆ ಬೇರೆ ಕುಳಿತುಕೊಳ್ಳುವ ರೀತಿ, ಮಕ್ಕಳಿಗೆ ಕಲಿಕೆಯಲ್ಲಿ ಇರುವ ಆಸಕ್ತಿ, ಶಿಕ್ಷಕರು ಏನು ಮಾಡುತ್ತಿದ್ದರು, ಶಾಲೆಯ ಇತರ ಚಟುವಟಿಕೆಗಳು ಮತ್ತು ಇನ್ನೂ ಮುಂತಾದ ಚಟುವಟಿಕೆಗಳನ್ನು ಕ್ಷೇತ್ರ ಕಾರ್ಯದಲ್ಲಿ ಟಿಪ್ಪಣೆ ಮಾಡಿಕೊಳ್ಳಲಾಗಿತ್ತು.

ಹೀಗೆ ಕ್ಷೇತ್ರಕಾರ್ಯದಲ್ಲಿ ದಾಖಲಿಸಿಕೊಂಡ ಟಿಪ್ಪಣಿಗಳು ಶಾಲಾ ವ್ಯವಸ್ಥೆಯಲ್ಲಿ ಇರುವ ಮೂಲ ಕೊರತೆಗಳನ್ನು ಗುರುತಿಸಲು ಸಹಕಾರಿಯಾಗಿವೆ. ಉದಾಹರಣೆಗೆ ಕನಿಷ್ಟ ಪ್ರಮಾಣದಲ್ಲಿ ಬೋಧನಾ ಚಟುವಟಿಕೆ. ಇದನ್ನು ಹೀಗೆ ವಿಶ್ಲೇಷಣೆ ಮಾಡಬಹುದು. ಅಧ್ಯಯನಕ್ಕೆ ಒಳಪಡಿಸಿದ ಶಾಲೆಗಳಲ್ಲಿಗೆ ನಾವು ಭೇಟಿ ನೀಡಿದ್ದಾಗ ಸ್ವಲ್ಪ ಹೆಚ್ಚು ಕಡಿಮೆ ಶೇಕಡ ೨೫ರಷ್ಟು ಶಿಕ್ಷಕರು ಬೋಧನಾ ಚಟುವಟಿಕೆಯಲ್ಲಿ ತೊಡಗಿರಲಿಲ್ಲ. ಈ ಹೇಳಿಕೆಯನ್ನು ಮೂರು ಕಾರಣಗಳಿಂದ ಗ್ರಹಿಸಬಹುದು. ಮೊದಲಿಗೆ, ಅಧ್ಯಯನ ನಡೆಸಿದ ಶಾಲೆಗಳು ರಜೆಯಲ್ಲಿ ಮುಚ್ಚಿದ ದಿನಗಳನ್ನು ಮತ್ತು ರಜೆ ಹಾಕಿದ ಶಿಕ್ಷಕರನ್ನು ಇಲ್ಲಿ ಪರಿಗಣಿಸಿಲ್ಲ. ಎರಡು, ಕ್ಷೇತ್ರಕಾರ್ಯದ ಸಮಯದಲ್ಲಿ ನಾವು ಸಾಮಾನ್ಯವಾಗಿ ಸ್ವಲ್ಪ ತಡ ಮಾಡಿಕೊಂಡು ಶಾಲೆಗಳಿಗೆ ಭೇಟಿ ನೀಡುತ್ತಿದ್ದೆವು. ಅಂದರೆ ಶಾಲೆಯ ಚಟುವಟಿಕೆಗಳು ಹೆಚ್ಚಾಗಿ ಅಥವಾ ಬಹಳ ಮಟ್ಟಿಗೆ ನಡೆಯುತ್ತಿದ್ದ ಸಂದರ್ಭದಲ್ಲಿ ಭೇಟಿ ನೀಡಲಾಗಿತ್ತು (ಬೆಳಿಗ್ಗೆ ೧೧ ರಿಂದ ೧.೩೦). ಮೂರು, ಬೋಧನಾ ಚಟುವಟಿಕೆಗಳನ್ನು ಇಲ್ಲಿ ಬಹಳ ವಿಶಾಲ ಅರ್ಥದಲ್ಲಿ ಪರಿಭಾವಿಸಿಕೊಳ್ಳಲಾಗಿದೆ. ಇದು ಬೋಧನಾ ತಟಸ್ಥ ಮಾದರಿಗೆ ಸಂಬಂಧಿಸಿದ್ದು ಆಗಿರಬಹುದು, ಹಾಗೆಂದರೆ ಮಕ್ಕಳನ್ನು ಗಟ್ಟಿಧ್ವನಿಯಿಂದ ಓದುವಂತೆ ಕೇಳುವುದು ಮತ್ತು ಮಕ್ಕಳ ಬರವಣಿಗೆಯ ಅಭ್ಯಾಸವನ್ನು ಅವಲೋಕಿಸುವುದು.

ಒಬ್ಬರೇ ಶಿಕ್ಷಕರು ಒಂದಕ್ಕಿಂತ ಹೆಚ್ಚಿನ ತರಗತಿಗಳಿಗೆ ಏಕಕಾಲದಲ್ಲಿ ಬೋಧನಾ ಚಟುವಟಿಕೆಯಲ್ಲಿ (ಒಂದೇ ಕೊಠಡಿಯಲ್ಲಿ) ತೊಡಗಿದರೆ ಬೋಧನಾ ಮಟ್ಟ ಅತ್ಯಂತ ಕನಿಷ್ಟ ಮಟ್ಟದಾಗಿರುವುದು ಅನಿವಾರ್ಯ. ಇಂತಹ ಪರಿಸ್ಥಿತಿಯಲ್ಲಿ ಶಿಕ್ಷಕರ ಮುಖ್ಯ ಆದ್ಯತೆಯೆಂದರೆ, ಮಕ್ಕಳನ್ನು ನಿಶಬ್ದದಿಂದ ಇರುವಂತೆ ನೋಡಿಕೊಳ್ಳುವುದು, ಮಕ್ಕಳಿಂದ ಆಗಬಹುದಾದ ತೊಡಕುಗಳನ್ನು ತಪ್ಪಿಸುವುದು. ನಾವು ಭೇಟಿ ನೀಡಿದ ಸಂದರ್ಭದಲ್ಲಿ ಶಾಲೆಗಳಲ್ಲಿ ಇರುವ ಒಟ್ಟು ಶಿಕ್ಷಕರಲ್ಲಿ ಬಹುತೇಕ ಶಿಕ್ಷಕರು ಬೋಧನೆಯಲ್ಲಿ

ತೊಡಗುತ್ತಿದ್ದರು. ಇವರಲ್ಲಿ ಕೆಲವರಿಗೆ ಕನಿಷ್ಠ ಮಟ್ಟದ ಬೋಧನಾ ಆಸಕ್ತಿ ಇಲ್ಲದಿರುವುದನ್ನು ಸೂಕ್ಷ್ಮವಾಗಿ ಗಮನಿಸಿದ್ದೇವೆ. ಪ್ರತಿಶಾಲೆಯಲ್ಲಿ ಒಬ್ಬ ಶಿಕ್ಷಕರು ಶಾಲೆಗೆ ಸಂಬಂಧಿಸಿದ ಬೋಧನೇತರ ಆಡಳಿತ ಕೆಲಸದಲ್ಲಿ ತೊಡಗಿರುವುದು ಸಾಮಾನ್ಯವಾಗಿ ಕಂಡು ಬಂತು. ಇವರು ಹಾಜರಾತಿ, ವರದಿ ಮತ್ತು ಇತರ ದಾಖಲಾತಿಗಳನ್ನು ಸಿದ್ಧಪಡಿಸುತ್ತಿದ್ದರು. ಈ ಕೆಲಸದಲ್ಲಿ ತೊಡಗಿದ ಶಿಕ್ಷಕರು ಮಕ್ಕಳ ಕಡೆಗೆ ನೋಡುತ್ತಾ ಕುಳಿತು ಕೆಲಸ ಮಾಡುತ್ತಿದ್ದರು. ಇವರಲ್ಲಿ ಕೆಲವರು ಕಾಲ ಕಳೆಯುವ ರೀತಿಯಲ್ಲಿ ಕುಳಿತು ಓದುವ ಮತ್ತು ತಿಳಿದುಕೊಳ್ಳುವ ರೀತಿ ಇದ್ದರು. ಹೀಗೆ ಅತ್ಯಂತ ಲಿಬರಲ್ ಆಗಿರುವ ಸಮಯದ ಉಪಯೋಗದ ಮಾದರಿಗಳು ಅಪಾಯಕಾರಕವಾಗಿವೆ. ಇದು ಕೆಲವು ಸಂದರ್ಭಗಳಲ್ಲಿ, ಪ್ರಾಥಮಿಕ ಶಾಲಾ ವ್ಯವಸ್ಥೆಯ ಬೋಧನೆಯಲ್ಲಿನ ಒಪ್ಪಿತ ನಿಯಮದಂತೆ ಕಂಡುಬರುತ್ತದೆ.

ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ನಾವು ಶಾಲೆಗಳಿಗೆ ಭೇಟಿ ನೀಡಿದಾಗ ೧ನೇ ತರಗತಿಯಲ್ಲಿ ಬೋಧಿಸುತ್ತಿದ್ದ ಶಿಕ್ಷಕರನ್ನು, ಬೆಳಿಗ್ಗೆ ಶಾಲೆ ಪ್ರಾರಂಭವಾದಾಗ ನೀವು ತರಗತಿಯಲ್ಲಿ ಉಪಯೋಗಿಸಿರುವ ಬೋಧನಾ ವಿಧಾನ ಯಾವುದು ಎಂದು ಪ್ರಶ್ನಿಸಿದಾಗ, ಶೇಕಡ ೪೮.೦೦ ಕ್ಕೂ ಹೆಚ್ಚಿನ ಶಿಕ್ಷಕರು ಬೋಧನೆಯನ್ನು ಇನ್ನೂ ಪ್ರಾರಂಭಿಸಿಲ್ಲ ಎಂದು ಹೇಳಿದ್ದಾರೆ ಹೊರತು, ಬೋಧನೆಗೆ ಉಪಯೋಗಿಸುವ ಬೋಧನಾ ವಿಧಾನದ ಬಗ್ಗೆ ಉತ್ತರಿಸಲಿಲ್ಲ. ಉಳಿದ ಶೇಕಡ ೫೨.೦೦ರಷ್ಟು ಶಿಕ್ಷಕರು ಶಾಲೆ ಪ್ರಾರಂಭವಾದಾಗ ನಾವು ಕಪ್ಪು ಹಲಗೆಯನ್ನು ಉಪಯೋಗಿಸಿ ಬೋಧನೆ ಮಾಡುತ್ತೇವೆ ಎಂದು ಹೇಳಿದ್ದರು. ಇದು ಏನೇ ಇದ್ದರೂ ನಾವು ಶಾಲಾ ತರಗತಿಗಳಲ್ಲಿ ಅವಲೋಕಿಸಿದಾಗ ಬರವಣಿಗೆ ಅಭ್ಯಾಸವು ಸಾಮಾನ್ಯ ರೀತಿಯಲ್ಲಿ ಕನಿಷ್ಠದಾಗಿದೆ. ಕಪ್ಪು ಹಲಗೆಯಲ್ಲಿರುವುದನ್ನು ನೋಡಿಕೊಂಡು ಯಥಾವತ್ತಾಗಿ ಬರೆಯುವ ಅಥವಾ ಪಠ್ಯಪುಸ್ತಕದಿಂದ ನೋಡಿಕೊಂಡು ಬರೆಯುವ ಪ್ರವೃತ್ತಿ ಇದೆ. ಅಲ್ಲದೆ ೬ ಮತ್ತು ೭ನೇ ತರಗತಿಗಳಲ್ಲಿ ವಿದ್ಯಾರ್ಥಿಗಳು ಗೈಡ್‌ಗಳನ್ನು ನೋಡಿ ಕಾಪಿ ಮಾಡುವುದು ಕಂಡು ಬರುತ್ತದೆ. ಮಕ್ಕಳು ಬರೆಯುವ ನೋಟ್ ಪುಸ್ತಕಗಳನ್ನು ಪರಿಶೀಲನಾ ಮಾದರಿಯಲ್ಲಿ ಅವಲೋಕಿಸಿದಾಗ ಹೆಚ್ಚಿನ ಮಕ್ಕಳು ನೋಟ್ ಪುಸ್ತಕಗಳಲ್ಲಿ ಗೀಚಿದ ಬರಹ ಅಥವಾ ಅವಸರದಿಂದ ಬರೆದಿರುವುದು ತಿಳಿಯುತ್ತದೆ.

೧ನೇ ತರಗತಿ ಮತ್ತು ೨ನೇ ತರಗತಿಗಳಲ್ಲಿ ಗಾಬರಿ ಉಂಟುಮಾಡುವ ಮತ್ತೊಂದು ಬೋಧನಾ ವಿಧಾನವೆಂದರೆ, ಮಕ್ಕಳನ್ನು ವ್ಯವಸ್ಥಿತವಾಗಿ ನಿರ್ಲಕ್ಷಿಸಿರುವುದು. ಹೇಗೆಂದರೆ ಮಕ್ಕಳನ್ನು ಯಾವುದೇ ಕಲಿಕಾ ಚಟುವಟಿಕೆಗಳು ಇಲ್ಲದೆ ಸುಮ್ಮನೆ ಕೊಠಡಿಗಳಲ್ಲಿ ಕೂರಿಸುವುದು. ಮಕ್ಕಳನ್ನು ಅವರ ಆಸಕ್ತಿಗಳಿಗೆ (ಕಿತಾಪತಿ, ಪುಸ್ತಕ ಹರಿಯುವುದು ಇತ್ಯಾದಿ) ಅನುಗುಣವಾಗಿ ಬಿಡುವುದು. ಮಕ್ಕಳು ಸುಮ್ಮನೆ ಕುಳಿತುಕೊಳ್ಳಬೇಕು ಎಂದು ಬಯಸುವುದು. ಶಿಕ್ಷಕರು ಎಲ್ಲಾ ಮಕ್ಕಳಿಗೂ ಬೋಧನೆ ಮಾಡಲು, ಗಮನ ಕೊಡಲು ಆಗದಿರುವುದು ಮತ್ತು ಆಸಕ್ತಿ ಇಲ್ಲದಿರುವುದು. ಆದರೆ ಹೆಚ್ಚಿನ ಪ್ರಮಾಣದಲ್ಲಿ ಶಿಕ್ಷಕರು ಹಿರಿಯ ತರಗತಿಯ ಮಕ್ಕಳಿಗೆ, ಅಂದರೆ ೫, ೬ ಮತ್ತು ೭ನೆಯ ತರಗತಿಗಳಿಗೆ ಬೋಧನೆ ಮಾಡಲು ಸ್ವಲ್ಪ ಆಸಕ್ತಿಯನ್ನು ವಹಿಸುವುದು ಕಂಡುಬರುತ್ತದೆ. ಇದಕ್ಕೆ ಶಿಕ್ಷಕರೇ ನೀಡುವ ಸಮಜಾಯಿಸಿ

ಚಿಕ್ಕ ವಯಸ್ಸಿನ ಮಕ್ಕಳಿಗೆ ೧, ೨ನೆಯ ತರಗತಿಗಳಿಗೆ ಪಾಠ ಹೇಳುವುದು ಬಹಳ ತಗಾದೆ ಮತ್ತು ಅದು ಬಹುದೊಡ್ಡ ಸವಾಲು. ೫ನೆಯ ತರಗತಿಯಿಂದ ಪರೀಕ್ಷೆಗಳು ಸ್ವಲ್ಪ ಗಂಭೀರವಾಗುತ್ತವೆ. ಶಾಲೆಗಳಿಂದ ಹೆಚ್ಚಿನ ಫಲಿತಾಂಶವನ್ನು ಶಿಕ್ಷಣ ಇಲಾಖೆ ಬಯಸುತ್ತದೆ. ಜೊತೆಗೆ ನಾವು ಶಾಲೆಗೆ ಹೆಚ್ಚಿನ ಫಲಿತಾಂಶ ಬರಲಿ ಎಂಬ ಆಸಕ್ತಿಯಿಂದ ೫, ೬ ಮತ್ತು ೭ನೆಯ ತರಗತಿಗಳಿಗೆ ಆಸಕ್ತಿ ವಹಿಸಿ ಬೋಧನೆ ಮಾಡುತ್ತೇವೆ, ಎಂದು ಕೆಲವು ಶಿಕ್ಷಕರು ಅಭಿಪ್ರಾಯ ಪಡುತ್ತಾರೆ.

ಬೆರಳೆಣಿಕೆಯಷ್ಟು ಶಿಕ್ಷಕರು ಮಾತ್ರ ಬೋಧನಾ ಕಲಿಕೆ ಚಟುವಟಿಕೆಯಲ್ಲಿ ಕಲಿಕಾ ಸಾಮಗ್ರಿಗಳನ್ನು ಬಳಸುತ್ತಾರೆ. ಆದರೂ ಮಕ್ಕಳು ಆಗಾಗ ಬದಲಾದ ಕಲಿಕಾ ಸಾಮಗ್ರಿಗಳನ್ನು ಬಯಸುತ್ತಿರುವುದು ತಿಳಿಯುತ್ತದೆ. ಕೆಲವು ಶಿಕ್ಷಕರು, ಅದರಲ್ಲಿಯೂ ವಿಶೇಷವಾಗಿ ಇತ್ತೀಚಿನ ತರಬೇತಿಗಳಲ್ಲಿ ಭಾಗವಹಿಸಿರುವವರು ಬೋಧನೆಯನ್ನು 'ಕಲಿ-ನಲಿ' ಪರಿಕಲ್ಪನೆಯ ಹಿನ್ನೆಲೆಯಲ್ಲಿ ಮಕ್ಕಳಿಗೆ ಕಲಿಸಲು ಸಫಲರಾಗಿದ್ದಾರೆ. 'ಕಲಿ-ನಲಿ' ಕಾರ್ಯಕ್ರಮದಲ್ಲಿ ರೂಪಿಸಲಾದ ಬೋಧನಾ ವಿಧಾನವನ್ನು ತರಗತಿಗಳಲ್ಲಿ ಏಕಾಏಕಿ ಅಳವಡಿಸಿಕೊಳ್ಳುವುದು ಸ್ವಲ್ಪಮಟ್ಟಿಗೆ ಕಷ್ಟ ಒಂದು ಶಾಲೆಯಲ್ಲಿ ಮಕ್ಕಳು ಕಥೆಯಲ್ಲಿ ಬರುವ ಪದಗಳನ್ನು ಜೋಡಿಸಿಕೊಂಡು ನಿಧಾನವಾಗಿ ಓದುತ್ತಿದ್ದುದನ್ನು ನಾವು ಗಮನಿಸುತ್ತಿದ್ದೆವು. ಇಬ್ಬರು ಶಿಕ್ಷಕರು ನಕ್ಷೆಯನ್ನು ಮಕ್ಕಳಿಗೆ ತೋರಿಸಿ ಬೋಧನೆ ಮಾಡುತ್ತಿದ್ದರೆ, ಮತ್ತೊಬ್ಬರು ಮಧ್ಯಾಹ್ನದ ಸಮಯದಲ್ಲಿ ಕೋ-ಕೋ ಆಟವನ್ನು, ಸಂಘಟಿಸಿ ಮಕ್ಕಳಿಗೆ ತರಬೇತಿ ನೀಡುತ್ತಿದ್ದರು. ಒಟ್ಟಾರೆ ಇಂತಹ ಕೆಲವು ಉತ್ತಮ ಗುಣಮಟ್ಟದ ಚಟುವಟಿಕೆಗಳೆಲ್ಲಾ ಕಗ್ಗತ್ತಲಲ್ಲಿ ಪುಟ್ಟ ದೀಪದಂತೆ ಕಂಡರೂ ಬಹಳ ಮಟ್ಟಿಗೆ ಕನಿಷ್ಠ ಪ್ರಮಾಣದ ಬೋಧನಾ ಚಟುವಟಿಕೆಗಳದೆ ಅಧಿಪತ್ಯ

೫.೯ ಸಾಮಾಜಿಕ ಅಸಮಾನತೆ ಮತ್ತು ಲಿಂಗಾಧಾರಿತ ಪಕ್ಷಪಾತ

ಇದುವರೆಗೆ ನಾವು ಎರಡು ಗ್ರಾಮ ಪಂಚಾಯತಿ ಮಟ್ಟದಲ್ಲಿ ಪ್ರಾಥಮಿಕ ಶಿಕ್ಷಣದ ಪರಿಸರದಲ್ಲಿ ಇರಬಹುದಾದ ಸಮಸ್ಯೆಗಳನ್ನು ಕುರಿತು ಚರ್ಚಿಸಿದ್ದೇವೆ. ಹೀಗೆ ಚರ್ಚಿಸುವಾಗ ನಿರ್ದಿಷ್ಟವಾದ ಗುಂಪಿನ ಜನರ ಬಗ್ಗೆ ಯಾವುದೇ ಉಲ್ಲೇಖನಗಳನ್ನು ನೀಡಿಲ್ಲ. ಪ್ರಾಥಮಿಕ ಶಾಲಾ ಹಂತದಲ್ಲಿ ಇರುವ ಹೆಚ್ಚಿನ ಸಮಸ್ಯೆಗಳು ವಿಶಾಲವಾಗಿ ವರ್ಗ, ಜಾತಿ, ಲಿಂಗಾಧಾರಿತ ಮತ್ತು ಸೌಲಭ್ಯವಂಚಿತ ಗುಂಪುಗಳನ್ನು ಹೊಂದಿವೆ.

ನಮ್ಮ ಸಾಮಾಜಿಕ ರಚನೆಯಲ್ಲಿ ಅಸಮಾನತೆಯು ಸಾಮಾನ್ಯವಾಗಿ ಕಂಡುಬರುವ ಲಕ್ಷಣ. ಪ್ರಾಥಮಿಕ ಶಿಕ್ಷಣದಲ್ಲಿ ಇರುವ ಕೆಲವು ಅಡೆತಡೆಗಳನ್ನು ಈಗಾಗಲೇ ಗುರುತಿಸಿದ್ದೇವೆ. ಉದಾಹರಣೆಗೆ ಬಡತನದ ರೇಖೆಗಿಂತ ಕೆಳಗಿರುವ ಕೌಟುಂಬಿಕ ವ್ಯವಸ್ಥೆಯಲ್ಲಿ ಪೋಷಕರು ಶಾಲೆಗೆ ಮಕ್ಕಳನ್ನು ಕಳುಹಿಸಲು ಅತ್ಯಂತ ಕನಿಷ್ಠ ಮಟ್ಟದ ಹಣಕಾಸು ಹೊಂದಿರುತ್ತಾರೆ. ಇದಕ್ಕಿಂತ ಹೆಚ್ಚಾಗಿ ಇಂತಹ ಕುಟುಂಬದ ಮಕ್ಕಳು ದುಡಿಮೆ ಮಾಡುವುದು (ಬಾಲ-ಕಾರ್ಮಿಕರಾಗಿ ದುಡಿಯುವುದು) ಅವಶ್ಯಕವಾಗಿರುತ್ತದೆ. ಮಕ್ಕಳ ಕಲಿಕೆಗೆ ಮನೆಯಲ್ಲಿ ಪೂರಕವಾದ ಪರಿಸರವನ್ನು ಹುಟ್ಟುಹಾಕುವುದಕ್ಕೆ

ಕನಿಷ್ಠ ಅವಕಾಶವಿಲ್ಲದಿದ್ದಾಗ ಶಾಲಾ ಶಿಕ್ಷಕರೊಂದಿಗೆ ಸಂಬಂಧ ಬೆಳೆಸುವುದು ಬಹಳ ಕಷ್ಟ. ಸ್ವಲ್ಪ ಹೆಚ್ಚು ಕಡಿಮೆ ಇದೇ ರೀತಿಯಲ್ಲಿ ಲಿಂಗಾಧಾರಿತ ತಾರತಮ್ಯದಿಂದ ಬಾಲಕಿಯರು ಮಾಧ್ಯಮಿಕ ಶಾಲೆಯ ನಂತರ ಶಾಲೆಗೆ ಹಾಜರಾಗದೇ ಇರುವುದು, ಶಾಲೆ ಬಿಡುವುದು ಹೆಚ್ಚಿನ ಗ್ರಾಮಗಳಲ್ಲಿ ಕಂಡುಬರುತ್ತದೆ.

ಶಾಲಾ ವ್ಯವಸ್ಥೆಯ ಒಳಗೆ ಎಲ್ಲಾ ಜಾತಿ ಅಥವಾ ಗುಂಪುಗಳ ನಡುವೆ ಸಮಾನ ಅವಕಾಶಗಳನ್ನು ನೀಡಲಾಗಿಲ್ಲ. ಅವಕಾಶ ವಂಚಿತ ಸಮುದಾಯಗಳ ಜನರುಗಳಿಗೆ ಇದು ಒಂದು ರೋಗವಾಗಿ ಕಾಡುತ್ತಿದೆ. ಅಲ್ಲದೆ ಸಮಸ್ಯೆ ಬೇರೆ ಬೇರೆ ರೂಪದಲ್ಲಿದೆ.

ಮೊದಲಿಗೆ, ಶಾಲಾ ವ್ಯವಸ್ಥೆಯಲ್ಲಿ ಬೇರೆ ಬೇರೆಯಾದ ಎರಡು ದಾರಿಗಳು ಅಭಿವೃದ್ಧಿ ಹೊಂದಿರುವುದು ಕಂಡುಬರುತ್ತದೆ. ಇಲ್ಲಿ ಬೇರೆ ಬೇರೆ ವರ್ಗ ಅಥವಾ ಗುಂಪಿನ ಜನರಿಗೆ, ಬೇರೆ ಬೇರೆ ಶಾಲಾ ವ್ಯವಸ್ಥೆಗಳು ದೊರಕುತ್ತಿವೆ. ಈ ವ್ಯವಸ್ಥೆಯ ಮೂಲ ಸರಕಾರಿ ಶಾಲೆಗಳು ಮತ್ತು ಖಾಸಗಿ ಶಾಲೆಗಳ ನಡುವೆ ಇರುವ ದ್ವಿರೂಪತೆ. ಖಾಸಗಿ ಶಾಲೆಗಳು ಉತ್ತಮ ವ್ಯವಸ್ಥೆಗಳನ್ನು ಹೊಂದಿದ್ದು, ಹೆಚ್ಚು ವೆಚ್ಚದಾಯಕವಾಗಿವೆ. ಅಲ್ಲದೆ ಇವು ವಿಶೇಷ ಸೌಲಭ್ಯಗಳನ್ನು ಹೊಂದಿರುವ ಕುಟುಂಬಗಳಿಗೆ ರೂಪಿತವಾಗಿವೆ. ನಾವು ಅಧ್ಯಯನ ಕೈಗೊಂಡ ಗ್ರಾಮಗಳಲ್ಲಿ ಮೇಲೆ ತಿಳಿಸಿದ ಗುಣ ಲಕ್ಷಣಗಳನ್ನು ಗುರುತಿಸಿದ್ದೇವೆ. ಈ ಗ್ರಾಮಗಳಲ್ಲಿ ಇರುವ ಕೆಲವೇ ಕೆಲವು ಶ್ರೀಮಂತ ಕುಟುಂಬಗಳು ಅಥವಾ ಹೆಚ್ಚಿನ ಆದಾಯದ ಮೂಲಗಳಿರುವ ಕುಟುಂಬಗಳ ಮಕ್ಕಳು ಪಕ್ಕದ ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರ ಸೇರಿದಂತೆ ಮುಂತಾದ ಸ್ಥಳಗಳಲ್ಲಿರುವ ಖಾಸಗಿ ಶಾಲೆಗೆ ಹೋಗುತ್ತಿದ್ದಾರೆ. ಇನ್ನೂ ಕೆಲವರು ತಮ್ಮ ಮಕ್ಕಳನ್ನು ಉನ್ನತ ಶಿಕ್ಷಣಕ್ಕೆ ಕಳುಹಿಸುವ ಆಸಕ್ತಿಯನ್ನು ತೋರಿಸಿದ್ದಾರೆ. ಅಲ್ಲದೆ ಮಕ್ಕಳಿಗೆ ಉನ್ನತ ಶಿಕ್ಷಣವನ್ನು ದೂರಕಿಸಿಕೊಡುವ ಬಗ್ಗೆ ಹೆಚ್ಚಿನ ಆಸಕ್ತಿ ಹೊಂದಿರುವುದು ಕಂಡುಬಂದಿದೆ.

ಆದರೆ ಆರ್ಥಿಕವಾಗಿ ಬಹಳ ಹಿಂದುಳಿದಿರುವ ಕುಟುಂಬಗಳು, ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡ, ಹಿಂದುಳಿದ ಜಾತಿ ಮತ್ತು ಮುಸ್ಲಿಮರು ಶಿಕ್ಷಣದ ಬಗ್ಗೆ ನಿರಾಸಕ್ತಿಯನ್ನು ಹೊಂದಿದ್ದಾರೆ. ಇವರು ಮಕ್ಕಳ ಉನ್ನತ ಶಿಕ್ಷಣದ ಬಗ್ಗೆ ಮಹತ್ವದ ಆಸಕ್ತಿಯನ್ನು ಹೊಂದಿಲ್ಲ. ಈ ರೀತಿಯ ಸಾಮಾಜಿಕ ನಿರುತ್ಸಾಹದಾಯಕ ಸಂಗತಿಯು ಅಧ್ಯಯನಕ್ಕೆ ಒಳಪಡಿಸಿದ ಶೇಕಡ ೪೩ಕ್ಕಿಂತಲೂ ಹೆಚ್ಚಿನ ಕುಟುಂಬಗಳಲ್ಲಿ ಕಂಡುಬರುತ್ತದೆ. ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಆಸಕ್ತಿ ಹೊಂದಿಲ್ಲದಿರುವ ಕುಟುಂಬಗಳು ಕೂಡ ಇವೇ ಆಗಿರುವುದು ವಿಶೇಷವಾಗಿ ಕಂಡುಬರುತ್ತದೆ. ಪ್ರಾಥಮಿಕ ಹಂತದವರೆಗೆ ಹೆಣ್ಣುಮಕ್ಕಳು ಓದಿದರೆ ಸಾಕು ಎಂದು ಹೇಳುವವರ ಸಂಖ್ಯೆಯೂ ಕೂಡ ಕಡಿಮೆ ಇಲ್ಲ. ಈ ಪ್ರವೃತ್ತಿಯು ಸ್ವಲ್ಪ ಹೆಚ್ಚಾಗಿ ಕಡಿಮೆ ಆದಾಯ ಹೊಂದಿರುವ ಹಾಗೂ ಮುಸ್ಲಿಂ ಕುಟುಂಬಗಳಲ್ಲಿ ಸಾಮಾನ್ಯವಾಗಿ ಕಂಡು ಬರುವ ಲಕ್ಷಣವಾಗಿದೆ. ಶಾಲೆಯನ್ನು ಮಧ್ಯದಲ್ಲಿ ಬಿಟ್ಟಿರುವ ಮಕ್ಕಳು ಮತ್ತು ಚಿಣ್ಣರ ಅಂಗಳಕ್ಕೆ ಬರುವ ಮಕ್ಕಳ ಆರ್ಥಿಕ ಮತ್ತು ಸಾಮಾಜಿಕ ಹಿನ್ನೆಲೆಯನ್ನು ನಾವು ಸೂಕ್ಷ್ಮವಾಗಿ ಗಮನಿಸಿದಾಗ

ಶೇಕಡ ೮೦ಕ್ಕಿಂತಲೂ ಹೆಚ್ಚಿನ ಮಕ್ಕಳು ಅತ್ಯಂತ ಕಡಿಮೆ ಆದಾಯವಿರುವ ಕುಟುಂಬದಿಂದ ಬಂದವರಾಗಿರುತ್ತಾರೆ. ಅಲ್ಲದೆ ಹಿಂದುಳಿದ ಜಾತಿ, ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ, ಅಲ್ಪಸಂಖ್ಯಾತ ಕುಟುಂಬಗಳಿಗೆ ಸೇರಿದ ಮಕ್ಕಳೇ ಹೆಚ್ಚಿನ ಪ್ರಮಾಣದಲ್ಲಿ ಇದ್ದಾರೆ.

ಎರಡನೆಯದಾಗಿ, ಸರಕಾರಿ ಶಾಲೆಗಳ ನಡುವೆ ಮೂಲ ಸೌಲಭ್ಯಗಳಲ್ಲಿ ಅನೇಕ ಬಗೆಯ ವ್ಯತ್ಯಾಸಗಳನ್ನು ಗುರುತಿಸಬಹುದು. ಶಾಲಾ ಕಟ್ಟಡ, ಶಿಕ್ಷಕ ಮತ್ತು ಮಕ್ಕಳ ಪರಿಮಾಣ, ಬೋಧನಾ ಸಾಮಗ್ರಿಗಳು, ಆಟದ ಮೈದಾನ, ಗ್ರಂಥಾಲಯ ಸೌಲಭ್ಯ, ಪ್ರಯೋಗಾಲಯ ಇತ್ಯಾದಿ. ಈ ಎಲ್ಲಾ ಮೂಲ ಸೌಲಭ್ಯಗಳು ಗ್ರಾಮೀಣ ಪ್ರದೇಶದ ಶಾಲೆಗಳಲ್ಲಿ ಕೊರತೆಯಾಗಿ ಕಂಡುಬರುತ್ತವೆ. ಆದರೆ ಪಟ್ಟಣ ಪ್ರದೇಶದ ಶಾಲೆಗಳಲ್ಲಿ ಮೂಲ ಸೌಲಭ್ಯಗಳ ಕೊರತೆಯ ಸರಾಸರಿ ಪ್ರಮಾಣ ಗ್ರಾಮೀಣ ಪ್ರದೇಶದ ಶಾಲೆಗಳಿಗೆ ಹೋಲಿಸಿದರೆ ಬಹಳ ಕಡಿಮೆ ಮಟ್ಟದಲ್ಲಿದೆ. ಇದನ್ನು ಒಂದು ಉದಾಹರಣೆಯ ಮೂಲಕ ವಿವರಿಸಬಹುದು. ಶಿಕ್ಷಕ-ಮಕ್ಕಳ ಪರಿಮಾಣವು ಬೆಂಗಳೂರು ಜಿಲ್ಲೆಯಲ್ಲಿ ಒಬ್ಬ ಶಿಕ್ಷಕರಿಗೆ ೩೧ ವಿದ್ಯಾರ್ಥಿಗಳಿದ್ದರೆ. ಹಾಸನ ಜಿಲ್ಲೆಯಲ್ಲಿ ಒಬ್ಬ ಶಿಕ್ಷಕರಿಗೆ ೪೨ ಮಂದಿ ವಿದ್ಯಾರ್ಥಿಗಳಿದ್ದಾರೆ. ರಾಯಚೂರು ಜಿಲ್ಲೆಯಲ್ಲಿ ಸರಾಸರಿ ಒಬ್ಬ ಶಿಕ್ಷಕರಿಗೆ ೪೮ ಮಂದಿ ವಿದ್ಯಾರ್ಥಿಗಳಿದ್ದರೆ, ಅಧ್ಯಯನ ನಡೆಸಿರುವ ಗ್ರಾಮಪಂಚಾಯತಿಯಲ್ಲಿ ಒಬ್ಬ ಶಿಕ್ಷಕರಿಗೆ ೪೪ ಮಂದಿ ವಿದ್ಯಾರ್ಥಿಗಳಿದ್ದಾರೆ. ಇದರಿಂದ ಸ್ಪಷ್ಟವಾಗುವ ಅಂಶವೆಂದರೆ ಶೈಕ್ಷಣಿಕ ಸೌಲಭ್ಯಗಳ ಹಂಚಿಕೆ, ಆಚರಣೆ ಮತ್ತು ನಿರ್ವಹಣೆಯು ಹೇಗೆ ಗ್ರಾಮ, ಜಿಲ್ಲೆ, ನಗರ ಪ್ರದೇಶಗಳಲ್ಲಿ ವ್ಯತ್ಯಾಸ ಹೊಂದಿದೆ ಎಂಬುದನ್ನು ತಿಳಿಸುತ್ತದೆ. ಶಾಲೆ ವ್ಯವಸ್ಥೆಯಲ್ಲಿನ ಮೂಲ ಸೌಲಭ್ಯಗಳ ಅಸಮಾನ ಹಂಚಿಕೆಯು ಸಹ ಸಾಮಾಜಿಕ ಭಿನ್ನತೆಯನ್ನು ಹುಟ್ಟು ಹಾಕುವಲ್ಲಿ ಸಂಯೋಜಕ ಸಂಬಂಧ ಹೊಂದಿರುತ್ತದೆ ಎಂಬುದನ್ನು ಮರೆಯಬಾರದು.

ಮೂರನೆಯದಾಗಿ ಒಂದೇ ಶಾಲೆಯ ಒಳಗೆ, ವಿವಿಧ ಸಾಮಾಜಿಕ, ಆರ್ಥಿಕ ಹಿನ್ನೆಲೆ ಇರುವ ಮಕ್ಕಳು ಒಂದೇ ರೀತಿಯ ಅವಕಾಶಗಳನ್ನು ಪಡೆಯುತ್ತಿಲ್ಲ. ಇದು ಸ್ವಲ್ಪಮಟ್ಟಿಗೆ ಗಾಬರಿ ಹುಟ್ಟಿಸುವ ರೂಪದಲ್ಲಿದ್ದು, ಅಲ್ಲಿ ಪಕ್ಷಪಾತ ಅಥವಾ ಬೇಧ-ಭಾವವನ್ನು ನಾವು ಕಾಣಬಹುದು. ನಾವು ಅಧ್ಯಯನ ಮಾಡಿದ ಶಾಲೆಗಳಲ್ಲಿ ತರಗತಿಯ ಹೆಚ್ಚಿನ ಲೀಡರ್‌ಗಳು ಮೇಲುಜಾತಿಗೆ ಹಾಗೂ ಆರ್ಥಿಕವಾಗಿ ಮುಂದುವರಿದ ಕುಟುಂಬಗಳಿಗೆ ಸೇರಿದವರಾಗಿದ್ದಾರೆ. ಈ ಭೇದ-ಭಾವ ತರಗತಿಯಲ್ಲಿ ಮಾತ್ರ ನಡೆಯುತ್ತದೆ ಎಂದು ನಾವು ಕರೆಯಲಾಗುವುದಿಲ್ಲ. ಆದರೆ ಇಂತಹ ಪಕ್ಷಪಾತ ಅಥವಾ ಭೇದ-ಭಾವದ ಧೋರಣೆಗಳು, ಸಾಮಾಜಿಕ ಭೇದ-ಭಾವದ ಧೋರಣೆಯ ರೂಪದಲ್ಲಿಯೆ ಇವೆ.

ಲಿಂಗಾಧಾರಿತ ಪಕ್ಷಪಾತವು ತರಗತಿಯ ಒಳಗೆ ಸಾಮಾಜಿಕ ಅಸಮಾನತೆಯಲ್ಲಿ ಕಂಡುಬರುವ ಮತ್ತೊಂದು ಮಾದರಿ. ಉದಾಹರಣೆಗೆ ಶಾಲೆಗಳಲ್ಲಿ ಗಂಡು ಮಕ್ಕಳು ಹೆಣ್ಣು ಮಕ್ಕಳಿಗಿಂತ ಹೆಚ್ಚಿನ ಪ್ರಾಮುಖ್ಯತೆಯನ್ನು ಶಿಕ್ಷಕರಿಂದ ಪಡೆಯುತ್ತಿರುವುದು ಸಾಮಾನ್ಯವಾಗಿ ಕಂಡುಬರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಶಿಕ್ಷಕರು ಲಿಂಗಾಧಾರಿತ ಪಕ್ಷಪಾತದ ಸಾಮಾನ್ಯ ಅಂಶಗಳಿಂದ ಪ್ರಭಾವಕ್ಕೆ ಒಳಗಾಗಿದ್ದಾರೆ. ಹೆಣ್ಣುಮಕ್ಕಳ ಅಸ್ತಿತ್ವ ಮತ್ತು ಕಲಿಕಾ ಸಾಮರ್ಥ್ಯಕ್ಕೆ ಸಂಬಂಧಿಸಿದಂತೆ ಅವರ ದೃಷ್ಟಿಕೋನವು

ಅಸ್ಪಷ್ಟವಾಗಿದೆ. ಬಹಳ ಆಸಕ್ತಿಯ ವಿಷಯವೆಂದರೆ ದಕ್ಷಿಣದ ಕೇರಳ, ಉತ್ತರದ ಹಿಮಾಚಲ ಪ್ರದೇಶದಲ್ಲಿ ಹೆಣ್ಣುಮಕ್ಕಳ ಬಗ್ಗೆ ಶಿಕ್ಷಕರ ದೃಷ್ಟಿಕೋನವು ಸಕಾರಾತ್ಮಕವಾಗಿದೆ. ಈ ರಾಜ್ಯಗಳು ಶಿಕ್ಷಣ ಮತ್ತು ಸಾಕ್ಷರತೆಯಲ್ಲಿ ಉತ್ತಮ ಸಾಧನೆ ಮಾಡಲು ಈ ಅಂಶವು ಕೂಡ ಪೂರಕವಾಗಿದೆ ಎಂಬುದನ್ನು ಇಲ್ಲಿ ನಾವು ಸ್ಪಷ್ಟಪಡಿಸಿಕೊಳ್ಳಬೇಕು. ನಮ್ಮ ಅಧ್ಯಯನದ ಕಾಲದಲ್ಲಿ ಶಾಲೆಗಳಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಹಾಗೂ ಅಸಮಾನತೆ ಕಂಡುಬರದಿದ್ದರೂ ಅವರ ಶಿಕ್ಷಣದ ಬಗ್ಗೆ ಇರುವ ಗುಣಾತ್ಮಕ ಮನೋಪ್ರವೃತ್ತಿಯು ಬಹಳ ಕನಿಷ್ಠ ಮಟ್ಟದ್ದಾಗಿದೆ.

ತರಗತಿಯ ಒಳಗೆ ಕಂಡುಬರುವ ಮತ್ತೊಂದು ಪ್ರಮುಖ ಲಿಂಗಾಧಾರಿತ ಅಸಮಾನತೆ ಎಂದರೆ ಪಠ್ಯಕ್ರಮಗಳಲ್ಲಿ ಇರುವ ಲಿಂಗಾಧಾರಿತ ಪಕ್ಷಪಾತ. ಇದಕ್ಕೆ ಸಂಬಂಧಿಸಿದಂತೆ ಪಠ್ಯಕ್ರಮಗಳಲ್ಲಿ ಇರುವ ಲಿಂಗಾಧಾರಿತ ಪಕ್ಷಪಾತವನ್ನು ಕೊನೆಗಾಣಿಸಲು ಮತ್ತು ಹೆಣ್ಣು ಮಕ್ಕಳಿಗೆ ಬೆಂಬಲವಾಗುವಂತೆ ಪಠ್ಯಕ್ರಮಗಳನ್ನು ರೂಪಿಸುವ ಉದ್ದೇಶದಿಂದ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ೧೯೮೬ರಲ್ಲಿ ಜಾರಿಗೊಳಿಸಲಾಗಿದೆ. ಆದರೂ ಶಾಲಾ ಪಠ್ಯಕ್ರಮಗಳಲ್ಲಿ ಮಹಿಳೆಯರ ಸಾಮಾಜಿಕ ಪಾತ್ರಗಳಿಗೆ ಸಂಬಂಧಿಸಿದಂತೆ ಸಾಂಪ್ರದಾಯಿಕ ಪೂರ್ವಚಾರಗಳು ಹೆಚ್ಚಾಗಿ ಕಂಡುಬರುವುದು ಮುಂದುವರೆದಿರುವುದು, ಅನೇಕ ಶಾಲೆಗಳಲ್ಲಿ ಮಹಿಳಾ ಶಿಕ್ಷಕರು ಇಲ್ಲದಿರುವುದು ಅಥವಾ ಇನ್ನೂ ಮುಂತಾದ ಅಂಶಗಳು ಲಿಂಗಾಧಾರಿತ ಪಕ್ಷಪಾತ ಸಮಸ್ಯೆಯನ್ನು ಕೇವಲ ಶಾಲಾ ಪರಿಸರದಲ್ಲಿ ಮಾತ್ರವಲ್ಲದೆ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಅಸಮಾನ ಅವಕಾಶಗಳನ್ನು ರೂಪಿಸಿ ಕುಟುಂಬದ ಮಟ್ಟದಲ್ಲಿ ಪೋಷಿಸುವ ಸಾಧ್ಯತೆಗಳು ಹೆಚ್ಚಾಗುವ ಅಪಾಯವಿದೆ.

ಭಾಗ – ೩

೩.೧೦ ಬಿಸಿಯೂಟ ಕಾರ್ಯಕ್ರಮದ ಹಿನ್ನೆಲೆ

ಈ ಕಾರ್ಯಕ್ರಮವನ್ನು ೧೯೯೫ರ ಮಧ್ಯಭಾಗದಲ್ಲಿ ಘೋಷಿಸಿದಾಗ ಬಿಸಿಯಾದ ಮಧ್ಯಾಹ್ನದ ಊಟವನ್ನು ಎಲ್ಲಾ ಸರಕಾರಿ ಮತ್ತು ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿ ಎರಡು ವರ್ಷಗಳ ಒಳಗೆ ಆಚರಣೆಗೆ ತರಬೇಕು ಎಂಬುದಾಗಿತ್ತು. ಈ ನಡುವೆ ಪ್ರಾಥಮಿಕ ಶಾಲಾ ಮಕ್ಕಳಿಗೆ ಬೇಯಿಸಿದ ಆಹಾರಕ್ಕೆ ಬದಲಿಯಾಗಿ ಪ್ರತಿ ತಿಂಗಳು ಆಹಾರಧಾನ್ಯ (ಡ್ರೈ ರೇಶನ್) ವಿತರಣೆ ಮಾಡುವುದನ್ನು ಮಾನ್ಯ ಮಾಡುವಂತೆ ರಾಜ್ಯ ಸರಕಾರಗಳಿಗೆ ಕೇಂದ್ರ ಸರ್ಕಾರವು ಸೂಚಿಸಿತು. ಈ ಯೋಜನೆಯ ಮೂಲಕ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರದ ಜೊತೆಗೂಡಿ, ರಾಷ್ಟ್ರೀಯ ಶಾಲಾ ಊಟದ ಕಾರ್ಯಕ್ರಮವನ್ನು ವಿಧಿವತ್ತಾಗಿ ಪ್ರಕಟಿಸಿತು. ಇದು ಪ್ರಾಥಮಿಕ ಶಾಲಾ ಮಕ್ಕಳಿಗೆ ಪೌಷ್ಟಿಕ ನೆರವು ನೀಡುವ ರಾಷ್ಟ್ರೀಯ ಕಾರ್ಯಕ್ರಮ. ಈ ಯೋಜನೆಯಡಿ ೧ ರಿಂದ ೫ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಶೇಕಡ ೮೦ರಷ್ಟು ಹಾಜರಾತಿ ಹೊಂದಿದ ಎಲ್ಲಾ ಮಕ್ಕಳಿಗೆ ಪ್ರತಿ ತಿಂಗಳು ೩ ಕೆ.ಜಿ. ಅಕ್ಕಿ ಅಥವಾ ಗೋಧಿಯನ್ನು (ಡ್ರೈ ರೇಶನ್)

ಪ್ರತಿ ಮಗುವಿಗೆ ವಿತರಿಸುವ ಕಾರ್ಯಕ್ರಮವಾಗಿದೆ. ಈ ಯೋಜನೆಯನ್ನು ಅನುಷ್ಠಾನಕ್ಕೆ ತರಬೇಕು ಎಂದು ನಿರ್ಧರಿಸಿ ಆರು ವರ್ಷಗಳಾದರೂ ಅನೇಕ ರಾಜ್ಯ ಸರ್ಕಾರಗಳು ಇನ್ನೂ ಕೂಡ ಆಹಾರ ಧಾನ್ಯ ವಿತರಣೆಯಿಂದ ಮಧ್ಯಾಹ್ನದ ಶಾಲಾ ಬಿಸಿಯೂಟಕ್ಕೆ ಬದಲಾಗಬೇಕಿವೆ. ಇನ್ನೂ ಕೆಲವು ರಾಜ್ಯ ಸರ್ಕಾರಗಳು (ಬಿಹಾರ, ಉತ್ತರ ಪ್ರದೇಶ ಮತ್ತು ಜಾರ್‌ಖಂಡ್) ಸುಪ್ರಿಂಕೋರ್ಟಿನ ಆದೇಶದ ಅಂತಿಮ ಕಾಲಾವಕಾಶವನ್ನು ಮಾನ್ಯ ಮಾಡಬೇಕಾಗಿದೆ. ಮೇಲೆ ಸೂಚಿಸಿದ ಮೂರು ರಾಜ್ಯಗಳನ್ನು ಹೊರತುಪಡಿಸಿ ಇತರೆ ರಾಜ್ಯಗಳಲ್ಲಿ ಕಳೆದ ಎರಡು ವರ್ಷಗಳಿಂದ ಶಾಲಾ ಬಿಸಿಯೂಟವು ಶಾಲೆಗಳ ದಿನಚರಿಯ ಭಾಗವಾಗಿ ದೇಶದಾದ್ಯಂತ ವಿಸ್ತಾರವಾಗಿ ಬೆಳವಣಿಗೆಯಾಗುತ್ತಿದೆ.

೫.೧೧ ಆಹಾರ ಧಾನ್ಯ ವಿತರಣೆಯ ಸಾಧಕ-ಬಾಧಕಗಳು

ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕವಾಗಿ ವಿಸ್ತರಣೆ ಮಾಡುವ ಆಶಯದಿಂದ ರಾಜ್ಯ ಸರ್ಕಾರಗಳು ಕೇಂದ್ರ ಸರಕಾರದ ಮಾರ್ಗ ಸೂಚಿಯನ್ವಯ ಅನೇಕ ಪ್ರೋತ್ಸಾಹಕ ಕಾರ್ಯಕ್ರಮಗಳನ್ನು ರೂಪಿಸಿ ಆಚರಣೆಗೆ ತಂದಿವೆ. ಅವುಗಳಲ್ಲಿ ಶಾಲಾ ಬಿಸಿಯೂಟ ಪ್ರಮುಖವಾದುದು. ಶಾಲಾ ಬಿಸಿಯೂಟ ಕಾರ್ಯಕ್ರಮವು ಪ್ರಾಥಮಿಕ ಶಿಕ್ಷಣದ ಗುಣಮಟ್ಟ ಮತ್ತು ಮಕ್ಕಳ ಆರೋಗ್ಯದ ಮೇಲೆ ನೇರವಾದ ಪರಿಣಾಮ ಬೀರಿದೆ. ಬಿಸಿಯೂಟ ಜಾರಿಗೆ ಬರುವ ಮಧ್ಯಂತರ ಅವಧಿಯಲ್ಲಿ ಜಾರಿಯಲ್ಲಿದ್ದ ಬೇಯಿಸದೆ ಇರುವ ೩ ಕೆ.ಜಿ. ಆಹಾರ ಧಾನ್ಯವನ್ನು(ಅಕ್ಕಿ ಅಥವಾ ಗೋಧಿ) ಶೇಕಡ ೮೦ ಹಾಜರಾತಿ ಹೊಂದಿದ ಎಲ್ಲಾ ಮಕ್ಕಳಿಗೆ ಪ್ರತಿ ತಿಂಗಳು ನೀಡುವುದು ಜಾರಿಯಲ್ಲಿತ್ತು. ವಿಶೇಷವಾಗಿ ಹಿಂದುಳಿದ ಪ್ರದೇಶಗಳಲ್ಲಿ ಈ ಕಾರ್ಯಕ್ರಮ ಪ್ರತಿ ತಿಂಗಳಿಗೆ ಬದಲಾಗಿ ಮೂರು ತಿಂಗಳಿಗೆ ಒಂದು ಬಾರಿ, ಕೆಲವು ಸಂದರ್ಭದಲ್ಲಿ ೪ ತಿಂಗಳಿಗೆ ಒಂದು ಬಾರಿ ಆಹಾರ ಧಾನ್ಯದ ವಿತರಣೆಯಾಗುತ್ತಿದ್ದ ನಿದರ್ಶನಗಳಿವೆ (ಪ್ರೋಬ್-೧೯೯೯).

ಹೀಗಾಗಿ ಈ ಕಾರ್ಯಕ್ರಮವು ಶಾಲಾ ಹಾಜರಾತಿಯಲ್ಲಿ ಯಾವುದೇ ಪರಿಣಾಮವನ್ನು ಉಂಟುಮಾಡಿಲ್ಲ ಎಂಬುದನ್ನು ಕೆಲವು ಅಧಿಕಾರಿಗಳು, ಶಿಕ್ಷಕರು ಮತ್ತು ಪೋಷಕರು ಒಪ್ಪಿಕೊಳ್ಳುತ್ತಾರೆ. ಅಲ್ಲದೆ ಶಾಲಾ ಪ್ರೋತ್ಸಾಹಕ ಕಾರ್ಯಕ್ರಮದ ಮೂಲಕ ವಿತರಣೆಯಾಗುತ್ತಿದ್ದ ಆಹಾರಧಾನ್ಯ(ಅಕ್ಕಿ ಅಥವಾ ಗೋಧಿ) ಕೂಡ ಅತ್ಯಂತ ಕಡಿಮೆ ಗುಣಮಟ್ಟದಾಗಿತ್ತು, ರಾಜಾಸ್ಥಾನದ ಕೆಲವು ಪ್ರದೇಶಗಳಲ್ಲಿ ಆಹಾರ ಧಾನ್ಯವು ಫಲಾನುಭವಿಗಳಿಗೆ(ಶಾಲಾ ಮಕ್ಕಳಿಗೆ) ದೊರಕದೆ ಕಾಳಸಂತೆಯಲ್ಲಿ ಮಾರಾಟವಾಗಿರುವುದು ಇದೆ (ಪ್ರೋಬ್,೧೯೯೯; ಕುಮಾರ ರಾಣಾ, ೨೦೦೩; ಆರ್. ಗೋವಿಂದ, ೨೦೦೩). ಇದಕ್ಕೆ ಪೂರಕವಾಗಿ ಅಮರ್ತ್ಯಸೇನ್ ಅವರ ಮಾರ್ಗದರ್ಶನದ 'ಪ್ರತೀಚಿ ಎಜುಕೇಷನ್ ರಿಪೋರ್ಟ್' ಎಂಬ ವರದಿಯಲ್ಲಿ ಅಧ್ಯಯನಕ್ಕೆ ಒಳಪಡಿಸಿದ ಶೇಕಡ ೭೮ ಪೋಷಕರು ಆಹಾರ ಧಾನ್ಯದ ವಿತರಣೆಗೆ ಬದಲಿಯಾಗಿ, ಶಾಲಾ ಮಧ್ಯಾಹ್ನದ ಊಟ ಕಾರ್ಯಕ್ರಮವನ್ನು ಸಮಂಜಸವಾಗಿ ಆಚರಣೆಗೆ ತರಬೇಕು ಎಂಬ ದೃಷ್ಟಿ ಹೊಂದಿರುವುದನ್ನು ಗುರುತಿಸಿದೆ. ಸ್ವಲ್ಪ ಹೆಚ್ಚು ಕಡಿಮೆ ಇದೇ ಅಭಿಪ್ರಾಯವನ್ನು ಪ್ರೋಬ್ (೧೯೯೯) ಅಧ್ಯಯನ ತಂಡವು ಗುರುತಿಸಿದೆ.

ಇದಲ್ಲದೆ, ಪ್ರತಿ ತಿಂಗಳೂ ಶೇಕಡ ೮೦ರಷ್ಟು ಶಾಲಾ ಹಾಜರಾತಿಯನ್ನು ಹೊಂದಿದ ಮಕ್ಕಳಿಗೆ ಆಹಾರಧಾನ್ಯ ನೀಡುವ ಕಾರ್ಯಕ್ರಮವು ಸಂಪೂರ್ಣವಾಗಿ ಜಾರಿಗೊಳ್ಳುವಲ್ಲಿ ವಿಫಲವಾಗಿದೆ. ೧೯೯೬-೯೭ರ ಶೈಕ್ಷಣಿಕ ವರ್ಷದಲ್ಲಿ ಬಿಹಾರ ರಾಜ್ಯದ ಬಹುತೇಕ ಪ್ರದೇಶದಲ್ಲಿ ಆಹಾರ ಧಾನ್ಯವು ವಾಸ್ತವಿಕವಾಗಿ ಬಿಡುಗಡೆಯಾಗಿರಲಿಲ್ಲ. ೧೯೯೯ ಪ್ರೋಬ್ ತಂಡವು (ಪುಟ ಸಂಖ್ಯೆ೯೬)ಅಧ್ಯಯನ ನಡೆಸಿದ ಬಹುತೇಕ ರಾಜ್ಯಗಳ ಪ್ರಾಥಮಿಕ ಶಾಲೆಗಳಿಗೆ ಬಹಳ ಮಟ್ಟಿಗೆ ಆಹಾರ ಧಾನ್ಯ ಬಹಳ ವಿಳಂಬವಾಗಿ ಪೂರೈಕೆಯಾಗಿರುವುದು, ಪೂರೈಕೆಯಾದ ಅನೇಕ ಶಾಲೆ ಸ್ಥಳಗಳಲ್ಲಿ ದಾಖಲಾಗಿದೆ. ಕೆಲವು ಪ್ರದೇಶಗಳಲ್ಲಿ ಪ್ರತಿ ತಿಂಗಳು ನೀಡಬೇಕಾದ ಶಾಲಾ ಆಹಾರಧಾನ್ಯ ಕಾರ್ಯಕ್ರಮವು ಮೂರು ತಿಂಗಳಿಗೆ ಒಂದು ಸಲ ವಿತರಿಸುವ ನಿದರ್ಶನಗಳಿವೆ. ಇಂತಹ ಅನೇಕ ಸಮಸ್ಯೆಗಳಿಂದ ಈ ಕಾರ್ಯಕ್ರಮವು ಪ್ರತಿನಿತ್ಯದ ಶಾಲಾ ಹಾಜರಾತಿಯನ್ನು ಪರಿಣಾಮಕಾರಿಯಾಗಿ, ಉತ್ತೇಜಿಸಲಿಲ್ಲ. ಅದೂ ಅಲ್ಲದೆ, ವಾಸ್ತವಿಕವಾಗಿ ಆಹಾರ ಧಾನ್ಯವು ಹಂಚಿಕೆಯಾಗಿರುವಲ್ಲಿ ಈ ಕಾರ್ಯಕ್ರಮವು ಕೊನೆಗೊಳ್ಳುವುದು ಬಹಳ ವಿಸ್ತುತವಾದ ಸರಪಣಿ ಮಾದರಿ ವಿಳಂಬ ನೀತಿ ಹಾಗೂ ಲಂಚಗುಳಿತನದಿಂದ. ಅದೇನೇ ಇದ್ದರೂ, ಈ ಕಾರ್ಯಕ್ರಮಕ್ಕೆ ಸಾಮಾನ್ಯವಾದ ಅಂಕಿತ ನಾಮವಿದೆ. ಅದೇನೆಂದರೆ "ಪ್ರತಿ ಮಗುವು ಪ್ರತಿ ತಿಂಗಳು ಮೂರು ಕೆ.ಜಿ ಆಹಾರ ಧಾನ್ಯಕ್ಕೆ ಮೂರು ಕಿಲೋಮಿಟರ್ ಹೋಗಬೇಕು." ಕೆಲವು ಸಂದರ್ಭಗಳಲ್ಲಿ ಮೂರು ನಾಲ್ಕು ದಿನಗಳು ವ್ಯರ್ಥವಾಗಿ ಹೋಗಿ ಬರಬೇಕು ಎಂದು ಅನೇಕ ಪೋಷಕರು ದೂರುವುದಲ್ಲದೆ, ಹೋಗಿ ಬರುವ ಶ್ರಮಕ್ಕಿಂತ ಕಡಿಮೆ ಪ್ರಮಾಣದ ಆಹಾರ ಧಾನ್ಯವನ್ನು ನಮ್ಮ ಮಕ್ಕಳು ಪಡೆಯುತ್ತಾರೆ ಎಂದು ಆರೋಪ ಮಾಡುತ್ತಾರೆ. ಇಂತಹ ಆರೋಪಗಳು ಅತ್ಯಂತ ಹಿಂದುಳಿದ ಪ್ರದೇಶಗಳ ಗ್ರಾಮೀಣ ಭಾಗದಲ್ಲಿ ಹೆಚ್ಚಾಗಿ ಕಂಡುಬರುತ್ತಿವೆ (ಪ್ರೋಬ್, ೧೯೯೯; ಆರ್. ಗೋವಿಂದ, ೨೦೦೩; ಜೀನ್‌ಡ್ರೀಜ್, ೨೦೦೩, ಪ್ರಸಾಂತ್೨೦೦೪, ೨೦೦೫).

ಬಿಸಿಯೂಟ ಜಾರಿಗೆ ಬರುವುದಕ್ಕೆ ಮೊದಲು ಪ್ರತಿ ತಿಂಗಳು ಶೇಕಡ ೮೦ರಷ್ಟು ಹಾಜರಾತಿಯನ್ನು ಹೊಂದಿದ ಮಕ್ಕಳು ಮಾತ್ರ ಆಹಾರ ಧಾನ್ಯ ಪಡೆಯಲು ಅರ್ಹರಾಗಿದ್ದರು. ಆದರೆ ಈ ಕಾರ್ಯಕ್ರಮದ ವಾಸ್ತವಿಕ ಆಚರಣೆಯಲ್ಲಿ ಶಿಕ್ಷಕರು ಶಾಲೆಗೆ ದಾಖಲಾದ ಎಲ್ಲಾ ಮಕ್ಕಳಿಗೆ ಆಹಾರ ಧಾನ್ಯಗಳನ್ನು ವಿತರಿಸುತ್ತಿದ್ದರು, ಏಕೆ ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಬಹಳ ಸುಲಭ. ಶೈಕ್ಷಣಿಕ ಇಲಾಖೆಯ ಔಪಚಾರಿಕ ಆಯ್ಕೆಯ ಕ್ರಮ ಅಥವಾ ಒರೆಗಲ್ಲು, ಅನೇಕ ಸ್ಥಳಗಳಲ್ಲಿ ಸಾಮಾಜಿಕವಾಗಿ ಒಪ್ಪಿತವಾಗಿಲ್ಲ. ಶಾಲೆಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಹಾಜರಾಗದ ಮಕ್ಕಳನ್ನು ಈ ಸೌಲಭ್ಯದಿಂದ ತೆಗೆಯಲು ಶಿಕ್ಷಕರು ಪ್ರಯತ್ನ ನಡೆಸಿರುವ ಸ್ಥಳಗಳಲ್ಲಿ ಅಥವಾ ಶಾಲೆಗಳಲ್ಲಿ ಪೋಷಕರು ಕನಿಷ್ಠಮಟ್ಟದ ಸೌಜನ್ಯವನ್ನು ಶಿಕ್ಷಕರ ಬಗ್ಗೆ ತೋರಿಸದೆ ಜಗಳವಾಡಿರುವುದು ಇದೆ.

ಆಹಾರ ಧಾನ್ಯ ವಿತರಣಾ ಕಾರ್ಯಕ್ರಮವು ನಿರೀಕ್ಷಿತ ಮಟ್ಟದಲ್ಲಿ ಶಾಲಾ ಹಾಜರಾತಿಯನ್ನು ಹೆಚ್ಚಿಸಲಿಲ್ಲ. ಇತರ ಶಾಲಾ ಪ್ರೋತ್ಸಾಹದಾಯಕ ಕಾರ್ಯಕ್ರಮಗಳಂತೆ ಈ ಕಾರ್ಯಕ್ರಮವು ಕೂಡ

ಕೆಲವು ದೋಷಗಳಿಂದ ಕೂಡಿತ್ತು. ಆಹಾರ ಧಾನ್ಯ ವಿತರಣೆಯ ಫಲವಾಗಿ ಶಾಲೆಗಳಿಗೆ ಮಕ್ಕಳ ದಾಖಲಾತಿ ಹೆಚ್ಚಾಯಿತೇ ಹೊರತು, ಶಾಲಾ ಹಾಜರಾತಿಯಲ್ಲಿ ಪ್ರಗತಿ ಕಾಣಲಿಲ್ಲ. ಹೀಗಾಗಿ, ಆಹಾರ ಧಾನ್ಯ ವಿತರಣಾ ಕಾರ್ಯಕ್ರಮದ ಪರಿಣಾಮವು ದಾಖಲಾತಿಯ ಮೇಲೆ ಹೆಚ್ಚಿನ ಪ್ರಭಾವ ಬೀರಿತು, ಶಾಲಾ ಹಾಜರಾತಿಯಲ್ಲಿ ಬಹಳ ಕಡಿಮೆ ಪ್ರಭಾವ ಬೀರಿತು. ಪೌಷ್ಟಿಕತೆ ಮತ್ತು ಸಾಮಾಜೀಕರಣವಾದಗಳ ಹಿನ್ನೆಲೆಯಲ್ಲಿ ಬೇಯಿಸದಿರುವ ಆಹಾರ ಧಾನ್ಯ ವಿತರಣಾ ಕಾರ್ಯಕ್ರಮವು ನಿಷ್ಪ್ರಯೋಜಕವಾಯಿತು.

ಆಹಾರ ಧಾನ್ಯ ವಿತರಣಾ ಕಾರ್ಯಕ್ರಮವನ್ನು ಕ್ರಮಬದ್ಧವಾಗಿ ಆಚರಣೆಗೆ ತರುವಾಗ ಮತ್ತು ನಿರ್ವಹಣೆ ಮಾಡುವಾಗ ಅನೇಕ ಲೋಪದೋಷಗಳು ಕಂಡುಬಂದಿವೆ. ಈ ಕಾರ್ಯಕ್ರಮದ ಮುಖ್ಯ ಉದ್ದೇಶ ಕಡುಬಡತನದ ಕುಟುಂಬಗಳಿಂದ ಬಂದ ಶಾಲಾ ಮಕ್ಕಳಿಗೆ ಪ್ರೋತ್ಸಾಹ ನೀಡುವುದಾಗಿದೆ. ಈ ಕಾರ್ಯಕ್ರಮದ ಜಾರಿಯಲ್ಲಿ ರಾಜ್ಯ ಸರ್ಕಾರಗಳು ಸಂಪನ್ಮೂಲಗಳನ್ನು ಸಾಕಾಗುವಷ್ಟು ನೀಡದೆ ಇರುವುದು, ಅವಶ್ಯಕ ಸೌಲಭ್ಯಗಳನ್ನು ಸಮಯಕ್ಕೆ ಸರಿಯಾಗಿ ಒದಗಿಸದಿರುವುದು, ಆಹಾರ ಧಾನ್ಯ ವಿತರಣೆಯಲ್ಲಿ ತೊಂದರೆ ಮತ್ತು ತೊಡಕುಗಳು ಉಂಟಾಗಿರುವುದು ಕಂಡುಬಂದವು (ಸುಪ್ರೀಂಕೋರ್ಟ್ ತೀರ್ಪು, ೨೦೦೧). ಹಾಗಾಗಿಯೆ ಶಾಲಾ ಬಿಸಿಯೂಟ ಕಾರ್ಯಕ್ರಮವು ತಳಸಮುದಾಯಗಳಿಂದ ಹಾಗೂ ಕಡು ಬಡತನದ ಕುಟುಂಬಗಳಿಂದ ಬಂದ ಮಕ್ಕಳ ಶಾಲಾ ಹಾಜರಾತಿ ಹೆಚ್ಚಿಸುವಲ್ಲಿ ಮತ್ತು ಪ್ರಾಥಮಿಕ ಶಿಕ್ಷಣದ ಬೆಳವಣಿಗೆಯಲ್ಲಿ ಆಮೂಲಾಗ್ರ ಬದಲಾವಣೆಗಳನ್ನು ತರಬಲ್ಲ ಅಂಶವಾಗಿದೆ ಎಂದು ಸುಪ್ರಿಂಕೋರ್ಟ್ ೨೮.೧೧.೨೦೦೧ರಂದು ತನ್ನ ಮಧ್ಯಂತರ ಆದೇಶ ನೀಡಿದೆ. ಈ ಆದೇಶದಲ್ಲಿ ೩೦೦ ಕ್ಯಾಲರಿಯಷ್ಟು ತಯಾರಿಸಿದ ಆಹಾರವನ್ನು ಸರ್ಕಾರಗಳು ನಡೆಸುವ ಶಾಲೆಗಳು ಮತ್ತು ಸರ್ಕಾರಗಳ ಸಹಯೋಗದಿಂದ ನಡೆಸುವ ಪ್ರಾಥಮಿಕ ಶಾಲೆಗಳಲ್ಲಿ ಎಲ್ಲಾ ಮಕ್ಕಳಿಗೆ ನೀಡಬೇಕು ಎಂದು ನಿರ್ದೇಶನ ನೀಡಿತು. ಜೊತೆಗೆ ಶಾಲಾ ಬಿಸಿಯೂಟ ಜಾರಿಗೆ ಬಾರದೆ ಇರುವ ಎಲ್ಲಾ ರಾಜ್ಯ ಸರ್ಕಾರಗಳು ಆರು ತಿಂಗಳ ಒಳಗೆ ಇದನ್ನು ಆಚರಣೆಗೆ ತರಬೇಕೆಂದು ನಿರ್ದೇಶಿಸಿತು.

ಇದನ್ನು ಸೂಕ್ಷ್ಮವಾಗಿ ಗಮನಿಸಿ ಪರಿಶೀಲಿಸಿದ ಶಿಕ್ಷಣ ಇಲಾಖೆಯು ೧೫.೮.೧೯೯೫ರಲ್ಲಿ ಜಾರಿಗೆ ಬಂದ ಆಹಾರ ಧಾನ್ಯ (೩ ಕೆ.ಜಿ. ಅಕ್ಕಿ ಅಥವಾ ಗೋಧಿ) ವಿತರಣೆಯ ಸಾಧಕ-ಬಾಧಕಗಳನ್ನು ಕೂಲಂಕಷವಾಗಿ ಚರ್ಚಿಸಿ, ಕೇಂದ್ರ ಸರ್ಕಾರದ ಆದೇಶಗಳನ್ನು ಪರಿಗಣಿಸಿತು. ಇದಕ್ಕೆ ಪೂರಕವಾಗಿ ಕರ್ನಾಟಕ ರಾಜ್ಯ ಸರ್ಕಾರವು ನೇಮಿಸಿದ ಶಿಕ್ಷಣ ಕಾರ್ಯಪಡೆಯು ಸಲ್ಲಿಸಿದ ವರದಿಯಲ್ಲಿ ಈಗಿನ ಪದ್ಧತಿಯಂತೆ ಆಹಾರ ಧಾನ್ಯಗಳ ವಿತರಣೆಯ ತೊಡಕುಗಳನ್ನು ಪರಿಶೀಲಿಸಿ ವಾಸ್ತವಿಕವಾಗಿ ಫಲಾನುಭವಿಗಳಾದ ಮಕ್ಕಳಿಗೆ ಆಹಾರ ಧಾನ್ಯ ವಿತರಣೆಯಿಂದ ಹೆಚ್ಚಿನ ಅನುಕೂಲಗಳು ಸಿಗುತ್ತಿಲ್ಲ. ಇದರ ಬದಲಿಗೆ ಸಿದ್ಧಪಡಿಸಿದ ಮಧ್ಯಾಹ್ನದ ಉಪಹಾರವನ್ನು ಸ್ಥಳೀಯ ಸಂಸ್ಥೆಗಳು ಮತ್ತು ಸರ್ಕಾರೇತರ ಸಂಸ್ಥೆಗಳ ಮೂಲಕ ಶಾಲಾ ಮಕ್ಕಳಿಗೆ ಪ್ರತಿ ದಿನ ಆ ಶಾಲೆ ನಡೆಯುವ ಸಮಯಗಳಲ್ಲಿ ಒದಗಿಸುವಂತೆ ಶಿಫಾರಸ್ಸು ಮಾಡಿತು (ರಾಜರಾಮಣ್ಣ ಕಾರ್ಯಪಡೆ ವರದಿ, ೨೦೦೨).

ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು ಕೂಡ ರಾಜ್ಯದ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಪ್ರೋತ್ಸಾಹಕ ಕಾರ್ಯಕ್ರಮವಾಗಿ ಶಾಲಾ ಬಿಸಿಯೂಟವನ್ನು ಅಳವಡಿಸಿಕೊಳ್ಳಲು ನಿರ್ಧರಿಸಿತು. ಮಧ್ಯಾಹ್ನದ ಶಾಲಾ ಬಿಸಿಯೂಟ ಕಾರ್ಯಕ್ರಮವನ್ನು ಕೇಂದ್ರದ ಮಾರ್ಗಸೂಚಿಯನ್ವಯ ಹಾಗೂ ಶಿಕ್ಷಣ ಕಾರ್ಯಪಡೆಯ ಶಿಫಾರಸ್ಸುಗಳ ಹಿನ್ನೆಲೆಯಲ್ಲಿ ದಿನಾಂಕ ೯.೧೧.೨೦೦೧ರಂದು ರಾಜ್ಯದ ಅಂದಿನ ಮುಖ್ಯಮಂತ್ರಿಗಳು ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಅರಕೇರಿ ಗ್ರಾಮದಲ್ಲಿ ವಿಧ್ಯುಕ್ತವಾಗಿ ಉದ್ಘಾಟಿಸಿದರು. ಈ ಕಾರ್ಯಕ್ರಮವನ್ನು ೨೦೦೧-೦೨ರ ಶೈಕ್ಷಣಿಕ ಸಾಲಿನಲ್ಲಿ ಪ್ರಯತ್ನ ಪೂರ್ವಕವಾಗಿ ರಾಜ್ಯದ ಈಶಾನ್ಯ ಭಾಗದ ಜಿಲ್ಲೆಗಳ ಕೆಲವು ಆಯ್ದ ಗ್ರಾಮಗಳಲ್ಲಿ ಮೊದಲಿಗೆ ಜಾರಿಗೆ ತರಲಾಯಿತು. ಇಲ್ಲಿ ಕಂಡು ಬಂದ ಸಾಧಕ-ಬಾಧಕಗಳನ್ನು ಗುರುತಿಸಿ ಈ ಯೋಜನೆಗೆ ಹೆಚ್ಚಿನ ಒತ್ತು ನೀಡಿ, ಕೆಲವು ಪೂರ್ವ ಸಿದ್ಧತೆಗಳೊಂದಿಗೆ ೧.೬.೨೦೦೨ರಿಂದ ಪ್ರಾರಂಭಿಸ ಲಾಯಿತು. ಈ ಶಾಲಾ ಪ್ರೋತ್ಸಾಹಕ (ಬಿಸಿಯೂಟ) ಕಾರ್ಯಕ್ರಮಕ್ಕೆ ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ೧ ರಿಂದ ೫ನೇ ತರಗತಿಯಲ್ಲಿ ಇರುವ ಎಲ್ಲಾ ಮಕ್ಕಳು ಒಳಪಡುತ್ತಾರೆ. ಮಧ್ಯಾಹ್ನದ ಶಾಲಾ ಬಿಸಿಯೂಟ ಕಾರ್ಯಕ್ರಮ ಈಗಾಗಲೇ ಜಾರಿಯಲ್ಲಿರುವ ಈಶಾನ್ಯ ಕರ್ನಾಟಕದ ೭ ಜಿಲ್ಲೆಗಳಲ್ಲಿ ಶಾಲಾ ದಾಖಲಾತಿ ಮತ್ತು ಹಾಜರಾತಿಯು ನಿರೀಕ್ಷಿತ ಮಟ್ಟವನ್ನು ಇನ್ನೂ ತಲುಪಿಲ್ಲ. ಆದರೆ ಬಿಸಿಯೂಟ ಕಾರ್ಯಕ್ರಮ ಜಾರಿಯಾದ ನಂತರ ಶಾಲಾ ಹಾಜರಾತಿಯಲ್ಲಿ ಶೇಕಡ ೫ ರಿಂದ ಶೇಕಡ ೧೦ರವರೆಗೆ ಸುಧಾರಣೆಯಾಗಿದೆ ಎಂಬ ವಾದವನ್ನು ಮುಂದಿಟ್ಟು, ಇದು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಪೂರಕವಾಗಿದೆ ಎಂದು ಪರಿಗಣಿಸಿದ ರಾಜ್ಯ ಸರ್ಕಾರವು ೨೦೦೩-೦೪ರ ಶೈಕ್ಷಣಿಕ ವರ್ಷದಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳ ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ಈ ಕಾರ್ಯಕ್ರಮವನ್ನು ಜಾರಿಗೆ ತಂದಿದೆ.

೫.೧೨ ಶಾಲಾ ಬಿಸಿಯೂಟದ ಮೂಲ ಉದ್ದೇಶ

ಶಾಲಾ ಬಿಸಿಯೂಟ ಕಾರ್ಯಕ್ರಮವು ಮೂರು ಪ್ರಮುಖ ನಿರ್ಣಾಯಕ ಉದ್ದೇಶಗಳನ್ನು ಹೊಂದಿದೆ: ಪ್ರಾಥಮಿಕ ಶಿಕ್ಷಣದ ಬೆಳವಣಿಗೆ; ಮಕ್ಕಳಲ್ಲಿ ಪೌಷ್ಟಿಕತೆ ಹೆಚ್ಚಳ ಮತ್ತು ಸಾಮಾಜಿಕ ಸಮಾನತೆ (ಕರ್ನಾಟಕ ಸರ್ಕಾರ, ೨೦೦೧). ಈ ಉದ್ದೇಶಗಳು ಪ್ರಾಥಮಿಕ ಶಿಕ್ಷಣದ ಒಟ್ಟಾರೆ ಅಭಿವೃದ್ಧಿಗೆ ಬೇರೆ ಬೇರೆ ಅಂಶಗಳನ್ನು ರೂಪಿಸುವ ಮಹತ್ವಾಕಾಂಕ್ಷೆಗಳನ್ನು ಒಳಗೊಂಡಿದೆ. ಶಾಲಾ ಊಟದ ವ್ಯವಸ್ಥೆಯನ್ನು ಜಾರಿಗೊಳಿಸಿದ ಮೂಲ ಉದ್ದೇಶವೆಂದರೆ, ಇದು ಶಾಲಾ ದಾಖಲಾತಿಯನ್ನು ಮತ್ತು ಹಾಜರಾತಿಯನ್ನು ಉತ್ತಮಗೊಳಿಸಲು ಸಹಕಾರಿಯಾಗಿದೆ ಎಂದು. ಇದಕ್ಕಿಂತ ಹೆಚ್ಚಾಗಿ ಶಾಲಾ ಬಿಸಿಯೂಟ ವ್ಯವಸ್ಥೆಯು ನಿರ್ದಿಷ್ಟವಾಗಿ ಪ್ರತಿ ದಿನದ ಆಧಾರದಲ್ಲಿ ಶಾಲಾ ಹಾಜರಾತಿಯನ್ನು ಪರಿಣಾಮಕಾರಿಯಾಗಿ ಅಭಿವೃದ್ಧಿಪಡಿಸುವ ಮತ್ತೊಂದು ಗುಣಲಕ್ಷಣವನ್ನು ಹೊಂದಿದೆ (ಕೇವಲ ವಾರ್ಷಿಕ ದಾಖಲಾತಿಯಲ್ಲಿ ಮಾತ್ರವಲ್ಲ). ಶಾಲಾ ಬಿಸಿಯೂಟವು 'ಮಕ್ಕಳ ಹಸಿವನ್ನು' ಕಡಿಮೆಗೊಳಿಸುವ ಮೂಲಕ ಮಕ್ಕಳಲ್ಲಿ ಕಲಿಕೆಯ ಬಗ್ಗೆ ಏಕಾಗ್ರತೆ ಹೆಚ್ಚಿಸುವ ಜೊತೆ ಜೊತೆಗೆ ಮಕ್ಕಳಲ್ಲಿ ಕಲಿಕೆಯ ಕುಶಲತೆಯನ್ನು ಹೆಚ್ಚಿಸುವ

ಸಾಧ್ಯತೆ ಇದೆ. ಉತ್ತಮವಾಗಿ ಸಂಘಟಿತವಾದ ಶಾಲಾ ಬಿಸಿಯೂಟ ಕಾರ್ಯಕ್ರಮವು ಪ್ರತಿದಿನದ ಮಾಮೂಲಿ ಕಲಿಕಾ ಪ್ರಕ್ರಿಯೆಗಿಂತ ಸ್ವಲ್ಪ ಭಿನ್ನವಾದ ಸಹಜ ಶೈಕ್ಷಣಿಕ ಮೌಲ್ಯಗಳನ್ನು ಮಕ್ಕಳಿಗೆ ಕಲಿಸುವ ಶಕ್ತಿಯನ್ನು ಕೂಡ ಹೊಂದಿದೆ. ಉದಾಹರಣೆಗೆ ಶಾಲಾ ಬಿಸಿಯೂಟವು ಮಕ್ಕಳಲ್ಲಿ ಅನೇಕ ಉತ್ತಮ ಅಭ್ಯಾಸಗಳು ಮೂಡುವಂತೆ ಮಾಡಬಹುದು(ಊಟಕ್ಕೆ ಮೊದಲು ನಂತರ ಕೈ ತೊಳೆಯುವುದು, ಸ್ವಚ್ಛತೆ ಕಾಪಾಡುವುದು ಇತ್ಯಾದಿ). ಶುದ್ಧ ನೀರು ಕುಡಿಯುವ ಬಗ್ಗೆ, ಸಮತೋಲನ ಆಹಾರವನ್ನು ತೆಗೆದುಕೊಳ್ಳುವ ಬಗ್ಗೆ, ಇನ್ನೂ ಮುಂತಾದ ವಿಷಯಗಳ ಪ್ರಾಮುಖ್ಯತೆಯನ್ನು ತಿಳಿಸಬಹುದು. ಕಾರ್ಯಕ್ರಮವು ಮಕ್ಕಳ ಪೋಷಕರಿಗೆ ಮಾತ್ರ ಶಾಲಾ ಶುಲ್ಕ ಇತ್ಯಾದಿ ಪ್ರೋತ್ಸಾಹಕ ರಿಯಾಯಿತಿಯನ್ನು ನೀಡುವುದಲ್ಲದೆ, ಮಕ್ಕಳಿಗೂ ಸಹ ಶಾಲೆಯಲ್ಲಿ ಉಚಿತ ಊಟ ಮಾಡುವುದರಿಂದ ನೇರವಾಗಿ ಶಾಲಾ ಪ್ರೋತ್ಸಾಹಕ ಫಲವು ತಲುಪಬೇಕು ಎಂಬುದು ಅತ್ಯಂತ ಪ್ರಮುಖವಾದದ್ದು. ಏಕೆಂದರೆ, ಬಹಳ ಹಿಂದಿನಿಂದಲೂ ಪ್ರತಿನಿತ್ಯದ ಶಾಲಾ ಹಾಜರಾತಿಯು ಪೋಷಕರು ಮಕ್ಕಳು ಶಾಲೆಗೆ ಹೋಗುವಂತೆ ಪ್ರೇರೇಪಿಸುವುದನ್ನು ಅವಲಂಬಿಸಿದೆ. ಪೋಷಕರಿಂದ ಪ್ರೇರಣೆ ಇಲ್ಲದೆ ಇದ್ದ ಪಕ್ಷದಲ್ಲಿ ಮಕ್ಕಳನ್ನು ಪೋಷಕರು ಶಾಲೆಗೆ ಹೋಗುವಂತೆ ಪುಸಲಾಯಿಸಬೇಕಾಗುತ್ತದೆ. ಅನೇಕ ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸುವ ಬಗ್ಗೆ ನಿಶ್ಚಿತಾಭಿಪ್ರಾಯವನ್ನು ಹೊಂದಿಲ್ಲದಿರುವುದು ಅಥವಾ ಮಕ್ಕಳನ್ನು ಶಾಲೆಗೆ ಹೋಗುವಂತೆ ಪುಸಲಾಯಿಸಲು ಸಮಯವಿಲ್ಲದಿರುವುದು ಸಹ ತಿಳಿದುಬರುತ್ತದೆ. ಶಾಲಾ ಊಟದ ವ್ಯವಸ್ಥೆಯು ಮಕ್ಕಳು ಶಾಲೆಗೆ ಸ್ವಯಂ ಪ್ರೇರಣೆಯಿಂದ ಬರುವಂತೆ ಪ್ರೇರೇಪಿಸುವುದೇ ಅಲ್ಲದೆ ಇಂತಹ ಸಮಸ್ಯೆಯನ್ನು ಪರಿಹರಿಸಲು ಸಹಾಯಕವಾಗಿದೆ.

ಶಾಲಾ ಬಿಸಿಯೂಟ ಯೋಜನೆಯ ನ್ಯೂಟ್ರೀಶನ್ ಉದ್ದೇಶವು ಸ್ವಲ್ಪಮಟ್ಟಿಗೆ ಮಕ್ಕಳ ಹಸಿವನ್ನು ತಡೆಗಟ್ಟುವುದರ ಮೂಲಕ ಮಕ್ಕಳ ಆರೋಗ್ಯಕರ ಬೆಳವಣಿಗೆಗೆ ಸಹಕಾರಿಯಾಗಿದೆ. ವಿಶೇಷವಾಗಿ ಮಕ್ಕಳ ಪೌಷ್ಟಿಕ ಬಲವರ್ಧನೆಯ ಕನಸನ್ನೂ ಇದು ಹೊಂದಿದೆ. ಪ್ರತಿ ದಿನ ಮಕ್ಕಳು ಸ್ವಇಚ್ಛೆಯಿಂದ ಶಾಲೆಗೆ ಬರುತ್ತಾರೆ. ಮತ್ತು ಶಾಲೆಯಲ್ಲಿ ನೀಡುವ ಎಲ್ಲಾ ಆಹಾರವನ್ನು ಅವರು ತಿನ್ನುತ್ತಾರೆ. ಮಕ್ಕಳು ಆಹಾರವನ್ನು ಹೆಚ್ಚಾಗಿ ತೆಗೆದುಕೊಳ್ಳುವುದರ ಮೂಲಕ ಕ್ಯಾಲೋರಿಸ್ ಮತ್ತು ಪ್ರೋಟಿನ್ಸ್ ಹೆಚ್ಚಳದ ಜೊತೆಗೆ ಪೌಷ್ಟಿಕತೆಗೆ ಪೂರಕವಾಗುವ ಕಬ್ಬಿಣಾಂಶಗಳು ಮತ್ತು ಲವಣಾಂಶಗಳನ್ನು ಸಮಪ್ರಮಾಣದಲ್ಲಿ ಸೇವಿಸುವುದರಿಂದ ದೀರ್ಘಾವಧಿಯಲ್ಲಿ ಮಕ್ಕಳ ಬೆಳವಣಿಗೆಗೆ ಬಹಳ ಪ್ರಯೋಜನಕಾರಿಯಾಗಿದೆ. ಅಲ್ಲದೆ ಮಕ್ಕಳ ಪೌಷ್ಟಿಕತೆಯನ್ನು ಹೆಚ್ಚಳ ಮಾಡುವ ಉದ್ದೇಶಕ್ಕಾಗಿಯೆ ರೂಪಿಸಬೇಕಾದ ಕಾರ್ಯಕ್ರಮಗಳನ್ನು ಕಡಿಮೆಗೊಳಿಸುತ್ತದೆ.

ಈ ಪ್ರೋತ್ಸಾಹಕ ಕಾರ್ಯಕ್ರಮವನ್ನು ಜಾರಿಗೊಳಿಸುವಾಗ ಇದ್ದ ಮತ್ತೊಂದು ವಾದ: ಶಾಲಾ ಊಟವು (ನ್ಯೂಟ್ರೀಶಸ್) ಪುಷ್ಟಿಕರ ಮತ್ತು ಸಾಮಾಜೀಕರಣ ಈ ಎರಡು ಅಂಶವನ್ನು ಒಳಗು ಮಾಡಿಕೊಂಡಿದೆ. ಪುಷ್ಟಿದಾಯಕ ಆಹಾರದ ಚರ್ಚೆಯ ಶಕ್ತಿಯು ವಾಸ್ತವಿಕವಾಗಿ ಶಾಲಾ ಮಧ್ಯಾಹ್ನದ ಊಟ ಎಷ್ಟರ ಮಟ್ಟಿಗೆ ಪುಷ್ಟಿಕರವಾಗಿದೆ ಎಂಬುದನ್ನು ಅವಲಂಬಿಸಿದೆ. ಆದರೆ ಇದನ್ನು ಆಹಾರದ

ಬೆಲೆ ಮತ್ತು ತಾರ್ಕಿಕ ಚರ್ಚೆಯಿಂದ ಹೇಳುವುದಾದರೆ ಹೆಚ್ಚಿನ ಪುಷ್ಟಿದಾಯಕ ಆಹಾರವನ್ನು ಪೂರೈಸುವುದು ಬಹಳ ವೆಚ್ಚದಾಯಕ. ಹೀಗಿದ್ದರೂ ಸಾಮಾನ್ಯ ಸರಳ ಊಟದ ವ್ಯವಸ್ಥೆಯು ಮಕ್ಕಳ ಪೌಷ್ಟಿಕತೆಯ ಮೇಲೆ ಸ್ವಲ್ಪ ಮಟ್ಟಿಗಾದರೂ ಪರಿಣಾಮ ಬೀರುವಲ್ಲಿ ಸಂಬಂಧ ಹೊಂದಿದೆ. ವಿಶೇಷವಾಗಿ ಅತ್ಯಂತ ಹಿಂದುಳಿದ ಪ್ರದೇಶಗಳಲ್ಲಿ ಕ್ಯಾಲೋರಿಸ್‌ಗಳ ವ್ಯತ್ಯಾಸದಿಂದ ಆಗಾಗ್ಗೆ ಬರಬಹುದಾದ ಸಾಂಕ್ರಾಮಿಕ ರೋಗಗಳನ್ನು ಸ್ವಲ್ಪಮಟ್ಟಿಗೆ ತಡೆಯಲು ಈ ಕಾರ್ಯಕ್ರಮವು ಒಂದು ಮಾರ್ಗವಾಗಿದೆ. ಈ ವಾದವನ್ನು ಮುಂದುವರಿಸುವುದಾದರೆ ಪುಷ್ಟಿದಾಯಕ ಆಹಾರದ ವಾದವು ಕೇವಲ ಶಾಲಾ ಊಟವಾಗಿರದೆ ಕೆಲವು ಸಂದರ್ಭದಲ್ಲಿ ಮಕ್ಕಳ ಆರೋಗ್ಯವನ್ನು ಉತ್ತಮ ಪಡಿಸಬಹುದು. ಹಸಿವಿನಿಂದ ಕಲಿಕೆಯ ಬಗ್ಗೆ ಆಸಕ್ತಿ ಇಲ್ಲದ ಮಕ್ಕಳು ಕೂಡ ಈ ಕಾರ್ಯಕ್ರಮದಿಂದ ಉತ್ತಮವಾಗಿ ಕಲಿಯಬಹುದು.

ಶಾಲಾ ಬಿಸಿಯೂಟದ ಸಾಮಾಜೀಕರಣ ಉದ್ದೇಶ ಬಹಳ ಸರಳಮಟ್ಟದ್ದು. ಅಂದರೆ ವರ್ಗ, ವಿಶೇಷವಾಗಿ ಜಾತಿ ಮತ್ತು ಧರ್ಮ ಇತ್ಯಾದಿಗಳ ನಡುವೆ ಸಾಂಪ್ರದಾಯಿಕವಾಗಿ ನಿಷಿದ್ಧ ರೂಪದಲ್ಲಿ ಇರುವ ತಾರತಮ್ಯವನ್ನು ತೊಡೆದು ಎಲ್ಲಾ ಮಕ್ಕಳು ಒಟ್ಟಿಗೆ ಆಹಾರವನ್ನು ಸೇವಿಸುತ್ತಾರೆ. ಸಾಮಾಜಿಕ ಸಮಾನತೆಯನ್ನು ಸಾಧಿಸುವಲ್ಲಿಯೂ ಮಧ್ಯಾಹ್ನದ ಶಾಲಾ ಬಿಸಿಯೂಟ ಬಹಳ ಮಹತ್ವದ್ದಾಗಿದೆ. ಉದಾಹರಣೆಗೆ ಜಾತಿ ಆಧಾರಿತ ಪೂರ್ವಕಲ್ಪಿತ ಆಚರಣೆಗಳನ್ನು ಶಾಲಾ ಬಿಸಿಯೂಟವು ಮಕ್ಕಳು ಒಂದೇ ಸ್ಥಳದಲ್ಲಿ ಒಟ್ಟಿಗೆ ಕುಳಿತು, ಒಂದೇ ಬಗೆಯ ಆಹಾರವನ್ನು ಹಂಚಿಕೊಳ್ಳುವ ಮೂಲಕ ಕಡಿಮೆಗೊಳಿಸುತ್ತದೆ. ಒಂದೇ ತಂದೆ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳ ನಡುವೆ ಲಿಂಗ ಸಮಾನತೆಯನ್ನು ಸಾಧಿಸುವ ಮೂಲಕ, ಶಾಲೆಯಲ್ಲಿ ಇರಬಹುದಾದ ಲಿಂಗ ಅಸಮಾನತೆಯನ್ನು ಕಡಿಮೆ ಗೊಳಿಸುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರನ್ನು ಶಾಲಾ ಅಡುಗೆಗೆ ನೇಮಕ ಮಾಡಿ ಕೊಳ್ಳುವುದರಿಂದ ಉದ್ಯೋಗದ ಅವಕಾಶವನ್ನು ಹೆಚ್ಚಿಸುವ ಸಾಮರ್ಥ್ಯದ ಜೊತೆಗೆ ಕೂಲಿ ಕಾರ್ಮಿಕರಾಗಿ ದುಡಿಯುವ ಮಹಿಳೆಯರಿಗೆ ಮನೆಯಲ್ಲಿ ಮಧ್ಯಾಹ್ನದ ಸಮಯದಲ್ಲಿ ಮಕ್ಕಳಿಗೆ ಆಹಾರ ನೀಡಿ ಪೋಷಿಸುವ ಒತ್ತಡದಿಂದ ಬಿಡುಗಡೆಗೊಳಿಸಿದೆ. ಸ್ವಲ್ಪಮಟ್ಟಿಗೆ ಮಧ್ಯಾಹ್ನದ ಶಾಲಾ ಬಿಸಿಯೂಟವು ವರ್ಗ ಅಸಮಾನತೆಯನ್ನು ಕಡಿಮೆಗೊಳಿಸಲು ಸಹಕಾರಿಯಾಗಿದೆ. ಹಾಗೆಯೇ ಪ್ರಸ್ತುತ ಸಂದರ್ಭದಲ್ಲಿ ಭಾರತದ ಸರಕಾರಿ ಶಾಲೆಗಳಿಗೆ ದಾಖಲಾಗುತ್ತಿರುವ ಮಕ್ಕಳು ಪ್ರಮುಖವಾಗಿ ಅವಕಾಶವಂಚಿತ ಕುಟುಂಬಗಳಿಂದ ಬಂದವರು. ಇಂತಹ ಕುಟುಂಬಗಳಿಂದ ಮತ್ತು ಬಡತನದಿಂದ ಬಂದವರಿಗೆ ಶಾಲಾ ಬಿಸಿಯೂಟ ಒಂದು ರೀತಿಯಲ್ಲಿ ಆರ್ಥಿಕ ಬೆಂಬಲದಂತೆ ಕಂಡುಬರುತ್ತದೆ. ಇದಕ್ಕಿಂತಲೂ ಪ್ರಮುಖವಾಗಿ ಶಾಲಾ ಬಿಸಿಯೂಟವು ಅವಕಾಶ ವಂಚಿತ ಮಕ್ಕಳು ಶಾಲಾ ವ್ಯವಸ್ಥೆಯಲ್ಲಿ ಭಾಗವಹಿಸುವುದನ್ನು ಸ್ವಲ್ಪಮಟ್ಟಿಗೆ ಸರಾಗಗೊಳಿಸುವ ಸಾಮರ್ಥ್ಯ ಹೊಂದಿದೆ. ಪ್ರಾಯಶಃ ಇದೇ ಭವಿಷ್ಯದಲ್ಲಿ ವರ್ಗ ಅಸಮಾನತೆಯನ್ನು ಕಡಿಮೆಗೊಳಿಸಬಹುದು. ಶಿಕ್ಷಣದ ಮಟ್ಟ ಬಹಳ ಕಡಿಮೆ ಇರುವುದು ಪ್ರಮುಖವಾಗಿ ಆರ್ಥಿಕ ಮೂಲಗಳಲ್ಲಿ ಅವಕಾಶವನ್ನು ಕಡಿಮೆಗೊಳಿಸುವ ಮೂಲಕ ಸಾಮಾಜಿಕ ಅಂಚಿಗೆ ತಳ್ಳುತ್ತದೆ. ಒಟ್ಟಾರೆ ಶಾಲಾ ಬಿಸಿಯೂಟ ಸರಳವಾಗಿದ್ದರೂ ಕೂಡ ಜಾತಿ, ವರ್ಗ

ಮತ್ತು ಲಿಂಗ ಸಮಾನತೆಯನ್ನು ಸಾಧಿಸುವಲ್ಲಿ ಹೆಚ್ಚು ಮಹತ್ವದ್ದಾಗಿದೆ. ಈ ಎಲ್ಲಾ ಉದ್ದೇಶ ಮತ್ತು ವಾದಗಳ ಹಿನ್ನೆಲೆಯನ್ನು ಶಾಲಾ ಬಿಸಿಯೂಟ ಕಾರ್ಯಕ್ರಮವು ಪ್ರಸ್ತುತತೆಯನ್ನು ಹೊಂದಿದೆ.

೫.೧೩ ದಾಖಲಾತಿ-ಹಾಜರಾತಿ-ಸಾಮಾಜೀಕರಣ-ಲಿಂಗ ಸಮಾನತೆ

ಬಿಸಿಯೂಟಕ್ಕೆ ಸಂಬಂಧಿಸಿದಂತೆ ಇತ್ತೀಚಿನ ಒಂದು ಅಧ್ಯಯನವು ಶಾಲಾ ಬಿಸಿಯೂಟ ಕಾರ್ಯಕ್ರಮದಿಂದ ಸ್ಥಳೀಯ ಮಟ್ಟದಲ್ಲಿ ಹೆಣ್ಣು ಮಕ್ಕಳು ಪ್ರಾಥಮಿಕ ಶಾಲೆಯಿಂದ ಹೊರಗಿರುವುದನ್ನು ಶೇಕಡ ೯೦ ರಷ್ಟು ಕಡಿಮೆಗೊಳಿಸಿದೆ ಎಂದು ಅಂದಾಜಿಸಿದೆ(ಡ್ರೀಜ್ ಅಂಡ್ ಕಿಂಗ್, ೨೦೦೧). ಶಾಲಾ ಬಿಸಿಯೂಟ ಕುರಿತು ನಡೆದಿರುವ ಮೌಲ್ಯಮಾಪನ ಅಧ್ಯಯನಗಳಲ್ಲಿಯೂ ಕೂಡ ಇದೇ ಅಂಶ ಹೆಚ್ಚಾಗಿ ಕಂಡುಬಂದಿದೆ. ಈ ಅಂಶಕ್ಕೆ ಹೆಚ್ಚಿನ ಮಹತ್ವವನ್ನು ನೀಡಿ ಸುಪ್ರೀಂಕೋರ್ಟ್ ಆದೇಶ ನೀಡಿದೆ. ಉದಾಹರಣೆಗೆ ಬಾರ್ಮರ್ ಜಿಲ್ಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಿದ ೬೩ ಶಾಲೆಗಳಲ್ಲಿ ೨೦೦೧ರ ಸೆಪ್ಟೆಂಬರ್‌ನ ಶಾಲಾ ದಾಖಲಾತಿಗಿಂತ ೨೦೦೨ರ ಸೆಪ್ಟೆಂಬರ್‌ನ ಶಾಲಾ ದಾಖಲಾತಿಯಲ್ಲಿ ಶೇಕಡ ೩೬ ರಷ್ಟು ಹೆಚ್ಚಳವಾಗಿದೆ ಎಂದು ಗುರುತಿಸಲಾಗಿದೆ. ಇದೇ ರೀತಿಯಲ್ಲಿ ರಾಜಸ್ಥಾನದ ಜಿಲ್ಲೆಯಲ್ಲಿನ ೨೬ ಗ್ರಾಮಗಳ ಪ್ರಾಥಮಿಕ ಶಾಲೆಗಳಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ, ಶಾಲೆಗಳಲ್ಲಿ ಬಿಸಿಯೂಟವು ಜಾರಿಗೆ ಬಂದ ನಂತರ ಶಾಲಾ ದಾಖಲಾತಿಯು ಸರಾಸರಿ ಶೇಕಡ ೨೫ ರಷ್ಟು ಪ್ರಮಾಣದಲ್ಲಿ ಬೆಳವಣಿಗೆಯಾಗಿದೆ. ಕೆಲವು ಜನವಸತಿ ನೆಲೆಗಳಲ್ಲಿ ಇರುವ ಪರ್ಯಾಯ ಶಾಲೆಗಳಲ್ಲಿ ಶಾಲಾ ದಾಖಲಾತಿಯು ಬಿಸಿಯೂಟ ಜಾರಿಗೆ ಬಂದ ನಂತರ ಸ್ವಲ್ಪ ಹೆಚ್ಚು ಕಡಿಮೆ ದ್ವಿಗುಣವಾಗಿದೆ (ಡ್ರೀಜ್ ಅಂಡ್ ವಿವೇಕ್ ೨೦೦೨; ಭಾನುಪ್ರಿಯಾ ರಾವ್, ೨೦೦೩; ಸರಸ್ವತಿ ರಾವ್, ೨೦೦೩;ರವಿ, ೨೦೦೩;ಬಾರಧ್ವಾಜ್. ಆರ್.ಕೆ., ೨೦೦೩). ಈ ಎಲ್ಲಾ ಅಧ್ಯಯನಗಳು ಅನೌಪಚಾರಿಕ ಸಮೀಕ್ಷಾ ವಿಧಾನವನ್ನು ಒಳಗೊಂಡಿವೆ ಎಂದು ಹೇಳುವ ಮೂಲಕ, ಅವುಗಳಲ್ಲಿ ಕಂಡು ಬರುವ ಎಲ್ಲಾ ಅಂಶಗಳು ತಾತ್ಕಾಲಿಕ ಮತ್ತು ಪೂರ್ವಭಾವಿ ಎಂದು ಹೇಳಬಹುದು. ಆದರೆ, ಶಾಲೆಗಳಿಗೆ ಮಕ್ಕಳು ಹಾಜರಾಗುತ್ತಿರುವ ಭೌತಿಕ ದಾಖಲೆಯು ಬಿಸಿಯೂಟದಿಂದ ಶಾಲಾ ದಾಖಲಾತಿ ಮತ್ತು ಹಾಜರಾತಿ, ಅದರಲ್ಲಿಯೂ ವಿಶೇಷವಾಗಿ ಹೆಣ್ಣುಮಕ್ಕಳ ಶಾಲಾ ದಾಖಲಾತಿಯು ಪರಿಣಾಮಕಾರಿಯಾಗಿ ಹೆಚ್ಚಳಗೊಂಡಿದೆ ಎಂಬುದನ್ನು ತಿಳಿಸುತ್ತವೆ (ಸೀತಿ, ೨೦೦೩).

ಜೀನ್ ಡ್ರೀಜ್ (೨೦೦೩), ಅವರ ನೇತೃತ್ವದಲ್ಲಿ *ಸೆಂಟರ್ ಫಾರ್ ಈಕ್ವಿಟಿ ಸ್ಟಡೀಸ್*(ಸಿ.ಇ.ಎಸ್.) ಅವರು ನಡೆಸಿರುವ ಸಮೀಕ್ಷೆಯಲ್ಲಿಯೂ ಬಿಸಿಯೂಟ ಜಾರಿಗೆ ಬಂದ ನಂತರ ಶಾಲಾ ದಾಖಲಾತಿಯು ಹೆಚ್ಚಳವಾಗಿರುವುದನ್ನು ಗುರುತಿಸಲಾಗಿದೆ. ಇದನ್ನು ಜುಲೈ ೨೦೦೨ರ ಶಾಲಾ ದಾಖಲಾತಿಯನ್ನು ಜುಲೈ ೨೦೦೧ರ ದಾಖಲಾತಿಯ ಜೊತೆಗೆ ಹೋಲಿಕೆ ಮಾಡುವ ಮೂಲಕ ಕಂಡುಕೊಳ್ಳಲಾಗಿದೆ. ಅಲ್ಲದೆ ಶಾಲಾ ಬಿಸಿಯೂಟ ಜಾರಿಗೆ ಬರುವುದಕ್ಕೆ ಮೊದಲಿನ ಶಾಲಾ ದಾಖಲಾತಿ ಮತ್ತು ಹಾಜರಾತಿಯನ್ನು ಪರಿಗಣಿಸಲಾಗಿದೆ. ಒಟ್ಟಾರೆ ಈ ಅಧ್ಯಯನವು ಸಮೀಕ್ಷೆ ನಡೆಸಿರುವ ಒಟ್ಟು ೮೧ ಶಾಲೆಗಳ ಒಂದನೆಯ

ತರಗತಿಯ ದಾಖಲಾತಿಯು ಜುಲೈ ೨೦೦೧ ರಿಂದ ಜುಲೈ ೨೦೦೨ರ ನಡುವಿನ ೧ ವರ್ಷದಲ್ಲಿ ಶೇಕಡ ೧೪.೫ಕ್ಕೆ ಹೆಚ್ಚಳವಾಗಿದೆ. ಪ್ರಮುಖ ಅಂಶವೆಂದರೆ ಹೆಣ್ಣುಮಕ್ಕಳ ದಾಖಲಾತಿಯು ಶೇಕಡ ೧೯ರ ಪ್ರಮಾಣದಲ್ಲಿ ಬೆಳವಣಿಗೆಯಾಗಿರುವುದನ್ನು ಗುರುತಿಸಿದೆ.

ಸಿ.ಇ.ಎಸ್ ಸಮೀಕ್ಷೆಯು ರಾಜಸ್ಥಾನದ ೨೭, ಛತ್ತೀಸಗಢದ ೨೭ ಮತ್ತು ಕರ್ನಾಟಕದ ೨೭ ಪ್ರಾಥಮಿಕ ಶಾಲೆಗಳನ್ನು ಒಳಗೊಂಡಿದೆ. ಈ ಸಮೀಕ್ಷೆಯ ಪ್ರಕಾರ ೧ನೆಯ ತರಗತಿಗೆ ಹೆಣ್ಣುಮಕ್ಕಳ ದಾಖಲಾತಿಯ ಪ್ರಮಾಣವು ಛತ್ತೀಸಗಢದಲ್ಲಿ ಶೇಕಡ ೧೭ ಮತ್ತು ರಾಜಸ್ಥಾನದಲ್ಲಿ ಶೇಕಡ ೨೯ರ ಪ್ರಮಾಣದಲ್ಲಿ ಬೆಳವಣಿಗೆಯಾಗಿದೆ. ಗಂಡು ಮಕ್ಕಳ ದಾಖಲಾತಿಯ ಪ್ರಮಾಣವು ಕ್ರಮವಾಗಿ ಶೇಕಡ ೫ ಮತ್ತು ಶೇಕಡ ೭ರಷ್ಟು ಬೆಳವಣಿಗೆ ಕಂಡಿದೆ. ಇದು ಹೆಣ್ಣುಮಕ್ಕಳ ದಾಖಲಾತಿಗೆ ಹೋಲಿಸಿದರೆ ಬಹಳ ಕಡಿಮೆ ಎನ್ನಿಸಿದರೂ ಆಶಾದಾಯಕವಾಗಿದೆ. ಹೀಗೆ ಲಿಂಗಾಧಾರಿತ ವಿಭಿನ್ನ ಬೆಳವಣಿಗೆಯ ಪ್ರಮಾಣ ಕುರಿತು ಈಗಾಗಲೇ ನಡೆದಿರುವ ಅಧ್ಯಯನಗಳಿಂದ ಸ್ಪಷ್ಟವಾಗುವ ಅಂಶವೆಂದರೆ ಶಾಲಾ ಪ್ರೋತ್ಸಾಹ ದಾಯಕ ಕಾರ್ಯಕ್ರಮಗಳು ನಿರ್ದಿಷ್ಟವಾಗಿ ಹೆಣ್ಣುಮಕ್ಕಳ ಶಿಕ್ಷಣದ ಪ್ರಗತಿಗೆ ಹೆಚ್ಚು ಪ್ರತಿಕ್ರಿಯಿಸಿದೆ (ಪ್ರೋಬ್, ೧೯೯೯, ಡ್ರೀಜ್ ಅಂಡ್ ಕಿಂಗ್, ೨೦೦೧; ಸೀತಿ, ೨೦೦೩). ಆದರೆ ಇದಕ್ಕೆ ವ್ಯತಿರಿಕ್ತವಾದ ಬೆಳವಣಿಗೆಯನ್ನು ಸಹ ಸಿ.ಇ.ಎಸ್. ಅಧ್ಯಯನ ಗುರುತಿಸಿದೆ. ಕರ್ನಾಟಕದಲ್ಲಿ ೨೦೦೧-೦೨ ಮತ್ತು ೨೦೦೨-೦೩ರ ಅವಧಿಯಲ್ಲಿ ಹೆಣ್ಣುಮಕ್ಕಳ ಶಾಲಾ ದಾಖಲಾತಿ ಬೆಳವಣಿಗೆ ಪ್ರಮಾಣವು ಶೇಕಡ ೧ರ ದರದಲ್ಲಿ ಬೆಳವಣಿಗೆಯಾಗಿದ್ದರೆ, ಗಂಡು ಮಕ್ಕಳ ಶಾಲಾ ದಾಖಲಾತಿಯ ಬೆಳವಣಿಗೆ ಪ್ರಮಾಣವು ಶೇಕಡ ೨೮ ರ ಪ್ರಮಾಣದಲ್ಲಿ ಬೆಳವಣಿಗೆಯಾಗಿದೆ. ಒಟ್ಟಾರೆ ಈ ಅವಧಿಯಲ್ಲಿ ಕರ್ನಾಟಕದಲ್ಲಿ ಸಮೀಕ್ಷೆ ನಡೆಸಿದ ೨೭ ಶಾಲೆಗಳ ದಾಖಲಾತಿ ಪ್ರಮಾಣವು ಸರಾಸರಿ ಶೇಕಡ ೧೪ರಷ್ಟಾಗಿದೆ (ಡ್ರೀಜ್ ಮತ್ತು ಗೋಯಲ್, ೨೦೦೩). ಇದುವರೆಗೆ ನಡೆದಿರುವ ಸಂಶೋಧನೆಗಳು ಶಾಲಾ ಬಿಸಿಯೂಟದಿಂದ ಗ್ರಾಮೀಣ ಪ್ರದೇಶದಲ್ಲಿ ಮಕ್ಕಳ ಶಾಲಾ ಭಾಗವಹಿಸುವಿಕೆಯು ಹೆಚ್ಚಳಗೊಂಡಿರುವುದನ್ನು ಗುರುತಿಸಿವೆ. ವಿಶೇಷವಾಗಿ ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳ ಮಕ್ಕಳು, ಅದರಲ್ಲಿಯೂ ಹೆಣ್ಣುಮಕ್ಕಳ ಶಾಲಾ ದಾಖಲಾತಿಯು ಹೆಚ್ಚಳವಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿವೆ.

೫.೧೪ ಬಿಸಿಯೂಟ-ದಾಖಲಾತಿ–ಹಾಜರಾತಿ

ನಾವು ಅಧ್ಯಯನ ನಡೆಸಿದ ಎರಡು ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ೨೪ ಗ್ರಾಮಗಳಲ್ಲಿನ ೨೪ ಶಾಲೆಗಳ ದಾಖಲಾತಿ ಬೆಳವಣಿಗೆಯ ಪ್ರಮಾಣವನ್ನು, ಗ್ರಾಮ ಪಂಚಾಯತಿವಾರು ಮತ್ತು ಶಾಲಾವಾರು ವಿಶ್ಲೇಷಣೆ ಮಾಡಬಹುದು. ಹೀರಾ ಗ್ರಾಮ ಪಂಚಾಯತಿಯಲ್ಲಿ ೧೯೯೫-೯೬ ರಿಂದ ೨೦೦೫-೦೬ರ ವರೆಗೆ ಒಟ್ಟು ಸರಾಸರಿ ಶಾಲಾ ದಾಖಲಾತಿಯ ಬೆಳವಣಿಗೆ ಪ್ರಮಾಣವು ಶೇಕಡ ೨೮.೭೯ರಷ್ಟಿದೆ. ಇದರಲ್ಲಿ ಬಾಲಕರ ದಾಖಲಾತಿಯ ಪ್ರಮಾಣ ಶೇಕಡ ೯.೮೮ ಇದ್ದರೆ, ಬಾಲಕಿಯರ ದಾಖಲಾತಿಯು ಶೇಕಡ ೫೪.೬೬ ಪ್ರಮಾಣದಲ್ಲಿ ಬೆಳವಣಿಗೆ ಕಂಡಿದೆ. ಇದೆ ಅವಧಿಯಲ್ಲಿ

ಬಳದಾರೆ ಗ್ರಾಮ ಪಂಚಾಯತಿಯ ಒಟ್ಟು ಸರಾಸರಿ ಶಾಲಾ ದಾಖಲಾತಿಯು ಶೇಕಡ ೧೧.೭೦ರಷ್ಟಿದೆ. ಇದರಲ್ಲಿ ಬಾಲಕರ ದಾಖಲಾತಿಯು ಶೇಕಡ ೯.೮೮ ಪ್ರಮಾಣದಲ್ಲಿ, ಬಾಲಕಿಯರ ದಾಖಲಾತಿಯು ಶೇಕಡ ೧೯.೫೩ರ ಪ್ರಮಾಣದಲ್ಲಿ ಬೆಳವಣಿಗೆಯಾಗಿದೆ. ಸರಾಸರಿ ಶಾಲಾ ದಾಖಲಾತಿಯು ಶೇಕಡ ೧೪.೬೮ರಷ್ಟಿದ್ದರೆ, ಬಾಲಕರ ದಾಖಲಾತಿಯ ಪ್ರಮಾಣವು ಶೇಕಡ ೩೩.೩೩ರಲ್ಲಿ ಬೆಳವಣಿಗೆ ಯಾಗಿದೆ, ಆದರೆ ಬಾಲಕಿಯರ ಶಾಲಾ ದಾಖಲಾತಿಯು ಶೇಕಡ -೧.೬೭ರಷ್ಟು ನಕಾರಾತ್ಮಕವಾಗಿದೆ.

ನಮ್ಮ ಅಧ್ಯಯನದ ಪ್ರಮುಖ ಉದ್ದೇಶ ಬಿಸಿಯೂಟ ಕಾರ್ಯಕ್ರಮದಿಂದ ಶಾಲಾ ದಾಖಲಾತಿಯು ಯಾವ ಪ್ರಮಾಣದಲ್ಲಿ ಬೆಳವಣಿಗೆಯಾಗಿದೆ ಎಂಬುದನ್ನು ಅರ್ಥಮಾಡಿ ಕೊಳ್ಳುವುದಾಗಿದೆ. ಈ ಹಿನ್ನೆಲೆಯಲ್ಲಿ ಶಾಲಾ ದಾಖಲಾತಿಯ ಬೆಳವಣಿಗೆಯ ಪ್ರಮಾಣವನ್ನು ೧೯೯೫-೯೬ ಶೈಕ್ಷಣಿಕ ವರ್ಷದಿಂದ ೨೦೦೦-೨೦೦೧ನೆಯ ಶೈಕ್ಷಣಿಕ ವರ್ಷದವರೆಗಿನ ಸರಾಸರಿ ಶಾಲಾ ದಾಖಲಾತಿಯ ಶೇಕಡವಾರು ಬೆಳವಣಿಗೆಯ ಪ್ರಮಾಣವನ್ನು ಮೊದಲಿಗೆ ಕಂಡುಕೊಳ್ಳಲಾಗಿದೆ. ನಂತರ ೨೦೦೦-೨೦೦೧ನೆಯ ಶೈಕ್ಷಣಿಕ ವರ್ಷದಿಂದ ೨೦೦೩-೨೦೦೪ನೆಯ ಶೈಕ್ಷಣಿಕ ವರ್ಷಗಳ ನಡುವೆ ಶಾಲಾ ದಾಖಲಾತಿಯು ಯಾವ ಪ್ರಮಾಣದಲ್ಲಿ ಬೆಳವಣಿಗೆಯಾಗಿದೆ ಎಂಬುದನ್ನು ಕಂಡುಕೊಳ್ಳಲಾಗಿದೆ. ಈ ವಿಧಾನದಿಂದ ಬಿಸಿಯೂಟ ಕಾರ್ಯಕ್ರಮ ಆಚರಣೆಗೆ ಬಂದನಂತರ ಮತ್ತು ಅದಕ್ಕಿಂತ ಮೊದಲು ಯಾವ ಪ್ರಮಾಣದಲ್ಲಿ ಶಾಲಾ ದಾಖಲಾತಿಯು ಬೆಳವಣಿಗೆಯಾಗಿದೆ ಎಂಬುದನ್ನು ಕಂಡುಕೊಳ್ಳಬಹುದು. ಹೀಗಾಗಿ ಶಾಲಾ ದಾಖಲಾತಿಯನ್ನು ಗ್ರಾಮ ಪಂಚಾಯತಿವಾರು ಈ ಕೆಳಗಿನಂತೆ ವಿವರಿಸಲಾಗಿದೆ.

ಹೀರಾ ಗ್ರಾಮ ಪಂಚಾಯತಿಯಲ್ಲಿ ಬಿಸಿಯೂಟ ಕಾರ್ಯಕ್ರಮ ಆಚರಣೆಗೆ ಬರುವುದಕ್ಕೆ ಮೊದಲು, ಅಂದರೆ ೧೯೯೫-೧೯೯೬ರ ಶೈಕ್ಷಣಿಕ ವರ್ಷದಿಂದ ೨೦೦೫-೨೦೦೬ನೆಯ ಶೈಕ್ಷಣಿಕ ವರ್ಷಗಳ ನಡುವೆ ಒಟ್ಟು ಶಾಲಾ ದಾಖಲಾತಿಯು ಸರಾಸರಿ ಶೇಕಡ ೯.೮೮ರ ಪ್ರಮಾಣದಲ್ಲಿ ಬೆಳವಣಿಗೆಯಾಗಿದೆ. ಇದರಲ್ಲಿ ಬಾಲಕರ ದಾಖಲಾತಿಯು ಶೇಕಡ -೮.೧೫ರಷ್ಟು ನಕಾರಾತ್ಮಕವಾಗಿದ್ದರೆ, ಬಾಲಕಿಯರ ದಾಖಲಾತಿಯು ಶೇಕಡ ೩೫.೫೨ರ ಪ್ರಮಾಣದಲ್ಲಿ ಬೆಳವಣಿಗೆಯಾಗಿದೆ. ಇದೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ೨೦೦೦-೨೦೦೧ನೆಯ ಶೈಕ್ಷಣಿಕ ವರ್ಷದಿಂದ ೨೦೦೩-೨೦೦೪ನೆಯ ಶೈಕ್ಷಣಿಕ ವರ್ಷಗಳ ನಡುವಿನ ಸರಾಸರಿ ಒಟ್ಟು ಶಾಲಾ ದಾಖಲಾತಿಯು ಶೇಕಡ ೧೫.೩೮ ಬೆಳವಣಿಗೆಯಾಗಿದೆ. ಇದು ೧೯೯೫-೧೯೯೬ರ ಶೈಕ್ಷಣಿಕ ವರ್ಷದಿಂದ ೨೦೦೦-೨೦೦೧ನೆಯ ಶೈಕ್ಷಣಿಕ ವರ್ಷಗಳ ನಡುವಿನ ಶಾಲಾ ದಾಖಲಾತಿ ಬೆಳವಣಿಗೆ ಪ್ರಮಾಣಕ್ಕಿಂತ ಶೇಕಡ ೫ರಷ್ಟು ಹೆಚ್ಚಾಗಿದೆ. ಇದೇ ಅವಧಿಯಲ್ಲಿ ಬಾಲಕರ ಶಾಲಾ ದಾಖಲಾತಿ ಬೆಳವಣಿಗೆಯ ಪ್ರಮಾಣವು ಮೊದಲಿಗಿಂತ ಶೇಕಡ ೯ರಷ್ಟು ಹೆಚ್ಚಾಗಿದ್ದರೆ, ಬಾಲಕಿಯರ ಶಾಲಾ ದಾಖಲಾತಿ ಬೆಳವಣಿಗೆಯ ಪ್ರಮಾಣವು ಮೊದಲಿನದಕ್ಕಿಂತ ಶೇಕಡ ೩೦ರಷ್ಟು ಕಡಿಮೆಯಾಗಿದೆ.

ಬಳದಾರೆ ಗ್ರಾಮ ಪಂಚಾಯತಿಯಲ್ಲಿ ೧೯೯೫-೧೯೯೬ರ ಶೈಕ್ಷಣಿಕ ವರ್ಷದಿಂದ ೨೦೦೫-೨೦೦೬ನೆಯ ಶೈಕ್ಷಣಿಕ ವರ್ಷಗಳ ನಡುವೆ ಶಾಲಾ ದಾಖಲಾತಿಯ ಒಟ್ಟು ಸರಾಸರಿ ಬೆಳವಣಿಗೆಯು

ಶೇಕಡ ೨.೭೭ರ ಪ್ರಮಾಣದಲ್ಲಿದೆ. ಇದರಲ್ಲಿ ಬಾಲಕರ ಶಾಲಾ ದಾಖಲಾತಿಯ ಪ್ರಮಾಣ ಶೇಕಡ ೬.೭೮ರಷ್ಟಿದ್ದರೆ, ಬಾಲಕಿಯರ ಶಾಲಾ ದಾಖಲಾತಿಯ ಪ್ರಮಾಣವು ಶೇಕಡ -೨.೩೩ರಷ್ಟು ನಕಾರಾತ್ಮಕವಾಗಿದೆ. ೨೦೦೦-೨೦೦೧ನೆಯ ಶೈಕ್ಷಣಿಕ ವರ್ಷದಿಂದ ೨೦೦೫-೨೦೦೬ನೆಯ ಶೈಕ್ಷಣಿಕ ವರ್ಷಗಳ ನಡುವೆ ಒಟ್ಟು ಸರಾಸರಿ ಶಾಲಾ ದಾಖಲಾತಿ ಬೆಳವಣಿಗೆಯ ಪ್ರಮಾಣವು ಶೇಕಡ ೮.೯೬ರಷ್ಟಿದ್ದು ಇದು ೧೯೯೫-೧೯೯೬ ರಿಂದ ೨೦೦೦-೨೦೦೧ರ ನಡುವಿನ ಶೈಕ್ಷಣಿಕ ವರ್ಷಗಳಲ್ಲಿ ಶಾಲಾ ದಾಖಲಾತಿ ಬೆಳವಣಿಗೆಯು ಶೇಕಡ ೬ ರಷ್ಟು ಹೆಚ್ಚಾಗಿದೆ. ಈ ಅವಧಿಯಲ್ಲಿಯೇ ಬಾಲಕರ ಶಾಲಾ ದಾಖಲಾತಿ ಬೆಳವಣಿಗೆಯ ಪ್ರಮಾಣವು ಶೇಕಡ ೫ರಷ್ಟು ಕಡಿಮೆಯಾದರೆ, ಬಾಲಕಿಯರ ಶಾಲಾ ದಾಖಲಾತಿಯು ಶೇಕಡ ೨೦ರ ಪ್ರಮಾಣದಲ್ಲಿ ಹೆಚ್ಚಾಗಿದೆ.

ಗ್ರಾಮ ಪಂಚಾಯತಿಯ ಮಟ್ಟದಲ್ಲಿ ಶಾಲಾ ದಾಖಲಾತಿಯನ್ನು ಬಿಸಿಯೂಟ ಜಾರಿಗೆ ಬಂದ ವರ್ಷದಿಂದ ಬಿಡಿ ಬಿಡಿಯಾಗಿ ನೋಡಿದಾಗ ಸ್ಥಳೀಯ ವಿಚಿತ್ರಗಳು ನಮಗೆ ತಿಳಿಯುತ್ತವೆ. ಹೀಗಾಗಿ ಪ್ರತಿ ಗ್ರಾಮಪಂಚಾಯತಿಯ (ನಿರ್ದಿಷ್ಟವಾಗಿ ೨೦೦೦-೨೦೦೧, ೨೦೦೧-೨೦೦೨, ೨೦೦೨-೨೦೦೩ ಮತ್ತು ೨೦೦೩-೨೦೦೪, ೨೦೦೫–೨೦೦೬; ೨೦೦೭–೨೦೦೮) ಒಟ್ಟು ನಾಲ್ಕು ಶೈಕ್ಷಣಿಕ ವರ್ಷಗಳ ಶಾಲಾ ದಾಖಲಾತಿಯ ಬೆಳವಣಿಗೆಯನ್ನು ಪ್ರತ್ಯೇಕವಾಗಿ ಮುಂದೆ ವಿವರಿಸಲಾಗಿದೆ.

ಈ ಎಲ್ಲಾ ಅಂಕಿ-ಸಂಖ್ಯೆಗಳಿಂದ ಕೆಲವು ಶೈಕ್ಷಣಿಕ ವರ್ಷದಲ್ಲಿ ಶಾಲಾ ದಾಖಲಾತಿ ಪ್ರಮಾಣದಲ್ಲಿ ಉತ್ತಮವಾದ ಬೆಳವಣಿಗೆಯಾದರೆ, ಕೆಲವು ಶೈಕ್ಷಣಿಕ ವರ್ಷದಲ್ಲಿ ಇದು ನಕಾರಾತ್ಮಕವಾಗಿದೆ ಎಂಬುದು ನಮಗೆ ಸ್ಪಷ್ಟವಾಗುತ್ತದೆ. ಇದರ ಜೊತೆಗೆ ಅಧ್ಯಯನ ನಡೆಸಿದ ಎರಡು ಗ್ರಾಮ ಪಂಚಾಯಿತಿಗಳಲ್ಲಿ ಶಾಲಾ ದಾಖಲಾತಿ ಬೆಳವಣಿಗೆ ಪ್ರಮಾಣವು ಪ್ರಗತಿ ಕಂಡಿದ್ದರೂ ಹೀರ ಗ್ರಾಮ ಪಂಚಾಯಿತಿಯಲ್ಲಿ ಸ್ವಲ್ಪಮಟ್ಟಿಗೆ ನಕಾರಾತ್ಮಕವಾಗಿ ಕಂಡುಬರುತ್ತದೆ. ಬಹುಶಃ ಈ ರೀತಿಯ ಏರುಪೇರುಗಳಿಗೆ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಚಿಕ್ಕ ಪ್ರಮಾಣದ ಮಾದರಿ ಸಮೀಕ್ಷೆ, ಅಧ್ಯಯನ ನಡೆಸುವಾಗ ಪ್ರತಿ ಶಾಲೆಯ ಹಂತದಲ್ಲಿ ದೊರಕುವ ಮಾಹಿತಿಯ ಸಣ್ಣ-ಪುಟ್ಟ ತಪ್ಪುಗಳು ಕಾರಣವಾಗಿದ್ದು, ಇವು ವಿಶ್ಲೇಷಣೆಯಲ್ಲಿ ಅವಶ್ಯಕವಾದುದಕ್ಕಿಂತ ಹೆಚ್ಚಿನ ಅರ್ಥಗಳನ್ನು ನೀಡುತ್ತಿವೆ. ಇವುಗಳ ಜೊತೆಗೆ ಸ್ಥಳೀಯ ಭೌಗೋಳಿಕ, ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಜನಸಂಖ್ಯಾಶಾಸ್ತ್ರದ ಕಾರಣಗಳು ಇರಬಹುದಾಗಿದೆ. ಹೀಗಾಗಿ ಇವುಗಳ ಬಗ್ಗೆ ಹೆಚ್ಚು ಗಂಭೀರವಾದ ಅಧ್ಯಯನಗಳು ತಳಮಟ್ಟದಲ್ಲಿ (ಗ್ರಾಮಮಟ್ಟ) ನಡೆಯಬೇಕಾಗಿದೆ.

ಈ ಚರ್ಚೆಯನ್ನು ಮುಂದುವರಿಸುವುದಕ್ಕೆ ಮೊದಲು ನಮಗೆ ದೊರೆತ ಆನುಷಂಗಿಕ ಮಾಹಿತಿಯ ಔಚಿತ್ಯವನ್ನು ಕಂಡುಕೊಳ್ಳುವುದು ಉಚಿತ. ಮೊದಲಿಗೆ ಶಾಲಾ ದಾಖಲಾತಿಯ ಅಂಕಿ-ಸಂಖ್ಯೆಗಳು ನಮಗೆ ದೊರಕುವುದು ಶಾಲೆಯ ದಾಖಲಾತಿ ಮತ್ತು ಹಾಜರಾತಿ ಪುಸ್ತಕದಿಂದ. ಇದರ ಮೇಲೆಯೇ ಸಂಪೂರ್ಣವಾಗಿ ಭರವಸೆ ಇಡುವುದು ಸ್ವಲ್ಪಮಟ್ಟಿಗೆ ಕಷ್ಟ. ಹಾಗೆಯೇ ಈ ಅಂಕಿ-ಸಂಖ್ಯೆಗಳು

ಕೃತಕವಾಗಿರಲೂಬಹುದು. ಏಕೆಂದರೆ ಶಾಲೆಯ ವಾರ್ಷಿಕ ದಾಖಲಾತಿಯಲ್ಲಿ ಸ್ವಲ್ಪಮಟ್ಟಿನ ವ್ಯತ್ಯಾಸಗಳು ಉಂಟಾದರೆ ಆ ವರ್ಷ ಶಾಲೆಗೆ ದೊರಕುವ ಸೌಲಭ್ಯದಲ್ಲಿಯೂ ವ್ಯತ್ಯಾಸಗಳುಂಟಾಗುತ್ತವೆ. ಹೀಗಾಗಿ ಬಹುತೇಕ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಮತ್ತು ಹಾಜರಾತಿಗಳು ಸ್ವಲ್ಪಮಟ್ಟಿನ ಉತ್ಪ್ರೇಕ್ಷೆಗೊಳಪಡುವ ಸಾಧ್ಯತೆ ಇದೆ. ಅದೇನೆ ಇದ್ದರೂ ೨೦೦೦-೦೧, ೨೦೦೧-೦೨, ೨೦೦೨-೦೩ ಮತ್ತು ೨೦೦೩-೦೪ರ ಶೈಕ್ಷಣಿಕ ಅವಧಿಯಲ್ಲಿ ಶಾಲಾ ದಾಖಲಾತಿಯಲ್ಲಿ ಉಂಟಾಗಿರುವ ಬೆಳವಣಿಗೆಯನ್ನು ಮತ್ತು ಸಿ.ಇ.ಎಸ್ ಗುರುತಿಸಿರುವ ಅಭಿಪ್ರಾಯಗಳನ್ನು ಸರಳವಾಗಿ ಹೇಳಲು ಬರುವುದಿಲ್ಲ. ಆದರೆ ಬಹಳ ಹಿಂದಿನಿಂದಲೂ ಶಾಲಾ ದಾಖಲಾತಿಯ ಬೆಳವಣಿಗೆಗೆ ಪೂರಕವಾದ ಅಂಶಗಳು ಸ್ವಲ್ಪ ಹೆಚ್ಚು ಕಡಿಮೆ ಸ್ಥಿರವಾಗಿದೆ. ಶಾಲಾ ದಾಖಲಾತಿಯ ಬೆಳವಣಿಗೆ ಪ್ರಮಾಣ ೨೦೦೧-೦೨, ೨೦೦೨-೦೩ ಮತ್ತು ೨೦೦೩-೦೪ರಲ್ಲಿ ಸ್ವಲ್ಪ ಮಟ್ಟಿಗೆ ಉತ್ಪ್ರೇಕ್ಷೆ ಎನಿಸಿದರೂ ಇದಕ್ಕೆ ಪೂರಕವಾಗಿರುವ ಅಂಶಗಳು ನಿರ್ದಿಷ್ಟವಾಗಿ ಮೇಲೆ ತಿಳಿಸಿದ ವರ್ಷಗಳಲ್ಲಿ ಏಕೆ ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ಶಾಲಾ ದಾಖಲಾತಿ ಹೆಚ್ಚಳವಾಗಿದೆ, ಅದರಲ್ಲಿಯೂ ಬಿಸಿಯೂಟ ಜಾರಿಗೆ ಬಂದ ನಂತರ ಈ ಬೆಳವಣಿಗೆ ಉಂಟಾಗಲು ಇರುವ ನಿರ್ದಿಷ್ಟ ಕಾರಣಗಳು ಯಾವುವು ಎಂಬುದನ್ನು ವಿವರಿಸಲು ಸಾಧ್ಯವಾಗಿಲ್ಲ. ಇದು ನಮ್ಮ ಅಧ್ಯಯನದ ಒಂದು ಮಿತಿಯೂ ಆಗಿದೆ.

ಎರಡನೆಯದಾಗಿ, ೨೦೦೦-೦೧, ೨೦೦೧-೦೨, ೨೦೦೨-೦೩ ಮತ್ತು ೨೦೦೩-೦೪ನೆಯ ಶೈಕ್ಷಣಿಕ ಸಾಲಿನಲ್ಲಿ ಶಾಲಾ ದಾಖಲಾತಿಯ ಹೆಚ್ಚಳಕ್ಕೆ ಬಹುಮುಖ್ಯ ಅಂಶ ಶಾಲಾ ಬಿಸಿಯೂಟ ಎಂದು ಹೇಳಲು ಬರುವುದಿಲ್ಲ. ಏಕೆಂದರೆ, ಇದಕ್ಕೆ ಇತರ ಅನೇಕ ಪೂರಕವಾದ ಅಂಶಗಳು ಕೂಡ ಕಾರಣವಾಗಿವೆ. ರಾಜಸ್ಥಾನದ ಉದಾಹರಣೆಯನ್ನು ನಾವು ತೆಗೆದುಕೊಂಡರೆ, ಅಲ್ಲಿ ಶಾಲಾ ಬಿಸಿಯೂಟ ಜಾರಿಗೆ ಬಂದ ಸಂದರ್ಭದಲ್ಲಿಯೇ *'ಶಿಕ್ಷಕಾಸ್ ಆಫ್‌ಕಾ ದ್ವಾರ್' (Shikshakas Aapka Dwar)* ಎಂಬ ಮತ್ತೊಂದು ಹೊಸ ಕಾರ್ಯಕ್ರಮವನ್ನು ಪ್ರಾಥಮಿಕ ಶಿಕ್ಷಣದ ವಿಸ್ತರಣೆಗಾಗಿ ಜಾರಿಗೆ ತರಲಾಗಿತ್ತು. ಇದೇ ರೀತಿ ಕರ್ನಾಟಕದಲ್ಲಿಯೂ ಶಾಲಾ ಬಿಸಿಯೂಟದ ಜೊತೆ ಜೊತೆಗೆ ಸರ್ವಶಿಕ್ಷಾ ಅಭಿಯಾನ, ಕಲಿಕಾ ಖಾತರಿ ಮತ್ತು ಎಸ್.ಡಿ.ಎಂ.ಸಿ ಮುಂತಾದ ಕಾರ್ಯಕ್ರಮಗಳನ್ನು ಪ್ರಾಥಮಿಕ ಶಿಕ್ಷಣದ ಹರವು ಮತ್ತು ವಿಸ್ತರಣೆಗಾಗಿ ಜಾರಿಗೆ ತರಲಾಗಿದೆ. ಹೀಗೆ ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗಾಗಿ ಒಂದೇ ಸಂದರ್ಭದಲ್ಲಿ ಎರಡು ಮೂರು ಕಾರ್ಯಕ್ರಮಗಳು ಒಟ್ಟಿಗೆ ನಡೆಯುವುದರಿಂದ ಒಂದು ಮತ್ತೊಂದು ಕಾರ್ಯಕ್ರಮದಲ್ಲಿ ಬೆರೆತುಕೊಂಡಿರುತ್ತವೆ. ಅಲ್ಲದೆ ಒಂದು ಕಾರ್ಯಕ್ರಮವು ಮತ್ತೊಂದನ್ನು ಪ್ರಭಾವಿಸುವ ಅಥವಾ ಎಲ್ಲಾ ಕಾರ್ಯಕ್ರಮಗಳು ಪ್ರಾಥಮಿಕ ಶಿಕ್ಷಣದ ವಿಸ್ತರಣೆ ಪ್ರಕ್ರಿಯೆಯಲ್ಲಿ ಒಟ್ಟಿಗೆ ಪ್ರಭಾವ ಬೀರುವುದರಲ್ಲಿ ಸಂದೇಹಗಳಿಲ್ಲ. ಹೀಗಾಗಿ ಕೇವಲ ಬಿಸಿಯೂಟ ಕಾರ್ಯಕ್ರಮ ಒಂದರಿಂದಲೇ ಶಾಲಾ ದಾಖಲಾತಿಯಲ್ಲಿ ಹೆಚ್ಚಳವಾಗಿದೆ ಎಂದು ಹೇಳುವುದು ಗೋಜಲುಗಳಿಗೆ ಕಾರಣವಾಗುತ್ತದೆ. ಅಲ್ಲದೆ ೧೯೯೦ರ ದಶಕ ದಿಂದಲೂ ಪ್ರಾಥಮಿಕ ಶಿಕ್ಷಣದ ಹರವು ಮತ್ತು ವಿಸ್ತರಣೆಗಾಗಿ ಅನೇಕ ಬಗೆಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸರಕಾರಗಳು ರೂಪಿಸುತ್ತಿವೆ. ಬಿಸಿಯೂಟ

ಜಾರಿಗೆ ಬಂದ ನಂತರವೆ ಶಾಲಾ ದಾಖಲಾತಿ ಬೆಳವಣಿಗೆ ಪ್ರಮಾಣ ಹೆಚ್ಚಳಗೊಂಡಿರುವುದು ಅನಿರೀಕ್ಷಿತ ಅಥವಾ ಕಾಕತಾಳೀಯವೆನಿಸಿದರೂ, ಇತರ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳಿಗಿಂತ, ಶಾಲಾ ದಾಖಲಾತಿಯಲ್ಲಿ ಸಂಪೂರ್ಣವಾಗಿ ಹೆಚ್ಚಳ ಕಾಣುವುದು ಬಿಸಿಯೂಟ ಜಾರಿಗೆ ಬಂದನಂತರ ಎಂದು ಹೇಳಬಹುದು. ಬಿಸಿಯೂಟ ಕಾರ್ಯಕ್ರಮದ ಪರಿಣಾಮವಾಗಿ ಶಾಲಾ ದಾಖಲಾತಿ ಬೆಳವಣಿಗೆ ಪ್ರಮಾಣವು ಹೆಚ್ಚಳವಾಗಿದೆ ಎಂಬುದನ್ನು ನಿರ್ದಿಷ್ಟವಾಗಿ ಹೇಳಬಲ್ಲ ಅಧ್ಯಯನಗಳಿಗಾಗಿ ಎದುರು ನೋಡಬೇಕಾಗಿದೆ.

ಆದರೆ ಬೇಯಿಸಿದ ಆಹಾರವನ್ನು ಶಾಲೆಯಲ್ಲಿ ಮಕ್ಕಳಿಗೆ ನೀಡಲು ಪ್ರಾರಂಭಿಸಿದ ನಂತರ ತಿಳಿದು ಬಂದ ಅಂಶವೆಂದರೆ, ಆಹಾರ ಧಾನ್ಯ (ಬೇಯಿಸದೆ ಇರುವ) ವಿತರಣೆಯು ಮಕ್ಕಳಿಗೆ ನೇರವಾಗಿ ಪ್ರೋತ್ಸಾಹಕವಾಗಿರಲಿಲ್ಲವೆಂಬುದು. ಅದರೂ ಕೂಡ ಆಹಾರ ಧಾನ್ಯದ ವಿತರಣೆಯು ಶಾಲಾ ದಾಖಲಾತಿಯಲ್ಲಿ ಹೆಚ್ಚಿನ ಪರಿಣಾಮವನ್ನು ಉಂಟುಮಾಡಿಲ್ಲ ಎಂದು ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ವಾಸ್ತವಿಕವಾಗಿ ಆಹಾರ ಧಾನ್ಯದ ವಿತರಣೆ, ಶಾಲೆಯಲ್ಲಿ ತಯಾರಿಸಿದ ಬಿಸಿಯೂಟದ ಆಹಾರದ ವಿತರಣೆ ಮತ್ತು ಇತರ ಎಲ್ಲಾ ಶಾಲಾ ಪ್ರೋತ್ಸಾಹಕ ಕಾರ್ಯಕ್ರಮಗಳು ಶಾಲಾ ದಾಖಲಾತಿ ಮತ್ತು ಹಾಜರಾತಿಯಲ್ಲಿ ಬದಲಾವಣೆ ಉಂಟಾಗಲೂ ಕಾರಣವಾಗಿವೆ. ಗಮನಾರ್ಹವಾದ ಸಂಗತಿಯೆಂದರೆ, ಸರಳವಾಗಿ ಆಹಾರವನ್ನು ಶಾಲಾ ಆವರಣದಲ್ಲಿ ತಯಾರಿಸಿ, ಶಾಲೆ ನಡೆಯುವ ಸಮಯದಲ್ಲಿ ಶಾಲಾ ಆವರಣದಲ್ಲಿಯೇ ವಿತರಿಸುವ ಕಾರ್ಯಕ್ರಮ, ಮಕ್ಕಳಿಗೆ ಆಹಾರ ಧಾನ್ಯಗಳನ್ನು ಮನೆಗೆ ತೆಗೆದುಕೊಂಡು ಹೋಗಲು ನೀಡುವುದಕ್ಕಿಂತಲೂ ಹೆಚ್ಚಿನ ಪ್ರಭಾವವನ್ನು ಮಕ್ಕಳ ಶಾಲಾ ಭಾಗವಹಿಸುವಿಕೆಯ ಮೇಲೆ ಉಂಟುಮಾಡಿದೆ.

ಶಾಲಾ ದಾಖಲಾತಿ ಮತ್ತು ಹಾಜರಾತಿ ಪ್ರಮಾಣದ ಬೆಳವಣಿಗೆಯಲ್ಲಿ ಬಿಸಿಯೂಟವು ಪರೋಕ್ಷ ಪ್ರಭಾವವನ್ನು ಉಂಟುಮಾಡಿದೆ ಎಂಬುದನ್ನು ಗಮನಿಸಿದೆವು. ಇಲ್ಲಿ ಬಿಸಿಯೂಟದ ಪ್ರಭಾವದಿಂದ ಶಾಲಾ ಹಾಜರಾತಿಯಲ್ಲಿ ಉಂಟಾಗಿರುವ ಬದಲಾವಣೆಯ ಕುರಿತು ಚರ್ಚಿಸಲು ಪ್ರಯತ್ನಿಸಲಾಗುವುದು. ನಾವು ಅಧ್ಯಯನಕ್ಕೆ ಒಳಪಡಿಸಿದ ೨೪ ಶಾಲೆಗಳಲ್ಲಿ ಬಿಸಿಯೂಟ ಆಚರಣೆಗೆ ಬರುವುದಕ್ಕೆ ಮೊದಲಿನ ಹಾಜರಾತಿ ಮತ್ತು ಬಿಸಿಯೂಟ ಕಾರ್ಯಕ್ರಮ ಜಾರಿಗೆ ಬಂದ ನಂತರದ ಶಾಲಾ ಹಾಜರಾತಿ ಇವುಗಳ ಹೋಲಿಕೆ ಮಾಡುವ ಮೂಲಕ ಕಂಡುಕೊಳ್ಳಲಾಗಿದೆ. ಅಂದರೆ ೧೯೯೮-೯೯, ೧೯೯೯-೨೦೦೦ ಮತ್ತು ೨೦೦೧-೦೨ನೇ ಶೈಕ್ಷಣಿಕ ವರ್ಷಗಳ ಸೆಪ್ಟೆಂಬರ್ ತಿಂಗಳ ಹಾಜರಾತಿಯನ್ನು, ೨೦೦೧-೦೨, ೨೦೦೨-೦೩ ಮತ್ತು ೨೦೦೩-೦೪ನೆಯ ಶೈಕ್ಷಣಿಕ ವರ್ಷಗಳ ಸೆಪ್ಟೆಂಬರ್‌ನ ಹಾಜರಾತಿ ಯೊಂದಿಗೆ ಹೋಲಿಕೆ ಮಾಡಿ ಕಂಡುಕೊಳ್ಳಲಾಗಿದೆ.

ಬಳದರೆ ಗ್ರಾಮಪಂಚಾಯತಿಯ ವ್ಯಾಪ್ತಿಯ ಶಾಲೆಗಳಲ್ಲಿ ಬಿಸಿಯೂಟ ಕಾರ್ಯಕ್ರಮ ಜಾರಿಗೆ ಬರುವುದಕ್ಕೆ ಮೊದಲು, ಅಂದರೆ ೨೦೦೦-೨೦೦೧ನೆಯ ಶೈಕ್ಷಣಿಕ ವರ್ಷಕ್ಕೆ ಮೊದಲಿಗೆ ಸರಾಸರಿ

ಒಟ್ಟು ಶಾಲಾ ಹಾಜರಾತಿಯು ಶೇಕಡ ೭೧.೬೪ರಷ್ಟಿತ್ತು. ಇದರಲ್ಲಿ ಬಾಲಕರ ಹಾಜರಾತಿ ಪ್ರಮಾಣ ಶೇಕಡ ೭೭.೧೦ ಮತ್ತು ಬಾಲಕಿಯರ ಹಾಜರಾತಿ ಪ್ರಮಾಣ ಶೇಕಡ ೬೪.೮೦ರಷ್ಟು, ಬಿಸಿಯೂಟ ಕಾರ್ಯಕ್ರಮ ಜಾರಿಗೆ ಬಂದ ನಂತರ, ಅಂದರೆ ೨೦೦೧-೨೦೦೨ನೆಯ ಶೈಕ್ಷಣಿಕ ವರ್ಷದಿಂದ ೨೦೦೮-೨೦೦೯ನೆಯ ಶೈಕ್ಷಣಿಕ ವರ್ಷಗಳ ಅವಧಿಯಲ್ಲಿ ಸರಾಸರಿ ಒಟ್ಟು ಶಾಲಾ ಹಾಜರಾತಿಯು ಶೇಕಡ ೮೮.೧೩ರಷ್ಟು, ಇದರಲ್ಲಿ ಬಾಲಕರ ಹಾಜರಾತಿ ಶೇಕಡ ೯೨.೦೧ರಷ್ಟು ಮತ್ತು ಬಾಲಕಿಯರ ಹಾಜರಾತಿ ಶೇಕಡ ೮೪.೧೩ರಷ್ಟಿದೆ.

ಹೀರ ಗ್ರಾಮ ಪಂಚಾಯತಿಯ ಶಾಲಾಗಳಲ್ಲಿ ಬಿಸಿಯೂಟ ಆಚರಣೆಗೆ ಬರುವುದಕ್ಕೆ ಮೊದಲು ಸರಾಸರಿ ಒಟ್ಟು ಶಾಲಾ ಹಾಜರಾತಿಯು ಶೇಕಡ ೬೨.೨೦ರಷ್ಟಿದೆ. ಇದರಲ್ಲಿ ಬಾಲಕರ ಹಾಜರಾತಿ ಶೇಕಡ ೭೦.೮೪ರಷ್ಟು ಮತ್ತು ಬಾಲಕಿಯರ ಶಾಲಾ ಹಾಜರಾತಿ ಶೇಕಡ ೫೪.೦೧ರಷ್ಟಿದೆ. ಬಿಸಿಯೂಟ ಜಾರಿಗೆ ಬಂದನಂತರ ಹೀರ ಗ್ರಾಮ ಪಂಚಾಯತಿಯ ವ್ಯಾಪ್ತಿ ಶಾಲೆಗಳಲ್ಲಿ ಸರಾಸರಿ ಒಟ್ಟು ಶಾಲಾ ಹಾಜರಾತಿಯು ೮೫.೦೪ರಷ್ಟಾಗಿದೆ. ಇದರಲ್ಲಿ ಬಾಲಕರ ಶಾಲಾ ಹಾಜರಾತಿ ಶೇಕಡ ೮೯.೮೩ರಷ್ಟು ಮತ್ತು ಬಾಲಕಿಯರ ಶಾಲಾ ಹಾಜರಾತಿ ಶೇಕಡ ೭೯.೦೮ರಷ್ಟಾಗಿದೆ. ಈ ಎಲ್ಲಾ ಅಂಕಿ-ಸಂಖ್ಯೆಗಳಿಂದ ಬಿಸಿಯೂಟ ಕಾರ್ಯಕ್ರಮ ಜಾರಿಗೆ ಬಂದನಂತರ ಶಾಲಾ ಹಾಜರಾತಿಯಲ್ಲಿ ಸ್ವಲ್ಪಮಟ್ಟಿಗೆ ಹೆಚ್ಚಳವಾಗಿರುವುದು ನಮಗೆ ಸ್ಪಷ್ಟವಾಗುತ್ತದೆ. ಅದರಲ್ಲಿಯೂ ವಿಶೇಷವಾಗಿ ಬಾಲಕಿಯರ ಶಾಲಾ ಹಾಜರಾತಿಯಲ್ಲಿ ಉತ್ತಮವಾದ ಬೆಳವಣಿಗೆಯಾಗಿರುವುದನ್ನು ಗುರುತಿಸಬಹು ದಾಗಿದೆ.

ಹೀಗೆ ಅನೇಕ ಪುರಾವೆಗಳು ಬಿಸಿಯೂಟ ಶಾಲೆಯಲ್ಲಿ ಜಾರಿಗೆ ಬಂದ ನಂತರ ಪ್ರತಿದಿನದ ಶಾಲಾ ಹಾಜರಾತಿ ಮಾತ್ರವಲ್ಲದೇ, ವಾರ್ಷಿಕ ದಾಖಲಾತಿಯಲ್ಲಿಯೂ ಕೂಡ ಪ್ರಗತಿಯಾಗಿದೆ ಎಂದು ಹೇಳುತ್ತವೆ. ಶಾಲೆಯ ದಾಖಲಾತಿ ಮತ್ತು ಹಾಜರಾತಿಯಲ್ಲಿ ವಾಸ್ತವಿಕ ಶಾಲಾ ಹಾಜರಾತಿಗಿಂತ ತುಸು ಹೆಚ್ಚಿನ ಹಾಜರಿ ಇದೆ ಎಂದು ತೋರಿಸುವ ಪ್ರವೃತ್ತಿಯು ಶಿಕ್ಷಕರಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಅದೇನೆ ಇದ್ದರೂ ಅಂಕಿ-ಸಂಖ್ಯೆಗಳು ಶಾಲಾ ಬಿಸಿಯೂಟ ಜಾರಿಗೆ ಬಂದ ನಂತರ ಶಾಲಾ ಹಾಜರಾತಿಯಲ್ಲಿ ಮಹತ್ವದ ಪ್ರಗತಿಯಾಗಿದೆ ಎಂಬುದನ್ನು ತಿಳಿಸುತ್ತವೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಅನೇಕ ಪೋಷಕರು, ಶಾಲೆಯಲ್ಲಿ ಬಿಸಿಯೂಟ ಜಾರಿಗೆ ಬಂದ ನಂತರ ಪ್ರತಿದಿನ ಬೆಳಿಗ್ಗೆ ಮಕ್ಕಳನ್ನು ಶಾಲೆಗೆ ಕಳುಹಿಸುವುದು ಹೆಚ್ಚು ಸರಳವಾಗಿದೆ. ಮಕ್ಕಳು ಶಾಲೆಗೆ ಹೋಗುವಂತೆ ಪುಸಲಾಯಿಸುವುದು ಅಥವಾ ಮನವೊಲಿಸುವುದು ಸ್ವಲ್ಪ ಕಡಿಮೆಯಾಗಿದೆ; ಈಗ (ಬಿಸಿಯೂಟ ಜಾರಿಗೆ ಬಂದ ನಂತರ) ಮಕ್ಕಳೇ ಶಾಲೆಗೆ ಹೋಗಲು ಸಿದ್ಧವಾಗುತ್ತಾರೆ ಎಂದು ಹೇಳುತ್ತಾರೆ. ಅನೇಕ ಶಿಕ್ಷಕರು ಕೂಡ ಶಾಲಾ ಬಿಸಿಯೂಟದಿಂದ ಶಾಲೆಯ ಪ್ರತಿದಿನದ ಹಾಜರಾತಿಯಲ್ಲಿ ಹೆಚ್ಚಿನ ಪ್ರಗತಿಯಾಗಿದೆ ಎಂದು ಹೇಳುತ್ತಾರೆ. ಇದು ವಿಶೇಷವಾಗಿ ಬಿ.ಪಿ.ಎಲ್ ಕುಟುಂಬಗಳಿಂದ ಬಂದ ಮಕ್ಕಳು ಸಂಜೆಯವರೆಗೆ ಶಾಲೆಯಲ್ಲಿ ಇರುವಂತೆ ಮಾಡಿದೆ. ಇದಕ್ಕೆ ಪೂರಕವಾಗಿ ಬಹುತೇಕ ಶಿಕ್ಷಕರು ಶಾಲಾ ಬಿಸಿಯೂಟ ಜಾರಿಗೆ ಬಂದನಂತರ ಮಧ್ಯಾಹ್ನದ ಬಿಡುವಿನ ನಂತರವೂ ಶಾಲೆಯಲ್ಲಿ ಮಕ್ಕಳು ಇರುವುದು ವೃದ್ಧಿಸಿದೆ

ಎಂದು ಗುರುತಿಸುತ್ತಾರೆ. ಇದನ್ನು ನಮ್ಮ ಅಧ್ಯಯನವು ಗುರುತಿಸಿದೆ. ಮಧ್ಯಾಹ್ನದ ಊಟಕ್ಕೆ ಮನೆಗೆ ಹೋಗುತ್ತಿದ್ದ ಮಕ್ಕಳು ಬೇರೆ ಬೇರೆ ಕಾರಣಗಳಿಂದ ಶಾಲೆಗೆ ಮರಳದ ಸಂದರ್ಭಗಳಿರುತ್ತಿದ್ದವು. ಇದರಿಂದ ಮಧ್ಯಾಹ್ನದ ಸಮಯದಲ್ಲಿ ಶಾಲಾ ಹಾಜರಾತಿಯು ಬೆಳಗಿನ ರೂಪವನ್ನು ಪಡೆಯುತ್ತಿರಲಿಲ್ಲ. ಆದರೆ ಶಾಲಾ ಬಿಸಿಯೂಟ ಜಾರಿಗೆ ಬಂದ ನಂತರ ಮಕ್ಕಳು ಶಾಲೆಯ ಅವಧಿ ಮುಗಿಯುವವರೆಗೆ ಶಾಲಾ ಆವರಣದಲ್ಲಿ ಮತ್ತು ತರಗತಿಗಳಲ್ಲಿ ಇರುತ್ತಾರೆ ಎಂದು ವಿವರಿಸುತ್ತಾರೆ. ಇದು ವಾಸ್ತವವೂ ಹೌದು. ಇದಕ್ಕೆ ವಿರುದ್ಧವಾಗಿ, ಈ ಕಾರ್ಯಕ್ರಮವು ತರಗತಿಯ ಬೋಧನಾ ಚಟುವಟಿಕೆಗೆ ತೊಡಕು ಉಂಟುಮಾಡಿದೆ, ಬೋಧನಾ ಪ್ರಕ್ರಿಯೆಗೆ ಅಡ್ಡಿಯಾಗಿದೆ ಎಂದು ಕೆಲವು ಶಿಕ್ಷಕರು ವಾದಿಸುತ್ತಾರೆ. ಈ ವಿಷಯ ಕುರಿತು ಮುಂದೆ ಚರ್ಚೆ ನಡೆಸಲಾಗಿದೆ.

೫.೧೫ ಮಕ್ಕಳ ಹಸಿವನ್ನು ಕಡಿಮೆಗೊಳಿಸುತ್ತದೆ

ಶಾಲಾ ಬಿಸಿಯೂಟದಿಂದ ಮಕ್ಕಳಲ್ಲಿ ಉಂಟಾಗಿರುವ ಪೌಷ್ಟಿಕ ಬೆಳವಣಿಗೆಗೆ ಬೆಲೆ ಕಟ್ಟುವುದು ನಮ್ಮ ಅಧ್ಯಯನದ ಸ್ವರೂಪಕ್ಕಿಂತ ಬಹಳ ದೊಡ್ಡದು. ಈ ಕಾರ್ಯಕ್ರಮದ ಪ್ರಾರಂಭಿಕ ಹಂತದಲ್ಲಿಆಹಾರ ಸ್ವರೂಪವು ಸರಳವಾಗಿದ್ದರೂ ಪೌಷ್ಟಿಕತೆಯ ದೃಷ್ಟಿಯಿಂದ ಬಹಳ ತೀಕ್ಷ್ಣವಾದ ಪರಿಣಾಮವನ್ನು ಉಂಟು ಮಾಡಿದೆ. ನಮ್ಮ ಅಧ್ಯಯನದ ಸಂದರ್ಭದಲ್ಲಿ ಪೌಷ್ಟಿಕತೆಗೆ ಸಂಬಂಧಿಸಿದಂತೆ ಎರಡು ಅಂಶಗಳು ಕಂಡುಬಂದಿವೆ.

ಮೊದಲಿಗೆ, ಶಾಲಾ ಬಿಸಿಯೂಟವು ಬಡಕುಟುಂಬಗಳಿಂದ ಬಂದ ಮಕ್ಕಳ ಹಸಿವನ್ನು ಕಡಿಮೆಗೊಳಿಸುವ ಅಥವಾ ಕೊನೆಗಾಣಿಸುವ ಸಾಮರ್ಥ್ಯವನ್ನು ಹೊಂದಿದೆ. ಅನೇಕ ಮಕ್ಕಳು ಶಾಲೆಗೆ ಬರುವಾಗ ಬರಿ ಹೊಟ್ಟೆಯಲ್ಲಿ ಬರುವುದು ಎರಡು ಕಾರಣಗಳಿಗಾಗಿ. ಒಂದು ಶಾಲೆಗೆ ಬರುವ ಸಮಯದಲ್ಲಿ ಹಸಿವಾಗದಿರುವುದು; ಮತ್ತೊಂದು ಬೆಳಗ್ಗೆ ಪೋಷಕರು ಸಾಮಾನ್ಯವಾಗಿ ಮನೆಯಲ್ಲಿ ವಿವಿಧ ಕೆಲಸಗಳಲ್ಲಿ ಹೆಚ್ಚಾಗಿ ತೊಡಗಿಕೊಳ್ಳುವುದರಿಂದ ಮಕ್ಕಳಿಗೆ ಉಪಹಾರ ಸಿದ್ಧಪಡಿಸಿ ಉಪಚಾರ ಮಾಡಲು ಸಮಯವಿಲ್ಲದಿರುವುದು. ಹೀಗೆ ಮನೆಯಲ್ಲಿ ಆಹಾರ ಸೇವಿಸದೆ ಶಾಲೆಗೆ ಬಂದ ಮಕ್ಕಳಿಗೆ ಹಸಿವು ಉಂಟಾಗುವುದರಿಂದ ಶಾಲೆ ಪ್ರಾರಂಭವಾದ ಕೆಲವು ಗಂಟೆಗಳಾದ ಬಳಿಕ ಕಲಿಯುವ ಏಕಾಗ್ರತೆಯು ಮಕ್ಕಳಲ್ಲಿ ಉಳಿಯುವುದು ಬಹಳ ಕಷ್ಟ. ನಾವು ಅಧ್ಯಯನ ನಡೆಸಿದ ಶಾಲೆಗಳ ಎಲ್ಲಾ ಮುಖ್ಯ ಶಿಕ್ಷಕರು ಮತ್ತು ಬಹುತೇಕ ಶಿಕ್ಷಕರು ಶಾಲಾ ಬಿಸಿಯೂಟ ಜಾರಿಗೆ ಬಂದ ನಂತರ, ವಿಶೇಷವಾಗಿ ಬಡ ಕುಟುಂಬಗಳಿಂದ ಬಂದ ಮಕ್ಕಳು ಹಸಿವಿನಿಂದ ಕಲಿಕೆಯಲ್ಲಿ ಆಸಕ್ತಿ ಇಲ್ಲದೆ ಶಾಲೆ ನಡೆಯುತ್ತಿದ್ದ ಮಧ್ಯದಲ್ಲಿ ತರಗತಿಯಲ್ಲಿ ನಿದ್ರಿಸುತ್ತಿದ್ದರು. ಈ ಸಮಸ್ಯೆಯು ಬಿಸಿಯೂಟ ಜಾರಿಗೆ ಬಂದ ನಂತರ ಬಹಳ ಮಟ್ಟಿಗೆ ಕರಗಿ ಹೋಗಿದೆ ಎಂದು ಹೇಳುತ್ತಾರೆ.

ಎರಡನೆಯದಾಗಿ, ಅತ್ಯಂತ ಹಿಂದುಳಿದ ಪ್ರದೇಶಗಳಲ್ಲಿ ಮತ್ತು ದಿನಕ್ಕೆ ಎರಡು ಹೊತ್ತಿನ ಊಟವು ಸಿಗದೆ ಇರುವ ಭಾಗಗಳಲ್ಲಿ, ಅದರಲ್ಲಿಯೂ ಬಿ.ಪಿ.ಎಲ್ ರೇಖೆಗಿಂತ ಕೆಳಗಿರುವ ಕುಟುಂಬಗಳಿಂದ

ಬಂದ ಮಕ್ಕಳಿಗೆ ಶಾಲಾ ಬಿಸಿಯೂಟ ಹಸಿವಿನ ವಿರುದ್ಧ ರಕ್ಷಣೆ ನೀಡುತ್ತಿದೆ. ವಿಶೇಷವಾಗಿ ನಾವು ಅಧ್ಯಯನ ನಡೆಸಿದ ಪ್ರದೇಶಗಳು ಕಳೆದ ಮೂರು ವರ್ಷಗಳಿಂದ (೨೦೦೬, ೨೦೦೭, ೨೦೦೮) ಬರಪೀಡಿತವಾಗಿವೆ. ಈ ಪ್ರದೇಶಗಳಲ್ಲಿ ಪೌಷ್ಟಿಕತೆ ಬಹಳ ಕಡಿಮೆ ಇರುವ ಮಕ್ಕಳಿಗೆ ಬಿಸಿಯೂಟ ಪೌಷ್ಟಿಕತೆ ವರ್ಧಿಸುವ ಶಕ್ತಿಯನ್ನು ಹೊಂದಿದೆ. ಇದೇ ರೀತಿಯಲ್ಲಿ ಬಡಕುಟುಂಬಗಳು, ಅದರಲ್ಲಿಯೂ ಭೂರಹಿತ ಕೃಷಿ ಕೂಲಿ ಕಾರ್ಮಿಕರ ಕುಟುಂಬದ ಮಕ್ಕಳಿಗೆ, ಮುಖ್ಯವಾಗಿ ಇಂತಹ ಹಿನ್ನೆಲೆ ಇರುವ ವಿಧವೆಯರ ಮಕ್ಕಳಿಗೆ ಶಾಲೆಗಳಲ್ಲಿ ಉಚಿತ ಊಟದ ಸೌಲಭ್ಯ ಕಲ್ಪಿಸಿರುವುದು ಹೆಚ್ಚಿನ ಪ್ರಯೋಜನವಾಗಿದೆ. ನಿರ್ದಿಷ್ಟವಾಗಿ ಇದು ಹಸಿವಿನಿಂದ ನರಳುತ್ತಿರುವ ಪ್ರದೇಶದಲ್ಲಿ ಮಕ್ಕಳಿಗೆ ಪೌಷ್ಟಿಕತೆ ಮತ್ತು ಆಹಾರದ ಭರವಸೆಯನ್ನು ನೀಡಿದೆ. ಅದರಲ್ಲಿಯೂ ಅಪೌಷ್ಟಿಕತೆಯಿಂದ ಆಗಾಗ ಮಕ್ಕಳನ್ನು ಬಾಧಿಸುವ ರೋಗಗಳು ಹೆಚ್ಚಾಗಿರುವ ಪ್ರದೇಶದಲ್ಲಿ ಈ ಕಾರ್ಯಕ್ರಮ ಹೆಚ್ಚು ಪ್ರಯೋಜನ ಕಾರಿಯಾಗಿರುವುದರಲ್ಲಿ ಸಂಶಯವಿಲ್ಲ.

೫.೧೬ ಬಿಸಿಯೂಟ-ಸಾಮಾಜೀಕರಣ ಮತ್ತು ಲಿಂಗ ಸಮಾನತೆ

ಒಂದು ದೃಷ್ಟಿಯಲ್ಲಿ ಶಾಲಾ ಬಿಸಿಯೂಟವು ಶಾಲಾ ದಾಖಲಾತಿ-ಹಾಜರಾತಿ ಮತ್ತು ಮಕ್ಕಳ ಪೌಷ್ಟಿಕತೆಯನ್ನು ಹೆಚ್ಚಳ ಮಾಡಿದರೆ, ಮತ್ತೊಂದು ದೃಷ್ಟಿಯಲ್ಲಿ ಇದು ತನ್ನೊಳಗೆ ಸಾಮಾಜಿಕ ಮೌಲ್ಯವನ್ನು ಹೊಂದಿದೆ. ಶಾಲೆಯಲ್ಲಿ ಎಲ್ಲಾ ಜಾತಿವರ್ಗಕ್ಕೆ ಸೇರಿದ ಮಕ್ಕಳು ಒಟ್ಟಿಗೆ ಕಲಿಯುವುದರ ಜೊತೆಗೆ, ಒಂದೆ ಬಗೆಯ ಆಹಾರವನ್ನು ಹಂಚಿಕೊಂಡು ತಿನ್ನುವುದರಿಂದ, ಜಾತಿ ವ್ಯವಸ್ಥೆಯ ಪೂರ್ವಕಲ್ಪಿತ ಆಚರಣೆಗಳು ಮತ್ತು ವರ್ಗ ಅಸಮಾನತೆಯ ಮನೋಭಾವ ಕ್ರಮೇಣವಾಗಿ ಕಡಿಮೆಯಾಗುತ್ತದೆ. ಇದಕ್ಕೆ ವಿರುದ್ಧವಾಗಿ ಶಾಲಾ ಬಿಸಿಯೂಟವು ಸಾಮಾಜಿಕ ಅಸಮಾನತೆಗಳನ್ನು ಪೋಷಿಸಬಲ್ಲಂತಹ ಸಾಧ್ಯತೆಗಳನ್ನು ಸಿ.ಇ.ಎಸ್ ಅಧ್ಯಯನ ತಂಡ ಗುರುತಿಸಿದೆ. ಈ ಅಧ್ಯಯನ ತಂಡವು ರಾಜಸ್ಥಾನದ ರಾಜಮಂಡ್ರಿ ಜಿಲ್ಲೆಯ ಪಟ್ಲಂಕಿ ಭಾಗೆಲ್ ಎಂಬ ಹಳ್ಳಿಯಲ್ಲಿ ದಲಿತ ಸಮುದಾಯಗಳಿಗೆ ಸೇರಿದ ಮಕ್ಕಳಿಗೆ ಪ್ರತ್ಯೇಕವಾದ ಬಟ್ಟಲುಗಳನ್ನು ಉಪಯೋಗಿಸುತ್ತಿರುವುದನ್ನು, ಇತರ ಜಾತಿಗೆ ಸೇರಿದ ಮಕ್ಕಳು ಸಾಮಾನ್ಯ ತಟ್ಟೆ ಮತ್ತು ಲೋಟಗಳನ್ನು ಉಪಯೋಗಿಸು ತ್ತಿರುವುದನ್ನು ಗುರುತಿಸಿದೆ. ಇದೊಂದು ಘಟನೆಯನ್ನು ಹೊರತುಪಡಿಸಿದರೆ ಶಾಲೆಗಳಲ್ಲಿ ಜಾತಿ ತಾರತಮ್ಯದ ಬೇಧಭಾವದಿಂದ ಮಕ್ಕಳಿಗೆ ಪ್ರತ್ಯೇಕ ಆಸನ ವ್ಯವಸ್ಥೆ ಮಾಡಿರುವುದು, ಬಹಿರಂಗವಾಗಿ ಜಾತಿ ತಾರತಮ್ಯಗಳು ನಡೆದಿರುವ ಘಟನೆಗಳನ್ನು ನಾವು ಗುರುತಿಸಿಲ್ಲ ಎಂದು ಸಿ.ಇ.ಎಸ್. ಅಧ್ಯಯನ ತಂಡ ವಿಶ್ಲೇಷಿಸಿದೆ (ಜೀನ್ ಡ್ರೀಜ್, ೨೦೦೩).

ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ, ಒಟ್ಟು ೪೦೦ ಕುಟುಂಬಗಳಲ್ಲಿ ೯೦ ಕುಟುಂಬಗಳು ಪರಿಶಿಷ್ಟ ಜಾತಿಗೆ, ೫೦ ಕುಟುಂಬಗಳು ಪರಿಶಿಷ್ಟ ಪಂಗಡಕ್ಕೆ ಮತ್ತು ೨೬೦ ಕುಟುಂಬಗಳು ಇತರ ಜಾತಿ ಹಾಗೂ ಧರ್ಮಕ್ಕೆ ಸೇರಿದವು. ಕುಟುಂಬಗಳು ಪ್ರಾಥಮಿಕ ಶಿಕ್ಷಣ ಅಭಿವೃದ್ಧಿಗೆ ಇರುವ ಪ್ರೋತ್ಸಾಹಕ ಕಾರ್ಯಕ್ರಮಗಳ ಕಾರ್ಯಕ್ಷಮತೆಯ ಕುರಿತು ಹೊಂದಿರುವ ಅಭಿಪ್ರಾಯಗಳನ್ನು ಇಲ್ಲಿ ವಿಶ್ಲೇಷಣೆ ಮಾಡಲಾಗಿದೆ. ಪರಿಶಿಷ್ಟ ಜಾತಿಗೆ ಸೇರಿದ ಒಟ್ಟು ೯೦ ಕುಟುಂಬಗಳಲ್ಲಿ ಶೇಕಡ ೯೦.೮೧ರಷ್ಟು

ಕುಟುಂಬಗಳು ಬಿಸಿಯೂಟ ಕಾರ್ಯಕ್ರಮ ಉತ್ತಮವಾಗಿದೆ ಎಂದು ಹೇಳಿವೆ. ಶೇಕಡ ೪.೦೯ರಷ್ಟು ಕುಟುಂಬಗಳು ಈ ಕಾರ್ಯಕ್ರಮ ಸಾಧಾರಣವಾಗಿದೆ ಎಂದು ಹೇಳಿದ್ದರೆ, ಉಳಿದ ಶೇಕಡ ೫.೧೦ರಷ್ಟು ಕುಟುಂಬಗಳು ಬಿಸಿಯೂಟ ಕಾರ್ಯಕ್ರಮ ಸರಿಯಿಲ್ಲ ಎಂದು ಹೇಳಿವೆ. ಪರಿಶಿಷ್ಟ ಪಂಗಡಕ್ಕೆ ಸೇರಿದ ಒಟ್ಟು ೫೦ ಕುಟುಂಬಗಳಲ್ಲಿ ಶೇಕಡ ೬೯.೯ರಷ್ಟು ಕುಟುಂಬಗಳು ಬಿಸಿಯೂಟ ಕಾರ್ಯಕ್ರಮ ಉತ್ತಮವಾಗಿದೆ ಎಂದು ಮತ್ತು ಶೇಕಡ ೩೦.೧ರಷ್ಟು ಕುಟುಂಬಗಳು ಸಾಧಾರಣವಾಗಿದೆ ಎಂದು ಹೇಳಿವೆ. ಇತರ ಜಾತಿ ಹಾಗೂ ಧರ್ಮಗಳಿಗೆ ಸೇರಿದ ಒಟ್ಟು ೨೬೦ ಕುಟುಂಬಗಳಲ್ಲಿ ಶೇಕಡ ೮೮.೯೨ರಷ್ಟು ಕುಟುಂಬಗಳು ಶಾಲಾ ಬಿಸಿಯೂಟ ಉತ್ತಮವಾಗಿದೆ ಎಂದು ಹೇಳಿದರೆ ಶೇಕಡ ೧೧.೦೮ರಷ್ಟು ಕುಟುಂಬಗಳು ಈ ಕಾರ್ಯಕ್ರಮ ಸಾಧಾರಣವಾಗಿದೆ ಎಂದು ಹೇಳಿವೆ. ಇಲ್ಲಿ ನಮಗೆ ಸ್ಪಷ್ಟವಾಗುವ ಅಂಶವೆಂದರೆ ಸಮಾಜದ ತಳವರ್ಗದ ಜನರಿಗೆ ಶಾಲಾ ಬಿಸಿಯೂಟ ಉತ್ತಮವಾಗಿದೆ ಎಂಬುದು.

ಶಾಲಾ ಬಿಸಿಯೂಟ ಕಾರ್ಯಕ್ರಮವನ್ನು ಇತರ ಶಾಲಾ ಪ್ರೋತ್ಸಾಹ ಕಾರ್ಯಕ್ರಮಗಳಿಗೆ ಹೋಲಿಸಿ ನೋಡಬಹುದು. ಅಧ್ಯಯನಕ್ಕೆ ಒಳಪಡಿಸಿದ ಒಟ್ಟು ೪೦೦ ಕುಟುಂಬಗಳಲ್ಲಿ ವಿವಿಧ ಪ್ರೋತ್ಸಾಹಕ ಕಾರ್ಯಕ್ರಮಗಳು ಹೊಂದಿರುವ ಅಭಿಪ್ರಾಯಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಶಾಲಾ ಬಿಸಿಯೂಟ ಉತ್ತಮವಾಗಿದೆ ಎಂದು ಶೇಕಡ ೮೬.೭೯ರಷ್ಟು ಕುಟುಂಬಗಳು ಹೇಳಿವೆ. ಉಚಿತ ಪಠ್ಯಪುಸ್ತಕ ವಿತರಣೆ ಉತ್ತಮವಾಗಿದೆ ಎಂದು ಶೇಕಡ ೭೬.೮೮ರಷ್ಟು ಕುಟುಂಬಗಳು ಹೇಳಿವೆ. ಉಚಿತ ಸಮವಸ್ತ್ರ ವಿತರಣೆ ಉತ್ತಮವಾಗಿದೆ ಎಂದು ಶೇಕಡ ೭೦.೯೫ರಷ್ಟು ಕುಟುಂಬಗಳು ಹೇಳಿವೆ. ಶಾಲಾ ಪ್ರೋತ್ಸಾಹ ಧನ ಉತ್ತಮವಾಗಿದೆ ಎಂದು ಹೇಳಿರುವ ಕುಟುಂಬಗಳ ಸಂಖ್ಯೆ ಶೇಕಡ ೬೩.೨೦ರಷ್ಟಿದೆ. ಶಾಲಾ ಬಿಸಿಯೂಟ ಸಾಧಾರಣವಾಗಿದೆ ಎಂದು ಶೇಕಡ ೧೨.೦೨ರಷ್ಟು ಕುಟುಂಬಗಳು ಹೇಳಿವೆ. ಆದರೆ ಉಚಿತ ಪಠ್ಯಪುಸ್ತಕ, ಉಚಿತ ಶಾಲಾ ಸಮವಸ್ತ್ರ ಮತ್ತು ಶಾಲಾ ಪ್ರೋತ್ಸಾಹ ಧನ ಸರಿಯಾಗಿಲ್ಲ ಎಂದು ಹೇಳಿದ ಕುಟುಂಬಗಳ ಸಂಖ್ಯೆ ಕ್ರಮವಾಗಿ, ಶೇಕಡ ೧೭.೯೨, ಶೇಕಡ ೨೩.೮೨ ಮತ್ತು ಶೇಕಡ ೧೮.೩೯ರಷ್ಟು, ಶಾಲಾ ಬಿಸಿಯೂಟ ಕಾರ್ಯಕ್ರಮ ಸರಿಯಾಗಿಲ್ಲ ಎಂದು ಹೇಳಿದ ಕುಟುಂಬಗಳ ಸಂಖ್ಯೆ ಕೇವಲ ೫. ಆದರೆ ಉಚಿತ ಪಠ್ಯಪುಸ್ತಕ, ಉಚಿತ ಶಾಲಾ ಸಮವಸ್ತ್ರ ಮತ್ತು ಶಾಲಾ ಪ್ರೋತ್ಸಾಹಧನ ಸರಿಯಾಗಿಲ್ಲ ಎಂದು ಹೇಳಿದ ಕುಟುಂಬಗಳ ಸಂಖ್ಯೆ ಕ್ರಮವಾಗಿ ಶೇಕಡ ೫.೧೮, ಶೇಕಡ ೫.೪೨ ಮತ್ತು ಶೇಕಡ ೧೮.೩೮ರಷ್ಟಿದೆ. ಈ ಎಲ್ಲಾ ಅಂಕಿ-ಸಂಖ್ಯೆಗಳಿಂದ ಸ್ಪಷ್ಟವಾಗುವ ಅಂಶವೆಂದರೆ ಶಾಲಾ ಬಿಸಿಯೂಟ ಕಾರ್ಯಕ್ರಮ ಇತರ ಎಲ್ಲಾ ಶಾಲಾ ಪ್ರೋತ್ಸಾಹಕ ಕಾರ್ಯಕ್ರಮಗಳಿಗಿಂತ ಉತ್ತಮವಾಗಿದೆ ಎಂಬುದು. ಇದಕ್ಕೆ ನಾವು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಚಿಕ್ಕಪ್ರಮಾಣದ ಮಾದರಿ ಸಮೀಕ್ಷೆ, ಆಯ್ಕೆ ಮಾಡಿಕೊಂಡ ಪ್ರದೇಶ, ಅ ಪ್ರದೇಶದ ಭೌಗೋಳಿಕ ಲಕ್ಷಣ, ಕುಟುಂಬಗಳ-ಅರ್ಥಿಕ-ಸಾಮಾಜಿಕ-ಶೈಕ್ಷಣಿಕ ಮುಂತಾದ ಅಂಶಗಳನ್ನು ಕುರಿತು ಅತ್ಯಂತ ಸೂಕ್ಷ್ಮವಾಗಿ ವಿಶ್ಲೇಷಣೆ ಮಾಡುವ ಅಧ್ಯಯನಗಳಿಗಾಗಿ ಎದುರು ನೋಡಬೇಕಾಗಿದೆ. ಆದರೆ ಒಂದು ಅಂಶವಂತೂ ಸ್ಪಷ್ಟ. ನಮ್ಮ ಅಧ್ಯಯನ ಸಂದರ್ಭದಲ್ಲಿ

ಶಾಲಾ ಬಿಸಿಯೂಟ ಅಥವಾ ಯಾವುದೇ ಶಾಲಾ ಪ್ರೋತ್ಸಾಹಕ ಕಾರ್ಯಕ್ರಮಗಳು ಸರಿಯಾಗಿಲ್ಲ ಸಾಧಾರಣವಾಗಿದೆ ಎಂದು ಹೇಳಿದ ಕುಟುಂಬಗಳು ಬಹುತೇಕ ಮೇಲುಜಾತಿಗೆ ಮತ್ತು ಮೇಲುವರ್ಗಕ್ಕೆ ಸೇರಿದವುಗಳಾಗಿವೆ.

ಹೀಗೆ ಬಿಸಿಯೂಟ ಕಾರ್ಯಕ್ರಮದ ಬಗ್ಗೆ ಉತ್ತಮವಾದ ಅಭಿಪ್ರಾಯವಿದ್ದರೂ ಅನೇಕ ಬಗೆಯ ಅಸಮಾನತೆಯ ಆಚರಣೆಗಳು ಈಗಲೂ ಇವೆ. ಜಾತಿ ಆಧಾರಿತ ತಾರತಮ್ಯಗಳು ಮತ್ತು ಅಸಮಾನತೆಯ ಆಚರಣೆಯ ಘಟನೆಗಳು ಬಿಸಿಯೂಟದ ಸಾಮಾಜಿಕ ಪಾತ್ರವನ್ನು ಕಡೆಗಣಿಸುವ ಸಾಧ್ಯತೆ ಇದೆ. ನಾವು ಅಧ್ಯಯನ ನಡೆಸಿದ ಬಹುತೇಕ ಗ್ರಾಮಗಳಲ್ಲಿ ಜಾತಿ ಹಿನ್ನೆಲೆಯ, ಬೇಧ-ಭಾವಗಳು, ಅನಿರ್ಬಂಧಿತವಾಗಿ ಈಗಲೂ ಅಸ್ತಿತ್ವದಲ್ಲಿವೆ. ಉದಾಹರಣೆಗೆ, ಅಧ್ಯಯನಕ್ಕೆ ಒಳಪಡಿಸಿದ ಬಹುತೇಕ ಗ್ರಾಮಗಳಲ್ಲಿ ಹೀರಾ ಪಂಚಾಯಿತಿ ಇರುವ ಚಿಕ್ಕ ಪುಟ್ಟ ಹೋಟಲ್‌ಗಳಲ್ಲಿ ಅಸ್ಪೃಶ್ಯ ಜಾತಿಗೆ ಸೇರಿದವರಿಗೆ ಈಗಲೂ ಕೂಡ ಪ್ರತ್ಯೇಕವಾದ ತಟ್ಟೆ ಮತ್ತು ಲೋಟಗಳನ್ನು ಇಟ್ಟಿದ್ದಾರೆ. ಅವುಗಳನ್ನು ಅವರೆ ತೊಳೆದುಕೊಂಡು ಟೀ ಕುಡಿಯಲು, ಆಹಾರ ಸೇವಿಸಲು ಬಳಸುತ್ತಾರೆ. ಇನ್ನೂ ಈ ಜನ ಸಮುದಾಯಗಳಿಗೆ ಸೇರಿದ ಜನರು ಮೇಲುಜಾತಿಯ ಭೂಮಾಲೀಕರ ಎದುರು ನಿಂತು ಮಾತನಾಡಲು ಹಿಂಜರಿಯುತ್ತಾರೆ. ಹೀರಾ ಗ್ರಾಮ ಪಂಚಾಯತಿಯಲ್ಲಿ ಉಪಾಧ್ಯಕ್ಷರಾದರೂ ಕೂಡ ಈ ಗ್ರಾಮದಲ್ಲಿ ಹೋಟೆಲ್‌ಗಳಿಗೆ ಹೋಗುವುದಿಲ್ಲ. ಅಲ್ಲಿ ನಮಗೆ ಸಮಾನತೆ ಇಲ್ಲ. ಹೀಗಾಗಿ ನಾವು ಅಲ್ಲಿಗೂ ಹೋಗುವುದಿಲ್ಲ, ಈ ಪದ್ಧತಿಯನ್ನು ಬದಲಿಸಲು ನಾವು ಪ್ರಯತ್ನಿಸಿದ್ದೇವೆ. ಆದರೆ ಪ್ರಯೋಜನವಾಗಲಿಲ್ಲ ಎಂದು ತಮ್ಮ ಅಸಹಾಯಕತೆಯನ್ನು ಕೆಲವು ವಿದ್ಯಾವಂತ ದಲಿತ ಯುವಕರು ವ್ಯಕ್ತಪಡಿಸುತ್ತಾರೆ.

ನಾವು ಅಧ್ಯಯನ ನಡೆಸಿದ ಗ್ರಾಮ ಪಂಚಾಯತಿಗಳಲ್ಲಿ ಇರುವ ಶಾಲೆಗಳಲ್ಲಿ ದಲಿತರ ಮಕ್ಕಳಿಗೆ ಪ್ರತ್ಯೇಕವಾದ ಆಸನವಾಗಲಿ, ಜಾತಿ ಆಧಾರಿತ ತಾರತಮ್ಯವಾಗಲಿ ಕಂಡುಬರಲಿಲ್ಲ. ಎಲ್ಲಾ ಜನ ಸಮುದಾಯಗಳಿಗೆ ಸೇರಿದ ಮಕ್ಕಳು ಒಟ್ಟಿಗೆ ಕುಳಿತು, ಕಲಿಯುವ ಮತ್ತು ಒಟ್ಟಿಗೆ ಕುಳಿತು ಒಂದೇ ಬಗೆಯ ಆಹಾರವನ್ನು ಹಂಚಿಕೊಂಡು ಊಟ ಮಾಡುವಲ್ಲಿ ತಲ್ಲೀನವಾಗಿರುವುದನ್ನು ನಾವು ಗಮನಿಸಿದೆವು. ಆದರೆ, ಹೀರ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಬರುವ ಕೆಲವು ಗ್ರಾಮಗಳಲ್ಲಿ ಪರಿಶಿಷ್ಟ ಜಾತಿಯ ಜನರನ್ನು ಸಮಾನವಾಗಿ ನೋಡುತ್ತಿಲ್ಲ. ಈ ಸಮುದಾಯಕ್ಕೆ ಸೇರಿದ ಮಕ್ಕಳು ಇತರ ಜಾತಿಯ ಮಕ್ಕಳ ಜೊತೆಗೆ ಸರಾಗವಾಗಿ ಬೆರೆಯುವುದಿಲ್ಲ. ಪರಿಶಿಷ್ಟ ಜಾತಿಗೆ ಸೇರಿದ ಮಕ್ಕಳು ಮೊದಲು ಶಾಲೆಯಲ್ಲಿ ಯಾವುದೇ ಪಾತ್ರೆಗಳನ್ನು ಮುಟ್ಟುತ್ತಿರಲಿಲ್ಲ. ಆದರೆ ಶಾಲಾ ಬಿಸಿಯೂಟ ಪ್ರಾರಂಭವಾದ ದಿನದಿಂದ ಎಲ್ಲಾ ಮಕ್ಕಳನ್ನು ಒಟ್ಟಿಗೆ ಸೇರಿಸುವ ಪ್ರಯತ್ನ ನಡೆಸಲಾಗುತ್ತಿದೆ. ಆದರೂ ಪರಿಶಿಷ್ಟ ಜಾತಿಯ ಮಕ್ಕಳು ಅಂಜಿಕೊಳ್ಳುತ್ತಾರೆ ಎಂದು ಮೇಲೆ ತಿಳಿಸಿದ ಮೂರು ಶಾಲೆಯ ಶಿಕ್ಷಕರು ಹೇಳುತ್ತಾರೆ. ಅಧ್ಯಯನದ ಮಾದರಿ ಆಯ್ಕೆಯಲ್ಲಿ ಬೇರೆ ಬೇರೆ ಜಾತಿ ವರ್ಗಗಳಿಗೆ ಸೇರಿದ ಪೋಷಕರನ್ನು ನಾವು ಸಂದರ್ಶಿಸಿದಾಗಲೂ ಕೂಡ ಬಹಳಷ್ಟು ಪೋಷಕರು ಅನೇಕ ಕಾರಣ ನೀಡಿ ಬಿಸಿಯೂಟ ವ್ಯವಸ್ಥೆಯನ್ನು ಸ್ವಾಗತಿಸುತ್ತಾರೆ. ಬೆರಳೆಣಿಕೆಯ ಪೋಷಕರು ಮಾತ್ರ ಅವರ ಮಕ್ಕಳು ಇತರ ಜಾತಿಗೆ ಸೇರಿದ ಮಕ್ಕಳ ಜೊತೆಗೆ ಆಹಾರ ಹಂಚಿಕೊಳ್ಳುವುದನ್ನು ವಿರೋಧಿಸುತ್ತಾರೆ.

ಮೇಲಿನ ಎಲ್ಲಾ ಪ್ರತಿಕ್ರಿಯೆಗಳು ಹೇಗೆ ಇದ್ದರೂ, ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ ನಮ್ಮ ಅಧ್ಯಯನಗಳ ಹಿಡಿತಕ್ಕೆ ಸಿಗದೆ ನುಣುಚಿಕೊಳ್ಳಬಹುದಾದ ಜಾತಿಯ ಆಧಾರಿತ ಮತ್ತು ಸಾಮಾಜಿಕ ಪಕ್ಷಪಾತಗಳು ಇರುವುದನ್ನು ತಳ್ಳಿಹಾಕುವಂತಿಲ್ಲ. ಶಾಲಾ ಬಿಸಿಯೂಟದ ಮೇಲೆ ಬಹಿರಂಗವಾದ ವಿರೋಧಗಳು ಬಹಳ ಅಪರೂಪ. ಹೀಗಿದ್ದರೂ ಕೂಡ ಬಿಸಿಯೂಟದಲ್ಲಿ ಇರುವ ಸಣ್ಣ-ಪುಟ್ಟ ತೊಡಕುಗಳನ್ನು ಕಾರಣ ಮಾಡಿ ವಿರೋಧಿಸುವಾಗ ಬೇರೆ ಬೇರೆ ಹಿತಾಸಕ್ತಿಗಳು ಇದರ ಹಿಂದೆ ಕೆಲಸ ಮಾಡುತ್ತವೆ. ಅಲ್ಲದೆ ಈ ಕಾರ್ಯಕ್ರಮದಲ್ಲಿ ಇರುವ ಅನಿಶ್ಚಿತತೆಯನ್ನು ಮೇಲು ಜಾತಿಗೆ ಸೇರಿದ ಪೋಷಕರು ವಿರೋಧಿಸಿರುವುದು ಕೂಡ ಬಹಳ ಅಪರೂಪ. ಆದರೆ ಮೇಲು ಜಾತಿಗೆ ಸೇರಿದ ಕೆಲವು ಪೋಷಕರು ತಮ್ಮ ಮಕ್ಕಳಿಗೆ ಶಾಲೆಗೆ ಬರುವಾಗ ಮಧ್ಯಾಹ್ನದ ಊಟಕ್ಕೆ ಮನೆಗೆ ಬಾ ಅಥವಾ ಊಟದ ಡಬ್ಬಿಯನ್ನು ತೆಗೆದುಕೊಂಡು ಹೋಗು ಎಂದು ಹೇಳುತ್ತಾರೆ. ಈ ಅಭಿಪ್ರಾಯಗಳು ಜಾತಿ ಆಧಾರಿತ ಪೂರ್ವಗ್ರಹಗಳಿಂದ ಕೂಡಿದೆ ಎಂದು ನಿರ್ದಿಷ್ಟವಾಗಿ ಹೇಳಲಾಗದಿದ್ದರೂ ಜಾತಿ ಆಧಾರದಿಂದ ಕೂಡಿದ ಅಂಶಗಳು ಅನೇಕ ಘಟನೆಗಳಲ್ಲಿ ಪ್ರಮುಖ ವಿಷಯವಾಗಿ ಪಾತ್ರವಹಿಸುತ್ತದೆ ಎಂದು ಹೇಳಬಹುದು.

ಕರ್ನಾಟಕ ರಾಜ್ಯದಲ್ಲಿ ಶಾಲಾ ಬಿಸಿಯೂಟಕ್ಕೆ ಅಡಿಗೆಯವರಾಗಿ ನೇಮಕವಾಗಿರುವವರು ಹೆಚ್ಚಿನವರು ದಲಿತರು ಎಂದು ಸರಕಾರಿ ದಾಖಲಾತಿಗಳಿಂದ ತಿಳಿಯುತ್ತದೆ. ಅಲ್ಲದೆ ಇದಕ್ಕೆ ವಿಶಾಲವಾದ ಅರ್ಥದಲ್ಲಿ ಸಾಮಾಜಿಕ ಒಪ್ಪಿಗೆಯೂ ದೊರೆತಿದೆ. ಆದರೆ ದಲಿತರನ್ನು ಅಡಿಗೆಯವರಾಗಿ ಶಾಲೆಗಳಿಗೆ ನೇಮಿಸಿಕೊಳ್ಳುವಾಗ ಮೇಲುಜಾತಿಯವರಿಂದ ಪ್ರತಿರೋಧಗಳು ಕಂಡುಬಂದಿವೆ. ಜುಲೈ ೨೦೦೩ರಲ್ಲಿ ಕರ್ನಾಟಕದ ದಕ್ಷಿಣ ಭಾಗದ ಜಿಲ್ಲೆಗಳಿಗೆ ಶಾಲಾ ಬಿಸಿಯೂಟ ಜಾರಿಗೆ ಬಂದಾಗ, ಈಶಾನ್ಯ ಕರ್ನಾಟಕ ಪ್ರದೇಶದಲ್ಲಿ ಜಾರಿಗೆ ಬಂದ ಸಂದರ್ಭಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಜಾತಿ ಆಧಾರದ ಪೂರ್ವಾಚಾರಗಳು ಬೆಳಕಿಗೆ ಬಂದಿವೆ. ತುಮಕೂರು ಜಿಲ್ಲೆಯ ಚಿಕ್ಕತುರುವೇಕೆರೆ ಶಾಲೆಯಲ್ಲಿ ಮೇಲು ಜಾತಿಗೆ ಸೇರಿದ ಮಕ್ಕಳು ದಲಿತರು ತಯಾರಿಸಿದ ಊಟ ಮಾಡಿದ್ದರಿಂದ ಕೆಲವು ಮಕ್ಕಳಿಗೆ ಜಾತಿ ಪೂರ್ವಾ ಚಾರದಲ್ಲಿ ಶುದ್ಧತೆ ಶಾಸ್ತ್ರವಿಧಿಗಳಿಗೆ ಒಳಪಡಿಸಿದ ಘಟನೆಯೂ ನಡೆದಿದೆ. ದಲಿತ ಮಹಿಳೆಯರನ್ನು ಶಾಲೆಯಲ್ಲಿ ಅಡುಗೆ ಮಾಡಲು ನೇಮಕಮಾಡಿದ ಸಂದರ್ಭದಲ್ಲಿ ಅನೇಕ ಗ್ರಾಮಗಳಲ್ಲಿ ವಿರೋಧಿಸಿದ್ದಿದೆ. ಕೆಲವು ಸಂದರ್ಭಗಳಲ್ಲಿ ಮಕ್ಕಳು ಶಾಲೆಗೆ ಹೋಗದಂತೆ ತಡೆದಿರುವ, ಶಾಲೆಯಿಂದ ಬಿಡಿಸಿರುವ ಘಟನೆಗಳು ನಡೆದಿವೆ (ಪ್ರಜಾವಾಣಿ, ೨೦೦೩).

ನಮ್ಮ ಅಧ್ಯಯನ ಸಂದರ್ಭದಲ್ಲಿ ದಲಿತ ಮಹಿಳೆಯರನ್ನು ಅಡಿಗೆಯವರಾಗಿ ನೇಮಕ ಮಾಡಿಕೊಳ್ಳುವಾಗ ವಿರೋಧಗಳು ಬಹಿರಂಗವಾಗಿ ನಡೆದಿರುವ ಘಟನೆಗಳು ಕಂಡುಬಂದಿಲ್ಲ. ಆದರೆ, ಶಾಲೆಗೆ ನೇಮಕ ಮಾಡಿಕೊಂಡಿರುವ ಮಹಿಳೆಯರು ಬಹುಮಟ್ಟಿಗೆ ದಲಿತರು. ಆದರೆ ಅವರಲ್ಲಿ ಬಹುತೇಕ ಜನರು ಅಸ್ಪೃಶ್ಯ ಜಾತಿಗೆ ಸೇರಿದವರಲ್ಲ. ಅಂದರೆ ಅಸ್ಪೃಶ್ಯತೆಯನ್ನು ಅನುಭವಿಸದೆ ಇರುವ ದಲಿತ ಜನಸಮುದಾಯಕ್ಕೆ ಸೇರಿದವರಾಗಿದ್ದಾರೆ. ಅದರಲ್ಲಿಯೂ ಪರಿಶಿಷ್ಟ ಪಂಗಡದವರಿಗೆ ಸ್ವಲ್ಪ ಮಟ್ಟಿನ ಹೆಚ್ಚಿನ ಆದ್ಯತೆ ದೊರೆತಿದೆ. ಇದರಿಂದ ಸ್ಪಷ್ಟವಾಗುವ ಅಂಶ, ಈಗಲೂ ಸಹ ಗ್ರಾಮಗಳಲ್ಲಿ

ಅಸ್ಪೃಶ್ಯತೆಯ ಬಗ್ಗೆ ಪೂರ್ವಾಚಾರ ಮನೋಭಾವನೆ ಗಟ್ಟಿಯಾಗಿ ಇರುವುದು. ಒಂದು ವೇಳೆ ಅಸ್ಪೃಶ್ಯತೆಯನ್ನು ಅನುಭವಿ ಸುತ್ತಿರುವ ಜಾತಿಗೆ ಸೇರಿದವರನ್ನು ಅಡಿಗೆಯವರಾಗಿ ನೇಮಿಸಿದರೂ ಅವರಿಗೆ ಶಾಲಾ ಅಡಿಗೆಯಲ್ಲಿ ಪ್ರಮುಖ ಕೆಲಸವನ್ನು ಮಾಡುವ ಅವಕಾಶ ಕಲ್ಪಿಸಿಲ್ಲ. ಅಡುಗೆಗೆ ಪೂರಕವಾದ ಕೆಲಸಗಳಾದ ನೀರು ತರುವುದು, ಪಾತ್ರೆ ತೊಳೆಯುವುದು, ಆಹಾರ ಪದಾರ್ಥಗಳ ಸ್ವಚ್ಛತೆ ಮತ್ತು ಪ್ಲೋರ್‌ಮಿಲ್‌ಗೆ ಹೋಗುವುದು ಇತ್ಯಾದಿ ಅಡಿಗೆ ಮನೆಯ ಹೊರಗಿನ ಶ್ರಮ ದಾಯಕ ಕೆಲಸಗಳಿಗೆ ನಿಯೋಜಿಸಲಾಗಿದೆ. ನಾವು ಅಧ್ಯಯನ ಮಾಡಿದ ಶಾಲೆಗಳಲ್ಲಿ ಇರುವ ಒಟ್ಟು ಅಡಿಗೆ ಕೆಲಸದವರಲ್ಲಿ ೫ ಜನ ಮಾತ್ರ ಪರಿಶಿಷ್ಟ ಜಾತಿಗೆ ಸೇರಿದವರು. ಇದರಲ್ಲಿ ಮುಖ್ಯ ಅಡುಗೆಯವರಾಗಿ ಕಾರ್ಯನಿರ್ವಹಿಸುತ್ತಿರುವವರು ಕೇವಲ ಒಬ್ಬರು ಮಾತ್ರ. ಅದು ಬಳದರೆ ಗ್ರಾಮಪಂಚಾಯತಿ ವ್ಯಾಪ್ತಿಯ ಬೆಟ್ಟದಪುರ ಗ್ರಾಮದ ಶಾಲೆಯಲ್ಲಿ. ಇವರು ಪ್ರಮುಖ ಅಡುಗೆಯವರಾಗಿ ಆಯ್ಕೆಯಾಗಿರುವುದು ಈ ಗ್ರಾಮದಲ್ಲಿ ಪರಿಶಿಷ್ಟ ಜಾತಿಗೆ (ಮಾದರ) ಸೇರಿದ ಜನರು ಹೆಚ್ಚಾಗಿ ಇರುವುದರಿಂದಲೇ. ಪ್ರಮುಖ ಅಡಿಗೆಯವರ ಸಂಬಂಧಿಯು ಗ್ರಾಮ ಪಂಚಾಯತಿಯ ಸದಸ್ಯರಾಗಿರುವ ಕಾರಣಕ್ಕಾಗಿ ಆಯ್ಕೆಯಾಗಿದ್ದಾರೆಯೇ. ಇಲ್ಲಿ ಒಂದು ಅಂಶ ಸ್ಪಷ್ಟವಾಗುತ್ತಿದೆ. ಅದೇನೆಂದರೆ ಬೆಟ್ಟದಪುರ ಮುಖ್ಯ ಅಡುಗೆಯವರ ಆಯ್ಕೆಯಲ್ಲಿ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಅಂಶಗಳು ತಮ್ಮದೇ ಪ್ರಭಾವವನ್ನು ಬೀರಿರುವುದು ತಿಳಿದುಬರುತ್ತದೆ.

ಮುರಾರನಹಳ್ಳಿ ಪ್ರಾಥಮಿಕ ಹಿರಿಯ ಶಾಲೆಯಲ್ಲಿ ಮೂವರು ಅಡಿಗೆಯವರು ಇದ್ದಾರೆ. ಇವರಲ್ಲಿ ಪ್ರಮುಖ ಅಡುಗೆಯವರು ಒಕ್ಕಲಿಗ ಜಾತಿಗೆ ಸೇರಿದವರು. ಅಡಿಗೆ ಸಹಾಯಕ-೧ ಕುರುಬ ಜಾತಿಗೆ ಸೇರಿದವರು. ಅಡಿಗೆ ಸಹಾಯಕರು-೨ ಮಾದರ ಜಾತಿಗೆ ಸೇರಿದವರು. ಮುಖ್ಯ ಅಡಿಗೆಯವರು ಸರಿಯಾಗಿ ಅಡಿಗೆ ಕೆಲಸಕ್ಕೆ ಬರುವುದಿಲ್ಲ. ಇದಕ್ಕೆ ಅವರು ಅನಾರೋಗ್ಯ ಕಾರಣ ನೀಡುತ್ತಾರೆ. ಆದರೂ ನಾವು ತಿಂಗಳ ಸಂಬಳವನ್ನು ತಪ್ಪದೆ ಅವರಿಗೆ ನೀಡಬೇಕು ಎಂದು ಶಾಲಾ ಮುಖ್ಯಸ್ಥರು ಮತ್ತು ಶಿಕ್ಷಕರು ಹೇಳುತ್ತಾರೆ. ಇದಕ್ಕೆ ಕಾರಣ ಅವರು ಗ್ರಾಮ ಪಂಚಾಯತಿ ಸದಸ್ಯರ ಸೊಸೆ, ಅವರು ಈ ಭಾಗದಲ್ಲಿ ಎಲ್ಲಾ ರೀತಿಯಿಂದಲೂ ಪ್ರಬಲವಾಗಿದ್ದಾರೆ. ಇವರಿಗೆ ಸುಮಾರು ೨೫ ಎಕರೆಗೂ ಹೆಚ್ಚಿನ ಭೂಮಿ ಇದೆ. ಇವರ ಕುಟುಂಬವು ಈ ಗ್ರಾಮ ಪಂಚಾಯತಿಯಲ್ಲಿ ರಾಜಕೀಯವಾಗಿ ಪ್ರಬಲವಾಗಿದ್ದಾರೆ. ಹೀಗಾಗಿ ಅವರ ಮೇಲೆ ಒತ್ತಡ ಹಾಕಿ ಕೆಲಸಕ್ಕೆ ಸರಿಯಾಗಿ ಬರುವಂತೆ ಹೇಳುವುದು ಬಹಳ ಕಷ್ಟ ಎಂದು ಶಾಲಾ ಮುಖ್ಯಗುರುಗಳು ಹೇಳುತ್ತಾರೆ. ಮುಖ್ಯ ಅಡಿಗೆಯವರ ಕೆಲಸವೂ ಸೇರಿದಂತೆ ಬಹುತೇಕ ಎಲ್ಲಾ ಕೆಲಸಗಳನ್ನು ಉಳಿದ ಇನ್ನಿಬ್ಬರು ಮಾಡುತ್ತಿದ್ದಾರೆ. ಮೊದಲೇ ತಿಳಿಸಿದಂತೆ ಇದರಲ್ಲಿ ಒಬ್ಬರು ಮಾದರ ಜಾತಿಗೆ ಸೇರಿದವರು. ಇವರು ಅಡಿಗೆಗೆ ಸಹಾಯಕವಾದ ಕೆಲಸಗಳನ್ನು ಹೊರತುಪಡಿಸಿ ಬೇರೆ ಯಾವುದೇ ಕೆಲಸಗಳನ್ನು ಮಾಡಲು ಗ್ರಾಮಸ್ಥರು ಬಿಡುತ್ತಿಲ್ಲ. ಹೀಗಾಗಿ ಅವರು ಆಹಾರ ಪದಾರ್ಥಗಳ ಸ್ವಚ್ಛತೆ, ಪ್ಲೋರ್‌ಮಿಲ್‌ಗೆ ಹೋಗುವುದು ಹೊರತುಪಡಿಸಿ, ಅಡಿಗೆಯ ಪಾತ್ರೆಗಳನ್ನು ಅಡುಗೆಯ ಸಂದರ್ಭದಲ್ಲಿ ಮತ್ತು ಪಾತ್ರೆಗಳನ್ನು ತೊಳೆದ ನಂತರ ಮುಟ್ಟುವ ಹಾಗಿಲ್ಲ. ಇದರಿಂದಾಗಿ ಎರಡನೆಯ ಅಡುಗೆ ಸಹಾಯಕರೇ ಎಲ್ಲಾ ಅಡಿಗೆ ಕೆಲಸಗಳನ್ನು ಮಾಡುತ್ತಿರುವುದನ್ನು ನಾವು

ಗುರುತಿಸಿದ್ದೇವೆ. ಈ ಮೇಲಿನ ವಿವರಣೆಯಿಂದ ಸ್ಪಷ್ಟವಾಗುವ ಅಂಶವೆಂದರೆ ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಪ್ರಬಲವಾಗಿರುವ ಸ್ಥಳೀಯರು, ತಮ್ಮ ಕರ್ತವ್ಯಗಳನ್ನು ಸರಿಯಾಗಿ ಮಾಡದಿರುವುದರ ಜೊತೆಗೆ, ತಮ್ಮ ತಮ್ಮ ಜಾತಿಯ ಪ್ರಭಾವ ಬಳಸಿ ಪರಿಶಿಷ್ಟ ಜಾತಿಗೆ ಸೇರಿದ ಮಹಿಳೆ ಅಡಿಗೆ ಕೆಲಸದಲ್ಲಿ ಸಂಪೂರ್ಣವಾಗಿ ಭಾಗಿಯಾಗುತ್ತಿರುವುದನ್ನು ತಡೆಯುತ್ತಿದ್ದಾರೆ.

ಈ ಅಂಶವನ್ನು ಹೆಚ್ಚು ಗಟ್ಟಿಗೊಳಿಸುವ ಇನ್ನೂ ಎರಡು ಘಟನೆಯನ್ನು ನಮ್ಮ ಅಧ್ಯಯನ ಗುರುತಿಸಿದೆ. ಒಂದು, ಬುದ್ದಿನ್ನಿ ಶಾಲೆಗೆ ಒಬ್ಬ ವಿದ್ಯಾವಂತ (ಎಸ್.ಎಸ್. ಎಲ್.ಸಿ.ತೇರ್ಗಡೆಯಾದ) ಮಹಿಳೆಯು ಮುಖ್ಯ ಅಡುಗೆಯವರ ಕೆಲಸಕ್ಕೆ ಅರ್ಜಿಯನ್ನು ಸಲ್ಲಿಸಿದ್ದಾರೆ. ಇವರು ಪರಿಶಿಷ್ಟ ಜಾತಿಯಲ್ಲಿ ಮಾದರ ಸಮುದಾಯಕ್ಕೆ ಸೇರಿದವರು. ಮೊದಲ ಹಂತದಲ್ಲಿ ಇವರಿಗೆ ಮುಖ್ಯ ಅಡುಗೆಯವರ ಕೆಲಸ ನೀಡಬಹುದು ಎಂದು ಮುಖ್ಯ ಗುರುಗಳು ಪ್ರಸ್ತಾವನೆಯನ್ನು ಮಂಡಿಸಿದರು. ಆದರೆ ಎಸ್.ಡಿ.ಎಂ.ಸಿ ಸಮಿತಿ ಸಭೆಯಲ್ಲಿ ಬಹಳಷ್ಟು ಸದಸ್ಯರು ಇದನ್ನು ವಿರೋಧಿಸಿದ್ದಾರೆ. ವಿರೋಧಕ್ಕೆ ನೀಡಿದ ಕಾರಣವನ್ನು ಒಬ್ಬ ಶಿಕ್ಷಕರು ಅನೌಪಚಾರಿಕವಾಗಿ ಚರ್ಚಿಸುವಾಗ ವಿವರಿಸಿದ್ದು ಹೀಗೆ : "ಆಕೆಯು ಪರಿಶಿಷ್ಟ ಜಾತಿಗೆ ಸೇರಿದವವಳು, ಅದರಲ್ಲಿಯೂ ಮಾದರ ಜಾತಿಗೆ ಸೇರಿದವಳು. ಆಕೆಯು ಶಾಲೆಯಲ್ಲಿ ಮಾಡಿದ ಊಟವನ್ನು ನಮ್ಮ ಮಕ್ಕಳು ಊಟ ಮಾಡುವುದು ಹೇಗೆ ಎಂಬ ಅಭಿಪ್ರಾಯನ್ನು ಸಭೆಯಲ್ಲಿ ನಿರೂಪಿಸಿದರು". ಅಲ್ಲದೆ ಹಿಂದುಳಿದವರಿಗೆ ನೀಡಬೇಕು ಎಂಬ ಸರಕಾರದ ಮಾರ್ಗಸೂಚಿ ಬಳಸಿ ಹಿಂದುಳಿದ ಬಾರ್‌ಕೇರ್ ಸಮುದಾಯದವರಿಗೆ ಈ ಕೆಲಸವನ್ನು ನೀಡಬೇಕು ಎಂದು ನಿರ್ಧಾರವನ್ನು ತೆಗೆದುಕೊಂಡರು. ಬಾರ್‌ಕೇರ್ ಸಮುದಾಯ ಆರ್ಥಿಕವಾಗಿ, ರಾಜಕೀಯವಾಗಿ ಹಿಂದುಳಿದವರು. ಆದರೆ ಇವರು ಅಸ್ಪೃಶ್ಯತೆಯನ್ನು ಅನುಭವಿಸಿದ ಸಮುದಾಯವಲ್ಲ. ಇದು ವಿಶೇಷವಾಗಿ ಬಿಸಿಯೂಟ ಅಡಿಗೆಗೆ ಅಸ್ಪೃಶ್ಯರನ್ನು ನೇಮಕ ಮಾಡುವಾಗ ಉಂಟಾದ ವಿರೋಧಗಳಿಗೆ ಅನೇಕ ಗ್ರಾಮಗಳಲ್ಲಿ ಅಸ್ಪೃಶ್ಯರನ್ನು ಕೆಳಮಟ್ಟದಲ್ಲಿ ನೋಡುವ ಮನೋಭಾವನೆ ಅನಿರ್ಬಂಧಿತವಾಗಿರುವುದು ಕಾರಣವಾಗಿದೆ. ಈ ಬಗೆಯ ಜಾತಿ ಆಧಾರಿತ ತಾರತಮ್ಯಗಳು ಮತ್ತು ಅಸಮಾನತೆಗಳು ಕೇವಲ ನಾವು ಅಧ್ಯಯನ ನಡೆಸಿದ ಗ್ರಾಮಗಳಿಗೆ ಮಾತ್ರ ಸೀಮಿತವಾಗಿಲ್ಲ. ಇದು ನಮ್ಮ ಸಮಾಜದಲ್ಲಿ ಅನೂಚಾನವಾಗಿ ನಡೆದು ಬಂದಿರುವ ಪ್ರಕ್ರಿಯೆಯಾಗಿದೆ. ಇದರಿಂದ ಈಗಲಾದರೂ ಹೊರಬರದೆ ಹೋದರೆ, ಬಿಸಿಯೂಟದ ಸಾಮಾಜೀಕರಣ ಉದ್ದೇಶ ಸೋಲುವುದರಲ್ಲಿ ಸಂಶಯವಿಲ್ಲ. ಈ ಕುರಿತು ಹೆಚ್ಚು ನಿರ್ದಿಷ್ಟವಾದ ಅಧ್ಯಯನಗಳನ್ನು ನಾವು ಎದುರು ನೋಡಬೇಕಾಗಿದೆ.

ಅದರೆ ಈ ಎಲ್ಲಾ ಮಹತ್ವದ ಸಂಗತಿಗಳಿಂದ ಬಿಸಿಯೂಟ ಕಾರ್ಯಕ್ರಮವು ಹೊಂದಿರುವ ಸಾಮಾನ್ಯ ಸಾಮಾಜೀಕರಣದ ಮೌಲ್ಯವನ್ನು ಕುಂದಿಸಲಾಗದು. ಉದಾಹರಣೆಗೆ, ಬುಳ್ಳಾಪುರ ಗ್ರಾಮಕ್ಕೆ ಸೇರಿದ 'ಮಾದಪ್ಪ ಅವರ ಪ್ರಕಾರ ಬಿಸಿಯೂಟ ಶಾಲೆಯಲ್ಲಿ ಪ್ರಾರಂಭವಾದಾಗ ಬೇರೆ ಬೇರೆ ಜಾತಿಯವರನ್ನು ಪ್ರತ್ಯೇಕವಾಗಿ ಕೂರಿಸಲಾಗುತ್ತಿತ್ತು. ಇತ್ತೀಚೆಗೆ ಎಲ್ಲಾ ಜಾತಿಯ ಮಕ್ಕಳು ಒಟ್ಟಿಗೆ

ಬಿಸಿಯೂಟವನ್ನು ಸೇವಿಸುತ್ತಿದ್ದಾರೆ ಎಂದು ಹೇಳುತ್ತಾರೆ'. ಈ ತಿಳುವಳಿಕೆಗಳ ಹಿನ್ನೆಲೆಯಲ್ಲಿಯೆ ಮೇಲುಜಾತಿಗೆ ಸೇರಿದ ಕೆಲವು ಸಂಪ್ರದಾಯವಾದಿಗಳು ಉದ್ದೇಶಪೂರ್ವಕವಾಗಿ ಇದನ್ನು ವಿರೋಧಿಸುತ್ತಿದ್ದಾರೆ. ಇಂತಹ ವಿರೋಧಗಳಿಂದ ಹೊರಬರಬೇಕಾದ ಅವಶ್ಯಕತೆ ಇದೆ. ಹಾಗೂ ಇದು ಹೆಚ್ಚು ಮೌಲ್ಯಯುತವಾದುದು. ಕಾಲಾಂತರದಲ್ಲಿ ಜಾತಿ ಆಧಾರಿತ ಅಡ್ಡಿ ಆತಂಕಗಳು ಅಥವಾ ರೂಢಿಗಳು ಅತ್ಯಂತ ವೇಗವಾಗಿ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳದಿದ್ದರೆ ಸಾಂಪ್ರದಾಯಿಕ ಜಾತಿ ವ್ಯವಸ್ಥೆಯಲ್ಲಿ ನಂಬಿಕೆ ಇರುವ, ಮೂಲಭೂತ ಸಂಪ್ರದಾಯವಾದಿಗಳಿಗೆ ಹೆಚ್ಚು ಅವಕಾಶ ನೀಡಿದಂತೆ ಆಗುತ್ತದೆ. ಈ ಎಲ್ಲಾ ಚರ್ಚೆಯು ಕೇವಲ ಜಾತಿಗೆ ಮಾತ್ರ ಸೀಮಿತವಾಗಿರದೆ ಎಲ್ಲಾ ಧರ್ಮಗಳಿಗೂ ಕೂಡ ಅನ್ವಯಿಸುತ್ತದೆ. ಇತ್ತೀಚಿನ ದಿನಗಳಲ್ಲಿ ದೇಶಾದ್ಯಂತ ಕೋಮುಭಾವನೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಬೇರೆ ಬೇರೆ ಧರ್ಮ, ಜಾತಿಗೆ ಸೇರಿದ ಮಕ್ಕಳು ಒಟ್ಟಿಗೆ ಕಲಿಯುವ ಮತ್ತು ಒಂದೇ ಬಗೆಯ ಆಹಾರವನ್ನು ಹಂಚಿಕೊಂಡು ಊಟ ಮಾಡುವ ಮೌಲ್ಯವನ್ನು ಬೋಧಿಸುವುದು ಅತ್ಯಂತ ಮಹತ್ವದ್ದಾಗಿದೆ.

ಶಾಲಾ ಬಿಸಿಯೂಟವು ಒಂದುಕಡೆ ಜಾತಿ ಪೂರ್ವಾಚಾರಗಳನ್ನು ಕಡಿಮೆಗೊಳಿಸಲು ಸಹಾಯಕವಾಗುವುದರ ಜೊತೆಗೆ ಲಿಂಗ ಸಮಾನತೆಯ ಬೆಳವಣಿಗೆಗೂ ತನ್ನದೇ ಆದ ಕೊಡುಗೆಯನ್ನು ನೀಡುತ್ತಿದೆ. ಈ ಕಾರ್ಯಕ್ರಮ ಜಾರಿಗೆ ಬಂದ ನಂತರ ಶಾಲಾ ಹಾಜರಾತಿಯಲ್ಲಿ ಅದರಲ್ಲಿಯೂ ಹೆಣ್ಣುಮಕ್ಕಳ ಹಾಜರಾತಿಯಲ್ಲಿ ಉಂಟಾಗಿರುವ ಹೆಚ್ಚಳದ ಮೂಲಕ ಪ್ರಾಥಮಿಕ ಶಿಕ್ಷಣದಲ್ಲಿ ಇರುವ ಲಿಂಗ ಅಸಮಾನತೆಯನ್ನು ಕಡಿಮೆಗೊಳಿಸಲು ಇದು ಸಹಕಾರಿಯಾಗಿದೆ ಎಂಬುದನ್ನು ಈಗಾಗಲೇ ನಡೆದಿರುವ ಅಧ್ಯಯನಗಳು ಗುರುತಿಸಿವೆ. (ಜೀನ್ ಡ್ರೀಜ್, ೨೦೦೩; ಡ್ರೀಜ್ ಮತ್ತು ಗೋಯಲ್, ೨೦೦೩; ಭಾನುಪ್ರಿಯ ರಾವ್, ೨೦೦೩; ಸರಸ್ವತಿ ರಾವ್, ೨೦೦೨; ರವಿ, ೨೦೦೩; ಬಾರಧ್ವಾಜ್, ೨೦೦೩; ಸೀತಿ, ೨೦೦೩). ಅನೇಕ ಸ್ಥಿರವಾದ ಆಧಾರಗಳು ಸೂಚಿಸುವುದೇನೆಂದರೆ, ಶಾಲಾ ಪ್ರೋತ್ಸಾಹಕ ಕಾರ್ಯಕ್ರಮಗಳಿಂದ ಹೆಣ್ಣುಮಕ್ಕಳ ಶಿಕ್ಷಣವು ಗಂಡು ಮಕ್ಕಳ ಶಿಕ್ಷಣಕ್ಕಿಂತಲೂ ಹೆಚ್ಚು ಪ್ರಗತಿದಾಯಕವಾಗಿದೆ. ಪ್ರೋಬ್ ಅಧ್ಯಯನ ಗುರುತಿಸುವಂತೆ "ಪೋಷಕರು ಸಾಮಾನ್ಯವಾಗಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ವಿರೋಧಿಸುವುದಿಲ್ಲ, ಆದರೆ ಅವರಿಗೆ ಹೆಣ್ಣುಮಕ್ಕಳ ಶಿಕ್ಷಣಕ್ಕೆ ವೆಚ್ಚ ಮಾಡುವುದಕ್ಕೆ ಒಲವಿಲ್ಲ. ಇಂತಹ ಸ್ಥಿತಿ ಇರುವಲ್ಲಿ ಶಾಲಾ ಬಿಸಿಯೂಟವು ಪೋಷಕರ ಶಾಲಾ ವೆಚ್ಚವನ್ನು ಕಡಿಮೆಗೊಳಿಸುವ ಮೂಲಕ ಲಿಂಗ ಸಮಾನತೆಯಲ್ಲಿ ಬಹಳ ದೊಡ್ಡ ವ್ಯತ್ಯಾಸವನ್ನು ಹುಟ್ಟಿಹಾಕಿದೆ" (ಪ್ರೋಬ್, ೧೯೯೯; ಪ್ರಶಾಂತ್, ೨೦೦೪).

ಗ್ರಾಮೀಣ ಪ್ರದೇಶಗಳಲ್ಲಿ ಬಡಕುಟುಂಬಗಳ ಮಹಿಳೆಯರಿಗೆ ಉದ್ಯೋಗದ ಅವಕಾಶವನ್ನು ಒದಗಿಸುವ ಮೂಲಕ ಶಾಲಾ ಬಿಸಿಯೂಟವು ಮತ್ತೊಂದು ರೀತಿಯಲ್ಲಿ ಲಿಂಗ ಸಮಾನತೆಯನ್ನು ಹುಟ್ಟುಹಾಕುವಲ್ಲಿ ಸಹಕಾರಿಯಾಗಿದೆ. ಸಿ.ಇ.ಎಸ್ ಅಧ್ಯಯನ ತಂಡವು ಸಮೀಕ್ಷೆ ನಡೆಸಿದ ಶೇಕಡ ೬೮ ರಷ್ಟು ಶಾಲೆಗಳಲ್ಲಿ ಅಡುಗೆಯವರು ಮಹಿಳೆಯರು. ಇವರು ಬಹುಮಟ್ಟಿಗೆ ಸೌಲಭ್ಯವಂಚಿತ

ಹಿನ್ನೆಲೆಯಿಂದ ಬಂದವರು. ಇದು ಅಚ್ಚರಿಯ ವಿಷಯವಲ್ಲ. ಕೆಲವು ಶಾಲೆಗಳಲ್ಲಿ ಕೆಲಸ ಹೆಚ್ಚಾಗಿದ್ದು, ಸಂಬಳ ಬಹಳ ಕಡಿಮೆ ಇದೆ. ಜೊತೆಗೆ ಬಿಸಿಯೂಟ ಕಾರ್ಯಕ್ರಮದ ಮಾರ್ಗಸೂಚಿಯ ಪ್ರಕಾರ ರಾಜ್ಯಗಳು ಅಡಿಗೆಯವರನ್ನು ನೇಮಕ ಮಾಡಿಕೊಳ್ಳುವಾಗ ಅವಕಾಶ ವಂಚಿತ ಸಮುದಾಯದಿಂದ ಬಂದವರಿಗೆ ಆದ್ಯತೆ ನೀಡಬೇಕೆಂದು ಕೇಂದ್ರ ಸರಕಾರ ಸೂಚಿಸಿದೆ. ಕರ್ನಾಟಕದಲ್ಲಿ ಇದಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ಮಾರ್ಗಸೂಚಿಯನ್ನು ಈಗಾಗಲೇ ನೀಡಲಾಗಿದೆ (ಕರ್ನಾಟಕ ಸರ್ಕಾರ, ೨೦೦೨). ಸಿ.ಇ.ಎಸ್ ಅಧ್ಯಯನ ನಡೆಸಿದ ಶಾಲೆಗಳಲ್ಲಿ ಅಡಿಗೆ ಮಾಡುವವರು ಎಲ್ಲರೂ ಮಹಿಳೆಯರು. ಇದರಲ್ಲಿ ಶೇಕಡ ೫೦ರಷ್ಟು ದಲಿತ ಮಹಿಳೆಯರು, ಶೇಕಡ ೨೫ರಷ್ಟು ವಿಧವೆಯಾಗಿರುವ ಮಹಿಳೆಯರು ಇದ್ದಾರೆ (ಜೀನ್ ಡ್ರೀಜ್ ಮತ್ತು ಗೋಯಲ್, ೨೦೦೩; ಪ್ರಶಾಂತ್, ೨೦೦೪).

ನಾವು ಅಧ್ಯಯನ ನಡೆಸಿದ ೨೪ ಶಾಲೆಗಳಲ್ಲಿ ಒಟ್ಟು ೫೧ ಜನ ಅಡಿಗೆ ಕೆಲಸದವರು ಇದ್ದಾರೆ. ಇವರುಗಳಲ್ಲಿ ಎಲ್ಲರೂ ಮಹಿಳೆಯರು. ಇದರಲ್ಲಿ ೧೫ ಜನರು ಕುರುಬ ಜನಸಮು ದಾಯಕ್ಕೆ, ೧೦ ಜನ ಒಕ್ಕಲಿಗ ಜನಸಮುದಾಯದ ವಿವಿಧ ಒಳಪಂಗಡಗಳಿಗೆ (ಗಂಗಟಕಾರ-ದಾಸ-ಸರ್ಪ ಇತ್ಯಾದಿ) ಸೇರಿದ್ದಾರೆ. ೧೨ ಜನ ಪರಿಶಿಷ್ಟ ಪಂಗಡದ ವಿವಿಧ ಜನಸಮುದಾಯಕ್ಕೆ (ವಾಲ್ಮೀಕಿ, ನಾಯಕ, ಬೇಡ, ಓಲೆಕಾರ, ಇತ್ಯಾದಿ) ಸೇರಿದವರಾಗಿದ್ದಾರೆ, ೬ ಜನ ಪರಿಶಿಷ್ಟ ಜಾತಿ ಜನಸಮುದಾಯಕ್ಕೆ (ಮಾದರ್, ಚಲವಾದಿ, ಬೇಗಾರ್, ಇತ್ಯಾದಿ) ಸೇರಿದವರು. ಉಳಿದ ೮ ಜನರಲ್ಲಿ ಇಬ್ಬರು ಮುಸ್ಲಿಂ ಜನಸಮು ದಾಯಕ್ಕೆ, ಮೂವರು ಲಿಂಗಾಯಿತ ಜನಸಮುದಾಯಕ್ಕೆ, ಇಬ್ಬರು ಬೇಸ್ತ ಜನಸಮುದಾಯಕ್ಕೆ ಮತ್ತು ಒಬ್ಬರು ಗಾಣಿಗ ಜನಸಮುದಾಯಕ್ಕೆ ಸೇರಿದವರಾಗಿದ್ದಾರೆ. ಇವರಲ್ಲಿ ಒಕ್ಕಲಿಗ ಸಮುದಾಯಕ್ಕೆ ಸೇರಿದ ಇಬ್ಬರು ಮುಖ್ಯ ಅಡುಗೆ ಕೆಲಸದವರು, ಕೃಷಿ ಭೂಮಿ ಹೊಂದಿದ್ದಾರೆ. ಒಂದು ಕುಟುಂಬವು ೨೫ ಎಕರೆ ಕೃಷಿ ಭೂಮಿಯನ್ನು, ಮತ್ತೊಂದು ಕುಟುಂಬವು ೧೨ ಎಕರೆ ಕೃಷಿ ಭೂಮಿಯನ್ನು ಹೊಂದಿವೆ. ಇದೇ ಜನಸಮುದಾಯಕ್ಕೆ ಸೇರಿದ ೪ ಜನ ಮಹಿಳೆಯ ಕುಟುಂಬಗಳು ೫ ಎಕರೆಗಿಂತ ಹೆಚ್ಚಿನ ಕೃಷಿ ಭೂಮಿಯನ್ನು ಹೊಂದಿವೆ. ಕುರುಬ ಜನಸಮುದಾಯಕ್ಕೆ ಸೇರಿದ ೬ ಕುಟುಂಬಗಳು ೫ ಎಕರೆಗಿಂತ ಹೆಚ್ಚಿನ ಕೃಷಿ ಭೂಮಿಯನ್ನು ಹೊಂದಿವೆ. ಉಪ್ಪಾರ ಜನಸಮುದಾಯಕ್ಕೆ ಸೇರಿದ ಎಲ್ಲಾ ೩ ಕುಟುಂಬಗಳು ೪ ರಿಂದ ೫ ಎಕರೆ ಕೃಷಿ ಭೂಮಿಯನ್ನು ಹೊಂದಿವೆ. ಬಾರ್‌ಕೇರ್ ಜನಸಮು ದಾಯಕ್ಕೆ ಸೇರಿದ ಎರಡು ಕುಟುಂಬದಲ್ಲಿ ಒಂದು ಕುಟುಂಬವು ೬ ಎಕರೆ ಕೃಷಿ ಭೂಮಿಯನ್ನು ಹೊಂದಿದೆ. ಈ ಕುಟುಂಬಗಳನ್ನು ಹೊರತು ಪಡಿಸಿದರೆ, ಬೇರೆ ಎಲ್ಲ ಅಡಿಗೆಯವರ ಕುಟುಂಬಗಳು ೨ ಎಕರೆ ಮತ್ತು ಅದಕ್ಕಿಂತಲೂ ಕಡಿಮೆ ಕೃಷಿ ಭೂಮಿಯನ್ನು ಹೊಂದಿವೆ. ವಿಶೇಷವೆಂದರೆ ಪರಿಶಿಷ್ಟ ಪಂಗಡಕ್ಕೆ ಸೇರಿದ ೧೨ ಕುಟುಂಬಗಳಲ್ಲಿ ೪ ಕುಟುಂಬಗಳಿಗೆ ಮಾತ್ರ ಕೃಷಿ ಭೂಮಿ ಇದೆ. ಉಳಿದ ೮ ಕುಟುಂಬಗಳಿಗೆ ಮತ್ತು ಪರಿಶಿಷ್ಟ ಜಾತಿಗೆ ಸೇರಿದ ಎಲ್ಲಾ ೫ ಅಡಿಗೆಯವರ ಕುಟುಂಬಗಳು ಯಾವುದೇ ರೀತಿ ಕೃಷಿ ಭೂಮಿ ಹೊಂದಿಲ್ಲ. ಇಲ್ಲಿ ಎರಡು ಅಂಶಗಳು ಸ್ಪಷ್ಟವಾಗುತ್ತವೆ. ಒಂದು ಮೇಲುಜಾತಿಗೆ ಸೇರಿದ ಅಡಿಗೆಯವರ ಕುಟುಂಬಗಳು ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ಕೃಷಿ ಭೂಮಿ ಹೊಂದಿರುವುದು. ಎರಡು,

ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ, ಹಾಗೂ ಇತರ ಕೆಲವು ಹಿಂದುಳಿದ ಜಾತಿಗಳಿಗೆ ಸೇರಿದ ಅಡಿಗೆಯವರ ಕುಟುಂಬಗಳು ಅತ್ಯಂತ ಕಡಿಮೆ ಪ್ರಮಾಣದ ಕೃಷಿ ಭೂಮಿ ಹೊಂದಿರುವುದು. ಎರಡನೆಯ ಅಂಶಕ್ಕೆ ಸೇರಿದ ಕುಟುಂಬಗಳು ಹಾಗೂ ಭೂರಹಿತ ಕುಟುಂಬಗಳು ಕೃಷಿ ಕೂಲಿ ಹಾಗೂ ಇತರ ಕೂಲಿಯನ್ನು ಜೀವನಕ್ಕಾಗಿ ಆಶ್ರಯಿಸಿವೆ. ಇಂತಹ ಕುಟುಂಬಗಳ ಸದಸ್ಯರು ಹೆಚ್ಚಿನ ಮಳೆಯಾಗದೇ ಕೂಲಿ ಅಥವಾ ಕೃಷಿ ಕೂಲಿ ಸ್ಥಳೀಯವಾಗಿ ದೊರಕದೆ ಹೋದರೆ, ರತ್ನಗಿರಿ, ಗೋವಾ, ಕಾರವಾರ, ಮಂಗಳೂರು, ಮುಂಬೈ, ಮಡಿಕೇರಿ, ಹಾಸನ ಮುಂತಾದ ಸ್ಥಳಗಳಿಗೆ ದುಡಿಯಲು ಹೋಗುತ್ತಾರೆ. ಅದರಲ್ಲಿಯೂ ೨೦೦೬, ೨೦೦೭ ಮತ್ತು ೨೦೦೮ರ ನಿರಂತರ ಬರ ಈ ಭಾಗದ ಭೂರಹಿತ ಕುಟುಂಬಗಳನ್ನು ಮತ್ತು ಕೃಷಿ ಕಾರ್ಮಿಕರನ್ನು ಬಸವಳಿಯುವಂತೆ ಮಾಡಿದೆ. ಈ ಮೇಲಿನ ವಿವರಣೆಯಿಂದ ಸ್ಪಷ್ಟವಾಗುವ ಅಂಶವೆಂದರೆ, ನಾವು ಅಧ್ಯಯನ ನಡೆಸಿದ ಗ್ರಾಮಗಳ ಗ್ರಾಮಸ್ಥರಿಗೆ ದುಡಿಯಲು ಇರುವುದು ಪ್ರಮುಖವಾಗಿ ಎರಡೇ ಅವಕಾಶಗಳು. ಒಂದು ಕೃಷಿ ಮತ್ತು ಕೃಷಿ ಕೂಲಿಗಳಾಗಿ ದುಡಿಯುವುದು. ಮತ್ತೊಂದು ಇತರ ಸಣ್ಣ-ಪುಟ್ಟ ಕೂಲಿ ಮಾಡುವುದು. ಇವುಗಳನ್ನು ಹೊರತುಪಡಿಸಿ ಬೇರೆ ಯಾವುದೇ ದುಡಿಯುವ ಅವಕಾಶಗಳು ಈ ಭಾಗದ ಗ್ರಾಮೀಣ ಪ್ರದೇಶದಲ್ಲಿ ನಮಗೆ ನೋಡಲು ಸಿಗುವುದಿಲ್ಲ.

ನಾವು ಅಧ್ಯಯನಕ್ಕೆ ಒಳಪಡಿಸಿದ ಶಾಲೆಗಳಲ್ಲಿ ಅಡುಗೆ ಕೆಲಸಗಳಿಗೆ ನೇಮಕವಾಗಿರುವ ಒಟ್ಟು ೫೧ ಮಹಿಳೆಯರಲ್ಲಿ, (೧೭) ಶೇಕಡ ೩೩.೩ರಷ್ಟು ಮಹಿಳೆಯರು ವಿಧವೆಯರು. ಇವರಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿದವರು ಆರು ಮಹಿಳೆಯರು, ಪರಿಶಿಷ್ಟ ಜಾತಿಗೆ ಸೇರಿದ ಮಹಿಳೆಯ ಸಂಖ್ಯೆ ಮೂರು ಮತ್ತು ಇತರ ಜಾತಿಗಳಿಗೆ ಸೇರಿದ ಮಹಿಳೆಯರ ಸಂಖ್ಯೆ ಎಂಟು. ಇದಲ್ಲದೆ ವಿಚ್ಛೇದನ ಪಡೆಯದೆ ಗಂಡಂದಿರಿಂದ ದೂರವಾಗಿರುವ ಮಹಿಳೆಯರ ಸಂಖ್ಯೆ ಒಟ್ಟು ಎಂಟು. ಇವರಲ್ಲಿ ವಿವಿಧ ಜಾತಿಗೆ ಸೇರಿದ ಮಹಿಳೆಯರ ಸಂಖ್ಯೆ ನಾಲ್ಕು. ಈ ಎಲ್ಲಾ ವಿವರಣೆಯಿಂದ ನಮಗೆ ಅಡಿಗೆ ಕೆಲಸದವರ ವೈವಾಹಿಕ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿ ತಿಳಿಯುತ್ತದೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಅಡಿಗೆಯವರ ಆರ್ಥಿಕ ಸ್ಥಿತಿಯನ್ನು ಕುರಿತು ಅವರುಗಳ ಜೊತೆ ಚರ್ಚೆ ನಡೆಸಿದೆವು. ಆ ಸಂದರ್ಭದಲ್ಲಿ ನೀವು ಬಿಸಿಯೂಟದ ಕೆಲಸಕ್ಕೆ ಸೇರಿದನಂತರ ನಿಮ್ಮ ಆರ್ಥಿಕ ಸ್ಥಿತಿ ಸುಧಾರಣೆಯಾಗಿಯೇ ಎಂಬ ಪ್ರಶ್ನೆಗೆ ಸುಧಾರಣೆಯಾಗಿದೆ ಎಂದು ಶೇಕಡ ೮೪.೩೧ರಷ್ಟು ಮಹಿಳೆಯರು (ಸಂಖ್ಯೆ ೪೩) ಹೇಳಿದ್ದಾರೆ. ಯಾವುದೇ ಸುಧಾರಣೆಯಾಗಿಲ್ಲ ಎಂದು ಶೇಕಡ ೧೫.೬೮ರಷ್ಟು ಮಹಿಳೆಯರು (ಸಂಖ್ಯೆ ಕೇವಲ ೮) ಹೇಳಿದ್ದಾರೆ. ಹೀಗೆ ಹೇಳಿದ ಎಲ್ಲಾ ಮಹಿಳೆಯರು ಮೇಲುಜಾತಿಗೆ (ಲಿಂಗಾಯತ) ಸೇರಿದವರಾಗಿದ್ದಾರೆ. ನಮ್ಮ ಆರ್ಥಿಕ ಸ್ಥಿತಿ ಸುಧಾರಣೆಯಾಗಿದೆ ಎಂದು ಹೇಳಿದ ಬಹುತೇಕ ಮಹಿಳೆಯರು ತಳಜಾತಿಗೆ ಮತ್ತು ತಳವರ್ಗಕ್ಕೆ ಸೇರಿದವರು. ಆ ಮಹಿಳೆಯರ ಮಾತುಗಳಲ್ಲೇ ಹೇಳುವುದಾದರೆ, ಈ ಕೆಲಸ ನಮಗೆ ದೊರೆತ ನಂತರ ತಿಂಗಳಿಗೆ ಅಷ್ಟು ಇಷ್ಟು ಸಂಬಳ ಅಂತ ಬರುತ್ತಾಯಿದೆ. ಶಾಲೆ ನಡೆಯುವ ದಿನಗಳಲ್ಲಿ ನಾವು ಶಾಲೆಯಲ್ಲಿಯೇ ಊಟ

ಮಾಡುತ್ತೇವೆ. ಈ ಸಂಬಳ ಬರುವುದಕ್ಕೆ ಮೊದಲು ಚಿಕ್ಕಪುಟ್ಟ ಖರ್ಚುಗಳಿಗೆ ನಮ್ಮ ಗಂಡಂದಿರ ಮುಂದೆ ಕೈ ಚಾಚಬೇಕಾಗಿತ್ತು. ಹಾಗೆ ನೋಡಿದರೆ ನಮ್ಮ ಪರಿಸ್ಥಿತಿ ಈಗ (ಅಡಿಗೆ ಕೆಲಸ ದೊರೆತ ನಂತರ) ನಿಜವಾಗಲೂ ಬದಲಾಗಿದೆ ಎಂದು ಹೇಳುತ್ತಾರೆ. ಆದರೆ ಇವರೆಲ್ಲರಲ್ಲಿ ಒಂದು ಕೊರಗಿದೆ, ಅದೇನೆಂದರೆ ಸಂಬಳ ಸಾಕಾಗುವುದಿಲ್ಲ, ಸಂಬಳವನ್ನು ಸ್ವಲ್ಪ ಹೆಚ್ಚಿಸಬೇಕು ಎಂಬುದು. ಇದೇನೇ ಇದ್ದರೂ, ಈ ಕಾರ್ಯಕ್ರಮ ಜಾರಿಗೆ ಬಂದ ನಂತರ, ಕುಟುಂಬದಲ್ಲಿ ಯಾವುದೇ ಆದಾಯದ ಮೂಲಗಳಿಲ್ಲದ ಮತ್ತು ಕುಟುಂಬದಿಂದ ಯಾವುದೇ ಬೆಂಬಲವಿಲ್ಲದ ಅಸಹಾಯಕ ಮಹಿಳೆಯರಿಗೆ ಈ ಕೆಲಸ ಒಂದು ರೀತಿಯಲ್ಲಿ ಆದಾಯದ ಮೂಲವಾಗಿದ್ದರೆ, ಮತ್ತೊಂದು ರೀತಿಯಲ್ಲಿ ಸಾಮಾಜಿಕ ರಕ್ಷಣೆಯಂತಿದೆ. ನಿರ್ದಿಷ್ಟವಾಗಿ ಗಂಡಂದಿರಿಂದ ದೂರ ಇರುವ ಮತ್ತು ವಿಧವೆಯರಾದ ಮಹಿಳೆಯರಿಗೆ ಬಿಸಿಯೂಟದ ಕೆಲಸ ಬೆಂಬಲವಾಗಿದೆ. ಇದು ಎಷ್ಟು ಜನರಿಗೆ ಎಂಬುದು ಬೇರೆ ಪ್ರಶ್ನೆ. ಆದರೆ ಪ್ರತಿ ಗ್ರಾಮದಲ್ಲಿ ಬೆರಳೆಣಿಕೆಯ ಮಹಿಳೆಯರಿಗೆ ಸಹಕಾರಿಯಾಗಿರುವುದು ವಾಸ್ತವ. ನಿರ್ದಿಷ್ಟವಾಗಿ ಬಿಸಿಯೂಟ ಅಡುಗೆಯವರ ಆರ್ಥಿಕ ಸ್ಥಿತಿ, ಕುಟುಂಬಗಳ ಒಳಗೆ ಮತ್ತು ಹೊರಗೆ ಅವರ ಸ್ಥಾನ ಸುಧಾರಿಸಿದೆ ಎಂಬುದನ್ನು ಹೇಳಲಾಗದಿದ್ದರೂ ಇದು ಲಿಂಗಸಮಾನತೆಯ ಬೆಳವಣಿಗೆಗೆ ಪೂರಕವಾಗಿದೆ ಎಂದು ಸ್ಪಷ್ಟವಾಗಿ ಹೇಳಬಹುದು.

ಶಾಲಾ ಬಿಸಿಯೂಟದಿಂದ ಉಂಟಾಗಿರುವ ಮತ್ತೊಂದು ಪೂರಕ ಪರಿಣಾಮವೆಂದರೆ, ಕೃಷಿ ಕೂಲಿಗಳಾಗಿ ಅಥವಾ ಕೂಲಿಗಳಾಗಿ ಮನೆಯಿಂದ ಹೊರಗೆ ಹೋಗಿ ದುಡಿಯುವ ಮಹಿಳೆಯರನ್ನು ಸ್ವಲ್ಪಮಟ್ಟಿಗೆ ಬಂಧ ಮುಕ್ತಿಗೊಳಿಸಿದೆ. ಈ ವಿಷಯ ಯಾವುದೇ ಆರ್ಥಿಕ ಸ್ಥಿತಿ ಅಥವಾ ಜನ ಸಮುದಾಯಕ್ಕೆ ಸೇರಿದ್ದಲ್ಲ. ಏಕೆಂದರೆ ನಾವು ಅಧ್ಯಯನ ನಡೆಸಿದ ಎಲ್ಲಾ ಹಳ್ಳಿಗಳಲ್ಲಿ ಪ್ರಮುಖ ವೃತ್ತಿ ಕೃಷಿ ಮತ್ತು ಕೃಷಿ ಕೂಲಿ. ದುಡಿಮೆಯ ಉದ್ದೇಶದಿಂದ ಬಹುತೇಕ ಮಹಿಳೆಯರು ಪ್ರತಿದಿನ ಹೊರಗೆ ಹೋಗುತ್ತಾರೆ. ಕೃಷಿ ಚಟುವಟಿಕೆಗಳು ಹೆಚ್ಚಾಗಿ ನಡೆಯುತ್ತಿರುವ ಸಂದರ್ಭದಲ್ಲಿ ಕುಟುಂಬದ ಎಲ್ಲಾ ಸದಸ್ಯರು ದುಡಿಯಲು ಮನೆಯಿಂದ ಹೊರಗೆ ಹೋಗುತ್ತಾರೆ. ಮಹಿಳೆಯರು ಮಧ್ಯಾಹ್ನ ಅಥವಾ ಸಂಜೆ ಕೂಲಿಯಿಂದ ಅಥವಾ ದುಡಿಮೆಯಿಂದ ಬೇಗ ಬಂದು ಶಾಲೆಯಿಂದ ಬರುವ ಮಕ್ಕಳಿಗೆ ಆಹಾರ ತಯಾರಿಸುವ ಕೆಲಸ ಮಾಡಬೇಕಾಗಿತ್ತು. ಶಾಲೆಗಳಲ್ಲಿ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ದೊರೆಯಲು ಪ್ರಾರಂಭಿಸಿದ ನಂತರ, ತಾಯಂದಿರು ಮಕ್ಕಳಿಗೆ ಮಧ್ಯಾಹ್ನ ಮನೆಯಲ್ಲಿ ಆಹಾರವನ್ನು ನೀಡಿ ಪೋಷಿಸಬೇಕಾದ ಕೆಲಸದಿಂದ ಸ್ವಲ್ಪ ಮುಕ್ತಿಯನ್ನು ಹೊಂದಿದ್ದಾರೆ. ಈ ಗುಣಲಕ್ಷಣವು ವಿಶೇಷವಾಗಿ ವಿಧವೆಯರಾಗಿ ಮನೆಯಲ್ಲಿ ಯಾವುದೇ ಬೆಂಬಲವಿಲ್ಲದೆ, ಮನೆಯಿಂದ ಹೊರಗೆ ಹೋಗಿ ದುಡಿಯುವ ಮಹಿಳೆಯರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಹೆಚ್ಚು ಸಹಕಾರಿಯಾಗಿದೆ. ಚಿಂಚರಕಿ ಗ್ರಾಮದ ಪರಿಶಿಷ್ಟ ಜಾತಿಗೆ ಸೇರಿದ ಫಕೀರವ್ವ ಚಲವಾದಿ ಎಂಬ ಮಹಿಳೆಯ ಪ್ರಕಾರ "ನಮ್ಮ ಮನೆಯಲ್ಲಿ ನಾನು ಮತ್ತು ನಮ್ಮ ಯಜಮಾನರು ಕೂಲಿಗೆ ಬೇರೆಯವರ ಹೊಲಕ್ಕೆ ದುಡಿಯಲು ಹೊರಗೆ ಹೋಗುತ್ತೇವೆ. ಹೀಗಾಗಿ ಮಧ್ಯಾಹ್ನ ಮನೆಗೆ ಬಂದು ಶಾಲೆಗೆ ಹೋಗುವ ಮಕ್ಕಳನ್ನು ನೋಡಿಕೊಳ್ಳಲು

ಸಮಯವಿಲ್ಲ, ಮಕ್ಕಳನ್ನು ನೋಡಿಕೊಳ್ಳಲು ಯಾರಾದರೂ ಒಬ್ಬರು ಬಂದು ಹೋಗಬೇಕಾಗಿತ್ತು ಅಥವಾ ದುಡಿಮೆಯಿಂದ ಸಂಜೆ ಬೇಗನೆ ಬರಬೇಕಾಗಿತ್ತು. ಆದರೆ ಬಿಸಿಯೂಟ ಶಾಲೆಯಲ್ಲಿ ಪ್ರಾರಂಭವಾದ ನಂತರ ಮಕ್ಕಳು ಶಾಲೆಯಿಂದ ಹಸಿದು ಬರುತ್ತಾರೆ ಎಂಬ ಆತಂಕ ಇಲ್ಲವಾಗಿದೆ ಮತ್ತು ಮಧ್ಯದಲ್ಲಿ ಬಂದು ಮಕ್ಕಳಿಗೆ ಅಡಿಗೆಯನ್ನು ಬೇಗನೆ ಮಾಡುವ ಆತಂಕವಿಲ್ಲ" ಎಂದು ವಿವರಿಸುತ್ತಾರೆ. ಹೀಗೆ ಬಿಸಿಯೂಟದಿಂದ ಅನೇಕ ಕೊಡುಗೆಗಳೂ ಇದ್ದರೂ ನಮ್ಮ ಹಿಡಿತಕ್ಕೆ ಸಿಗದ ಅನೇಕ ಬಗೆಯ ಅಸಮಾನತೆಯ ಆಚರಣೆಗಳು ಇವೆ. ಈ ಕುರಿತು ಹೆಚ್ಚು ಅಧ್ಯಯನಗಳ ಮತ್ತು ಸಾರ್ವಜನಿಕ ಚರ್ಚೆಯ ಅವಶ್ಯಕತೆ ಇದೆ.

ಅಧ್ಯಾಯ ಆರು

ಸಮಾರೋಪ ಮತ್ತು ಅಧ್ಯಯನದ ಫಲಿತಗಳು

ಅಧ್ಯಾಯ ಆರು

ಸಮಾರೋಪ ಮತ್ತು ಅಧ್ಯಯನದ ಫಲಿತಗಳು

ಈ ಅಧ್ಯಾಯದಲ್ಲಿ ನಮ್ಮ ಅಧ್ಯಯನದ ಸಂದರ್ಭದಲ್ಲಿ ಕಂಡುಕೊಂಡ ವಿಷಯಗಳನ್ನು ಸಂಕ್ಷಿಪ್ತವಾಗಿ ವಿಶ್ಲೇಷಣೆ ಮಾಡಲಾಗಿದೆ. ಅಂದರೆ ಪ್ರಸ್ತಾಪಿತ ಐದು ಅಧ್ಯಾಯಗಳಿಗೆ ಅನುಗುಣವಾಗಿ ವಿಷಯಗಳನ್ನು ವಿಶ್ಲೇಷಣೆ ಮಾಡುವುದರ ಜೊತೆಗೆ, ಅಧ್ಯಯನ ಸಮಯದಲ್ಲಿ/ಕ್ಷೇತ್ರ ಕಾರ್ಯದಲ್ಲಿ ನಾವು ನೋಡಿದ ವಿಷಯಗಳನ್ನು, ಆ ವಿಷಯದ ಸ್ಥಳೀಯ ರಾಜಕೀಯ ಆರ್ಥಿಕತೆಯನ್ನು ಚರ್ಚಿಸಲು ಪ್ರಯತ್ನಮಾಡಲಾಗಿದೆ.

ನಮ್ಮ ಅಧ್ಯಯನವು ಸಾಕ್ಷರತೆಗೆ ಸಂಬಂಧಿಸಿದಂತೆ ಕಂಡುಕೊಂಡಿರುವ ವಿಷಯಗಳು ಈ ಕೆಳಕಂಡಂತೆ ಇವೆ. ರಾಷ್ಟ್ರ ಮತ್ತು ರಾಜ್ಯದ ಸಾಕ್ಷರತೆಯ ಲಕ್ಷಣವಾದ ಪುರುಷರ ಮತ್ತು ಮಹಿಳೆಯರ ನಡುವಿನ ಸಾಕ್ಷರತೆಯ ಅಂತರವು ನಾವು ಅಧ್ಯಯನ ನಡೆಸಿದ ಪ್ರದೇಶದಲ್ಲಿಯೂ ಇದೆ. ಆದರೆ ರಾಷ್ಟ್ರ ಮತ್ತು ರಾಜ್ಯದ ಮಟ್ಟದಲ್ಲಿ ಸಾಕ್ಷರತೆಯಲ್ಲಿ ಇರುವ ಲಿಂಗತಾರತಮ್ಯ ಅಂತರ ವಿಶಾಲವಾಗಿದ್ದರೂ, ಗ್ರಾಮ ಮಟ್ಟದಲ್ಲಿ ಈ ತಾರತಮ್ಯ ಅತ್ಯಧಿಕವಾಗಿದೆ ಎಂಬುದನ್ನು ನಮ್ಮ ಅಧ್ಯಯನ ಸಾಬೀತು ಪಡಿಸುತ್ತದೆ. ಇದನ್ನು ಒಂದು ಉದಾಹರಣೆಯ ಮೂಲಕ ಸಾದರಪಡಿಸಬಹುದು. ನಾವು ಅಧ್ಯಯನ ನಡೆಸಿದ ಗ್ರಾಮಗಳಲ್ಲಿ ಅತ್ಯಧಿಕ ಪುರುಷರ ಸಾಕ್ಷರತೆ ಶೇಕಡ ೮೨.೪ ರಷ್ಟು ಮುದ್ದನಹಳ್ಳಿ ಗ್ರಾಮದಲ್ಲಿದ್ದರೆ, ಮಹಿಳೆಯರ ಅತ್ಯಧಿಕ ಸಾಕ್ಷರತೆ ಶೇಕಡ ೬೨.೩ರಷ್ಟು ಅದೇ ಗ್ರಾಮದಲ್ಲಿದೆ. ಇಲ್ಲಿ ಇವೆರಡರ ನಡುವಿನ ಸಾಕ್ಷರತೆಯಲ್ಲಿ ಲಿಂಗತಾರತಮ್ಯ ಶೇಕಡ ೨೦.೧ ಅಂಶಗಳಷ್ಟಿದೆ. ನಾವು ಅಧ್ಯಯನ ನಡೆಸಿದ ಗ್ರಾಮಗಳಲ್ಲಿ ಮತ್ತು ಗ್ರಾಮಪಂಚಾಯತಿಗಳಲ್ಲಿ ಮಹಿಳೆಯರ ಸಾಕ್ಷರತೆ ನಿರುತ್ಸಾಹದಾಯಕವಾಗಿದೆ. ನಾವು ಅಧ್ಯಯನ

ನಡೆಸಿದ ಗ್ರಾಮಗಳಲ್ಲಿ ನಾವು ಕಂಡುಕೊಂಡ ಮತ್ತೊಂದು ಪ್ರಮುಖ ಅಂಶವೆಂದರೆ ಮಹಿಳೆಯರ ಸಾಕ್ಷರತೆಗೂ ಮಕ್ಕಳ ಶಾಲಾ ಭಾಗವಹಿಸುವಿಕೆಗೂ ನೇರವಾದ ಸಂಬಂಧವಿದೆ ಎಂಬುದು. ಅಧ್ಯಯನಕ್ಕೆ ಒಳಪಡಿಸಿದ ಕುಟುಂಬಗಳಲ್ಲಿ ಯಾವ ಕುಟುಂಬದಲ್ಲಿ ಮಹಿಳೆಯರ ಸಾಕ್ಷರತೆ ಉತ್ತಮವಾಗಿದೆಯೋ, ಆ ಕುಟುಂಬಗಳಲ್ಲಿ ಮಕ್ಕಳು ಶಾಲೆಯಿಂದ ಹೊರಗಿರುವ ಪ್ರಮಾಣ ಕಡಿಮೆ. ಜೊತೆಗೆ ಆ ಕುಟುಂಬಗಳಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ವಿಶೇಷವಾದ ಆದ್ಯತೆ ನೀಡಿರುವುದು ತಿಳಿದುಬರುತ್ತದೆ. ಒಟ್ಟಾರೆ ಹೇಳುವುದಾದರೆ, ಸಾಮಾನ್ಯವಾಗಿ ಸಾಕ್ಷರತೆ ಉತ್ತಮವಾಗಿರುವ ಪ್ರದೇಶ ಮತ್ತು ಕುಟುಂಬದಲ್ಲಿ ಮಕ್ಕಳ ಶಿಕ್ಷಣಕ್ಕೆ ವಿಶೇಷವಾದ ಒತ್ತು ನೀಡಿರುವುದು ಕಂಡು ಬರುತ್ತದೆ. ಹೀಗಾಗಿ ಮಹಿಳಾ ಶಿಕ್ಷಣದಿಂದ ಉಂಟಾಗುವ ಅನುಕೂಲಗಳನ್ನು ಶೈಕ್ಷಣಿಕವಾಗಿ ಹಿನ್ನೆಡೆಯಲ್ಲಿರುವ ಸ್ಥಳೀಯರಿಗೆ ತಿಳಿಸಿಕೊಡುವ ಪ್ರಯತ್ನಗಳು ಇನ್ನೂ ಹೆಚ್ಚು ಹೆಚ್ಚು ನಡೆಯಬೇಕಾಗಿದೆ. ಅಲ್ಲದೆ, ಗ್ರಾಮ ಮಟ್ಟದಲ್ಲಿ ಮಹಿಳೆಯರ ಶಿಕ್ಷಣ ಕುರಿತಂತೆ ಸಾಕ್ಷರತೆಯ ಸಾಮಾಜಿಕ ಆಯಾಮ ಕುರಿತು ಇನ್ನೂ ಹೆಚ್ಚಿನ ಅಧ್ಯಯನಗಳನ್ನು ನಾವು ಎದುರು ನೋಡಬೇಕಾಗಿದೆ.

ಕರ್ನಾಟಕದ ಗ್ರಾಮೀಣ ಪ್ರದೇಶದ ಒಟ್ಟು ಸಾಕ್ಷರತೆಗಿಂತ ಸ್ವಲ್ಪ ಹೆಚ್ಚಿನ ಸಾಕ್ಷರತೆ ಸಾಧಿಸಿರುವ ನಾಲ್ಕು ಗ್ರಾಮಗಳು ಬಳದರೆ ಗ್ರಾಮಪಂಚಾಯತಿಯಲ್ಲಿ ಸಿಗುತ್ತವೆ. ಇದಕ್ಕೆ ಈ ಗ್ರಾಮಗಳು ಚಿಕ್ಕದಾಗಿರುವುದು ಕಾರಣವೋ, ಒಂದೇ ಜಾತಿಗೆ ಸೇರಿದ ಕುಟುಂಬಗಳು ಹೆಚ್ಚಾಗಿರುವುದು ಕಾರಣವೋ, ಈ ಗ್ರಾಮಗಳ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರು ಕಡಿಮೆ ಇರುವುದು ಕಾರಣವೋ, ಎಂಬುದನ್ನು ನಮ್ಮ ಅಧ್ಯಯನ ನಿಖರವಾಗಿ ಗುರುತಿಸದೇ ಇದ್ದರೂ ಮೇಲೆ ತಿಳಿಸಿದ ನಾಲ್ಕು ಗ್ರಾಮಗಳಲ್ಲಿ ಕೃಷಿಗೆ ಸಂಬಂಧಿಸಿದ ಚಟುವಟಿಕೆ ಹೆಚ್ಚು ಪ್ರಬಲವಾಗಿರುವುದು, ಜೊತೆಗೆ ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಪ್ರಬಲವಾಗಿರುವವರ ಜನಸಮುದಾಯ ಹೆಚ್ಚಾಗಿರುವುದರಿಂದ ಈ ಗ್ರಾಮಗಳ ಸಾಕ್ಷರತಾ ಪರಿಸರ ಉತ್ತಮವಾಗಿರುವುದಕ್ಕೆ ಕಾರಣವಾಗಿದೆ ಎಂಬುದನ್ನು ಹೇಳಬಹುದು. ಈ ಗ್ರಾಮಗಳಲ್ಲಿ ಬಹುತೇಕ ಜನರು ಕೃಷಿಯ ಜೊತೆಗೆ ಇತರ ಕೌಶಲ್ಯರಹಿತ ದುಡಿಮೆಯನ್ನು ಅವಲಂಬಿಸಿದ್ದಾರೆ. ಅವೆಂದರೆ ಗಾರೆಕೆಲಸ, ಕಟ್ಟಡದ ಕೆಲಸ, ಕೂಲಿ, ಡ್ರೈವರ್, ಮ್ಯಾಕಾನಿಕ್, ವಾಚ್‌ಮ್ಯಾನ್ ಇತ್ಯಾದಿ. ಇವುಗಳಲ್ಲಿ ಯಾವ ಅಂಶ ಆ ಗ್ರಾಮಗಳ ಸಾಕ್ಷರತೆಯನ್ನು ಪ್ರಭಾವಿಸಿದೆ ಎಂಬುದನ್ನು ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಆದರೆ ಭೂ-ರಹಿತ, ಕೃಷಿಯೇತರ, ಕುಶಲ ರಹಿತ ದುಡಿಮೆ ಹಾಗೂ ಕೆಲವು ಸಾಮಾಜಿಕ ಅಂಶಗಳು ತಮ್ಮದೇ ಆದ ಪ್ರಭಾವ ಮತ್ತು ಪರಿಣಾಮಗಳನ್ನು ಈ ಗ್ರಾಮಗಳ ಸಾಕ್ಷರತೆ ಬೆಳವಣಿಗೆಯ ಮೇಲೆ ಬೀರಿರುವ ಸಾಧ್ಯತೆ ಇದೆ. ಹೀಗಾಗಿ ಈ ವಿಷಯ ಕುರಿತು ಗ್ರಾಮಮಟ್ಟದಲ್ಲಿ ಇನ್ನೂ ಹೆಚ್ಚಿನ ಅಧ್ಯಯನಗಳನ್ನು ನಾವು ಎದುರು ನೋಡಬೇಕಾಗಿದೆ. ಆದರೆ ಸಾಕ್ಷರತೆಯಲ್ಲಿ ಅತಿ ಹಿಂದುಳಿದಿರುವ ಗ್ರಾಮಗಳಲ್ಲಿ ಮಹಿಳೆಯರ ಶೈಕ್ಷಣಿಕ ಅಭಿವೃದ್ಧಿಗೆ, ಗ್ರಾಮ ಮಟ್ಟದಲ್ಲಿ ಸ್ಥಳೀಯರ ಜೊತೆ ಸೇರಿ ಸ್ಥಳೀಯ ಸರ್ಕಾರಗಳು ತುರ್ತುಕ್ರಮಗಳನ್ನು ಜಾರಿಗೊಳಿಸಬೇಕಾಗಿದೆ.

ನಾವು ಅಧ್ಯಯನಕ್ಕೊಳಪಡಿಸಿದ ಗ್ರಾಮಗಳಲ್ಲಿ ೦೬-೧೪ ವಯೋಮಾನದ ದಲಿತ ಗಂಡು ಮಕ್ಕಳಿಗೆ ಹೋಲಿಸಿದರೆ, ದಲಿತ ಹೆಣ್ಣುಮಕ್ಕಳ ಶಾಲಾ ಭಾಗವಹಿಸುವಿಕೆಯು ಅಸಮಾನತೆಯಿಂದ ಕೂಡಿರುತ್ತದೆ. ವಿವಿಧ ಶೈಕ್ಷಣಿಕ ಅಭಿವೃದ್ಧಿ ಕಾರ್ಯಯೋಜನೆಗಳ ಅನುಷ್ಠಾನ ಮತ್ತು ಇತರೆ ಅಂಶಗಳಿಂದಾಗಿ ಇತ್ತೀಚಿನ ವರ್ಷಗಳಲ್ಲಿ ಹೆಣ್ಣುಮಕ್ಕಳ ಶಾಲಾ ಭಾಗವಹಿಸುವಿಕೆ ಹೆಚ್ಚಾಗಿದೆ. ಆದರೆ ಗಂಡು ಮಕ್ಕಳು ಮತ್ತು ಹೆಣ್ಣುಮಕ್ಕಳ ಶಾಲಾ ಭಾಗವಹಿಸುವಿಕೆಗಳ ನಡುವಿನ ಅಂತರ ಮಾತ್ರ ನಿರೀಕ್ಷಿತ ಮಟ್ಟದಲ್ಲಿ ಕಡಿಮೆಯಾಗದಿರುವುದು ತಿಳಿದುಬರುತ್ತದೆ. ಅಧ್ಯಯನಕ್ಕೊಳಪಡಿಸಿದ ಬಹುತೇಕ ದಲಿತ ಪೋಷಕರು, ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುವುದು ಅವಶ್ಯಕವೆಂದು ಒಪ್ಪಿಕೊಳ್ಳುತ್ತಾರೆ. ಆದರೆ ಬಡತನ ರೇಖೆಗಿಂತ ಕೆಳಗಿರುವ ದಲಿತ ಕುಟುಂಬಗಳ ಹೆಣ್ಣುಮಕ್ಕಳು ಹೆಚ್ಚಾಗಿ ಶಾಲೆಯಿಂದ ಹೊರಗಿರುವುದು ಕಂಡುಬರುತ್ತದೆ. ಬಡತನ ರೇಖೆಗಿಂತ ಕೆಳಗಿರುವ ದಲಿತ ಕುಟುಂಬಗಳ ಆದಾಯದಲ್ಲಿನ ವ್ಯತ್ಯಾಸಗಳಿಂದಾಗಿ ಜೀವನ ನಿರ್ವಹಣೆ ಕಷ್ಟವಾದಾಗ, ತಮ್ಮ ಮಕ್ಕಳ ಶಿಕ್ಷಣದ ವೆಚ್ಚವನ್ನು ಭರಿಸಲಾಗದ ಸ್ಥಿತಿಯಲ್ಲಿ ಪೋಷಕರು ದುಡಿಮೆಗಾಗಿ ವಲಸೆ ಹೋಗುತ್ತಾರೆ. ಇಂತಹ ಸಂದರ್ಭದಲ್ಲಿ ದಲಿತ ಮಕ್ಕಳು ಅದರಲ್ಲಿಯೂ ಹೆಣ್ಣುಮಕ್ಕಳು ಶಾಲಾ ಶಿಕ್ಷಣದಿಂದ ದೂರವಾಗುತ್ತಾರೆ ಎಂಬುದು ಹೀರಾ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ನಮ್ಮ ಗಮನಕ್ಕೆ ಹೆಚ್ಚಾಗಿ ಕಂಡುಬಂದಿರುತ್ತದೆ.

ಅಧ್ಯಯನಕ್ಕೆ ಒಳಪಡಿಸಿದ ಎರಡು ಗ್ರಾಮಪಂಚಾಯಿತಿ ವ್ಯಾಪ್ತಿಯ ಕೆಲವು ಗ್ರಾಮಗಳಲ್ಲಿ ಶೇಕಡ ೩೧ರಷ್ಟು ದಲಿತ ಪೋಷಕರು ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಅಸಹಾಯಕತೆ ವ್ಯಕ್ತಪಡಿಸಿರುತ್ತಾರೆ. ನಿಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವಿರಾ? ಎಂದು ಬಡತನ ರೇಖೆಗಿಂತ ಕೆಳಗಿರುವ ಕೆಲವು ಪೋಷಕರನ್ನು ಪ್ರಶ್ನಿಸಿದಾಗ, ಮಕ್ಕಳನ್ನು ಶಾಲೆಗೆ ಕಳಿಸಿದರೆ ಏನು ಉಪಯೋಗ? ಅವರನ್ನು ಕೂಲಿ ಕೆಲಸಕ್ಕೆ ಕಳಿಸಿದರೆ ಒಬ್ಬರಿಗೆ ಒಂದು ದಿನಕ್ಕೆ ೭೦ ರಿಂದ ೧೦೦ ರೂಪಾಯಿ ಹಣ ಸಿಗುತ್ತದೆ, ಬಡವರಾದ ನಮಗೆ ಜೀವನ ಮಾಡಲು ಅನುಕೂಲವಾಗುತ್ತದೆ. ಆದರೆ ಮಕ್ಕಳನ್ನು ಎಷ್ಟೇ ಓದಿಸಿದರೂ ವ್ಯರ್ಥವೆಂಬ ಉತ್ತರ ಲಭ್ಯವಾಗಿದೆ. ಆ ಸಂದರ್ಭದಲ್ಲಿ ಬಡತನದಲ್ಲಿರುವ ಪೋಷಕರಿಗೆ ತಮ್ಮ ಜೀವನ ನಿರ್ವಹಣೆಗಾಗಿ ತಮ್ಮ ಮಕ್ಕಳ ದುಡಿಮೆಯನ್ನು ಅವಲಂಬಿಸಿರುವುದು ಮುಖ್ಯವಾಗಿ ಕಂಡುಬರುತ್ತದೆ. ಹಾಗಾಗಿ ತಮ್ಮ ಮಕ್ಕಳ ಬದುಕಿನ ಅಥವಾ ಭವಿಷ್ಯದ ದೃಷ್ಟಿಯಿಂದ ಆ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕೆಂಬ ಮುಂದಾಲೋಚನೆ ಪೋಷಕರಿಗೆ ಕಡಿಮೆ ಇರುವುದನ್ನು ಕ್ಷೇತ್ರಕಾರ್ಯದಲ್ಲಿ ಗಮನಿಸಲಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಪೋಷಕರಿಗೆ ಕೂಲಿಗಾಗಿ ಕಾಳು, ಎನ್.ಆರ್.ಇ.ಜಿ.ಪಿ. ಅಥವಾ ಉದ್ಯೋಗ ಖಾತ್ರಿಯಂತಹ ಹಾಗೂ ಭಾರತ್ ನಿರ್ಮಾಣ ಯೋಜನೆಗಳ ಅಡಿಯಲ್ಲಿ ಉದ್ಯೋಗಗಳನ್ನು ಮತ್ತು ಸೌಲಭ್ಯಗಳನ್ನು ಒದಗಿಸಿದರೆ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವ ಸಾಧ್ಯತೆಗಳಿರುತ್ತವೆ.

ಸರ್ಕಾರದ ಅಂಕಿ ಅಂಶಗಳು ಸೇರಿದಂತೆ ಶೈಕ್ಷಣಿಕ ಸಮೀಕ್ಷೆಗಳು, ರಾಜ್ಯ ಮತ್ತು ರಾಷ್ಟ್ರಮಟ್ಟದ ಶೈಕ್ಷಣಿಕ ಅಧ್ಯಯನಗಳು ಎಲ್ಲರಿಗೂ ಶಾಲೆಗಳು ಲಭಿಸುತ್ತವೆ ಎಂದು ಗುರುತಿಸುತ್ತವೆ. ಇವೆಲ್ಲವುಗಳ ಪ್ರಕಾರ ಗ್ರಾಮೀಣ ಪ್ರದೇಶದ ಹೆಚ್ಚಿನ ಕುಟುಂಬಗಳಿಗೆ ಸುಲಭವಾದ ದೂರದಲ್ಲಿಯೇ ಪ್ರಾಥಮಿಕ

ಶಾಲೆಗಳು ಲಭಿಸುತ್ತವೆ. ಆದರೆ ಇಡೀ ರಾಷ್ಟ್ರಮಟ್ಟದಲ್ಲಿ ನೋಡಿದಾಗ ಶೇಕಡ ೭೦ರಷ್ಟು ಗ್ರಾಮಗಳಲ್ಲಿ ಮಾಧ್ಯಮಿಕ ಶಾಲೆಗಳೇ ಇಲ್ಲವೆಂಬುದು ಬಹಳ ಗಂಭೀರವಾದ ಅಂಶವಾಗುತ್ತದೆ. ಇಂತಹ ಸ್ಥಿತಿಯಲ್ಲಿ ಗ್ರಾಮೀಣ ಭಾಗದ ಪೋಷಕರು ತಮ್ಮ ಮಕ್ಕಳನ್ನು ಅದರಲ್ಲಿಯೂ ವಿಶೇಷವಾಗಿ ಹೆಣ್ಣುಮಕ್ಕಳನ್ನು ಪಕ್ಕದ ಇನ್ನೊಂದು ಗ್ರಾಮದಲ್ಲಿರುವ ಶಾಲೆಗೆ ಕಳುಹಿಸಲು ಇಷ್ಟಪಡುವುದಿಲ್ಲ. ಹಾಗಾಗಿ ೫, ೬, ಮತ್ತು ೭ನೇತರಗತಿಯ ನಂತರದಲ್ಲಿ ಗ್ರಾಮೀಣ ಪ್ರದೇಶದ ಹೆಚ್ಚಿನ ಪ್ರಮಾಣದ ಹೆಣ್ಣುಮಕ್ಕಳು ಶಾಲೆಗೆ ಹೋಗುವ ಆಸಕ್ತಿ ಇದ್ದರೂ ಪೋಷಕರ ಇಚ್ಛೆಗೆ ವಿರುದ್ಧವಾಗಿ ಶಾಲೆಗೆ ಹೋಗಲಾರದ ಸ್ಥಿತಿ ನಮ್ಮ ಅಧ್ಯಯನ ಕ್ಷೇತ್ರದಲ್ಲಿ ಇರುತ್ತದೆ. ಆದರೆ ಮುಂಬರುವ ದಿನಗಳಲ್ಲಿ ಈ ಪರಿಸ್ಥಿತಿಯನ್ನು ಶಿಕ್ಷಣ ಅಭಿಯಾನ ಕಾರ್ಯಕ್ರಮಗಳ ಮೂಲಕವಾದರೂ ಬದಲಾಯಿಸಬಹುದಾದ ಸಾಧ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ.

ಕೆಲವು ಆಡಳಿತಶಾಹಿ ವರ್ಗ, ಅಧಿಕಾರದಲ್ಲಿ ಇರುವವರು ಮತ್ತು ಯೋಜನಾಕಾರರು ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ನಗರ ಪ್ರದೇಶದಲ್ಲಿರುವ ಕೊಳಚೆ ಪ್ರದೇಶದಲ್ಲಿ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಆಸಕ್ತಿ ಹೊಂದಿಲ್ಲ ಎಂಬ ನಂಬಿಕೆಯನ್ನು ಹೊಂದ್ದಿದಾರೆ. ಅಲ್ಲದೆ ಬಡವರು ತಮ್ಮ ಮಕ್ಕಳನ್ನು ಶಾಲೆಗೆ ನೊಂದಾಯಿಸಿರುವುದು ಕೇವಲ ಸೌಲಭ್ಯವನ್ನು ಪಡೆದುಕೊಳ್ಳಲು ಮಾತ್ರ ಎಂಬ ಆಡಳಿತಶಾಹಿಗಳಿಗೆ ವಿರುದ್ಧವಾದ ಅಂಶವು ನಮ್ಮ ಅಧ್ಯಯನದಲ್ಲಿ ಕಂಡುಬರುತ್ತದೆ. ಅಂದರೆ ಪೋಷಕರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಲು ಹೆಚ್ಚಿನ ಆಸಕ್ತಿ ಹೊಂದಿದ್ದಾರೆ. ಅಲ್ಲದೆ ಆಧುನಿಕ ಸಮಾಜದಲ್ಲಿ ಯಾರೂ ಶಿಕ್ಷಣವನ್ನು ಕಡೆಗಣಿಸಲಾಗುವುದಿಲ್ಲ ಎಂದು ಬಹುತೇಕ ಪೋಷಕರು ಅಭಿಪ್ರಾಯಪಡುತ್ತಾರೆ. ಈ ರೀತಿಯ ಮನೋಭಾವನೆಯಲ್ಲಿ ವಿವಿಧ ಸಾಮಾಜಿಕ ಆರ್ಥಿಕ ಗುಂಪಿನ ಪೋಷಕರ ನಡುವೆ ಅಷ್ಟೇನೂ ವ್ಯತ್ಯಾಸಗಳು ಕಂಡುಬರುವುದಿಲ್ಲ. ಆದರೆ ಬಾಲಕ-ಬಾಲಕಿಯರಿಗೆ ಶಿಕ್ಷಣ ನೀಡುವಾಗ ವ್ಯತ್ಯಾಸಗಳು ಕಂಡುಬಂದಿವೆ. ಬಹುತೇಕ ಪೋಷಕರು ಗಂಡು ಮಗುವಿಗೆ ಶಿಕ್ಷಣ ನೀಡಲು ಹೆಚ್ಚಿನ ಕಾಳಜಿ ಹೊಂದಿದ್ದಾರೆ. ಅದೇ ಆಸಕ್ತಿಯನ್ನು ಹೆಣ್ಣು ಮಗುವಿನ ಶಿಕ್ಷಣದ ಬಗ್ಗೆ ಹೊಂದಿಲ್ಲ. ಇದರ ಅರ್ಥ ಪೋಷಕರು ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡಲು ಆಸಕ್ತಿ ಹೊಂದಿಲ್ಲವೆಂದು ಅಲ್ಲ. ಬಹುತೇಕ ಪೋಷಕರು ಮಕ್ಕಳ ಶಿಕ್ಷಣಕ್ಕೆ ಮಾಡುವ ವೆಚ್ಚವನ್ನು ಆದಾಯ ಹೆಚ್ಚಿಸುವ ಸಾಧನವಾಗಿ, ಅಂದರೆ ಶಿಕ್ಷಣಕ್ಕೆ ಇರುವ ಆರ್ಥಿಕ ಮೌಲ್ಯಕ್ಕೆ ಹೆಚ್ಚಿನ ಮಹತ್ವ ನೀಡಿ ಅದನ್ನು ಉಪಕರಣವಾದಿ ನೆಲೆಯಲ್ಲಿ ನೋಡುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿಯೇ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದು ಕೇವಲ ಹಣದ ವ್ಯಯ ಎಂದು ಕೆಲವರು ಭಾವಿಸಿದ್ದಾರೆ. ಇದಕ್ಕೆ ಪೋಷಕರು ನೀಡುವ ಬಹುತೇಕ ಕಾರಣಗಳು ಸಾಮಾಜಿಕವಾದವು. ಅವುಗಳಲ್ಲಿ ಪ್ರಮುಖವಾದದ್ದು ಅವಳ ಶಿಕ್ಷಣವನ್ನು ಮದುವೆಯ ದೃಷ್ಟಿಯಿಂದ ನೋಡುವುದು ಅಥವಾ ಜಾತಿಯ ದೃಷ್ಟಿಯಿಂದ ನೋಡುವುದು ಅಥವಾ ಅವರ ರಕ್ಷಣೆಯ ದೃಷ್ಟಿಯಿಂದ ನೋಡುವುದು. ಮತ್ತೊಂದು ಬಹಳ ಸಂಕೀರ್ಣವಾದ ವಿಷಯವೆಂದರೆ, ಪುರುಷರಿಗಿಂತ ಮಹಿಳೆಯರಿಗೆ ಉದ್ಯೋಗ

ಅವಕಾಶಗಳು ಬಹಳ ಸೀಮಿತವಾಗಿರುವುದು ಎಂದು ಬಹುತೇಕರು ಭಾವಿಸಿದ್ದಾರೆ. ಈ ಬಗೆಯ ಸಾಮಾಜಿಕ ಒಪ್ಪಂದಗಳಲ್ಲಿ ಅನೇಕ ಬದಲಾವಣೆಗಳಾಗಿದ್ದರೂ, ಇನ್ನೂ ಬಹುತೇಕರು ಸಾಮಾಜಿಕ ಒಪ್ಪಂದಗಳಿಂದ ಮುಂದಕ್ಕೆ ಹೆಣ್ಣುಮಕ್ಕಳ ಶಿಕ್ಷಣವನ್ನು ನೋಡಬೇಕಾದ ಅಗತ್ಯವಿದೆ.

ನಮ್ಮ ಅಧ್ಯಯನದ ಸಂದರ್ಭದಲ್ಲಿ ಬೆರಳೆಣಿಕೆ ಪ್ರಮಾಣದ ಪೋಷಕರು ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಸಕಾರಾತ್ಮಕವಾಗಿ ಚಿಂತಿಸಿದ್ದಾರೆ. ಇಲ್ಲಿ ನಮಗೆ ಸ್ಪಷ್ಟವಾಗುವ ಅಂಶವೆಂದರೆ, ಹೆಣ್ಣುಮಕ್ಕಳ ಶಿಕ್ಷಣಕ್ಕೆ ಇರುವ ವಿರೋಧಗಳು ಕೇವಲ ಪೋಷಕರಿಂದಲೇ ಹುಟ್ಟಿಕೊಂಡಿರುವಂತವುಗಳಲ್ಲ. ಇದು ಆರ್ಥಿಕ-ಸಾಮಾಜಿಕ ಹಾಗೂ ಸಾಂಸ್ಕೃತಿಕವಾದದ್ದು. ಅಂದರೆ ಒಪ್ಪಿತ ಸಾಂಸ್ಕೃತಿಕ ನಡವಳಿಕೆಗಳು ಹೆಣ್ಣುಮಕ್ಕಳ ಶಿಕ್ಷಣದ ಬೆಳವಣಿಗೆಯ ಮೇಲೆ ತನ್ನ ಪ್ರಭಾವವನ್ನು ಬೀರುತ್ತಿದೆ ಎಂಬದು ಇಲ್ಲಿ ಸ್ಪಷ್ಟ ಹೀಗಾಗಿ ಹೆಣ್ಣುಮಕ್ಕಳ ಶಿಕ್ಷಣ ಕುರಿತು ಇರುವ ಸಕಾರಾತ್ಮಕ ಮನೋಭಾವನೆಯು ಕೇವಲ ವೈಯಕ್ತಿಕ ಮಟ್ಟದಲ್ಲಿ ಹೆಚ್ಚಳವಾದರೆ ಸಾಲದು, ಸಾಂಸ್ಥಿಕ ಹಾಗೂ ಸಾಮಾಜಿಕ ಮಟ್ಟದಲ್ಲಿಯು ಬದಲಾಗಬೇಕಾದ ಅಗತ್ಯವಿದೆ.

ಶಾಲಾವ್ಯವಸ್ಥೆ ಮತ್ತು ಶೈಕ್ಷಣಿಕ ಭರವಸೆಗಳಿಗೆ ಸಂಬಂಧಿಸಿದಂತೆ ಗುಣಮಟ್ಟದ ಶಿಕ್ಷಣ ಪರಿಕಲ್ಪನೆಯನ್ನು ಸಮಾಜೋ-ಆರ್ಥಿಕ ಅಂಶಗಳು ಪ್ರಭಾವಿಸುತ್ತಿವೆ ಎಂಬುದನ್ನು ನಮ್ಮ ಅಧ್ಯಯನ ಸ್ಪಷ್ಟವಾಗಿ ಗುರುತಿಸಿದೆ. ಆದರೆ ಪೋಷಕರು ಶಿಕ್ಷಣದ ಬಗ್ಗೆ ಹೊಂದಿರುವ ಮನೋಭಾವದ ಪ್ರಮಾಣವು ಪೋಷಕರಿಂದ ಪೋಷಕರಿಗೆ ವ್ಯತ್ಯಾಸವಾಗುತ್ತದೆ. ಶಿಕ್ಷಣ ಮತ್ತು ಶಾಲಾವ್ಯವಸ್ಥೆಯನ್ನು ಕುರಿತ ಪೋಷಕರ ಆರೋಪಗಳು ಒಂದು ರೀತಿಯಲ್ಲಿ ಮುಗಿಯದ ಕಥೆ ಎಂದು ಭಾವಿಸಿದರೂ ಶಾಲಾ ವ್ಯವಸ್ಥೆಯಲ್ಲಿ ಇರುವ ನಿಷ್ಫಲತೆ ಇದಕ್ಕೆ ಪ್ರಮುಖ ಕಾರಣ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ.

ಇನ್ನು ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿನ ನಿರುತ್ಸಾಹಕ ಅಂಶವು ಪೋಷಕರ ಮೇಲೆ ಅಥವಾ ಮಕ್ಕಳ ಮೇಲೆ ತನ್ನ ಪ್ರಭಾವವನ್ನು ಬೀರಿದರೂ ಇದರ ಪರಿಣಾಮ ಹೆಚ್ಚಾಗಿ ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಕಂಡುಬರುವುದು. ಅದರಲ್ಲಿಯೂ ನಿರ್ದಿಷ್ಟವಾಗಿ ಹೇಳುವುದಾದರೆ ಶಾಲಾ ಚಟುವಟಿಕೆಯಲ್ಲಿ ನಿರ್ದಿಷ್ಟ ಪ್ರಮಾಣದ ಕಲಿಕೆ ನಡೆಯದೇ ಇರುವ ಶಾಲೆಗಳಿರುವ ಪ್ರದೇಶ ಅಥವಾ ಗ್ರಾಮಗಳಲ್ಲಿ ಇದು ಹೆಚ್ಚಾಗಿ ಕಂಡುಬರುತ್ತದೆ. ಆದರೆ ಒಂದು ಅಂಶವನ್ನು ನಾವು ಇಲ್ಲಿ ಸ್ಪಷ್ಟಪಡಿಸಿಕೊಳ್ಳಬೇಕು. ಅದೇನೆಂದರೆ, ಪೋಷಕರ ನಿರುತ್ಸಾಹದ ಮಾತುಗಳು ಸಾಮಾನ್ಯವಾಗಿ ತಳಜಾತಿ-ವರ್ಗದ ಜನರನ್ನು ಹೆಚ್ಚು ಘಾಸಿಗೊಳಿಸುತ್ತಿದೆ. ಹೀಗಾಗಿ ಅನಕ್ಷರಸ್ಥ ಪೋಷಕರು ತಮ್ಮನ್ನು ತಾವೇ ಆಗಾಗ್ಗೆ ದೂಷಿಸಿಕೊಳ್ಳುವ ಮೂಲಕ ಶಾಲಾವ್ಯವಸ್ಥೆಯಲ್ಲಿ ಇರುವ ನ್ಯೂನ್ಯತೆಗಳನ್ನು ಗುರುತಿಸುತ್ತಿದ್ದಾರೆ. ಹೀಗೆ ಸ್ಥಳೀಯ ಜನರೇ ಗುರುತಿಸುತ್ತಿರುವ ಸಮಸ್ಯೆಗಳಿಗೆ ಸ್ಥಳೀಯ ಮಟ್ಟದಲ್ಲಿ ಪರಿಹಾರಗಳನ್ನು ಕಂಡುಕೊಳ್ಳುವ ದಿಕ್ಕಿನಲ್ಲಿ ಇನ್ನಷ್ಟು ಸಂಶೋಧನೆಗಳು ಗ್ರಾಮ ಹಾಗೂ ವಲಯ ಮಟ್ಟದಲ್ಲಿ ನಡೆದು, ಜನರಿಗೆ ಕಲಿಕೆಯ ಮೂಲಕ ಗಳಿಕೆಯ ದಾರಿಯನ್ನು ತೋರಿಸುವಂತಹ ಶಿಕ್ಷಣ ಮುಂದಾದರೂ ದೊರೆಯುವಂತಾಗಬೇಕು.

ಒಂದು ಮಗುವನ್ನು ಪ್ರಾಥಮಿಕ ಶಾಲೆಗೆ ಕಳುಹಿಸಲು ಕನಿಷ್ಠ ಒಂದು ಸಾವಿರ ರೂಪಾಯಿಗಳು ಅಥವಾ ಅದಕ್ಕಿಂತ ಹೆಚ್ಚಿನ ಹಣ ಬೇಕಾಗುತ್ತದೆ ಎಂಬ ನಿರ್ಧಾರಕ್ಕೆ ನಮ್ಮ ಅಧ್ಯಯನದಲ್ಲಿ ಬರಲಾಗಿದೆ. ಖಾಸಗಿ ಖರ್ಚುಗಳನ್ನು ಮಾಡಿದ್ದರೂ ಮಕ್ಕಳು ಶಾಲೆಗೆ ಬರುವಾಗ, ಕೊಳೆತ ಬಟ್ಟೆ, ಹರಿದ ಬ್ಯಾಗ್, ಹರಿದ ಪುಸ್ತಕ ಮತ್ತು ನೋಟ್‌ಬುಕ್, ಒಡೆದ ಸ್ಲೇಟ್, ಮುರಿದ ಬಳಪ ಅಥವಾ ಸೀಸದಕಡ್ಡಿ ಹಾಗೂ ಕನಿಷ್ಠ ಮಟ್ಟದ ಶುಚಿತ್ವ ಇಲ್ಲದಿರುವುದನ್ನು ನಮ್ಮ ಅಧ್ಯಯನ ಗುರುತಿಸಿದೆ. ಖಾಸಗಿ ಖರ್ಚುಗಳನ್ನು ಹೇಗೆ ಕಡಿಮೆ ಗೊಳಿಸಬೇಕು ಮತ್ತು ಮಕ್ಕಳು ಶಾಲೆಗೆ ಬರುವಾಗ ಹೇಗೆ ಬರಬೇಕು ಎಂಬುದನ್ನು ಕುರಿತು ಇನ್ನೂ ಹೆಚ್ಚಿನ ಸಂಶೋಧನೆಗಳು ನಡೆಯಬೇಕಾಗಿದೆ. ಇದೇ ಸಂದರ್ಭದಲ್ಲಿ ಪೋಷಕರು ಹಾಗೂ ಸಮುದಾಯದ ಜವಾಬ್ದಾರಿಯನ್ನು ಸ್ಥಳೀಯರಿಗೆ ತಿಳಿಸುವ ಪ್ರಯತ್ನ ಸಮರೋಪಾದಿಯಲ್ಲಿ ನಡೆಯಬೇಕಾಗಿದೆ.

ವಿಶೇಷವಾಗಿ ಹೀರಾ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಶಾಲೆಯಿಂದ ಹೊರಗಿರುವ ಮಕ್ಕಳು ಶಾಲೆಗೆ ಬರುವಂತೆ ಮಾಡಲು ಅನೇಕ ಔಪಚಾರಿಕ ಹಾಗೂ ಅನೌಪಚಾರಿಕ ಕಾರ್ಯಕ್ರಮಗಳನ್ನು ರೂಪಿಸಿ ಪ್ರಯೋಗವನ್ನು ಈಗಾಗಲೇ ನಡೆಸಲಾಗಿದೆ. ಕೆಲವು ಕಾರ್ಯಕ್ರಮಗಳು ಸ್ವಲ್ಪಮಟ್ಟಿಗೆ ಮಕ್ಕಳನ್ನು ಮರಳಿ ಶಾಲೆಗೆ ತರುವಲ್ಲಿ ಯಶಸ್ವಿಯಾದರೆ, ಬಹುತೇಕ ಕಾರ್ಯಕ್ರಮಗಳು ವಿಫಲವಾಗಿವೆ. ಇದಕ್ಕೆ ಪ್ರಮುಖ ಕಾರಣ ಸ್ಥಳೀಯ ಮಟ್ಟದಲ್ಲಿ ಇರುವ ತೊಡಕುಗಳನ್ನು ಅರ್ಥ ಮಾಡಿಕೊಳ್ಳದೆ, ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದಲ್ಲಿನ ಕಾರ್ಯಕ್ರಮಗಳನ್ನು ಯಥಾವತ್ತಾಗಿ ಆಚರಣೆಗೆ ತರುತ್ತಿರುವುದು. ಸ್ಥಳೀಯ ಮಟ್ಟದಲ್ಲಿ ಯೋಜನೆಗಳನ್ನು ಅಂದರೆ ಜನರ ಯೋಜನೆಯನ್ನು ಇನ್ನೂ ರೂಪಿಸಲು ಸಾಧ್ಯವಾಗದಿರುವುದು. ಶಾಲೆಯಿಂದ ಹೊರಗಿರುವ ಮಕ್ಕಳಿಗೆ ಸಂಬಂಧಿಸಿದ ಸ್ಥಳೀಯರ ಸಹಭಾಗಿತ್ವದ ಮೂಲಕ ೦೬-೧೪ ವಯೋಮಾನದ ಮಕ್ಕಳು ನಿಗದಿತ ಅವಧಿಯಲ್ಲಿ ಶಾಲೆಯಲ್ಲಿ ಕಲಿಯುವಂತೆ ಮಾಡುವ ಕಾರ್ಯಕ್ರಮಗಳನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಜಾರಿಗೆ ತರಬೇಕಾಗಿದೆ. ಇದು ಒಂದು ಸಾಮಾಜಿಕ ಹೊಣೆಗಾರಿಕೆ, ಇದರಿಂದ ಯಾರೊಬ್ಬರೂ ಹೊರತಾಗುವಂತಿಲ್ಲ. ಇದರಲ್ಲಿ ಸರ್ಕಾರದ ಪಾತ್ರ ಎಷ್ಟು ಪ್ರಮುಖವೋ, ಅಷ್ಟೇ ಪ್ರಮುಖವಾದ ಪಾತ್ರವನ್ನು ಸ್ಥಳೀಯ ಜನ-ಸಮುದಾಯ ವಹಿಸಿಕೊಂಡರೆ ಮಾತ್ರ ಗುಣಾತ್ಮಕ ಶಾಲಾ ಶೈಕ್ಷಣಿಕ ಅಭಿವೃದ್ಧಿ ಸಾಧ್ಯ

ಮದರಸಾಗಳಲ್ಲಿ ಮಕ್ಕಳು ಸ್ವತಂತ್ರ್ಯವಾಗಿ ಶೈಕ್ಷಣಿಕ ಅಭಿವೃದ್ಧಿಯನ್ನು ಕಂಡುಕೊಳ್ಳಲು ಅನುಗುಣವಾಗುವಂತಹ ಶಿಕ್ಷಣವನ್ನು ಅವು ಒದಗಿಸುತ್ತಿಲ್ಲ ಎಂಬುದು ನಮ್ಮ ಗಮನಕ್ಕೆ ಬಂದಿದೆ. ಈ ಕಾರಣದಿಂದಾಗಿ ಶಾಲೆಯಿಂದ ಹೊರಗಿರುವ ಮುಸ್ಲಿಂ ಗಂಡು ಮತ್ತು ಹೆಣ್ಣುಮಕ್ಕಳನ್ನು ಮುಖ್ಯವಾಹಿನಿಗೆ ತರಲು ಸ್ಥಳೀಯ ಮಟ್ಟದ ಕಾರ್ಯಕ್ರಮಗಳನ್ನು ಏರ್ಪಡಿಸಿ, ಸುಧಾರಿಸುವ ಅಗತ್ಯವಿದೆ. ಹಾಗೆಯೇ ಮದರಸಾ ಶಿಕ್ಷಣವನ್ನು ಸುಧಾರಿಸಲು ಮತ್ತು ಅಧುನೀಕರಿಸಲು ಲಭ್ಯವಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳನ್ನು ಆಚರಣೆಗೆ ತರುವ ನಿಟ್ಟಿನಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಬಳಸಲು ಆದ್ಯತೆ ನೀಡಬೇಕು. ಹಾಗೆಯೇ ಮುಸ್ಲಿಂ ಮಕ್ಕಳ ಶಿಕ್ಷಣದ ಅಭಿವೃದ್ಧಿಗೆ ಲಭ್ಯವಿರುವ ಎಲ್ಲಾ

ಸಂಪನ್ಮೂಲಗಳು ಮಕ್ಕಳಿಗೆ ದೊರಕುವಂತಾಗಲು ಮುಸ್ಲಿಂ ಮಹಿಳೆಯರಲ್ಲಿ ಮತ್ತು ಅವರ ಸ್ವಸಹಾಯ ಗುಂಪುಗಳಲ್ಲಿ ಹೆಚ್ಚು ಅರಿವು ಮೂಡಿಸುವಂತಾಗಬೇಕು.

ಇನ್ನು ಶಾಲಾ ಬಿಸಿಯೂಟ ಕಾರ್ಯಕ್ರಮದ ಮೇಲುಸ್ತುವಾರಿಯಲ್ಲಿ ಅಲ್ಲೊಂದು ಇಲ್ಲೊಂದು ಉತ್ತಮವಾಗಿ ಕಂಡುಬಂದರೂ ಬಹಳಷ್ಟು ಮಟ್ಟಿಗೆ ಈ ಕಾರ್ಯಕ್ರಮದ ಮೇಲುಸ್ತುವಾರಿಯು ಸಡಿಲವಾಗಿಯೇ ಇದೆ. ವಿವಿಧ ಇಲಾಖೆಗಳಲ್ಲಿ ಕೆಲವು ಅಧಿಕಾರಿಗಳು ಈ ಯೋಜನೆಯನ್ನು ಗಂಭೀರವಾಗಿ ಪರಿಗಣಿಸಿದ್ದಾರೆ. ಆದರೆ ಬಹಳಷ್ಟು ಜನ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಇದೂ ಒಂದು ಎಂದು ಭಾವಿಸಿದ್ದಾರೆ. ಬಿಸಿಯೂಟ ಕಾರ್ಯಕ್ರಮದ ಮಾರ್ಗ ಸೂಚಿಯಲ್ಲಿ ವಿವಿಧ ಇಲಾಖೆಯ ಅಧಿಕಾರಿಗಳು ಆಗಾಗ್ಗೆ ತಪಾಸಣೆ ನಡೆಸಿ ಬಿಸಿಯೂಟದ ಗುಣಮಟ್ಟವನ್ನು ಉತ್ತಮಪಡಿಸಲು ಶ್ರಮಿಸಬೇಕು ಎಂದು ಸೂಚಿಸಲಾಗಿದೆ. ಈ ಯೋಜನೆಗೆ ನಿಗದಿಪಡಿಸಿದ ಹಣವನ್ನು ಸರಕಾರವು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿ ಇವರ ಉಸ್ತುವಾರಿ ಮತ್ತು ಸಮನ್ವಯತೆಯಲ್ಲಿ ಬಿಸಿಯೂಟ ಕಾರ್ಯಕ್ರಮವನ್ನು ಆಚರಣೆಗೆ ತಂದಿದೆ. ಜಿಲ್ಲೆಯಲ್ಲಿನ ವಿವಿಧ ಇಲಾಖೆಗಳ ಅಧಿಕಾರಿಗಳು ಕಾರ್ಯಕ್ರಮದ ಆಚರಣೆಯಲ್ಲಿ ತೊಡಗಿಸಿಕೊಳ್ಳುವ ಜವಾಬ್ದಾರಿಯನ್ನು ಹೊಂದಿದ್ದಾರೆ. ಉದಾಹರಣೆಗೆ ಆಯಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಗ್ರಾಮೀಣ ಅಭಿವೃದ್ಧಿ ಯೋಜನೆಯಡಿಯಲ್ಲಿ ಶಾಲೆಗಳಿಗೆ ಅಡುಗೆಕೋಣೆಗಳ ನಿರ್ಮಾಣ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ಗ್ರಾಮ ಪಂಚಾಯತಿಗಳಿಗೆ ಮಾರ್ಗದರ್ಶನ ನೀಡಬೇಕು. ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು, ಆಹಾರದ ಬೇಡಿಕೆ ಪಟ್ಟಿ, ಸಾದಿಲ್ವಾರು ವೆಚ್ಚ ಇತ್ಯಾದಿಗಳನ್ನು ಸಂಬಂಧಪಟ್ಟವರಿಗೆ ಸಲ್ಲಿಸಿ ಪಡೆದುಕೊಳ್ಳಬೇಕು. ಪಡೆದುಕೊಂಡ ನಂತರ ನಿಗದಿತ ಸಮಯದೊಳಗೆ ಸೌಲಭ್ಯಗಳ ಬಳಕೆಯ ಪ್ರಮಾಣ ಪತ್ರವನ್ನು ನಿರ್ದಿಷ್ಟ ಪಡಿಸಿದ ಇಲಾಖೆಯ ಅಧಿಕಾರಿಗಳಿಗೆ ನಿರ್ದಿಷ್ಟ ಸಮಯದಲ್ಲಿ ಸಲ್ಲಿಸಬೇಕು. ಇವರು ಈ ಯೋಜನೆಗೆ ಸಂಬಂಧಿಸಿದಂತೆ ಎದುರಾಗಬಹುದಾದ ಸಮಸ್ಯೆಗಳನ್ನು ಪರಿಹರಿಸಲು ವಿಶೇಷವಾಗಿ ಕಾರ್ಯನಿರ್ವಹಿಸಬೇಕು (ಕರ್ನಾಟಕ ಸರ್ಕಾರ, ೨೦೦೨).

ತಹಸೀಲ್ದಾರರು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಸಹಾಯಕ ನಿರ್ದೇಶಕರು ತಾಲ್ಲೂಕು ಮಟ್ಟದಲ್ಲಿ ಬಿಸಿಯೂಟ ಆಚರಣೆಯ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಇವರು ಶಾಲೆ ಅಥವಾ ಅಡಿಗೆ ಕೇಂದ್ರಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಪರಿಶೀಲನೆ ನಡೆಸಿ ಸಮಸ್ಯೆಗಳು ಕಂಡುಬಂದಲ್ಲಿ ತುರ್ತಾಗಿ ಪರಿಹರಿಸಬೇಕು. ವಲಯ ಸಂಪನ್ಮೂಲ ಕೇಂದ್ರಗಳ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ತಮ್ಮ ವ್ಯಾಪ್ತಿಯಲ್ಲಿ ಶಾಲಾಬಿಸಿಯೂಟಕ್ಕೆ ಸಂಬಂಧಿಸಿದಂತೆ ಯಾವುದೇ ಸಮಸ್ಯೆ ಉದ್ಭವಿಸಿದಲ್ಲಿ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಪರಿಹರಿಸಿ ಈ ಯೋಜನೆಯ ಯಶಸ್ಸಿಗೆ ಮೊದಲ ಆದ್ಯತೆ ನೀಡಬೇಕು (ಕರ್ನಾಟಕ ಸರ್ಕಾರ, ೨೦೦೨).

ಗ್ರಾಮ ಮತ್ತು ಶಾಲೆಗಳ ಮಟ್ಟದಲ್ಲಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (ಎಸ್.ಡಿ.ಎಂ.ಸಿ.)ಯು ಅಡುಗೆ ಸಿಬ್ಬಂದಿ ಆಯ್ಕೆ, ಅಡುಗೆ ಕೋಣೆಯ ನಿರ್ಮಾಣ ಮತ್ತು ಊಟ ತಯಾರಿಕೆಯ ಮೇಲುಸ್ತುವಾರಿಯಲ್ಲಿ ಭಾಗವಹಿಸಿ ಉತ್ತಮ ಗುಣಮಟ್ಟದ ಆಹಾರ ತಯಾರಿಕೆ ಮತ್ತು ತಯಾರಾದ ಆಹಾರವನ್ನು ಶಾಲೆ ಆವರಣದಲ್ಲಿಯೇ ವಿತರಣೆಯಾಗುವಂತೆ ನೋಡಿಕೊಳ್ಳುವುದು. ಇದು ಆಯಾ ಶಾಲೆಯ ಎಸ್.ಡಿ.ಎಂ.ಸಿ ಸಮಿತಿಗಳ ಕರ್ತವ್ಯವಾಗಿರುತ್ತದೆ. ಆಯಾ ಭಾಗದ ಕಂದಾಯ ನಿರೀಕ್ಷಕರು ಮತ್ತು ಗ್ರಾಮಗಳ ಗ್ರಾಮ ಲೆಕ್ಕಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಅಡುಗೆ ಕೇಂದ್ರಗಳಿಗೆ ಆಗಾಗ್ಗೆ ಭೇಟಿ ನೀಡಿ ಸರಬರಾಜಾದ ಆಹಾರ ಪದಾರ್ಥಗಳು, ಅಡುಗೆ ಸಾಮಗ್ರಿಗಳ ದಾಸ್ತಾನುಗಳನ್ನು ಪರಿಶೀಲಿಸಿ ದುರುಪಯೋಗವಾಗದಂತೆ ನೋಡಿಕೊಳ್ಳಬೇಕು. ವಿಶೇಷವಾಗಿ ಕಂದಾಯ ನಿರೀಕ್ಷಕರು ಸಂಬಂಧಪಟ್ಟ ಗ್ರಾಮ ಲೆಕ್ಕಾಧಿಕಾರಿಗಳ ಜೊತೆ ಪ್ರತಿ ತಿಂಗಳು ಅಡುಗೆ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲಿಸಬೇಕು. ಅದನ್ನು ತಮ್ಮ ದಿನಚರಿಯಲ್ಲಿ ನಮೂದಿಸಿ ತಹಶೀಲ್ದಾರರಿಗೆ ಪ್ರತಿ ತಿಂಗಳು ವರದಿ ಸಲ್ಲಿಸಬೇಕು. ಈ ಎಲ್ಲಾ ಅಧಿಕಾರಿಗಳು ಶಾಲೆಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಅಡಿಗೆ ಕೇಂದ್ರಗಳನ್ನು ತಪಾಸಣೆ ನಡೆಸಿ, ನ್ಯೂನತೆ ಕಂಡುಬಂದಲ್ಲಿ ವರದಿಯನ್ನು ಮೇಲಿನ ಅಧಿಕಾರಿಗಳ ಮೂಲಕ ಸರಕಾರಕ್ಕೆ ನೀಡಬೇಕು (ಕರ್ನಾಟಕ ಸರ್ಕಾರ, ೨೦೦೨).

ನಾವು ಅಧ್ಯಯನ ನಡೆಸಿದ ಎಲ್ಲಾ ಶಾಲೆಗಳಲ್ಲಿ ವಲಯ ಸಂಪನ್ಮೂಲ ಕೇಂದ್ರದ ಅಧಿಕಾರಿಗಳು ಹೆಚ್ಚೆಂದರೆ, ಕ್ಷೇತ್ರ ಶಿಕ್ಷಣ ಅಧಿಕಾರಿಗಳು ಕೆಲವು ಶಾಲೆಗಳಿಗೆ ಬೇಟಿ ನೀಡಿರುವುದು ಬಿಟ್ಟರೆ ಬೇರೆ ಯಾವುದೇ ಇಲಾಖೆಯ ಅಧಿಕಾರಿಗಳು ಶಾಲೆಗಳಿಗೆ ಭೇಟಿ ನೀಡಿಲ್ಲ. ವಿಶೇಷವಾಗಿ ಕಂದಾಯ ಇಲಾಖೆಯ ಅಧಿಕಾರಿಗಳು ಈ ಯೋಜನೆಯ ಆಚರಣೆಗೆ ಹೆಚ್ಚಿನ ಜವಾಬ್ದಾರಿಯನ್ನು ಹೊಂದಿದ್ದಾರೆ. ಆದರೆ ನಾವು ಅಧ್ಯಯನಕ್ಕೆ ಒಳಪಡಿಸಿದ ಶಾಲೆಗಳಿಗೆ ಕಂದಾಯ ಇಲಾಖೆಯ ಯಾವುದೇ ಅಧಿಕಾರಿ ಬಿಸಿಯೂಟ ಪರಿಶೀಲನೆಗಾಗಿ ಶಾಲೆಗಳಿಗೆ ಭೇಟಿ ನೀಡಿಲ್ಲ. ಶಾಲೆಗಳಿಗೆ ಭೇಟಿ ನೀಡಿದ ಶಿಕ್ಷಣ ಇಲಾಖೆಯ ಎಲ್ಲಾ ಅಧಿಕಾರಿಗಳು ಶಾಲಾ ಹಾಜರಾತಿಗೆ ಹೆಚ್ಚು ಆದ್ಯತೆ ನೀಡಬೇಕು. ಬಿಸಿಯೂಟದ ಗುಣಮಟ್ಟಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಶಾಲಾ ದಾಖಲಾತಿಯಲ್ಲಿ ಬರೆದಿದ್ದಾರೆ. ಶಾಲೆ ಹಾಜರಾತಿ ಹೆಚ್ಚಳ, ಬಿಸಿಯೂಟದ ಗುಣಮಟ್ಟವನ್ನು ಉತ್ತಮ ಪಡಿಸುವುದು ಹೇಗೆ, ಇದಕ್ಕೆ ಸ್ಥಳೀಯ ಮಟ್ಟದಲ್ಲಿ ಇರುವ ತೊಡಕುಗಳು ಯಾವುವು ಮುಂತಾದ ತೊಂದರೆಗಳ ಬಗ್ಗೆ ಸೌಜನ್ಯದಿಂದ ಶಿಕ್ಷಕರ ಜೊತೆ ಈ ಅಧಿಕಾರಿಗಳು ಚರ್ಚಿಸಿರುವುದು ಅತ್ಯಂತ ಕಡಿಮೆ. ಇನ್ನು ಇವರು ಮುಖ್ಯ ಅಡುಗೆಯವರನ್ನು ಮತ್ತು ಅಡಿಗೆ ಸಹಾಯಕರನ್ನು ತಪ್ಪಿಯೂ ಕೂಡ ಮಾತನಾಡಿಸುವುದಿಲ್ಲ.

ಒಟ್ಟಾರೆ ಎಲ್ಲಾ ಆಧಿಕಾರಿಗಳ ಶಾಲಾ ಭೇಟಿಯು ಕೇವಲ ಅನೌಪಚಾರಿಕ ಮತ್ತು ಸಾಂಕೇತಿಕ ಎಂದು ಪೋಷಕರು, ಶಿಕ್ಷಕರು ಮತ್ತು ಅಡಿಗೆಯವರು ಹೇಳುತ್ತಾರೆ. ಸ್ವಲ್ಪಮಟ್ಟಿಗೆ ಎಸ್.ಡಿ.ಎಂ.ಸಿ ಸಮಿತಿಗಳ ಕಾರ್ಯಚಟುವಟಿಕೆಯನ್ನು ಹೆಚ್ಚು ಹೆಚ್ಚು ಬಲಪಡಿಸುವ ಅಗತ್ಯವಿದೆ. ಈ ಕಾರ್ಯಕ್ರಮದ

ಉಸ್ತುವಾರಿ ಮತ್ತು ಸಮನ್ವಯತೆಯಲ್ಲಿ ಸಮಿತಿಯ ಸದಸ್ಯರು ಸ್ವಲ್ಪ ಮಟ್ಟಿಗಾದರೂ ಕಾಳಜಿ ಹಾಗೂ ಜವಾಬ್ದಾರಿತನವನ್ನು ಹೊಂದಿರಬೇಕು. ಇದರ ಜೊತೆಗೆ ಸ್ಥಳೀಯ ಸರ್ಕಾರವಾದ ಗ್ರಾಮ ಪಂಚಾಯತಿಗಳು ಶಾಲಾ ಶಿಕ್ಷಣದ ನಿರ್ವಹಣೆಯನ್ನು ನೋಡಿಕೊಳ್ಳಬೇಕು. ಇಲ್ಲವಾದರೆ ಆಹಾರ ಪದಾರ್ಥಗಳ ಕಳ್ಳತನ, ಕೊರತೆ ಇತ್ಯಾದಿಗಳು ಪ್ರಬಲವಾಗುತ್ತವೆ.

ಶಾಲೆಗಳಿಗೆ ಆಹಾರ ಪದಾರ್ಥಗಳ ವಿತರಣೆಯಲ್ಲಿ ಮೊದಲು ಇದ್ದಂತಹ ಪ್ರಮಾಣದಲ್ಲಿ ಸಮಸ್ಯೆಗಳು ಈಗ ಇಲ್ಲವಾಗಿವೆ. ಈ ಯೋಜನೆಯು ಪ್ರಾರಂಭವಾದ ಮೊದಲ ಆರು ತಿಂಗಳುಗಳು, ಶಾಲೆಗಳಿಗೆ ಬಿಸಿಯೂಟಕ್ಕಾಗಿ ನೀಡುತ್ತಿದ್ದ ಸಾದಿಲ್ವಾರು ಹಣದ ತೊಂದರೆ ಆಯಾ ಶಾಲೆಗಳ ಮುಖ್ಯ ಶಿಕ್ಷಕರನ್ನು ಬಹಳ ಕಾಡಿದೆ. ಆ ಸಮಯದಲ್ಲಿ ಶಾಲೆಗಳ ಮುಖ್ಯ ಶಿಕ್ಷಕರು ಮತ್ತು ಕೆಲವು ಶಿಕ್ಷಕರುಗಳು ಅವರ ವೈಯಕ್ತಿಕ ಹಣವನ್ನು ಸಾದಿಲ್ವಾರು ವೆಚ್ಚಗಳಿಗೆ ವ್ಯಯಿಸಿದ್ದಾರೆ. ೨೦೦೨-೦೩ರ ಶೈಕ್ಷಣಿಕ ಸಾಲಿನಲ್ಲಿ ಈ ಸಮಸ್ಯೆ ಬಹಳವಾಗಿ ಶಾಲಾ ಸಿಬ್ಬಂದಿಯನ್ನು ಕಾಡಿದೆ. ಆದರೆ ೨೦೦೩ರ ಆಗಸ್ಟ್‌ನಿಂದ ಸಾದಿಲ್ವಾರು ಹಣವು ಶಾಲೆಯ ಮುಖ್ಯ ಗುರುಗಳಿಗೆ ನೇರವಾಗಿ ಬರುತ್ತಿದೆ. ಅಲ್ಲದೆ ಅಡಿಗೆಯವರಿಗೆ ಸಂಬಳವನ್ನು ಶಾಲೆಯ ಮೇಲು ಉಸ್ತುವಾರಿ ಸಮಿತಿ ಮತ್ತು ಮುಖ್ಯ ಶಿಕ್ಷಕರ ಮೂಲಕ ನೀಡಲು ಪ್ರಾರಂಭಿಸಿದ ನಂತರ ಅನೇಕ ತೊಡಕುಗಳು ಕಡಿಮೆಯಾಗಿವೆ.

ಲಂಚ, ಕಳ್ಳತನ, ತೂಕದಲ್ಲಿ ಅಕ್ರಮ, ಶಾಲಾ ಬಿಸಿಯೂಟದ ಆಚರಣೆಗೆ ಸಂಬಂಧಿಸಿದಂತೆ ಲಂಚ ನೀಡುವಿಕೆ, ತೆಗೆದುಕೊಳ್ಳುವಿಕೆಯನ್ನು ನಮ್ಮ ಅಧ್ಯಯನದಲ್ಲಿ ಗುರುತಿಸಲು ಸಾಧ್ಯವಾಗಲಿಲ್ಲ. ಆಹಾರ ಪದಾರ್ಥಗಳು ಮತ್ತು ಅಡಿಗೆ ಸಾಮಗ್ರಿಗಳು ಕಳ್ಳತನವಾಗಿರುವ ಬಗ್ಗೆ ಯಾವುದೇ ವರದಿಗಳಿಲ್ಲ. ಆದರೆ ಶಿಕ್ಷಕರು, ಪೋಷಕರು ಮತ್ತು ಅಡಿಗೆಯವರ ಆರೋಪವೆಂದರೆ ಶಾಲೆಗಳಿಗೆ ಪೂರೈಸುವ ಆಹಾರ ಪದಾರ್ಥಗಳ ಗುಣಮಟ್ಟ ಉತ್ತಮವಾಗಿಲ್ಲ ಎಂಬುದು. ಇಂತಹ ಪದಾರ್ಥಗಳಿಂದ ತಯಾರಿಸಿದ ಆಹಾರವು ಸ್ವಲ್ಪ ಮಟ್ಟಿನ ವಾಸನೆಯಿಂದ ಕೂಡಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಅಧ್ಯಯನದ ಸಂದರ್ಭದಲ್ಲಿ ಆಹಾರ ಮತ್ತು ನಾಗರಿಕ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಿದೆವು. ಅವರು ಆಹಾರ ಪದಾರ್ಥಗಳ ಗುಣಮಟ್ಟ ತುಂಬಾ ಉತ್ತಮವೆನಿಸದಿದ್ದರೂ ನಮಗೆ ದೊರಕುವುದನ್ನು ಪೂರೈಸುತ್ತೇವೆ ಎಂದು ಸಮರ್ಥಿಸಿ ಕೊಳ್ಳುತ್ತಾರೆ. ಸಾಮಾನ್ಯವಾಗಿ ಶಾಲೆಗಳಿಗೆ ಪೂರೈಸುವ ಆಹಾರ ಪದಾರ್ಥಗಳ ತೂಕ ವಾಸ್ತವ ತೂಕಕ್ಕಿಂತ ಕಡಿಮೆ ಬರುವುದು. ಕನಿಷ್ಠ ಪಕ್ಷ ೧ ಚೀಲದಲ್ಲಿ ೫ ರಿಂದ ೧೦ ಅಥವಾ ೧೫ ಕೆಜಿಗಳವರೆಗೆ ಆಹಾರ ಪದಾರ್ಥಗಳು ಕಡಿಮೆ ಬರುತ್ತದೆ. ಆಹಾರ ಪೂರೈಕೆಯ ಗುತ್ತಿಗೆದಾರರು ಶಾಲೆಯ ಆವರಣದಲ್ಲಿ ಆಹಾರ ಪದಾರ್ಥಗಳನ್ನು ತೂಕ ಮಾಡುವುದಿಲ್ಲ. ಮೊದಲೇ ತೂಕ ಮಾಡಿ ತಂದಿರುತ್ತಾರೆ. ತೂಕ ಕಡಿಮೆ ಬರುತ್ತದೆ ಎಂದು ಅವರಿಗೆ ತಿಳಿಸಿದರೆ, 'ತೂಕ ಮಾಡಿ ತಂದಿದ್ದೇವೆ ಬೇಕಾದರೆ ತೆಗೆದುಕೊಳ್ಳಿ ಇಲ್ಲವಾದರೆ ವಾಪಸ್ ತೆಗೆದುಕೊಂಡು ಹೋಗುತ್ತೇವೆ' ಎಂದು ಹೇಳುತ್ತಾರೆ. ಇದನ್ನು ಒಪ್ಪಿಕೊಳ್ಳದಿದ್ದರೆ ಶಿಕ್ಷಕರು ತರಗತಿ ಬಿಟ್ಟು ತಾಲ್ಲೂಕು ಕೇಂದ್ರಗಳಿಗೆ ಹೋಗಿ ಆಹಾರ ಪದಾರ್ಥಗಳನ್ನು ತರಬೇಕಾಗುತ್ತದೆ. ಅಲ್ಲದೆ ನಮ್ಮ ಶಾಲೆಗಳಿಗೆ ಪ್ರತ್ಯೇಕವಾಗಿ ಆಹಾರ ಪದಾರ್ಥಗಳನ್ನು

ತರಲು ಸಾಧ್ಯವಿಲ್ಲ. ಏಕೆಂದರೆ, ಪ್ರತ್ಯೇಕ ವಾಹನ ಮಾಡಿಕೊಂಡು ತರಬೇಕು. ಇದು ಹೆಚ್ಚು ವೆಚ್ಚದಾಯಕ. ಅಲ್ಲದೆ ಇದಕ್ಕೆ ನಮ್ಮ ಕೈಯಿಂದಲೇ ಹೆಚ್ಚಿನ ಹಣ ಭರಿಸಬೇಕಾಗುತ್ತದೆ. ಇನ್ನೂ ಮುಂತಾದ ತೊಂದರೆಗಳಿಂದ ಪೂರೈಕೆ ಮಾಡುವಾಗ ಆಹಾರದ ತೂಕ ಕಡಿಮೆ ಇದ್ದರೂ ಅವುಗಳನ್ನು ಪಡೆಯದೆ ಬೇರೆ ಮಾರ್ಗವಿಲ್ಲ ಎಂಬುದು ಬಹುತೇಕ ಎಲ್ಲಾ ಶಾಲೆಗಳ ಮುಖ್ಯ ಶಿಕ್ಷಕರು ಮತ್ತು ಸಹಶಿಕ್ಷಕರ ಅಭಿಪ್ರಾಯ.

ಅನೇಕ ಸಂದರ್ಭಗಳಲ್ಲಿ ಉತ್ತಮ ಗುಣಮಟ್ಟದ ಆಹಾರಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡಿ ಕಡಿಮೆ ಗುಣಮಟ್ಟದ ಆಹಾರ ಪದಾರ್ಥಗಳನ್ನು ಪೂರೈಕೆ ಮಾಡುತ್ತಾರೆ. ಇದನ್ನು ಸಾಮಾನ್ಯವಾಗಿ ಮಧ್ಯವರ್ತಿಗಳು ಮಾಡುತ್ತಾರೆ ಎಂಬ ಅಭಿಪ್ರಾಯಗಳು ಇವೆ. ಇದಕ್ಕೆ ಆಹಾರ ಪೂರೈಕೆದಾರರ ಅಭಿಪ್ರಾಯವೆಂದರೆ, ನಮಗೆ ಭಾರತದ ಆಹಾರ ನಿಗಮದಿಂದ ಸರಬರಾಜು ಆಗುವ ಆಹಾರದ ಚೀಲಗಳಲ್ಲಿ ಕೆಲವು ಒಡೆದು ಆಹಾರ ಪದಾರ್ಥಗಳು ಸೋರಿಹೋಗುತ್ತದೆ. ಹೀಗಾಗಿ ನಮಗೆ ತೂಕದಲ್ಲಿ ಕಡಿಮೆ ಬರುತ್ತದೆ. ಇದನ್ನು ಬೇರೆ ಬಗೆಯಲ್ಲಿ ಭರಿಸುತ್ತೇವೆ ಎಂದು ಸರಳವಾಗಿ ಹೇಳುತ್ತಾರೆ. ಕಾಳಸಂತೆ ಮಾರಾಟದ ಎಲ್ಲಾ ಆರೋಪಗಳು ಆಧಾರರಹಿತವಾದವುಗಳು ಎಂದು ಹೇಳುತ್ತಾರೆ. ಏನೇ ಇದ್ದರೂ ಶಾಲಾ ಬಿಸಿಯೂಟವು ಆಹಾರ ಧಾನ್ಯ ವಿತರಣೆಗೆ ಹೋಲಿಸಿದರೆ ಅನೇಕ ವಿಷಯಗಳಿಂದ ಉತ್ತಮವಾಗಿದೆ. ಅಲ್ಲದೆ, ಆಹಾರ ಧಾನ್ಯ ವಿತರಣೆಯ ಅವ್ಯವಸ್ಥೆಗಳಾದ ಆಹಾರ ಪೂರೈಕೆಯಲ್ಲಿ ವಿಳಂಬ, ಆಹಾರ ಧಾನ್ಯ ಪಡೆಯಲು ಮಕ್ಕಳು ಶಾಲೆಯಿಂದ ಬೇರೆ ಸ್ಥಳಕ್ಕೆ ಹೋಗುವುದು, ಶಾಲೆಗೆ ಹಾಜರಾಗದ ಮಕ್ಕಳಿಗೂ ಆಹಾರ ಧಾನ್ಯ ವಿತರಣೆ, ಕಾಳಸಂತೆ, ಲಂಚಗುಳಿತನ ಮತ್ತು ಅಳತೆಯಲ್ಲಿ ಮೋಸ ಇನ್ನೂ ಮುಂತಾದ ತೊಡಕುಗಳು ಶಾಲಾ ಬಿಸಿಯೂಟ ವ್ಯವಸ್ಥೆಯಲ್ಲಿ ಕಂಡು ಬರುವುದಿಲ್ಲ.

ನಮ್ಮ ಅಧ್ಯಯನವು ಶಾಲಾ ಬಿಸಿಯೂಟ ಕಾರ್ಯಕ್ರಮದಿಂದ ಉಂಟಾಗಿರುವ ಪ್ರಮುಖ ಬದಲಾವಣೆಗಳನ್ನು ಸ್ಪಷ್ಟವಾಗಿ ಗುರುತಿಸಲು ಪ್ರಯತ್ನ ಮಾಡಿದೆ. ಒಂದು, ಬಿಸಿಯೂಟ ಯೋಜನೆಯು ಕೆಲವು ಲೋಪದೋಷಗಳನ್ನು ಹೊಂದಿದ್ದರೂ ಇದು ಜಾರಿಗೆ ಬಂದ ನಂತರ ಶಾಲಾ ದಾಖಲಾತಿ-ಹಾಜರಾತಿ ಪ್ರಮಾಣದಲ್ಲಿ ಸ್ವಲ್ಪ ಹೆಚ್ಚಳವಾಗಿರುವುದು ಕಾಣುತ್ತದೆ. ಅದರಲ್ಲಿಯೂ ಹೆಣ್ಣು ಮಕ್ಕಳ ಶಾಲಾ ಹಾಜರಾತಿ ಮತ್ತು ದಾಖಲಾತಿಯಲ್ಲಿ ಮೊದಲಿಗಿಂತ ಪ್ರಗತಿಯಾಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಎರಡು, ಸಮಾಜದ ಅಂಚಿನಲ್ಲಿರುವ ಮತ್ತು ಅವಕಾಶ ವಂಚಿತ ಕುಟುಂಬಗಳ ಮಕ್ಕಳ ಶಾಲಾ ಭಾಗವಹಿಸುವಿಕೆಯನ್ನು ಬಿಸಿಯೂಟ ಕಾರ್ಯಕ್ರಮ ಅಭಿವೃದ್ಧಿ ಪಡಿಸಿದೆ. ಮೂರು, ಬಿಸಿಯೂಟ ಕಾರ್ಯಕ್ರಮದಲ್ಲಿ ಬೆರತು ಕೊಂಡಿರುವ ಸಾಮಾಜೀಕರಣದ ಮೌಲ್ಯ ಎಲ್ಲಾ ದೃಷ್ಟಿಯಿಂದಲೂ ಹೆಚ್ಚು ಮಹತ್ವದ್ದಾಗಿದೆ. ಈ ಯೋಜನೆಯನ್ನು ಕ್ರಮಬದ್ಧವಾಗಿ ಜಾರಿಗೆ ತರುವ ಮೂಲಕ ನಮ್ಮ ಸಮಾಜದಲ್ಲಿ ನೆಲೆಸಿರುವ ಜಾತಿ, ಧರ್ಮ, ವರ್ಗ ಆಧಾರಿತ ಏಣಿಶ್ರೇಣಿ ಅಂತರವನ್ನು ಕಡಿಮೆಗೊಳಿಸ ಬಹುದಾಗಿದೆ. ಅಲ್ಲದೆ ಸಾಮಾಜಿಕ ಸಮಾನತೆಯನ್ನು ಬೆಳೆಸುವಲ್ಲಿ ಬಿಸಿಯೂಟ ಪ್ರಮುಖ ಪಾತ್ರವಹಿಸಿರುವುದರಲ್ಲಿ ಅನುಮಾನಗಳಿಲ್ಲ. ನಾಲ್ಕು, ಶಾಲಾ ಬಿಸಿಯೂಟ ಕಾರ್ಯಕ್ರಮ ಸಾಕ್ಷರತೆ,

ಶಿಕ್ಷಣ ಕ್ಷೇತ್ರದಲ್ಲಿ ಇರುವ ಲಿಂಗತಾರತಮ್ಯ ಅಂತರವನ್ನು ಮಾತ್ರ ಕಡಿಮೆಗೊಳಿಸದೆ. ಒಟ್ಟಾರೆ ಲಿಂಗಸಮಾನತೆಯನ್ನು ಸಾಧಿಸುವಲ್ಲಿ ಅತ್ಯಂತ ಮಹತ್ವದ ಪರಿಣಾಮವನ್ನು ಉಂಟುಮಾಡಿದೆ. ಶಾಲಾ ಬಿಸಿಯೂಟ ಕಾರ್ಯಕ್ರಮ ಸಾಮಾಜಿಕ ಅಭಿವೃದ್ಧಿಗೆ ಮೂಲ ಅಡಿಪಾಯವಾಗಿದೆ ಎಂಬುದು ನಮ್ಮ ಅಧ್ಯಯನದ ಅನುಭವಗಳಿಂದ ಸ್ಪಷ್ಟವಾಗುತ್ತದೆ. ಇದನ್ನು ಕೇವಲ ಒಂದು ಕಾರ್ಯಕ್ರಮ ಎಂದು ಪರಿಗಣಿಸಿದರೆ ಇದರ ಮಹತ್ವ ಸೀಮಿತ ಅರ್ಥಕ್ಕೆ ಕಟ್ಟುಬೀಳುತ್ತದೆ. ಆದರೂ ಪ್ರತಿಯೊಬ್ಬರ ಆಹಾರದ ಹಕ್ಕಿನ ದೃಷ್ಟಿಯಿಂದ ಇದು ಮಹತ್ವದ್ದಾಗಿದೆ. ಶಾಲಾ ಬಿಸಿಯೂಟ ಸರ್ಕಾರದ ಪ್ರಮುಖ ಭಾಗವಾಗುವುದರ ಜೊತೆಗೆ ಇದನ್ನು ಒಂದು ಸಾಮಾಜಿಕ ಚಳುವಳಿಯಾಗಿ ರೂಪಿಸುವುದು ಪ್ರತಿಯೊಬ್ಬರ ಸಾಮಾಜಿಕ ಹೊಣೆಗಾರಿಕೆಯಾಗಿದೆ. ನಿರ್ದಿಷ್ಟವಾಗಿ ಹೇಳುವುದಾದರೆ ಸಾಮಾಜಿಕ ಸಮಾನತೆಯ ಕಾಳಜಿಯಿರುವ ಪ್ರತಿಯೊಬ್ಬರಿಗೂ ಬಿಸಿಯೂಟ ಮಹತ್ವದ ಸಂಗತಿಯಾಗ ಬೇಕಾಗಿದೆ. ಶಾಲಾ ಬಿಸಿಯೂಟವನ್ನು ಸರಿಪಡಿಸಲು ಸ್ಥಳೀಯ ಸರ್ಕಾರ ಹಾಗೂ ವಿಶೇಷವಾಗಿ ಗ್ರಾಮ ಪಂಚಾಯತಿಗೆ ಶಕ್ತಿ ತುಂಬುವ ಕೆಲಸ ಮಾಡಬೇಕಾಗಿದೆ. ಇದನ್ನು ಹೊರತುಪಡಿಸಿ ಖಾಸಗಿ ಸಂಸ್ಥೆಗಳಿಗೆ, ದಾರ್ಮಿಕ ಸಂಸ್ಥೆಗಳಿಗೆ, ಮಠಮಾನ್ಯಗಳಗೆ ಬಿಸಿಯೂಟ ನಿರ್ವಹಣೆ ಮಾಡಲು ನೀಡುವುದು, ನಮ್ಮ ಸಂವಿಧಾನದ ಆಶಯಕ್ಕೆ ಹಾಗೂ ಆಹಾರದ ಹಕ್ಕಿನ ಉದ್ದೇಶಕ್ಕೆ ಅಪಚಾರವೆಸಗಿದಂತೆ ಆಗುತ್ತದೆ. ಹೀಗಾಗಿ ಇದನ್ನು ಪ್ರಜಾಸತ್ತೆಯ ನೆಲೆಯಲ್ಲಿ ಅನುಷ್ಠಾನ ಮಾಡಲು ಗ್ರಾಮ ಪಂಚಾಯಿತಿಗಳಿಗೆ ಮತ್ತು ಸ್ಥಳೀಯ ಸರ್ಕಾರಗಳಿಗೆ ಆಧ್ಯತೆ ನೀಡಬೇಕು.

ಈ ದಿಕ್ಕಿನಲ್ಲಿ ಶಾಲಾ ಶಿಕ್ಷಣ ವ್ಯವಸ್ಥೆಯ ಎಲ್ಲಾ ಹಂತದ ಗುಣಾತ್ಮಕ ಅಭಿವೃದ್ಧಿಗೆ ಕೇಂದ್ರೀಕೃತ ಆಡಳಿತ ವ್ಯವಸ್ಥೆಯಲ್ಲಿ ಶಿಕ್ಷಕರು ಮತ್ತು ಶಿಕ್ಷಣ ಇಲಾಖೆಯ ಕೆಲವರು ರಾಷ್ಟ್ರದಾದ್ಯಂತ ಆಡಳಿತ ನಡೆಸಲು ನೀತಿ ನಿರೂಪಣೆಗಳನ್ನು ಮಾಡುವವರಾಗಿರುತ್ತಾರೆ. ಸಾಮಾನ್ಯವಾಗಿ ಈ ರೀತಿಯ ಆಡಳಿತದಲ್ಲಿ ಅಸಮಾಧಾನಗಳನ್ನು ಕೊನೆಗಾಣಿಸಲು ಅಥವಾ ಬಗೆಹರಿಸಲು ಶಿಸ್ತುಕ್ರಮ ಕೈಗೊಳ್ಳುವುದು ಸಾಮಾನ್ಯ. ಆದರೆ ಸ್ಥಳೀಯ ಸರ್ಕಾರಗಳ ಗವರ್ನೆನ್ಸ್ ಪ್ರಾರಂಭವಾದೊಡನೆ, ಇಂತಹ ಪರಿಸ್ಥಿತಿಗಳು ಬದಲಾಗತೊಡಗುತ್ತವೆ. ಸ್ಥಳೀಯ ಶಾಲಾ ನಿರ್ವಹಣೆಯಲ್ಲಿ ಅನುಸರಿಸಬೇಕಾದ ಕರ್ತವ್ಯಗಳು ಮತ್ತು ಜವಾಬ್ದಾರಿಗಳ ಬಗ್ಗೆ ಸ್ಥಳೀಯ ಆಡಳಿತದಲ್ಲಿ ಕ್ರಮಬದ್ಧತೆ ಇಲ್ಲದೆ ಇದ್ದರೆ, ಶಾಲೆಗಳು ಅನೇಕ ಒತ್ತಡ ಗಳನ್ನು ಅಸ್ಥಿರತೆಯನ್ನು ಎದುರಿಸಬೇಕಾಗುತ್ತದೆ. ಇದರಿಂದ ಶಾಲೆಯ ಆಡಳಿತವರ್ಗ ಸ್ಥಳೀಯ ಸಮುದಾಯಗಳಿಂದ ಪರಿಗಣಿಸಲಾಗದಷ್ಟು ಒತ್ತಡಗಳನ್ನು ಎದುರಿಸಬೇಕಾಗುತ್ತದೆ. ಹೀಗಾಗಿ ಸ್ಥಳೀಯ ಶಾಲಾ ಆಡಳಿತ ಕುರಿತು ಅಗತ್ಯವಾದ ತರಬೇತಿಗಳಸ್ನು ಗ್ರಾಮ ಪಂಚಾಯತಿ ಮತ್ತು ಎಸ್.ಡಿ.ಎಂ.ಸಿ. ಸದಸ್ಯರಿಗೆ ನೀಡಬೇಕಾಗಿದೆ.

ಹಾಗೆಯೇ ಶಾಲಾ ನಿರ್ವಹಣೆ ಕುರಿತು ಹೊಸ ಹೊಸ ಸಂಶೋಧನೆಗಳು ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿವೆ. ಇವು ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳ ವಿತರಣೆಗೆ ಬೇಕಾಗುವ ಉತ್ತಮ ಗುಣಮಟ್ಟದ ಕ್ರಿಯಾತ್ಮಕ ತರಬೇತಿ ಕಾರ್ಯಗಾರಗಳಿಗಾಗಿ ಹುಡುಕಾಟ

ನಡೆಸುತ್ತಿವೆ. ನೀತಿ ನಿರೂಪಣೆಗಳಲ್ಲಿ ಬದಲಾವಣೆತರುವ ಮೂಲಕ ಅಧಿಕಾರ ಮತ್ತು ಆಳ್ವಿಕೆಯನ್ನು ಸ್ಥಳೀಯ ಸಂಸ್ಥೆಗಳಿಗೆ ನೀಡಿದರೆ ಸಾಲದು, ಈ ಕುರಿತು ಸ್ಥಳೀಯ ಜನರಿಗೆ ತರಬೇತಿ ಕಾರ್ಯಾಗಾರಗಳನ್ನು ನಡೆಸುವುದರ ಮೂಲಕ ಬದಲಾವಣೆಗಳನ್ನು ತರಲು ಪ್ರಯತ್ನಿಸಬೇಕು. ಜೊತೆಗೆ ಸ್ಥಳೀಯ ಮಟ್ಟದ ಆಡಳಿತದಲ್ಲಿ ಪಾಲುಗೊಳ್ಳುವ ಎಲ್ಲಾ ಪಾಲುದಾರರ (ಜನರು) ಮನಸ್ಥಿತಿಯಲ್ಲಿ ಅಗತ್ಯ ಪ್ರಮಾಣದ ಬದಲಾವಣೆಗಳಾಗಬೇಕು. ಸ್ಥಳೀಯ ಜನರು ಮೇಲಿನ ಆಡಳಿತ ಪ್ರಾಧಿಕಾರಗಳ ಸೂಚನೆಗಳನ್ನು ಪಾಲಿಸುವ ಅಥವಾ ಪೋಷಿಸುವಂತಹ ಸ್ಥಳಗಳಲ್ಲಿ ಇಂತಹ ಬದಲಾವಣೆಯನ್ನು ತರುವುದು ಸರಳವಾದುದಲ್ಲ. ಹೀಗಾಗಿ ಹೊಸ ಬಗೆಯ ಅಭ್ಯಾಸಗಳನ್ನು ಜನರು ವೈಯಕ್ತಿಕ ನೆಲೆಯಲ್ಲಿ ಖಚಿತವಾಗಿ ರೂಪಿಸಿಕೊಳ್ಳುವುದು ಬಹಳ ನಿಧಾನ ಮತ್ತು ಪ್ರಯಾಸಕರವಾದ ಪ್ರಕ್ರಿಯೆ. ಇದನ್ನು ನೇರವಾಗಿ ನಿಭಾಯಿಸುವ, ತಾಂತ್ರಿಕ ಬೆಂಬಲ ಮತ್ತು ವೃತ್ತಿಪರತೆಯನ್ನು, ಕೆಲವು ಮಾರ್ಗದರ್ಶನಗಳಿಂದ ಹಾಗೂ ಭಾಗವಹಿಸುವ ಮೂಲಕ ಬೆಳೆಸಿಕೊಳ್ಳಬೇಕಾಗಿದೆ. ಹೀಗಾಗಿ ಸಾಮರ್ಥ್ಯ ವಿಸ್ತರಣಾ ತರಬೇತಿ ಕಮ್ಮಟಗಳು ಕೇಂದ್ರೀಕೃತ ನಿರ್ವಹಣಾ ವ್ಯವಸ್ಥೆಯನ್ನು ಸ್ಥಳೀಯ ಆಡಳಿತವಾಗಿ ಸರಳಗೊಳಿಸಿ ಬದಲಾಯಿಸಲು ಪ್ರಯತ್ನ ನಡೆಸುವುದರಿಂದ ಇದು ಒಂದು ಪ್ರಕ್ರಿಯೆಯಾಗುತ್ತದೆಯಷ್ಟೆ

ಕೇಂದ್ರೀಕೃತ ಆಡಳಿತ ನಿಯಂತ್ರಣ ವ್ಯವಸ್ಥೆಯು ಸ್ಥಳೀಯ ಆಡಳಿತಕ್ಕೆ ಸ್ಥಿತ್ಯಂತರಗೊಳ್ಳುವಾಗ ಹೆಚ್ಚಿನ ಅನಿರೀಕ್ಷಿತ ಹಾಗೂ ಆಕಸ್ಮಿಕ ಅನುಭವಗಳನ್ನು ಯಾರಾದರೂ ಪಡೆಯಬಹುದು. ಈ ದೃಷ್ಟಿಯಿಂದ ಸ್ಥಳೀಯ ಆಡಳಿತದ ತಿಳುವಳಿಕೆಯನ್ನು ಮತ್ತು ಕುಶಲತೆಯನ್ನು ಸ್ಥಳೀಯ ಮಟ್ಟದಲ್ಲಿ ಸಮರ್ಥವಾಗಿ ಆಚರಣೆಗೆ ತರುವವರಾರು ಎಂಬ ಪ್ರಶ್ನೆ ನಮಗೆ ಎದುರಾಗುತ್ತದೆ. ಅದರಲ್ಲಿಯೂ ಯಾವ ಸಂಸ್ಥೆ ಈ ಜವಾಬ್ದಾರಿಯನ್ನು ಸಮರ್ಥವಾಗಿ ಮುಂದುವರಿಸಬಲ್ಲದು ಎಂದು ನಿರ್ಧರಿಸುವುದು ಬಹಳ ಕಷ್ಟ. ಕೆಲವು ಮುಂದುವರಿದ ರಾಷ್ಟ್ರಗಳಲ್ಲಿ ಯೋಜನೆಗಳನ್ನು ನಿರ್ವಹಣೆ ಮಾಡಬಲ್ಲ ಕೆಲವು ಸಂಸ್ಥೆಗಳು ಸ್ವಲ್ಪಮಟ್ಟಿಗೆ ಇವೆ. ಈ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸುವ ದೃಷ್ಟಿಯನ್ನು ಇಂತಹ ಸಂಸ್ಥೆಗಳು ಹೊಂದಿರಬೇಕು. ಮುಂದುವರಿದು ಹೇಳುವುದಾದರೆ, ಇವುಗಳಲ್ಲಿ ಬಹಳಷ್ಟು ಸಂಸ್ಥೆಗಳು ಬಹಳ ದೂರದ ಪ್ರದೇಶಗಳನ್ನು ಹಾಗೂ ಬಹಳ ಹಿಂದುಳಿದ ಪ್ರದೇಶಗಳನ್ನು ತಲುಪುವಲ್ಲಿ ಸಂಪೂರ್ಣವಾಗಿ ಯಶಸ್ವಿಯಾಗದಿದ್ದರೂ ಅವು ಇಂತಹ ಕಾಯಕ್ರಮಗಳನ್ನು ನಿರ್ವಹಣೆ ಮಾಡುವ ಅನುಭವ ಉಳ್ಳವಾಗಿವೆ. ಹೊಸ ನೀತಿ ನಿರೂಪಣೆಗಳನ್ನು ಸಂದರ್ಭಕ್ಕೆ ತಕ್ಕುದಲ್ಲದ ತರಬೇತಿ ಕಾರ್ಯಾಗಾರಗಳು ಕೇವಲ ಸೈದ್ಧಾಂತಿಕವಾದ ರೂಪದಲ್ಲಿ ಸಂಘಟಿತವಾದಲ್ಲಿ ಅವು ಅಪೂರ್ಣವಾಗುತ್ತವೆ ಎಂಬುದು ಎಲ್ಲರ ಅನುಭವ. ಅದರಲ್ಲಿಯೂ ಇಂತಹ ಕಾರ್ಯಾಗಾರಗಳನ್ನು ಆಗಾಗ್ಗೆ ನಡೆಸುವ ಅಧಿಕಾರ ಹೊಂದಿದವರು ನಡೆಸಿದರೂ ಇವರಿಗೆ ಆಚರಣೆಗೆ ತರಬೇಕಾದ ಸನ್ನಿವೇಶದಲ್ಲಿ ಆಯಾ ಕ್ಷೇತ್ರಗಳಲ್ಲಿ ಇರುವ ಗತಿಶೀಲತೆಯ ಜ್ಞಾನ ಅಥವಾ ತಿಳುವಳಿಕೆ ಇಲ್ಲವಾಗಿರುತ್ತದೆ. ಹೀಗಾಗಿ ತರಬೇತಿ ಕಾರ್ಯಾಗಾರಗಳಲ್ಲಿ ಭಾಗವಹಿಸುವವರ ನೆಲೆಯಲ್ಲಿನ ಅನುಭವಗಳನ್ನು ಬಹಳ ಗಂಭೀರವಾಗಿ ಪರಿಗಣಿಸಿ, ಅವರ ಅಗತ್ಯದ ನೆಲೆಗಳಿಗೆ ಅನುಗುಣವಾಗಿ ತರಬೇತಿಗಳನ್ನು ನೀಡುವುದು ಅಗತ್ಯವಾಗಿದೆ.

ಸಾಮರ್ಥ್ಯ ವಿಸ್ತರಣಾ ಕಾರ್ಯಕ್ರಮದ ಅಗತ್ಯತೆ ಕುರಿತು ವಿಶೇಷವಾದ ಸಮರ್ಥನೆಗಳನ್ನು ನೀಡುವ ಅವಶ್ಯಕತೆ ಇಲ್ಲ. ಆದರೆ ನಾವು ಇದನ್ನು ತುಂಬಾ ಕ್ಲಿಷ್ಟವಾದ ಪ್ರಶ್ನೆಯ ಮೂಲಕ ನೋಡಬೇಕಾಗಿದೆ. ಆ ಪ್ರಶ್ನೆಯೆಂದರೆ ಸ್ಥಳೀಯ ಆಡಳಿತ ಸಾಮರ್ಥ್ಯ ವಿಸ್ತರಣೆಯಂತಹ ತರಬೇತಿ ಕಾರ್ಯಕ್ರಮವನ್ನು ನಿರೀಕ್ಷಿಸುತ್ತಿದೆಯೇ? ಈ ವಿಷಯ ಕುರಿತು ಅಭಿವೃದ್ಧಿ ಹೊಂದುತ್ತಿರುವ ಅನೇಕ ರಾಷ್ಟ್ರಗಳು ಎದುರಿಸುತ್ತಿರುವ ಪ್ರಮುಖ ತೊಡಕೆಂದರೆ, ಸ್ಥಳೀಯ ಆಡಳಿತದ ಸೂಕ್ತಕ್ರಮಗಳ ಬಗ್ಗೆ, ಸ್ಥಳೀಯರಲ್ಲಿ ಅತ್ಯಂತ ಕಡಿಮೆ ಮಟ್ಟದ ತಿಳುವಳಿಕೆಯಿರುವುದಾಗಿದೆ. ಅಥವಾ ಶಿಕ್ಷಣ ಮತ್ತು ಸಾಕ್ಷರತಾ ಕ್ಷೇತ್ರದಲ್ಲಿ ಕಡಿಮೆ ಮಟ್ಟದ ಅಭಿವೃದ್ಧಿಯನ್ನು ಸಾಧಿಸಿರುವುದಾಗಿದೆ. ಹೀಗಾಗಿ ಸ್ಥಳೀಯ ಆಡಳಿತದ ಮೂಲ ಉದ್ದೇಶಗಳನ್ನು ನಿರ್ಧರಿಸಿಕೊಳ್ಳುವುದು ಕಡಿಮೆ. ಇದಕ್ಕೆ ಮತ್ತೆ ಮೂಲ ಶಿಕ್ಷಣದಲ್ಲಿ ಅತ್ಯಂತ ಕಡಿಮೆ ಮಟ್ಟ ಇರುವುದನ್ನು ಲಿಂಕ್ ಮಾಡಬಹುದು. ಹೀಗಾಗಿ ಇದು ಒಂದು ರೀತಿಯ ವಿಷವರ್ತುಲವಾಗಿ ಸ್ಥಳೀಯ ಆಡಳಿತ ಪ್ರಕ್ರಿಯೆಯನ್ನು ನಿಷ್ಫಲಗೊಳಿಸುತ್ತಿದೆ.

ಇದು ಸ್ವಲ್ಪಮಟ್ಟಿಗೆ ವಾಸ್ತವ ಕೂಡ. ತಳಮಟ್ಟದಲ್ಲಿ ಕೆಲಸ ಮಾಡುವವರು ಕೆಲಸವನ್ನು ಯೋಜಿಸಿಕೊಳ್ಳುವಲ್ಲಿ ಮತ್ತು ಅದನ್ನು ನಿರ್ವಹಿಸಿಕೊಳ್ಳುವಲ್ಲಿ ಗಂಭೀರವಾಗಿ ಹಿಂದುಳಿದಿದ್ದಾರೆ. ತಳಮಟ್ಟದಲ್ಲಿ ಸಾಮರ್ಥ್ಯ ವಿಸ್ತರಣಾ ಕಾರ್ಯಕ್ರಮಗಳ ನಿರ್ವಹಣೆಯಲ್ಲಿ ಕ್ರಮಬದ್ಧತೆ ಇಲ್ಲದಿರುವುದಕ್ಕೆ ನಿರ್ದಿಷ್ಟವಾಗಿ ಸರ್ಕಾರಗಳು ಕಾರ್ಯಕ್ರಮಗಳ ಚೌಕಟ್ಟನ್ನು ಬದಲಾಯಿಸಿಕೊಳ್ಳದೆ ಇರುವುದನ್ನು ಕಣ್ಣಾರೆ ಕಂಡರೂ, ಇದಕ್ಕೆ ನಿರ್ದಿಷ್ಟವಾಗಿ ಇದೇ ಕಾರಣ ಎಂದು ಹೇಳಲು ಬರುವುದಿಲ್ಲ. ಅಲ್ಲದೆ ಸ್ಥಳೀಯರು ಬದಲಾವಣೆಯ ಪ್ರಕ್ರಿಯೆಗಳಲ್ಲಿ ಗಂಭೀರವಾಗಿ ಭಾಗವಹಿಸಿ ಅಭಿವೃದ್ಧಿಪರ ಸಾಮರ್ಥ್ಯಗಳನ್ನು ಪಡೆದುಕೊಳ್ಳಬೇಕು ಎಂದು ಹೇಳುವುದು ಎಷ್ಟರಮಟ್ಟಿಗೆ ಸರಿ. ಹೀಗಾಗಿ ವಿಕೇಂದ್ರೀಕರಣದ ಪ್ರಕ್ರಿಯೆಗಳು ಕೇವಲ ತಾಂತ್ರಿಕವಾಗಿ ನಡೆಯದೆ, ಸ್ಥಳೀಯರ ಜೀವನ ಕ್ರಮಗಳನ್ನು ಗುರುತಿಸಿ ಪ್ರತಿನಿಧಿಸುವಂತಿರಬೇಕು.

ಕೇಂದ್ರೀಕೃತ ಲಕ್ಷಣಗಳಿಂದ ನಿರ್ಧಾರಗೊಂಡು ರೂಪುಗೊಂಡಿರುವ ಅಭಿವೃದ್ಧಿ ಕಾರ್ಯಕ್ರಮಗಳು, ಎಲ್ಲೋ ಒಂದು ಕಡೆಗೆ ಸ್ಥಳೀಯ ಪಾಲುದಾರರು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಭಾಗವಹಿಸಿ ಅತ್ಯಂತ ಮಹತ್ವದ ಪಾತ್ರವಹಿಸಬೇಕಾಗಿದೆ. ಅವರು ತಮ್ಮ ತಮ್ಮ ಪಾತ್ರಗಳನ್ನು ನಿರ್ವಹಿಸುವಾಗ ತುಂಬಾ ಸಂಕೀರ್ಣವಾದ ಮತ್ತು ತನ್ನದೇ ಮಿತಿಯನ್ನು ಹೊಂದಿರುವುದರಿಂದ ಇಂತಹ ಪ್ರಕ್ರಿಯೆಗಳು ಬಹಳ ನಿಧಾನವಾಗಿ ನಡೆಯುತ್ತಿವೆ. ಇದು ಸಹಜವಾಗಿ ವಿವಿಧ ಪಾಲುದಾರರು ತಮ್ಮ ಸುತ್ತಲೂ ಹೊಂದಿರುವ ಅಧಿಕಾರ ಸಂಬಂಧಗಳನ್ನು ಬಹಳ ಗಂಭೀರವಾಗಿ ಡಿಸ್‌ಟರ್ಬ್ ಮಾಡುತ್ತದೆ. ಜೊತೆಗೆ ಇಂತಹ ರೂಪಾಂತರಗಳು ತಮ್ಮ ಉದ್ದೇಶಗಳನ್ನು ಸಾಧಿಸಿಕೊಳ್ಳುವಾಗ ಕೂಡ ಹೊರಗಿನ ಮಾಹಿತಿ ಮತ್ತು ಮಾರ್ಗದರ್ಶನದ ಅಗತ್ಯವಿದೆ. ಏಕೆಂದರೆ, ಸ್ಥಳೀಯ ಆಡಳಿತದ ಕಾರ್ಯ ಚಟುವಟಿಕೆಗಳ ಬಗ್ಗೆ ನೇರವಾದ ಅನುಭವದ ಹಿನ್ನೆಲೆಯಲ್ಲಿ ಹೊಸ ಪಾಲಿಸಿಯ ಚೌಕಟ್ಟನ್ನು ರೂಪಿಸುವ ಕುಶಲತೆ ಹೊಂದಿಲ್ಲದವರು ಹೆಚ್ಚು. ಇಂತಹ ಪರಿಸ್ಥಿತಿಯಲ್ಲಿ ಅಥವಾ ಪರಿಸರದಲ್ಲಿ ಮೊದಲಿನಿಂದಲೂ ಮೇಲಿನಿಂದ ಕೆಳಕ್ಕೆ (ಟಾಪ್‌ಡೌನ್) ನೀತಿ ನಿರೂಪಣೆಗಳನ್ನು ನಿರ್ಧರಿಸಿ ಆಚರಣೆಗೆ ತರುವ ವ್ಯವಸ್ಥೆ

ಬದಲಾವಣೆಯಾಗಬೇಕಾದ ಅವಶ್ಯಕತೆಯನ್ನು ಪದೇ ಪದೇ ಹೇಳಬೇಕಾಗುತ್ತದೆ. ಸಹಭಾಗಿತ್ವ ಮಾದರಿಯಲ್ಲಿ ನೀತಿ ನಿರೂಪಣೆ ಮಾಡುವುದು ಅಗತ್ಯವಾಗಿದೆ. ಹೀಗಾಗಿ ಹೊಸ ದಾರಿಯಲ್ಲಿ ಸಾಗುವ ಕಾರ್ಯ ಚಟುವಟಿಕೆಗಳು ಭಾಗವಹಿಸುವಿಕೆಯ ಮೂಲಕವೇ ಬರಬೇಕೆ ಹೊರತು ಕೇವಲ ತರಬೇತಿಗಳಿಂದಲ್ಲ.

ಹೀಗಾಗಿ ಹೊಸ ಕಾರ್ಯಕ್ರಮಗಳು ಪಡೆದುಕೊಳ್ಳಬೇಕಾದ ಚೌಕಟ್ಟುಗಳನ್ನು ಮತ್ತು ಅವು ಜಾರಿಗೊಳಿಸುವಿಕೆಯ ಕೆಲವು ಟ್ರೈಯಲ್ ಆಂಡ್ ಎರರ್‌ಗಳು ಕಲಿಕೆಯ ಭಾಗವಾಗುತ್ತವೆ. ಅದೇ ಸಮಯದಲ್ಲಿ ಸಾಮರ್ಥ್ಯ ವಿಸ್ತರಣಾ ಕಾರ್ಯಚಟುವಟಿಕೆಗೆ ಒತ್ತು ನೀಡಬೇಕಾಗಿದೆ. ಕೊನೆಯದಾಗಿ ಸ್ಥಳೀಯ ಆಡಳಿತ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಆಚರಣೆಗೆ ತರಬೇಕಾದರೆ, ತಳಮಟ್ಟದಲ್ಲಿ ಜನರನ್ನು ಸಬಲೀಕರಿಸಬೇಕಾದರೆ, ಮೂಲ ಚೌಕಟ್ಟಿನಲ್ಲಿ ಬದಲಾವಣೆಗಳನ್ನು ತರಬೇಕು. ಇಂತಹ ಬದಲಾವಣೆಗಳನ್ನು ತರಬೇಕಾದರೆ ಅನೇಕ ಸಲ ಗಂಭೀರವಾಗಿ ಚಿಂತಿಸಬೇಕಾಗುತ್ತದೆ. ಹೊಸ ಲೋಕದೃಷ್ಟಿ ಕೋನದ ಅಗತ್ಯತೆ ಮತ್ತು ಅದರ ವಿಕಾಸವು ಅಧಿಕಾರ ಸಂಬಂಧದ ಜೊತೆಗೆ ಪ್ರಜಾಪ್ರಭುತ್ವ ಮಾದರಿಯ ಪ್ರಕ್ರಿಯೆಯಲ್ಲಿ ನೀತಿ ನಿರ್ಧಾರ ತೆಗೆದುಕೊಳ್ಳುವುದರ ಬಗ್ಗೆ ಸ್ಥಿರವಾದ ನಂಬಿಕೆ ಇಡಬೇಕಾಗುತ್ತದೆ. ಒಟ್ಟಾರೆ ಸ್ಥಳೀಯ ಆಡಳಿತ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ತಳಮಟ್ಟದಲ್ಲಿ ಭಾಗವಹಿಸುವ ಎಲ್ಲಾ ಜನರನ್ನು ಎಲ್ಲಾ ರೀತಿಯಿಂದಲೂ ಅಪ್ಪಟವಾಗಿ ಸಬಲೀಕರಣಗೊಳಿಸಬೇಕು. ಜೊತೆಗೆ ಸ್ಥಳೀಯ ಪಾಲುದಾರರಿಗೆ ಸಂಘಟನೆಯ ಚೌಕಟ್ಟಿನಲ್ಲಿ ಉಂಟಾಗುತ್ತಿರುವ ರೂಪಾಂತರಗಳನ್ನು ಮನದಟ್ಟು ಮಾಡಿಕೊಡಬೇಕು. ಆ ಮೂಲಕ ಹೊಸ ಲೋಕದೃಷ್ಟಿಯ ಜರೂರು, ಅಲ್ಲಿನ ಅಧಿಕಾರ ಸಂಬಂಧಗಳು ಮತ್ತು ಅದಕ್ಕೆ ಅವಶ್ಯಕವೆನಿಸಿದ ಶಾಶ್ವತ ನಂಬಿಕೆ, ಇನ್ನು ಮುಂತಾದವನ್ನು ಸ್ಥಳೀಯರಿಗೆ ವ್ಯಾಪಕ ತರಬೇತಿಗಳ ಮೂಲಕ ನೀಡಬೇಕು. ಆಗ ಮಾತ್ರ ಸ್ಥಳೀಯ ಆಡಳಿತದ ನಿರ್ವಹಣೆಯು ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ನೀತಿ ನಿರ್ಧಾರಗಳನ್ನು ರೂಪಿಸಿ ಬೆಳೆಸುತ್ತದೆ.

ಈ ದಿಕ್ಕಿನಲ್ಲಿ ಎಸ್.ಡಿ.ಎಂ.ಸಿಯು ನಡೆಸಿರುವ ಕಾರ್ಯ ಚಟುವಟಿಕೆಯು ಅತ್ಯಂತ ಪ್ರಮುಖ ಎಂದು ಹೇಳಬಹುದು. ಎಸ್.ಡಿ.ಎಂ.ಸಿ ಸದಸ್ಯರು ತಮ್ಮ ವ್ಯಾಪ್ತಿಯಲ್ಲಿ ಬರುವ ೦೬-೧೪ರ ವಯೋಮಾನದ ಎಲ್ಲಾ ಮಕ್ಕಳು ಶಾಲೆಗೆ ಪ್ರತಿದಿನ ಹಾಜರಾಗುವಂತೆ, ದಾಖಲಾಗುವಂತೆ, ಮಧ್ಯದಲ್ಲಿ ಶಾಲೆ ಬಿಡದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಅದರಲ್ಲಿಯೇ ಎಸ್.ಡಿ.ಎಂ.ಸಿ ಸದಸ್ಯರ ಮಕ್ಕಳು ಎಷ್ಟರಮಟ್ಟಿಗೆ ಶಾಲೆಯಲ್ಲಿ ಇದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕಾಗಿದೆ. ಏಕೆಂದರೆ ಸದಸ್ಯರು ಅವರ ಕರ್ತವ್ಯ ಮತ್ತು ಜವಾಬ್ದಾರಿಯನ್ನು ತಮ್ಮ ತಮ್ಮ ಮನೆಯಲ್ಲಿ ಎಷ್ಟರ ಮಟ್ಟಿಗೆ ಆಚರಣೆಗೆ ತಂದಿದ್ದಾರೆ ಎಂಬುದನ್ನು ಅಳೆಯುವ ಮೂಲಕ ಎಸ್.ಡಿ.ಎಂ.ಸಿ ಕಾರ್ಯಚಟುವಟಿಕೆಯನ್ನು ಗುರುತಿಸಬಹುದಾಗಿದೆ. ಹೀಗಾಗಿ ಎಸ್.ಡಿ.ಎಂ.ಸಿ ಸದಸ್ಯರುಗಳ ಮನೆಯಲ್ಲಿನ ಶೈಕ್ಷಣಿಕ ಪರಿಸ್ಥಿತಿಯನ್ನು ಇಲ್ಲಿ ನಿರ್ಣಾಯಕ ಅಂಶವಾಗಿ ಪರಿಗಣಿಸಲಾಗಿದೆ. ಇದಕ್ಕೆ ಪ್ರಾಥಮಿಕ ಮಾಹಿತಿಯನ್ನು ಎಸ್.ಡಿ.ಎಂ.ಸಿ ಸದಸ್ಯರುಗಳಿಂದಲೇ ಪಡೆದುಕೊಳ್ಳಲಾಗಿದೆ. ಅವರಿಗೆ ಇರುವ ಒಟ್ಟು ಮಕ್ಕಳಲ್ಲಿ ದಿನನಿತ್ಯ ಶಾಲೆಗೆ ಹಾಜರಾಗುವ, ಹಾಜರಾಗದ, ಶಾಲೆಗೆ ದಾಖಲಾಗದೇ ಇರುವ ಮತ್ತು ಶಾಲೆಯನ್ನು ಮಧ್ಯದಲ್ಲಿ

ಬಿಟ್ಟಿರುವ ಮಕ್ಕಳ ಸಂಖ್ಯೆಯನ್ನು ಪ್ರತ್ಯೇಕವಾಗಿ ಪಡೆದುಕೊಂಡು ವಿಶ್ಲೇಷಣೆ ಮಾಡಲಾಗಿದೆ. ನಾವು ಅಧ್ಯಯನಕ್ಕೆ ಒಳಪಡಿಸಿದ ಎಲ್ಲಾ ಎಸ್.ಡಿ.ಎಂ.ಸಿ ಸದಸ್ಯರ ಮಕ್ಕಳು ಶಾಲೆಗೆ ಪ್ರತಿನಿತ್ಯ ಹಾಜರಾಗುತ್ತಿರುವುದು ತಿಳಿದುಬಂದಿದೆ.

ಆದರೆ ೦೬-೧೪ ವಯೋಮಾನದ ಒಟ್ಟು ಮಕ್ಕಳಲ್ಲಿ ಶೇಕಡ ೩.೫೮ರಷ್ಟು ಮಕ್ಕಳು ಶಾಲೆಯನ್ನು ಮಧ್ಯದಲ್ಲಿಯೇ ಬಿಟ್ಟಿರುತ್ತಾರೆ. ಹೀಗೆ ಶಾಲೆಯನ್ನು ಮಧ್ಯದಲ್ಲಿ ಬಿಟ್ಟಿರುವ ಬಹುತೇಕ ಮಕ್ಕಳು ಸಮಾಜದ ಅಂಚಿನಲ್ಲಿರುವ ಸಮುದಾಯಕ್ಕೆ ಹಾಗು ತಳವರ್ಗಕ್ಕೆ ಸೇರಿದವರಾಗಿದ್ದಾರೆ. ಅತ್ಯಂತ ಕುತೂಹಲಕರ ಅಂಶವೆಂದರೆ ಶೇಕಡ ೧.೩೧ರಷ್ಟು ಮಕ್ಕಳು ಯಾವುದೇ ಶಾಲೆಗೆ ದಾಖಲಾಗಿರುವುದಿಲ್ಲ. ಹೀಗೆ ಶಾಲೆಗೆ ದಾಖಲಾಗದೆ ಇರುವ ಮಕ್ಕಳ ಸಂಖ್ಯೆ ಹೆಚ್ಚಾಗಿರುವುದು ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಸದಸ್ಯರ ಕುಟುಂಬದಲ್ಲಿ. ಶಾಲೆಗೆ ದಾಖಲಾಗದ, ಹಾಜರಾಗದ ಹಾಗೂ ಮಧ್ಯದಲ್ಲಿ ಶಾಲೆಬಿಟ್ಟ ಮಕ್ಕಳು ಎಸ್.ಡಿ.ಎಂ.ಸಿ ಸದಸ್ಯರುಗಳ ಕುಟುಂಬದಲ್ಲಿರುವುದು ಎಲ್ಲರಿಗೂ ಶಿಕ್ಷಣ ನೀಡಬೇಕು ಎಂಬ ಉದ್ದೇಶ ಹಾಗೂ ಎಸ್.ಡಿ.ಎಂ.ಸಿ ರಚನೆಯಾದ ಉದ್ದೇಶಕ್ಕೆ ವ್ಯತಿರಿಕ್ತವಾಗಿದೆ. ಅಲ್ಲದೆ ಎಸ್.ಡಿ.ಎಂ.ಸಿ ಸದಸ್ಯರ ಮಕ್ಕಳಲ್ಲಿಯೇ ಪ್ರಾಥಮಿಕ ಶಿಕ್ಷಣಕ್ಕೆ ನಕಾರಾತ್ಮಕ ಮನೋಭಾವನೆ ಇರುವುದು ಮತ್ತು ಸ್ಥಳೀಯ ಸಮುದಾಯದಲ್ಲಿ ಈ ಮನೋಭಾವನೆಯನ್ನು ತರಬೇತಿಗಳ ಮೂಲಕ ಹೋಗಲಾಡಿಸಬೇಕಾಗಿದೆ. ಈ ಕುರಿತು ವಿಶೇಷ ಒತ್ತು ನೀಡುವ ಕಾರ್ಯಯೋಜನೆಗೆ ಎಸ್.ಡಿ.ಎಂ.ಸಿ ಚಾಲನೆ ನೀಡಬೇಕಾಗಿದೆ.

ಇದರ ಜೊತೆಗೆ ಎಸ್.ಡಿ.ಎಂ.ಸಿ ಸದಸ್ಯರು ಮತ್ತು ಪೋಷಕರು ತಮ್ಮ ತಮ್ಮ ಓಣಿ ಅಥವಾ ವಾರ್ಡ್‌ಗಳಲ್ಲಿ ಮಕ್ಕಳ ಗಣತಿಯಲ್ಲಿ ಭಾಗವಹಿಸುವ ಮೂಲಕ ಪ್ರಾಥಮಿಕ ಶಾಲೆಯಲ್ಲಿ ಇರಬೇಕಾದ ಮಕ್ಕಳ ಸಂಖ್ಯೆಯನ್ನು ಖಾತರಿಪಡಿಸಿಕೊಂಡು ಮಕ್ಕಳ ಶಾಲಾ ದಾಖಲಾತಿಯಲ್ಲಿ ಭಾಗವಹಿಸಬೇಕು. ಮಕ್ಕಳ ಶಾಲಾ ಹಾಜರಾತಿಗೆ ಶಾಲೆಯಲ್ಲಿ (ಶಾಲೆಯ ಒಳಗೆ ಮತ್ತು ಹೊರಗೆ) ಓಣಿಯಲ್ಲಿ ಮತ್ತು ಕುಟುಂಬಗಳಲ್ಲಿ ಇರುವ ತೊಡಕುಗಳನ್ನು ಗುರುತಿಸಿ ಪರಿಹರಿಸಲು ಪ್ರಯತ್ನ ನಡೆಸಬೇಕು. ಮಧ್ಯದಲ್ಲಿ ಶಾಲೆ ಬಿಟ್ಟ ಮಕ್ಕಳ ಪೋಷಕರನ್ನು ಸಮಿತಿ ಸದಸ್ಯರಾಗಲು ಮತ್ತು ಶಿಕ್ಷಕರು ಭೇಟಿಮಾಡಿ ಶಿಕ್ಷಣದಿಂದ ಇರುವ ಸಾಮಾಜಿಕ ಅನುಕೂಲಗಳನ್ನು ಅವರಿಗೆ ತಿಳಿಯಪಡಿಸಿ ಮಕ್ಕಳನ್ನು ಶಾಲೆಯಿಂದ ಬಿಡಿಸದಂತೆ ಮನವೊಲಿಸಬೇಕು. ಎಸ್.ಡಿ.ಎಂ.ಸಿ ಸದಸ್ಯರು ಮತ್ತು ಪೋಷಕರು, ಶಿಕ್ಷಕರ ಜೊತೆಗೆ ಸೇರಿ ಮೇಲಿನ ಮೂರು ಚಲಕಗಳನ್ನು (ಶಾಲಾ ದಾಖಲಾತಿ ಮತ್ತು ಹಾಜರಾತಿ ಹಾಗೂ ಮಧ್ಯದಲ್ಲಿ ಶಾಲೆ ಬಿಡುವುದು) ಆದ್ಯತೆ ಮೇರೆಗೆ ಪರಿಹರಿಸಲು ಪ್ರಯತ್ನಿಸಬೇಕು.

ಕ್ಷೇತ್ರ ಕಾರ್ಯದ ಸಮಯದಲ್ಲಿ ಪರಿಣಾಮಕಾರಿ ಶಾಲಾ ನಿರ್ವಹಣೆಯಲ್ಲಿ ಎಸ್.ಡಿ.ಎಂ.ಸಿ ಪಾತ್ರವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಲಾಗಿದೆ. ನಮಗೆ ತಿಳಿದಿರುವಂತೆ ಎಸ್.ಡಿ.ಎಂ.ಸಿ ಸಹಭಾಗಿತ್ವ ಮಾದರಿಯು ಸಾಂಸ್ಥಿಕ ರಚನೆಯನ್ನು ಹೊಂದಿದೆ. ಈ ಸಂಸ್ಥೆ ಶಾಲಾ ಶೈಕ್ಷಣಿಕ ಆಡಳಿತ ವಿಕೇಂದ್ರೀಕರಣ

ಮಾದರಿಯಲ್ಲಿ, ಶಾಲಾಮಟ್ಟದಲ್ಲಿ ತನ್ನದೇ ಆದ ಪಾತ್ರವನ್ನು ನಿರ್ವಹಿಸಿ, ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಹೆಚ್ಚು ಪರಿಣಾಮಕಾರಿಯಾಗುವಂತೆ ನೋಡಿಕೊಳ್ಳುವ ಜವಾಬ್ದಾರಿ ಹೊಂದಿದೆ. ಇದು ಎಸ್.ಡಿ.ಎಂ.ಸಿಗೆ ಇರುವ ಸವಾಲು ಹೌದು. ಅನೇಕ ಕಾರಣಗಳಿಂದಾಗಿ, ಈ ಸಂಸ್ಥೆಯು ತನ್ನ ಕರ್ತವ್ಯ-ಜವಾಬ್ದಾರಿಯನ್ನು ಜಾರಿಗೆ ತರಲು ಸಾಧ್ಯವಾಗುತ್ತಿಲ್ಲ. ಸಭೆಯನ್ನು ನಿಗದಿತ ಅವಧಿಯಲ್ಲಿ ನಡೆಸದಿರುವುದು, ಸಭೆಗೆ ಸದಸ್ಯರ ಗೈರು ಹಾಜರಾತಿ, ಕಾರ್ಯಕ್ರಮಗಳ ಅನುಷ್ಠಾನದಲ್ಲಿ ವಿಳಂಬ, ಸದಸ್ಯರಲ್ಲಿ ಉದಾಸೀನ ಮುಂತಾದ ಗುಣ ಲಕ್ಷಣಗಳನ್ನು ಎಸ್.ಡಿ.ಎಂ.ಸಿ ಹೊಂದಿದೆ. ಹೀಗಾಗಿ ಎಸ್.ಡಿ.ಎಂ.ಸಿಯನ್ನು ಹೆಚ್ಚು ಕ್ರಿಯಾಶೀಲವಾಗುವಂತೆ ಮಾಡುವುದು ಹೇಗೆ? ಈ ಸಂಸ್ಥೆಯ ಬಗ್ಗೆ ಸ್ಥಳೀಯರಲ್ಲಿ ಇರುವ ನಕಾರಾತ್ಮಕ ಮನೋಭಾವನೆಯನ್ನು ಹೋಗಲಾಡಿಸಿ, ಪ್ರತಿ ಶಾಲೆ ಅಥವಾ ಗ್ರಾಮಗಳಲ್ಲಿ ಎಸ್.ಡಿ.ಎಂ.ಸಿ ಬಗ್ಗೆ ಸಕಾರಾತ್ಮಕ ಮನೋಭಾವನೆಯನ್ನು ಸ್ಥಳೀಯರಲ್ಲಿ ಮತ್ತು ಪೋಷಕರಲ್ಲಿ ಹುಟ್ಟು ಹಾಕುವುದು ಹೇಗೆ? ಈ ಪ್ರಶ್ನೆಗಳು ನಮಗೆ ಎದುರಾಗುತ್ತವೆ. ಈ ಸಂಸ್ಥೆಯ ಸದಸ್ಯರ ಕುಟುಂಬಗಳಲ್ಲಿಯೆ, ಶಾಲೆಯನ್ನು ಮಧ್ಯದಲ್ಲಿ ಬಿಟ್ಟಿರುವ ಮತ್ತು ಶಾಲೆಗೆ ದಾಖಲಾಗದ ಮಕ್ಕಳು ಇರುವುದು, ಅವರ ಮಕ್ಕಳ ಶಿಕ್ಷಣದ ಬಗ್ಗೆ ಹೆಚ್ಚಿನ ಪೂರ್ವ ತಯಾರಿ ಮಾಡಿಕೊಳ್ಳದಿರುವುದನ್ನು ಸ್ಪಷ್ಟಪಡಿಸುತ್ತದೆ.

ಮಹಿಳೆಯರು ಭಾಗವಹಿಸುವುದಕ್ಕೆ ಸಂಬಂಧಿಸಿದಂತೆ, ಸರ್ಕಾರದ ನಿಯಮಾನುಸಾರ ಮಹಿಳೆಯರಿಗೆ ಸಮಿತಿಯ ಸದಸ್ಯತ್ವದಲ್ಲಿ ಮೀಸಲಾತಿಯನ್ನು ನೀಡಿದರೆ ಸಾಲದು. ಅವರು ಶಾಲಾ ಶಿಕ್ಷಣದ ಅಭಿವೃದ್ಧಿ ಕುರಿತ ಚರ್ಚೆಯಲ್ಲಿ ಕ್ರಿಯಾಶೀಲರಾಗಿ ಭಾಗವಹಿಸುವಂತಹ ಪರಿಸರವನ್ನು ಒದಗಿಸಬೇಕಾಗಿದೆ. ಹಾಗೆಯೇ ಎಸ್.ಡಿ.ಎಂ.ಸಿ ಸಭೆಗಳಿಗೆ ಸದಸ್ಯರ ಹಾಜರಾತಿಯನ್ನು ಹೆಚ್ಚಳಗೊಳಿಸುವ ವಿಷಯಕ್ಕೆ ಸಂಬಂಧಿಸಿದಂತೆ ಸಭೆಗೆ ಗೈರು ಹಾಜರಾಗುತ್ತಿರುವ ಬಹುತೇಕ ಸದಸ್ಯರು, ಪ್ರತಿದಿನ ಕೂಲಿ ನೌಕರರು ಅಥವಾ ದುಡಿದು ಬದುಕುವ ಹಾಗೂ ಕಡುಬಡತನವಿರುವ ಕುಟುಂಬ ವರ್ಗಕ್ಕೆ ಸೇರಿದವರಾಗಿದ್ದಾರೆ. ಈ ಜನವರ್ಗಕ್ಕೆ ಸೇರಿದ ಸದಸ್ಯರಿಗೆ ಅನುಕೂಲವಾಗುವ ಸಮಯದಲ್ಲಿ ಎಸ್.ಡಿ.ಎಂ.ಸಿ ಸಭೆಗಳನ್ನು ನಡೆಸುವುದರಿಂದ ಹೆಚ್ಚಿನ ಸದಸ್ಯರು ಸಭೆಯ ಚರ್ಚೆಯಲ್ಲಿ ಭಾಗವಹಿಸಲು ಅನುಕೂಲವಾಗುತ್ತದೆ.

ಇಲ್ಲದೇ ಹೋದರೆ ಈಗಾಗಲೇ ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ಅಂಚಿನಲ್ಲಿರುವ ಜನರು ಮತ್ತು ಅವರನ್ನು ಪ್ರತಿನಿಧಿಸುವ ಎಸ್.ಡಿ.ಎಂ.ಸಿ ಸದಸ್ಯರಿಗೆ ಸಭೆಗಳಲ್ಲಿ ತೆಗೆದುಕೊಳ್ಳುವ ನಿರ್ಧಾರಗಳನ್ನು ಕುರಿತು ಚರ್ಚಿಸುವ ಪ್ರಕ್ರಿಯೆಯಲ್ಲಿ ಭಾಗವಹಿಸುವ ಅವಕಾಶವೇ ದೊರಕುವುದಿಲ್ಲ. ಬಹುಶಃ ಇದು ಅವರ ಮಕ್ಕಳ ಶಿಕ್ಷಣದ ಮೇಲೆ ಪರೋಕ್ಷವಾದ ಪರಿಣಾಮವನ್ನು ಬೀರಬಹುದಾಗಿದೆ. ನಮ್ಮ ಅಧ್ಯಯನದಲ್ಲಿ ಸ್ಪಷ್ಟವಾಗುವ ಮತ್ತೊಂದು ಅಂಶವೆಂದರೆ, ಎಸ್.ಡಿ.ಎಂ.ಸಿ ಸದಸ್ಯರಿಗೆ ನೀಡಿದ ತರಬೇತಿಯಿಂದ ಕೆಲವು ಸದಸ್ಯರಲ್ಲಿ ನಿರೀಕ್ಷಿತ ಮಟ್ಟದ ಭಾಗವಹಿಸುವಿಕೆ ಕಂಡುಬಂದಿಲ್ಲ. ಹೀಗಾಗಿ ಸ್ಥಳೀಯ ಸಂದರ್ಭಕ್ಕೆ ಹೊಂದಿಕೊಳ್ಳುವ ರೀತಿಯಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಸಂಘಟಿಸಬೇಕಾಗಿದೆ.

ಮಹಿಳಾ ಸದಸ್ಯರು ಸಭೆಗಳಲ್ಲಿ ಭಾಗವಹಿಸಲು ವೈಯಕ್ತಿಕವಾಗಿ ಆಸಕ್ತಿ ಹೊಂದಿಲ್ಲದಿರುವುದು, ಒಂದು ವೇಳೆ ಭಾಗವಹಿಸಿದ್ದರೂ ನಿರ್ಣಯಗಳನ್ನು ತೆಗೆದುಕೊಳ್ಳುವ ಚರ್ಚೆಯಲ್ಲಿ ಭಾಗವಹಿಸದಿರುವುದು ಇತ್ಯಾದಿ. ಈ ಎಲ್ಲಾ ಪರಿಸ್ಥಿತಿಗೆ ಸಕಾರಾತ್ಮಕವಾದ ಪರಿಸರವನ್ನು ಹುಟ್ಟು ಹಾಕಿ ಮಹಿಳೆಯರು ಶಾಲಾ ಶಿಕ್ಷಣ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸುವಂತೆ ಮಾಡುವುದು ಅವಶ್ಯಕ. ಮಹಿಳೆಯರು ಯಾವಾಗಲೂ ಮನೆಯಲ್ಲಿ ವಿರಾಮವಿಲ್ಲದಷ್ಟು ಕೆಲಸ ಹಾಗೂ ಕೌಟುಂಬಿಕ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವುದರಿಂದ ಎಸ್.ಡಿ.ಎಂ.ಸಿ ಸಭೆಗೆ ಭಾಗವಹಿಸುವುದು ಹೆಚ್ಚುವರಿ ಕೆಲಸ ಎಂದು ಭಾವಿಸಿದ್ದಾರೆ. ಇಲ್ಲಿ ವ್ಯಕ್ತವಾಗುವ ಅಂಶವನ್ನು ಎಸ್.ಡಿ.ಎಂ.ಸಿ ಸದಸ್ಯರಿಗೆ ನೀಡುವ ತರಬೇತಿಗಳ ಮೂಲಕ, ಮಹಿಳೆಯರಿಗೆ ಸಕಾರಾತ್ಮಕ ಬೆಂಬಲವನ್ನು, ಮನೆಯ ಒಳಗೆ ಮತ್ತು ಹೊರಗೆ ಅಂದರೆ ಸಮುದಾಯದಿಂದಲೇ ಒದಗಿಸುವ ಮೂಲಕ ಮಹಿಳೆಯರು ನಿಧಾನವಾಗಿ ಗ್ರಾಮದ ಎಲ್ಲಾ ಅಭಿವೃದ್ಧಿ ಚಟುವಟಿಕೆಯಲ್ಲಿ ಭಾಗವಹಿಸುವ ಪರಿಸರವನ್ನು ಹುಟ್ಟು ಹಾಕಬೇಕಾಗಿದೆ. ಶಾಲೆ ಹಾಗೂ ಎಸ್.ಡಿ.ಎಂ.ಸಿ ಸಭೆಗಳಿಗೆ ಗೈರುಹಾಜರು ಮತ್ತು ಹಾಜರಾಗುವುದು ಜನರ ಮನೋಭಾವಕ್ಕೆ ಸಂಬಂಧಿಸಿದ ವಿಷಯವಾಗಿದೆ. ನಿರ್ದಿಷ್ಟವಾಗಿ ಕಡಿಮೆ ಸಾಕ್ಷರತೆ ಹೊಂದಿರುವ ಸದಸ್ಯರುಗಳನ್ನು ಹೆಚ್ಚು ಸಂವೇದನಾಶೀಲರನ್ನಾಗಿ ಮಾಡಬೇಕು. ಇದರ ಜೊತೆಗೆ ಎಸ್.ಡಿ.ಎಂ.ಸಿ ತರಬೇತಿಗಳನ್ನು ಶಾಲೆಯ ಮುಖ್ಯ ಶಿಕ್ಷಕರು, ಎಲ್ಲಾ ಶಿಕ್ಷಕರು ಹಾಗೂ ಎಲ್ಲಾ ಎಸ್.ಡಿ.ಎಂ.ಸಿ ಸದಸ್ಯರು ಹೆಚ್ಚು ಕ್ರಿಯಾಶೀಲರಾಗುವಂತೆ ರೂಪಿಸಿ, ಎಸ್.ಡಿ.ಎಂ.ಸಿಯ ಎಲ್ಲಾ ಕಾರ್ಯಚಟುವಟಿಕೆಯಲ್ಲಿ ಕ್ರಿಯಾಶೀಲರಾಗಿ ಭಾಗವಹಿಸುವಂತೆ ಆಗಬೇಕು. ಒಟ್ಟಾರೆ, ಎಸ್.ಡಿ.ಎಂ.ಸಿಯ ಸಾಮರ್ಥ್ಯ ವಿಸ್ತರಣಾ ತರಬೇತಿಯ ಗುರಿ ಪ್ರತಿಯೊಬ್ಬ ಸ್ಥಳೀಯರಲ್ಲಿ ಶಾಲಾ ಶಿಕ್ಷಣದ ಅಭಿವೃದ್ಧಿ ಬಗ್ಗೆ ಸಕಾರಾತ್ಮಕ ಮನೋಭಾವನೆ ಬೆಳೆಯುವ ರೀತಿಯಲ್ಲಿ ಸಂಘಟಿಸುವ ಪ್ರಯತ್ನಗಳಾಗಬೇಕಾಗಿದೆ.

ಎಸ್.ಡಿ.ಎಂ.ಸಿ ಸದಸ್ಯರು ತಮ್ಮ ಅಧಿಕಾರವನ್ನು ನಿಗದಿತ ಪ್ರಮಾಣದಲ್ಲಿ ಬಳಕೆ ಮಾಡದಿರುವುದಕ್ಕೆ, ಅವರ ಅಧಿಕಾರದ ಬಗ್ಗೆ ಅವರಿಗೇ ಸಂಪೂರ್ಣವಾದ ತಿಳುವಳಿಕೆ ಇಲ್ಲದೆ, ಶಾಲೆ–ಶಿಕ್ಷಕರು ಮತ್ತು ವಿದ್ಯಾರ್ಥಿಗಳನ್ನು ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ. ಉದಾಹರಣೆಗೆ ಶಾಲೆಗೆ ಆಗಿಂದಾಗ್ಗೆ ಭೇಟಿ ನೀಡಿ, ಮಕ್ಕಳ ಮತ್ತು ಶಿಕ್ಷಕರ ಹಾಜರಾತಿ ಪುಸ್ತಕವನ್ನು ಪರಿಶೀಲಿಸುವುದು, ಶಾಲಾ ವಾರ್ಷಿಕ ಬಜೆಟ್ ತಯಾರಿಕೆಗೆ ಸಲಹೆ ನೀಡುವುದು, ಶಿಕ್ಷಕರು ಮಕ್ಕಳ ಹಾಜರಾತಿಯನ್ನು ವರದಿ ಮಾಡುವುದು, ಶಾಲೆಯ ವಾರ್ಷಿಕ ಕಾರ್ಯಕ್ರಮಗಳನ್ನು ನಿಗದಿಪಡಿಸಿ, ಶಾಲಾ ದಿನಚರಿಯನ್ನು ತಯಾರಿಸುವುದು, ಸಂಪನ್ಮೂಲದ ಕ್ರೋಢೀಕರಣ ಇನ್ನೂ ಮುಂತಾದ ಕಾರ್ಯಚಟುವಟಿಕೆಯಲ್ಲಿ ತಮಗೆ ನಿಗದಿಪಡಿಸಿರುವ ಅಧಿಕಾರವನ್ನು ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಆದರೆ ಎಸ್.ಡಿ.ಎಂ.ಸಿ ಸದಸ್ಯರು ತಮ್ಮನ್ನು ಗ್ರಾಮಪಂಚಾಯಿತಿ ಸದಸ್ಯರುಗಳಿಗೆ ಹಾಗೂ ಇತರ ಪಂಚಾಯತ್ ರಾಜ್ ಸಂಸ್ಥೆಗಳ ಸದಸ್ಯರಿಗೆ ಇರುವ ರಾಜಕೀಯ ಮತ್ತು ಹಣಕಾಸಿನ ಅಧಿಕಾರವನ್ನು ಹೋಲಿಕೆ ಮಾಡಿಕೊಂಡು ನಾವು ಗ್ರಾಮದಲ್ಲಿ ಕೇವಲ ಅಲಂಕಾರಿಕ ಸದಸ್ಯರು ಎಂದು ಭಾವಿಸಿಕೊಳ್ಳುತ್ತಾರೆ. ಇಂತಹ ಪರಿಸ್ಥಿತಿಯಲ್ಲಿಯೇ ಕೆಲವು ರಾಜ್ಯ ಸರ್ಕಾರಗಳು ಶಾಲೆಗಳನ್ನು ಸ್ಥಳೀಯ ಸಮುದಾಯಕ್ಕೆ ನೀಡಲು ಪ್ರಯತ್ನ ಮಾಡಿವೆ. ಕೆಲವು

ವರ್ಷಗಳ ನಂತರ ಎಸ್.ಡಿ.ಎಂ.ಸಿ ತನ್ನ ಹಣಕಾಸಿನ ಸೌಲಭ್ಯಕ್ಕೆ ಸರ್ಕಾರವನ್ನು ಅವಲಂಬಿಸದೇ ಶಾಲೆಯನ್ನು ಸಂಪೂರ್ಣವಾಗಿ ನಡೆಸುವ ಜವಾಬ್ದಾರಿ ತೆಗೆದುಕೊಳ್ಳಬೇಕಾಗಿದೆ. ಈ ದಿಕ್ಕಿನೆಡೆಗೆ ನಡೆಯಲು ಹೆಚ್ಚಿನ ಸಂಶೋಧನಾ ಅಧ್ಯಯನಗಳನ್ನು ಮತ್ತು ತರಬೇತಿ ಕಾರ್ಯಾಗಾರಗಳನ್ನು ಗ್ರಾಮಮಟ್ಟದಲ್ಲಿ ನಡೆಸುವುದು ಇಂದಿನ ಜರೂರು ಎನಿಸಿದೆ.

ಈ ಎಲ್ಲಾ ವಿವರಣೆಗಳಿಂದ ಗ್ರಾಮೀಣ ಪ್ರದೇಶದಲ್ಲಿ ಶಾಲಾ ಶಿಕ್ಷಣವು ಅನೇಕ ಸಮಸ್ಯೆಗಳಿಗೆ ಸಿಲುಕಿಕೊಂಡು ಪರಿಣಾಮಕಾರಿಯಾಗಿ ತನ್ನ ಕೆಲಸವನ್ನು ಆಚರಣೆಗೆ ತರಲು ಸಾಧ್ಯವಾಗುತ್ತಿಲ್ಲ. ಎನ್ನುವುದು ಗೊತ್ತಾಗುತ್ತದೆ. ಉದಾಹರಣೆಗೆ ಶಿಕ್ಷಕರ ಹಾಜರಾತಿಯನ್ನು ಪರಿಶೀಲಿಸಿ ವರದಿಯನ್ನು ನೀಡಲು ಅನಕ್ಷರಸ್ಥ ಎಸ್.ಡಿ.ಎಂ.ಸಿ ಸದಸ್ಯರಿಗೆ ಸಾಧ್ಯವಾಗದೇ ಇರುವುದನ್ನು ಸದಸ್ಯರೇ ತಿಳಿಸಿರುತ್ತಾರೆ. ಶಾಲೆಗೆ ಬೇರೆ ಊರುಗಳಿಂದ ಪ್ರತಿದಿನ ಬಂದು ಹೋಗುವ ಶಿಕ್ಷಕರು ಹೆಚ್ಚಿನ ಸಮಯವನ್ನು ತಮ್ಮ ಪ್ರಯಾಣದಲ್ಲಿ ಕಳೆಯುತ್ತಿದ್ದಾರೆ. ಇದಕ್ಕೂ ಶಾಲೆಗೆ ಶಿಕ್ಷಕರು ತಡಮಾಡಿ ಬರುವುದಕ್ಕೂ ಗೈರುಹಾಜರಾಗುವುದಕ್ಕೂ ಸಂಬಂಧವಿದೆ. ಇದಲ್ಲದೆ ಶಾಲೆಯ ರಚನೆಯ ಒಳಗೆ ಮತ್ತು ಕಲಿಕಾ ಪ್ರಕ್ರಿಯೆಯಲ್ಲಿ ಅನೇಕ ತೊಡಕುಗಳು ಇವೆ. ಅವನ್ನು ಪರಿಶೀಲಿಸಿ ಪರಿಹರಿಸುವ ಪ್ರಯತ್ನ ಸರ್ವಶಿಕ್ಷಾ ಅಭಿಯಾನ ಯೋಜನೆಯ ಮೂಲಕ ನಡೆಯಬೇಕಾಗಿದೆ.

ಗ್ರಾಮಮಟ್ಟದಲ್ಲಿ ಸಹಭಾಗಿತ್ವ ಮಾದರಿ ಸಂಸ್ಥೆಗಳನ್ನು ಸ್ಥಾಪಿಸಿ ವಿಸ್ತರಿಸಲು ಈ ಪ್ರಕ್ರಿಯೆಯ ಮೂಲಕ ಸಮಾಜದ ಅಂಚಿನಲ್ಲಿರುವ ಸಮುದಾಯದ ಜನ-ವರ್ಗ ಸ್ವಲ್ಪ ಮಟ್ಟಿಗಾದರೂ ತಮ್ಮ ಅಭಿಪ್ರಾಯವನ್ನು ಹೇಳಲು ಅವಕಾಶ ದೊರೆತಿದೆ ಎಂಬುದನ್ನು ಯಾವುದೇ ಅನುಮಾನವಿಲ್ಲದೇ ಹೇಳಬಹುದಾಗಿದೆ. ಆದರೂ ಸಮಾಜದಲ್ಲಿ ಇನ್ನೂ ಪ್ರಾಧಾನ್ಯತೆ ಪಡೆದಿರುವ ಸಮಾಜೋ-ಆರ್ಥಿಕ ಹಾಗೂ ರಾಜಕೀಯ ಸಂಕೀರ್ಣತೆ ಮತ್ತು ಅದರಿಂದ ರೂಪಿತವಾಗಿರುವ ಸಾಮಾಜಿಕ ವ್ಯವಸ್ಥೆಯು ಸಮಾಜದ ಅಂಚಿನಲ್ಲಿರುವ ಜನ-ವರ್ಗ ಸಹಭಾಗಿತ್ವ ಸಂಸ್ಥೆಯಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ. ಒಂದು ಪಕ್ಷ ಭಾಗವಹಿಸಿದ್ದರೂ ನೀತಿ ನಿರ್ಧಾರಗಳನ್ನು ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸುವ ಪರಿಸರ ಇನ್ನೂ ದೊರಕಬೇಕಾಗಿದೆ. ಸಾಕ್ಷರತೆಯ ದೃಷ್ಟಿಯಿಂದ ಹಿಂದುಳಿದಿರುವ ಪ್ರದೇಶದಲ್ಲಿನ ಗ್ರಾಮಗಳಲ್ಲಿ ಅದರಲ್ಲಿಯೂ ಶೋಷಿತ ಜಾತಿಗೆ ಸೇರಿದವರು ಮತ್ತು ಮಹಿಳೆಯರನ್ನು ಕೀಳು ಮನೋಭಾವದಿಂದ ನೋಡಲಾಗುತ್ತಿದೆ. ಇದು ಪರೋಕ್ಷವಾಗಿ ಎಸ್.ಡಿ.ಎಂ.ಸಿ ಸಭೆಗಳಲ್ಲಿ ಭಾಗವಹಿಸುವಿಕೆಯನ್ನು ತಡೆಯುತ್ತದೆ. ಈ ಎಲ್ಲಾ ಅಂಶಗಳನ್ನು ಗಂಭೀರವಾಗಿ ಪರಿಗಣಿಸಿ, ಉತ್ತಮ ಸಾಮರ್ಥ್ಯ ವಿಸ್ತರಣಾ ತರಬೇತಿ ನೀಡಲು ಸರ್ಕಾರದ ವಿವಿಧ ಇಲಾಖೆಗಳು ವಿವಿಧ ಹಂತಗಳಲ್ಲಿ ಮಧ್ಯಪ್ರವೇಶಿಸಬೇಕಾಗಿದೆ.

ನಮ್ಮ ಅಧ್ಯಯನವು ಪ್ರಮುಖವಾಗಿ ಗುರುತಿಸಿರುವ ಮತ್ತೊಂದು ಅಂಶವೆಂದರೆ, ತಳಮಟ್ಟದಲ್ಲಿ ಪ್ರಜಾಪ್ರಭುತ್ವ ಮಾದರಿಯಲ್ಲಿ ಸಹಭಾಗಿತ್ವದ ಮೂಲಕ ಶೈಕ್ಷಣಿಕ ಅಭಿವೃದ್ಧಿಯನ್ನು ಸಾಧಿಸುವುದು

ಅಥವಾ ಕಂಡುಕೊಳ್ಳುವುದು. ಪ್ರಜಾಪ್ರಭುತ್ವ ಮಾದರಿ ಸಹಭಾಗಿತ್ವ ಪ್ರಕ್ರಿಯೆಯನ್ನು ಹೆಚ್ಚು ಗಟ್ಟಿಗೊಳಿಸಲು ಇರುವ ಒಂದು ದಾರಿ ಎಂದರೆ ಸಾಮರ್ಥ್ಯ ವಿಸ್ತರಣೆಯ ತರಬೇತಿಯನ್ನು ಹೆಚ್ಚು ಪರಿಣಾಮಕಾರಿಯಾಗಿ ಸಂಘಟಿಸಬೇಕು. ಸಾಮರ್ಥ್ಯ ವಿಸ್ತರಣಾ ತರಬೇತಿಗಳಲ್ಲಿ ಇರುವ ತೊಡಕು ಮತ್ತು ವಿಶಿಷ್ಟತೆಯನ್ನು ಈಗಾಗಲೇ ನಡೆಯುತ್ತಿರುವ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಕಲಿಯಬಹುದಾಗಿದೆ. ಈ ವಿಷಯಗಳನ್ನು ವಾರ್ಷಿಕವಾಗಿ ಚರ್ಚೆ ನಡೆಸಿ ಅಗತ್ಯವೆನಿಸಿದರೆ, ತಿದ್ದುಪಡಿಗೂ ಪ್ರಯತ್ನಿಸಬಹುದು. ಪ್ರಾಥಮಿಕ ಶಾಲೆ ಅಥವಾ ವಯಸ್ಕರ ಶಿಕ್ಷಣ ಅಥವಾ ಇನ್ನಾವುದೇ ರೀತಿಯ ಅನೌಪಚಾರಿಕ ಶಿಕ್ಷಣದ ಪ್ರಗತಿಗೆ ಪೂರಕವಾದ ಅಂಶಗಳನ್ನು ಕಾಯ್ದೆ ರೂಪದಲ್ಲಿ ತರಲು ಸಂವಿಧಾನಾತ್ಮಕ ತಿದ್ದುಪಡಿಗೂ ಪ್ರಯತ್ನಿಸಬಹುದು. ಇವುಗಳೇನೇ ಇದ್ದರೂ ಎಸ್.ಡಿ.ಎಂ.ಸಿ ಪ್ರತಿಯೊಬ್ಬ ಸದಸ್ಯರೂ ಶೈಕ್ಷಣಿಕವಾದ ಅಥವಾ ಶಾಲೆಯ ತಾಂತ್ರಿಕ ವಿಚಾರಣೆ, ಅಥವಾ ಶಾಲೆಯ ಪ್ರತಿದಿನದ ಚಟುವಟಿಕೆಯನ್ನು ನೋಡಿಕೊಳ್ಳುವುದು, ಶಿಕ್ಷಕರು ಮತ್ತು ಮಕ್ಕಳ ಹಾಜರಾತಿ ಇತ್ಯಾದಿ. ಇವು ಪ್ರತಿಯೊಬ್ಬ ಎಸ್.ಡಿ.ಎಂ.ಸಿ ಸದಸ್ಯರಿಗೂ ಮೂಲಭೂತವಾಗಿ ಇರಲೇಬೇಕಾದ ಪ್ರಾಥಮಿಕ ಮಾಹಿತಿ. ಈ ಅಂಶಗಳ ಮೂಲಕ ಶಾಲಾಶಿಕ್ಷಣ ವ್ಯವಸ್ಥೆಯಲ್ಲಿ ಸಾರ್ವಜನಿಕ ಸಾಮಾಜಿಕ ಲೆಕ್ಕಪತ್ರವನ್ನು ಉತ್ತಮಪಡಿಸಬಹುದು. ಹೀಗಾಗಿ ಸ್ಥಳೀಯ ಸಮುದಾಯದ ಸದಸ್ಯರಿಗೆ ನೀಡುವ ಸಾಮರ್ಥ್ಯ ವಿಸ್ತರಣಾ ತರಬೇತಿ ಕಾರ್ಯಕ್ರಮದ ಗುರಿ ಸ್ಥಳೀಯ ಜನರಲ್ಲಿ ಶಿಕ್ಷಣದ ಬಗ್ಗೆ ಅರಿವನ್ನು ಉಂಟುಮಾಡುವುದರ ಜೊತೆ ಜೊತೆಗೆ ಗುಣಮಟ್ಟದ ಶಿಕ್ಷಣ, ಉತ್ತಮ ಶಾಲೆ, ಉತ್ತಮ ಶಿಕ್ಷಕ ಮತ್ತು ಉತ್ತಮ ಕಲಿಕಾ ಪರಿಸರವನ್ನು ಹುಟ್ಟುಹಾಕಲು ಪ್ರಯತ್ನ ಮಾಡಬೇಕು.

ನಾವು ಗಮನಿಸಿದ ಮತ್ತೊಂದು ಪ್ರಮುಖ ಅಂಶ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಮತ್ತು ಗ್ರಾಮಪಂಚಾಯಿತಿ ಹಾಗೂ ಇತರ ಪಂಚಾಯತ್ ರಾಜ್ ಸಂಸ್ಥೆಗಳ ಸದಸ್ಯರ ನಡುವೆ ನೇರ ಸಂಬಂಧ ಇಲ್ಲದಿರುವುದು. ಇದು ಕೇವಲ ಗ್ರಾಮ ಪಂಚಾಯಿತಿಗೆ ಮಾತ್ರ ಸೀಮಿತವಾಗದೆ ಗ್ರಾಮದಲ್ಲಿ ಇರುವ ಇತರ ಸಂಸ್ಥೆಗಳಿಗೂ ಅನ್ವಯವಾಗಬೇಕು. ಗ್ರಾಮೀಣ ಅಭಿವೃದ್ಧಿಗೆ ಇರುವ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಪ್ರತ್ಯೇಕವಾದ ಸ್ಥಳೀಯ ಸಂಸ್ಥೆಗಳು ಹಾಗೂ ಸಮಿತಿಗಳನ್ನು ರಚಿಸುತ್ತಾ ಹೋದರೆ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅಸ್ತಿತ್ವವೇ ಇಲ್ಲದಂತೆ ಆಗುತ್ತದೆ. ಇದು ವಿಕೇಂದ್ರೀಕರಣ ಪ್ರಕ್ರಿಯೆಯ ಮೇಲೆ ನಕಾರಾತ್ಮಕ ಪರಿಣಾಮವನ್ನು ಉಂಟುಮಾಡಬಹುದು. ಹಾಗೆಯೇ, ಎಸ್.ಡಿ.ಎಂ.ಸಿ ಸದಸ್ಯರು ಶಿಕ್ಷಣ ಇಲಾಖೆಯ ವಿವಿಧ ಆಡಳಿತ ಘಟಕಗಳ ಜೊತೆಗೆ ಸಂಬಂಧ ಹೊಂದಿಲ್ಲ ಎಂದು ಹೇಳಬಹುದು. ಇಂತಹ ಪ್ರಕ್ರಿಯೆ ಹೆಚ್ಚು ಅಪಾಯಕಾರಿ. ಏಕೆಂದರೆ ಇದು ಎಸ್.ಡಿ.ಎಂ.ಸಿ ಯನ್ನು ಒಂಟಿಯಾಗಿ ಮಾಡಿಬಿಡುವ ಸಾಧ್ಯತೆ ಇದೆ. ಹೀಗಾಗಿ ಇದಕ್ಕೆ ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮದಲ್ಲಿ ವಿಶೇಷವಾದ ಒತ್ತು ನೀಡಬೇಕಾಗಿದೆ. ಮೇಲೆ ತಿಳಿಸಿದ ಎಲ್ಲಾ ಸ್ಥಳೀಯ ಸಂಘ-ಸಂಸ್ಥೆಗಳ (ಚುನಾಯಿತ ಸಂಸ್ಥೆ ಸೇರಿದಂತೆ) ನಡುವೆ ಸಮನ್ವಯತೆ ತರಲು ಸರ್ಕಾರ ನೀತಿ ನಿಯಮಗಳನ್ನು ಪುನರ್ ಪರಿಶೀಲಿಸಿ ಜಾರಿಗೊಳಿಸಬೇಕಾಗುತ್ತದೆ.

ಇಂದಿನ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮ, ಯೋಜನೆ, ನೀತಿ ಹಾಗೂ ಜನರ ಭಾಗವಹಿಸುವಿಕೆ ಇವೆರಡರ ನಡುವಿನ ಸಂಬಂಧದಲ್ಲಿ ಗ್ರಾಮೀಣ ಪ್ರದೇಶದ ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ಇರುವ ಫಲಿತಗಳು ಯಾವುವು? ಈಗಾಗಲೇ ಶೈಕ್ಷಣಿಕ ನೀತಿಯಲ್ಲಿನ ಮಧ್ಯಸ್ಥಿಕೆಯು ಶಾಲೆಗಳಿಗೆ ಸರಂಜಾಮುಗಳನ್ನು (ಮೂಲಸೌಲಭ್ಯಗಳನ್ನು) ಒದಗಿಸುವ ಹಂತದಿಂದ ಶಿಕ್ಷಣ ಪ್ರೋತ್ಸಾಹಿಸಲು ಕೊಡುವ ಪ್ರೋತ್ಸಾಹಕ ಕಾರ್ಯಕ್ರಮಗಳಿಗೆ ಸೀಮಿತವಾಗಿವೆ. ಆದರೆ ಮೂಲಸೌಲಭ್ಯಗಳು ಪ್ರಾಥಮಿಕ ಹಂತದಲ್ಲಿ ಶಾಲೆಗಳಿಗೆ ದೊರೆತರೂ ಕೂಡ ದಲಿತರಿಗೆ ಶಾಲೆಗಳು ಸಾಮಾಜಿಕವಾಗಿ ದೊರೆಯುವ ಬಗ್ಗೆ ಅಂತಹ ಹೆಚ್ಚಿನ ಗಮನವನ್ನೇ ಹರಿಸಿಲ್ಲ. ಹೀಗಾಗಿ ತಳ ಜಾತಿ-ವರ್ಗಗಳ ಮಕ್ಕಳು ಶೈಕ್ಷಣಿಕವಾಗಿ ಅನುಭವಿಸುವ ಬೇಧ-ಭಾವಗಳನ್ನಾಗಲೀ ಅಥವಾ ಅವರ ಶೈಕ್ಷಣಿಕ ಅನುಭವಗಳನ್ನಾಗಲೀ ವಿವರಿಸುವಲ್ಲಿ ಶೈಕ್ಷಣಿಕ ನೀತಿಗಳು ವಿಫಲವಾಗಿವೆ ಅಥವಾ ಅದರ ವೈರುಧ್ಯಗಳನ್ನು ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಗಮನಿಸುವುದಿಲ್ಲ. ಹಾಗಾಗಿ ಇಲ್ಲಿ ನಡೆಯುವ ನಡೆಯುತ್ತಿರುವ ಚರ್ಚೆಯಲ್ಲಿ ದಲಿತರ ಮಕ್ಕಳ ಶಾಲೆ ಭಾಗವಹಿಸುವಿಕೆ ಹಾಗೂ ಅವರು ಪಡೆಯುವ ಶಿಕ್ಷಣದ ಗುಣಮಟ್ಟವನ್ನು ನಿರ್ಧರಿಸಿದೆ.

ಕುಟುಂಬಗಳ ಆದಾಯವು ಮಕ್ಕಳ ಶಿಕ್ಷಣಕ್ಕೆ ಬಹುದೊಡ್ಡ ಅಡಚಣೆಯಾಗಿದೆ. ಶಿಕ್ಷಣದ ಖಾಸಗಿ ವೆಚ್ಚ, ಮಕ್ಕಳು ಮಾಡಬೇಕಾದ ದುಡಿಮೆಯ ಬಗ್ಗೆ ನಾವು ಗಂಭೀರವಾಗಿ ಚಿಂತಿಸಬೇಕಾದ ತುರ್ತಿದೆ. ಇಂದಿನ ನೀತಿಯಂತೆ ಮಕ್ಕಳಿಗೆ ನೀಡುವ ಪ್ರೋತ್ಸಾಹಕ ಸವಲತ್ತುಗಳು ಶಿಕ್ಷಣಕ್ಕೆ ಸಂಬಂಧಿಸಿದಂತೆ ಬಡತನದ ಅಡಚಣೆಗಳನ್ನು ನಿವಾರಿಸಲು ಸಾಧ್ಯವಿಲ್ಲ. ಮಕ್ಕಳ ದುಡಿಮೆಗೆ ಸಂಬಂಧಿಸಿದಂತೆ ಬಡವರಿಗೆ ಜೀವನ ನಡೆಸಲು ಬೇಕಾದ ಸವಲತ್ತುಗಳನ್ನು ಪಡೆದುಕೊಳ್ಳುವುದು ಮುಖ್ಯವಾಗುತ್ತದೆ. ಅದೇ ಸಂದರ್ಭದಲ್ಲಿ ಶಾಲೆಗಳು ತಳ ಜಾತಿ ಮತ್ತು ಸಾಮಾಜಿಕ ಗುಂಪುಗಳೆಡೆಗೆ ಚಾಚಿಕೊಂಡು ಅವರಿಗೆ ಅರ್ಥಪೂರ್ಣ ಶಿಕ್ಷಣ ಒದಗಿಸಿ, ಶಾಲಾ ಸಮಯದ ವಿಷಯದಲ್ಲಿ ಸ್ವಲ್ಪ ಮೃದು ಧೋರಣೆ ತೋರಿ, ಅವರಿಗೆ ಬೇಕಾದ ಶೈಕ್ಷಣಿಕ ಸಹಾಯ ನೀಡಿದರೆ ತುಂಬಾ ಚಿಕ್ಕಮಕ್ಕಳು ಬಲವಂತದಿಂದ ದುಡಿಮೆಗಾರರಾಗುವುದನ್ನು ತಪ್ಪಿಸಬಹುದು, ಜೊತೆಗೆ ದೊಡ್ಡ ಮಕ್ಕಳು ಕೆಲಸಕ್ಕೆ ಸೇರುವುದನ್ನು ತಡೆಯುವಲ್ಲಿ ಸಹಾಯವಾಗಬಹುದು.

ಶಿಕ್ಷಣದ ಗುಣಮಟ್ಟ ವಿಷಯವು ತುಂಬಾ ಗಂಭೀರವಾಗಿ ಚಿಂತಿಸಬೇಕಾದ ವಿಷಯ. ಇದು ಉಚಿತ ಕಡ್ಡಾಯ ಶಿಕ್ಷಣ ನೀತಿಯ ವೈಫಲ್ಯ ಮತ್ತು ಪ್ರಾಥಮಿಕ ಹಂತದಲ್ಲಿಯೂ ಖಾಸಗಿ ಶಿಕ್ಷಣ ವ್ಯಾಪಿಸಿರುವ ಕಾರಣದಿಂದಾಗಿ ತುಂಬಾ ಮುಖ್ಯವಾಗಿ ಬಿಡುತ್ತದೆ. ಕಡಿಮೆ ಆದಾಯದ ಕುಟುಂಬಗಳು ತಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲು ತವಕಿಸುತ್ತವೆ. ಅದಕ್ಕಾಗಿ ಅವು ಖಾಸಗಿ ರಂಗದ ಶಾಲೆಗಳೆಡೆ ಮುಖ ಮಾಡುತ್ತಿರುವ ಲಕ್ಷಣಗಳು ಕಾಣುತಿವೆ. ಏಕೆಂದರೆ, ಸಾರ್ವಜನಿಕವಾಗಿ ನೀಡುವ ಶಿಕ್ಷಣವು ತನ್ನ ಗುರಿ ಸಾಧಿಸುವಲ್ಲಿ ವಿಫಲವಾಗಿದೆ. ಆದರೆ ಈ ಖಾಸಗಿ ಶಾಲೆಗಳಲ್ಲಿ ಖರ್ಚು ವಿಪರೀತವಾದರೆ ಅಲ್ಲಿನ ಶಾಲಾ ಶಿಕ್ಷಣದ ಗುಣಮಟ್ಟ ಚಿಂತೆಗೀಡು ಮಾಡುವಂತಿದೆ. ಅಧಿಕೃತ ನೀತಿಯೂ ಬದಲಾಗುತ್ತಾ, ಶಿಕ್ಷಣ ವಂಚಿತ ಚಿಕ್ಕ ಪುಟ್ಟ ಗುಂಪುಗಳಿಗಾಗಿ ಹೊಸ ಮಾದರಿ ಹಾಗೂ ಪರ್ಯಾಯ ಶಾಲೆ ನಡೆಸುತ್ತಿರುವುದು ಒಂದು ರೀತಿಯಲ್ಲಿ ಸ್ವಾಗತಾರ್ಹ ಬದಲಾವಣೆ ಎಂದರೂ

ಸಮಾನ ಶಾಲಾ ಶಿಕ್ಷಣ ವ್ಯವಸ್ಥೆಗೆ ಅಪಾಯಕಾರಿಯಾಗಿದೆ. ಸಮಾನತೆಯ ವಿಸ್ತತರೂಪದಲ್ಲಿ ಬೇಧ-ಭಾವ ಇಲ್ಲದ ಶಿಕ್ಷಣವು ಮಗುವಿನ ಸಂವಿಧಾನಿಕ ಹಕ್ಕಾಗಿ ರೂಪುಗೊಳ್ಳಲು ಇಂತಹ ಪರ್ಯಾಯ ಹಾಗೂ ಹೊಸ ಮಾದರಿ ಶಾಲೆಗಳು ಇತರ ಶಾಲೆಗಳಿಗಿಂತ ಯಾವುದೇ ರೀತಿಯಲ್ಲೂ ಕೀಳಾಗಿರದೆ ಶಿಕ್ಷಣ ವಂಚಿತರಿಗೆ ಉತ್ತಮ ಶಿಕ್ಷಣ ನೀಡುವಂತೆ ಮಾಡುವುದು ತುಂಬಾ ಅಗತ್ಯ.

ಅನುಬಂಧಗಳು

ಆಕರ ಗ್ರಂಥಸೂಚಿ

ಆಕರ ಗ್ರಂಥಸೂಚಿ

- ಅಖಿಲ ಆರ್., (೨೦೦೫), *ರೀಚಿಂಗ್ ಗ್ಲೋಬರ್ ಗೋಲ್ಸ್ ಇನ್ ಪ್ರೈಮರಿ ಎಜ್ಯುಕೇಶನ್*, **ಸಮ್ ಜಂಡರ್ ಕನ್ಸರ್ನ್ ಫಾರ್ ತಮಿಳುನಾಡು**, ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, ಹಿತಕಾರಿ ಹೌಸ್ ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.
- ಅಗರವಾಲ್, (೨೦೦೦), *ಆ್ಯನ್ ಅಸೆಸ್‌ಮೆಂಟ್ ಆಫ್ ಟ್ರೆಂಡ್ ಇನ್ ಆಕ್ಸೆಸ್ ಅಂಡ್ ರಿಟೆನ್ಷನ್*, **ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಜ್ಯುಕೇಷನಲ್ ಪ್ಲಾನಿಂಗ್ ಅಂಡ್ ಅಡ್ಮಿನಿಸ್ಟ್ರೇಷನ್**, ನ್ಯೂಡೆಲ್ಲಿ.
- ಅರವಿಂದ ಮಾಲಗುತ್ತಿ, (೨೦೦೦), *ದಲಿತ ಸಾಹಿತ್ಯದ ತಾತ್ವಿಕ ನೆಲೆ-ನಿಲುವುಗಳು*, **ದಲಿತಜ್ಞ**, ದಲಿತ ಸಾಹಿತ್ಯ ಪರಿಷತ್ ರಾಜ್ಯ ಘಟಕ ಗದಗ.
- ಅಮ್ಮಾನ್ ಮಧನ್, (೨೦೦೫), *ಫರ್‌ಸ್ಪೆಕ್ಟಿವ್ ಆನ್ ಎಜ್ಯುಕೇಶನ್*, **ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ** (ಜುಲೈ ೩೦), ಹಿತಕಾರಿ ಹೌಸ್, ಶಾಹಿದ್ ಭಗವತ್‌ಸಿಂಗ್ ರೋಡ್, ಮುಂಬೈ.
- ಅರವಿಂದ ಚೊಕ್ಕಾಡಿ, (೨೦೦೭), **ಶಿಕ್ಷಣ ದೃಷ್ಟಿ**, ಸುಮುಖ ಪ್ರಕಾಶನ, ವಿದ್ಯಾರಣ್ಯ ನಗರ, ಮಾಗಡಿರಸ್ತೆ, ಬೆಂಗಳೂರು
- ಅರವಿಂದ ಚೊಕ್ಕಾಡಿ, (೨೦೦೭), **ಬದುಕಿಗಾಗಿ ಶಿಕ್ಷಣ**, ಲೋಹಿಯಾ ಪ್ರಕಾಶನ, ಕಪ್ಪಗಲ್ಲು ರಸ್ತೆ, ಬಳ್ಳಾರಿ
- ಇಂದಿರಾ ಆರ್., (೨೦೦೨), **ಮಹಿಳೆ ಸಮಾಜ ಮತ್ತು ಸಂಸ್ಕೃತಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ
- ಉದಯಕುಮಾರ ಇರ್ವತ್ತೂರು ಮತ್ತು ತೀ.ನಂ. ಶ್ರೀಧರ್, (೨೦೦೧-೦೨), *ಮಹಿಳಾ ಅಭಿವೃದ್ಧಿಯನ್ನು ರೂಪಿಸಿದ ಅಗತ್ಯ ಮತ್ತು ಅನಿವಾರ್ಯತೆಗಳು ಒಂದು ಚಿಂತನೆ*, **ಅಭಿವೃದ್ಧಿ**

ಅಧ್ಯಯನ ಸಮಾಜ ವಿಜ್ಞಾನ ಪತ್ರಿಕೆ, ಸಂಪುಟ ೧, ಸಂಚಿಕೆ ೧, ಡಿಸೆಂಬರ್-ಮೇ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

- ಉಷಾ ರಾಮಕುಮಾರ್, (೨೦೦೭), *ಕರ್ನಾಟಕದಲ್ಲಿ ಸಾಕ್ಷರತಾ ಕಾರ್ಯಕ್ರಮಗಳ ಪ್ರಗತಿ ಒಂದು ವಿಶ್ಲೇಷಣೆ*, **ಯೋಜನಾ ಅಭ್ಯುದಯ ಮಾಸಪತ್ರಿಕೆ** (ಅಕ್ಟೋಬರ್), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.
- ಕರ್ನಾಟಕ ಸರ್ಕಾರ, (೨೦೦೨-೦೩), **ಶೈಕ್ಷಣಿಕ ಅಂಕಿ-ಅಂಶಗಳ ಪಕ್ಷಿನೋಟ**, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.
- ಕರ್ನಾಟಕ ಸರ್ಕಾರ, (೨೦೦೩), **ಮಕ್ಕಳ ಸಮೀಕ್ಷೆ**, (ಸಿ.ಪಿ.ಇ). ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.
- ಕರ್ನಾಟಕ ಸರ್ಕಾರ, (೧೯೯೯), **ಮಾನವ ಅಭಿವೃದ್ಧಿ ವರದಿ**, ಯೋಜನಾ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.
- ಕರ್ನಾಟಕ ಸರ್ಕಾರ, (೨೦೦೫), **ಮಾನವ ಅಭಿವೃದ್ಧಿ ವರದಿ**, ಯೋಜನಾ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.
- ಕರ್ನಾಟಕ ಸರ್ಕಾರ, (೨೦೦೫), **ಮಕ್ಕಳ ಜನಗಣತಿ**, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.
- ಕರೂರ ಎನ್.ಜಿ., (೧೯೯೯), **ಶಿಕ್ಷಣದ ಪರಮಗುರಿ**, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
- ಕರೂರ ಎನ್.ಜಿ., (೨೦೦೧), **ಪ್ರಾಥಮಿಕ ಶಿಕ್ಷಣ-ಸಮಸ್ಯೆಗಳು ಹಾಗೂ ಪರಿಹಾರಗಳು**, ಶಿಕ್ಷಣ ಮಾರ್ಗ, ಸ್ವಪ್ನಬುಕ್ ಹೌಸ್, ಬೆಂಗಳೂರು.
- ಕರೂರ ಎನ್.ಜಿ., (೨೦೦೩), **ಶಿಕ್ಷಣ ಮಾರ್ಗ**, ಸ್ವಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು.
- ಕುಮಾರ ಸ್ವಾಮಿ ಎಚ್., (೨೦೦೭), *ಗುಣಮಟ್ಟದ ಶಿಕ್ಷಣ : ತರಗತಿಯಲ್ಲಿನ ಪ್ರಕ್ರಿಯೆಗಳು*, **ಅಭಿವೃದ್ಧಿ ಅಧ್ಯಯನ** ಸಮಾಜ ವಿಜ್ಞಾನ ಪತ್ರಿಕೆ, (ಜನವರಿ-ಜೂನ್), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ
- ಕುಮಾರ್ ಟಿ.ಎಂ., (೨೦೦೪), **ಪ್ರಾಥಮಿಕ ಶಿಕ್ಷಣ ಒಂದು ಚರ್ಚೆ**, ಶ್ರೀದೇವಿ ಪ್ರಕಾಶನ, ನಾಗಸಂದ್ರ ಪೋಸ್ಟ್, ಬೆಂಗಳೂರು
- ಕುಲಕರ್ಣಿ ಎನ್.ಕೆ., (೧೯೯೭), **ಸಮಗ್ರ ಶಿಕ್ಷಣ**, ಮಿರಾಂಬಿಕ ಮುದ್ರಣಾಲಯ, ಶ್ರೀ ಅರವಿಂದ ಸಂಕೀರ್ಣ, ೯ನೇ ಅಡ್ಡರಸ್ತೆ, ಜೆ.ಪಿ. ನಗರ, ಬೆಂಗಳೂರು
- ಕುಲಕರ್ಣಿ ಕೆ.ಜಿ., (೨೦೦೬), **ಉದಯೋನ್ಮುಖ ಭಾರತದಲ್ಲಿ ಶಿಕ್ಷಣ**, ಪ್ರದೀಪ ಪ್ರಕಾಶನ, ಜೆ.ಟಿ. ಕಾಲೇಜು ಹತ್ತಿರ, ಗದಗ.

- ಕೃಷ್ಣಕುಮಾರ್, ಮನಿಷ ಪ್ರಿಯಮ್, ಸಾಧನಾ ಸಕ್ಸೇನ್, (೨೦೦೧), **ಲುಕಿಂಗ್ ಬಿಯಾಂಡ್‌ದ ಸಮ್ ಸ್ಕ್ರೀನ್**, ಡಿ.ಪಿ.ಇ.ಪಿ. ಅಂಡ್ ಪ್ರೈಮರಿ ಎಜ್ಯುಕೇಶನ್ ಇನ್ ಇಂಡಿಯಾ, ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, (ಫೆಬ್ರವರಿ ೧೭), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.
- ಕೃಷ್ಣಕುಮಾರ್, ಕನ್ನಡಕ್ಕೆ ರಜನೀಕಾಂತ್ ಎಂ.ಎಸ್., (೨೦೦೬), *ಹೊಸಶೈಕ್ಷಣಿಕ ಸವಾಲಿನಲ್ಲಿ ಗ್ರಾಮೀಣ ಮಕ್ಕಳು*, **ಯೋಜನಾ ಅಭ್ಯುದಯ ಮಾಸಪತ್ರಿಕೆ**, (ಡಿಸೆಂಬರ್), ಸಮಾಚಾರ ಮತ್ತು ಪ್ರಸಾರ ಸಚಿವಾಲಯ ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.
- ಕೊಠಾರಿ ಬ್ರಿಜ್ ಆ್ಯಂಡ್ ಪಿ.ಜಿ.ವಿ. ಶೇರಿ ಚಂದ್, (೨೦೦೩), **ರೀಡಿಂಗ್ ಬಿಯಾಂಡ್ ದಿ ಆಲ್ಫಾಬೆಟ್ಸ್**, ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ
- ಗಣೇಶ ಭಟ್ಟ, (೨೦೦೭), *ಜಾಗತೀಕರಣದ ಹಿನ್ನೆಲೆಯಲ್ಲಿ ಬದಲಾಗುತ್ತಿರುವ ಶಿಕ್ಷಕರ ಪಾತ್ರ*, **ಯೋಜನಾ ಅಭ್ಯುದಯ ಮಾಸಪತ್ರಿಕೆ** (ಸೆಪ್ಟೆಂಬರ್), ಸಮಾಚಾರ ಮತ್ತು ಪ್ರಸಾರ ಸಚಿವಾಲಯ ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.
- ಗಣೇಶ ಭಟ್ಟ, (೨೦೦೭), *ಮೂಲ ಸೌಲಭ್ಯಗಳಿಲ್ಲದೆ ಸಾರ್ವತ್ರಿಕ ಶಿಕ್ಷಣ ಸಾಧ್ಯವಿಲ್ಲ.* **ಟೀಚರ್ ಶೈಕ್ಷಣಿಕ ಮಾಸಪತ್ರಿಕೆ** (ಮಾರ್ಚ್), ಭಾರತ ಜ್ಞಾನ ವಿಜ್ಞಾನ ಸಮಿತಿ, ಭಾರತೀಯ ವಿಜ್ಞಾನ ಸಂಸ್ಥೆಯ ಆವರಣ, ಬೆಂಗಳೂರು.
- ಗವರ್ನಮೆಂಟ್ ಆಫ್ ಇಂಡಿಯಾ, (೧೯೮೬), ನ್ಯಾಷನಲ್ ಪಾಲಿಸಿ ಆನ್ ಎಜುಕೇಷನ್, ನ್ಯೂಡೆಲ್ಲಿ
- ಗವರ್ನಮೆಂಟ್ ಆಫ್ ಇಂಡಿಯಾ, (೧೯೯೨), ನ್ಯಾಷನಲ್ ಪಾಲಿಸಿ ಆನ್ ಎಜುಕೇಷನ್, (ರಿವೈಸ್ಡ್), ನ್ಯೂಡೆಲ್ಲಿ
- ಗವರ್ನಮೆಂಟ್ ಆಫ್ ಇಂಡಿಯಾ, (೧೯೯೩), **ಸಿ.ಎ.ಬಿ.ಇ. ಕಮಿಟಿ ಆನ್ ಡಿಸೆಂಟ್ರಲೈಜ್ಡ್ ಮ್ಯಾನೇಜ್‌ಮೆಂಟ್ ಆಫ್ ಎಜುಕೇಷನ್**, ಮಿನಿಸ್ಟ್ರಿ ಆಫ್ ಹ್ಯೂಮನ್ ರಿಸೋರ್ಸ್ ಡೆವಲಪ್ಮೆಂಟ್, ಡಿಪಾರ್ಟ್‌ಮೆಂಟ್ ಆಫ್ ಎಜುಕೇಷನ್, ನ್ಯೂಡೆಲ್ಲಿ
- ಗವರ್ನಮೆಂಟ್ ಆಫ್ ಕರ್ನಾಟಕ, (೨೦೦೧), ***ಸ್ಕೂಲ್ ಡೆವಲಪ್‌ಮೆಂಟ್ ಆ್ಯಂಡ್ ಮಾನಿಟರಿಂಗ್ ಕಮಿಟಿ (ಎಸ್.ಡಿ.ಎಂ.ಸಿ.)***, ರೆಕಮಂಡೇಷನ್ ಆಫ್ ದಿ ಸ್ಟೇಟ್ ಟಾಸ್ಕ್‌ಫೋರ್ಸ್ ಆಫ್ ಎಜುಕೇಷನ್, ಡಿಪಾರ್ಟ್‌ಮೆಂಟ್ ಆಫ್ ಎಜುಕೇಷನ್, ಬೆಂಗಳೂರು
- ಗೋಪಾಲ್ ಸಿ.ಆರ್., (೨೦೦೪), *ಸಾಕ್ಷರತಾ ಸಿದ್ಧಾಂತ, ಕಾರ್ಯನೀತಿ ಮತ್ತು ಆಚರಣೆ : ಅರ್ಧ ಶತಮಾನದ ಅನುಭವ*, **ಸಾಕ್ಷರತಾ ಅಧ್ಯಯನ**, ಸಂಚಿಕೆ ೫, ಸಂಶೋಧನಾ ವಿಭಾಗ, ರಾಜ್ಯ ಸಂಪನ್ಮೂಲ ಕೇಂದ್ರ ಕರ್ನಾಟಕ, ಮೈಸೂರು
- ಗೋವಿಂದೇಗೌಡ ಎಚ್.ಜಿ., (೧೯೯೬), *ಸರ್ಕಾರಗಳ ರಾಜಕೀಯ ಬದ್ಧತೆ ಹಾಗೂ ಸಹಾಯ ಆಗ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಸಾಧ್ಯ*, **ಯೋಜನಾ ಅಭ್ಯುದಯ ಮಾಸಪತ್ರಿಕೆ**

(ಸೆಪ್ಟೆಂಬರ್), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.

- ಗೋವಿಂದ ಆರ್ ಅಂಡ್ ವರ್ಗೀಸ್ ಎನ್.ವಿ., (೧೯೯೩), *'ಕ್ವಾಲಿಟಿ ಆಫ್ ಪ್ರೈಮರಿ ಸ್ಕೂಲಿಂಗ್ : ಇನ್ ಎಮ್‌ಪೆರಿಕಲ್ ಸ್ಟಡಿ', ಜರ್ನಲ್ ಆಫ್ ಎಜುಕೇಷನಲ್ ಪ್ಲ್ಯಾನಿಂಗ್ ಅಂಡ್ ಆಡ್ಮಿನಿಸ್ಟ್ರೇಶನ್-೬.*
- ಗೋವಿಂದ ಆರ್., (೧೯೯೭), **ಡಿಸೆಂಟ್ರಲೈಜೆಷನ್ ಆಫ್ ಎಜುಕೇಷನಲ್ ಮ್ಯಾನೇಜ್‌ಮೆಂಟ್ ಎಕ್ಸ್‌ಪೀರಿಯನ್ಸ್ ಫ್ರಮ್ ಸೌತ್ ಏಷಿಯಾ,** ಯು.ಎನ್.ಇ. ಎಸ್.ಸಿ.ಓ ; ಎನ್.ಐ.ಇ.ಪಿ.ಎ.
- ಗೋವಿಂದ. ಆರ್., (೧೯೯೯), **ಡೈನಾಮಿಕ್ಸ್ ಆಫ್ ಡಿಸೆಂಟ್ರಲೈಜಡ್ ಮೆನೆಜ್‌ಮೆಂಟ್ ಆಂಡ್ ಕಮ್ಯುನಿಟಿ ಎಮ್‌ಪವರ್‌ಮೆಂಟ್ ಇನ್ ಪ್ರೈಮರಿ ಎಜುಕೇಷನ್ : ಎ ಕಂಪ್ಯಾರಿಟೀವ್ ಎನಾಲಿಸಿಸ್ ಆಫ್ ಪಾಲಿಸಿ ಆಂಡ್ ಪ್ರಾಕ್ಟೀಸ್ ಇನ್ ಟು ಸ್ಟೇಟ್ಸ್ ಆಫ್ ಇಂಡಿಯಾ,** ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನಲ್ ಪ್ಲ್ಯಾನಿಂಗ್ ಆಂಡ್ ಅಡ್ಮಿಸ್ಟ್ರೇಶನ್, ನ್ಯೂ ಡೆಲ್ಲಿ.
- ಗೋವಿಂದ. ಆರ್., (೨೦೦೨), **ಇಂಡಿಯಾ ಎಜುಕೇಷನ್ ರಿಪೋರ್ಟ್,** ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ನ್ಯೂ ಡೆಲ್ಲಿ.
- ಗೋವಿಂದ ಆರ್., (೨೦೦೨.ಬಿ), **ಇಂಡಿಯಾ ಎಜುಕೇಶನ್ ರಿಪೋರ್ಟ್ : ಎ ಪ್ರೊಫೈಲ್ ಆಫ್ ಬೇಸಿಕ್ ಎಜುಕೇಷನ್,** ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂಡೆಲ್ಲಿ.
- ಗೋವಿಂದ ಆರ್., (೨೦೦೩.ಎ), **ಕಮ್ಯೂನಿಟಿ ಪಾರ್ಟಿಸಿಪೇಶನ್ ಆ್ಯಂಡ್ ಎಂಪವರ್‌ಮೆಂಟ್ ಇನ್ ಪ್ರೈಮರಿ ಎಜುಕೇಷನ್,** ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ.
- ಗೋವಿಂದ ಆರ್., (೨೦೦೩.ಬಿ), **ಡೈನಾಮಿಕ್ಸ್ ಆಫ್ ಡಿಸೆಂಟ್ರಲೈಜ್ಡ್ ಮ್ಯಾನೆಜ್‌ಮೆಂಟ್ ಇನ್ ಪ್ರೈಮರಿ ಎಜುಕೇಶನ್: ಪಾಲಿಸಿ ಆ್ಯಂಡ್ ಪ್ರಾಕ್ಟೀಸ್ ಇನ್ ರಾಜಸ್ಥಾನ್ ಆ್ಯಂಡ್ ಮಧ್ಯಪ್ರದೇಶ್,** ಇನ್, ಗೋವಿಂದ ಆರ್., (ಎಡ್) *ಕಮ್ಯೂನಿಟಿ ಪಾರ್ಟಿಸಿಪೇಶನ್ ಆ್ಯಂಡ್ ಎಂಪವರ್‌ಮೆಂಟ್ ಇನ್ ಪ್ರೈಮರಿ ಎಜುಕೇಷನ್,* ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ.
- ಗಂಗಾಧರಪ್ಪ ಎನ್.ಆರ್., (೨೦೦೪), **ಶಿಕ್ಷಣದ ಮೂಲತತ್ವಗಳು,** ರೇಖಾ ಪ್ರಕಾಶನ, ನಂ. ೧೨೭೫, ತರಳೂರು ಬಡಾವಣೆ, ದಾವಣಗೆರೆ
- ಗಂಗಾಧರಪ್ಪ ಎನ್.ಆರ್., (೨೦೦೬), **ಶಿಕ್ಷಣದ ಮೂಲತತ್ವಗಳು,** ರೇಖಾ ಪ್ರಕಾಶನ, ತರಳಬಾಳು ಬಡಾವಣೆ, ದಾವಣಗೆರೆ.
- ಚಾರುಗುಪ್ತ, (೨೦೦೭), *ದಲಿತ್ ವೈರಂಗಣಾಸ್ ಅಂಡ್ ರಿ ಇನ್‌ವೆನ್ಷನ್ ಆಫ್ ೧೮೫೭,* **ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ,** (ಮೇ ೧೨), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.
- ಚಿದ್ರೆ ಶಂಕರಯ್ಯ ಸ್ವಾಮಿ (೨೦೦೮), **ಸಾಧಕ,** ಅಭಿಂದನಾ ಗ್ರಂಥ, ಚಿದ್ರೆ ಶಂಕರಯ್ಯಸ್ವಾಮಿ ಅಭಿನಂದನಾ ಸಮಿತಿ, ಈಶಾನ್ಯ ವಲಯ ಗುಲಬರ್ಗಾ.

- ಚಂದ್ರಪೂಜಾರಿ ಎಂ., (೨೦೦೨), **ಸಮುದಾಯ ಮತ್ತು ಸಹಭಾಗಿತ್ವ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ
- ಚಂದ್ರಪೂಜಾರಿ ಎಂ., (೨೦೦೫), **ಸಮಾಜ ಸಂಶೋಧನೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ
- ಚಂದ್ರಶೇಖರ್ ಟಿ.ಆರ್., (೧೯೯೩), **ಅಭಿವೃದ್ಧಿ ಮೀಮಾಂಸೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
- ಚಂದ್ರಶೇಖರ್ ಟಿ.ಆರ್., (೧೯೯೪), **ಬಳ್ಳಾರಿ ಜಿಲ್ಲೆ ನಿಸರ್ಗ ಸಂಪತ್ತು**, ಪ್ರಭು ಪ್ರಿಂಟಿಗ್ ಪ್ರೆಸ್, ಗದಗ
- ಚಂದ್ರಶೇಖರ್ ಟಿ.ಆರ್., (೧೯೯೯), **ಅಮರ್ತ್ಯಸೇನ್ ಅಭಿವೃದ್ಧಿ ಅಧ್ಯಯನಗಳು**, ಕ್ರೈಸ್ಟ್ ಕಾಲೇಜು, ಬೆಂಗಳೂರು
- ಚಂದ್ರಶೇಖರ್ ಟಿ.ಆರ್., (೧೯೯೯), **ಕರ್ನಾಟಕ ಅಭಿವೃದ್ಧಿ ಮಾಹಿತಿ ಕೋಶ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ
- ಚಂದ್ರಶೇಖರ್ ಬಿ.ಎಸ್., (೨೦೦೧), **ಸಮಾಜ ವಿಜ್ಞಾನಗಳಲ್ಲಿ ಸಂಶೋಧನಾ ವಿಧಾನಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ
- ಚಂದ್ರಶೇಖರ್ ಟಿ.ಆರ್., (೨೦೦೩), **ಕರ್ನಾಟಕ ಅಭಿವೃದ್ಧಿಯ ಸಾಮಾಜಿಕ ನೆಲೆಗಳು**, ಸಿವಿಜಿ ಪ್ರಕಾಶನ, ಬೆಂಗಳೂರು.
- ಚಂದ್ರಶೇಖರ್ ಟಿ.ಆರ್., (೨೦೦೪), **ಗ್ರಾಮೀಣ ಅಭಿವೃದ್ಧಿ ಮತ್ತು ವಿಕೇಂದ್ರೀಕರಣ ರಾಜಕೀಯ ವೈಫಲ್ಯದ ಒಂದು ಸಂಕಥನ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ
- ಚಂದ್ರಶೇಖರ್ ಟಿ.ಆರ್. (೨೦೦೬), *ಕರ್ನಾಟಕದ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿ*, **ಅಭಿವೃದ್ಧಿ ಅಧ್ಯಯನ** *ಸಮಾಜ ವಿಜ್ಞಾನ ಪತ್ರಿಕೆ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ
- ಚಂದ್ರಶೇಖರ್ ಟಿ.ಆರ್. (೨೦೦೭), *ಕರ್ನಾಟಕದ ಪ್ರಾದೇಶಿಕ ಅಸಮಾನತೆ*, **ಅಭಿವೃದ್ಧಿ ಪಥ, ಸುವರ್ಣ ಕರ್ನಾಟಕ ಸಂಪುಟ-೧**, ಸಂ. ಹಿ.ಚಿ. ಬೋರಲಿಂಗಯ್ಯ, ಗೆಜೆಟಿಯರ್ ಆಫ್ ಕರ್ನಾಟಕ ಮತ್ತು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ
- ಚಂದ್ರಶೇಖರಯ್ಯ ಪಿ., (೨೦೦೭), **ಶಿಕ್ಷಣ ದರ್ಶನ**, ಸುಮುಖ ಪ್ರಕಾಶನ, ವಿದ್ಯಾರಣ್ಯ ನಗರ, ಮಾಗಡಿ ರಸ್ತೆ, ಬೆಂಗಳೂರು
- ಚಂದ್ರಶೇಖರ್ ಟಿ.ಆರ್., (೨೦೦೮), **ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ
- ಜನಾರ್ದನ (೨೦೦೩), *ಕರ್ನಾಟಕ ತಾಲ್ಲೂಕುವಾರು ಜನಸಂಖ್ಯೆ ಅಕ್ಷರಸ್ಥರು ಮತ್ತು ಸಾಕ್ಷರತೆ*, **ಅಭಿವೃದ್ಧಿ ಅಧ್ಯಯನ** *ಸಮಾಜ ವಿಜ್ಞಾನ ಪತ್ರಿಕೆ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

- ಜನದ್ಯಾಲ ಬಿ.ಬಿ. ತಿಲಕ್, (೨೦೦೪), *ಎಜ್ಯುಕೇಷನ್ ಇನ್ ದ ಯು.ಪಿ.ಎ. ಗೌರ್ನಮೆಂಟ್ ಕಾಮನ್ ಮಿನಿಮಮ್ ಪ್ರೋಗ್ರಾಮ್*, **ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ** (ಅಕ್ಟೋಬರ್), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.
- ಜಯಕುಮಾರ ಅನಗೋಳ್ (ಕನ್ನಡಕ್ಕೆ), (೧೯೮೬), **ಭಾರತೀಯ ಶಿಕ್ಷಣದಲ್ಲಿ ಸಮಾನತೆ, ಗುಣ ಮತ್ತು ಪರಿಮಾಣ,** ಐಬಿಎಚ್ ಪ್ರಕಾಶನ, ಐದನೆಯ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು
- ಜಯಣ್ಣ ಸಿ.ವಿ., (೨೦೦೫), **ಉದಯೋನ್ಮುಖ ಭಾರತದಲ್ಲಿ ಶಿಕ್ಷಣ,** ಸ್ವಪ್ನ ಬುಕ್‌ಹೌಸ್, ಗಾಂಧಿನಗರ, ಬೆಂಗಳೂರು
- ಜೋಸೆಫ್ ಎ. ಥಾಮಸ್., (೨೦೦೦), *ಡೈನಮಿಕ್ಸ್ ಆಫ್ ಎಜುಕೇಷನಲ್ ಡೆವಲಪ್‌ಮೆಂಟ್ : ಎ ಕೇಸ್ ಸ್ಟಡಿ ಆಫ್ ಸೆಲೆಕ್ಟೆಡ್ ಬ್ಯಾಕ್‌ವರ್ಡ್ ವಿಲೇಜಸ್,* ಇನ್ ಕೇರಳ, ಇನ್, ವೈದ್ಯನಾಥನ್ ಎ. ಆ್ಯಂಡ್ ಪಿ.ಆರ್.ಜಿ. ನಾಯರ್ (ಎಡ್) **ಎಲಿಮೆಂಟರಿ ಎಜುಕೇಶನ್ ಇನ್ ರೂರಲ್ ಇಂಡಿಯಾ : ಎ ಗ್ರಾಸ್ ರೂಟ್ಸ್ ವ್ಯೂ,** ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ
- ಡ್ರೀಜ್ ಜೀನ್ ಅಂಡ್ ಸೆನ್ ಅಮರ್ತ್ಯ, (೧೯೯೫.ಎ), **ಇಂಡಿಯಾ : ಎಕನಾಮಿಕ್ ಡೆವಲಪ್‌ಮೆಂಟ್ ಅಂಡ್ ಸೋಶಿಯಲ್ ಅಪರ್ಚ್ಯುನಿಟಿ,** ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ಡೆಲ್ಲಿ.
- ಡ್ರೀಜ್ ಜೀನ್, ಅಂಡ್ ಸೆನ್ ಅಮರ್ತ್ಯ, (೧೯೯೫.ಬಿ), **ಬೇಸಿಕ್ ಎಜುಕೇಷನ್ ಆಸ್ ಎ ಪೊಲಿಟಿಕಲ್ ಇಶ್ಯು,** ಜರ್ನಲ್ ಆಫ್ ಎಜುಕೇಷನ್ ಪ್ಲಾನಿಂಗ್ ಅಂಡ್ ಅಡ್ಮಿನಿಸ್ಟ್ರೇಶರ್ನ್.
- ಡ್ರೀಜ್ ಜೀನ್ ಆ್ಯಂಡ್ ಸೇನ್ ಅಮರ್ತ್ಯ, (೧೯೯೫.ಸಿ), **ಇಂಡಿಯಾ : ಎಕನಾಮಿಕ್ ಡೆವಲಪ್‌ಮೆಂಟ್ ಆ್ಯಂಡ್ ಸೋಶಿಯಲ್ ಆಪರ್ಚುನಿಟಿ,** ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂ ಡೆಲ್ಲಿ.
- ಡ್ರೀಜ್ ಜೀನ್ ಮತ್ತು ಅಮರ್ತ್ಯ ಸೆನ್, (೨೦೦೧), **ಇಂಡಿಯಾ ಡೆವಲಪ್‌ಮೆಂಟ್ಸ್ ಅಂಡ್ ಪಾರ್ಟಿಸಿಪೇಷನ್,** ಆಕ್ಸ್‌ಫರ್ಡ್ ಯೂನಿವರ್ಸಿಟಿ, ನ್ಯೂ ಡೆಲ್ಲಿ.
- ಡ್ರೀಜ್ ಜೀನ್ ಆ್ಯಂಡ್ ಕಿಂಗ್‌ಡಂ, ಗೀತಾ ಗಾಂಧಿ, (೨೦೦೧), **ಸ್ಕೂಲ್ ಪಾರ್ಟಿಸಿಪೇಶನ್ ಇನ್ ರೂರಲ್ ಇಂಡಿಯಾ,** *ರಿವ್ಯೂ ಆಫ್ ಡೆವಲಪ್‌ಮೆಂಟ್ ಎಕನಾಮಿಕ್ಸ್,* ೫.
- ದಾಸ್‌ಗುಪ್ತ ಆರ್.ಕೆ., (೨೦೦೦), *ಶಿಕ್ಷಣ ಮತ್ತು ಜನಸಂಖ್ಯೆ,* **ಯೋಜನಾ ಅಭ್ಯುದಯ ಮಾಸಪತ್ರಿಕೆ,** (ಆಗಸ್ಟ್), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.
- ನಾಗರಾಜು ಟಿ., (೨೦೦೫), **ಭಾರತದಲ್ಲಿ ಶಿಕ್ಷಣ ಮತ್ತು ಸಮಾಜ,** ಚೇತನ ಬುಕ್ ಹೌಸ್, ಮೈಸೂರು.
- ನಾಗರಾಜ ಹಬ್ಬು, (೨೦೦೬), *ಬಡಮಕ್ಕಳಿಗೆ ಆಶಾದೀಪವಾದ ಸಮುದಾಯದ ವಸತಿನಿಲಯ,* **ಸಾಲುಹೆಜ್ಜೆ,** ಕನ್ನಡ ಮಾಸಪತ್ರಿಕೆ, ಸಂ. ೨, ಸಂಚಿಕೆ ೮ (ಅಕ್ಟೋಬರ್), ಜಯನಗರ, ಮೈಸೂರು.

- ನಾಗೂರ ಎನ್.ಎಚ್., (೨೦೦೭), *ಕೆ.ಜಿ.ಬಿ.ವಿ. ಶಾಲೆಗಳು,* **ಟೀಚರ್ ಶೈಕ್ಷಣಿಕ** ಮಾಸಪತ್ರಿಕೆ (ಏಪ್ರಿಲ್ ೧೪). ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.
- ನಾಯರ್ ಪಿ.ಆರ್.ಜಿ., (೧೯೮೧), **ಪ್ರೈಮರಿ ಎಜುಕೇಷನ್ ಪಾಪುಲೇಷನ್ ಗ್ರೋತ್ ಅಂಡ್ ಸೋಶಿಯಲ್ ಎಕನಾಮಿಕ್ ಚೇಂಜ್ ಎ ಕಂಪ್ಯಾರಿಟೀವ್ ಸ್ಟಡಿ ವಿತ್ ಪರ್ಟಿಕ್ಯುಲರ್ ರೆಫರೆನ್ಸ್ ಟು ಕೇರಳ,** ಅಲೈಡ್, ನ್ಯೂ ಡೆಲ್ಲಿ.
- ನಾಯರ್ ಕೆ.ಎನ್., ಶಿವಾನಂದನ್ ಪಿ., ಅಂಡ್ ರೆತ್‌ನಾಮ್ ವಿ.ಸಿ.ವಿ., (೧೯೮೪), *ಎಜುಕೇಷನ್, ಎಂಪ್ಲಾಯ್‌ಮೆಂಟ್ ಆಂಡ್ ಲ್ಯಾಂಡ್ ಹೋಲ್ಡಿಂಗ್ ಪ್ಯಾಟ್ರನ್ ಇನ್ ಎ ತಮಿಳ್ ವಿಲೇಜ್,* ***ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ,*** (೧೬-೨೩ ಜೂನ್), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ
- ನಾಯಕ್ ಜೆ.ಪಿ., (೧೯೯೦), **ಭಾರತದಲ್ಲಿ ಪ್ರಾಥಮಿಕ ಶಿಕ್ಷಣ,** ಗೀತಾ ಬುಕ್ ಹೌಸ್, ಮೈಸೂರು.
- ನ್ಯಾಷನಲ್ ಲಿಟ್ರೆಸಿ ಮಿಷನ್, (೧೯೯೪), **ಆನ್ಯೂಯಲ್ ರಿಪೋರ್ಟ್ ೧೯೯೩-೯೪ ಲಿಟ್ರೆಸಿ ಆ್ಯಂಡ್ ಪೋಸ್ಟ್ ಲಿಟ್ರೆಸಿ ಕ್ಯಾಂಪೆನ್ಸ್ ಇನ್ ಇಂಡಿಯಾ,** ಡೈರೆಕ್ಟರೇಟ್ ಆಫ್ ಅಡಲ್ಟ್ ಎಜುಕೇಷನ್, ನ್ಯೂ ಡೆಲ್ಲಿ.
- ನ್ಯಾಷನಲ್ ಲಿಟ್ರೆಸಿ ಮಿಷನ್, (೨೦೦೦), **ಲಿಟ್ರೆಸಿ ರೇಟ್ಸ್ : ಆ್ಯನ್ ಅನಾಲಿಸಿಸ್ ಬೇಸ್ಡ್ ಆನ್ ದಿ ಎನ್.ಎಸ್.ಎಸ್.ಓ. ಸರ್ವೇ,** ೧೯೯೮, ಡೈರೆಕ್ಟರೇಟ್ ಆಫ್ ಅಡಲ್ಟ್ ಎಜುಕೇಶನ್, ನ್ಯೂ ಡೆಲ್ಲಿ.
- ನಿರಂಕರ್ ಶ್ರೀವಾಸ್ತವ ಮತ್ತು ಅಮರೇಶ್ ದುಬೆ, (೨೦೦೭), *ಎಲಿಮೆಂಟರಿ ಎಜ್ಯುಕೇಶನ್ ಪಾವರ್ಟಿ ಅಂಡ್ ಜಂಡರ್ ಡಿಫರೆನ್ಸಿಯಲ್ಸ್ ಇನ್ ನಾರ್ತ್ ಈಸ್ಟ್ ಇಂಡಿಯಾ : ಸಮ್ ಇಶ್ಯೂಸ್, ಎಜ್ಯುಕೇಶನ್ ಪ್ಲಾನಿಂಗ್ ಅಂಡ್ ಅಡ್ಮನಿಸ್ಟ್ರೇಶನ್,* **ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ** (ಜುಲೈ), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.
- ನಿರಂಜನಾರಾಧ್ಯ ವಿ.ಪಿ., (೨೦೦೭), *ಶಾಲಾ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಸಮುದಾಯದ ಸಹಭಾಗಿತ್ವ : ಕರ್ನಾಟಕದ ಅನುಭವಗಳು,* **ಅಭಿವೃದ್ಧಿ ಅಧ್ಯಯನ,** ಸಮಾಜ ವಿಜ್ಞಾನ ಪತ್ರಿಕೆ, (ಜನವರಿ-ಜೂನ್), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ
- ನೀರಾ ಬುರ್ರಾ, (೨೦೦೧), *ಕಲ್ಚರಲ್ ಸ್ಟೀರಿಯೋ ಟೈಪ್ಸ್ ಅಂಡ್ ಹೌಸ್ ಹೋಲ್ಡ್ ಬಿಹೇವಿಯರ್, ಗರ್ಲ್ ಚೈಲ್ಡ್ ಲೇಬರ್ ಇನ್ ಇಂಡಿಯಾ,* **ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ** (ಫೆಬ್ರವರಿ), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.
- ನಂಜುಂಡಪ್ಪ ಡಿ.ಎಂ., ಆ್ಯಂಡ್ ಅದರ್ಸ್., (೨೦೦೨), **ಹೈಪವರ್ ಕಮಿಟಿ, ಫಾರ್ ರೀ ಅಡ್ರೆಸಲ್ ಆಫ್ ರೀಜಿನಲ್ ಇಮ್‌ಬ್ಯಾಲನ್ಸ್,** (ಎಚ್.ಪಿ.ಸಿ.ಎಫ್.ಆರ್.ಆರ್.ಐ)ಗವರ್ನಮೆಂಟ್ ಆಫ್ ಕರ್ನಾಟಕ, ಬೆಂಗಳೂರು.

- ನಂಜುಂಡ ಸ್ವಾಮಿ ಎಂ., (೨೦೦೭), *ಗ್ರಾಮೀಣ ಪ್ರದೇಶದಲ್ಲಿನ ಪ್ರಾಥಮಿಕ ಶಿಕ್ಷಣ ಸಮಸ್ಯೆಗಳು,* **ಯೋಜನಾ ಅಭ್ಯುದಯ ಮಾಸಪತ್ರಿಕೆ** (ಏಪ್ರಿಲ್), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.
- ನಂಬಿಸನ್, ಗೀತ ಬಿ., (೧೯೯೬), **ಈಕ್ವಿಟಿ ಇನ್ ಎಜುಕೇಶನ್ : ದಿ ಸ್ಕೂಲಿಂಗ್ ಆಫ್ ಡಿಲಿಟ್ ಚಿಲ್ಡ್ರನ್,** ಡಿಸ್‌ಕಷನ್ ಪೇಪರ್-೧೫, ಸ್ಟಡೀಸ್ ಆನ್ ಹ್ಯೂಮನ್ ಡೆವಲಪ್‌ಮೆಂಟ್ ಇನ್ ಇಂಡಿಯಾ, ಯು.ಎನ್.ಡಿ.ಪಿ, ನ್ಯೂ ಡೆಲ್ಲಿ.
- ಪದ್ಮ ಎಂ. ಸಾರಂಗ ಪಾಣಿ, (೨೦೦೩), *ಕನ್‌ಸ್ಟ್ರಕ್ಟಿಂಗ್ ಸ್ಕೂಲ್ ನಾಲೆಡ್ಜ್ ಆ್ಯನ್ ಎತ್ನಾಗ್ರಫಿ ಆಫ್ ಲರ್ನಿಂಗ್ ಇನ್ ಆ್ಯನ್ ಇಂಡಿಯನ್ ವಿಲೇಜ್,* **ಸೇಜ್ ಪಬ್ಲಿಕೇಶನ್ಸ್,** ಇಂಡಿಯಾ ಪ್ರೈವೇಟ್ ಲಿಮಿಟೆಡ್, ಬಿ. ೪೨, ಪಂಚಶೀಲ ಎನ್‌ಕ್ಲೇವ್, ನವದೆಹಲಿ.
- ಪರ್ಜಾನ ಅಫ್ರಿದಿ, *ಮಿಡ್ ಡೇ ಮಿಲ್ಸ್ ಇನ್ ಟು ಸ್ಟೇಟ್ಸ್ ಕನ್‌ಫರ್‌ಮಿಂಗ್ ದ ಫೈನಾನ್ಸಿಯಲ್ ಇನ್‌ಸ್ಟಿಟ್ಯೂಷನಲ್ ಆರ್ಗನೈಜೇಷನ್ ಆಫ್ ಪ್ರೋಗ್ರಾಮ್,* (೨೦೦೫), **ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ** (ಏಪ್ರಿಲ್), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.
- ಪದ್ಮಪ್ರಸಾದ್ ಎಸ್.ಪಿ., (೨೦೦೭), **ಶಿಕ್ಷಣ ಮತ್ತು ರಾಷ್ಟ್ರೀಯ ಕಾಳಜಿಗಳು,** ಸುಮುಖ ಪ್ರಕಾಶನ, ವಿದ್ಯಾರಣ್ಯ ನಗರ, ಬೆಂಗಳೂರು
- ಪದ್ಮಾರಾಮಚಂದ್ರನ್ ಮತ್ತು ವಸಂತ ಕುಮಾರ್, (೨೦೦೫), ಎಜ್ಯುಕೇಶನ್ ಇನ್ ಇಂಡಿಯಾ, ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ, ನ್ಯೂಡೆಲ್ಲಿ.
- ಪರಮೇಶ್ವರಯ್ಯ ಸೊಪ್ಪಿನ ಮಠ, (೨೦೦೬), *ಪ್ರಾಥಮಿಕ ಶಿಕ್ಷಣದತ್ತ ಹಂಪಿ ಕನ್ನಡ ವಿಶ್ವವಿದ್ಯಾಲಯ, ಒಂದು ವರದಿ,* ***ಟೀಚರ್ ಶೈಕ್ಷಣಿಕ ಮಾಸಪತ್ರಿಕೆ*** (ಅಕ್ಟೋಬರ್), ಭಾರತ ಜ್ಞಾನ ವಿಜ್ಞಾನ ಸಮಿತಿ, ಭಾರತೀಯ ವಿಜ್ಞಾನ ಸಂಸ್ಥೆಯ ಆವರಣ, ಬೆಂಗಳೂರು.
- ಪಾರ್ವತಮ್ಮ ಸಿ., (೨೦೦೨), **ದಲಿತ ಚಿಂತನೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.
- ಪಾರ್ವತಿ ಪಿ.ಎನ್., (೨೦೦೬), *ಪರಿಸರ ಬದಲಾವಣೆಗಾಗಿ ಸ್ವಚ್ಛ ಶಾಲೆ,* **ಯೋಜನಾ ಅಭ್ಯುದಯ ಮಾಸಪತ್ರಿಕೆ,** (ನವೆಂಬರ್), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.
- ಪುಟ್ಟಯ್ಯ ಬಿ.ಎಂ., (೨೦೦೮), **ದಲಿತರು ಮತ್ತು ಭೂಮಿಯ ಪ್ರಶ್ನೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ
- ಪೂನಂ ಬಟ್ರಾ, (೨೦೦೫), *ವಾಯ್ಸ್ ಅಂಡ್ ಏಜನ್ಸಿ ಆಫ್ ಟೀಚರ್ಸ್ ಮಿಸ್‌ಲಿಂಕ್ ಇನ್ ನ್ಯಾಷನಲ್ ಕರಿಕ್ಯುಲಂ ಫ್ರೇಂ-ವರ್ಕ್ಸ್ ೨೦೦೫.* **ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ** (ಅಕ್ಟೋಬರ್), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

- ಪಾಂಡುರಂಗ ಬಾಬು, (೨೦೦೬), *ದಲಿತರು ಭಾಷೆ ಮತ್ತು ಶಿಕ್ಷಣ*, **ದಲಿತರು ಭಾಷೆ ಮತ್ತು ಸಮಾಜ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ
- ಪ್ರಶಾಂತ್ ಎಚ್.ಡಿ., (೨೦೦೪), **ಶಾಲಾ ಬಿಸಿಯೂಟ ಅಧ್ಯಯನ ವರದಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ
- ಪ್ರಶಾಂತ್ ಎಚ್.ಡಿ., (೨೦೦೫), *ಮಕ್ಕಳ ಶಿಕ್ಷಣ ಮತ್ತು ಬದಲಾಗುತ್ತಿರುವ ಪೋಷಕರ ಮನೋಭಾವ*, **ಅಭಿವೃದ್ಧಿ ಅಧ್ಯಯನ** *ಸಮಾಜ ವಿಜ್ಞಾನ ಪತ್ರಿಕೆ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ
- ಪ್ರಶಾಂತ್ ಎಚ್.ಡಿ., (೨೦೦೫), **ಈಶಾನ್ಯ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಮಾಜ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ
- ಪ್ರಶಾಂತ್ ಎಚ್.ಡಿ., (೨೦೦೫), *ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸದಸ್ಯರೊಂದಿಗೆ ಸಂವಾದ*, **ಅಭಿವೃದ್ಧಿ ಅಧ್ಯಯನ** ಸಮಾಜ ವಿಜ್ಞಾನ ಪತ್ರಿಕೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ
- ಪ್ರಶಾಂತ್ ಎಚ್.ಡಿ., (೨೦೦೬), **ಶಾಲಾ ಶಿಕ್ಷಣದ ವಿಕೇಂದ್ರೀಕರಣ ಎಸ್.ಡಿ.ಎಂ.ಸಿ. ಕಾರ್ಯಕ್ಷಮತೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ
- ಪ್ರಶಾಂತ್ ಎಚ್.ಡಿ., (೨೦೦೬), *ಹೆಣ್ಣುಮಕ್ಕಳ ಶಿಕ್ಷಣ : ಒಂದು ಸ್ಥೂಲನೋಟ*, **ಅಭಿವೃದ್ಧಿ ಅಧ್ಯಯನ** *ಸಮಾಜ ವಿಜ್ಞಾನ ಪತ್ರಿಕೆ*, ಸಂ.೫, ಸಂಚಿಕೆ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ
- ಪ್ರಶಾಂತ್ ಎಚ್.ಡಿ. (ಸಂ.), (೨೦೦೬), *ಎಸ್.ಡಿ.ಎಂ.ಸಿ ಹಾಗೂ ಶಿಕ್ಷಕರ ನಡುವೆ ಭಿನ್ನಮತ-ಅಪನಂಬಿಕೆ-ಗೊಂದಲ-ಅಸಹಕಾರ*, **ಅಭಿವೃದ್ಧಿ ಅಧ್ಯಯನ** ಸಮಾಜ ವಿಜ್ಞಾನ ಪತ್ರಿಕೆ, ಸಂ.೫, ಸಂಚಿಕೆ ೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ
- ಪ್ರಶಾಂತ್ ಎಚ್.ಡಿ., (೨೦೦೬), **ಹೈದ್ರಾಬಾದ್ ಕರ್ನಾಟಕದಲ್ಲಿ : ಶಾಲಾ ಶಿಕ್ಷಣ ಸಾರ್ವತ್ರೀಕರಣದ ಅನುಭವಗಳು**, ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಪ್ರಾಥಮಿಕ ಶಿಕ್ಷಣದ ಗತಿಶೀಲತೆ, ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ (ಆಗಸ್ಟ್), ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ
- ಪ್ರಶಾಂತ್ ಎಚ್.ಡಿ., (೨೦೦೭), *ಶಾಲಾ ಶಿಕ್ಷಣ*, **ಅಭಿವೃದ್ಧಿ ಪಥ,** ಸುವರ್ಣ ಕರ್ನಾಟಕ ಸಂಪುಟ ೧, ಸಂಪಾದಕರು ಹಿ.ಚಿ. ಬೋರಲಿಂಗಯ್ಯ, ಗೆಜೆಟಿಯರ್ ಆಫ್ ಕರ್ನಾಟಕ ಮತ್ತು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ
- ಪ್ರಶಾಂತ್ ಎಚ್.ಡಿ., (೨೦೦೭), *ಶಾಲಾ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಸಮುದಾಯದ ಸಹಭಾಗಿತ್ವ ಕರ್ನಾಟಕದ ಅನುಭವಗಳು : ಸಾಧನೆ-ಸವಾಲು-ಸಾಧ್ಯತೆ*, **ಅಭಿವೃದ್ಧಿ ಅಧ್ಯಯನ,**

ಸಮಾಜ ವಿಜ್ಞಾನ ಪತ್ರಿಕೆ, (ಜನವರಿ-ಜೂನ್), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ

- ಪ್ರಶಾಂತ್ ಎಚ್.ಡಿ., (೨೦೦೮), *ಗುಣಾತ್ಮಕ ಶಾಲಾ ಶಿಕ್ಷಣ : ಸಮುದಾಯದ ಸಹಭಾಗಿತ್ವ ಕರ್ನಾಟಕದಲ್ಲಿ ಗ್ರಾಮಪಂಚಾಯಿತಿಯ ನಾಗರೀಕ ಸೌಲಭ್ಯ ಸಮಿತಿ ಸದಸ್ಯರಿಗೆ ಮತ್ತು ಎಸ್.ಡಿ.ಎಂ.ಸಿ. ಸದಸ್ಯರಿಗೆ ತರಬೇತಿ ನೀಡುವ ಸಂಪನ್ಮೂಲವ್ಯಕ್ತಿಗಳಿಗೆ ಮತ್ತು ಸದಸ್ಯರಿಗೆ ರೂಪಿಸಿದ ತರಬೇತಿ ಸಾಹಿತ್ಯ*, **ಕರ್ನಾಟಕ ಸರ್ಕಾರ ಸರ್ವಶಿಕ್ಷಣ ಅಭಿಯಾನ**, ಕರ್ನಾಟಕ.
- ಪ್ರಶಾಂತ್ ಎಚ್.ಡಿ., (೨೦೦೯), *ಶಾಲಾ ಶಿಕ್ಷಣದ ಸಾರ್ವತ್ರೀಕರಣದ : ದಲಿತ ಮಕ್ಕಳ ಸ್ಥಿತಿ*, ಪ್ರಸಾರಾಂಗ, ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ, ಮಾನಸ ಗಂಗೋತ್ರಿ, ಮೈಸೂರು.
- ಪ್ರಶಾಂತ್ ಎಚ್.ಡಿ., (೨೦೦೯), **ಪರ್ಯಾಯ ಅಭಿವೃದ್ಧಿ ನಾವೇನು ಮಾಡಬಹುದು**,: ಜನವರಿ ೨೦೦೯ರಲ್ಲಿ ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರು ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ ಕುರಿತು ಕಾಲೇಜು ಅಧ್ಯಾಪಕರಿಗೆ ಸಂಘಟಿಸಿದ ರಾಜ್ಯಮಟ್ಟದ ಎರಡು ದಿನಗಳ ಕಾರ್ಯಗಾರದಲ್ಲಿ ಮಂಡಿಸಿದ ಲೇಖನ (ಅಪ್ರಕಟಿತ).
- ಬಳ್ಳಾರಿ ಜಿಲ್ಲೆಯ ಅಂಕಿ-ಅಂಶಗಳ ನೋಟ (೨೦೦೨-೦೩), ಜಿಲ್ಲಾ ಸಂಗ್ರಹಣಾಧಿಕಾರಿಗಳ ಕಚೇರಿ, ಬಳ್ಳಾರಿ.
- ಬಂಡಾರಿ ನಾರಾಯಣ ತಿವಾರಿ, (೨೦೦೭), *ರಿ ಟ್ರಿಕ್ಕಿ ವೇಟಿಂಗ್ ದಿ ಪಾಸ್ಟ್, ದಲಿತ್ಸ್ ಅಂಡ್ ಮೆಮೋರಿಸ್ ಆಫ್ ೧೮೫೭*, **ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ** (ಮೇ ೧೨), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ
- ಮಧುಮಿತ ಬಂಡೋಪಾಧ್ಯಾಯ, (೨೦೦೬), *ಎಜ್ಯುಕೇಶನ್ ಆಫ್ ಮಾರ್ಜಿನಲೈಸ್ಡ್ ಗ್ರೂಪ್ ಇನ್ ಇಂಡಿಯಾ, ಸೋಷಿಯಲ್ ಚೇಂಜ್*, **ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ** (ಜೂನ್), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ
- ಮಧು ಎಸ್. ಪರಂಜಪೆ, (೨೦೦೭), *ಅನ್ ಈವನ್ ಡಿಸ್ಟ್ರಿಬ್ಯೂಶನ್ ಆಫ್ ಎಜ್ಯುಕೇಶನ್ ಇನ್ ಮಹಾರಾಷ್ಟ್ರ ರೂರಲ್, ಅರ್ಬನ್, ಜಂಡರ್ ಅಂಡ್ ಕ್ಯಾಸ್ಟ್ ಇನ್ ಈಕ್ವಾಲಿಟೀಸ್*, **ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ** (ಜನವರಿ), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.
- ಮಹಾಬಲೇಶ್ವರ ರಾವ್, (೧೯೯೨), **ಬಹುಮುಖ ಶಿಕ್ಷಣ**, ಎಸ್.ಬಿ.ಎಸ್. ಪಬ್ಲಿಷರ್ಸ್ ಆ್ಯಂಡ್ ಡಿಸ್ಟ್ರಿಬ್ಯೂಟರ್ಸ್, ರೈಲ್ವೆ ಪ್ಯಾರಲರ್ ರೋಡ್, ಬೆಂಗಳೂರು
- ರಜನಿಕಾಂತ್ ಎಂ.ಎಸ್., (೨೦೦೬), *ಮಕ್ಕಳ ಹಕ್ಕುಗಳು ಸ್ಥಿತಿಗತಿ*, **ಯೋಜನಾ ಅಭ್ಯುದಯ ಮಾಸಪತ್ರಿಕೆ** (ಜನವರಿ), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.

- ರತನ್ ಖಾಸ್ ನಬೀಸ್, ತಾನಿಯಾ ಚಟರ್ಜಿ, (೨೦೦೭), *ಎನ್‌ರೋಲಿಂಗ್ ಅಂಡ್ ರಿಟೈನಿಂಗ್ ಸ್ಲಮ್ ಚಿಲ್ಡ್ರನ್ ಇನ್ ಫಾರ್ಮಲ್ ಎಜ್ಯುಕೇಷನ್, ಎ ಫೀಲ್ಡ್ ಸರ್ವೇ ಇನ್ ಈಸ್ಟ್ರನ್ ಸ್ಲಮ್ಸ್ ಆಫ್ ಕೋಲ್ಕತ್ತಾ*, **ಎಕನಾಮಿಕ್ ಅಂಡ್ ಪೊಲಿಟಕಲ್ ವೀಕ್ಲಿ** (ಜೂನ್ ೨), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.
- ರಿತೀಕ್ ಖೇರ, (೨೦೦೬), *ಮಿಡ್‌ಡೇ ಮೀಲ್ಸ್ ಇನ್ ಪ್ರೈಮರಿ ಸ್ಕೂಲ್ ಅಚೀವ್‌ಮೆಂಟ್ಸ್ ಅಂಡ್ ಚಾಲೆಂಜಸ್*, **ಎಕನಾಮಿಕ್ ಅಂಡ್ ಪೊಲಿಟಕಲ್ ವೀಕ್ಲಿ** (ನವೆಂಬರ್), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ
- ರುಕ್ಮಿಣಿ ಬ್ಯಾನರ್ಜಿ, (೧೯೯೭), *ವೈಡೋಂಟ್ ಚಿಲ್ಡ್ರನ್ ಕಂಪ್ಲೀಟ್ ಪ್ರೈಮರಿ ಸ್ಕೂಲ್? ಎ ಕೇಸ್ ಸ್ಟಡಿ ಆಫ್ ಲೋ ಇನ್‌ಕಂ ನೈಬರ್‌ಹುಡ್ ಇನ್ ದೆಹಲಿ*, **ಎಕನಾಮಿಕ್ ಅಂಡ್ ಪೊಲಿಟಕಲ್ ವೀಕ್ಲಿ** (ಆಗಸ್ಟ್), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.
- ರುಕ್ಮಿಣಿ ಬ್ಯಾನರ್ಜಿ, (೨೦೦೦), *ಪಾವರ್ಟಿ ಅಂಡ್ ಪ್ರೈಮರಿ ಸ್ಕೂಲಿಂಗ್ ಫೀಲ್ಡ್ ಸ್ಟಡೀಸ್ ಫ್ರಮ್ ಮುಂಬೈ ಅಂಡ್ ದೆಹಲಿ*, **ಎಕನಾಮಿಕ್ ಅಂಡ್ ಪೊಲಿಟಕಲ್ ವೀಕ್ಲಿ** (ಮಾರ್ಚ್ ೪), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.
- ರೇಖಾ ಕೌಲ್., (೧೯೯೩), **ಕಾಸ್ಟ್, ಕ್ಲಾಸ್ ಆ್ಯಂಡ್ ಎಜುಕೇಷನ್**, ಸೇಜ್ ಪಬ್ಲಿಕೇಶನ್ಸ್, ನ್ಯೂಡೆಲ್ಲಿ.
- ರೇಖಾ ಕೌಲ್, (೨೦೦೧), *ಅಸೆಸಿಂಗ್ ಪ್ರೈಮರಿ ಎಜುಕೇಶನ್ ಗೋಯಿಂಗ್ ಬಿಯಾಡ್ ದಿ ಕ್ಲಾಸ್‌ರೂಂ*, **ಎಕನಾಮಿಕ್ ಆ್ಯಂಡ್ ಪೊಲಿಟಕಲ್ ವೀಕ್ಲಿ** (ಜನವರಿ ೧೩), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ
- ರೇಖಾ ವಾಜೀರ್, (೨೦೦೧), **ದಿ ಜೆಂಡರ್ ಗ್ಯಾಪ್ ಇನ್ ಬೇಸಿಕ್ ಎಜ್ಯುಕೇಷನ್**, ಎನ್‌ಜಿಒ ಆಸ್ ಚೇಂಜ್ ಎಜೆನ್ಸಿ, ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ.
- ರೋಹಿಡೇಕರ್ ಎಸ್.ಆರ್., (೧೯೯೫), **೨೧ನೇ ಶತಮಾನಕ್ಕಾಗಿ ಶಿಕ್ಷಣದ ಉದ್ದೇಶಗಳು**, ಕರ್ನಾಟಕ ಎಜ್ಯುಕೇಷನ್ ಬೋರ್ಡ್, ಧಾರವಾಡ.
- ಲಕ್ಷ್ಮಣ್ ತೆಲಗಾವಿ, ಬಿ.ಎಂ. ಪುಟ್ಟಯ್ಯ ಮತ್ತು ಚಂದ್ರಶೇಖರ ಟಿ.ಆರ್., (೨೦೦೫), *ದಲಿತ ಚಳುವಳಿಗಳು ದಲಿತರ ಮೇಲಿನ ದೌರ್ಜನ್ಯಗಳು ಮತ್ತು ಇತರೆ ಚಳುವಳಿಗಳು*, **ದಲಿತ ಅಧ್ಯಯನ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ
- ಲಕ್ಷ್ಮಣ್ ತೆಲಗಾವಿ, (೨೦೦೭), *ಕರ್ನಾಟಕದ ದಲಿತ ಚಳುವಳಿ*, **ಅಭಿವೃದ್ಧಿ ಪಥ**, ಸುವರ್ಣ ಕರ್ನಾಟಕ ಸಂಪುಟ ೧, ಸಂಪಾದಕರು. ಹಿ.ಚಿ. ಬೋರಲಿಂಗಯ್ಯ, ಗೆಜೆಟಿಯರ್ ಆಫ್ ಕರ್ನಾಟಕ ಮತ್ತು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.
- ಲಿಥಿನ್ ಜಿ.ಕೆ., (೨೦೦೦), *'ಚಿಲ್ಡ್ರನ್ ವರ್ಕ್ಸ್ ಅಂಡ್ ಎಜುಕೇಷನ್'*, **ಎಕನಾಮಿಕ್ ಅಂಡ್ ಪೊಲಿಟಕಲ್ ವೀಕ್ಲಿ** (ಜೂನ್), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

- ಲೈಟನ್ ಜಿ.ಕೆ., (೨೦೦೦), *ಚಿಲ್ಡ್ರನ್ ವರ್ಕ್ ಅಂಡ್ ಎಜ್ಯುಕೇಷನ್-೧ ಜನರಲ್ ಫ್ಯಾರ್ ಮೀಟರ್ಸ್*, **ಎಕನಾಮಿಕ್ ಅಂಡ್ ಪೊಲಿಟಿಕಲ್** ವೀಕ್ಲಿ (ಆಗಸ್ಟ್), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.
- ವಾಸವಿ ಎ.ಆರ್, (೨೦೦೦), **ಎಕ್ಸ್‌ಕ್ಲೂಷನ್, ಎಲಿಮಿನೇಷನ್ ಆ್ಯಂಡ್ ಆಪರ್ಚುನಿಟಿ ಪ್ರೈಮರಿ ಸ್ಕೂಲ್ಸ್ ಆ್ಯಂಡ್ ಸ್ಕೂಲಿಂಗ್ ಇನ್ ಸೆಲೆಕ್ಟೆಡ್ ರೀಜನ್ಸ್ ಆಫ್ ಇಂಡಿಯಾ,** ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್, ಬೆಂಗಳೂರು
- ವಾಸವಿ ಎ.ಆರ್., (೨೦೦೦), **ಎಕ್ಸ್‌ಕ್ಲೂಷನ್ ಎಲಿಮಿನೇಷನ್ ಆ್ಯಂಡ್ ಅಪರ್ಚುನಿಟೀಸ್ : ಪ್ರೈಮರಿ ಸ್ಕೂಲ್ಸ್ ಆ್ಯಂಡ್ ಸ್ಕೂಲಿಂಗ್ ಇನ್ ಸೆಲೆಕ್ಟೆಡ್ ರೀಜನ್ಸ್ ಆಫ್ ಇಂಡಿಯಾ,** ಡ್ರಾಫ್ಟ್ ರಿಪೋರ್ಟ್, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ ಸ್ಟಡೀಸ್, ಬೆಂಗಳೂರು
- ವಿಲ್‌ಫ್ರೆಡ್ ಡಿಸೋಜ, (೨೦೦೬), *ರೈತರಿಗೆ ಆಸೆ ಕಂಪನಿಗಳಿಗೆ ಲಾಭದ ದಾಹ, ಶಿಕ್ಷಣದಿಂದ ವಂಚಿತರಾಗುತ್ತಿರುವ ಕಂದಮ್ಮಗಳು*, **ಸಾಲುಹೆಜ್ಜೆ** ಕನ್ನಡ ಮಾಸಿಕಪತ್ರಿಕೆ, ಸಂಪುಟ ೨, ಸಂಚಿಕೆ ೯, (ನವೆಂಬರ್), ಜಯನಗರ, ಮೈಸೂರು.
- ವಿಜಯ ಭಾಸ್ಕರ್ ತ.ಮ., (೨೦೦೭), *ಕಟ್ಟಕಡೆಯ ಮಗುವಿಗೂ ಗುಣಮಟ್ಟದ ಶಿಕ್ಷಣ ದೊರೆಯಬೇಕು.* **ಟೀಚರ್ ಶೈಕ್ಷಣಿಕ ಮಾಸಪತ್ರಿಕೆ** (ಡಿಸೆಂಬರ್), ಭಾರತ ಜ್ಞಾನ ವಿಜ್ಞಾನ ಸಮಿತಿ, ಭಾರತೀಯ ವಿಜ್ಞಾನ ಸಂಸ್ಥೆಯ ಆವರಣ, ಬೆಂಗಳೂರು.
- ವೇಣುಗೋಪಾಲರಾವ್ ಎ.ಎಸ್., (೨೦೦೦), *ದಲಿತ ಪ್ರಜ್ಞೆ ಚಿಂತನೆಯ ಭಿನ್ನ ಆಯಾಮಗಳು*, **ದಲಿತಪ್ರಜ್ಞ** ದಲಿತ ಸಾಹಿತ್ಯ ಪರಿಷತ್, ಗದಗ.
- ವೈದ್ಯನಾಥನ್.ಎ. ಆ್ಯಂಡ್ ಪಿ.ಆರ್.ಜಿ. ನಾಯರ್ (೨೦೦೦), **ಎಲಿಮೆಂಟರಿ ಎಜ್ಯುಕೇಷನ್ ಇನ್ ರೂರಲ್ ಇಂಡಿಯಾ: ಎ ಗ್ರಾಸ್ ರೂಟ್ಸ್ ವ್ಯೂ**, ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ
- ವೈದ್ಯನಾಥ ಮಿಶ್ರ, (೨೦೦೦), *ಶಿಕ್ಷಣದಲ್ಲಿ ಸಂಸ್ಕೃತಿ ಗಾಂಧಿ ವಿಚಾರಧಾರೆ,* **ಯೋಜನಾ ಅಭ್ಯುದಯ ಮಾಸಪತ್ರಿಕೆ** (ಅಕ್ಟೋಬರ್), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.
- ವೆಂಕಟೇಶ್ ಟಿ., (೨೦೦೭), *ಸರ್ವರಿಗೂ ಶಿಕ್ಷಣ ಗುರಿ ಸಾಧನೆಗೆ ಐ.ಸಿ.ಟಿ.,* **ಯೋಜನಾ ಅಭ್ಯುದಯ ಮಾಸಪತ್ರಿಕೆ** (ನವೆಂಬರ್), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.
- ಶರ್ಮ, ಕೆ.ಎಸ್., (೨೦೦೦), **ಜನತೆಗಾಗಿ ಶೈಕ್ಷಣಿಕ ಪ್ರಕ್ರಿಯೆ : ಸಹಸ್ರಮಾನದ ಒಂದು ಸವಾಲು,** ಪುರೋಗಾಮಿ ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
- ಶಾರದ ಜೈನ್, ಅಲೋಕ್ ಮತೂರ್, ಶೋಭಿತ ರಾಜ ಗೋಪಾಲ್ ಜ್ಯೂಹಿಷಾ, (೧೯೯೯), **ಚಿಲ್ಡ್ರನ್ ವರ್ಕ್ಸ್ ಅಂಡ್ ಎಜ್ಯುಕೇಶನ್, ರಿಥಿಂಕಿಂಗ್ ಆನ್ ಔಟ್ ಆಫ್ ಸ್ಕೂಲ್ ಚಿಲ್ಡ್ರನ್,** ಇಂಡಿಯಾ ಎಜ್ಯುಕೇಶನ್ ರಿಪೋರ್ಟ್, ಡಿಪಾರ್ಟ್‌ಮೆಂಟ್ ಆಫ್ ಎಜ್ಯುಕೇಶನ್.

- ಶಾರದ ಕೆ.ಎಸ್., (೨೦೦೭), *ವಯಸ್ಕರ ಶಿಕ್ಷಣ-ಸಾಕ್ಷರತಾ ಆಂದೋಲನ,* **ಅಭಿವೃದ್ಧಿ ಪಥ,** ಸುವರ್ಣ ಕರ್ನಾಟಕ ಸಂಪುಟ ೧, ಸಂಪಾದಕರು. ಹಿ.ಚಿ. ಬೋರಲಿಂಗಯ್ಯ, ಗೆಜೆಟಿಯರ್ ಆಫ್ ಕರ್ನಾಟಕ ಮತ್ತು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.
- ಶಿವರಾಜ ಬಿ.ಕೆ. ಮತ್ತು ವಿಠೋಬ ಭೀಮಣ್ಣ, (೨೦೦೫), *ಶಿಕ್ಷಣ ಮತ್ತು ಪ್ರಾದೇಶಿಕ ಅಸಮತೋಲನ,* **ಸಂವಾದ ಮಾಸಪತ್ರಿಕೆ,** ಸ್ಫೂರ್ತಿಧಾಮ, ಅಂಜನಾನಗರ, ಬೆಂಗಳೂರು
- ಶೈಲಜಾ ಎಂ.ಸಿ., (೨೦೦೬), *ಕೇರಳದ ಮಹಿಳೆಯರ ಸ್ಥಿತಿಗತಿ ಒಂದು ಅಲೋಕನ,* **ಸಾಲುಹೆಜ್ಜೆ,** ಕನ್ನಡ ಮಾಸಿಕಪತ್ರಿಕೆ, ಸಂಪುಟ ೨, ಸಂಚಿಕೆ ೪ (ಜೂನ್), ಜಯನಗರ, ಮೈಸೂರು.
- ಶಾಂತಾ ಸಿನ್ಹ, ಕನ್ನಡಕ್ಕೆ ಜಿ.ಡಿ. ಪಾಟೀಲ, (೨೦೦೬), *ಶಾಲೆಗಳಿಗಾಗಿ ಸಮಗ್ರ ಶಿಕ್ಷಣ ಹಕ್ಕಿಗಾಗಿ ಬಡವರ ಹೋರಾಟ,* **ಯೋಜನಾ ಅಭ್ಯುದಯ ಮಾಸಪತ್ರಿಕೆ** (ನವೆಂಬರ್), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.
- ಶ್ರೀವಾಸ್ತವ, (೧೯೯೭), **ಅಸೆಸ್ ಟು ಬೇಸಿಗ್ ಎಜ್ಯುಕೇಷನ್ ಇನ್ ಉತ್ತರ ಪ್ರದೇಶ ರಿಜಲ್ಟ್ ಫ್ರಮ್ ಫೀಲ್ಡ್ ಸರ್ವೇ, ಪ್ರಾಜೆಕ್ಟ್ ಆನ್ ಸ್ಟ್ರೆಟಜೀಸ್ ಅಂಡ್ ಫೈನಾನ್‌ಸಿಂಗ್ ಫಾರ್ ಹ್ಯೂಮನ್ ಡೆವಲಪ್‌ಮೆಂಟ್,** ಯು.ಎನ್.ಡಿ.ಪಿ., ನ್ಯೂಡೆಲ್ಲಿ.
- ಶ್ರೀವಾತ್ಸವ, ರವಿ, (೨೦೦೧ ಎ), **ಇನ್ ಇಕ್ವ್ಯಾಲಿಟಿ ಆ್ಯಂಡ್ ಎಜ್ಯುಕೇಷನಲ್ ಸೆಕ್ಯೂರಿಟಿ,** ಇನ್ ಮಹೇಂದ್ರ ದೇವ್ ಎಟ್ ಆಲ್.
- ಶ್ರೀವಾತ್ಸವ, ರವಿ, (೨೦೦೧ ಬಿ), **ಅಸೆಸ್ ಟು ಬೇಸಿಕ್ ಎಜುಕೇಷನ್ ಇನ್ ರೂರಲ್ ಉತ್ತರ ಪ್ರದೇಶ್,** ಇನ್ ವೈಧ್ಯನಾಥನ್ ಆ್ಯಂಡ್ ನಾಯರ್.
- ಸವಿತಾ ಕೆ., (೨೦೦೭), *ಬಳ್ಳಾರಿ ಜಿಲ್ಲಾ ಗ್ರಾಮವಾರು ಸಾಕ್ಷರತೆ ೨೦೦೫,* **ಅಭಿವೃದ್ಧಿ ಅಧ್ಯಯನ, ಸಮಾಜ ವಿಜ್ಞಾನಗಳ ಪತ್ರಿಕೆ (ಜನವರಿ-ಜೂನ್),** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.
- ಸೆನ್ಸಸ್ ಆಫ್ ಇಂಡಿಯಾ (೨೦೦೧), ಡಿಸ್ಟ್ರಿಕ್ಟ್ ಪಾಪ್ಯುಲೇಶನ್ ಬುಕ್‌ಲೆಟ್, ಬಳ್ಳಾರಿ.
- ಸೂರ್ಯನಾತ್ ಯು ಕಾಮತ್, (೧೯೮೬), ಮೈಸೂರು ಗೆಜೆಟಿಯರ್ ಭಾಗ-೩, ವಿ.ವಿ. ಸುಬ್ಬಯ್ಯ ಅಂಡ್ ಸನ್ಸ್, ಬೆಂಗಳೂರು.
- ಸಂಜಯ್ ಕುಮಾರ್, ಬಿ.ಜಿ. ಕೊಪ್ಪರ್, ಎಸ್. ಬಾಲಸುಬ್ರಮಣಿಯನ್, (೨೦೦೩), *ಪ್ರೈಮರಿ ಎಜ್ಯುಕೇಶನ್ ಇನ್ ರೂರಲ್ ಏರಿಯಾಸ್,* **ಎನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ,** (ಆಗಸ್ಟ್), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.
- ಸುಂದರ ಕೇನಾಜಿ, ಮಂಡೆಕೋಲು, ೨೦೦೬, *ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಶಿಕ್ಷಣ ಪೋಷಕರು ಎಡವಿರುವುದು ಎಲ್ಲಿ,* **ಹೊನ್ನಾರು** ಮಾಸಪತ್ರಿಕೆ, ಸಂ. ೩, ಸಂಚಿಕೆ ೩೦ (ಸೆಪ್ಟೆಂಬರ್).

- ಹಜೇಲ ಪಿ.ಡಿ., (೧೯೯೬), *ಸಾಮಾಜಿಕ ಏಳಿಗೆಗೆ ಸಾಧನವಾಗಿ ಶಿಕ್ಷಣ*, **ಯೋಜನಾ ಅಭ್ಯುದಯ ಮಾಸಪತ್ರಿಕೆ** (ಜನವರಿ), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.
- ಹಿರೇಮಠ ಸಿ.ಜಿ. ತಳವಾರ ಜಿ.ಕೆ. ಮತ್ತು ಉಗರಗೋಳ ಎಂ.ಬಿ. (ಸಂ), (೨೦೦೬), **ಆಧುನಿಕ ಶಿಕ್ಷಣದ ಒಲವುಗಳು**, ನಿಶಾಂತ ಪ್ರಕಾಶನ, ಸೀಮಿಕೇರಿ, ಬಾಗಲಕೋಟೆ
- ಹೆಗಡೆ ಡಿ.ವಿ., (೨೦೦೪), *ಮಕ್ಕಳ ಅಭಿವೃದ್ಧಿ ಎಲ್ಲರ ಹೊಣೆ*, **ಅಭ್ಯುದಯ ಮಾಸಪತ್ರಿಕೆ**, ಯೋಜನಾ (ನವೆಂಬರ್), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.
- ಕ್ಷೇತ್ರಕಾರ್ಯದ ಮಾಹಿತಿ.
- **ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧಗಳು**
- ಕೃಷ್ಣ ಜೆ., (೨೦೦೦), **ಮಾನವ ಅಭಿವೃದ್ಧಿಯ ಪ್ರಾದೇಶಿಕ ಆಯಾಮಗಳ ಅಧ್ಯಯನ**, ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ
- ಗಣಪತಿ ಕೆ. ಲಮಾಣಿ (೨೦೦೮), **ಲಂಬಾಣಿಗರ ಗೋವಾ ವಲಸೆ : ಒಂದು ಸಮಾಜಶಾಸ್ತ್ರೀಯ ಅಧ್ಯಯನ ಪಿಎಚ್.ಡಿ**. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ
- ಬಾಲರಾಜು ಎಚ್., (೨೦೦೨), **ಸಮುದಾಯದಲ್ಲಿ ಭಾಗವಹಿಸುವಿಕೆಯ ಮುಖಾಂತರ ಶೈಕ್ಷಣಿಕ ಅಭಿವೃದ್ಧಿ ಬಳ್ಳಾರಿ ಜಿಲ್ಲೆ ಒಂದು ಅಧ್ಯಯನ**, ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ
- ಮಲ್ಲಿಕಾರ್ಜುನ ಕಿಚಡಿ, (೨೦೦೩), **ಬಳ್ಳಾರಿ ಜಿಲ್ಲೆ ಬೇಡ ಸಮುದಾಯದ ಶಿಕ್ಷಣದ ಪ್ರಗತಿ**, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.
- ಯರಿಸ್ವಾಮಿ ಎಂ. (೨೦೦೨), **ಗ್ರಾಮಪಂಚಾಯಿತಿ ಮತ್ತು ಸಬಲೀಕರಣ**, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ
- ಸವಿತಾ ಕೆ., (೨೦೦೮), **ಪ್ರಾಥಮಿಕ ಶಿಕ್ಷಣದಲ್ಲಿ ಲಿಂಗ ಸಂಬಂಧಿ ಆಯಾಮಗಳು, ಸಮಾಜೋರ್ಥಿಕ ಅಂಶಗಳು**, ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ

ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ ೨೦೦೯

೨೦೦೯ ರ ಕ್ರಮ ಸಂಖ್ಯೆ ೩೫

ಆರರಿಂದ ಹದಿನಾಲ್ಕು ವರ್ಷದ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸಲು ಕಾಯಿದೆ. ಭಾರತ ಗಣರಾಜ್ಯದ ೬೦ ನೇ ವರ್ಷದಲ್ಲಿ ಸಂಸತ್‌ನಲ್ಲಿ ಕಾಯಿದೆಯಾಗಿ ಈ ಮುಂದಿನಂತೆ ರಚಿಸಲಾಗಿದೆ.

ಅಧ್ಯಾಯ – ೧

ಪ್ರಾರಂಭಿಕ

ಕಲಂ – ೧ : ಸಂಕ್ಷಿಪ್ತ ಶಿರೋನಾಮೆ, ವ್ಯಾಪ್ತಿ ಮತ್ತು ಪ್ರಾರಂಭ

(೧) ಈ ಕಾಯಿದೆಯನ್ನು ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕಿನ ಕಾಯಿದೆ ೨೦೦೯ ಎಂದು ಕರೆಯಬಹುದಾಗಿದೆ.

(೨) ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಸಮಗ್ರ ಭಾರತ ದೇಶವು ಈ ಕಾಯಿದೆಯ ವ್ಯಾಪ್ತಿಗೊಳಪಡತಕ್ಕದ್ದು.

(೩) ಈ ಕಾಯಿದೆಯು ಭಾರತ ಕೇಂದ್ರ ಸರ್ಕಾರವು ಅಧಿಕೃತ ರಾಜ್ಯ ಪತ್ರದಲ್ಲಿ ಘೋಷಿಸಿ ನಿಗದಿಪಡಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

ಕಲಂ – ೨ : ವ್ಯಾಖ್ಯೆಗಳು

ಈ ಕಾಯಿದೆಯಲ್ಲಿ, ಬೇರೊಂದು ಸಂದರ್ಭದಲ್ಲಿ ಅಗತ್ಯವೆನಿಸದಿದ್ದರೆ –

(a) "ಸಮುಚಿತ ಸರ್ಕಾರ೧" ಎಂದರೆ,

(i) ಕೇಂದ್ರ ಸರ್ಕಾರದಿಂದ ಸ್ಥಾಪಿಸಲ್ಪಟ್ಟ, ಕೇಂದ್ರ ಸರ್ಕಾರದ ಸ್ವಾಮ್ಯತ್ವದಲ್ಲಿರುವ ಅಥವಾ ಅಧೀನದಲ್ಲಿರುವ ಅಥವಾ ತನ್ನದೇ ಶಾಸನ ಸಭೆಯನ್ನು ಹೊಂದಿರದ ಕೇಂದ್ರಾಡಳಿತ ಪ್ರದೇಶದ ಆಡಳಿತಗಾರರಿಂದ ಸ್ಥಾಪಿಸಲ್ಪಟ್ಟ, ಸ್ವಾಮ್ಯತ್ವಕ್ಕೆ ಅಥವಾ ನಿಯಂತ್ರಣಕ್ಕೊಳಪಟ್ಟ ಶಾಲೆಗಳಿಗೆ ಸಂಬಂಧಿಸಿದಂತೆ – ಕೇಂದ್ರ

ಸರ್ಕಾರ; ಸಮುಚಿತ ಸರ್ಕಾರ ಎಂಬ ಶಬ್ದ ಪ್ರಯೋಗವು "Appropriate Government" ಎಂಬುದರ ಅನುವಾದವಾಗಿದ್ದು, ಹಲವಾರು ಕನ್ನಡ ಅನುವಾದಿತ ಕಾಯಿದೆಗಳಲ್ಲಿ ಇದನ್ನು ಬಳಸಲಾಗಿದೆ. ಇದನ್ನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ಕರ್ನಾಟಕ ಸರ್ಕಾರವು ಡಿಸೆಂಬರ್ ೨೦೦೮ ರಲ್ಲಿ ಪ್ರಕಟಿಸಿದ ಕಾನೂನು ಪದಕೋಶದಿಂದ ಆರಿಸಿಕೊಳ್ಳಲಾಗಿದೆ.

(ii) ಉಪ ಕಲಂ (i) ರಲ್ಲಿ ಉಲ್ಲೇಖಿಸಲಾದ ಶಾಲೆಗಳನ್ನು ಹೊರತುಪಡಿಸಿ, ಇನ್ನುಳಿದ –

(A) ಯಾವುದೇ ರಾಜ್ಯದ ಆಡಳಿತಕ್ಕೆ ಸೇರಿರುವ ಪ್ರದೇಶದಲ್ಲಿ ಸ್ಥಾಪಿತವಾದ ಶಾಲೆಗಳಿಗೆ ಸಂಬಂಧಿಸಿದಂತೆ – ಆ ರಾಜ್ಯದ ಸರ್ಕಾರ;

(B) ತನ್ನದೇ ಆದ ಶಾಸನ ಸಭೆಯನ್ನು ಹೊಂದಿರುವ ಕೇಂದ್ರಾಡಳಿತ ಪ್ರದೇಶದ ವ್ಯಾಪ್ತಿಯಲ್ಲಿ ಸ್ಥಾಪಿತವಾಗಿರುವ ಶಾಲೆಗಳಿಗೆ ಸಂಬಂಧಿಸಿದಂತೆ – ಕೇಂದ್ರಾಡಳಿತ ಪ್ರದೇಶದ ಆ ಸರ್ಕಾರ.

(b) "ತಲಾ ಶುಲ್ಕ" (ಕ್ಯಾಪಿಟೇಶನ್ ಶುಲ್ಕ) ಎಂದರೆ, ಶಾಲೆಯು ನಿಗದಿಪಡಿಸಿದ ಶುಲ್ಕವನ್ನು ಹೊರತುಪಡಿಸಿ, ಪಾವತಿಸಬಹುದಾದ ಇನ್ನಾವುದೇ ತೆರನಾದ ದೇಣಿಗೆ ಅಥವಾ ಕೊಡುಗೆ ಅಥವಾ ಪಾವತಿ.

(c) "ಮಗು" ಎಂದರೆ ಆರರಿಂದ ಹದಿನಾಲ್ಕು ವರ್ಷ ವಯೋಮಿತಿಯೊಳಗಿನ ಗಂಡು ಅಥವಾ ಹೆಣ್ಣು ಮಗು.

(d) "ಪ್ರತಿಕೂಲ ಗುಂಪಿಗೊಳಪಟ್ಟ ಮಗು" ಎಂದರೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ವರ್ಗ ಅಥವಾ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಭೌಗೋಳಿಕ, ಭಾಷಾವಾರು, ಲಿಂಗಾಧಾರಿತ ಅಥವಾ ಸಮುಚಿತ ಸರ್ಕಾರ ಅಧಿಸೂಚನೆಯ ಮೂಲಕ ಸ್ಪಷ್ಟಪಡಿಸಿದ ಇನ್ನಾವುದೇ ಕಾರಣಗಳಿಂದಾಗಿ ಪ್ರತಿಕೂಲತೆಗೊಳಗಾಗಿರುವ ಇತರೆ ಗುಂಪಿಗೆ ಸೇರಿರುವ ಮಗು.

(e) "ದುರ್ಬಲ ವರ್ಗಕ್ಕೆ ಸೇರಿದ ಮಗು" ಎಂದರೆ, ಸಮುಚಿತ ಸರ್ಕಾರವು ಅಧಿಸೂಚನೆಯ ಮೂಲಕ ಸ್ಪಷ್ಟಪಡಿಸಿದ ಕನಿಷ್ಠ ವಾರ್ಷಿಕ ಆದಾಯ ಮಿತಿಗಿಂತಲೂ ಕಡಿಮೆ ವಾರ್ಷಿಕ ಆದಾಯವನ್ನು ಹೊಂದಿರುವ ಪೋಷಕರ ಯಾ ಪಾಲಕರ ಮಗು.

(f) "ಪ್ರಾಥಮಿಕ ಶಿಕ್ಷಣ" ಎಂದರೆ, ಒಂದನೇ ತರಗತಿಯಿಂದ ಎಂಟನೇ ತರಗತಿಯವರೆಗಿನ ಶಿಕ್ಷಣ.

(g) ಮಗುವಿಗೆ ಸಂಬಂಧಿಸಿದಂತೆ "ಪಾಲಕ" ಎಂದರೆ, ಆ ಮಗುವಿನ ಆರೈಕೆ ಹಾಗೂ ಸುಪರ್ದಿಯ ಹೊಣೆ ಹೊತ್ತಿರುವ ವ್ಯಕ್ತಿ ಮತ್ತು ಈ ವ್ಯಾಖ್ಯೆ ಸಹಜ ಪಾಲಕ ಅಥವಾ ನ್ಯಾಯಾಲಯವು ನಿಯೋಜಿಸಿದ ಅಥವಾ ಮಗುವಿನ ಸಂರಕ್ಷಕ (ಪಾಲಕ) ಎಂದು ನ್ಯಾಯಾಲಯ ಅಥವಾ ಕಾಯಿದೆ ಘೋಷಿಸಿದ ವ್ಯಕ್ತಿಯನ್ನು ಒಳಗೊಳ್ಳುತ್ತದೆ.

(h) "ಸ್ಥಳೀಯ ಪ್ರಾಧಿಕಾರ" ಎಂದರೆ, ಯಾವುದೇ ಹೆಸರಿನಿಂದ ಕರೆಯಬಹುದಾದ ಪುರಸಭೆ,

ಪೌರ ಮಂಡಳಿ, ಜಿಲ್ಲಾ ಪರಿಷತ್, ನಗರ ಪಂಚಾಯತ್ ಅಥವಾ ಪಂಚಾಯತ್ ಹಾಗೂ ಈ ವ್ಯಾಖ್ಯೆ ಒಂದು ಶಾಲೆಯ ಆಡಳಿತಾಧಿಕಾರದ ನಿಯಂತ್ರಣವನ್ನು ಹೊಂದಿರುವ ಅಥವಾ ಯಾವುದೇ ಪಟ್ಟಣ ಯಾ ಗ್ರಾಮಗಳಲ್ಲಿ ಸ್ಥಳೀಯ ಆಡಳಿತ ಸಂಸ್ಥೆಯಂತೆ ಕಾರ್ಯ ನಿರ್ವಹಿಸಲು ಯಾವುದೇ ಕಾಯಿದೆಯಡಿಯಲ್ಲಿ ಅಧಿಕಾರ ಪಡೆದಿರುವ ಇತರೆ ಪ್ರಾಧಿಕಾರ ಅಥವಾ ಸಂಸ್ಥೆಗಳನ್ನು ಒಳಗೊಂಡಿರುತ್ತದೆ.

(i) "ಮಗುವಿನ ಹಕ್ಕುಗಳ ಸಂರಕ್ಷಣೆಗಾಗಿ ರಾಷ್ಟ್ರೀಯ ಆಯೋಗ" ಎಂದರೆ, ಮಗುವಿನ ಹಕ್ಕುಗಳ ರಕ್ಷಣಾ ಆಯೋಗಗಳ ಕಾಯಿದೆ ೨೦೦೫ ರ ಕಲಂ ೩ ರಡಿಯಲ್ಲಿ ಸ್ಥಾಪಿಸಲಾದ ಮಗುವಿನ ಹಕ್ಕುಗಳ ಸಂರಕ್ಷಣೆಗಾಗಿರುವ ರಾಷ್ಟ್ರೀಯ ಆಯೋಗವಾಗಿದೆ.

(j) "ಅಧಿಸೂಚನೆ ಅಥವಾ ಪ್ರಕಟಣೆ" ಎಂದರೆ, ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚನೆ.

(k) "ಪೋಷಕ" ಎಂದರೆ, ಮಗುವಿನ ಸಹಜ ಪೋಷಕ ಅಥವಾ ದತ್ತು ಸಂಬಂಧವನ್ನು ಹೊಂದಿರುವ ಅಥವಾ ಮಲ ತಂದೆತಾಯಿ.

(l) "ವಿಧಿಸಿದ ಅಥವಾ ನಿಯಮಿಸಿದ" ಎಂದರೆ, ಈ ಕಾಯಿದೆಯಡಿಯಲ್ಲಿನ ನಿಯಮಗಳ ಮೂಲಕ ವಿಧಿಸಿದ ಎಂದರ್ಥ.

(m) "ಅನುಸೂಚಿ" ಎಂದರೆ, ಈ ಕಾಯಿದೆಯೊಂದಿಗೆ ಅನುಬಂಧಿಸಲಾದ ವಿವರಪಟ್ಟಿ ಯಾ ಅನುಸೂಚಿ.

(n) "ಶಾಲೆ" ಎಂದರೆ, ಪ್ರಾಥಮಿಕ ಶಿಕ್ಷಣವನ್ನು ನೀಡುತ್ತಿರುವ ಯಾವುದೇ ಅಂಗೀಕೃತ (ಮನ್ನಣೆ ಪಡೆದಿರುವ) ಶಾಲೆ. ಈ ವ್ಯಾಖ್ಯೆ ಕೆಳಕಂಡವುಗಳನ್ನೂ ಒಳಗೊಂಡಿರುತ್ತದೆ;

(i) ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಸ್ಥಾಪಿಸಲ್ಪಟ್ಟಿರುವ, ಅದರ ಸ್ವಾಮ್ಯತ್ವಕ್ಕೊಳಪಟ್ಟಿರುವ ಅಥವಾ ನಿಯಂತ್ರಣಕ್ಕೊಳಪಟ್ಟಿರುವ ಶಾಲೆ;

(ii) ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ, ತನ್ನ ಸಂಪೂರ್ಣ ಯಾ ಭಾಗಶಃ ಖರ್ಚುವೆಚ್ಚಗಳನ್ನು ಭರಿಸಲು ಅನುದಾನ ಅಥವಾ ದೇಣಿಗೆಯನ್ನು ಪಡೆಯುತ್ತಿರುವ ಅನುದಾನಿತ ಶಾಲೆ;

(iii) ಒಂದು ನಿರ್ದಿಷ್ಟ ವರ್ಗಕ್ಕೆ ಸೇರಿರುವಂತಹ ಶಾಲೆ;

(iv) ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ ತನ್ನ ಖರ್ಚುವೆಚ್ಚಗಳನ್ನು ಭರಿಸಲು ಯಾವುದೇ ರೀತಿಯ ಸಹಾಯ ಅಥವಾ ದೇಣಿಗೆಯನ್ನು ಸ್ವೀಕರಿಸದಂತಹ ಅನುದಾನರಹಿತ ಶಾಲೆ.

(o) "ಪರಿಶೋಧನಾ ಪ್ರಕ್ರಿಯೆ" ಯಾದೃಚ್ಛಿಕ ಅಥವಾ ತನ್ನ ಇಷ್ಟಾನುಸಾರದ ಆಯ್ಕೆ ವಿಧಾನವನ್ನು ಹೊರತುಪಡಿಸಿ, ಮಕ್ಕಳನ್ನು ಶಾಲೆಗೆ ದಾಖಲಿಸಿಕೊಳ್ಳಲು ಆದ್ಯತೆಯ ಮೇರೆಗೆ ಆಯ್ಕೆ ಮಾಡಲು ಬಳಸುವ ವಿಧಾನ.

(p) ಒಂದು ಶಾಲೆಗೆ ಸಂಬಂಧಿಸಿದಂತೆ "ನಿರ್ದಿಷ್ಟ ವರ್ಗ" ಎಂದರೆ, ಕೇಂದ್ರೀಯ ವಿದ್ಯಾಲಯ, ನವೋದಯ ವಿದ್ಯಾಲಯ, ಸೈನಿಕ ಶಾಲೆ ಎಂದು ಕರೆಯಲ್ಪಡುವ ಹಾಗೂ ಸಮುಚಿತ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಿದ ಪ್ರತ್ಯೇಕವಾದ ಗುಣಲಕ್ಷಣಗಳಿರುವ ಇತರ ಯಾವುದೇ ಶಾಲೆ;

(q) "ಮಗುವಿನ ಹಕ್ಕುಗಳ ಸಂರಕ್ಷಣೆಗಾಗಿ ರಾಜ್ಯ ಆಯೋಗ" ಎಂದರೆ, ಮಗುವಿನ ಹಕ್ಕುಗಳ ರಕ್ಷಣಾ ಆಯೋಗಗಳ ಕಾಯಿದೆ ೨೦೦೫ ರ ಕಲಂ ೩ ರಡಿಯಲ್ಲಿ ಸ್ಥಾಪಿಸಲಾದ ಮಗುವಿನ ಹಕ್ಕುಗಳ ಸಂರಕ್ಷಣೆಗಾಗಿರುವ ರಾಜ್ಯ ಆಯೋಗವಾಗಿದೆ.

ಅಧ್ಯಾಯ – ೨

ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು

ಕಲಂ – ೩ : ಮಗುವಿನ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು

(೧) ಆರರಿಂದ ಹದಿನಾಲ್ಕು ವರ್ಷದೊಳಗಿನ ವಯೋಮಿತಿಯ ಪ್ರತಿಯೊಂದು ಮಗುವೂ, ತಾನಿರುವ ಪ್ರದೇಶದ ಆಸುಪಾಸಿನ ಶಾಲೆಯಲ್ಲಿ, ಪ್ರಾಥಮಿಕ ಶಿಕ್ಷಣದ ಹಂತ ಪೂರ್ಣಗೊಳಿಸುವವರೆಗೂ, ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಪಡೆಯುವ ಹಕ್ಕನ್ನು ಹೊಂದಿರತಕ್ಕದ್ದು.

(೨) ಉಪ ಕಲಂ ೧ ರಲ್ಲಿ ವಿವರಿಸಲಾದ ಉದ್ದೇಶಕ್ಕಾಗಿ, ಯಾವುದೇ ಮಗುವು ಅವನು/ಳು ಪ್ರಾಥಮಿಕ ಶಿಕ್ಷಣವನ್ನು ಪಡೆಯುವುದನ್ನು ಅಥವಾ ಪೂರ್ಣಗೊಳಿಸುವುದನ್ನು ತಡೆಹಿಡಿಯಬಲ್ಲ ಯಾವುದೇ ವಿಧದ ಶುಲ್ಕ ಅಥವಾ ಖರ್ಚು ವೆಚ್ಚವನ್ನು ಭರಿಸಲು ಬಾಧ್ಯಸ್ಥನಾಗುವುದಿಲ್ಲ/ಳಾಗುವುದಿಲ್ಲ.

ಆದರೆ, ಅಶಕ್ತತೆಯನ್ನು ಹೊಂದಿರುವ ವ್ಯಕ್ತಿಗಳ (ಸಮಾನ ಅವಕಾಶಗಳು, ರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಕಾಯಿದೆ ೧೯೯೬ ರ ಕಲಂ ೨ ರ ಉಪ ಕಲಂ (೧) ರಲ್ಲಿ ವಿವರಿಸಲಾದಂತಹ ಅಸಮರ್ಥತೆಯಿಂದ ಬಳಲುತ್ತಿರುವ ಮಗುವು ಆ ಕಾಯಿದೆಯ ೫ ನೇ ಅಧ್ಯಾಯದಲ್ಲಿ ಕೊಡಲಾಗಿರುವ ಉಪಬಂಧನೆಗಳ ಅನುಸಾರವಾಗಿ ಕಡ್ಡಾಯ ಮತ್ತು ಉಚಿತ ಪ್ರಾಥಮಿಕ ಶಿಕ್ಷಣವನ್ನು ಪಡೆಯುವ ಹಕ್ಕನ್ನು ಹೊಂದಿರತಕ್ಕದ್ದು.

ಕಲಂ – ೪ : ಪ್ರಾಥಮಿಕ ಶಿಕ್ಷಣ ಪಡೆಯಲು ಪ್ರವೇಶ ಪಡೆದಿರದ ಅಥವಾ ಪ್ರಾಥಮಿಕ ಶಿಕ್ಷಣವನ್ನು

ಪೂರ್ಣಗೊಳಿಸಿರದ ಮಕ್ಕಳಿಗಿರುವ ವಿಶೇಷ ಉಪಬಂಧಗಳು ಆರು ವರ್ಷ ಮೇಲ್ಪಟ್ಟ ಮಗುವೊಂದನ್ನು ಯಾವುದೇ ಶಾಲೆಗೆ ಸೇರಿಸದೇ ಇದ್ದಲ್ಲಿ ಅಥವಾ ಶಾಲೆಗೆ ಪ್ರವೇಶ ಪಡೆದಿದ್ದೂ ಸಹ ಪ್ರಾಥಮಿಕ ಶಿಕ್ಷಣವನ್ನು ಮಗುವು ಪೂರ್ತಿಗೊಳಿಸದೇ ಇದ್ದಲ್ಲಿ, ಅಂತಹ ಮಗುವನ್ನು ಅವನ/ಅವಳ ವಯೋಮಿತಿಗೆ ಸೂಕ್ತವಾದ ತರಗತಿಗೆ ಸೇರಿಸತಕ್ಕದ್ದು. ಈ ರೀತಿಯಾಗಿ, ಮಗುವೊಂದು ತನ್ನ ವಯೋಮಿತಿಗನುಗುಣವಾದ ತರಗತಿಗೆ ನೇರವಾಗಿ ಪ್ರವೇಶ ಪಡೆದ ಸಂದರ್ಭದಲ್ಲಿ, ತರಗತಿಯ ಇನ್ನುಳಿದ ಮಕ್ಕಳೊಡನೆ ಸರಿಸಮಾನತೆ ಸಾಧಿಸಲು, ಈ ಕಾಯಿದೆಯಡಿಯಲ್ಲಿ ವಿಧಿಸಬಹುದಾದಂತಹ ರೀತಿ ಹಾಗೂ ಸಮಯಾವಧಿಯೊಳಗೆ

ವಿಶೇಷ ತರಬೇತಿಯನ್ನು ಪಡೆಯುವ ಹಕ್ಕನ್ನು ಅವನು/ಅವಳು ಹೊಂದಿರತಕ್ಕದ್ದು. ಹಾಗೂ, ಈ ರೀತಿಯಾಗಿ ಪ್ರಾಥಮಿಕ ಶಿಕ್ಷಣವನ್ನು ಪಡೆಯಲು ಪ್ರವೇಶ ಗಳಿಸಿದ ಮಗು ಹದಿನಾಲ್ಕು ವರ್ಷಗಳ

ಬಳಿಕವೂ, ತನ್ನ ಪ್ರಾಥಮಿಕ ಶಿಕ್ಷಣದ ಹಂತ ಪೂರ್ಣಗೊಳ್ಳುವ ತನಕ ಉಚಿತ ಶಿಕ್ಷಣವನ್ನು ಪಡೆಯಲು ಅರ್ಹವಾಗಿರತಕ್ಕದ್ದು. ಉಪಬಂಧ ಎಂದರೆ, ("Provision" ಎಂಬ ಪದದ ಅನುವಾದ) ಯಾವುದಕ್ಕಾದರೂ ಅವಕಾಶ ಒದಗಿಸಿರುವ ನ್ಯಾಯ ನಿಯಮ. ಈ ಪದದ ಅರ್ಥ ವಿವರಣೆಯನ್ನು ಮೈಸೂರು ವಿಶ್ವವಿದ್ಯಾನಿಲಯ ೧೯೯೯ ರಲ್ಲಿ ಪ್ರಕಟಿಸಿದ ಇಂಗ್ಲೀಷ್-ಕನ್ನಡ ನಿಘಂಟಿನ ಪು.ಸಂ. ೭೩೫ ರಿಂದ ತೆಗೆದುಕೊಳ್ಳಲಾಗಿದೆ.

ಕಲಂ – ೫ : ಬೇರೆ ಶಾಲೆಗೆ ವರ್ಗಾವಣೆ ಪಡೆಯುವ ಹಕ್ಕು

(೧) ಯಾವ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವ ಸೌಲಭ್ಯ ಇರುವುದಿಲ್ಲವೋ ಅಂತಹ ಸಂದರ್ಭದಲ್ಲಿ ಮಗುವು, ತನ್ನ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಲು, ಈ ಕಾಯಿದೆಯ ಕಲಂ ೨ ರ ಉಪಕಲಂ (n) ಅಡಿಯಲ್ಲಿ ನೀಡಲಾದ (iii) ಹಾಗೂ (iv) ರಲ್ಲಿ ನಮೂದಿಸಲಾದ ಶಾಲೆಗಳನ್ನು ಹೊರತುಪಡಿಸಿ, ಇತರ ಯಾವುದೇ ಶಾಲೆಗೆ ವರ್ಗಾವಣೆಯನ್ನು ಪಡೆಯುವ ಹಕ್ಕನ್ನು ಹೊಂದಿರತಕ್ಕದ್ದು.

(೨) ಬೇರೆ ಯಾವುದೇ ಕಾರಣಗಳಿಗಾಗಿ ಒಂದು ಮಗುವು ರಾಜ್ಯದೊಳಗೆ ಅಥವಾ ರಾಜ್ಯದ ಹೊರಗೆ ಒಂದು ಶಾಲೆಯಿಂದ ಮತ್ತೊಂದು ಶಾಲೆಗೆ, ತನ್ನ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಲು ಹೋಗಬೇಕಾದಂತಹ ಸಂದರ್ಭದಲ್ಲಿ, ಅವನು/ಳು ಈ ಕಾಯಿದೆಯ ಕಲಂ ೨ ರ ಉಪಕಲಂ (n) ಅಡಿಯಲ್ಲಿ ನೀಡಲಾದ (iii) ಹಾಗೂ (iv) ರಲ್ಲಿ ನಮೂದಿಸಲಾದ ಶಾಲೆಗಳನ್ನು ಹೊರತುಪಡಿಸಿ, ಇತರ ಯಾವುದೇ ಶಾಲೆಗೆ ವರ್ಗಾವಣೆಯನ್ನು ಪಡೆಯುವ ಹಕ್ಕನ್ನು ಹೊಂದಿರತಕ್ಕದ್ದು.

(೩) ಈ ರೀತಿಯಾಗಿ ಬೇರೊಂದು ಶಾಲೆಯಲ್ಲಿ ಪ್ರವೇಶ ಪಡೆಯಲು, ಆ ಮಗು ಈ ಹಿಂದೆ ಪ್ರವೇಶ ಪಡೆದಿದ್ದ ಶಾಲೆಯ ಮುಖ್ಯೋಪಾಧ್ಯಾಯರು ಅಥವಾ ಮೇಲ್ವಿಚಾರಕರು ತಕ್ಷಣ ವರ್ಗಾವಣೆ ಪತ್ರವನ್ನು ಕೊಡತಕ್ಕದ್ದು. ವರ್ಗಾವಣೆ ಪತ್ರವನ್ನು ಹಾಜರುಪಡಿಸುವಲ್ಲಿ ವಿಳಂಬವಾದಲ್ಲಿ, ಅದು ಮೇಲೆ ವಿವರಿಸಿದಂತೆ ಬೇರೊಂದು ಶಾಲೆಯಲ್ಲಿ ಪ್ರವೇಶವನ್ನು ವಿಳಂಬಗೊಳಿಸಲು/ನಿರಾಕರಿಸಲು ಕಾರಣವಾಗುವುದಿಲ್ಲ. ಈ ರೀತಿ ವರ್ಗಾವಣೆ ಪತ್ರವನ್ನು ನೀಡಲು ವಿಳಂಬಿಸುವ ಶಾಲೆಯ ಮುಖ್ಯೋಪಾಧ್ಯಾಯರು ಅಥವಾ

ಮೇಲ್ವಿಚಾರಕರು ಅವರಿಗೆ ಅನ್ವಯಿಸಬಲ್ಲಂತಹ ಸೇವಾ ನಿಯಮಗಳ ಅಡಿಯಲ್ಲಿ ಕೈಗೊಳ್ಳಬಹುದಾದ ಶಿಸ್ತುಕ್ರಮಗಳಿಗೆ ಗುರಿಯಾಗುತ್ತಾರೆ.

ಅಧ್ಯಾಯ – ೩

ಸಮುಚಿತ ಸರ್ಕಾರ, ಸ್ಥಳೀಯ ಪ್ರಾಧಿಕಾರ ಮತ್ತು ಪೋಷಕರ ಕರ್ತವ್ಯಗಳು

ಕಲಂ – ೬ : ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳಿಗಿರುವ, ಶಾಲೆಯನ್ನು ಸ್ಥಾಪಿಸಬೇಕಾದಂತಹ ಕರ್ತವ್ಯ ಈ ಕಾಯಿದೆಯಲ್ಲಿ ತಿಳಿಸಲಾಗಿರುವ ಉಪಬಂಧಗಳನ್ನು

ಕಾರ್ಯಗತಗೊಳಿಸಲು, ವಿಧಿಸಲಾದಂತಹ ಪ್ರದೇಶ ಹಾಗೂ ಆಸುಪಾಸಿನ ವ್ಯಾಪ್ತಿಯೊಳಗೆ ಶಾಲೆಯನ್ನು ಸ್ಥಾಪಿಸದೇ ಇದ್ದಂತಹ ಸಂದರ್ಭದಲ್ಲಿ, ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರವು ಈ ಕಾಯಿದೆ ಜಾರಿಯಾದದಂದಿನಿಂದ ಮೂರು ವರ್ಷಗಳ ಅವಧಿಯೊಳಗೆ ಶಾಲೆಯನ್ನು ಸ್ಥಾಪಿಸತಕ್ಕದ್ದು.

ಕಲಂ – ೭ : ಆರ್ಥಿಕ ಹಾಗೂ ಇನ್ನಿತರ ಹೊಣೆಗಾರಿಕೆಗಳ ಹಂಚಿಕೆ

(೧) ಈ ಕಾಯಿದೆಯಲ್ಲಿ ತಿಳಿಸಲಾದ ಉಪಬಂಧಗಳನ್ನು ಕಾರ್ಯಗತಗೊಳಿಸಲು ಅಗತ್ಯವಾದ ಧನಸಹಾಯವನ್ನು ಒದಗಿಸುವ ಸಮಾನ ಜವಾಬ್ದಾರಿಯು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗಿರುತ್ತದೆ.

(೨) ಈ ಕಾಯಿದೆಯ ಉಪಬಂಧಗಳನ್ನು ಕಾರ್ಯಗತಗೊಳಿಸಲು ಅಗತ್ಯವಾದ ಬಂಡವಾಳ ಧನ ಮತ್ತು ಆವರ್ತಕ ಖರ್ಚುವೆಚ್ಚಗಳ ಪ್ರಮಾಣವನ್ನು ಕೇಂದ್ರ ಸರ್ಕಾರವು ಅಂದಾಜುಮಾಡತಕ್ಕದ್ದು.

(೩) ಉಪ ಕಲಂ ೨ ರಲ್ಲಿ ಸೂಚಿಸಿರುವಂತಹ ಖರ್ಚುವೆಚ್ಚಗಳನ್ನು ನಿರ್ವಹಿಸಲು ಬೇಕಾದ ಹಣದ ಪ್ರಮಾಣವನ್ನು ಕೇಂದ್ರ ಸರ್ಕಾರವು ರಾಜ್ಯಸರ್ಕಾರಗಳೊಡನೆ ಸಮಾಲೋಚಿಸಿ, ಕಾಲ ಕಾಲಕ್ಕೆ ಸರಿಯಾಗಿ ನಿರ್ಧರಿಸುತ್ತದೆ ಹಾಗೂ ರಾಜ್ಯ ಸರ್ಕಾರಗಳಿಗೆ ರಾಜ್ಯಾದಾಯದೊಡನೆ ಸಹಾಯಧನದ ರೂಪದಲ್ಲಿ ನೀಡುತ್ತದೆ.

(೪) ಈ ಕಾಯಿದೆಯಲ್ಲಿನ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಅಗತ್ಯವಾದ ತನ್ನ ಪಾಲಿನ ದೇಣಿಗೆಯನ್ನು ನೀಡಲು ಯಾವುದಾದರೂ ರಾಜ್ಯಸರ್ಕಾರಕ್ಕೆ ಅವಶ್ಯವಾದ ಹೆಚ್ಚುವರಿ ಸಂಪನ್ಮೂಲಗಳನ್ನು ಒದಗಿಸುವ ಅಗತ್ಯತೆಯನ್ನು ನಿಯತಕಾಲಗಳಲ್ಲಿ ತಲೆದೋರುವ ಎಂದರ್ಥ. ಅರ್ಥ ವಿವರಣೆಯನ್ನು ಮೈಸೂರು ವಿಶ್ವವಿದ್ಯಾನಿಲಯ ೧೯೯೯ ರಲ್ಲಿ ಪ್ರಕಟಿಸಿದ ಇಂಗ್ಲೀಷ್–ಕನ್ನಡ ನಿಘಂಟಿನ ಪು.ಸಂ. ೭೭೫ ರಿಂದ ತೆಗೆದುಕೊಳ್ಳಲಾಗಿದೆ. ಪರಿಶೀಲಿಸಲು, ಸಂವಿಧಾನದ ಅನುಚ್ಛೇದ ೨೮೦ ರ ಖಂಡ ೩ ರ ಉಪಖಂಡ (ಜ) ಯ ಅಡಿಯಲ್ಲಿ ಹಣಕಾಸು ಆಯೋಗಕ್ಕೆ ಸೂಚಿಸಲು ರಾಷ್ಟ್ರಪತಿಗಳಿಗೆ ಕೇಂದ್ರ ಸರ್ಕಾರವು ಮನವಿಯನ್ನು ಸಲ್ಲಿಸಬಹುದು.

(೫) ಉಪಕಲಂ (೪) ಅದೇನನ್ನೇ ಒಳಗೊಂಡಿದ್ದರೂ, ರಾಜ್ಯಸರ್ಕಾರವು ಉಪಕಲಂ (೩) ರಲ್ಲಿ ಸೂಚಿಸಿದಂತೆ, ಕೇಂದ್ರಸರ್ಕಾರವು ನೀಡುವ ನೆರವಿನ ಮೊತ್ತ (ದೇಣಿಗೆ) ಹಾಗೂ ತನ್ನ ಇತರೆ ಸಂಪನ್ಮೂಲಗಳನ್ನು ಗಮನದಲ್ಲಿಟ್ಟುಕೊಂಡು, ಈ ಕಾಯಿದೆಯಲ್ಲಿನ ಉಪಬಂಧಗಳನ್ನು ಸಂಪೂರ್ಣವಾಗಿ ಕಾರ್ಯಗತಗೊಳಿಸಲು ಅಗತ್ಯವಾದ ದೇಣಿಗೆಯನ್ನು ನೀಡುವ ಜವಾಬ್ದಾರಿಯನ್ನು ಹೊಂದಿರುತ್ತದೆ.

(೬) ಕೇಂದ್ರ ಸರ್ಕಾರವು –

(a) ಕಲಂ ೨೯ ರಲ್ಲಿ ನಿರ್ದಿಷ್ಟವಾಗಿ ಸೂಚಿಸಿರುವ ಶಿಕ್ಷಣ ಪ್ರಾಧಿಕಾರದ ಸಹಾಯದೊಂದಿಗೆ (ಸಹಯೋಗದೊಂದಿಗೆ) ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟನ್ನು ಸಿದ್ಧಪಡಿಸಬೇಕು.

(b) ಶಿಕ್ಷಕರ ತರಬೇತಿಗಾಗಿ ಬೇಕಾದಂತಹ ನಿರ್ದಿಷ್ಟ ಮಾನದಂಡಗಳನ್ನು ಅಭಿವೃದ್ಧಿಪಡಿಸಿ, ಜಾರಿಗೆ ತರಬೇಕು.

(c) ನವೀನತೆ, ಸಂಶೋಧನೆ, ಯೋಜನೆ ಮತ್ತು ಸಾಮರ್ಥ್ಯ ನಿರ್ಮಾಣವನ್ನು ಉತ್ತೇಜಿಸಲುರಾಜ್ಯಸರ್ಕಾರಕ್ಕೆ ಅಗತ್ಯವಾದಂತಹ ತಾಂತ್ರಿಕ ನೆರವು ಮತ್ತು ಸಂಪನ್ಮೂಲಗಳನ್ನು ಒದಗಿಸಬೇಕು.

ಕಲಂ – ೮ : ಸಮುಚಿತ ಸರ್ಕಾರದ ಕರ್ತವ್ಯಗಳು

ಸಮುಚಿತ ಸರ್ಕಾರವು – (a) ಪ್ರತಿಯೊಂದು ಮಗುವಿಗೂ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸತಕ್ಕದ್ದು; ಆದರೆ, ಮಗುವೊಂದನ್ನು ಅವನ/ಅವಳ ಪೋಷಕರು ಅಥವಾ ಪಾಲಕರು, ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಸ್ಥಾಪಿಸಲ್ಪಟ್ಟ, ಅವುಗಳ ಸ್ವಾಮ್ಯತ್ವಕ್ಕೊಳಪಟ್ಟ, ಅಥವಾ ಅವುಗಳಿಂದ ನಿಯಂತ್ರಿಸಲ್ಪಡುವ ಅಥವಾ ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಗಣನೀಯ ಪ್ರಮಾಣದ ಆರ್ಥಿಕ ನೆರವನ್ನು ಪಡೆದಿರುವ ಶಾಲೆಗಳಲ್ಲದೆ, ಇತರೆ ಶಾಲೆಗೆ ಸೇರಿಸಿದ್ದಲ್ಲಿ, ಅಂತಹ ಮಗು ಅಥವಾ ಅವನ/ಳ ಪೋಷಕರು ಅಥವಾ ಪಾಲಕರು, ತಮ್ಮ ಮಗುವಿನ ಪ್ರಾಥಮಿಕ ಶಿಕ್ಷಣಕ್ಕಾಗಿ ತಗುಲಿದ ಖರ್ಚುವೆಚ್ಚಗಳನ್ನು ತುಂಬಿಕೊಡುವಂತೆ ವಾದಿಸಲು ಅರ್ಹರಾಗಿರುವುದಿಲ್ಲ.

ವಿವರಣೆ : "ಕಡ್ಡಾಯ ಶಿಕ್ಷಣ" ಎಂದರೆ, ಸಮುಚಿತ ಸರ್ಕಾರದ –

(i) ಆರರಿಂದ ಹದಿನಾಲ್ಕು ವರ್ಷ ವಯೋಮಿತಿಯೊಳಗಿನ ಪ್ರತಿಯೊಂದು ಮಗುವಿಗೂ ಉಚಿತ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವ; ಮತ್ತು

(ii) ಆರರಿಂದ ಹದಿನಾಲ್ಕು ವರ್ಷಗಳೊಳಗಿನ ಪ್ರತಿಯೊಂದು ಮಗುವೂ ಶಾಲೆಗೆ ಕಡ್ಡಾಯವಾಗಿ ಪ್ರವೇಶ ಪಡೆಯುವಂತೆ, ಹಾಜರಿ ಹೊಂದಿರುವಂತೆ ಹಾಗೂ ಪ್ರಾಥಮಿಕ ಶಿಕ್ಷಣವನ್ನು ಪೂರ್ತಿಗೊಳಿಸುವಂತೆ ಖಾತರಿಪಡಿಸುವ – ಅವಶ್ಯ ಕರ್ತವ್ಯ;

(b) ಕಲಂ ೬ ರಲ್ಲಿ ನಿರ್ದಿಷ್ಟಪಡಿಸಿದಂತೆ ಆಸುಪಾಸಿನ ಶಾಲೆಗಳ ಸೌಲಭ್ಯ ದೊರಕುವುದನ್ನು ಖಾತರಿಪಡಿಸತಕ್ಕದ್ದು;

(c) ದುರ್ಬಲ ವರ್ಗ ಹಾಗೂ ಪ್ರತಿಕೂಲ ಗುಂಪುಗಳಿಗೆ ಸೇರಿರುವ ಮಕ್ಕಳು ಯಾವುದೇ ಕಾರಣಗಳಿಂದಾಗಿತಾರತಮ್ಯಗಳಿಗೆ ಒಳಗಾಗದಂತೆ ಮತ್ತು ಪ್ರಾಥಮಿಕ ಶಿಕ್ಷಣವನ್ನು ಪಡೆಯುವುದರಿಂದ ಅಥವಾ ಪೂರ್ತಿಗೊಳಿಸುವುದರಿಂದ ವಂಚಿತರಾಗದಂತೆ ಖಾತರಿಪಡಿಸಿಕೊಳ್ಳತಕ್ಕದ್ದು;

(d) ಶಾಲಾ ಕಟ್ಟಡ, ಶಿಕ್ಷಕ ವೃಂದ, ಹಾಗೂ ಕಲಿಕಾ ಸಾಮಾಗ್ರಿ ಮೊದಲಾದ ಮೂಲಭೂತ ಸೌಕರ್ಯಗಳನ್ನು ಒದಗಿಸತಕ್ಕದ್ದು;

(e) ಕಲಂ ೪ ರಲ್ಲಿ ಸ್ಪಷ್ಟಪಡಿಸಿದಂತಹ ವಿಶೇಷ ತರಬೇತಿಯ ಸೌಲಭ್ಯವನ್ನು ಒದಗಿಸತಕ್ಕದ್ದು;

(f) ಪ್ರತಿ ಮಗುವೂ ಶಾಲೆಗೆ ದಾಖಲಾಗುವಂತೆ, ಹಾಜರಿ ಹೊಂದಿರುವಂತೆ ಹಾಗೂ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವಂತೆ ನೋಡಿಕೊಳ್ಳತಕ್ಕದ್ದು ಹಾಗೂ ಖಾತರಿಪಡಿಸಿಕೊಳ್ಳತಕ್ಕದ್ದು;

(g) ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಮಾನಕಗಳು ಹಾಗೂ ಗುಣಮಟ್ಟಗಳಿಗೆ ಸರಿಹೊಂದುವಂತಹ ಉತ್ತಮ ಗುಣಮಟ್ಟದ ಪ್ರಾಥಮಿಕ ಶಿಕ್ಷಣ ದೊರಕುವಂತೆ ನೋಡಿಕೊಳ್ಳತಕ್ಕದ್ದು;

(h) ಸಕಾಲಕ್ಕೆ ಪಠ್ಯವಿಷಯಗಳನ್ನು ಮತ್ತು ಪ್ರಾಥಮಿಕ ಶಿಕ್ಷಣದ ಪಠ್ಯಕ್ರಮವನ್ನು ಸೂಚಿಸುವಿಕೆಯನ್ನು ಖಾತರಿಪಡಿಸಿಕೊಳ್ಳತಕ್ಕದ್ದು; ಮತ್ತು

(i) ಶಿಕ್ಷಕರಿಗೆ ತರಬೇತಿ ಸೌಲಭ್ಯಗಳನ್ನು ಒದಗಿಸತಕ್ಕದ್ದು.

'ಕಲಂ – ೯ : ಸ್ಥಳೀಯ ಪ್ರಾಧಿಕಾರದ ಕರ್ತವ್ಯಗಳು

ಪ್ರತಿಯೊಂದು ಸ್ಥಳೀಯ ಪ್ರಾಧಿಕಾರವೂ – (a) ಪ್ರತಿಯೊಂದು ಮಗುವಿಗೂ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸತಕ್ಕದ್ದು; ಆದರೆ, ಮಗುವೊಂದನ್ನು ಅವನ/ಅವಳ ಪೋಷಕರು ಅಥವಾ ಪಾಲಕರು, ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಸ್ಥಾಪಿಸಲ್ಪಟ್ಟ, ಅವುಗಳ ಸ್ವಾಮ್ಯತ್ವಕ್ಕೊಳಪಟ್ಟ, ಅಥವಾ ಅವುಗಳಿಂದ ನಿಯಂತ್ರಿಸಲ್ಪಡುವ ಅಥವಾ ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಗಣನೀಯ ಪ್ರಮಾಣದ ಆರ್ಥಿಕ ನೆರವನ್ನು ಪಡೆದಿರುವಶಾಲೆಗಳಲ್ಲದೆ, ಇತರೆ ಶಾಲೆಗೆ ಸೇರಿಸಿದ್ದಲ್ಲಿ, ಅಂತಹ ಮಗು ಅಥವಾ ಅವನ/ಳ ಪೋಷಕರು ಅಥವಾ ಪಾಲಕರು, ತಮ್ಮ ಮಗುವಿನ ಪ್ರಾಥಮಿಕ ಶಿಕ್ಷಣಕ್ಕಾಗಿ ತಗುಲಿದ ಖರ್ಚುವೆಚ್ಚಗಳನ್ನು ತುಂಬಿಕೊಡುವಂತೆ ವಾದಿಸಲು ಅರ್ಹರಾಗಿರುವುದಿಲ್ಲ;

(b) ಕಲಂ ೬ ರಲ್ಲಿ ನಿರ್ದಿಷ್ಟಪಡಿಸಿದಂತೆ ಆಸುಪಾಸಿನ ಶಾಲೆಗಳ ಸೌಲಭ್ಯ ದೊರಕುವುದನ್ನು ಖಾತರಿಪಡಿಸತಕ್ಕದ್ದು;

(c) ದುರ್ಬಲ ವರ್ಗ ಹಾಗೂ ಪ್ರತಿಕೂಲ ಗುಂಪುಗಳಿಗೆ ಸೇರಿರುವ ಮಕ್ಕಳು ಯಾವುದೇ ಕಾರಣಗಳಿಂದಾಗಿ ತಾರತಮ್ಯಗಳಿಗೆ ಒಳಗಾಗದಂತೆ ಮತ್ತು ಪ್ರಾಥಮಿಕ ಶಿಕ್ಷಣವನ್ನು ಪಡೆಯುವುದರಿಂದ ಅಥವಾ ಪೂರ್ತಿಗೊಳಿಸುವುದರಿಂದ ವಂಚಿತರಾಗದಂತೆ ಖಾತರಿಪಡಿಸಿಕೊಳ್ಳತಕ್ಕದ್ದು;

(d) ಈ ಕಾಯಿದೆಯಡಿಯಲ್ಲಿ ವಿಧಿಸಬಹುದಾದ ರೀತಿಯಲ್ಲಿ, ತಮ್ಮ ಅಧಿಕಾರವ್ಯಾಪ್ತಿಯೊಳಗೆ ವಾಸಿಸುತ್ತಿರುವಂತಹ ಹದಿನಾಲ್ಕು ವರ್ಷ ವಯೋಮಿತಿಯೊಳಗಿನ ಮಕ್ಕಳ ದಾಖಲೆಗಳನ್ನು ಸಂರಕ್ಷಿಸಿಡಬೇಕು;

(e) ತನ್ನ ಅಧಿಕಾರವ್ಯಾಪ್ತಿಯೊಳಗೆ ವಾಸಿಸುತ್ತಿರುವಂತಹ ಪ್ರತಿಯೊಂದು ಮಗುವೂ ಶಾಲೆಗೆ ದಾಖಲಾಗುವಂತೆ, ಹಾಜರಿ ಹೊಂದಿರುವಂತೆ ಹಾಗೂ ಪ್ರಾಥಮಿಕ ಶಿಕ್ಷಣವನ್ನು ಪೂರ್ತಿಗೊಳಿಸುವಂತೆ ನೋಡಿಕೊಳ್ಳಬೇಕು ಮತ್ತು ಖಾತರಿಪಡಿಸಿಕೊಳ್ಳಬೇಕು;

(f) ಶಾಲಾ ಕಟ್ಟಡ, ಶಿಕ್ಷಕ ವೃಂದ, ಹಾಗೂ ಕಲಿಕಾ ಸಾಮಾಗ್ರಿ ಮೊದಲಾದ ಮೂಲಭೂತ ಸೌಕರ್ಯಗಳನ್ನು ಒದಗಿಸತಕ್ಕದ್ದು;

(g) ಕಲಂ ೪ ರಲ್ಲಿ ಸ್ಪಷ್ಟಪಡಿಸಿದಂತಹ ವಿಶೇಷ ತರಬೇತಿಯ ಸೌಲಭ್ಯವನ್ನು ಒದಗಿಸತಕ್ಕದ್ದು;

(h) ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಮಾನಕಗಳು ಹಾಗೂ ಗುಣಮಟ್ಟಗಳಿಗೆ ಸರಿಹೊಂದುವಂತಹ ಉತ್ತಮ ಗುಣಮಟ್ಟದ ಪ್ರಾಥಮಿಕ ಶಿಕ್ಷಣ ದೊರಕುವಂತೆ ನೋಡಿಕೊಳ್ಳತಕ್ಕದ್ದು;

(i) ಸಕಾಲಕ್ಕೆ ಪಠ್ಯವಿಷಯಗಳನ್ನು ಮತ್ತು ಪ್ರಾಥಮಿಕ ಶಿಕ್ಷಣದ ಪಠ್ಯಕ್ರಮವನ್ನು ಸೂಚಿಸುವಿಕೆಯನ್ನು ಖಾತರಿಪಡಿಸಿಕೊಳ್ಳತಕ್ಕದ್ದು;

(j) ಶಿಕ್ಷಕರಿಗೆ ತರಬೇತಿ ಸೌಲಭ್ಯಗಳನ್ನು ಒದಗಿಸತಕ್ಕದ್ದು;

(k) ವಲಸಿಗ ಕುಟುಂಬಗಳ ಮಕ್ಕಳು ಶಾಲೆಗೆ ದಾಖಲಾಗುವಂತೆ ನೋಡಿಕೊಳ್ಳಬೇಕು;

(l) ತನ್ನ ಅಧಿಕಾರವ್ಯಾಪ್ತಿಯೊಳಗೆ, ಶಾಲೆಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿರುವುದನ್ನು ಖಾತ್ರಿಪಡಿಸಿಕೊಳ್ಳಬೇಕು; ಮತ್ತು

(m) ಶೈಕ್ಷಣಿಕ ಪಂಚಾಂಗವನ್ನು ನಿರ್ಧರಿಸಬೇಕು.

ಕಲಂ – ೧೦ : ಪೋಷಕರ ಮತ್ತು ಪಾಲಕರ ಕರ್ತವ್ಯ

ತಮ್ಮ ಮಕ್ಕಳನ್ನು ಅಥವಾ ತಮ್ಮ ಸಂರಕ್ಷಣೆಯಲ್ಲಿರುವ ಪ್ರತಿಯೊಂದು ಮಗುವನ್ನೂ ಪ್ರಾಥಮಿಕ ಶಿಕ್ಷಣಕ್ಕಾಗಿ ಆಸುಪಾಸಿನ ಶಾಲೆಗೆ ಸೇರಿಸುವುದು ಅಥವಾ ಸೇರಿಸುವಂತೆ ನೋಡಿಕೊಳ್ಳುವುದು ಪ್ರತಿಯೊಬ್ಬ ಪೋಷಕ ಅಥವಾ ಪಾಲಕರ ಆದ್ಯ ಕರ್ತವ್ಯವಾಗಿದೆ.

ಕಲಂ – ೧೧: ಸಮುಚಿತ ಸರ್ಕಾರ – ಶಾಲಾ–ಪೂರ್ವ ಶಿಕ್ಷಣ ಒದಗಿಸುವಿಕೆ

ಮೂರು ವರ್ಷವನ್ನು ದಾಟಿದ ಎಲ್ಲ ಮಕ್ಕಳನ್ನು ಮುಂದೆ ಪ್ರಾಥಮಿಕ ಶಿಕ್ಷಣಕ್ಕೆ ಸೇರಿಸಲು ಅಣಿಗೊಳಿಸುವ ಹಾಗೂಮಕ್ಕಳಿಗೆ ಆರಂಭಿಕ ಬಾಲ್ಯ ಪೋಷಣೆಯನ್ನು ಮತ್ತು ಆರು ವರ್ಷ ಪೂರ್ತಿಯಾಗುವತನಕ ಶಿಕ್ಷಣವನ್ನು ಒದಗಿಸುವ ನಿಟ್ಟಿನಲ್ಲಿ ಸಮುಚಿತ ಸರ್ಕಾರವು ಉಚಿತವಾಗಿ ಶಾಲಾ–ಪೂರ್ವ ಶಿಕ್ಷಣವನ್ನು ಒದಗಿಸುವ ಸೌಲಭ್ಯವನ್ನು ಮಾಡಿಕೊಡಬಹುದು.

ಅಧ್ಯಾಯ – ೪

ಶಾಲೆಗಳ ಮತ್ತು ಶಿಕ್ಷಕರ ಜವಾಬ್ದಾರಿಗಳು

ಕಲಂ – ೧೨ : ಉಚಿತ ಮತ್ತು ಕಡ್ಡಾಯ ಶಿಕ್ಷಣ ಒದಗಿಸುವಲ್ಲಿ ಶಾಲೆಗಳ ಜವಾಬ್ದಾರಿಯ ವ್ಯಾಪ್ತಿ

(೧) ಈ ಕಾಯಿದೆಯ ಉದ್ದೇಶಕ್ಕಾಗಿ,

(a) ಕಲಂ ೨, ಖಂಡ (n) ರ ಉಪಖಂಡ (i) ರಲ್ಲಿ ನಿರ್ದಿಷ್ಟವಾಗಿ ನಮೂದಿಸಲ್ಪಟ್ಟಂತಹ ಶಾಲೆಗಳು, ತಮ್ಮಲ್ಲಿ ಪ್ರವೇಶ ಪಡೆದಿರುವ ಎಲ್ಲಾ ಮಕ್ಕಳಿಗೂ ಉಚಿತ ಹಾಗೂ ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣವನ್ನು ಒದಗಿಸತಕ್ಕದ್ದು;

(b) ಕಲಂ ೨, ಖಂಡ (n) ರ ಉಪಖಂಡ (ii) ರಲ್ಲಿ ನಿರ್ದಿಷ್ಟವಾಗಿ ನಮೂದಿಸಲ್ಪಟ್ಟಂತಹ ಶಾಲೆಗಳು, ತಮ್ಮ ವಾರ್ಷಿಕ ಆವರ್ತಕ ಖರ್ಚುವೆಚ್ಚಗಳಿಗೆ ಅನ್ವಯವಾಗುವಂತೆ ತಾವು ಪಡೆದುಕೊಳ್ಳುವ ವಾರ್ಷಿಕ ಆವರ್ತಕ ಸಹಾಯಧನದ ಪ್ರಮಾಣಕ್ಕನುಗುಣವಾಗಿ, ತಮ್ಮಲ್ಲಿ ಪ್ರವೇಶ ಪಡೆಯುವ ಮಕ್ಕಳಿಗೆ, ಒಟ್ಟು ಮಕ್ಕಳಲ್ಲಿ ಶೇ. ೨೫ಕ್ಕೆ ಕಡಿಮೆಯಿಲ್ಲದಂತೆ, ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ನೀಡತಕ್ಕದ್ದು;

(c) ಕಲಂ ೨, ಖಂಡ (n) ರ ಉಪಖಂಡ (iii) ಮತ್ತು (iv) ರಲ್ಲಿ ನಿರ್ದಿಷ್ಟಪಡಿಸಿದಂತಹ ಶಾಲೆಗಳು ಒಂದನೇ ತರಗತಿಗೆ, ಕೊನೇ ಪಕ್ಷ ಆ ತರಗತಿಯ ಒಟ್ಟು ಮಕ್ಕಳ ಸಂಖ್ಯೆಯ ಶೇಕಡಾ ೨೫ ರಷ್ಟು ಮಕ್ಕಳನ್ನು, ಆಸುಪಾಸಿನಲ್ಲಿರುವ ದುರ್ಬಲ ಮತ್ತು ಪ್ರತಿಕೂಲ ಸ್ಥಿತಿಯ ಗುಂಪಿನಿಂದ ಸೇರಿಸಿಕೊಳ್ಳತಕ್ಕದ್ದು ಹಾಗೂ ಅವರು ಪ್ರಾಥಮಿಕ ಶಿಕ್ಷಣವನ್ನು ಪೂರ್ತಿಗೊಳಿಸುವತನಕ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸತಕ್ಕದ್ದು. ಆದರೆ, ಕಲಂ ೨, ಖಂಡ (n) ನಲ್ಲಿ ನಮೂದಿಸಿರುವಂತಹ ಶಾಲೆಗಳು ಪೂರ್ವ ಶಿಕ್ಷಣ ಸೌಲಭ್ಯವನ್ನು ನೀಡುತ್ತಿದ್ದಲ್ಲಿ, ಈ ಕಲಂನ ಖಂಡ (a) ಯಿಂದ (c) ಯವರೆಗಿನ ಉಪಬಂಧಗಳು ಅಂತಹ ಪೂರ್ವ– ಶಾಲಾ ಶಿಕ್ಷಣಕ್ಕೆ ಪ್ರವೇಶ ಪಡೆಯುವ ಸಂದರ್ಭಕ್ಕೆ ಅನ್ವಯಿಸುತ್ತವೆ.

(೨) ಕಲಂ ೨, ಖಂಡ (n) ರ ಉಪಖಂಡ (iv) ರಲ್ಲಿ ನಿರ್ದಿಷ್ಟಪಡಿಸಿರುವಂತೆ, ಯಾವುದಾದರೂ ಶಾಲೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸುತ್ತಿದ್ದಲ್ಲಿ, ಉಪಕಲಂ (೧) ರ ಖಂಡ (c) ಯಂತೆ ಪ್ರತಿ ಮಗುವಿಗೆ ರಾಜ್ಯ ಸರ್ಕಾರವು ಶಿಕ್ಷಣ ಒದಗಿಸಲು ಎಷ್ಟು ಖರ್ಚು ಮಾಡುತ್ತದೋ ಅಥವಾ ಮಗುವಿಗೆ ಆ ಶಾಲೆ ಎಷ್ಟು ಶುಲ್ಕವನ್ನು ವಿಧಿಸುವುದೋ ಅವುಗಳಲ್ಲಿ ಯಾವುದು ಕಡಿಮೆ ಇರುವುದೋ ಅಷ್ಟು ಮೊತ್ತವನ್ನು ಆಯಾ ಶಾಲೆಗೆ ನಿರ್ದಿಷ್ಟಪಡಿಸಿದ ವಿಧಿವಿಧಾನದಂತೆ ಮರುಪಾವತಿ ಮಾಡಲಾಗುವುದು. ಆದರೆ, ಈ ರೀತಿ ಮರುಪಾವತಿ ಮಾಡುವ ಹಣ ಕಲಂ ೨, ಖಂಡ (n) ರ ಉಪಖಂಡ (i) ರಲ್ಲಿ ನಿರ್ದಿಷ್ಟಪಡಿಸಿರುವಂತೆ ಪ್ರತಿ ಮಗುವಿಗೆ ಆಗುವ ಖರ್ಚನ್ನು ಮೀರಬಾರದು.

ಆದರೆ, ಯಾವುದಾದರೂ ಶಾಲೆಯು ಉಚಿತ ಶಿಕ್ಷಣವನ್ನು ನಿರ್ದಿಷ್ಟ ಸಂಖ್ಯೆಯ ಮಕ್ಕಳಿಗೆ ಕೊಡಲು ಈಗಾಗಲೇ ಬದ್ಧವಾಗಿದ್ದಲ್ಲಿ ಅಂದರೆ, ಸರ್ಕಾರದಿಂದ ಭೂಮಿ, ಕಟ್ಟಡ, ಸಲಕರಣೆಗಳು ಅಥವಾ ಇನ್ನಿತರ ಸೌಕರ್ಯಗಳನ್ನು ಉಚಿತವಾಗಿ ಅಥವಾ ರಿಯಾಯಿತಿ ದರದಲ್ಲಿ ಪಡೆದಿದ್ದಲ್ಲಿ ಅಂತಹ ಶಾಲೆಗಳಿಗೆ ಮಕ್ಕಳ ಶಿಕ್ಷಣದ ಶುಲ್ಕವನ್ನು ಮರುಪಾವತಿ ಮಾಡಲು ಸರ್ಕಾರಕ್ಕೆ ಬಾಧ್ಯತೆ ಇರುವುದಿಲ್ಲ. (೩) ಪ್ರತಿಯೊಂದು ಶಾಲೆಯೂ ಸಂದರ್ಭಕ್ಕನುಸಾರವಾಗಿ ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರವು ಅಪೇಕ್ಷಿಸುವ ಮಾಹಿತಿಯನ್ನು ಒದಗಿಸತಕ್ಕದ್ದು.

ಕಲಂ – ೧೩ : ದಾಖಲಾತಿ ಸಂದರ್ಭದಲ್ಲಿ, ತಲಾಶುಲ್ಕ ಪಡೆಯದಿರುವುದು ಹಾಗೂ ಪರಿಶೋಧನಾ ಪ್ರಕ್ರಿಯೆಗಳನ್ನು ಅನುಸರಿಸದಿರುವುದು

(೧) ಯಾವುದೇ ಶಾಲೆ ಯಾ ವ್ಯಕ್ತಿ, ಮಕ್ಕಳ ದಾಖಲಾತಿ ಸಂದರ್ಭದಲ್ಲಿ ಯಾವುದೇ ರೀತಿಯ ತಲಾಶುಲ್ಕವನ್ನು ಸಂಗ್ರಹಿಸಬಾರದು ಮತ್ತು ಮಗುವನ್ನು ಅಥವಾ ಅವನ/ಳ ಪಾಲಕರು ಯಾ ಪೋಷಕರನ್ನು ಯಾವುದೇ ರೀತಿಯ ಪರಿಶೋಧನಾ ಪ್ರಕ್ರಿಯೆಗಳಿಗೆ ಒಳಪಡಿಸಬಾರದು.

(೨) ಯಾವುದಾದರೂ ಶಾಲೆ ಅಥವಾ ವ್ಯಕ್ತಿ ಈ ಮೇಲೆ ತಿಳಿಸಲಾದ ಉಪಕಲಂ (೧) ರ ಉಪಬಂಧವನ್ನು

ಉಲ್ಲಂಘಿಸಿ –

(a) ತಲಾಶುಲ್ಕವನ್ನು ಪಡೆದಿದ್ದೇ ಆದಲ್ಲಿ, ತೆಗೆದುಕೊಂಡ ಶುಲ್ಕದ ಸುಮಾರು ಹತ್ತು ಪಟ್ಟು ಮೊತ್ತದ

ಹಣವನ್ನು ದಂಡವಾಗಿ ತೆರಬೇಕಾದ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ.

(b) ಮಕ್ಕಳನ್ನು ಪರಿಶೋಧನಾ ಪ್ರಕ್ರಿಯೆಗಳಿಗೆ ಒಳಪಡಿಸಿದ್ದೇ ಆದಲ್ಲಿ, ಮೊದಲ ಬಾರಿಯ ಉಲ್ಲಂಘನೆಗೆ

ರೂಪಾಯಿ ೨೫೦೦೦ ದಷ್ಟು ಹಾಗೂ ಉಲ್ಲಂಘನೆಯನ್ನು ಪುನರಾವರ್ತಿಸಿದಲ್ಲಿ, ಪ್ರತೀ ಬಾರಿಯ ಪುನರಾವರ್ತನೆಗೆ ರೂಪಾಯಿ ೫೦೦೦೦ ದಷ್ಟು ಹಣವನ್ನು ದಂಡವಾಗಿ ತೆರಬೇಕಾದ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ.

ಕಲಂ – ೧೪ : ದಾಖಲಾತಿಗಾಗಿ ವಯಸ್ಸಿನ ರುಜುವಾತು

(೧) ಮಗುವನ್ನು ಪ್ರಾಥಮಿಕ ಶಿಕ್ಷಣಕ್ಕಾಗಿ ಶಾಲೆಗೆ ದಾಖಲಿಸುವ ಸಂದರ್ಭದಲ್ಲಿ ಮಗುವಿನ ವಯಸ್ಸನ್ನು, ಜನನ, ಮರಣ ಮತ್ತು ವಿವಾಹ ನೋಂದಾವಣಾ ಕಾಯಿದೆ ೧೮೮೬ ರ ಉಪಬಂಧಗಳಿಗನುಗುಣವಾಗಿ ಅಥವಾ ಕಾನೂನಿನಲ್ಲಿ ವಿಧಿಸಲಾಗಿರುವ ಇನ್ನಿತರೆ ದಾಖಲೆಗಳ ಆಧಾರದ ಮೇಲೆ ನೀಡಲಾದ ಜನನ ಪ್ರಮಾಣ ಪತ್ರದ ಅಧಾರದ ಮೇಲೆ ನಿರ್ಧರಿಸತಕ್ಕದ್ದು.

(೨) ವಯಸ್ಸಿನ ಪ್ರಮಾಣ ಪತ್ರ ಇಲ್ಲವೆಂಬ ಕಾರಣಕ್ಕಾಗಿ ಯಾವುದೇ ಮಗುವಿಗೆ ಶಾಲಾ ಪ್ರವೇಶವನ್ನು

ನಿರಾಕರಿಸುವಂತಿಲ್ಲ.

ಕಲಂ – ೧೫ : ದಾಖಲಾತಿ ನಿರಾಕರಿಸದಿರುವುದು

ಪ್ರತಿ ಶೈಕ್ಷಣಿಕ ವರ್ಷದ ಆರಂಭದಲ್ಲಿ ಅಥವಾ ವಿಧಿಸಬಹುದಾದ ಮುಂದುವರೆಸಿದ ಸಮಾಯಾವಧಿಯೊಳಗೆ

ಮಗುವನ್ನು ಶಾಲೆಗೆ ಸೇರಿಸತಕ್ಕದ್ದು. ಆದರೆ, ಈ ರೀತಿ ಮುಂದುವರೆಸಿದ ಸಮಯಾವಧಿಯ ಬಳಿಕವೂ ಮಕ್ಕಳು ಪ್ರವೇಶವನ್ನು ಅಪೇಕ್ಷಿಸಿದಲ್ಲಿ ಅವರ ಪ್ರವೇಶವನ್ನು ನಿರಾಕರಿಸುವಂತಿಲ್ಲ. ಆದರೆ, ಈ ರೀತಿ ಮುಂದುವರೆಸಿದ ಸಮಯ ಕೊನೆಗೊಂಡ ಬಳಿಕ ಶಾಲೆಯನ್ನು ಸೇರುವ ಮಕ್ಕಳು, ಸಮುಚಿತ ಸರ್ಕಾರವು ವಿಧಿಸಬಹುದಾದ ರೀತಿಯಲ್ಲಿ ತಮ್ಮ ಅಧ್ಯಯನವನ್ನು ಪೂರೈಸಬೇಕಾಗುತ್ತದೆ.

ಕಲಂ – ೧೬ : ಅನುತ್ತೀರ್ಣಗೊಳಿಸುವುದರ ಹಾಗೂ ಹೊರಗಟ್ಟುವುದರ ನಿಷೇಧ ಶಾಲೆಗೆ ದಾಖಲಾದ ಯಾವುದೇ ಮಗುವನ್ನು ಅವನ/ಳ ಪ್ರಾಥಮಿಕ ಶಿಕ್ಷಣ ಪೂರ್ಣಗೊಳ್ಳುವವರೆಗೆ ಯಾವುದೇ ತರಗತಿಯಲ್ಲಿಯೂ ಅನುತ್ತೀರ್ಣಗೊಳಿಸಿ ಉಳಿಸಿಕೊಳ್ಳಬಾರದು ಅಥವಾ ಶಾಲೆಯಿಂದ ಹೊರಹಾಕಬಾರದು.

ಕಲಂ – ೧೭ : ಮಗುವಿಗೆ ಮಾನಸಿಕ ಕಿರುಕುಳ ಮತ್ತು ದೈಹಿಕ ಶಿಕ್ಷೆ ನೀಡುವುದರ ನಿಷೇಧ

(೧) ಯಾವುದೇ ಮಗುವನ್ನು ದೈಹಿಕ ಶಿಕ್ಷೆ ಅಥವಾ ಮಾನಸಿಕ ಕಿರುಕುಳಕ್ಕೆ ಒಳಪಡಿಸತಕ್ಕದ್ದಲ್ಲ.

(೨) ಮೇಲ್ಕಂಡ ಉಪಕಲಂ (೧) ನ್ನು ಉಲ್ಲಂಘಿಸಿದ ಯಾರೇ ಆಗಲಿ, ಅವರನ್ನು, ಅವರಿಗೆ ಅನ್ವಯವಾಗುವಂತಹ ಸೇವಾ ನಿಯಮಗಳಡಿಯಲ್ಲಿನ ಶಿಸ್ತಿನ ಕ್ರಮಗಳಿಗೊಳಪಡಲು ಬಾಧ್ಯರಾಗಿರುತ್ತಾರೆ.

ಕಲಂ – ೧೮ : ಮನ್ನಣೆ ಪತ್ರವನ್ನು ಪಡೆಯದೆ ಶಾಲೆಗಳನ್ನು ಸ್ಥಾಪಿಸುವಂತಿಲ್ಲ

(೧) ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರಗಳಿಂದ ಸ್ಥಾಪಿಸಲ್ಪಟ್ಟ, ಸ್ವಾಮ್ಯತ್ವಕ್ಕೊಳಪಟ್ಟಿರುವ ಅಥವಾ ನಿಯಂತ್ರಿಸಲ್ಪಡುವ ಶಾಲೆಗಳನ್ನು ಹೊರತುಪಡಿಸಿ, ಇನ್ನಾವುದೇ ಶಾಲೆಯು, ಈ ಕಾಯಿದೆಯು ಜಾರಿಗೆ ಬಂದ ಬಳಿಕ, ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರಗಳಿಂದ ವಿಧಿಸಲ್ಪಟ್ಟ ರೀತಿಯಲ್ಲಿ ಹಾಗೂ ಮಾದರಿಯಲ್ಲಿ ಅರ್ಜಿ ಸಲ್ಲಿಸಿ ಮನ್ನಣೆ ಪತ್ರವನ್ನು ಪಡೆಯದ ಹೊರತು ಸ್ಥಾಪನೆಯಾಗುವಂತಿಲ್ಲ ಅಥವಾ ಕಾರ್ಯ ನಿರ್ವಹಿಸುವಂತಿಲ್ಲ.

(೨) ಉಪ ಕಲಂ (೧) ರಲ್ಲಿ ಸೂಚಿಸಿದಂತಹ ನಿಯೋಜಿತ ಪ್ರಾಧಿಕಾರವು ನಿರ್ದಿಷ್ಟ ಸಮಯದೊಳಗೆ, ನಿರ್ದಿಷ್ಟ ಮಾದರಿಯಲ್ಲಿ ಹಾಗೂ ನಿರ್ದಿಷ್ಟ ರೀತಿಯಲ್ಲಿ ವಿಧಿಸಲ್ಪಟ್ಟ ನಿಯಮಗಳಿಗೊಳಪಟ್ಟಂತೆ ಮನ್ನಣೆ ಪತ್ರವನ್ನು ನೀಡತಕ್ಕದ್ದು. ಆದರೆ, ಕಲಂ ೧೯ ರಲ್ಲಿ ಸ್ಪಷ್ಟಪಡಿಸಿದಂತಹ ಮಾನದಂಡ ಮತ್ತು ಮಾದರಿಗಳನ್ನು ಅನುಸರಿಸದ ಹೊರತು ಯಾವುದೇ ಶಾಲೆಗೆ ಮನ್ನಣೆ ಕೊಡತಕ್ಕದ್ದಲ್ಲ.

(೩) ಮನ್ನಣೆ ಪಡೆಯಲು ಸೂಚಿಸಿರುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ, ಈ ಕಾಯಿದೆಯಲ್ಲಿ ವಿಧಿಸಲಾದಂತಹ ನಿಯೋಜಿತ ಪ್ರಾಧಿಕಾರವು ಲಿಖಿತ ಆದೇಶವನ್ನು ಹೊರಡಿಸುವ ಮೂಲಕ ಅಂತಹ ಶಾಲೆಗಳಿಗೆ ನೀಡಲಾದ ಮನ್ನಣೆಯನ್ನು ಹಿಂತೆಗೆದುಕೊಳ್ಳತಕ್ಕದ್ದು. ಹೀಗಿದ್ದ ಸಂದರ್ಭದಲ್ಲಿ, ಅಂತಹ ಆದೇಶವು, ಮನ್ನಣೆಯನ್ನು ಹಿಂತೆಗೆದುಕೊಂಡಂತಹ ಶಾಲೆಯಲ್ಲಿ ಅಧ್ಯಯನ ಮಾಡುತ್ತಿರುವ ಮಕ್ಕಳನ್ನು ಯಾವ ಆಸುಪಾಸಿನ ಶಾಲೆಗಳಿಗೆ ಸೇರಿಸತಕ್ಕದ್ದು ಎಂಬುದರ ಕುರಿತಾಗಿ ಸೂಕ್ತ ನಿರ್ದೇಶನಗಳನ್ನು ಒಳಗೊಂಡಿರಬೇಕು. ಆದರೆ, ಅಂತಹ ಶಾಲೆಗಳಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಈ ಕಾಯಿದೆಯಲ್ಲಿ ವಿಧಿಸಿದ ಪ್ರಕಾರ ಯಥೋಚಿತ ಅವಕಾಶವನ್ನು ನೀಡದ ಹೊರತು ಮನ್ನಣೆಯನ್ನು ಮೇಲೆ ತಿಳಿಸಲಾದಂತೆ ಹಿಂತೆಗೆದುಕೊಳ್ಳುವಂತಿಲ್ಲ.

(೪) ಉಪಕಲಂ (೩) ರಡಿಯಲ್ಲಿ ತಿಳಿಸಿದಂತೆ, ಶಾಲೆಗೆ ನೀಡಿರುವ ಮನ್ನಣೆಯನ್ನು ಹಿಂತೆಗೆದುಕೊಂಡ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಅಂತಹ ಯಾವುದೇ ಶಾಲೆಯೂ ಕಾರ್ಯ ನಿರ್ವಹಿಸುವಂತಿಲ್ಲ.

(೫) ಯಾವುದೇ ವ್ಯಕ್ತಿ ಮೇಲೆ ತಿಳಿಸಿದಂತೆ ಮನ್ನಣೆ ಪತ್ರವನ್ನು ಪಡೆಯದೇ ಯಾವುದಾದರೂ ಶಾಲೆಯನ್ನು ಸ್ಥಾಪಿಸಿದಲ್ಲಿ ಅಥವಾ ನಡೆಸಿದಲ್ಲಿ ಅಥವಾ ಶಾಲೆಗೆ ನೀಡಲಾದ ಮನ್ನಣೆಯನ್ನು ಹಿಂತೆಗೆದುಕೊಂಡ ಬಳಿಕವೂ ಶಾಲೆಯ ಆಡಳಿತವನ್ನು ಮುಂದುವರಿಸಿದಲ್ಲಿ, ಅಂತಹ ವ್ಯಕ್ತಿಯು ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡವನ್ನು ತೆರಬೇಕಾಗುತ್ತದೆ ಮತ್ತು ಮೇಲಿನ ನಿಯಮಗಳ ಉಲ್ಲಂಘನೆಯನ್ನು ಪುನರಾವರ್ತಿಸಿದಲ್ಲಿ, ಉಲ್ಲಂಘನೆಯನ್ನು ಮುಂದುವರಿಸಲಾದ ಪ್ರತೀ ದಿನವೊಂದಕ್ಕೆ ರೂಪಾಯಿ ೧೦೦೦೦ ದಂತೆ ದಂಡ ತೆರಬೇಕಾದ ಶಿಕ್ಷೆಗೆ ಗುರಿಯಾಗುತ್ತಾನೆ.

ಕಲಂ – ೧೯ : ಶಾಲೆಗಳಿಗೆ ಸೂಚಿಸಲಾದ ಗುಣಮಟ್ಟಗಳು ಮತ್ತು ಮಾನದಂಡಗಳು

(೧) ಯಾವುದೇ ಶಾಲೆಯು ಈ ಕಾಯಿದೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಗುಣಮಟ್ಟಗಳು ಮತ್ತು ಮಾನದಂಡಗಳನ್ನು ಪೂರೈಸದ ಹೊರತು ಕಲಂ೧೮ ರ ಅಡಿಯಲ್ಲಿ ಅಂತಹ ಯಾವುದೇ ಶಾಲೆಯನ್ನು ಸ್ಥಾಪಿಸದಿರುವುದು ಅಥವಾ ಮನ್ನಣೆ ನೀಡದಿರತಕ್ಕದ್ದು.

(೨) ಈ ಕಾಯಿದೆಯು ಅನುಷ್ಠಾನಕ್ಕೆ ಬರುವ ಮೊದಲೇ ಸ್ಥಾಪಿಸಲ್ಪಟ್ಟ ಶಾಲೆಯು ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದಂತಹ ಗುಣಮಟ್ಟಗಳು ಹಾಗೂ ಮಾನಕಗಳನ್ನು ಪೂರೈಸದೇ ಇದ್ದಲ್ಲಿ, ಅಂತಹ ಶಾಲೆಯು ತನ್ನ ಸ್ವಂತ ಖರ್ಚಿನಲ್ಲಿ, ವಿಧಿಸಲಾದಂತಹ ಗುಣಮಟ್ಟ ಮತ್ತು ಮಾನಕಗಳನ್ನು, ಕಾಯಿದೆಯು ಪ್ರಾರಂಭವಾದ ದಿನಾಂಕದಿಂದ ೩ ವರ್ಷಗಳೊಳಗಾಗಿ ಪೂರೈಸತಕ್ಕದ್ದು.

(೩) ಈ ಮೇಲಿನ ಉಪಕಲಂ ೨ ರಲ್ಲಿ ನಿರ್ದಿಷ್ಟಪಡಿಸಲಾದಂತಹ ಕಾಲಾವಧಿಯೊಳಗೆ ಯಾವ ಶಾಲೆಯು ವಿಧಿಸಲಾದ ಗುಣಮಟ್ಟಗಳು ಹಾಗೂ ಮಾನಕಗಳನ್ನು ಪೂರೈಸುವಲ್ಲಿ ವಿಫಲವಾಗುತ್ತದೆಯೋ, ಅಂತಹ ಸಂದರ್ಭದಲ್ಲಿ, ಕಲಂ ೧೮ ರ ಉಪಕಲಂ (೧) ರಲ್ಲಿ ನಿಯಮಿಸಲ್ಪಟ್ಟಂತಹ ಪ್ರಾಧಿಕಾರವು ಅದೇ ಕಲಂನ (೩) ನೇ ಉಪಕಲಂನ ಅಡಿಯಲ್ಲಿ ನಮೂದಿಸಿದಂತಹ ರೀತಿಯಲ್ಲಿ ಆ ಶಾಲೆಗೆ ನೀಡಲಾದ ಮನ್ನಣೆಯನ್ನು ಹಿಂತೆಗೆದುಕೊಳ್ಳತಕ್ಕದ್ದು.

(೪) ಉಪಕಲಂ (೩) ರಲ್ಲಿ ತಿಳಿಸಿದಂತೆ ಮನ್ನಣೆಯನ್ನು ಹಿಂತೆಗೆದುಕೊಳ್ಳಲಾದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಅಂತಹ ಶಾಲೆಗಳು ಕಾರ್ಯ ನಿರ್ವಹಿಸುವಂತಿಲ್ಲ.

(೫) ಮನ್ನಣೆಯನ್ನು ಹಿಂತೆಗೆದುಕೊಂಡ ಬಳಿಕವೂ ಯಾವುದೇ ವ್ಯಕ್ತಿ ಶಾಲೆಯನ್ನು ನಡೆಸಿದಲ್ಲಿ, ಆತ ಒಂದು ಲಕ್ಷ ರೂಪಾಯಿಗಳವರೆಗೂ ವಿಸ್ತರಿಸಬಹುದಾದ ದಂಡ ತೆರುವ ಶಿಕ್ಷೆಗೆ ಗುರಿಯಾಗುತ್ತಾನೆ ಮತ್ತು ಪುನರಾವರ್ತಿತ ಉಲ್ಲಂಘನೆಗೆ, ಉಲ್ಲಂಘನೆಯನ್ನು ಮುಂದುವರೆಸಲಾದ ಪ್ರತೀ ದಿನವೊಂದಕ್ಕೆ ರೂಪಾಯಿ ೧೦೦೦೦ ದಂತೆ ದಂಡ ತೆರಬೇಕಾಗುತ್ತದೆ.

ಕಲಂ – **೨೦** : ಅನುಸೂಚಿಯನ್ನು ತಿದ್ದುಪಡಿ ಮಾಡಬಹುದಾದ ಅಧಿಕಾರ ಕೇಂದ್ರಸರ್ಕಾರವು ಅಧಿಸೂಚನೆಯ ಮೂಲಕ ಅನುಸೂಚಿಗೆ ಯಾವುದಾದರೂ ಹೊಸ ಗುಣಮಟ್ಟಗಳನ್ನು ಮತ್ತು ಮಾನಕಗಳನ್ನು ಸೇರ್ಪಡೆ ಮಾಡಿ, ಅಥವಾ ಅನುಸೂಚಿಯಲ್ಲಿ ಮೊದಲೇ ಇದ್ದಂತಹ ಗುಣಮಟ್ಟಗಳು ಯಾ ಮಾನಕಗಳನ್ನು ತೆಗೆದುಹಾಕಿ ತಿದ್ದುಪಡಿ ಮಾಡಬಹುದು.

ಕಲಂ – **೨೧** : ಶಾಲಾ ನಿರ್ವಹಣಾ ಸಮಿತಿ

(೧) ಕಲಂ ೨, ಖಂಡ (n) ರ ಉಪಖಂಡ (iv) ರಲ್ಲಿ ನಿರ್ದಿಷ್ಟಪಡಿಸಿರುವಂತಹ ಶಾಲೆಗಳನ್ನು ಹೊರತುಪಡಿಸಿ, ಇತರೆ ಶಾಲೆ ಒಂದು ಶಾಲಾ ನಿರ್ವಹಣಾ ಸಮಿತಿಯನ್ನು ರಚಿಸತಕ್ಕದ್ದು ಹಾಗೂ ಈ ಸಮಿತಿ, ಸ್ಥಳೀಯ ಪ್ರಾಧಿಕಾರದ ಚುನಾಯಿತ ಪ್ರತಿನಿಧಿಗಳು, ಆ ಶಾಲೆಗೆ ದಾಖಲಾಗಿರುವ ಮಕ್ಕಳ ಪಾಲಕರ ಅಥವಾ ಪೋಷಕರು ಮತ್ತು ಶಿಕ್ಷಕರನ್ನು ಒಳಗೊಂಡಿರತಕ್ಕದ್ದು: ಅಂತಹ ಸಮಿತಿಯ ಒಟ್ಟು ಸದಸ್ಯರಲ್ಲಿ ಕನಿಷ್ಠ ನಾಲ್ಕನೇ ಮೂರು ಭಾಗದಷ್ಟು ಪಾಲಕರು ಯಾ ಪೋಷಕರನ್ನು ಸದಸ್ಯರನ್ನಾಗಿ ಒಳಗೊಂಡಿರತಕ್ಕದ್ದು: ಮತ್ತು, ಪ್ರತಿಕೂಲ ಗುಂಪು ಹಾಗೂ ದುರ್ಬಲ ವರ್ಗಕ್ಕೆ ಸೇರಿದಂತಹ ಮಕ್ಕಳ ಪಾಲಕರು ಅಥವಾ ಪೋಷಕರಿಗೆ ಪ್ರಮಾಣಾನುಸಾರವಾದ ಪ್ರಾತಿನಿಧ್ಯವನ್ನು ನೀಡತಕ್ಕದ್ದು: ಹಾಗೆಯೇ, ಅಂತಹ ಸಮಿತಿಯ ಒಟ್ಟು ಸದಸ್ಯರ ಶೇಕಡಾ ೫೦ ರಷ್ಟು ಮಹಿಳಾ ಸದಸ್ಯರಿರಬೇಕು.

(೨) ಶಾಲಾ ನಿರ್ವಹಣಾ ಸಮಿತಿಯು ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸತಕ್ಕದ್ದು. ಅವುಗಳೆಂದರೆ

(a) ಶಾಲೆಯ ಕೆಲಸಕಾರ್ಯಗಳ ಮೇಲುಸ್ತುವಾರಿಕೆ;

(b) ಶಾಲಾಭಿವೃದ್ಧಿ ಯೋಜನೆಗಳನ್ನು ತಯಾರಿಸುವುದು ಮತ್ತು ಶಿಫಾರಸು ಮಾಡುವುದು;

(c) ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ಇತರ ಯಾವುದೇ ಮೂಲದಿಂದ ಪಡೆದಂತಹ ದೇಣಿಗೆಯ ಸದ್ವಿನಿಯೋಗದ ಮೇಲ್ವಿಚಾರಣೆ ನೋಡಿಕೊಳ್ಳುವುದು; ಮತ್ತು

(d) ಈ ಕಾಯಿದೆಯಡಿ ವಿಧಿಸಬಹುದಾದ ಇನ್ನಿತರೆ ಕೆಲಸಗಳ ನಿರ್ವಹಣೆ.

ಕಲಂ – ೨೨ : ಶಾಲಾಭಿವೃದ್ಧಿ ಯೋಜನೆ

(೧) ಕಲಂ ೨೧ ರ ಉಪಕಲಂ (೧) ರಡಿಯಲ್ಲಿ ರಚಿತವಾದ ಪ್ರತಿಯೊಂದು ಶಾಲಾ ನಿರ್ವಹಣಾ ಸಮಿತಿಯೂ ವಿಧಿಸಬಹುದಾದ ರೀತಿಯಲ್ಲಿ ಶಾಲಾಭಿವೃದ್ಧಿ ಯೋಜನೆಯನ್ನು ತಯಾರಿಸತಕ್ಕದ್ದು.
(೨) ಉಪಕಲಂ (೧) ರಲ್ಲಿ ಸೂಚಿಸಿದಂತೆ ತಯಾರಿಸಲಾದ ಶಾಲಾಭಿವೃದ್ಧಿ ಯೋಜನೆಯು ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರಗಳು ಸಂದರ್ಭಾನುಸಾರವಾಗಿ ಕೊಡತಕ್ಕಂತಹ ದೇಣಿಗೆ ಹಾಗೂ ಯೋಜನೆಗಳಿಗೆ ಆಧಾರವಾಗಿರುತ್ತದೆ.

ಕಲಂ – ೨೩ : ಶಿಕ್ಷಕರ ನೇಮಕಾತಿಗೆ ಇರಬೇಕಾದ ಅರ್ಹತೆ ಹಾಗೂ ಸೇವಾ ನಿಯಮಗಳು ಮತ್ತು ಷರತ್ತುಗಳು

(೧) ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಅಧಿಕಾರ ನೀಡಿದಂತಹ ಶಿಕ್ಷಣ ಪ್ರಾಧಿಕಾರವು ನಿರ್ಣಯಿಸಿದ, ಕನಿಷ್ಠ ಅರ್ಹತೆಯನ್ನು ಹೊಂದಿರುವ ಯಾವುದೇ ವ್ಯಕ್ತಿಯು ಶಿಕ್ಷಕನಾಗಿ/ಳಾಗಿ ನೇಮಕಾತಿ ಹೊಂದಲು ಅರ್ಹನಾಗಿರು ತ್ತಾನೆ/ಳೆ.

(೨) ಯಾವುದಾದರೂ ರಾಜ್ಯದಲ್ಲಿ, ಶಿಕ್ಷಕರಿಗೆ ಶಿಕ್ಷಣ ನೀಡಲು ಯಾವುದೇ ರೀತಿಯ ಪಠ್ಯಕ್ರಮ ಅಥವಾ ತರಬೇತಿ ನೀಡುವ ಸಂಸ್ಥೆಗಳು ಬೇಕಾದಷ್ಟು ಸಂಖ್ಯೆಯಲ್ಲಿ ಇರದಿದ್ದ ಪಕ್ಷದಲ್ಲಿ ಅಥವಾ ಉಪಕಲಂ (೧) ರಲ್ಲಿ ಸೂಚಿಸಿರುವಂತೆ ಕನಿಷ್ಠ ಅರ್ಹತೆಯನ್ನು ಹೊಂದಿರುವ ಶಿಕ್ಷಕರು ಬೇಕಾದಷ್ಟು ಸಂಖ್ಯೆಯಲ್ಲಿ ಇರದಿದ್ದ ಪಕ್ಷದಲ್ಲಿ, ಕೇಂದ್ರ ಸರ್ಕಾರವು ಅವಶ್ಯ ಎಂದು ಭಾವಿಸಿದರೆ, ಅಧಿಸೂಚನೆಯಲ್ಲಿ ಸ್ಪಷ್ಟಪಡಿಸುವ ಮೂಲಕ, ಶಿಕ್ಷಕರ ನೇಮಕಾತಿಗೆ ಬೇಕಾದ ಕನಿಷ್ಠ ಅರ್ಹತಾ ಷರತ್ತುಗಳನ್ನು ಐದು ವರ್ಷಗಳಿಗೆ ಮೀರದಂತಹ ಕಾಲಾವಧಿಯವರೆಗೆ ಸಡಿಲಿಸಬಹುದು. ಆದರೆ, ಈ ಕಾಯಿದೆಯ ಪ್ರಾರಂಭಿಕ ಹಂತದಲ್ಲಿ, ಉಪಕಲಂ (೧) ರಲ್ಲಿ ತಿಳಿಸಿದಂತೆ, ಯಾವ ಶಿಕ್ಷಕರು ನೇಮಕಾತಿಗೊಳ್ಳಲು ಬೇಕಾದ ಕನಿಷ್ಠ ಅರ್ಹತೆಗಳನ್ನು ಹೊಂದಿರುವುದಿಲ್ಲವೋ, ಅವರು ಐದು ವರ್ಷಗಳೊಳಗಾಗಿ ಅಂತಹ ಕನಿಷ್ಠ ಅರ್ಹತೆಗಳನ್ನು ಗಳಿಸತಕ್ಕದ್ದು.

(೩) ಶಿಕ್ಷಕರಿಗೆ ನೀಡಲಾಗುವ ವೇತನ ಮತ್ತು ಇತರೆ ಭತ್ಯೆಗಳು ಹಾಗೂ ಶಿಕ್ಷಕರ ಸೇವಾ ನಿಯಮಗಳು ಮತ್ತು ಷರತ್ತುಗಳು ಈ ಕಾಯಿದೆಯಡಿಯಲ್ಲಿ ವಿಧಿಸಬಹುದಾದ ರೀತಿಯಲ್ಲಿ ಇರತಕ್ಕದ್ದು.

ಕಲಂ – ೨೪ : ಶಿಕ್ಷಕರ ಕರ್ತವ್ಯಗಳು ಮತ್ತು ಅಸಮಾಧಾನಗಳ ನಿವಾರಣೆ

(೧) ಕಲಂ ೨೩ ರ ಉಪಕಲಂ (೧) ರಲ್ಲಿ ನೇಮಕಗೊಂಡ ಶಿಕ್ಷಕರು ಈ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು:

(a) ನಿಯಮಿತವಾಗಿ ಮತ್ತು ಸಮಯಕ್ಕೆ ಸರಿಯಾಗಿ ಶಾಲೆಗೆ ಹಾಜರಾಗಬೇಕು;

(b) ಕಲಂ ೨೯ ರ ಉಪಕಲಂ (೨) ರಲ್ಲಿನ ಉಪಬಂಧಗಳಿಗೆ ಅನುಗುಣವಾಗಿ ಸೂಚಿಸಲಾದ ಪಠ್ಯವಿಷಯಗಳನ್ನು ನಡೆಸಬೇಕು ಹಾಗೂ ಪೂರ್ತಿಗೊಳಿಸಬೇಕು;

(c) ನಿರ್ದಿಷ್ಟಪಡಿಸಲಾದ ಕಾಲಾವಧಿಯೊಳಗೆ ಇಡೀ ಪಠ್ಯವಿಷಯಗಳನ್ನು ಪೂರ್ತಿಗೊಳಿಸಬೇಕು;

(d) ಪ್ರತಿಯೊಂದು ಮಗುವಿನ ಕಲಿಕಾ ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡಿ, ಅವಶ್ಯವಿದ್ದಲ್ಲಿ, ಹೆಚ್ಚಿನ ಸಲಹೆ ಸೂಚನೆಗಳನ್ನು ನೀಡೇಕು;

(e) ಮಕ್ಕಳ ಪೋಷಕರು ಮತ್ತು ಪಾಲಕರೊಂದಿಗೆ ನಿಯಮಿತವಾಗಿ ಸಭೆ ನಡೆಸಿ, ಅವರಿಗೆ ಅವರ ಮಕ್ಕಳ ನಿಯಮಿತ ಹಾಜರಾತಿ, ಕಲಿಕಾ ಸಾಮರ್ಥ್ಯ, ಕಲಿಕಾ ಪ್ರಗತಿ ಮತ್ತು ಮಗುವಿಗೆ ಕುರಿತಾದ ಇನ್ನಾವುದೇ ಮಾಹಿತಿಯನ್ನು ತಿಳಿಯಪಡಿಸಬೇಕು; ಮತ್ತು

(f) ವಿಧಿಸಬಹುದಾದ ಇನ್ನಾವುದೇ ಕರ್ತವ್ಯಗಳ ನಿರ್ವಹಣೆ.

(೨) ಉಪಕಲಂ (೧) ರಲ್ಲಿ ಸ್ಪಷ್ಟಪಡಿಸಲಾದ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಲೋಪವೆಸಗುವ ಶಿಕ್ಷಕ/ಶಿಕ್ಷಕಿ, ಅವನಿಗೆ/ಳಿಗೆ ಅನ್ವಯಿಸುವಂತಹ ಸೇವಾನಿಯಮಗಳಡಿಯಲ್ಲಿ ತೆಗೆದುಕೊಳ್ಳಬಹುದಾದ ಶಿಸ್ತಿನ ಕ್ರಮಗಳಿಗೆ ಗುರಿಯಾಗುತ್ತಾನೆ/ಳೆ. ಆದರೆ, ಅಂತಹ ಶಿಸ್ತು ಕ್ರಮಗಳನ್ನು ಕೈಗೊಳ್ಳುವ ಮುನ್ನ, ಆ ಶಿಕ್ಷಕನಿಗೆ/ಶಿಕ್ಷಕಿಗೆ, ಅವನ/ಅವಳ ಅಹವಾಲನ್ನು ಹೇಳಿಕೊಳ್ಳಲು ಯಥೋಚಿತ ಅವಕಾಶವನ್ನು ನೀಡತಕ್ಕದ್ದು.

(೩) ಶಿಕ್ಷಕರಿಗೆ ಏನಾದರೂ ಅಸಮಾಧಾನಗಳು ಇದ್ದಲ್ಲಿ, ವಿಧಿಸಬಹುದಾದ ರೀತಿಯಲ್ಲಿ ಅವನ್ನು ನಿವಾರಿಸತಕ್ಕದ್ದು.

ಕಲಂ – ೨೫ : ವಿದ್ಯಾರ್ಥಿ – ಶಿಕ್ಷಕ ಅನುಪಾತ

(೧) ಈ ಕಾಯಿದೆಯು ಪ್ರಾರಂಭವಾದ ದಿನಾಂಕದಿಂದ ೬ ತಿಂಗಳೊಳಗಾಗಿ, ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು, ಪ್ರತೀ ಶಾಲೆಯಲ್ಲಿಯೂ ವಿದ್ಯಾರ್ಥಿ–ಶಿಕ್ಷಕ ಅನುಪಾತವು ಅನುಸೂಚಿಯಲ್ಲಿ ನಿರ್ದಿಷ್ಟಪಡಿ ಸಿರುವಂತೆ ಇರುವುದನ್ನು ಖಾತರಿಪಡಿಸಿಕೊಳ್ಳಬೇಕು.

(೨) ಉಪಕಲಂ (೧) ರಡಿಯಲ್ಲಿ ತಿಳಿಸಿರುವಂತೆ, ವಿದ್ಯಾರ್ಥಿ–ಅಧ್ಯಾಪಕ ಅನುಪಾತವನ್ನು ನಿರ್ವಹಿಸುವ ಉದ್ದೇಶಕ್ಕಾಗಿ ಶಾಲೆಯೊಂದರಲ್ಲಿ ನೇಮಕಗೊಂಡ ಯಾವುದೇ ಶಿಕ್ಷಕರನ್ನು ಬೇರಿನ್ನಾವುದೇ ಶಾಲೆಯಲ್ಲಿ ಅಥವಾ ಕಛೇರಿಯಲ್ಲಿ ಸೇವೆ ಸಲ್ಲಿಸುವಂತೆ ಅಥವಾ ಕಲಂ ೨೭ ರಲ್ಲಿ ಸ್ಪಷ್ಟಪಡಿಸಿದ ಕಾರಣಗಳನ್ನು ಹೊರತುಪಡಿಸಿ, ಇನ್ನಾವುದೇ ಶೈಕ್ಷಣಿಕವಲ್ಲದ ಕಾರಣಗಳಿಗಾಗಿ ಅಭಿನಿಯೋಜನೆಗೆ ಮಾಡತಕ್ಕದ್ದಲ್ಲ.

ಕಲಂ – ೨೬ : ತೆರವಾಗಿರುವ ಶಿಕ್ಷಕ ಹುದ್ದೆಗಳನ್ನು ಭರ್ತಿಗೊಳಿಸುವಿಕೆ

ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಸ್ಥಾಪಿಸಲ್ಪಟ್ಟ, ಸ್ವಾಮ್ಯತ್ವಕ್ಕೊಳಪಟ್ಟಿರುವ, ಅಧೀನದಲ್ಲಿರುವ ಅಥವಾ ಪ್ರತ್ಯಕ್ಷವಾಗಿ ಯಾ ಪರೋಕ್ಷವಾಗಿ ಗಣನೀಯ ಪ್ರಮಾಣದ ಆರ್ಥಿಕ ನೆರವನ್ನು ದೇಣಿಗೆಯಾಗಿ ಪಡೆದಿರುವ ಶಾಲೆಗಳಿಗೆ ಸಂಬಂಧಿಸಿದಂತೆ, ನೇಮಕಾತಿ ಪ್ರಾಧಿಕಾರವು, ತನ್ನ ನಿಯಂತ್ರಣದಲ್ಲಿರುವ ಶಾಲೆಗಳಲ್ಲಿ ತೆರವಾಗಿರುವ ಶಿಕ್ಷಕರ ಹುದ್ದೆಗಳು ಮಂಜೂರಾದ ಹುದ್ದೆಗಳ ಒಟ್ಟು ಸಂಖ್ಯೆಯ ಹತ್ತು ಶೇಕಡಾವನ್ನು ಮೀರದಂತೆ ಖಚಿತಪಡಿಸಿಕೊಳ್ಳತಕ್ಕದ್ದು.

ಕಲಂ – ೨೭ : ಶೈಕ್ಷಣಿಕವಲ್ಲದ ಕಾರಣಗಳಿಗಾಗಿ ಶಿಕ್ಷಕರ ಅಭಿನಿಯೋಜನೆಯ ನಿಷೇಧ

ಅಸಮಾಧಾನಗಳು ಎಂಬುದು "grievances" ಎಂಬ ಪದದ ಅನುವಾದವಾಗಿದ್ದು, ಇದಕ್ಕೆ, ಕುಂದುಕೊರತೆ, ವ್ಯಥೆ, ಅಸಮಾಧಾನ ಕಾರಣಗಳು ಎಂಬ ಅರ್ಥಗಳೂ ಇವೆ. ಇದನ್ನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ಕರ್ನಾಟಕ ಸರ್ಕಾರವು ಡಿಸೆಂಬರ್ ೨೦೦೮ ರಲ್ಲಿ ಪ್ರಕಟಿಸಿದ ಕಾನೂನು ಪದಕೋಶದಿಂದ ಆರಿಸಿಕೊಳ್ಳಲಾಗಿದ್ದು, ಸಂದರ್ಭಕ್ಕೆ ತಕ್ಕಂತೆ, ಇದರ ಇತರ ಅರ್ಥಗಳನ್ನೂ ಬಳಸಿಕೊಳ್ಳಲಾಗಿದೆ. ಅಭಿನಿಯೋಜನೆ ಎಂಬುದು "deploy" ಎಂಬ ಪದದ ಅನುವಾದ. ಆಕರ : ಕಾನೂನು ಪದಕೋಶ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ಕರ್ನಾಟಕ ಸರ್ಕಾರ, ಡಿಸೆಂಬರ್ ೨೦೦೮ ರ ಆವೃತ್ತಿ. ಯಾವ ಶಿಕ್ಷಕರನ್ನೂ, ದಶವಾರ್ಷಿಕ ಜನಗಣತಿ, ವಿಕೋಪ ಪರಿಹಾರ ಕರ್ತವ್ಯಗಳು ಅಥವಾ ಸ್ಥಳೀಯ ಪ್ರಾಧಿಕಾರ ಯಾ ರಾಜ್ಯ ಶಾಸಕಸಭೆಗಳು ಯಾ ಸಂಸತ್ ಚುನಾವಣೆಗಳಿಗೆ ಸಂಬಂಧಿಸಿದ ಕರ್ತವ್ಯಗಳನ್ನು ಹೊರತುಪಡಿಸಿ, ಇತರ ಯಾವುದೇ ಶೈಕ್ಷಣಿಕವಲ್ಲದ ಕಾರಣಗಳಿಗಾಗಿ ಅಭಿನಿಯೋಜನೆ ಮಾಡತಕ್ಕದ್ದಲ್ಲ.

ಕಲಂ – ೨೮ : ಶಿಕ್ಷಕರ ಖಾಸಗೀ ಪಾಠ ಹೇಳುವಿಕೆಯ ನಿಷೇಧ

ಯಾವುದೇ ಶಿಕ್ಷಕರು ಖಾಸಗೀ ಪಾಠಗಳನ್ನು ಮಾಡುವುದು, ಖಾಸಗಿಯಾಗಿ ಕಲಿಸುವುದರಲ್ಲಿ ನಿರತರಾಗಬಾರದು.

ಅಧ್ಯಾಯ – ೫

ಪಠ್ಯಕ್ರಮ ಮತ್ತು ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವಿಕೆ

ಕಲಂ – ೨೯ : ಪಠ್ಯಕ್ರಮ ಮತ್ತು ಮೌಲ್ಯಮಾಪನ ವಿಧಾನ

(೧) ಪ್ರಾಥಮಿಕ ಶಿಕ್ಷಣದ ಪಠ್ಯಕ್ರಮ ಮತ್ತು ಮೌಲ್ಯಮಾಪನ ವಿಧಾನಗಳನ್ನು ಸಮುಚಿತ ಸರ್ಕಾರವು ಅಧಿಸೂಚನೆಯ ಮೂಲಕ ಸ್ಪಷ್ಟಪಡಿಸಬಹುದಾದ ಶಿಕ್ಷಣ ಪ್ರಾಧಿಕಾರವು ನಿರ್ಧರಿಸತಕ್ಕದ್ದು.

(೨) ಶಿಕ್ಷಣ ಪ್ರಾಧಿಕಾರವು ಉಪಕಲಂ (೧) ರಲ್ಲಿ ತಿಳಿಸಿದಂತೆ ಪಠ್ಯಕ್ರಮ ಹಾಗೂ ಮೌಲ್ಯಮಾಪನ ವಿಧಾನಗಳನ್ನು ನಿರ್ಧರಿಸುವಾಗ ಕೆಳಕಂಡ ವಿಷಯಗಳನ್ನು ಗಮನದಲ್ಲಿರಿಸಿಕೊಳ್ಳತಕ್ಕದ್ದು. ಅವುಗಳೆಂದರೆ

(a) ಸಂವಿಧಾನದಲ್ಲಿ ಅಳವಡಿಸಲಾಗಿರುವ ಮೌಲ್ಯಗಳಿಗೆ ಅನುಗುಣವಾಗಿರುವುದು;

(b) ಮಕ್ಕಳ ಸರ್ವಾಂಗೀಣ ಅಭಿವೃದ್ಧಿ;

(c) ಮಕ್ಕಳ ಜ್ಞಾನ, ಸಾಮರ್ಥ್ಯ ಹಾಗೂ ಪ್ರತಿಭೆಗಳ ಬೆಳವಣಿಗೆ;

(d) ದೈಹಿಕ ಮತ್ತು ಮಾನಸಿಕ ಸಾಮರ್ಥ್ಯದ ಪರಿಪೂರ್ಣ ಬೆಳವಣಿಗೆ;

(e) ಮಗು ಸ್ನೇಹಿ ಮತ್ತು ಮಗು ಕೇಂದ್ರಿತ ರೀತಿಯಲ್ಲಿ ಚಟುವಟಿಕೆಗಳು, ಅನ್ವೇಷಣೆ ಹಾಗೂ ಕಂಡುಕೊಳ್ಳುವಿಕೆಗಳ ಮೂಲಕ ಕಲಿಯುವಿಕೆ;

(f) ಬೋಧನಾ ಮಾಧ್ಯಮ ಸಾಧ್ಯವಾದಷ್ಟು ಮಟ್ಟಿಗೆ ಮಕ್ಕಳ ಮಾತೃಭಾಷೆಯಲ್ಲಿರತಕ್ಕದ್ದು;

(g) ಮಕ್ಕಳನ್ನು ಭಯ, ಮಾನಸಿಕ ನೋವು ಹಾಗೂ ಆತಂಕ ಮುಕ್ತರನ್ನಾಗಿಸುವುದು ಮತ್ತು ಮಗುವಿಗೆ ತನ್ನ ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸಲು ಸಹಾಯ ಮಾಡುವುದು;

(h) ಮಗುವಿನ ಜ್ಞಾನದ ಅರ್ಥೈಸಿಕೊಳ್ಳುವಿಕೆಯನ್ನು ಮತ್ತು ಅರ್ಥೈಸಿಕೊಂಡದ್ದನ್ನು ಅಳವಡಿಸಿಕೊಳ್ಳುವ ಸಾಮರ್ಥ್ಯಗಳ ಸಮಗ್ರ ಹಾಗೂ ನಿರಂತರ ಮೌಲ್ಯಮಾಪನ.

ಕಲಂ – ೩೦ : ಪರೀಕ್ಷೆ ಮತ್ತು ಪೂರ್ಣಗೊಳಿಸುವಿಕೆಯ ಪ್ರಮಾಣ ಪತ್ರ

(೧) ಯಾವುದೇ ಮಗು ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವತನಕ ಯಾವುದೇ ಪರೀಕ್ಷೆಯಲ್ಲಿ ಉತ್ತೀರ್ಣನಾಗಬೇಕಾದ/ಳಾಗಬೇಕಾದ ಅವಶ್ಯಕತೆಯಿಲ್ಲ.

(೨) ಪ್ರಾಥಮಿಕ ಶಿಕ್ಷಣವನ್ನು ಪೂರ್ತಿಗೊಳಿಸಿದ ಪ್ರತಿ ಮಗುವಿಗೂ ಈ ಕಾಯಿದೆಯಡಿಯಲ್ಲಿ ವಿಧಿಸಬಹುದಾದ ರೂಪದಲ್ಲಿ ಹಾಗೂ ಕ್ರಮದಲ್ಲಿ ಪ್ರಮಾಣ ಪತ್ರ ಕೊಡತಕ್ಕದ್ದು.

ಅಧ್ಯಾಯ – ೬ ಮಕ್ಕಳ ಹಕ್ಕು ರಕ್ಷಣೆ

ಕಲಂ – ೩೧ : ಮಗುವಿನ ಶಿಕ್ಷಣದ ಹಕ್ಕಿನ ಮೇಲ್ವಿಚಾರಣೆ

(೧) ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಗಳ ಕಾಯಿದೆ ೨೦೦೫ ರ ಕಲಂ ೩ ರಡಿಯಲ್ಲಿ ರಚಿಸಲಾಗಿರುವ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಅಥವಾ ಕಲಂ ೧೭ ರಡಿಯಲ್ಲಿ ರಚಿಸಲಾಗಿರುವ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಗಳು, ತಮಗೆ ಆ ಕಾಯಿದೆಯಡಿಯಲ್ಲಿ ನೀಡಲಾಗಿರುವ ಕಾರ್ಯಗಳೊಂದಿಗೆ ಈ ಕೆಳಕಂಡ ಕಾರ್ಯಗಳನ್ನೂ ನಿರ್ವಹಿಸತಕ್ಕದ್ದು:

(a) ಈ ಕಾಯಿದೆಯಲ್ಲಿ ಒದಗಿಸಲಾದ ಹಕ್ಕುಗಳ ಸಂರಕ್ಷಣೆಯ ವಿಧಾನಗಳನ್ನು ಪರೀಕ್ಷಿಸುವುದು ಮತ್ತು ಪುನರಾವಲೋಕನ ಮಾಡುವುದು ಮತ್ತು ಅವುಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲು ಅಗತ್ಯವಾದ ಕ್ರಮಗಳನ್ನು ಶಿಫಾರಸು ಮಾಡುವುದು.

(b) ಮಗುವಿನ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕಿಗೆ ಸಂಬಂಧಿಸಿದಂತೆ ಇರುವ ದೂರುಗಳ ವಿಚಾರಣೆ; ಮತ್ತು

(c) ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಗಳ ಕಾಯಿದೆಯ ಕಲಂ ೧೫ ಮತ್ತು ೨೪ ರಲ್ಲಿ ಸೂಚಿಸಿರುವಂತೆ

ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದು.

(೨) ಮೇಲೆ ಹೇಳಲಾದ ಆಯೋಗಗಳು, ಉಪಕಲಂ (೧) ರ ಖಂಡ (c) ಯ ಅಡಿಯಲ್ಲಿ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕಿಗೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ವಿಚಾರಣೆ ನಡೆಸುವಾಗ, ಅವುಗಳಿಗೆ (ಆಯೋಗಗಳಿಗೆ) ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಗಳ ಕಾಯಿದೆಯ ಕಲಂ ೧೪ ಮತ್ತು ೨೪ ರಡಿಯಲ್ಲಿ ಅನುಕ್ರಮವಾಗಿ ಕೊಡಲಾಗಿರುವಂತಹುದೇ ಅಧಿಕಾರವನ್ನು ಹೊಂದಿರುತ್ತವೆ. (೩) ರಾಜ್ಯವೊಂದರಲ್ಲಿ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವನ್ನು ರಚಿಸದೇ ಇದ್ದಂತಹ ಸಂದರ್ಭದಲ್ಲಿ, ಸಮುಚಿತ ಸರ್ಕಾರವು, ಮೇಲಿನ ಉಪಕಲಂ (೧) ರ ಖಂಡ (a) ಯಿಂದ (c) ಯವರೆಗೆ, ನಿರ್ದಿಷ್ಟವಾಗಿ ನಮೂದಿಸಲಾಗಿರುವ ಕಾರ್ಯಗಳನ್ನು ನಿರ್ವಹಿಸಲು, ವಿಧಿಸಬಹುದಾದ ರೀತಿಯ ಷರತ್ತುಗಳು ಮತ್ತು ನಿಯಮಗಳಿಗನುಸಾರವಾಗಿ ಪ್ರಾಧಿಕಾರವನ್ನು ರಚಿಸಬಹುದು.

ಕಲಂ – ೩೨ : ಅಸಮಾಧಾನ ಕಾರಣಗಳ ನಿವಾರಣೆ

(೧) ಉಪಕಲಂ ೩೧ ಏನನ್ನೇ ಒಳಗೊಂಡಿದ್ದರೂ, ಯಾವುದೇ ವ್ಯಕ್ತಿ ಈ ಕಾಯಿದೆಯಡಿಯಲ್ಲಿ ಮಗುವಿನ ಹಕ್ಕಿಗೆ ಸಂಬಂಧಿಸಿದಂತೆ ಏನೇ ಅಸಮಾಧಾನ, ಕುಂದುಕೊರತೆಗಳ ಸಮಸ್ಯೆ ಹೊಂದಿದ್ದರೂ, ಅದರ ಕುರಿತು ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಸ್ಥಳೀಯ ಪ್ರಾಧಿಕಾರಕ್ಕೆ ಲಿಖಿತ ದೂರನ್ನು ಕೊಡಬಹುದು. (೨) ಉಪಕಲಂ (೧) ರಡಿಯಲ್ಲಿ ದೂರನ್ನು ಸ್ವೀಕರಿಸಿದ ಬಳಿಕ ಸ್ಥಳೀಯ ಪ್ರಾಧಿಕಾರವು ಸಂಬಂಧಿಸಿದ ವ್ಯಕ್ತಿಗಳಿಗೆ ಅವರ ಅಹವಾಲನ್ನು ಹೇಳಿಕೊಳ್ಳಲು ಯಥೋಚಿತವಾದ ಅವಕಾಶವನ್ನು ಕೊಟ್ಟು, ಮೂರು ತಿಂಗಳುಗಳೊಳಗಾಗಿ ಆ ವಿಷಯವನ್ನು ತೀರ್ಮಾನಿಸತಕ್ಕದ್ದು. (೩) ಸ್ಥಳೀಯ ಪ್ರಾಧಿಕಾರವು ನೀಡಿದ ತೀರ್ಪಿನ ಬಗ್ಗೆ ಅಸಮಾಧಾನವಿರುವ ಯಾವುದೇ ವ್ಯಕ್ತಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಅಥವಾ ಕಲಂ ೩೧ ರ ಉಪಕಲಂ (೩) ರಡಿಯಲ್ಲಿ ನಿಯಮಿಸಲಾದ ಪ್ರಾಧಿಕಾರಕ್ಕೆ ಮೇಲ್ಮನವಿಯನ್ನು ಸಲ್ಲಿಸಬಹುದು. (೪) ಉಪಕಲಂ (೩) ರಡಿಯಲ್ಲಿ ಸಲ್ಲಿಸಲಾದ ಮೇಲ್ಮನವಿಯನ್ನು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಅಥವಾ ಕಲಂ ೩೧ ರ ಉಪಕಲಂ (೩) ರಡಿಯಲ್ಲಿ ನಿಯಮಿಸಲಾದ ಪ್ರಾಧಿಕಾರವು ಕಲಂ ೩೧ ರ ಉಪಕಲಂ (೧) ರ ಖಂಡ (c) ಯ ಅಡಿಯಲ್ಲಿ ತಿಳಿಸಲಾದಂತೆ ತೀರ್ಮಾನಿಸತಕ್ಕದ್ದು.

ಕಲಂ – ೩೩ : ರಾಷ್ಟ್ರೀಯ ಸಲಹಾ ಮಂಡಳಿಯ ರಚನೆ

(೧) ಕೇಂದ್ರ ಸರ್ಕಾರವು ಅಧಿಸೂಚನೆಯನ್ನು ಪ್ರಕಟಿಸುವ ಮೂಲಕ, ಆವಶ್ಯ ಎಂದು ಭಾವಿಸುವ ಸಂಖ್ಯೆಯ ಸದಸ್ಯರುಳ್ಳ, ಆದರೆ, ೧೫ ಜನ ಸದಸ್ಯರ ಮಿತಿಯನ್ನು ಮೀರದ ರಾಷ್ಟ್ರೀಯ ಸಲಹಾ ಮಂಡಳಿಯನ್ನು ರಚಿಸತಕ್ಕದ್ದು. ಹೀಗೆ ಒಳಗೊಳ್ಳತಕ್ಕ ಸದಸ್ಯರನ್ನು ಪ್ರಾಥಮಿಕ ಶಿಕ್ಷಣ ಮತ್ತು ಮಕ್ಕಳ ಅಭಿವೃದ್ಧಿ ಕ್ಷೇತ್ರಗಳಲ್ಲಿ ಜ್ಞಾನ ಮತ್ತು ಕಾರ್ಯ ನಿರ್ವಹಿಸಿರುವ ಅನುಭವವಿರುವ ವ್ಯಕ್ತಿಗಳ ಸಮೂಹದಿಂದ ನೇಮಿಸಿಕೊಳ್ಳತಕ್ಕದ್ದು. (೨) ಈ ಕಾಯಿದೆಯಲ್ಲಿನ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕೇಂದ್ರಸರ್ಕಾರಕ್ಕೆ ಸಲಹೆ ನೀಡುವುದು ರಾಷ್ಟ್ರೀಯ ಸಲಹಾ ಮಂಡಳಿಯ ಕಾರ್ಯವಾಗಿದೆ.

(೩) ರಾಷ್ಟ್ರೀಯ ಸಲಹಾ ಮಂಡಳಿಯ ಸದಸ್ಯರ ಭತ್ಯೆ ಮತ್ತು ನೇಮಕಾತಿಗೆ ಸಂಬಂಧಿಸಿದ ಇತರೆ ಷರತ್ತುಗಳು ಹಾಗೂ ನಿಯಮಗಳು ಈ ಕಾಯಿದೆಯಲ್ಲಿ ವಿಧಿಸಬಹುದಾದಂತಿರುತ್ತವೆ.

ಕಲಂ – ೩೪ : ರಾಜ್ಯ ಸಲಹಾ ಮಂಡಳಿಯ ರಚನೆ

(೧) ರಾಜ್ಯ ಸರ್ಕಾರವು ಅಧಿಸೂಚನೆಯನ್ನು ಪ್ರಕಟಿಸುವ ಮೂಲಕ, ಆವಶ್ಯ ಎಂದು ಭಾವಿಸುವ ಸಂಖ್ಯೆಯ ಸದಸ್ಯರುಳ್ಳ, ಆದರೆ, ೧೫ ಜನ ಸದಸ್ಯರ ಮಿತಿಯನ್ನು ಮೀರದ ರಾಜ್ಯ ಸಲಹಾ ಮಂಡಳಿಯನ್ನು ರಚಿಸತಕ್ಕದ್ದು. ಹೀಗೆ ಒಳಗೊಳ್ಳತಕ್ಕ ಸದಸ್ಯರನ್ನು ಪ್ರಾಥಮಿಕ ಶಿಕ್ಷಣ ಮತ್ತು ಮಕ್ಕಳ ಅಭಿವೃದ್ಧಿ ಕ್ಷೇತ್ರಗಳಲ್ಲಿ ಜ್ಞಾನ ಮತ್ತು ಕಾರ್ಯ ನಿರ್ವಹಿಸಿರುವ ಅನುಭವವಿರುವ ವ್ಯಕ್ತಿಗಳ ಸಮೂಹದಿಂದ ನೇಮಿಸಿಕೊಳ್ಳತಕ್ಕದ್ದು.

(೨) ಈ ಕಾಯಿದೆಯಲ್ಲಿನ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಜ್ಯಸರ್ಕಾರಕ್ಕೆ ಸಲಹೆ ನೀಡುವುದು ರಾಜ್ಯ ಸಲಹಾ ಮಂಡಳಿಯ ಕಾರ್ಯವಾಗಿದೆ.

(೩) ರಾಜ್ಯ ಸಲಹಾ ಮಂಡಳಿಯ ಸದಸ್ಯರ ಭತ್ಯೆ ಮತ್ತು ನೇಮಕಾತಿಗೆ ಸಂಬಂಧಿಸಿದ ಇತರೆ ಷರತ್ತುಗಳು ಹಾಗೂ ನಿಯಮಗಳು ಈ ಕಾಯಿದೆಯಲ್ಲಿ ವಿಧಿಸಬಹುದಾದಂತಿರುತ್ತವೆ.

ಅಧ್ಯಾಯ – ೭

ಇತರೆ ವಿಚಾರಗಳು

ಕಲಂ – ೩೫ : ನಿರ್ದೇಶನಗಳನ್ನು ನೀಡುವ ಅಧಿಕಾರ

(೧) ಈ ಕಾಯಿದೆಯ ಉಪಬಂಧಗಳ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರವು ತನಗೆ ಸೂಕ್ತವೆನಿಸಿದ ಮಾರ್ಗದರ್ಶನಗಳನ್ನು ಸಂದರ್ಭಾನುಸಾರವಾಗಿ, ಸಮುಚಿತ ಸರ್ಕಾರಕ್ಕೆ ಅಥವಾ ಸ್ಥಳೀಯ ಪ್ರಾಧಿಕಾರಕ್ಕೆ ನೀಡಬಹುದಾಗಿದೆ.

(೨) ಸಮುಚಿತ ಸರ್ಕಾರವು ಈ ಕಾಯಿದೆಯ ಉಪಬಂಧಗಳ ಅನುಷ್ಠಾನಕ್ಕಾಗಿ, ತನಗೆ ಸೂಕ್ತವೆನಿಸಿದ ಮಾರ್ಗದರ್ಶನಗಳು ಮತ್ತು ಇತರ ನಿರ್ದೇಶನಗಳನ್ನು ಸ್ಥಳೀಯ ಪ್ರಾಧಿಕಾರ ಅಥವಾ ಶಾಲಾ ನಿರ್ವಹಣಾ ಸಮಿತಿಗೆ ನೀಡಬಹುದಾಗಿದೆ.

(೩) ಸ್ಥಳೀಯ ಪ್ರಾಧಿಕಾರವು ಈ ಕಾಯಿದೆಯಲ್ಲಿನ ಉಪಬಂಧಗಳ ಅನುಷ್ಠಾನದ ಕುರಿತಾಗಿ ತನಗೆ ಸೂಕ್ತವೆನಿಸಿದ ಮಾರ್ಗದರ್ಶನಗಳು ಮತ್ತು ನಿರ್ದೇಶನಗಳನ್ನು ಶಾಲಾ ನಿರ್ವಹಣಾ ಸಮಿತಿಗೆ ನೀಡಬಹುದಾಗಿದೆ.

ಕಲಂ – ೩೬ : ಕಾನೂನು ಕ್ರಮ ಜರುಗಿಸಲು

ಪೂರ್ವ ಮಂಜೂರಾತಿ

ಕಲಂ ೧೩ ರ ಉಪಕಲಂ (೨), ಕಲಂ ೧೮ ರ ಉಪಕಲಂ (೫) ಮತ್ತು ಕಲಂ ೧೯ ರ ಉಪಕಲಂ (೫)

ರಡಿಯಲ್ಲಿ ಶಿಕ್ಷೆ ವಿಧಿಸಬಹುದಾದ ಅಪರಾಧಗಳಿಗೆ ಸಂಬಂಧಿಸಿದಂತೆ, ಈ ಬಗ್ಗೆ ಸಮುಚಿತ ಸರ್ಕಾರದ ಅಧಿಸೂಚನೆ ಮೂಲಕ ಅಧಿಕಾರ ಹೊಂದಿರುವ ಅಧಿಕಾರಿಯಿಂದ ಪೂರ್ವ ಮಂಜೂರಾತಿ ಪಡೆಯದ ಹೊರತು ಯಾವುದೇ ಕಾನೂನು ಕ್ರಮ ಜರುಗಿಸುವಂತಿಲ್ಲ.

ಕಲಂ – ೩೭ : ಸದ್ಭಾವನೆಯಿಂದ ಕೈಗೊಂಡ ಕ್ರಮಗಳ ಸಂರಕ್ಷಣೆ

ಈ ಕಾಯಿದೆಯ ಅಥವಾ ಈ ಕಾಯಿದೆಯಡಿಯಲ್ಲಿ ಮಾಡಲಾದ ಯಾವುದೇ ನಿಯಮ ಅಥವಾ ಆದೇಶಗಳ ಅನುಸರಣೆಯ ಸಂದರ್ಭದಲ್ಲಿ, ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಸ್ಥಳೀಯ ಪ್ರಾಧಿಕಾರ, ಶಾಲಾ ನಿರ್ವಹಣಾ ಸಮಿತಿ ಅಥವಾ ಯಾವುದೇ ವ್ಯಕ್ತಿ ಸದ್ಭಾವನೆಯಿಂದ ಮಾಡಿರುವ ಅಥವಾ ಮಾಡಬೇಕೆಂದು ಉದ್ದೇಶಿಸಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಕ್ರಮಕ್ಕೆ ಸಂಬಂಧಿಸಿದಂತೆ ಅವರ ವಿರುದ್ಧ ಯಾವುದೇ ದಾವೆ ಹೂಡುವಂತಿಲ್ಲ ಅಥವಾ ಕಾನೂನು ವ್ಯವಹರಣೆಗಳನ್ನು ಜರುಗಿಸುವಂತಿಲ್ಲ.

ಕಲಂ – ೩೮ : ನಿಯಮಗಳನ್ನು ರೂಪಿಸಲು ಸಮುಚಿತ ಸರ್ಕಾರಕ್ಕಿರುವ ಅಧಿಕಾರ

(೧) ಈ ಕಾಯಿದೆಯಲ್ಲಿನ ಉಪಬಂಧಗಳನ್ನು ಕಾರ್ಯಗತಗೊಳಿಸಲು, ಸಮುಚಿತ ಸರ್ಕಾರವು ಅಧಿಸೂಚನೆ ಮೂಲಕ ನಿಯಮಗಳನ್ನು ರೂಪಿಸಬಹುದು. "Prosecution" ಎಂಬ ಪದಕ್ಕೆ ಕಾನೂನು ಕ್ರಮ ಜರುಗಿಸು, ಕಟ್ಟಳೆ ನಡೆಸುವುದು, ಪ್ರಾಸಿಕ್ಯೂಷನ್ ಎಂಬ ಅರ್ಥಗಳಿದ್ದು, ಹೆಚ್ಚಿನ ವಿವರಗಳಿಗೆ

ಮೈಸೂರು ವಿಶ್ವವಿದ್ಯಾನಿಲಯ ೧೯೯೯ ರಲ್ಲಿ ಪ್ರಕಟಿಸಿದ ಇಂಗ್ಲೀಷ್–ಕನ್ನಡ ನಿಘಂಟಿನ ಪು.ಸಂ. ೭೫೨ ನ್ನು ಪರಿಶೀಲಿಸಬಹುದು. "Legal proceeding" ಎಂಬುದರ ಅರ್ಥ. ಇದನ್ನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ಕರ್ನಾಟಕ ಸರ್ಕಾರ ಪ್ರಕಟಿಸಿದ ಡಿಸೆಂಬರ್ ೨೦೦೮ ರ ಆವೃತ್ತಿಯ ಕಾನೂನು ಪದಕೋಶದಿಂದ ತೆಗೆದುಕೊಳ್ಳಲಾಗಿದೆ.

(೨) ವಿಶೇಷತಃ ಮತ್ತು ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಬಾಧೆ ಬಾರದಂತೆ, ಅಂತಹ ನಿಯಮಗಳು, ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಗಳಿಗೆ ಅವಕಾಶ ಒದಗಿಸಬಹುದು:

(a) ಕಲಂ ೪ ಕ್ಕೆ ನೀಡಲಾದ ಮೊದಲ ಪರಂತುಕದಡಿಯಲ್ಲಿರುವಂತೆ, ವಿಶೇಷ ತರಬೇತಿಯನ್ನು ನೀಡುವ ರೀತಿ ಮತ್ತು ಅದಕ್ಕೆ ನಿಗದಿಪಡಿಸಬಹುದಾದ ಕಾಲ ಯಾ ಸಮಯದ ಮಿತಿ;

(b) ಕಲಂ ೬ ರಡಿಯಲ್ಲಿ – ಆಸುಪಾಸಿನ ಶಾಲೆಗಳನ್ನು ಸ್ಥಾಪಿಸಬೇಕಾದ ಪ್ರದೇಶ ಅಥವಾ ಪರಿಮಿತಿ;

(c) ಕಲಂ ೯ ರ ಖಂಡ (d) ಯಡಿಯಲ್ಲಿ ನಮೂದಿಸಲಾದಂತೆ ೧೪ ವರ್ಷ ವಯೋಮಿತಿಯೊಳಗಿನ ಮಕ್ಕಳ ದಾಖಲೆಗಳ ನಿರ್ವಹಣಾ ಕ್ರಮ;

(d) ಕಲಂ ೧೪ ರ ಉಪಕಲಂ (೨) ರಡಿಯಲ್ಲಿನ, ವೆಚ್ಚ ತುಂಬಿ ಕೊಡುವ ವಿಧಾನ ಮತ್ತು ಮಿತಿ;

(e) ಕಲಂ ೧೪ ರ ಉಪಕಲಂ (೧) ರಡಿಯಲ್ಲಿ ಮಗುವಿನ ವಯಸ್ಸನ್ನು ನಿರ್ಣಯಿಸುವ ಯಾವುದೇ ಇತರ ದಾಖಲೆ;

(f) ಕಲಂ ೧೫ ರಡಿಯಲ್ಲಿನ, ದಾಖಲಾತಿಯ ಸಮಯದ ವಿಸ್ತರಣೆ ಮತ್ತು ವಿಸ್ತರಿಸಿದ ಸಮಯಾವಧಿಯ ಬಳಿಕ ಶಾಲೆಗೆ ದಾಖಲಾಗಿದ್ದಲ್ಲಿ ಅಂತಹವರು ಅಧ್ಯಯನ ಪೂರ್ಣಗೊಳಿಸಬೇಕಾದ ರೀತಿ;

(g) ಕಲಂ ೧೮ ರ ಉಪಕಲಂ (೧) ರಡಿಯಲ್ಲಿ ಮನ್ನಣೆ ಪತ್ರಕ್ಕಾಗಿ ಹಾಕಬೇಕಾದ ಅರ್ಜಿಯ ನಮೂನೆ ಮತ್ತು ಕ್ರಮ ಹಾಗೂ ಅರ್ಜಿಪತ್ರ ಸಲ್ಲಿಸಬೇಕಾದಂತಹ ಪ್ರಾಧಿಕಾರ;

(h) ಕಲಂ ೧೮ ರ ಉಪಕಲಂ (೨) ರಡಿಯಲ್ಲಿ ಮನ್ನಣೆ ಪತ್ರವನ್ನು ನೀಡಲು ಅನುಸರಿಸಬೇಕಾದ ನಮೂನೆ, ರೀತಿ, ಷರತ್ತುಗಳು ಮತ್ತು ಮನ್ನಣೆ ಪತ್ರ ಕೊಡಲು ನೀಡಲಾದ ಅವಧಿ;

(i) ಕಲಂ ೧೮ ರ ಉಪಕಲಂ (೩) ಕ್ಕೆ ನೀಡಲಾದ ೨ ನೇ ಪರಂತುಕದ ಅಡಿಯಲ್ಲಿ ಅಹವಾಲನ್ನು ಹೇಳಿಕೊಳ್ಳಲು

ಅವಕಾಶ ನೀಡಲಾಗುವ ಕ್ರಮ;

(j) ಕಲಂ ೨೧ ರ ಉಪಕಲಂ (೨) ರ ಖಂಡ (d) ಯಡಿಯಲ್ಲಿ ಶಾಲಾ ನಿರ್ವಹಣಾ ಸಮಿತಿ ಮಾಡಬೇಕಾಗಬಹುದಾದ ಇತರ ಕಾರ್ಯಗಳು;

(k) ಕಲಂ ೨೨ ರ ಉಪಕಲಂ (೧) ರಡಿಯಲ್ಲಿ ಶಾಲಾಭಿವೃದ್ಧಿ ಯೋಜನೆಯನ್ನು ತಯಾರಿಸಬೇಕಾದ ರೀತಿ;

(l) ಕಲಂ ೨೩ ರ ಉಪಕಲಂ (೩) ರಡಿಯಲ್ಲಿ ಶಿಕ್ಷಕರಿಗೆ ನೀಡಬೇಕಾಗುವ ವೇತನ ಹಾಗೂ ಭತ್ಯೆಗಳು ಮತ್ತು ಸೇವಾ ನಿಯಮಗಳು ಹಾಗೂ ಷರತ್ತುಗಳು;

(m) ಕಲಂ ೨೪ ರ ಉಪಕಲಂ (೧) ರ ಖಂಡ (f) ಅಡಿಯಲ್ಲಿ ಶಿಕ್ಷಕರು ನಿರ್ವಹಿಸಬೇಕಾದಂತಹ ಕರ್ತವ್ಯಗಳು;

(n) ಕಲಂ ೨೪ ರ ಉಪಕಲಂ (೩) ರಡಿಯಲ್ಲಿ ಶಿಕ್ಷಕರ ಅಸಮಾಧಾನಗಳು ಅಥವಾ ಕುಂದುಕೊರತೆಗಳನ್ನು

ನಿವಾರಿಸುವ ರೀತಿ;

(o) ಕಲಂ ೩೦ ರ ಉಪಕಲಂ (೨) ರಡಿಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪೂರ್ತಿಗೊಳಿಸಿದ್ದಕ್ಕೆ ನೀಡಬೇಕಾದ ಪ್ರಮಾಣ ಪತ್ರದ ನಮೂನೆ ಮತ್ತು ಕ್ರಮ;

(p) ಕಲಂ ೩೧ ರ ಉಪಕಲಂ (೩) ರಡಿಯಲ್ಲಿ ರಚಿಸಬಹುದಾದ ಪ್ರಾಧಿಕಾರ, ಅದನ್ನು ರಚಿಸಲು ಅನುಸರಿಸಬೇಕಾದ ರೀತಿ ಮತ್ತು ನಿಯಮಗಳು ಹಾಗೂ ಷರತ್ತುಗಳು;

(q) ಕಲಂ ೩೩ ರ ಉಪಕಲಂ (೩) ರಡಿಯಲ್ಲಿ, ರಾಷ್ಟ್ರೀಯ ಸಲಹಾ ಮಂಡಳಿಯ ಸದಸ್ಯರ ಭತ್ಯೆ ಮತ್ತು ನೇಮಕಾತಿಯ ಇತರೆ ನಿಯಮಗಳು ಮತ್ತು ಷರತ್ತುಗಳು;

(r) ಕಲಂ ೩೪ ರ ಉಪಕಲಂ (೩) ರಡಿಯಲ್ಲಿ, ರಾಜ್ಯ ಸಲಹಾ ಮಂಡಳಿಯ ಸದಸ್ಯರ ಭತ್ಯೆ ಮತ್ತು ನೇಮಕಾತಿಯ ಇತರೆ ನಿಯಮಗಳು ಮತ್ತು ಷರತ್ತುಗಳು.

(೩) ಈ ಕಾಯಿದೆಯಡಿಯಲ್ಲಿ ಮಾಡಲಾದ ಪ್ರತಿಯೊಂದು ನಿಯಮವನ್ನು ಮತ್ತು ಕಲಂ ೨೦ ಹಾಗೂ ೨೩ ರಡಿಯಲ್ಲಿ ಕೇಂದ್ರ ಸರ್ಕಾರವು ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನೂ, ಮಾಡಲಾದ ಯಾ ಹೊರಡಿಸಿದ ಬಳಿಕ, "In particular, and without prejudice to the generality of the foregoing powers" ಎಂಬುದರ ಅನುವಾದ. ಇದನ್ನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ಕರ್ನಾಟಕ ಸರ್ಕಾರ ಪ್ರಕಟಿಸಿದ ಡಿಸೆಂಬರ್ ೨೦೦೮ ರ ಆವೃತ್ತಿಯ ಕಾನೂನು ಪದಕೋಶದಿಂದ ಬಳಸಿಕೊಳ್ಳಲಾಗಿದೆ. Proviso – ಪರಂತುಕ (ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ಕರ್ನಾಟಕ ಸರ್ಕಾರ ಪ್ರಕಟಿಸಿದ ಡಿಸೆಂಬರ್ ೨೦೦೮ ರ ಆವೃತ್ತಿಯ ಕಾನೂನು ಪದಕೋಶದಿಂದ ತೆಗೆದುಕೊಳ್ಳಲಾಗಿದೆ) ಅಥವಾ ದಸ್ತೈವಾಜಿನಲ್ಲಿರುವ ವಿಧಿಯನ್ನು ಯಾ ಮಿತಿಯನ್ನು ನಿರ್ದೇಶಿಸುವ ವಾಕ್ಯ ಎಂಬ ವಿವರಣೆ ಮೈಸೂರು

ವಿಶ್ವವಿದ್ಯಾನಿಲಯ ೧೯೯೯ ರಲ್ಲಿ ಪ್ರಕಟಿಸಿದ ಇಂಗ್ಲೀಷ್-ಕನ್ನಡ ನಿಘಂಟಿನ ಪು.ಸಂ. ೭೩೫ ರಲ್ಲಿದೆ.
ಸಾಧ್ಯವಾಗಬಹುದಾದಷ್ಟೂ ಬೇಗನೆ ಸಂಸತ್ತಿನ ಪ್ರತಿಯೊಂದು ಮನೆಯು (ರಾಜ್ಯಸಭೆ ಮತ್ತು ಲೋಕಸಭೆ) ಒಟ್ಟು ೩೦ ದಿನಗಳನ್ನೊಳಗೊಳ್ಳಬಹುದಾದ ಒಂದು ಅಥವಾ ಹೆಚ್ಚಿನ ಅನುಕ್ರಮ ಅಧಿವೇಶನಗಳಲ್ಲಿರುವಾಗ, ಅವುಗಳೆದುರು ಮಂಡಿಸತಕ್ಕದ್ದು. ಹೀಗೆ ಮಂಡಿಸಿದಾಗ, ಒಂದು ಪಕ್ಷ, ಸಂಸತ್ತಿನ ಎರಡೂ ಮನೆಗಳು, ಮೇಲೆ ತಿಳಿಸಲಾದಂತಹ ಯಾವುದಾದರೂ ಒಂದು ಅಧಿವೇಶನ ಅಥವಾ ಅನುಕ್ರಮ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಕ್ತಾಯಗೊಳ್ಳುವುದರೊಳಗಾಗಿ,

ಮಂಡಿಸಲಾದಂತಹ ನಿಯಮ ಯಾ ಅಧಿಸೂಚನೆಯಲ್ಲಿ ಮಾರ್ಪಾಟುಗಳನ್ನು ತರಲು ಸಮ್ಮತಿಸಿದರೆ ಅಥವಾ, ಅಂತಹ ನಿಯಮಗಳು ಯಾ ಅಧಿಸೂಚನೆಗಳನ್ನು ಮಾಡಬಾರದು ಅಥವಾ ಹೊರಡಿಸತಕ್ಕದ್ದಲ್ಲವೆಂದು ಒಮ್ಮತವಾಗಿ ಅಭಿಪ್ರಾಯಪಟ್ಟಲ್ಲಿ,

ಅಂತಹ ನಿಯಮಗಳು ಅಥವಾ ಅಧಿಸೂಚನೆಗಳು ಸಂದರ್ಭಕ್ಕನುಸಾರವಾಗಿ, ಆ ಬಳಿಕ, ಮಾರ್ಪಾಟಾದ ರೂಪದಲ್ಲಿ ಅಥವಾ ಶೂನ್ಯಗೊಂಡಿವೆ ಎಂದೇ ಅನುಷ್ಠಾನಗೊಳ್ಳುತ್ತವೆ. ಹಾಗಿದ್ದರೂ, ಅಂತಹ ಮಾರ್ಪಾಟುಗಳು ಅಥವಾ ಶೂನ್ಯಗೊಳಿಸುವಿಕೆ ಯಾ ರದ್ಧತಿಯು, ಆ ನಿಯಮ ಅಥವಾ ಅಧಿಸೂಚನೆಯ ಅಡಿಯಲ್ಲಿ ಈ ಮೊದಲೇ ತೆಗೆದುಕೊಳ್ಳಲಾದ ಯಾವುದೇ ಕ್ರಮದ ಸಿಂಧುತ್ವ ಯಾ ಮಾನ್ಯತೆಗೆ ಪ್ರತಿಕೂಲ ಪ್ರಭಾವವಿಲ್ಲದಂತಾಗಿರತಕ್ಕದ್ದು.